ಶ್ರೀಮದ್ವಾಲ್ಮೀಕಿರಾಮಾಯಣವು

VENKATESHWARA PUBLISHERS
MYLAPORE, MADRAS–600 004

ಶ್ರೀಃ

ವಾಲ್ಮೀಕಿ ಮಹರ್ಷಿ ಪ್ರಣೀತ

ಶ್ರೀ ಮ ದ್ರಾ ಮಾ ಯ ಣ ವು

(ಬಾಲಕಾಂಡವು)

ಕರ್ಣಾಟಕ ವಚನವು

Vol. 1

(ಒಂದನೆಯ ಭಾಗವು)

ಶ್ರೀಮದ್ಯದುಶೈಲನಿವಾಸರಸಿಕ

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು

VENKATESWARA PUBLISHERS
14, Bhimasena Gardens
Mylapore, Madras-4

ಪ್ರಕಾಶಕರು :

ಆರ್. ವೆಂಕಟೇಶ್ವರ್ ಅಂಡ್ ಕಂಪೆನಿ

14, ಭೀಮಸೇನಾ ಗಾರ್ಡನ್ಸ್, ಮೈಲಾಪುರ, ಮದರಾಸು-4

1996

Rs. 50/-

Dedicated to the memory of

H. BHIMASENA RAU

Accountant General

for whose unstinted support
the publisher is grateful.

All Rights Reserved

ಕಾಪೀರೈಟ್, 1912,—ಈ ಪುಸ್ತಕದ ಸರ್ವಸ್ವಾತಂತ್ರ್ಯವು ಮದರಾಸು, ಆರ್. ವೆಂಕಟೇಶ್ವರ ಕಂಪೆನಿಯವರಿಗೆ ಸೇರಿದೆ. ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರಾರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ, ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

ಪ್ರಭಾ ಮುದ್ರಣಾಲಯ, ಬಸವನಗುಡಿ, ಬೆಂಗಳೂರು ೫೬೦ ೦೦೪

ಉಪೋದ್ಘಾತವು

ಆದಿಕಾವ್ಯವೆಂದು ಲೋಕಪ್ರಸಿದ್ಧವಾದ ಈ ರಾಮಾಯಣದ ವಿಷಯದಲ್ಲಿ ಉಪೋದ್ಘಾತರೂಪವಾಗಿ ನಾವು ತಿಳಿಸಬೇಕಾದ ವಿಶೇಷಾಂಶಗಳೊಂದೂ ಇಲ್ಲವು. ಯಾವುದಾದರೂ ಒಂದು ಅಪೂರ್ವಗ್ರಂಥವನ್ನು ಹೊರಕ್ಕೆ ತಂದಾಗ, ಅದರೊಳಗಿನ ಕಥಾಸಾರವಾದ ಪೂರ್ವೋತ್ತರಗಳನ್ನು ವಾಚಕರಿಗೆ ತಿಳಿಸುವುದೂ, ಕವಿಯ ಸಾಮರ್ಥ್ಯವನ್ನೂ, ಕಥಾನಾಯಕನ ಗುಣಾತಿಶಯಗಳನ್ನೂ, ಕಾವ್ಯದ ಪ್ರಯೋಜನವನ್ನೂ ವಿಶೇಷವಾಗಿ ಪ್ರಶಂಸಿಸಿ ವರ್ಣಿಸುವುದರಮೂಲಕವಾಗಿ ಜನಗಳ ಮನಸ್ಸನ್ನು ಆಕರ್ಷಿಸುವುದೂ ಉಪೋದ್ಘಾತವೆಂಬುದರ ಮುಖ್ಯಪ್ರಯೋಜನಗಳಾಗಿವೆ. ಆದರೆ ಇಲ್ಲಿ ಬ್ರಹ್ಮವರಪ್ರಸಾದಲಬ್ಧವಾದ ದಿವ್ಯಜ್ಞಾನವುಳ್ಳ ಮಹಾತಪಸ್ವಿಯಾದ ವಾಲ್ಮೀಕಿಯೇ ಕವಿಯಾಗಿ, ಸಾಕ್ಷಾನ್ಮಹಾವಿಷ್ಣುವೇ ಕಥಾನಾಯಕನಾಗಿ, ಆದಿಕಾವ್ಯವೆನಿಸಿಕೊಂಡ ರಾಮಾಯಣವೇ ಕಾವ್ಯವಾಗಿರುವುದರಿಂದ, ಇದನ್ನು ಕುರಿತು ನಾವು ಪ್ರಶಂಸೆಮಾಡಿ ತಿಳಿಸಬೇಕಾದ ವಿಷಯವೊಂದೂ ಇಲ್ಲ. ಆದರೂ ನಮ್ಮ ಕನ್ನಡಭಾಷೆಯಲ್ಲಿ ಈ ರಾಮಾಯಣವೆಂಬ ದಿವ್ಯಚರಿತ್ರವನ್ನು ನಮ್ಮ ಪೂರ್ವಕವಿಗಳಲ್ಲಿ ಅನೇಕರು ಚಂಪೂರೂಪವಾಗಿಯೂ, ಷಟ್ಪದಿರೂಪವಾಗಿಯೂ, ವಚನರೂಪವಾಗಿಯೂ ರಚಿಸಿಟ್ಟಿರುವಾಗ, ಈಗ ನಾವು ಇದೊಂದು ಹೊಸ ಪುಸ್ತಕವನ್ನು ಹೊರಕ್ಕೆ ತಂದ ವಿಷಯದಲ್ಲಿ ಒಂದೆರಡು ವಿಷಯಗಳನ್ನು ಮಾತ್ರ ನಮ್ಮ ಕರ್ಣಾಟಕ ಮಂಡಲಿಗೆ ತಿಳಿಸಬೇಕಾಗಿರುವುದು. ನಮ್ಮ ಪೂರ್ವಕವಿಗಳು ಸಂಸ್ಕೃತದಲ್ಲಿ ಪ್ರಸಿದ್ಧವಾಗಿರುವ ಪುರಾಣೇತಿಹಾಸಾದಿ ಸದ್ಗ್ರಂಥಗಳನ್ನು ಕಾವ್ಯರೂಪವಾಗಿ ಕನ್ನಡದಲ್ಲಿ ರಚಿಸಿದ್ದರೂ, ಅವೆಲ್ಲವೂ ಬಹಳವಾಗಿ ಸಂಗ್ರಹಿಸಿ ಬರೆಯಲ್ಪಟ್ಟಿರುವುದಲ್ಲದೆ, ಆಯಾ

ಮಹರ್ಷಿಪ್ರಣೀತಗಳಾದ ಗ್ರಂಥಗಳನ್ನು ಯಥಾಸ್ಥಿತವಾಗಿ ಅನುಸರಿಸಿಲ್ಲ. ಈ ಕೊರತೆಯನ್ನು ನೀಗಿಸುವುದಕ್ಕಾಗಿ ವಾಣಿವಿಲಾಸವೇ ಮೊದಲಾದ ಕೆಲವು ಮುದ್ರಣಗಳು ಹೊರಪಟ್ಟು, ಸಂಸ್ಕೃತರಾಮಾಯಣದಲ್ಲಿರತಕ್ಕ ವಿಷಯ ಗಳೆಲ್ಲವನ್ನೂ ಅನ್ಯೂನಾತಿರಿಕ್ತವಾಗಿ ವಿವರಿಸಿದ್ದರೂ, ನಮ್ಮ ಪೂರ್ವಾ ಚಾರ್ಯರು ರಾಮಾಯಣದಲ್ಲಿ ಮುಖ್ಯವಾದ ಅನೇಕ ಶ್ಲೋಕಗಳಿಗೆ ವಿವರಿ ಸಿರುವ ವ್ಯಾಖ್ಯಾನರಹಸ್ಯಗಳೆಲ್ಲವನ್ನೂ ಸೇರಿಸಿ, ನಮ್ಮ ಕರ್ಣಾಟಕದೇಶ ದಲ್ಲಿರುವ ಹೆಂಗಸರು ಮಕ್ಕಳು ಮೊದಲಾಗಿ ಎಲ್ಲರಿಗೂ ಅದರ ಆನಂದಾನುಭವ ವನ್ನು ಉಂಟುಮಾಡಬೇಕೆಂದೂ, ರಾಮಾಯಣದ ಮುಖ್ಯ ಕಥಾಭಾಗಗಳೆಲ್ಲ ವನ್ನೂ ಆಯಾಸಂದರ್ಭಗಳಿಗೆ ತಕ್ಕಂತೆ ಭಾವಚಿತ್ರಗಳಿಂದ ತೋರಿಸಬೇಕೆಂದೂ ಉದ್ದೇಶಿಸಿ, ಈಗ ಈ ಹೊಸಮುದ್ರಣವು ಹೊರಕ್ಕೆ ತರಲ್ಪಟ್ಟಿರುವುದು. ಇದರಲ್ಲಿ ಗೋವಿಂದರಾಜೀಯ, ಮಹೇಶ್ವರತೀರ್ಥೀಯ, ತನಿ ಶ್ಲೋಕೀ ಮುಂತಾದ ವ್ಯಾಖ್ಯಾನಗಳಲ್ಲಿ ಕಾಣಿಸಲ್ಪಟ್ಟಿರುವ ವಿಶೇಷಾರ್ಥಗಳಲ್ಲಿ ಮುಖ್ಯ ಭಾಗಗಳು ಆಯಾ ಪುಟಗಳ ಕೆಳಗೆ ನಿರೂಪಿಸಲ್ಪಟ್ಟಿರುವುವಲ್ಲದೆ ಮುಖ್ಯ ಕಥಾ ಭಾಗಗಳನ್ನು ಸೂಚಿಸತಕ್ಕ ಅನೇಕ ಭಾವಚಿತ್ರಗಳೂ ನಡು ನಡುವೆ ಅಲ್ಲಲ್ಲಿ ಸೇರಿಸಲ್ಪಟ್ಟಿರುವುವು.

ಸಾಮಾನ್ಯವಾಗಿ ರಾಮಾಯಣ ಪಾರಾಯಣವನ್ನು ಮಾಡುವುದರಿಂದ ಆಯುರಾರೋಗ್ಯೈಶ್ವರ್ಯಾದಿಗಳಾದ ಕೋರಿಕೆಗಳೆಲ್ಲವೂ ಕೈಗೂಡುವುವೆಂಬ ಲೋಕಪ್ರಸಿದ್ಧವಾದ ಫಲಶ್ರುತಿಯು ಹಾಗಿರಲಿ! ಈ ರಾಮಾಯಣ ವೆಂಬುದು ಲೌಕಿಕರಿಗೆ ತಕ್ಕಂತೆ ಲೋಕನ್ಯಾಯಗಳನ್ನೂ, ವಿರಕ್ತರಿಗೆ ತಕ್ಕಂತೆ ವೇದಾಂತ ತತ್ವಗಳನ್ನೂ, ರಸಿಕರಿಗೆ ತಕ್ಕಂತೆ ರಸವಿಶೇಷಗಳನ್ನೂ, ಹೆಂಗಸರಿಗೂ ಬಾಲಕರಿಗೂ ತಕ್ಕಂತೆ ವಿಚಿತ್ರಕಥೆಗಳನ್ನೂ ತಿಳಿಸುವುದರೊಡನೆ, ಈಗಿನ ವಿದ್ಯಾರ್ಥಿಗಳಿಗೆ ಅವಶ್ಯವಾಗಿ ಬೇಕಾದ ದೇಶಭಾಷೆಯ ವಾಕ್ಯರಚನಾಶೈಲಿ ಯನ್ನೂ ತಿಳಿಸುವುದರಿಂದ ಸರ್ವಜನಾಭಿನಂದ್ಯವಾಗಿರುವುದೆಂದು ನಂಬುತ್ತೇನೆ.

ಮೆ|| ಆರ್. ವೆಂಕಟೇಶ್ವರ ಕಂಪೆನಿಯವರು, ತಾವು ವಿದೇಶೀಯರಾಗಿದ್ದರೂ, ನಮ್ಮ ಕರ್ಣಾಟಕದೇಶೀಯರ ಉಪಯೋಗಾರ್ಥವಾಗಿ ಈ ದೊಡ್ಡ ಪ್ರಯತ್ನಕ್ಕೆ ಕೈಹಾಕಿರುವುದರಿಂದ, ನಮ್ಮ ಕರ್ಣಾಟಕದೇಶೀಯರಾದ ಆಸ್ತಿಕ ಶಿರೋಮಣಿಗಳೂ, ಭಾಷಾಭಿಮಾನಿಗಳೂ ಈ ದೊಡ್ಡ ಪ್ರಯತ್ನಕ್ಕೆ ತಕ್ಕಷ್ಟು ಪ್ರೋತ್ಸಾಹಕೊಟ್ಟು ಸಹಾಯಕರಾಗಿದ್ದ ಪಕ್ಷದಲ್ಲಿ ನಮ್ಮ ಭಾಷೆಯಲ್ಲಿ ಇನ್ನೂ ಅನೇಕ ಸದ್ಗ್ರಂಥಗಳು ಪ್ರಚಾರಪಡಿಸಲ್ಪಡುವುವೆಂಬುದರಲ್ಲಿ ಸಂದೇಹವಿಲ್ಲ.

ದೇವಶಿಖಾಮಣಿ ಅಳಸಿಂಗರಾಚಾರ್ಯಃ

ಗ್ರಂಥಪೀಠಿಕೆ

ಶ್ರಿಯಃಪತಿಯಾಗಿ, ಅವಾಪ್ತಸಮಸ್ತಕಾಮನಾಗಿ, ಸಮಸ್ತಕಲ್ಯಾಣ ಗುಣಾತ್ಮಕನಾದ ಸರ್ವೇಶ್ವರನು "ವೈಕುಂಠೇ ತು ಪರೇ ಲೋಕೇ ಶ್ರಿಯಾ ಸಾರ್ಥಂ ಜಗತ್ಪತಿಃ| ಆಸ್ತೇ ವಿಷ್ಣುರಚಿಂತ್ಯಾತ್ಮಾ ಭಕ್ತೈರ್ಭಾಗವತೈಸ್ಸಹ||" ಎಂಬಂತೆ ಶ್ರೀವೈಕುಂಠದಲ್ಲಿ, ಶ್ರೀಭೂನೀಳಾದಿದಿವ್ಯಮಹಿಷಿಯರೊಡಗೂಡಿ ರತ್ನಸಿಂಹಾಸನದಲ್ಲಿ ನೆಲೆಗೊಂಡು, ನಿತ್ಯಮುಕ್ತರಿಂದ ನಿರಂತರವೂ ಉಪಚರಿಸಲ್ಪಡುತ್ತ, ಈ ಲೋಕದಲ್ಲಿ ಬದ್ಧಚೇತನರು ಅಜ್ಞಾನಿಗಳಾಗಿರುವುದನ್ನು ನೋಡಿ "ಏವಂ ಸಂಸೃತಿಚಕ್ರಸ್ಥೇ ಭ್ರಾಮ್ಯಮಾಣೇ ಸ್ವಕರ್ಮಣಿ| ಜೀವೇ ದುಃಖಾಕುಲೇ ವಿಷ್ಣೋಃ ಕೃಪಾ ಕಾಪ್ಯುಪಜಾಯತ||" ಎಂಬಂತೆ ಅವರು ಸಂಸಾರಸಮುದ್ರದಲ್ಲಿ ನರಳುತ್ತಿರುವುದಕ್ಕಾಗಿ ಮರುಕಗೊಂಡು "ವಿಚಿತ್ರಾ ದೇಹಸಂಪತ್ತಿರೀಶ್ವರಾಯ ನಿವೇದಿತುಮ್| ಪೂರ್ವಮೇವ ಕೃತಾ ಬ್ರಹ್ಮ

ಹಸ್ತಪಾದಾದಿಸಂಯುತಾ ||" ಎಂಬಂತೆ, ಅವರು ತನ್ನನ್ನುಪಚರಿಸಿ ಉಜ್ಜೀವಿಸುವುದಕ್ಕಾಗಿ ಅವರಿಗೆ ಕರಣಕಳೇಬರಗಳನ್ನು ಅನುಗ್ರಹಿಸಿರುವನು. ಹೀಗಿದ್ದರೂ ಈ ಚೇತನರು ಅಜ್ಞಾನದಿಂದ ವಿವೇಕಶೂನ್ಯರಾಗಿ, ಕಾಲಿನ ಮುಳ್ಳನ್ನು ತೆಗೆಯುವುದಕ್ಕಾಗಿ ಕೊಟ್ಟ ಸೂಜಿಯಿಂದ ಕಣ್ಣನ್ನು ತೊಳಸಿ ಕೊಳ್ಳುವವರಂತೆ, ತನ್ನನ್ನು ಉಪಾಸನೆಮಾಡಿ ಸದ್ಗತಿಯನ್ನು ಹೊಂದುವುದ ಕ್ಕಾಗಿ ಕೊಟ್ಟ ತಮ್ಮ ಕರಣಕಳೇಬರಗಳನ್ನು ದುರ್ವಿಷಯಗಳಲ್ಲಿ ಉಪಯೋಗಿಸಿ ಕೆಟ್ಟುಹೋಗುವುದನ್ನು ಕಂಡು, ಅವರಿಗೆ ಸದಸದ್ವಿವೇಚನೆಗಳನ್ನುಂಟುಮಾಡು ವುದಕ್ಕಾಗಿ "ಶಾಸನಾಚ್ಛಾಸ್ತ್ರಂ" ಎಂಬಂತೆ, ತನ್ನ ಶಾಸನರೂಪವಾದ ವೇದ ಗಳನ್ನುಪದೇಶಿಸಿದನು. ಅಜ್ಞರಾದ ಚೇತನರು ಅದಕ್ಕೂ ಭಿನ್ನಾರ್ಥಗಳನ್ನು ಕಲ್ಪಿಸಿ, ಅವುಗಳನ್ನನಾದರಿಸಿ, ನಾಸ್ತಿಕರಾಗಿ, ದುರ್ಗತಿಗಿಳಿಯುವುದನ್ನು ಕಂಡು, ಅವರನ್ನು ಪ್ರತ್ಯಕ್ಷದಲ್ಲಿ ತಾನಾಗಿಯೇ ಬಂದು, ರಾಜಶಾಸನರೂಪ ದಿಂದ ಶಿಕ್ಷಿಸಿಯೂ, ಸ್ವತಃ ಸದ್ಧರ್ಮಗಳನ್ನಾಚರಿಸಿ ತೋರಿಸಿಯೂ ಸನ್ಮಾರ್ಗ ದಲ್ಲಿರಿಸಬೇಕೆಂದುದ್ದೇಶಿಸಿ, ಈ ಮೂಲಕವಾಗಿ ಬ್ರಹ್ಮಾದಿದೇವತೆಗಳ ಪ್ರಾರ್ಥನೆ ಯನ್ನೂ, ತನ್ನನ್ನು ಬಹುಕಾಲದಿಂದ ಆರಾಧಿಸುತ್ತಿದ್ದ ದಶರಥನ ಇಷ್ಟಾರ್ಥ ವನ್ನೂ ನೆರವೇರಿಸುವುದಕ್ಕಾಗಿ, ಶ್ರೀರಾಮಾದಿರೂಪದಿಂದ ತನ್ನ ಅಂಶವನ್ನು ನಾಲ್ಕಾಗಿ ವಿಭಾಗಿಸಿಕೊಂಡು ಮನುಷ್ಯಾವತಾರವನ್ನೆತ್ತಿದನು. ಅವುಗಳಲ್ಲಿ ರಾಮರೂಪದಿಂದ ರಾವಣನನ್ನು ಕೊಂದು ಪಿತೃವಾಕ್ಯಪರಿಪಾಲನವೇ ಮೊದಲಾದ ಸಾಮಾನ್ಯ ಧರ್ಮವನ್ನೂ, ಲಕ್ಷ್ಮಣರೂಪದಿಂದ ಇಂದ್ರಜಿತ್ತನ್ನು ಕೊಂದು ಸರ್ವೇಶ್ವರನಿಗೆ ಶೇಷಭೂತನಾಗಿರಬೇಕೆಂಬ ವಿಶೇಷಧರ್ಮವನ್ನೂ, ಭರತರೂಪದಿಂದ ಗಂಧರ್ವರನ್ನು ನಿಗ್ರಹಿಸಿ ಈಶ್ವರನಿಗೆ ಪರತಂತ್ರನಾಗಿರ ಬೇಕೆಂಬುದನ್ನೂ, ಶತ್ರುಘ್ನರೂಪದಿಂದ ಲವಣಾಸುರನನ್ನು ಕೊಂದು ಭಾಗವತಶೇಷತ್ವವನ್ನೂ ಪ್ರಚಾರಪಡಿಸಿದನು. ಈ ಧರ್ಮಗಳೂ, ಆತನ ಚರಿತ್ರಗಳೂ ಆ ಕಾಲಕ್ಕೆ ಮಾತ್ರ ವ್ಯಕ್ತವಾಗಿದ್ದು, ಕಾಲಾಂತರದಲ್ಲಿ

ಖಿಲವಾಗಿ ಹೋಗುವುದೆಂಬ ಶಂಕೆಯಿಂದ, ಲೋಕಪಿತಾಮಹನಾದ ಬ್ರಹ್ಮನು, ಆಚಂದ್ರಾರ್ಕವಾಗಿ ಶ್ರೀರಾಮಚರಿತ್ರವು ಲೋಕದ ಪ್ರಜೆಗಳಿಗೆ ಸನ್ಮಾರ್ಗ ನಿದರ್ಶಕವಾಗಿರಬೇಕೆಂದುದ್ದೇಶಿಸಿ, ಅದನ್ನು ನೂರು ಕೋಟಿ ಗ್ರಂಥಗಳುಳ್ಳ ಒಂದು ದೊಡ್ಡ ಪ್ರಬಂಧವನ್ನಾಗಿ ರಚಿಸಿ, ನಾರದಾದಿಗಳಿಗೆ ಉಪದೇಶಿಸಿದು ದಲ್ಲದೆ, ಆಗ ಎಡೆಬಿಡದೆ ರಾಮಮಂತ್ರವನ್ನೇ ಅನುಸಂಧಿಸುತ್ತಿದ್ದ ಮಹಾ ತಪಸ್ವಿಯಾದ ವಾಲ್ಮೀಕಿಯ ಮೂಲಕವಾಗಿ ಅದನ್ನು ಭೂಲೋಕದಲ್ಲಿಯೂ ಪ್ರಚಾರಗೊಳಿಸಬೇಕೆಂದು ನಾರದನನ್ನು ವಾಲ್ಮೀಕಿಯ ಬಳಿಗೆ ಕಳುಹಿಸಿದನು. ವಾಲ್ಮೀಕಿಯೂ ಕೂಡ ವೇದಾಂಶವೇದ್ಯವಾದ ಪರತತ್ವವನ್ನು ನಿರ್ಣಯಿಸಿ ತಿಳಿಯಬೇಕೆಂಬ ಕುತೂಹಲದಿಂದ, ತಾನಾಗಿಯೇ ನಾರದನಲ್ಲಿಗೆ ಬಂದು, ಈ ರಾಮಾಯಣವನ್ನು ತಿಳಿಯುವುದರ ಮೂಲಕವಾಗಿ ತನ್ನ ಸಂದೇಹಗಳೆಲ್ಲ ವನ್ನೂ ನೀಗಿಸಿಕೊಂಡು, ಆಮೇಲೆ ಬ್ರಹ್ಮಾನುಗ್ರಹದಿಂದ ಎಲ್ಲರನ್ನೂ ಪ್ರತ್ಯಕ್ಷ ದಲ್ಲಿದ್ದಂತೆ ತಿಳಿದುಕೊಂಡು, ಆತನ ಅನುಗ್ರಹದಿಂದಲೇ ಅಸಾಧಾರಣವಾದ ಕಾವ್ಯರಚನಾಶಕ್ತಿಯನ್ನೂ ಪಡೆದು ಈ ಶ್ರೀಮದ್ರಾಮಾಯಣವನ್ನು ರಚಿಸಿರುವನು.

ಬಾಲಕಾಂಡದ ವಿಷಯಾನುಕ್ರಮಣಿಕೆ

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೧.	ಸಂಕ್ಷೇಪರಾಮಾಯಣವು.	೧
೨.	ಬ್ರಹ್ಮನು ಪ್ರತ್ಯಕ್ಷನಾಗಿ ವಾಲ್ಮೀಕಿಯನ್ನು ಅನುಗ್ರಹಿಸಿದುದು.	೩೦
೩.	ಶ್ರೀ ರಾಮಾಯಣ ವಿಷಯಸಂಗ್ರಹವು.	೪೦
೪.	ಕುಶಲವರು ರಾಮಾಯಣವನ್ನು ಗಾನಮಾಡಿದುದು.	೪೪
೫.	ಅಯೋಧ್ಯಾಪುರವರ್ಣನವು.	೪೮
೬.	ದಶರಥಚಕ್ರವರ್ತಿಯ ಮತ್ತು ಆತನ ಪ್ರಜೆಗಳ ವರ್ಣನವು.	೫೨
೭.	ಮಂತ್ರಿಪುರೋಹಿತಾದಿಗಳ ವರ್ಣನವು.	೫೪
೮.	ದಶರಥನು ಪುತ್ರಕಾಮೇಷ್ಟಿಯಾಗಕ್ಕೆ ಪ್ರಯತ್ನಿಸಿದುದು.	೫೭
೯.	ಋಷ್ಯಶೃಂಗ ಚರಿತ್ರವು.	೬೦
೧೦.	ವೇಶ್ಯಾಸ್ತ್ರೀಯರು ಋಷ್ಯಶೃಂಗನನ್ನು ವಂಚಿಸಿ ಕರೆತಂದುದು.	೬೨
೧೧.	ದಶರಥನು ಅಂಗದೇಶದಿಂದ ಋಷ್ಯಶೃಂಗನನ್ನು ಕರೆತರಿಸಿದುದು.	೬೬
೧೨.	ದಶರಥನ ಯಜ್ಞಸನ್ನಾಹವು.	೬೯
೧೩.	ಯಜ್ಞಸಂಭಾರಗಳನ್ನು ಸಿದ್ಧಪಡಿಸಿದುದು.	೭೧
೧೪.	ದಶರಥನು ಅಶ್ವಮೇಧಯಾಗವನ್ನು ಮಾಡಿದುದು.	೭೪
೧೫.	ರಾವಣ ಬಾಧೆಗಾಗಿ ದೇವತೆಗಳೆಲ್ಲರೂ ಮಹಾವಿಷ್ಣುವಿನಲ್ಲಿ ದೂರು ಹೇಳಿದುದು.	೮೧
೧೬.	ದೇವತೆಗಳ ಪ್ರಾರ್ಥನೆಯಂತೆ ವಿಷ್ಣುವು ಮನುಷ್ಯರೂಪದಿಂದ ಹುಟ್ಟುವುದಾಗಿ ಅಭಯವನ್ನು ಕೊಟ್ಟುದು.	೮೫
೧೭.	ದೇವತೆಗಳು ತಮ್ಮ ಅಂಶದಿಂದ ವಾನರರನ್ನು ಸೃಷ್ಟಿಸಿದುದು.	೮೭

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೧೮.	ರಾಮಾದಿಗಳ ಜನನ, ವಿದ್ಯಾಭ್ಯಾಸ, ವಿಶ್ವಾಮಿತ್ರರ ಆಗಮನ ಮುಂತಾದುವು.	೯೧
೧೯.	ವಿಶ್ವಾಮಿತ್ರನು ತನ್ನೊಡನೆ ಶ್ರೀರಾಮನನ್ನು ಕಳುಹಿಸೆಂದು ದಶರಥನನ್ನು ಕೇಳಿದುದು.	೯೭
೨೦.	ದಶರಥನು ರಾಮನನ್ನು ಕಳುಹಿಸಲಾರದೆ ದುಃಖಿಸಿದುದು.	೧೦೧
೨೧.	ವಸಿಷ್ಠರು ವಿಶ್ವಾಮಿತ್ರರ ಮಹಿಮೆಯನ್ನು ತಿಳಿಸಿ ದಶರಥನನ್ನು ಸಮಾಧಾನಪಡಿಸಿದುದು.	೧೦೪
೨೨.	ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಕರೆದುಕೊಂಡು ಹೋಗುತ್ತಾ, ಅವರಿಗೆ " ಬಲೆ, ಅತಿಬಲೆ " ಎಂಬ ಎರಡು ವಿದ್ಯೆಗಳನ್ನುಪದೇಶಿಸಿದುದು.	೧೦೬
೨೩.	ವಿಶ್ವಾಮಿತ್ರನು ಅಂಗದೇಶದ ವೃತ್ತಾಂತವನ್ನು ತಿಳಿಸಿದುದು.	೧೦೯
೨೪.	ಮಲದಕರೂಶದೇಶಗಳ ವೃತ್ತಾಂತವು. ತಾಟಕಾವನಪ್ರವೇಶವು.	೧೧೩
೨೫.	ತಾಟಕಾ ವೃತ್ತಾಂತವು.	೧೧೬
೨೬.	ತಾಟಕಾ ಸಂಹಾರವು.	೧೧೭
೨೭.	ವಿಶ್ವಾಮಿತ್ರನು ರಾಮನಿಗೆ ಅಸ್ತ್ರಗಳನ್ನು ಉಪದೇಶಿಸಿದುದು.	೧೨೧
೨೮.	ವಿಶ್ವಾಮಿತ್ರನು ಉಪಸಂಹಾರಮಂತ್ರಗಳನ್ನುಪದೇಶಿಸಿದುದು.	೧೨೨
೨೯.	ವಾಮನಮೂರ್ತಿ ವೃತ್ತಾಂತವು. ವಿಶ್ವಾಮಿತ್ರನ ಯಜ್ಞದೀಕ್ಷೆ.	೧೨೪
೩೦.	ಶ್ರೀರಾಮನು ಮಾರೀಚನನ್ನು ದೂರಕ್ಕೋಡಿಸಿ ಸುಬಾಹುವನ್ನು ಕೊಂದುದು.	೧೨೮

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ

೩೧.	ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆ ಮಿಥಿಲಾಪಟ್ಟಣಕ್ಕೆ ಹೊರಟುದು.	೧೩೧
೩೨.	ಕುಶಕುಶನಾಭರ ವೃತ್ತಾಂತವು.	೧೩೩
೩೩.	ಬ್ರಹ್ಮದತ್ತನ ವೃತ್ತಾಂತವು. ಆತನು ಕುಶನಾಭನ ಕನ್ಯೆಯರನ್ನು ವಿವಾಹಮಾಡಿಕೊಂಡುದು.	೧೩೬
೩೪.	ವಿಶ್ವಾಮಿತ್ರ ಕೌಶೀಕೀನದಿಗಳ ವೃತ್ತಾಂತವು.	೧೩೯
೩೫.	ಗಂಗಾಪಾರ್ವತಿಯರ ಜನ್ಮವೃತ್ತಾಂತವು.	೧೪೧
೩೬.	ಪಾರ್ವತೀ ವೃತ್ತಾಂತವು.	೧೪೩
೩೭.	ಕುಮಾರೋತ್ಪತ್ತಿ ವೃತ್ತಾಂತವು.	೧೪೫
೩೮.	ಸಗರ ವೃತ್ತಾಂತವು.	೧೪೮
೩೯.	ಸಗರ ಯಾಗದಲ್ಲಿ ಇಂದ್ರನು ಯಜ್ಞಾಶ್ವವನ್ನು ಕದ್ದುದು.	೧೫೧
೪೦.	ಸಗರ ಪುತ್ರರು ಕಪಿಲನಿಂದ ಸುಡಲ್ಪಟ್ಟುದು.	೧೫೩
೪೧.	ಅಂಶುಮಂತನು ಯಜ್ಞಾಶ್ವವನ್ನು ಕಂಡುದು.	೧೫೬
೪೨.	ಭಗೀರಥನು ಗಂಗೆಯನ್ನು ತರುವುದಕ್ಕಾಗಿ ತಪಸ್ಸು ಮಾಡಿದುದು.	೧೫೯
೪೩.	ಭಗೀರಥನು ಗಂಗೆಯನ್ನು ತಂದುದು.	೧೬೧
೪೪.	ಬ್ರಹ್ಮನು ಭಗೀರಥನೊಡನೆ ಸಂಭಾಷಿಸಿದುದು.	೧೬೪
೪೫.	ವಿಶಾಲಾಪುರವೃತ್ತಾಂತವು. ಸಮುದ್ರ ಮಥನವು.	೧೬೬
೪೬.	ದಿತಿಯು ತಪಸ್ಸನ್ನು ಮಾಡಿದುದು.	೧೭೦
೪೭.	ಸಪ್ತಮಾರುತರ ವೃತ್ತಾಂತವು.	೧೭೨
೪೮.	ಅಹಲ್ಯಾ ವೃತ್ತಾಂತವು	೧೭೪

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೪೯.	ಅಹಲ್ಯಾ ಶಾಪವಿಮೋಚನವು.	೧೭೮
೫೦.	ರಾಮಾದಿಗಳು ಮಿಥಿಲಾಪಟ್ಟಣಕ್ಕೆ ಹೋದುದು, ಜನಕನು ವಿಶ್ವಾಮಿತ್ರನೊಡನೆ ಸಂಭಾಷಿಸಿದುದು.	೧೮೦
೫೧.	ವಿಶ್ವಾಮಿತ್ರನ ಚರಿತ್ರವು.	೧೮೫
೫೨.	ವಸಿಷ್ಠನು ಹೋಮಧೇನುವಿನ ಮೂಲಕವಾಗಿ ವಿಶ್ವಾಮಿತ್ರನಿಗೆ ಔತಣವನ್ನು ಮಾಡಿಸಿದುದು.	೧೮೫
೫೩.	ವಿಶ್ವಾಮಿತ್ರನು ಹೋಮಧೇನುವನ್ನು ತನಗೆ ಕೊಡೆಂದು ವಸಿಷ್ಠನನ್ನು ಕೇಳಿದುದು.	೧೮೭
೫೪.	ಶಬಲೆಯು ಸೈನ್ಯಗಳನ್ನು ಸೃಷ್ಟಿಸಿ, ವಿಶ್ವಾಮಿತ್ರನ ಸೈನ್ಯವನ್ನೋಡಿಸಿದುದು.	೧೮೯
೫೫.	ವಿಶ್ವಾಮಿತ್ರನು ಶಿವನಿಂದ ಅಸ್ತ್ರವಿಶೇಷಗಳನ್ನು ಪಡೆದುದು.	೧೯೩
೫೬.	ವಸಿಷ್ಠನು ವಿಶ್ವಾಮಿತ್ರನನ್ನು ಜಯಿಸಿದುದು.	೧೯೩
೫೭.	ವಿಶ್ವಾಮಿತ್ರನು ತಪಸ್ಸುಮಾಡಿ ರಾಜಋಷಿಯಾದುದು.	೧೯೬
೫೮.	ತ್ರಿಶಂಕುವು ವಸಿಷ್ಠಪುತ್ರರಿಂದ ತಿರಸ್ಕೃತನಾಗಿ ವಿಶ್ವಾಮಿತ್ರನನ್ನು ಮರೆಹೋಗುವುದು.	೧೯೮
೫೯.	ವಿಶ್ವಾಮಿತ್ರನು ತ್ರಿಶಂಕುವಿನಿಂದ ಯಜ್ಞವನ್ನು ಮಾಡಿಸಿದುದು.	೨೦೧
೬೦.	ವಿಶ್ವಾಮಿತ್ರನು ತ್ರಿಶಂಕುವಿಗೋಸ್ಕರ ಬೇರೊಂದು ಸ್ವರ್ಗವನ್ನು ಸೃಷ್ಟಿಸಿದುದು.	೨೦೩
೬೧.	ಅಂಬರೀಷನು ನರಬಲಿಗಾಗಿ, ಶುನಶ್ಯೇಫನೆಂಬವನನ್ನು ಕೊಂಡುಕೊಂಡುದು.	೨೦೬
೬೨.	ವಿಶ್ವಾಮಿತ್ರನು ಶುನಶ್ಯೇಫನನ್ನು ರಕ್ಷಿಸಿದುದು.	೨೦೮

ಅಧ್ಯಾಯ ಸಂಖ್ಯೆ	ವಿಷಯಗಳು	ಪುಟ ಸಂಖ್ಯೆ
೬೩.	ವಿಶ್ವಾಮಿತ್ರನು "ಮಹರ್ಷಿ" ಎನಿಸಿಕೊಂಡುದು.	೨೧೨
೬೪.	ಇಂದ್ರನಿಂದ ಕಳುಹಿಸಲ್ಪಟ್ಟ ರಂಭೆಯನ್ನು ವಿಶ್ವಾಮಿತ್ರನು ಶಪಿಸಿದುದು.	೨೧೪
೬೫.	ವಿಶ್ವಾಮಿತ್ರನು ಬ್ರಹ್ಮರ್ಷಿತ್ವವನ್ನು ಪಡೆದುದು.	೨೧೬
೬೬.	ಜನಕನು ಶಿವಧನುಸ್ಸಿನ ವೃತ್ತಾಂತವನ್ನು ಹೇಳಿದುದು.	೨೨೦
೬೭.	ರಾಮನು ರುದ್ರಧನುಸ್ಸನ್ನು ಮುರಿದುದು	೨೨೩
೬೮.	ಜನಕನು ದಶರಥನನ್ನು ಕರೆತರುವುದಕ್ಕಾಗಿ ದೂತರನ್ನು ಕಳುಹಿಸಿದುದು.	೨೨೬
೬೯.	ದಶರಥನು ಮಿಥಿಲಾಪಟ್ಟಣಕ್ಕೆ ಹೋದುದು.	೨೨೮
೭೦.	ವಸಿಷ್ಠನು ಜನಕನಿಗೆ ಇಕ್ಷ್ವಾಕುವಂಶಕ್ರಮವನ್ನು ತಿಳಿಸಿದುದು.	೨೩೦
೭೧.	ಜನಕನು ತನ್ನ ವಂಶಕ್ರಮವನ್ನು ಹೇಳಿದುದು.	೨೩೪
೭೨.	ದಶರಥನು ಪುತ್ರರ ವಿವಾಹಾರ್ಥವಾದ ಗೋದಾನಗಳನ್ನು ನಡೆಸಿದುದು.	೨೩೭
೭೩.	ಶ್ರೀರಾಮ, ಲಕ್ಷ್ಮಣ, ಭರತ, ಶತ್ರುಘ್ನರ ವಿವಾಹವು	೨೩೯
೭೪.	ಪರಶುರಾಮನ ದರ್ಶನವು.	೨೫೦
೭೫.	ಪರಶುರಾಮನು ರಾಮನನ್ನು ಇದಿರಿಸಿದುದು.	೨೫೨
೭೬.	ಪರಶುರಾಮನ ಗರ್ವಭಂಗವು.	೨೫೭
೭೭.	ದಶರಥನು ಪುತ್ರರೊಡನೆ ಅಯೋಧ್ಯೆಯನ್ನು ಸೇರಿದುದು. ಶ್ರೀ ಸೀತಾರಾಮರ ಪರಸ್ಪರ ಪ್ರೇಮವು.	೨೫೯

|| ಶ್ರೀರಾಮಚಂದ್ರ ಪರಬ್ರಹ್ಮಣೇ ನಮಃ ||

ಶ್ರೀಮದ್ವಾಲ್ಮೀಕಿ ರಾಮಾಯಣವು

ಬಾಲಕಾಂಡವು

ಯಶೋದಯಾ ಪರಿಷ್ವಕ್ತೌ ವಿಜಯಕ್ಷೇಮದಾಯಕೌ |
ಯದುಕ್ಷ್ಮಾಭೃತ್ಪ್ರಿಯೌ ದೇವೌ ರಕ್ಷತಾಂ ನಃ ಪ್ರತಿಕ್ಷಣಮ್ ||[1]

ಮನಶ್ಶುದ್ಧಿಗೆ ಕಾರಣಗಳಾದ [2]ತಪಸ್ಸೇ ಮೊದಲಾದ ಕರ್ಮಗಳನ್ನೂ, ವೇದಾಧ್ಯಯನವನ್ನೂ, ಯಾವಾಗಲೂ ಎಡೆಬಿಡದೆ ಅಕ್ಕರೆಯಿಂದ ನಡೆಸು ವವನಾಗಿ, ಶಾಸ್ತ್ರಜ್ಞಾನವುಳ್ಳವರಲ್ಲಿ ಮೇಲೆನಿಸಿಕೊಂಡಿರುವ ನಾರದಮಹರ್ಷಿ

---

1. ಇಲ್ಲಿ "ಯಶೋದೆಯ ಪ್ರಿಯಪುತ್ರನಾಗಿ, ಅರ್ಜುನನಿಗೆ ಹಿತ ಚಿಂತಕನಾಗಿ, ಯದುವಂಶದ ದೊರೆಗಳಿಗೆ ಪ್ರಿಯನಾದ ಪಾರ್ಥಸಾರಥಿ ಸ್ವಾಮಿಯೂ, ಲೋಕವಿಖ್ಯಾತನಾಗಿ, ದಯಾಳುವಾಗಿ, ಆಶ್ರಿತರಿಗೆ ಜಯ ವನ್ನೂ ಕ್ಷೇಮವನ್ನೂ ಕೊಡತಕ್ಕ ಯಾದವಗಿರಿ (ಮೇಲುಕೋಟೆ) ನಾಥನಾದ ಶ್ರೀಮನ್ನಾರಾಯಣನೂ ನಿಮ್ಮನ್ನು ರಕ್ಷಿಸಲಿ" ಎಂಬ ಶ್ಲೋಕಾರ್ಥವಿದೆ.

—o ಅವತಾರಿಕೆ o—

2. ಬ್ರಹ್ಮನು ಲೋಕೋಪಕಾರಾರ್ಥವಾಗಿ, ಪರಿಶುದ್ಧವಾದ ಈ ರಾಮಚರಿತ್ರವನ್ನು ಮೊದಲು ನೂರುಕೋಟಿ ಗ್ರಂಥಗಳುಳ್ಳ ಒಂದು ದೊಡ್ಡ ಪ್ರಬಂಧವನ್ನಾಗಿ ರಚಿಸಿದನು. ಅದನ್ನು ತನ್ನ ಮಗನಾದ ನಾರದನಿಗೆ ಉಪದೇಶಿಸಿ, ಭೂಲೋಕದಲ್ಲಿ ಪ್ರಚಾರಗೊಳಿಸಬೇಕೆಂಬ ಉದ್ದೇಶದಿಂದ, ಆ ನಾರದನನ್ನು ವಾಲ್ಮೀಕಿಯ ಬಳಿಗೆ ಕಳುಹಿಸಿದನು. ಅದರಂತೆ ನಾರದನು ವಾಲ್ಮೀಕಿಯ ಬಳಿಗೆ ಬಂದು, ತನ್ನ ಉಪದೇಶವನ್ನು ತಿಳಿಸುವುದರೊಳಗಾಗಿ, ವಾಲ್ಮೀಕಿಯು ತಾನಾಗಿಯೇ ಆ ನಾರದನನ್ನು ಕುರಿತು ಒಂದಾನೊಂದು ಪ್ರಶ್ನೆ ಯನ್ನು ಮಾಡುವನು. ಇದೇ ರಾಮಾಯಣದ ಮೊದಲನೆಯ ಶ್ಲೋಕಾರ್ಥವು.

ಯನ್ನು ಕುರಿತು, ಮಹಾತಪಸ್ವಿಯಾದ ವಾಲ್ಮೀಕಿಯು ವಿನಯದಿಂದ

ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ | ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ || ಎಂಬುದು ಇದಕ್ಕೆ ಮೂಲವು. ಈ ಪ್ರಥಮಶ್ಲೋಕದಲ್ಲಿಯೇ ಗೂಢವಾದ ಕೆಲವು ವಿಶೇಷಾರ್ಥಗಳುಂಟು ಅವಾವುವೆಂದರೆ :— "ಆಚಾರ್ಯಾದ್ಧ್ಯೇವವಿದ್ಯಾವಿದಿತಾ ಸಾಧಿಷ್ಠಂ ಪ್ರಾಪತ್" "ಆಚಾರ್ಯವಾನ್ ಪುರುಷೋ ವೇದ" ಎಂಬ ಶ್ರುತಿಪ್ರಮಾಣಗಳನ್ನನುಸರಿಸಿ, ಸದ್ಗ್ರಂಥಗಳೆಲ್ಲವೂ ಆಚಾರ್ಯಮುಖದಿಂದಲೇ ಉಪದೇಶಿಸಲ್ಪಡಬೇಕು. ಆದುದರಿಂದ ರಾಮಾಯಣವನ್ನು ಉಪದೇಶಿಸುವುದಕ್ಕಾಗಿ ಬಂದ ನಾರದನಲ್ಲಿ ಸದಾಚಾರ್ಯಲಕ್ಷಣಗಳೂ, ಉಪದೇಶಹೊಂದುವ ವಾಲ್ಮೀಕಿಯಲ್ಲಿ ಸಚ್ಛಿಷ್ಯ ಲಕ್ಷಣವೂ ಈ ಶ್ಲೋಕಗಳಲ್ಲಿರುವ ವಿಶೇಷಣಗಳಿಂದ ಸ್ಪಷ್ಟಪಡುವುವು. "ಅಭಿಜನ ವಿದ್ಯಾಸಮುಪೇತಂ ಸಮಾಹಿತಂ ಸಂಸ್ಕರ್ತಾರಮೀಪ್ಸೇತ್" ಎಂಬ ಆಪಸ್ತಂಬ ವಾಕ್ಯಾನುಸಾರವಾಗಿ, ಅಭಿಜನವೆಂದರೆ ಸದ್ವಂಶದಿಂದಲೂ ವಿದ್ಯೆಯಿಂದಲೂ ಕೂಡಿದವನಾಗಿ, ಮನಶ್ಶುದ್ಧಿಯುಳ್ಳವನೇ ಆಚಾರ್ಯಸ್ಥಾನಕ್ಕೆ ಯೋಗ್ಯನು. ಈ ಮೂರುಲಕ್ಷಣಗಳೂ ನಾರದನಲ್ಲಿರುವುವು, ಹೇಗೆಂದರೆ, (ತಪಸ್ಸ್ವಾಧ್ಯಾಯ ನಿರತಂ) ಎಂಬುದರಲ್ಲಿ, ತಪಸ್ಸೆಂಬುದಕ್ಕೆ ಮನಶ್ಶುದ್ಧಿಗೆ ಕಾರಣಗಳಾದ ವ್ರತ ನಿಯಮೋಪವಾಸಾದಿ ಸತ್ಕರ್ಮಗಳೆಂದರ್ಥವು. ಸ್ವಾಧ್ಯಾಯವೆಂದರೆ ವೇದ ಗಳು. "ತಪೋ ವಿದ್ಯಾ ಚ ವಿಪ್ರಸ್ಯ ನಿಶ್ಶ್ರೇಯಸಕರಾವುಭೌ| ತಪಸಾ ಕಲ್ಮಷಂ ಹಂತಿ ವಿದ್ಯಯಾ ಜ್ಞಾನಮಶ್ನುತೇ ||" ಎಂಬಂತೆ, ಇವೆರಡೂ ಬ್ರಾಹ್ಮಣರಿಗೆ ಅತ್ಯವಶ್ಯಕಗಳಾದುದರಿಂದ, ಇವೆರಡನ್ನೂ ಎಡಬಿಡದೆ ನಡೆಸುತ್ತಿರುವವ ನೆಂದರ್ಥವು. ಈ ಅರ್ಥಗಳನ್ನೊಳಗೊಂಡ ಈ ವಿಶೇಷಣದಿಂದ ನಾರದ ಮಹರ್ಷಿಯಲ್ಲಿರುವ ಮನಶ್ಶುದ್ಧಿಯೂ, ವಿದ್ಯೆಯೂ ಸೂಚಿಸಲ್ಪಡುವುವು. (ವಾಗ್ವಿದಾಂ ವರಂ) ಎಂಬುದರಿಂದ, ವಾಕ್ ಎಂದರೆ ಸರಸ್ವತಿಯು, ಅವಳಿಂದ "ವಿದ್ಯಂತೇ ಲಭ್ಯಂತೇ" ಎಂದರೆ ಪಡೆಯಲ್ಪಟ್ಟವರು. ಅವಳ ಪುತ್ರರಾದ ಮರೀಚಿ ಮೊದಲಾದವರು ಅವರಿಗೆಲ್ಲಾ ಜ್ಯೇಷ್ಠನೆಂದರ್ಥವು. ಇದರಿಂದ ವಂಶೋನ್ನತಿಯೂ ಸೂಚಿಸಲ್ಪಡುವುದು. ಹೀಗೆ ಆಚಾರ್ಯಲಕ್ಷಣಗಳು ಮೂರೂ ತುಂಬಿರುವುವೆಂದು ತಾತ್ಪರ್ಯವು. (ನಾರದಂ) ನಾರವೆಂದರೆ ನರಸಂಬಂಧಿಯಾದ ಅಜ್ಞಾನವು. ಅದನ್ನು "ದ್ಯತಿ ಖಂಡಯತಿ" ಎಂದರೆ ನೀಗಿಸುವವನು. ಮತ್ತು 'ನಾರ'ವೆಂದರೆ ಬ್ರಹ್ಮಜ್ಞಾನವನ್ನು 'ದ' ಕೊಡುವವ ನೆಂದೂ ಅರ್ಥವು. ಹೀಗೆ ಅಜ್ಞಾನನಿವರ್ತಕನಾಗಿ ಜ್ಞಾನಪ್ರದನಾದವನೇ ಆಚಾರ್ಯನೆಂದು ಆಚಾರ್ಯಲಕ್ಷಣಗಳೆಲ್ಲವನ್ನೂ ಪೂರ್ಣವಾಗಿ ಹೇಳಿದಮೇಲೆ,

ಪ್ರಾರ್ಥಿಸಿ ಕೇಳಿದುದೇನೆಂದರೆ— [1]ಈ ಕಾಲದಲ್ಲಿ ಭೂಲೋಕದಲ್ಲಿ ಸಮಸ್ತ

ಶಿಷ್ಯಲಕ್ಷಣವನ್ನೂ ಸೂಚಿಸುವರು. ಹೇಗೆಂದರೆ:— (ತಪಸ್ವೀ) ಬ್ರಹ್ಮಜ್ಞಾನಕ್ಕೆ ಸಾಧನವಾದ ತಪಸ್ಸುಳ್ಳವನು. ಅಥವಾ ತಪಸ್ಸೆಂದರೆ ವೇದ ವೇದಾಂಗಜ್ಞಾನಕ್ಕೂ ಅರ್ಥವಾಗುವುದರಿಂದ ವ್ಯಾಕರಣವೇ ಮೊದಲಾದ ಅಂಗಗಳೊಡನೆ ವೇದವನ್ನು ಅಧ್ಯಯನಮಾಡಿ, ಅದರಿಂದ ಕೇವಲ ಕರ್ಮವೆಂಬುದು ಅಲ್ಪವಾದ ಮತ್ತು ಅಸ್ಥಿರವಾದ ಫಲಗಳನ್ನು ಕೊಡತಕ್ಕುದೆಂಬ ಜ್ಞಾನವನ್ನು ಪಡೆದವನು. ಮತ್ತು "ತಪಸ್ವೀ ತಾಪಸೇ ಶೋಚ್ಯೇ" ಎಂಬಂತೆ ಸಂಸಾರದಲ್ಲಿ ನಿರ್ವೇದಹೊಂದಿ ಮೋಕ್ಷಾಭಿಲಾಷೆಯುಳ್ಳವನು. "ತಸ್ಮಾನ್ನ್ಯಾಸಮೇಷಾಂ ತಪಸಾಮತಿರಿಕ್ತಮಾಹುಃ" ಎಂಬಂತೆ, ತಪಸ್ಸೆಂದರೆ ನ್ಯಾಸವೆನಿಸುವುದರಿಂದ, "ತದ್ವಿದ್ಧಿ ಪ್ರಾಣಿಪಾತೇನ ಪರಿಪ್ರಶ್ನೇನ ಸೇವಯಾ" ಎಂಬಂತೆ, ಆಚಾರ್ಯಶರಣಾಗತಿರೂಪವಾದ ನ್ಯಾಸವುಳ್ಳವನು. (ವಾಲ್ಮೀಕಿಃ) "ವಲ್ಮೀಕಸ್ಯ ಅಪತ್ಯಂ" ಎಂದರೆ, ಹುತ್ತದಲ್ಲಿ ಹುಟ್ಟಿದವನೆಂದರ್ಥವು. ಆದರೆ ಈತನು ಭೃಗುಪುತ್ರನು. ಇವನಿಗೆ ರೂಕ್ಷನೆಂದು ಹೆಸರು. ಇವನು ಬಹುಕಾಲದವರೆಗೆ ಮಹಾತಪಸ್ಸನ್ನು ಮಾಡುತ್ತಿರುವಾಗ, ಇವನ ಮೈಮೇಲೆ ದೊಡ್ಡ ಹುತ್ತವು ಬೆಳೆದು, ಮೈಯೆಲ್ಲವೂ ಮುಚ್ಚಿಹೋಯಿತು. ಆಗ ವರುಣನು ಎಡೆಬಿಡದೆ ಮಳೆಯನ್ನು ಸುರಿಸಿ, ಆ ಹುತ್ತವನ್ನು ಕರಗಿಸಿ, ಈತನನ್ನು ಬಿಡಿಸಿದುದರಿಂದ ಈತನಿಗೆ ಪ್ರಾಚೇತಸನೆಂದರೆ ವರುಣಪುತ್ರನೆಂದೂ ಹೆಸರಾಯಿತು. ಅಥವಾ ಭೃಗುವಂಶದಲ್ಲಿ ಹುಟ್ಟಿದ ಪ್ರಚೇತಸ್ಸೆಂಬವನ ಮಗನಾದುದರಿಂದ ಪ್ರಾಚೇತಸನೆಂದೂ ಹೇಳುವರು. ಹೀಗೆ ರೂಕ್ಷ, ಭಾರ್ಗವ, ಪ್ರಾಚೇತಸಾದಿಗಳಾದ ಅನೇಕ ನಾಮಗಳಿರುವಾಗಲೂ, ಇಲ್ಲಿ ವಾಲ್ಮೀಕಿಯೆಂಬ ಹೆಸರೇ ಹೇಳಲ್ಪಡುವುದರಿಂದ, ಈತನ ತಪೋಮಹಿಮೆಯು ಸೂಚಿಸಲ್ಪಡುವುದು. ಹೀಗೆ ದೇಹಾಭಿಮಾನವನ್ನು ಬಿಟ್ಟು, ಇಂದ್ರಿಯಗಳೆಲ್ಲವನ್ನೂ ಅಡಗಿಸಿ, ತಪಸ್ಸುಮಾಡಿ, ಜ್ಞಾನಾಂಗಗಳಾದ ಶಮದಮಾದಿ-ಗುಣಗಳಿಂದ ಪರಿಪೂರ್ಣನಾದವನೆಂದು ಭಾವವು. ಆದುದರಿಂದ 'ತಪಸ್ವೀ', 'ವಾಲ್ಮೀಕಿಃ' ಎಂಬೀ ಎರಡು ವಿಶೇಷಣಗಳಿಂದಲೂ, "ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್ ನಾಸ್ತ್ಯಕೃತಃ ಕೃತೇನ" ಎಂಬಂತೆ, ಯಜ್ಞಾದಿಕರ್ಮಗಳಿಂದ ಬರತಕ್ಕ ಫಲಗಳೆಲ್ಲವೂ ಅಲ್ಪಗಳಾಗಿಯೂ, ಅಸ್ಥಿರಗಳಾಗಿಯೂ ಇರುವುದರಿಂದ ಅವುಗಳನ್ನು ನಿಸ್ಸಾರವೆಂದೆಣಿಸಿ, ನಿರ್ವೇದ ಹೊಂದಿ, ಶಾಶ್ವತಸುಖವಾದ ಮೋಕ್ಷದಲ್ಲಿ ಅಭಿರುಚಿಯಿಂದ, ಶಮದಮಾದಿ

ಸದ್ಗುಣಸಂಪನ್ನನಾದವನಾವನು? ನಿಜವಾದ [2]ವೀರ್ಯವು ಯಾವನಲ್ಲಿರುವುದು? ನಡೆಸಬೇಕಾದ ಧರ್ಮಗಳನ್ನೂ, ಬಿಡಬೇಕಾದ ಅಧರ್ಮಗಳನ್ನೂ ಸೂಕ್ಷ್ಮಗತಿಯಿಂದ ಚೆನ್ನಾಗಿ ಬಲ್ಲವನಾವನು? ಇತರರು ಮಾಡಿದ ಎಳ್ಳಷ್ಟು ಉಪಕಾರವನ್ನೇ ಬೆಟ್ಟದಂತೆ ಭಾವಿಸಿ, ಎಂದೆಂದಿಗೂ ಅದನ್ನು ಮರೆಯದೆ ಸ್ಮರಣೆಯಲ್ಲಿಟ್ಟುಕೊಂಡು, ಅವರು ಎಷ್ಟೇ ಅಪಕಾರಗಳನ್ನು ಮಾಡಿದರೂ ಮನಸ್ಸಿಗೆ ತಂದುಕೊಳ್ಳದ ಗುಣವು ಯಾರಲ್ಲಿರುವುದು? ಯಾವ ವಿಪತ್ತುಗಳು ಬಂದೊದಗಿದರೂ ಸುಳ್ಳಾಡದವನಾವನು? ಉದ್ದೇಶಿಸಿದ ಸಂಕಲ್ಪವನ್ನು ಬಿಡದೆ ಸಾಧಿಸುವ ದೃಢಪ್ರತಿಜ್ಞೆಯು ಯಾರಲ್ಲಿರುವುದು? ಸ್ವಲ್ಪವೂ ಲೋಪವಿಲ್ಲದಂತೆ ತನ್ನ ಕುಲಾಚಾರಗಳನ್ನು ನಡೆಸಿಕೊಂಡು ಬರುವವನಾರು? ಗುಣದೋಷಗಳನ್ನೆಣಿಸದೆ ಸಮಸ್ತ ಪ್ರಾಣಿಗಳಿಗೂ ಹಿತವನ್ನೇ ಬಯಸುವವನಾರು? ಶಾಸ್ತ್ರಗಳೆಲ್ಲವನ್ನೂ ಓದಿ ತಿಳಿದವನಾವನು? ಇತರರಿಗೆ ಸಾಧ್ಯವಲ್ಲದ ಎಂತಹ ಸಾಹಸಕಾರ್ಯಗಳನ್ನಾದರೂ ಸಾಧಿಸುವ ಸಾಮರ್ಥ್ಯವು ಯಾರಿಗುಂಟು? ನೋಡಿದವರೆಲ್ಲರಿಗೂ ಒಂದೇ ವಿಧವಾದ ಪ್ರೀತಿಯನ್ನುಂಟುಮಾಡುವ ಸೌಮ್ಯದರ್ಶನವುಳ್ಳವನಾರು? ನಿಶ್ಚಲವಾದ ಧೈರ್ಯವೂ, ಮೀರಿಬಂದ ಕೋಪವನ್ನು ಅಕೃತ್ಯದಲ್ಲಿ ಪ್ರವರ್ತಿಸದಂತೆ ತಡೆಯುವ ಶಕ್ತಿಯೂ ಯಾರಿಗುಂಟು? [3]ಸಾವಿರಾರು ಚಂದ್ರಸೂರ್ಯರು ಉದಿಸಿರುವಂತೆ ಪ್ರಕಾಶಿಸುವ ದೇಹಕಾಂತಿ

ಗುಣವಿಶಿಷ್ಟವಾಗಿ ಆಚಾರ್ಯಶರಣಾಗತಿಮಾಡಿದವನೆಂಬ ಸಚ್ಛಿಷ್ಯಲಕ್ಷಣಗಳೆಲ್ಲವೂ ಸೂಚಿಸಲ್ಪಟ್ಟಿವೆ.

1. ವೈಕುಂಠಲೋಕದಲ್ಲಿ ಶ್ರೀಮಹಾವಿಷ್ಣುವಿಗೆ ಈ ಗುಣಗಳೆಲ್ಲವೂ ಸಹಜಗಳು. ಈ ಲೋಕದಲ್ಲಿಯೂ ಹಿಂದೆ ನರಸಿಂಹಾದ್ಯವತಾರಗಳಲ್ಲಿ ಈ ಗುಣಗಳು ಕಂಡುಬಂದಿರುವುವು. ಇವು ಹೊರತೆಂಬುದನ್ನು ಹೇಳುವುದಕ್ಕಾಗಿ 'ಭೂಲೋಕದಲ್ಲಿ', 'ಈ ಕಾಲದಲ್ಲಿ' ಎಂಬ ವಿಶೇಷಣಗಳು ಹೇಳಲ್ಪಟ್ಟಿವೆ.

2. ವೀರ್ಯವೆಂಬುದಕ್ಕೆ ಅನೇಕಾರ್ಥಗಳುಂಟು. ಅವಾವುವೆಂದರೆ— 'ಸತ್ಸ್ವಪಿ ವಿಕಾರಹೇತುಷು ಅವಿಕೃತತ್ವ ತಂ ವೀರ್ಯಂ' ಯಾವ ಕಾರಣಗಳಿಂದಲೂ ಮನೋವಿಕಾರವನ್ನು ಹೊಂದದೇಇರುವುದು. ಮತ್ತು 'ಯೇನ ಸ್ವಯಮಕ್ಷತಸ್ಸನ್ ಪರಾನ್ ಜಯತಿತದ್ವೀರ್ಯಂ' ತಾನು ಯಾವ ಅಪಾಯಕ್ಕೂ ಸಿಕ್ಕದೆ ಶತ್ರುಗಳನ್ನು ಜಯಿಸುವುದು ಇತ್ಯಾದಿ ಗುಣಗಳುಳ್ಳವನೆಂದರ್ಥವು.

3. ಅನುಕೂಲರಿಗೆ ಆನಂದವನ್ನೂ, ಪ್ರತಿಕೂಲರಾದವರಿಗೆ ಸಂಕಟವನ್ನೂ ಉಂಟುಮಾಡತಕ್ಕವನೆಂಬುದಕ್ಕಾಗಿ ಚಂದ್ರಸೂರ್ಯರ ಹೋಲಿಕೆಯು.

ಯುಳ್ಳವನಾರು? ಇತರರ ಗುಣಗಳನ್ನು ಸಹಿಸಲಾರದೆ, ಅವುಗಳಲ್ಲಿ ದೋಷವನ್ನಾರೋಪಿಸುವ ದುರ್ಗುಣವನ್ನು ನಿಶ್ಶೇಷವಾಗಿ ಬಿಟ್ಟಿರುವವನಾವನು? ಯಾವನ ಕೋಪಕ್ಕೆ ದೇವತೆಗಳೂ ಭಯಪಡುವರು? ಅಂತವನನ್ನು ತಿಳಿಯಬೇಕೆಂದು ನನಗೆ ಬಹಳ ಆಸೆಯಿರುವುದು. ಎಲೈ ಮಹರ್ಷಿಯೇ! ನೀನು ಮಹಾಜ್ಞಾನಿಯಾದುದರಿಂದ ಇದನ್ನು ತಿಳಿದು ಹೇಳಲು ನೀನೊಬ್ಬನೇ ಸಮರ್ಥನು. ಆದುದರಿಂದ ಕೃಪೆಯಿಟ್ಟು ಹೇಳಬೇಕು" ಎಂದು ವಾಲ್ಮೀಕಿಯು [1]ಪ್ರಾರ್ಥಿಸಿ ಕೇಳಲು, ತ್ರಿಲೋಕಜ್ಞನಾದ ನಾರದನು, ಬಹಳ [2]ಸಂತೋಷದಿಂದ ವಾಲ್ಮೀಕಿಯನ್ನು ಕುರಿತು ಹೇಳುವನು. "ಎಲೈ ಮಹರ್ಷಿಯೇ ಕೇಳು! ನೀನು ಹೇಳಿದ ಗುಣಗಳೋ ಬಹಳವಾಗಿರುವುವು. ಇವೆಲ್ಲವೂ ಒಬ್ಬನಲ್ಲಿಯೇ

---

1. ಮುಂದೆ ಅಯೋಧ್ಯಾಕಾಂಡದಲ್ಲಿ, ರಾಮನು ಸೀತಾಲಕ್ಷ್ಮಣರೊಡಗೂಡಿ ವಾಲ್ಮೀಕ್ಯಾಶ್ರಮಕ್ಕೆ ಹೋಗಿದ್ದುದಾಗಿ ಹೇಳಲ್ಪಟ್ಟಿರುವುದು. ಮತ್ತು "ರಾಮೋ ರಾಮೋ ರಾಮ ಇತಿ ಪ್ರಜಾನಾಮಭವನ್ ಕಥಾಃ | ರಾಮಭೂತಂ ಜಗದಭೂತ್" ಎಂದು ಪ್ರಜೆಗಳಲ್ಲಿ ಈ ರಾಮನ ಗುಣಗಳನ್ನು ಕೇಳಿತಿಳಿಯದವರೇ ಇಲ್ಲವೆಂದೂ ಹೇಳಲ್ಪಟ್ಟಿರುವುದು. ಹೀಗಿರುವಲ್ಲಿ ಈ ರಾಮರಾಜ್ಯದಲ್ಲಿಯೇ ಇರುತ್ತಿದ್ದ ವಾಲ್ಮೀಕಿಗೆ ಆ ರಾಮನ ವೈಭವವು ತಿಳಿಯದೆ ಹೋಯಿತೆ? ಸತ್ಯಲೋಕದಿಂದ ಬಂದ ನಾರದನಿಂದಲೇ ಅದನ್ನು ಕೇಳಿ ತಿಳಿಯಬೇಕಾಯಿತೆ? ಮತ್ತು ನಾರದನೂ ಕೂಡ ಈ ರಾಮಚರಿತ್ರವನ್ನು ವಾಲ್ಮೀಕಿಗೆ ಉಪದೇಶಿಸಬೇಕೆಂಬ ಉದ್ದೇಶದಿಂದಲೇ ಬಂದು, ಈ ವಾಲ್ಮೀಕಿಯ ಪ್ರಶ್ನೆಗೆ "ಯೋಚಿಸಿ ತಿಳಿದು ಹೇಳುವೆನು" ಎಂದು ಹೇಳಿದುದೇಕೆ? ಎಂದು ಕೆಲವರು ಆಕ್ಷೇಪಿಸಬಹುದು. ಇದರ ತತ್ವಾರ್ಥವೇನೆಂದರೆ ವಾಲ್ಮೀಕಿಗೆ ರಾಮನ ವೈಭವವು ತಿಳಿಯದೇ ಇಲ್ಲ. ಆತನು ರಾಮನನ್ನು ಉದ್ದೇಶಿಸಿ ಪ್ರಶ್ನೆ ಮಾಡಿದವನೂ ಅಲ್ಲ! ವೇದಾನ್ತವೇದ್ಯಗಳಾದ ಕಲ್ಯಾಣಗುಣಗಳಿಂದ ಕೂಡಿದ ಪರತತ್ತ್ವವು ಈಗ ಭೂಲೋಕದಲ್ಲಿ ಎಲ್ಲಿರುವುದೆಂದು ಪ್ರಶ್ನೆಮಾಡಿದುದಾಗಿಯೇ ಗ್ರಹಿಸಬೇಕು. ಇದಕ್ಕಾಗಿಯೇ ಆ ನಾರದನು ಬ್ರಹ್ಮಜ್ಞಾನವುಳ್ಳವನಾದುದರಿಂದ, ಆ ಪರತತ್ತ್ವವೇ ಈಗ ಭೂಲೋಕದಲ್ಲಿ ರಾಮರೂಪದಿಂದ ಅವತರಿಸಿರುವುದೆಂದು ಹೇಳಲಾರಂಭಿಸಿ, ಶ್ರುತಿಪ್ರಮಾಣಗಳಿಂದ ಸಿದ್ಧವಾದ ಗುಣಗಳೆಲ್ಲವನ್ನೂ ರಾಮನಲ್ಲಿಯೇ ತೋರಿಸುವನೆಂದು ತಿಳಿಯಬೇಕು.

2. ಇಲ್ಲಿ ಸಂತೋಷಕ್ಕೆ ಕಾರಣವೇನೆಂದರೆ, ಇಂತಹ ಸಕಲಗುಣಗಳೂ ಸಾಕ್ಷಾತ್ಪರಮಪುರುಷನೊಬ್ಬನಿಗೆ ಮಾತ್ರ ಸಲ್ಲುವುವು. ಆ ಪರತತ್ತ್ವವೇ

ಸೇರಿರುವುದು ಅಪೂರ್ವವು. ಆದರೂ ಅಂತವನಾವನೆಂಬುದನ್ನು [1]ಯೋಚಿಸಿ ಹೇಳುವೆನು ಕೇಳು. [2]ಇಕ್ಷ್ವಾಕುವಂಶದಲ್ಲಿ ಹುಟ್ಟಿ, [3]ರಾಮನೆಂಬ ಹೆಸರಿನಿಂದ ಲೋಕದಲ್ಲಿ ಪ್ರಸಿದ್ಧನಾದವನೊಬ್ಬನುಂಟು. ಆತನನ್ನು ನಿನ್ನಂತಹ ಜ್ಞಾನಿ

ಈಗ ರಾಮನಾಗಿ ಅವತರಿಸಿರುವುದರಿಂದ, ವಾಲ್ಮೀಕಿಯು ಕೇಳಿದ ಪ್ರಶ್ನೆಯೂ, ತಾನು ಉಪದೇಶಿಸಬೇಕೆಂದು ಬಂದ ವಿಷಯವೂ, ಕಾಕತಾಳನ್ಯಾಯದಿಂದ ಒಂದಾಗಿ ಸೇರಿದುದಕ್ಕಾಗಿ ನಾರದನಿಗೆ ಸಂತೋಷವುಂಟಾಯಿತೆಂದು ಭಾವವು.

1. ನಾರದನು ರಾಮಚರಿತ್ರವನ್ನು ಹೇಳುವುದಕ್ಕಾಗಿಯೇ ಬಂದಿರುವುದರಿಂದಲೂ, ವಾಲ್ಮೀಕಿಯ ಪ್ರಶ್ನೆಗೆ ರಾಮನೆಂಬುದೊಂದೇ ತಕ್ಕ ಉತ್ತರವಾಗಿರುವುದರಿಂದಲೂ, ಕೇಳಿದೊಡನೆಯೇ ರಾಮನೆಂದು ಹೇಳದೆ, ಯೋಚಿಸಿ ಹೇಳುವೆನೆಂದು ನಾರದನು ಹೇಳಿದುದು ಸಮಂಜಸವಲ್ಲವೆಂದು ಕೆಲವು ವ್ಯಾಖ್ಯಾನಕರ್ತರು ಆಕ್ಷೇಪಿಸಿ, ಕೊನೆಗೆ "ಯೋಚಿಸಿ" ಎಂದರೆ, ತಾನು ಉದ್ದೇಶಿಸಿ ಬಂದ ವಿಷಯವನ್ನೇ ವಾಲ್ಮೀಕಿಯು ಕೇಳಿದನೆಂಬ ಮಿತಿಮೀರಿದ ಸಂತೋಷದಿಂದ, ತಾನು ಮೈಮರಿತುಹೋದುದರಿಂದಲೂ, ರಾಮನ ಗುಣಸ್ಮರಣೆಯಿಂದಲೂ, ಪರವಶವಾದ ಮನಸ್ಸನ್ನು ಸ್ವಾಧೀನಕ್ಕೆ ತಂದುಕೊಂಡು ಹೇಳುವನೆಂದು ನಾರದನು ಹೇಳಿದುದಾಗಿ ಅರ್ಥಮಾಡಿರುವರು.

2. ಜನಕಾದಿಮಹಾವಂಶಗಳಿರುವಾಗ ಇಕ್ಷ್ವಾಕುವಂಶದಲ್ಲಿಯೇ ಅವತರಿಸುವುದಕ್ಕೆ ಕಾರಣವೇನೆಂದರೆ, ಇಕ್ಷ್ವಾಕುವು ಬಹುಕಾಲದವರೆಗೆ ವಿಷ್ಣುವನ್ನು ಆರಾಧಿಸಿ, ಶ್ರೀರಂಗನಾಥಮೂರ್ತಿಯನ್ನೇ ಪಡೆದುದಾಗಿಯೂ, ಅವನ ಸಂತತಿಯವರೂ ಆ ಮೂರ್ತಿಯನ್ನೇ ಆರಾಧಿಸುತ್ತಿದ್ದುದಾಗಿಯೂ ಪುರಾಣಕಥೆಯುಂಟು. ಈ ಅಭಿಮಾನದಿಂದಲೇ ಆ ವಂಶಸ್ಥರ ಆರಾಧನಕ್ಕೆ ಫಲರೂಪವಾಗಿ ವಿಷ್ಣುವು ಇಲ್ಲಿಯೇ ಅವತರಿಸಿದನೆಂದು ಭಾವವು. "ವೈಷ್ಣವೋ ನಃ ಕುಲೇ ಜಾತಸ್ಸ ನಸ್ಸಂತಾರಯಿಷ್ಯತಿ" ಎಂಬಂತೆ, ಒಂದು ವಂಶದಲ್ಲಿ ವಿಷ್ಣುಭಕ್ತನಾದವನೊಬ್ಬನು ಹುಟ್ಟಿದರೂ ಆ ವಂಶದಲ್ಲಿ ಹುಟ್ಟಿದವರನ್ನೆಲ್ಲಾ ಉತ್ತೀರ್ಣರನ್ನಾಗಿ ಮಾಡುವನೆಂದು ಹೇಳಲ್ಪಟ್ಟಿರುವುದು. ಈ ಇಕ್ಷ್ವಾಕು ವಂಶದವರು ಪರಂಪರೆಯಾಗಿ ವಿಷ್ಣುಮೂರ್ತಿಯನ್ನು ಆರಾಧಿಸುತ್ತಿದ್ದರೆಂದು ಹೇಳುವಾಗ ಆ ವಂಶದ ಮೇಲ್ಮೆಯನ್ನು ಹೇಳತಕ್ಕುದೇನು ?

3. ರಾಮನೆಂಬುದಕ್ಕೆ "ರಮಯತಿ ಸರ್ವಾನ್ ಗುಣೈಃ" ತನ್ನ ಗುಣಗಳಿಂದ ಎಲ್ಲರನ್ನೂ ಸಂತೋಷಪಡಿಸತಕ್ಕವನು ಅಥವಾ "ರಮಂತೇಽಸ್ಮಿನ್ ಸರ್ವೇ ಜನಾಃ" ಯೋಗಿಗಳೇ ಮೊದಲಾದ ಸಮಸ್ತಜನರೂ ಇವನಲ್ಲಿ ನೆಟ್ಟ ಮನಸ್ಸುಳ್ಳವರಾಗಿರುವರೆಂದರ್ಥವು.

ಗಳು ಮಾತ್ರವೇ ಅಲ್ಲದೆ ಸಾಮಾನ್ಯಜನರೂ [1]ಕೇಳಿಬಲ್ಲರು ; ‹ಆತನು ನಿಯತಾತ್ಮನು. [3]ಮಹಾ ವೀರ್ಯವುಳ್ಳವನು. [4]ಅದ್ಭುತವಾದ ದೇಹಕಾಂತಿಯುಳ್ಳವನು. [5]ಧೈರ್ಯಶಾಲಿಯು,[6]ಆಪತ್ತಿನಲ್ಲಿಯಾಗಲಿ, ಸಂಪತ್ತಿನಲ್ಲಿಯಾಗಲಿ ಆತನ ಮನಸ್ಸು

1. ಕೇಳಿಬಲ್ಲರೆಂದರೆ, ಬಾಲ್ಯದಿಂದಲೇ ಆತನು ತೋರಿಸುತ್ತಿರುವ ರಾಕ್ಷಸವಧ, ಶಿವಧನುರ್ಭಂಗ, ಪರಶುರಾಮನಿಗ್ರಹ, ಸಮುದ್ರಸೇತುಬಂಧನ ಮುಂತಾದ ಅತಿಮಾನುಷಕೃತ್ಯಗಳನ್ನು ಕೇಳಿ, ಆತನು ಸಾಕ್ಷಾನ್ನಾರಾಯಣ ನೆಂದೇ ಎಲ್ಲರೂ ತಿಳಿದಿರುವರೆಂದು ಭಾವವು.

2. ಇಲ್ಲಿ ನಿಯತಾತ್ಮಾ ಮಹಾವೀರ್ಯೋ ದ್ಯುತಿಮಾನ್ ಧೃತಿಮಾನ್ ವಶೀ | ಬುದ್ಧಿಮಾನ್ನೀತಿಮಾನ್ ವಾಗ್ಮೀ ಶ್ರೀಮಾನ್ ಶತ್ರುನಿಬರ್ಹಣಃ ||" ಇತ್ಯಾದಿ ವಿಶೇಷಣಗಳೆಲ್ಲಕ್ಕೂ ಮೇಲೆ ಹೇಳಿದ ಲೌಕಿಕಸಾಮಾನ್ಯವಾದ ಅರ್ಥ ಗಳಲ್ಲದೆ, ವೇದಾಂತಪ್ರತಿಪಾದ್ಯಗಳಾದ ಬೇರೆ ವಿಶೇಷಾರ್ಥಗಳೂ ಇರುವುವು. ಮೊದಲು "ನಿಯತಾತ್ಮಾ" ಎಂಬ ಶಬ್ದದಿಂದ "ವಶೀ" ಎಂಬ ವಿಶೇಷಣದವರೆಗೆ, ಪರಮಪುರುಷನ ಸ್ವರೂಪವನ್ನು ನಿರೂಪಿಸತಕ್ಕ ಧರ್ಮಗಳು ಹೇಳಲ್ಪಡುವುವು. ಹೇಗೆಂದರೆ: (ನಿಯತಾತ್ಮಾ) ಸ್ಥಿರವಾದ ಸ್ವಭಾವವುಳ್ಳವನು. ಎಂದರೆ ವಿಕಾರವಿಲ್ಲದವನು. "ನಾಸ್ಯ ಜರಯೈತಜ್ಜೀರ್ಯತೇ ನ ವಧೇನಾಸ್ಯ ಹನ್ಯತೇ | ಅಪಹತಪಾಪ್ಮಾ ವಿರುಜೋ ವಿಮೃತ್ಯುರ್ವಿಶೋಕೋ ವಿಜಿಘಿತ್ಸೋ ಅಪಿಪಾಸಃ" ಎಂಬ ಶ್ರುತಿಗನುಸಾರವಾಗಿ ಯಾವ ವಿಕಾರವೂ ಇಲ್ಲದವನು.

3. (ಮಹಾವೀರ್ಯಃ) "ಪರಾಸ್ಯ ಕೀರ್ತಿರ್ವಿವಿಧೈವ ಶ್ರೂಯತೇ" ಇತ್ಯಾದಿ ಶ್ರುತಿಯಂತೆಯೂ, "ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ" ಎಂಬಂತೆಯೂ ವಿಚಿತ್ರಶಕ್ತಿಯುಳ್ಳವನು.

4. (ದ್ಯುತಿಮಾನ್) ಸ್ವಯಂಪ್ರಕಾಶವುಳ್ಳವನು, ಅಥವಾ ಜ್ಞಾನ ಸ್ವರೂಪನು. "ವಿಜ್ಞಾನಘನ ಏವ ಪ್ರಜ್ಞಾನಘನಃ" ಎಂಬ ಶ್ರುತ್ಯುಕ್ತವಾದ ತೇಜೋರೂಪನಾದವನು.

5. (ಧೃತಿಮಾನ್) "ಧೃತಿಸ್ತು ತುಷ್ಟಿಸ್ಸಂತೋಷಃ" ಇತ್ಯಾದಿ ವೈಜ ಯಂತೀ ನಿಘಂಟುವಿನ ಪ್ರಕಾರವಾಗಿ, ಧೃತಿಯೆಂದರೆ ಸಂತೋಷವು. ಆದುದ ರಿಂದ "ಆನಂದೋ ಬ್ರಹ್ಮ" ಎಂಬಂತೆ ನಿತ್ಯಾನಂದಸ್ವರೂಪನು.

6. (ವಶೀ) "ಸರ್ವಸ್ಯ ವಶೀ ಸರ್ವಸ್ಯೇಶಾನಃ" ಎಂಬ ಶ್ರುತ್ಯುಕ್ತವಾಗಿ ಎಲ್ಲವನ್ನೂ ವಶಪಡಿಸಿಕೊಂಡು ಆಳುವವನು. ಮುಂದೆ "ಬುದ್ಧಿಮಾನ್" ಎಂಬುದರಿಂದ "ಶತ್ರುನಾಶಕಃ ಎಂಬವರೆಗಿನ ವಿಶೇಷಣಗಳಿಂದ ಭಗವಂತ ನಲ್ಲಿರುವ ಸೃಷ್ಟ್ಯುಪಯುಕ್ತವಾದ ಗುಣಗಳು ನಿರೂಪಿಸಲ್ಪಡುವುವು.

ಸ್ವಲ್ಪವೂ ವಿಕಾರಹೊಂದದು. ಬಹಿರಿಂದ್ರಿಯಗಳನ್ನು ನಿಗ್ರಹಿಸಿದವನು. ಬಹಳ [1]ಬುದ್ಧಿವಂತನು. [2]ನ್ಯಾಯಶೀಲನು. ಕಾಮಂದಕಾದಿ ರಾಜನೀತಿಗಳೆಲ್ಲವನ್ನೂ ಚೆನ್ನಾಗಿ ಬಲ್ಲವನು. [3]ಪ್ರಶಸ್ತವಾದ ವಾಕ್ಕುಳ್ಳವನು. ಅತ್ಯುತ್ತಮವಾದ ದೇಹಕಾಂತಿಯುಳ್ಳವನು. [4]ಭಾಗ್ಯಶಾಲಿಯು. ಶತ್ರುನಾಶಕನು. [5]ಆತನ

---

1. (ಬುದ್ಧಿಮಾನ್) ಪ್ರಶಸ್ತಬುದ್ಧಿಯುಳ್ಳವನು. ಬುದ್ಧಿಗೆ ಪ್ರಾಶಸ್ತ್ಯವಾವುದೆಂದರೆ: "ಶುಶ್ರೂಷಾ ಶ್ರವಣಂ ಚೈವ ಗ್ರಹಣಂ ಧಾರಣಂ ತಥಾ | ಊಹಾಪೋಹೋಽರ್ಥವಿಜ್ಞಾನಂ ತತ್ವಜ್ಞಾನಂ ಚ ಧೀಗುಣಾಃ||" ಎಂಬ ಗುಣಗಳಿಂದ ಕೂಡಿರುವುದೆಂದರ್ಥವು. ಪರಮಪುರುಷನ ಪರವಾಗಿ ಯಸ್ಸರ್ವಜ್ಞಸ್ಸಸರ್ವವಿತ್" ಎಂಬಂತೆ ಎಲ್ಲವನ್ನೂ ಬಲ್ಲವನೆಂದರ್ಥವು.

2. (ನೀತಿಮಾನ್)ಮರ್ಯಾದೆಯುಳ್ಳವನು. "ಧಾತಾ ಯಥಾಪೂರ್ವಮಕಲ್ಪಯತ್", "ಏಷ ಸೇತುರ್ವಿಧರಣ ಏಷಾಂ ಲೋಕಾನಾಮಸಂಬಾಧಾಯ" ಎಂಬ ಶ್ರುತಿಪ್ರಮಾಣದಿಂದ ಲೋಕಾಧಾರನೆಂದರ್ಥವು.

3. (ವಾಗ್ಮೀ) ಪ್ರಶಸ್ತವಾದ ವಾಕ್ಕೆಂದರೆ ವೇದಗಳಿಗೆ ಪ್ರವರ್ತಕನೆಂದರ್ಥವು. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" ಎಂಬ ಶ್ರುತ್ಯರ್ಥವು ಇಲ್ಲಿ ಸೂಚಿತವಾಗಿದೆ.

4. (ಶ್ರೀಮಾನ್) 'ಶ್ರೀ' ಎಂದರೆ ಸಂಪತ್ಪರ್ಯಾಯವಾದ ವಿಭೂತಿಯು. "ಸರ್ವಮಿದಮಭ್ಯಾತ್ತಃ" ಎಂಬ ಶ್ರುತ್ಯುಕ್ತವಾಗಿ ಸಮೃದ್ಧವಾದ ಉಭಯವಿಭೂತಿಗಳುಳ್ಳವನೆಂದರ್ಥವು. ಪರಮಪುರುಷನಿಗೆ ನಿತ್ಯವಿಭೂತಿ ಮತ್ತು ಲೀಲಾವಿಭೂತಿಗಳೆಂಬ ಉಭಯ ವಿಭೂತಿಗಳನ್ನು ಹೇಳುವಾಗ, "ಪಾದೋಽಸ್ಯ ವಿಶ್ವಾ ಭೂತಾನಿ" ಎಂದು ಆತನ ಲೀಲಾವಿಭೂತಿಯನ್ನು ಕಾಲು ಭಾಗವನ್ನಾಗಿ ಹೇಳಿ, "ತ್ರಿಪಾದೋಽಸ್ಯಾಮೃತಂ ದಿವಿ" ಎಂದು ಆತನ ನಿತ್ಯ ವಿಭೂತಿಯನ್ನು ಲೀಲಾವಿಭೂತಿಗಿಂತಲೂ ಮೂರುಪಾಲು ಹೆಚ್ಚೆಂದು ನಿರೂಪಿಸಿರುವರು. "ಅಂಡಾನಾಂ ತು ಸಹಸ್ರಾಣಿ ನಿಯುತಾನ್ಯಯುತಾನಿ ಚ" ಎಂಬಂತೆ, ಅಸಂಖ್ಯಾತಗಳಾದ ಬ್ರಹ್ಮಾಂಡಗಳೆಲ್ಲವೂ ಆತನ ಲೀಲಾವಿಭೂತಿಯೆನಿಸಿಕೊಂಡಿರುವಾಗ, ಅದಕ್ಕೂ ಮೂರುಪಾಲುಹೆಚ್ಚಾಗಿರುವ ನಿತ್ಯ ವಿಭೂತಿಯನ್ನು ಹೇಳತಕ್ಕುದೇನು? ಆದುದರಿಂದ ಆತನ ಐಶ್ವರ್ಯಕ್ಕೆ ಎಣೆಯಿಲ್ಲವೆಂದು ಭಾವವು. ಹೀಗೆ ನಾನಾಶ್ರುತಿಪ್ರತಿಪಾದಿತಗಳಾದ ಗುಣಗಳುಳ್ಳವನೆಂದು ಭಾವವು. ಹೀಗೆಯೇ ಇತರ ವಿಶೇಷಣಗಳಿಗೂ ಶ್ರುತ್ಯರ್ಥಗಳುಂಟು.

5. ಈ ಮುಂದಿನ ವಿಶೇಷಣಗಳಿಂದ "ಯ ಏಷೋಽಯಂತರಾದಿತ್ಯೇ

ವಿಸ್ತಾರವಾದ ಮತ್ತು ಎತ್ತರವಾದ ಭುಜಶಿರಸ್ಸು, ದಪ್ಪವಾದ ಮತ್ತು ದುಂಡಾದ ತೋಳುಗಳು, ಶಂಖದಂತಿರುವ ಕಂಠವು, ಉಬ್ಬಿದ ದವಡೆಗಳು, ವಿಸ್ತಾರವಾದ ಎದೆ, ದೊಡ್ಡ ಬಿಲ್ಲನ್ನು ಧರಿಸುವುದಕ್ಕೆ ಯೋಗ್ಯವಾದ ದೇಹದ ಕಟ್ಟು, ಇವೆಲ್ಲವೂ ಮಹಾಪುರುಷಲಕ್ಷಣಗಳನ್ನು ಸೂಚಿಸತಕ್ಕವುಗಳಾಗಿರುವುವು. ಮತ್ತು ಆತನು ಮಾಂಸಪುಷ್ಟಿಯಿಂದ ಗೂಢವಾದ ಭುಜದಕೀಲುಳ್ಳವನು. [1]ಶತ್ರುಭಯಂಕರನು. ಮೊಳಕಾಲಿನವರೆಗೆ ನೀಡಿದ ತೋಳುಗಳುಳ್ಳವನು.

ಹಿರಣ್ಮಯಃ ಪುರುಷೋ ದೃಶ್ಯತೇ, ಹಿರಣ್ಯಶ್ಮಶ್ರುರ್ಹಿರಣ್ಯಕೇಶಃ ಆಪ್ರಣಖಾತ್ಸರ್ವಂ ಏವ ಸುವರ್ಣಸ್ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ ತಸ್ಯೋದಿತಿನಾಮ, ಸ ಏಷ ಸರ್ವೇಭ್ಯಃ ಪಾಪ್ಮಭ್ಯ ಉದಿತ ಉದೇತಿ ಹ ವೈ ಸರ್ವೇಭ್ಯಃ ಪಾಪ್ಮಭ್ಯ ಉದಿತ ಉದೇತಿ ಹ ವೈ ಸರ್ವೇಭ್ಯಃ ಪಾಪ್ಮಭ್ಯೋ ಯ ಏವಂ ವೇದ" ಎಂದು ಅಂತರಾದಿತ್ಯ ವಿದ್ಯೆಯಲ್ಲಿ ವರ್ಣಿಸಲ್ಪಟ್ಟ ಸರ್ವಾಂಗ ಸುಂದರವಾದ ಭಗವದ್ವಿಗ್ರಹವು ಸೂಚಿಸಲ್ಪಟ್ಟಿದೆ. ಸಾಮುದ್ರಿಕದಲ್ಲಿ ಹೇಳಲ್ಪಟ್ಟ ಮಹಾಪುರುಷಲಕ್ಷಣಗಳೆಲ್ಲವೂ ಈತನ ಅವಯವಗಳಲ್ಲಿ ಕಾಣುವುವೆಂದು ಸಾಮಾನ್ಯಾಭಿಪ್ರಾಯವು. ಹೇಗೆಂದರೆ: ಭುಜಕ್ಕೆ—"ಕಕ್ಷಃ ಕುಕ್ಷಿಶ್ಚ ವಕ್ಷಶ್ಚ ಘ್ರಾಣಸ್ಕಂಧೌ ಲಲಾಟಿಕಾ । ಸರ್ವಭೂತೇಷು ನಿರ್ದಿಷ್ಟಾ ಉನ್ನತಾಸ್ತು ಸುಖಪ್ರದಾಃ ॥"

ತೋಳುಗಳಿಗೆ: "ಆಜಾನುಲಂಬಿನೌ ಬಾಹೂ ವೃತ್ತಪೀನೌ ಮಹೀಶ್ವರಃ"

ಕಂಠಕ್ಕೆ: "ಕಂಬುಗ್ರೀವಸ್ತು ನೃಪತಿರ್ಲಂಬಕರ್ಣೋತಿಭೂಷಣಃ" (ಶಂಖದಂತೆ ಮೂರು ರೇಖೆಗಳಿಂದ ಕೂಡಿದ ಕಂಠವೆಂದು ಭಾವವು.)

ದವಡೆಗಳಿಗೆ: "ಮಾಂಸಲೌತು ಹನೂ ಯಸ್ಯ ಭವತಸ್ತ್ವೀಷದುನ್ನತೌ । ಸ ನರೋ ಮೃಷ್ಟಮಶ್ನಾತಿ ಯಾವದಾಯುಸ್ಸುಖೀ ಭವೇತ್ ॥

ಎದೆಗೆ: "ಸ್ಥಿರಂ ವಿಶಾಲಂ ಕಠಿನಮುನ್ನತಂ ಮಾಂಸಲಂ ತಥಾ । ವಕ್ಷೋ ಯಸ್ಯ ಮಹೀಪಾಲಸ್ತತ್ಸಮೋ ವಾ ಭವೇನ್ನರಃ ॥

ಭುಜದ ಕೀಲಿಗೆ: ವಿಷಮೈರ್ಜತ್ರುಭಿರ್ನಿಸ್ವಾ ಅತಿಸೂಕ್ಷ್ಮೈಶ್ಚ ಮಾನವಾಃ । ಉನ್ನತೈರ್ಭೋಗಿನೋ ನಿಮ್ನೈರ್ನಿಸ್ವಾಃ ಪೀನೈರ್ನರಾಧಿಪಾಃ ॥

1. ಹಿಂದೆಮುಂದೆಯೆಲ್ಲಾ ಆತನ ಅವಯವಸೌಂದರ್ಯವನ್ನೂ ಮಹಾಪುರುಷಲಕ್ಷಣಗಳನ್ನೂ ಹೇಳುತ್ತಿರುವಾಗ, ನಡುವೆ "ಅರಿಂದಮಃ" ಎಂದರೆ ಶತ್ರುಗಳಿಗೆ ಭಯಂಕರವಾದ ದೇಹವುಳ್ಳವನೆಂದು ಹೇಳುವುದು ಸಮಂಜಸವೇ?

ಆತನ ದುಂಡಾದ ತಲೆ, ವಿಪುಲವಾದ ಹಣೆ, ಗಂಭೀರವಾದ ನಡೆ, ನುಣುಪಾದ ದೇಹಕಾಂತಿ, ಅಗಲವಾದ ಕಣ್ಣು, ಸಮಪ್ರಮಾಣವುಳ್ಳ ಆಕೃತಿ, ಸಮವಾಗಿ ಒಂದಕ್ಕೊಂದು ಹೋಲುವ ಅವಯವಗಳು, ಇವೆಲ್ಲವೂ ಸಾರ್ವಭೌಮಲಕ್ಷಣಗಳನ್ನು ಸೂಚಿಸುವುವು. ಮತ್ತು ಆತನು ಧರ್ಮಜ್ಞನು. [1]ಸತ್ಯಸಂಧನು. ಯಾವಾಗಲೂ ಪ್ರಜೆಗಳಿಗೆ ಹಿತವನ್ನೇ ಬಯಸತಕ್ಕವನು. [2]ಆತನ

ಎಂಬ ಆಕ್ಷೇಪವುಂಟಾದಪಕ್ಷದಲ್ಲಿ, ಇದೂ ಆತನ ದೇಹದ ಮಹತ್ತ್ವವನ್ನೇ ಸೂಚಿಸುವುದೆಂದು ಗ್ರಹಿಸಬೇಕು.

ತಲೆಗೆ: "ಸಮವೃತ್ತಶಿರಾಶ್ಚೈವ ಛತ್ರಾಕಾರಶಿರಾಸ್ತಥಾ | ಏಕಛತ್ರಾಂ ಮಹೀಂ ಭುಙ್ತೇ ದೀರ್ಘಮಾಯುಶ್ಚ ಜೀವತಿ ||"

ಹಣೆಗೆ: "ಅರ್ಧಚಂದ್ರನಿಭಂ ತುಂಗಂ ಲಲಾಟಂ ಯಸ್ಯ ಸ ಪ್ರಭುಃ"

ನಡೆಗೆ: "ಸಿಂಹರ್ಷಭಗಜವ್ಯಾಘ್ರಗತಯೋ ಮನುಜಾ ಮುನೇ | ಸರ್ವತ್ರ ಸುಖಮೇಧಂತೇ ಸರ್ವತ್ರ ಜಯಿನಸ್ಸದಾ ||"

ನುಣುಪಿಗೆ: "ಚಕ್ಷುಸ್ಸ್ನೇಹೇನ ಸೌಭಾಗ್ಯಂ ದಂತಸ್ನೇಹೇನ ಭೋಜನಮ್ | ತ್ವಚಸ್ಸ್ನೇಹೇನ ಶಯ್ಯಾ ಚ ಪಾದಸ್ನೇಹೇನ ವಾಹನಂ ||"

ಕಣ್ಣಿಗೆ: "ರಕ್ತಾಂತೈಃ ಪದ್ಮಪತ್ರಾಕ್ಷೈಃ ಲೋಚನೈಃ ಸುಖಭೋಗಿನಃ"

ಆಕಾರಕ್ಕೆ: "ಷಣ್ಣವತ್ಯಂಗುಳೋತ್ಸೇಧಸ್ಸಾರ್ವಭೌಮೋ ಭವೇನ್ನರಃ"

ಅವಯವಗಳಿಗೆ: "ಭ್ರುವೌ ನಾಸಾಪುಟೇ ನೇತ್ರೇ ಕರ್ಣಾವೋಷ್ಠೌ ಚ ಚೂಚುಕೇ | ಕೂರ್ಪರೌ ಮಣಿಬಂಧೌ ಚ ಜಾನುನೀ ವೃಷಣೌ ಕಟೀ || ಕರೌ ಪಾದೌ ಸ್ಫಿಜೌ ಯಸ್ಯ ಸಮೌ ಜ್ಞೇಯಸ್ಸ ಭೂಪತಿಃ" ಇತ್ಯಾದಿ ಲಕ್ಷಣಗಳನ್ನು ಗ್ರಹಿಸಬೇಕು.

ಇದರ ಹಿಂದೆ ಆಶ್ರಿತರು ಅನುಭವಿಸುವುದಕ್ಕೆ ಯೋಗ್ಯವಾದ ದಿವ್ಯಸುಂದರ ವಿಗ್ರಹದ ಶುಭಲಕ್ಷಣಗಳನ್ನು ಹೇಳಿ, ಮುಂದೆ ಆಶ್ರಿತರಕ್ಷಣೆಗೆ ಯೋಗ್ಯವಾದ ಗುಣಗಳನ್ನು ಹೇಳುವರು.

1. ಸತ್ಯಸಂಧನೆಂದರೆ: ಸತ್ಯಪ್ರತಿಜ್ಞೆಯುಳ್ಳವನು, ಮಾಡಿದ ಪ್ರತಿಜ್ಞೆಯನ್ನು ತಪ್ಪದವನೆಂದರ್ಥವು. ಇದೇ ವಿಷಯವು "ಅಪ್ಯಹಂ ಜೀವಿತಂ ಜಹ್ಯಾಂ ತ್ವಾಂ ವಾ ಸೀತೇ ಸಲಕ್ಷ್ಮಣಾಮ್ | ನಹಿ ಪ್ರತಿಜ್ಞಾಂ ಸಂಶ್ರುತ್ಯ ಬ್ರಾಹ್ಮಣೇಭ್ಯೋ ವಿಶೇಷತಃ ||" ಇತ್ಯಾದಿಗಳಾದ ಮುಂದಿನ ವಾಕ್ಯಗಳಿಂದ ಸ್ಪಷ್ಟಪಡುವುದು.

2. ಕೀರ್ತಿಮಂತನೆಂದರೆ: ಆಶ್ರಿತರಕ್ಷಣದಿಂದ ಉಂಟಾದ ಕೀರ್ತಿ

ಕೀರ್ತಿಯು ಲೋಕಪ್ರಸಿದ್ಧವಾದುದು. [1]ಆತನು ಮಹಾಜ್ಞಾನಿಯು. ಬಹಳ ಪರಿಶುದ್ಧನು. [2]ಪ್ರಜೆಗಳಿಗೆ ವಶ್ಯನಾದವನು. [3]ಸಮಾಧಿಯುಳ್ಳವನು. ಮತ್ತು ಆತನು [4]ಬ್ರಹ್ಮಸಮಾನನು. ಶ್ರೀಮಂತನು. ಜಗದ್ರಕ್ಷಕನು. ತನ್ನ ಆಶ್ರಿತರನ್ನು ವಿರೋಧಿಸತಕ್ಕವರಿಗೆ ಯಮಪ್ರಾಯನಾದವನು.

ಯುಳ್ಳವನೆಂದು ರಾಮನ ಪರವಾಗಿ ಗ್ರಹಿಸಬೇಕು. ಇಲ್ಲಿ "ತಸ್ಯ ನಾಮ ಮಹದ್ಯಶಃ" ಎಂದು ಶ್ರುತಿಯ ಪ್ರಮಾಣವು.

1. ಮಹಾಜ್ಞಾನಿಯೆಂದರೆ: "ಸರ್ವಜ್ಞಸ್ಸರ್ವವಿತ್" ಎಂಬಂತೆ ಎಲ್ಲ ವನ್ನೂ ತಿಳಿದವನು, ಅಥವಾ ಬ್ರಹ್ಮಜ್ಞಾನಿಯೆಂದರ್ಥವು. ರಾಮನಿಗೆ ಬ್ರಹ್ಮ ಜ್ಞಾನವು ಹೇಗೆಂದರೆ "ಮಯಾ ತ್ವಂ ಸಮನುಜ್ಞಾತೋ ಗಚ್ಛ ಲೋಕಾನ ನುತ್ತಮಾನ್" ಎಂದು ಜಟಾಯುವಿಗೆ ಸರ್ವೋತಮವಾದ ಲೋಕಪ್ರಾಪ್ತಿಗೆ ಅನುಮತಿಯನ್ನು ಕೊಟ್ಟಾಗ, ಬ್ರಹ್ಮೋಪದೇಶವಿಲ್ಲದೆ ಆ ಲೋಕಗಳು ಲಭಿಸುವುದಿಲ್ಲವಾದಕಾರಣ, ಅವನಿಗೆ ಆ ಬ್ರಹ್ಮೋಪದೇಶವನ್ನು ಮಾಡು ವುದಕ್ಕೆ ಬ್ರಹ್ಮಜ್ಞಾನವು ಇದ್ದೇ ತೀರಬೇಕು. "ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಂ" ಎಂದು ಹೇಳಿಕೊಂಡುದು ಮಾಯಾ ಮಾತ್ರವೆಂದೇ ತಿಳಿಯಬೇಕು.

2. ವಶ್ಯನೆಂದರೆ: ಭಗವತ್ಪರವಾಗಿ ಆಶ್ರಿತರಿಗೆ ವಶ್ಯನೆಂದೂ, ರಾಮ ಪರರಾಗಿ ಗುರುಜನಗಳಿಗೆ ವಿಧೇಯನಾಗಿ ನಡೆಯುವವನೆಂದೂ ಅರ್ಥವು.

3. ಸಮಾಧಿಯೆಂದರೆ: ಚಿಂತೆಯೆಂದೂ, ಯೋಗನಿಷ್ಠೆಯೆಂದೂ ಅರ್ಥಗಳಿರುವುದರಿಂದ ಆಶ್ರಿತಚಿಂತಾಪರನೆಂದೂ, ಸಮಾಧಿಯೋಗದಿಂದ ನಿಜ ತತ್ತ್ವವನ್ನು ಪರೀಕ್ಷಿಸುವವನೆಂದೂ ಅರ್ಥವು.

4. ರಾಮನೇ ಬ್ರಹ್ಮನಾಗಿರುವಾಗ ಬ್ರಹ್ಮಸಮಾನನೆಂದು ಹೇಳುವು ದೇಕೆಂದು ಆಕ್ಷೇಪಿಸುವ ಪಕ್ಷದಲ್ಲಿ ಮಾಯಾಪ್ರಯುಕ್ತವಾದ ಶೋಕ ಮೋಹಾದಿ ಮನುಷ್ಯಧರ್ಮಗಳು ಇವನಲ್ಲಿರುವುದರಿಂದ ಈ ಔಪಾಧಿಕಭೇದ ವನ್ನು ಗ್ರಹಿಸಿ ಬ್ರಹ್ಮನೊಡನೆ ಸಾಮ್ಯವು ಹೇಳಲ್ಪಟ್ಟಿದೆ. ಪರಶುರಾಮನ ಪುಣ್ಯಲೋಕಗಳನ್ನು ತಡೆದುದು, ಜಟಾಯುವಿಗೆ ಮೋಕ್ಷವನ್ನು ಕೊಟ್ಟುದು, ಅಯೋಧ್ಯಾವಾಸಿಗಳನ್ನು ತನ್ನ ಸಂಗಡ ಈ ಮನುಷ್ಯದೇಹದೊಡನೆಯೇ ಬ್ರಹ್ಮಲೋಕಕ್ಕೆ ಕರೆದುಕೊಂಡುಹೋದುದು ಇತ್ಯಾದಿಗಳಿಂದ ಬ್ರಹ್ಮ ಸಾಮ್ಯವು ಸ್ಪಷ್ಟಪಡುವುದು. ಇದು ಮೊದಲು ಈ ಅವತಾರಕ್ಕೆ ಮಾತ್ರ ಯೋಗ್ಯವಾದ ಗುಣಗಳು ಹೇಳಲ್ಪಡುವುವು.

[1]ಸಮಸ್ತಪ್ರಾಣಿಗಳನ್ನೂ ಒಂದೇವಿಧವಾಗಿ ಕಾಪಾಡತಕ್ಕವನು. ಪ್ರಜೆಗಳ ಧರ್ಮಕ್ಕೆ ಲೋಪಬಾರದಂತೆ ನೋಡಿಕೊಳ್ಳುತ್ತ, ಸ್ವಧರ್ಮವನ್ನೂ ಸ್ವಲ್ಪವೂ ಬಿಡದೆ ನಡೆಸಿಕೊಂಡು ಬರುವವನು. ಸ್ವಜನಗಳನ್ನು ಇನ್ನೂ ಚೆನ್ನಾಗಿ ಕಾಪಾಡ ತಕ್ಕವನು. ವೇದ ವೇದಾಂಗಗಳ ತತ್ತ್ವಗಳನ್ನೂ ಚೆನ್ನಾಗಿ ತಿಳಿದವನು, ಸಮಸ್ತ ಶಸ್ತ್ರಾಸ್ತ್ರಗಳ ರಹಸ್ಯವನ್ನೂ ಚೆನ್ನಾಗಿ ಬಲ್ಲವನು. ಮರವೆಯೆಂಬುದು ಆತನಿಗಿಲ್ಲವೇ ಇಲ್ಲ. ಅಸಾಧಾರಣವಾದ ಬುದ್ಧಿವಿಕಾಸವುಳ್ಳವನು. ಸಮಸ್ತ ಪ್ರಜೆಗಳಿಗೂ ಇಷ್ಟನಾದವನು. ಪ್ರಜೆಗಳಲ್ಲಿಯೂ ಪ್ರೀತಿಯುಳ್ಳವನು. ಬಹಳ ಸಾಧುವಾಗಿದ್ದರೂ, ದೈನ್ಯವನ್ನು ತೋರಿಸದ ಗಂಭೀರಸ್ವಭಾವವುಳ್ಳ ವನು. ಬಹಳ ಚತುರನು. ನದಿಗಳೆಲ್ಲವೂ ಸಮುದ್ರವನ್ನು ಹೇಗೋ ಹಾಗೆ, ಯಾವಾಗಲೂ ಸತ್ಪುರುಷರು ಆತನನ್ನಾಶ್ರಯಿಸಿರುವರು. ಅವನು ಲೋಕ ಪೂಜ್ಯನಾದರೂ ಎಲ್ಲರೊಡನೆಯೂ ಸಮನಾಗಿರುವನು. [2]ಯಾವಾಗಲೂ ಒಂದೇಬಗೆಯ ಆಹ್ಲಾದವನ್ನುಂಟುಮಾಡತಕ್ಕ ದೇಹಸೌಂದರ್ಯವುಳ್ಳವನು.

---

1. ಸಾಮಾನ್ಯರಾಜನಾಗಿದ್ದರೆ ಸ್ವಜನಗಳಲ್ಲಿ ಪಕ್ಷಪಾತವನ್ನು ತೋರಿಸ ದಿರನು. ಈತನಾದರೋ ಸರ್ವೇಶ್ವರನಾದುದರಿಂದ ಎಲ್ಲರನ್ನೂ ಪೋಷಿಸತಕ್ಕವ ನೆಂದು ಭಾವವು.

ಸ್ವಧರ್ಮವೆಂದರೆ ಶರಣಾಗತರಕ್ಷಣವೆಂಬ ತನ್ನ ವಿಶೇಷಧರ್ಮ ವೆಂದರ್ಥವು. "ಪರೋಪದೇಶ ಸಮಯೇ ಜನಾಸ್ಸರ್ವೇಽಪಿ ಪಂಡಿತಾಃ। ಸ್ವಾನುಷ್ಠಾನಸ್ಯ ಸಮಯೇ ಮುನಯೋಽಪಿ ನ ಪಂಡಿತಾಃ ॥" ಎಂಬಂತೆ, ಇತರರಿಗೆ ಧರ್ಮಗಳನ್ನು ಉಪದೇಶಿಸಬಹುದೇ ಹೊರತು, ತಾವು ಅದರಂತೆ ನಡೆಯುವುದು ಅಸಾಧ್ಯವಾದುದರಿಂದ, ಹಾಗಲ್ಲದೆ ತನಗೆ ನಿಯತವಾದ ಕ್ಷತ್ರಿಯಧರ್ಮವನ್ನೂ, ಯಜನಾಧ್ಯಯನ ರೂಪಗಳಾದ ಧರ್ಮಗಳನ್ನೂ ನಡೆಸುತ್ತಿರುವನೆಂದು ರಾಮಪರವಾದ ಅರ್ಥವು.

2. "ಯಾವಾಗಲೂ" ಎಂಬುದರಿಂದ, ರಾಮನು ಅಸ್ತ್ರವಿದ್ಯೆಯನ್ನು ಕಲಿಯುವಾಗಲೂ ಕೂಡ "ಜ್ಞಾನವೃದ್ಧೈರ್ವಯೋವೃದ್ಧೈಃ ವಂಶವೃದ್ಧೈಶ್ಚ ಸಜ್ಜನೈಃ। ಕಥಯನ್ನಾಸ್ತವೈ ನಿತ್ಯಮಸ್ತ್ರಯೋಗ್ಯಾಂತರೇಷ್ವಪಿ ॥" ಎಂಬಂತೆ, ಸಾಧುಗಳೊಡನೆ ಕಲೆತಿರುವನೆಂದು ಭಾವವು. ಹೀಗಿರಲು, ಹೋಮ, ದೇವತಾಪೂಜೆ, ವಿದ್ವತ್ಸಭೆ ಮುಂತಾದ ಕಾಲಗಳಲ್ಲಿ ಹೇಳತಕ್ಕುದೇನು? ಇದರಿಂದ ಈಶ್ವರನನ್ನು ಮರೆಹುಗುವುದಕ್ಕೆ ಕಾಲ ದೇಶನಿಯಮಗಳೊಂದೂ ಇಲ್ಲವೆಂದು ತೋರುವುದು. ನದಿಗಳು ಸಮುದ್ರವನ್ನು ಸೇರುವಂತೆ ಎಂದು ಹೋಲಿಸಿರುವುದರಿಂದ, ಸಮುದ್ರಗಾಮಿನಿಗಳಾದ ನದಿಗಳು ಹೇಗೆ ಮಹಾನದಿ

ಹೆಚ್ಚಾಗಿ ಹೇಳುವುದರಿಂದೇನು ! [1]ನೀನು ಹೇಳಿದ ಕಲ್ಯಾಣಗುಣಗಳೆಲ್ಲವೂ ಅವನೊಬ್ಬನಲ್ಲಿ ತುಂಬಿರುವುವು. ಆತನೇ [2]ಕೌಸಲ್ಯಾದೇವಿಯ ಹೊಟ್ಟೆಯಲ್ಲಿ

ಗಳೆಂದು ಖ್ಯಾತಿಹೊಂದುವುವೋ, ಹಾಗೆಯೇ ಈ ರಾಮನನ್ನು ಆಶ್ರಯಿಸುವುದರಿಂದ ಅವರೂ ಮಹಾಮಹಿಮೆಯುಳ್ಳವರಾಗುವರೆಂದು ಭಾವವು ಮತ್ತು ಅನೇಕ ನದಿಗಳು ಸುತ್ತಿಕೊಂಡಿದ್ದರೂ ಸಮುದ್ರವು ಪ್ರತ್ಯೇಕವಾಗಿ ಹೇಗೆ ಪ್ರಕಾಶಿಸುತ್ತಿರುವುದೋ, ಹಾಗೆ ಸಜ್ಜನಗೋಷ್ಠಿಗಳಲ್ಲಿ ನಕ್ಷತ್ರಗಳ ನಡುವೆ ಪ್ರಕಾಶಿಸುವ ಚಂದ್ರನಂತೆ ತೇಜಸ್ವಿಯಾಗಿರುವನೆಂದೂ, ವಿಕಾರವನ್ನು ಹೊಂದದವನೆಂದೂ ಭಾವವು. ಮತ್ತು ಲೋಕದಲ್ಲಿ ರಾಜಕುಮಾರರೆನಿಸಿಕೊಂಡವರು ಒಂದುವೇಳೆ ವಿನೋದಾರ್ಥವಾಗಿ ವಿಟವಿದೂಷಕಾದಿಗಳೊಡನೆ ಕಲೆತಿರುವುದುಂಟು. ಈ ರಾಮನಾದರೋ ಹಾಗಿಲ್ಲದೆ ಯಾವಾಗಲೂ ಸತ್ಪುರುಷರೊಡನೆಯೇ ಸೇರಿರುವನೆಂದೂ ಗ್ರಹಿಸಬೇಕು.

1. ಇಲ್ಲಿ "ಇಷುಕ್ಷಯಾನ್ನಿವರ್ತಂತೇ ನಾನ್ತರಿಕ್ಷಕ್ಷಿತಿಕ್ಷಯಾತ್ | ಮತಿಕ್ಷಯಾನ್ನಿವರ್ತಂತೇ ನ ಗೋವಿನ್ದಗುಣಕ್ಷಯಾತ್" ಎಂಬ ಪ್ರಮಾಣವನ್ನನುಸರಿಸಿದೆ.

2. ದಶರಥನನ್ನು ಹೇಳದೆ ಕೌಸಲ್ಯೆಗೆ ಆನಂದವನ್ನುಂಟುಮಾಡಿದವನೆಂದು ಹೇಳಿದುದೇನೆಂದರೆ, ದಶರಥನು ಪುತ್ರನಿಂದುಂಟಾದ ಆನಂದವನ್ನು ಕೌಸಲ್ಯೆಯಂತೆ ಪೂರ್ಣವಾಗಿ ಅನುಭವಿಸಿದವನಲ್ಲ. ಮತ್ತು ಕೌಸಲ್ಯೆಯು ಪಟ್ಟಮಹಷಿಯಾದುದರಿಂದಲೂ, ರಾಮನು ಆಕೆಯಲ್ಲಿ ಹುಟ್ಟಿದವನೆಂದು ಹೇಳುವುದರಿಂದಲೂ, ಈ ರಾಮನೇ ರಾಜ್ಯಕ್ಕೆ ಅರ್ಹನೆಂಬುದೂ ಇದರಿಂದ ಸೂಚಿತವಾಗುವುದು. ಇದಕ್ಕಾಗಿಯೇ ಇಲ್ಲಿ ಕೌಸಲ್ಯಾನಂದವರ್ಧನನೆಂದು ಹೇಳಲ್ಪಟ್ಟಿದೆ. ಮುಂದೆ "ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮನಸ್ವಿನೀ" ಎಂಬ ಕಡೆಯಲ್ಲಿಯೂ ಹೀಗೆಯೇ ಊಹಿಸತಕ್ಕುದು.

ಇದಕ್ಕೆ ಮುಂದೆ ಎಲ್ಲಾ ಭಾಗಗಳಲ್ಲಿಯೂ ರಾಮನಿಗಿಂತಲೂ ಮೇಲಾದವರು ಮತ್ತೊಬ್ಬರೂ ಇಲ್ಲವೆಂದು ಹೇಳುವುದಕ್ಕಾಗಿ ಆಯಾ ಗುಣಗಳಲ್ಲಿ ಸರ್ವೋತ್ತಮನೆನಿಸಿಕೊಂಡ ವಸ್ತುಗಳನ್ನು ಹೋಲಿಸಿದೆ. ಆದರೆ ಹೀಗೆ ಹೋಲಿಸಲ್ಪಟ್ಟ ವಸ್ತುಗಳು ಪರಮಾತ್ಮಸ್ವರೂಪನಾದ ಈ ರಾಮನಿಗಿಂತಲೂ ಹೀನವಾಗಿದ್ದರೂ 'ಸೂರ್ಯನು ಮುಳ್ಳಿನಂತೆ ಚುಚ್ಚುತ್ತಿರುವ' ನೆಂದು ಹೇಳುವ ಹಾಗೆ ಸ್ವರೂಪವನ್ನು ತಿಳಿಸುವುದಕ್ಕೆ ಮಾತ್ರವೇ ಹೊರತು, ಆ ಹೋಲಿಕೆಯು ಅತಿಶಯವನ್ನು ಸೂಚಿಸುವುದಕ್ಕಲ್ಲವೆಂದು ಗ್ರಹಿಸಬೇಕು.

ಹುಟ್ಟಿ, ಅವಳಿಗೆ ಅತ್ಯಾನಂದವನ್ನುಂಟುಮಾಡಿದನು. ಆತನು ಗಾಂಭೀರ್ಯದಲ್ಲಿ ಸಮುದ್ರದಂತೆಯೂ, ಧೈರ್ಯದಲ್ಲಿ ಹಿಮವತ್ಪರ್ವತದಂತೆಯೂ, ವೀರ್ಯದಲ್ಲಿ ಮಹಾವಿಷ್ಣುವಿನಂತೆಯೂ ತೋರುವನು. ನೋಡಿದವರ ಕಣ್ಣಿಗೆ ಚಂದ್ರನಂತೆ ಆಹ್ಲಾದವನ್ನುಂಟುಮಾಡುವನು. ಕೋಪವು ಬಂದಾಗ ಕಾಲಾಗ್ನಿಯಂತೆ ಕಾಣುವನು. ತಾಳ್ಮೆಯಲ್ಲಿ ಭೂದೇವಿಗೆ ಸಮಾನನು. ತ್ಯಾಗ ಮಾಡುವುದರಲ್ಲಿ ಕುಬೇರನಂತಿರುವನು. ಸತ್ಯದಲ್ಲಿ ಬೇರೊಂದು ಧರ್ಮದೇವತೆಯಂತೆಯೇ ಕಾಣುವನು.

[1]ಹೀಗೆ ಸರ್ವೋತ್ತಮವಾದ ಗುಣಗಳಿಂದ ಕೂಡಿ ಸತ್ಯಪರಾಕ್ರಮವುಳ್ಳವನಾಗಿ, ನೀತಿಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಸಂಧಿವಿಗ್ರಹಾದಿಷಡ್ಗುಣಗಳನ್ನೊಳಗೊಂಡು ಪ್ರಜೆಗಳಿಗೇ ಹಿತವನ್ನೇ ಬಯಸುವ ಸ್ವಭಾವವುಳ್ಳ ಹಿರಿಯ ಮಗನಾದ ರಾಮನನ್ನು ನೋಡಿ, ಆತನ ತಂದೆಯಾದ [2]ದಶರಥ ಚಕ್ರವರ್ತಿಯು ಪ್ರಜೆಗಳಿಗೆ ಹಿತವನ್ನುಂಟುಮಾಡಬೇಕೆಂಬ ಉದ್ದೇಶ

---

1. ಹೀಗೆ ವೇದಾನ್ತೋದಿತವಾದ ಸಮಸ್ತ ಗುಣಗಳಿಂದ ಕೂಡಿದ ಪರತತ್ತ್ವವೇ ರಾಮನೆಂದು ನಿರೂಪಿಸುವುದಕ್ಕಾಗಿ, ಆ ಗುಣಗಳನ್ನೆಲ್ಲಾ ಉಭಯಸಾಧಾರಣವಾಗಿ ವರ್ಣಿಸಿ, ಇದುವರೆಗೆ ಹೇಳಿದ ಮತ್ತು ಮುಂದೆ ಹೇಳಬೇಕಾದ ಇತರ ಗುಣಗಳನ್ನೆಲ್ಲಾ ಆತನ ಚರಿತ್ರೆಯ ಮೂಲಕವಾಗಿಯೇ ಸೂಚಿಸಬೇಕೆಂದು ಆತನ ಪುಣ್ಯಚರಿತ್ರವನ್ನು ಅಯೋಧ್ಯಾಕಾಂಡದ ಕಥೆಯಿಂದ ಆರಂಭಿಸಿ ಹೇಳುವರು. ಬಾಲಕಾಂಡದ ಕಥೆಯೆಲ್ಲವೂ ಇದುವರೆಗೆ ಬಹಳ ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವುವು. ಹೇಗೆಂದರೆ (ಇಕ್ಷ್ವಾಕುವಂಶ ಪ್ರಭವಃ) ಎಂಬುದರಿಂದ ಶ್ರೀರಾಮನ ಅವತಾರವೂ, (ಶತ್ರುನಾಶಕಃ) ಎಂಬುದರಿಂದ ತಾಟಕಾದಿ ಸಂಹಾರವೂ, (ಧನುರ್ವೇದೇ ಚ ನಿಷ್ಠಿತಃ) ಎಂಬುದರಿಂದ ವಿಶ್ವಾಮಿತ್ರನ ಮೂಲಕವಾಗಿ ದಿವ್ಯಾಸ್ತ್ರಗಳನ್ನು ಪಡೆದುದೂ, (ಶ್ರೀಮಾನ್) ಎಂಬುದರಿಂದ ಸೀತಾ ಪರಿಣಯವೂ, ಸತ್ಯಪರಾಕ್ರಮನೆಂಬುದರಿಂದ, ಪರಶುರಾಮನ ಪುಣ್ಯಲೋಕಗಳನ್ನು ತಡೆದುದೂ ಸೂಚಿಸಲ್ಪಡುವುವು. ಹೀಗೆ ಈ ಸರ್ಗದಲ್ಲಿ ರಾಮಾಯಣವೆಲ್ಲವೂ ಸಂಕ್ಷೇಪವಾಗಿ ವಿವರಿಸಲ್ಪಟ್ಟಿರುವುದರಿಂದ, ಇದಕ್ಕೆ ಸಂಕ್ಷೇಪರಾಮಾಯಣವೆಂದೂ ಹೆಸರುಂಟು.

2. (ದಶರಥಚಕ್ರವರ್ತಿ) "ದಶಸು ದಿಕ್ಷು ಅಪ್ರತಿಹತೋ ರಥೋ ಯಸ್ಯ ಸಃ ದಶರಥಃ" ಎಂದರೆ, ಹತ್ತು ದಿಕ್ಕುಗಳಲ್ಲಿಯೂ ತಡೆಯಿಲ್ಲದೆ ರಥವನ್ನು ನಡೆಸಿಕೊಂಡು ಸಂಚರಿಸಬಲ್ಲ ಸಾಮರ್ಥ್ಯವುಳ್ಳವನೆಂದರ್ಥವು.

ದಿಂದಲೂ, ತನಗೆ ಆತನಲ್ಲಿರುವ ಪ್ರೀತಿವಿಶೇಷದಿಂದಲೂ ಆತನಿಗೆ [1]ಯೌವ ರಾಜ್ಯಾಭಿಷೇಕವನ್ನು ಮಾಡಬೇಕೆಂದು ಉದ್ದೇಶಿಸಿದನು. ಇದಕ್ಕಾಗಿ ಬೇಕಾದ ಸನ್ನಾಹಗಳನ್ನು ಮಾಡುತ್ತಿರುವುದನ್ನು, ದಶರಥನ ಎರಡನೆಯ ಹೆಂಡತಿಯಾದ ಕೈಕೇಯಿಯು [2]ನೋಡಿದಳು. ಈಕೆಯು ಹಿಂದೆ [3]ಶಂಬರಾಸುರ ಯುದ್ಧಕಾಲದಲ್ಲಿ ದಶರಥನಿಂದ ಎರಡು ವರಗಳನ್ನು ಪಡೆದಿದ್ದುದರಿಂದ, ಆ ವರಗಳನ್ನು ಉಪಯೋಗಪಡಿಸಿಕೊಳ್ಳುವುದಕ್ಕೆ ಇದೇ ಸಮಯವೆಂದೆಣಿಸಿ, ರಾಮನನ್ನು ಕಾಡಿಗೆ ಕಳುಹಿಸಬೇಕೆಂದೂ, ತನ್ನಲ್ಲಿ ಹುಟ್ಟಿದ ಭರತನಿಗೇ ಪಟ್ಟಾಭಿಷೇಕವನ್ನು ಮಾಡಬೇಕೆಂದೂ ಪ್ರಾರ್ಥಿಸಿದಳು. ಆಗ ದಶರಥನು ರಾಮನ ಷಟ್ಟಾಭಿಷೇಕಕ್ಕಾಗಿ ಸಮಸ್ತ ಸನ್ನಾಹಗಳನ್ನು ಸಿದ್ಧಪಡಿಸಿದ್ದರೂ, ಕೊಟ್ಟ ಭಾಷೆಗೆ ತಪ್ಪದವನಾದುದರಿಂದ, ಧರ್ಮಪಾಶಕ್ಕೆ ಕಟ್ಟುಬಿದ್ದು ರಾಮನನ್ನು ಕಾಡಿಗೆ ಕಳುಹಿಸಿಬಿಟ್ಟನು. ರಾಮನಾದರೋ ತನ್ನ ತಾಯಿ ಯಾದ ಕೈಕೇಯಿಯ ಇಷ್ಟಕ್ಕೆ ವಿರೋಧಿಸಿ ನಡೆಯಬಾರದೆಂಬ ಮಾತೃ ಭಕ್ತಿಯಿಂದಲೂ, ತಂದೆಯ ವಾಕ್ಯವನ್ನು ಮೀರಬಾರದೆಂಬ ವಿಧೇಯತೆ ಯಿಂದಲೂ, ಕಾಡಿಗೆ ಹೊರಟನು. ರಾಜನ ಮತ್ತೊಬ್ಬ ಹೆಂಡತಿಯಾದ ಸುಮಿತ್ರೆಯಲ್ಲಿ ಹುಟ್ಟಿ, ಅವಳಿಗೆ [4]ಅತ್ಯಾನಂದವನ್ನುಂಟುಮಾಡಿದ ಲಕ್ಷ್ಮಣ ನೆಂಬುವನು, ರಾಮನಿಗೆ ಪ್ರಿಯಸಹೋದರನು. ಆತನು ಅಣ್ಣನಲ್ಲಿ ಬಹಳ

---

1. ಯೌವರಾಜ್ಯವೆಂದರೆ, ತಂದೆಯು ತಾನೇ ರಾಜ್ಯವನ್ನು ನಿರ್ವಹಿಸುವ ಶಕ್ತಿಯುಳ್ಳವನಾಗಿರುವಾಗಲೂ, ಆ ರಾಜಕಾರ್ಯಗಳನ್ನು ನಿರ್ವಹಿಸುವುದ ಕ್ಕಾಗಿ ಪುತ್ರನಿಗೆ ಪಟ್ಟವನ್ನು ಕಟ್ಟುವುದು.

2. "ನೋಡಿ" ಎಂದರೆ ಮಂಥರೆಯ ಮೂಲಕವಾಗಿ ತಾನು ಕೇಳಿ ತಿಳಿದು, ಎಂದು ಭಾವವು.

3. ಶಂಬರಾಸುರ ಯುದ್ಧದಲ್ಲಿ ಕೈಕೇಯಿಯು ಬಂದು ದಶರಥನಿಗೆ ಸಾರಥ್ಯವನ್ನು ಮಾಡಿದುದಕ್ಕಾಗಿ ಅವನು ಸಂತೋಷಿಸಿ ಎರಡು ವರಗಳನ್ನು ಕೇಳಿಕೊಳ್ಳುವಂತೆ ಹೇಳಿದನು.

4. ವನವಾಸಕ್ಕಾಗಿ ಹೊರಡುವ ಕಾಲದಲ್ಲಿ ದುಃಖಾತಿಶಯವನ್ನು ವರ್ಣಿಸಬೇಕಾದಸಂದರ್ಭದಲ್ಲಿಯೂ ಸುಮಿತ್ರೆಗೆ ಆನಂದವನ್ನುಂಟುಮಾಡಿದವ ನೆಂದು ಹೇಳಿದುದೇಕೆ? ಎಂದರೆ ಇದರಿಂದಲೇ ಆ ಲಕ್ಷ್ಮಣನು ಸುಮಿತ್ರೆಗೆ ಮಹಾನಂದವನ್ನುಂಟುಮಾಡಿದವನೆಂದು ತಿಳಿಯಬೇಕು. "ಸೃಷ್ಟಸ್ತ್ವಂ ವನವಾಸಾಯ" ಎಂದೂ, "ರಾಮಂ ದಶರಥಂ ವಿದ್ಧಿ ಮಾಂ ವಿದ್ಧಿ

ವಿಶ್ವಾಸವುಳ್ಳವನಾದುದರಿಂದ, ಆತನನ್ನು [1]ಅಗಲಿರಲಾರದೆ, ತಾನೂ ಹಿಂಬಾಲಿಸಿ ಹೊರಟನು. ಜನಕಮಹಾರಾಜನ ವಂಶದಲ್ಲಿ ಹುಟ್ಟಿದ ಸೀತೆ ಯೆಂಬುವಳು ಈ ರಾಮನಿಗೆ ಪ್ರಾಣಪ್ರಿಯಳು. ಈಕೆಯ ಸೌಂದರ್ಯವು ಅಸಾಧಾರಣವಾದುದು. ಸುಂದೋಪಸುಂದರೆಂಬ ಸಹೋದರರನ್ನು ಮೋಹ ಗೊಳಿಸುವುದಕ್ಕಾಗಿ ದೇವತೆಗಳು ಸೃಷ್ಟಿಸಿದ ತಿಲೋತ್ತಮೆಯಂತೆಯೂ ಅಮೃತವನ್ನು ಹಂಚುವಾಗ ರಾಕ್ಷಸರನ್ನು ಮರುಳುಮಾಡುವುದಕ್ಕಾಗಿ ವಿಷ್ಣುವಿನಿಂದ ಸೃಷ್ಟಿಸಲ್ಪಟ್ಟ ಮೋಹಿನಿಯಂತೆಯೂ ಪ್ರಕಾಶಿಸುವಳು. ಆಕೆಯ ಅವಯವಗಳಲ್ಲಿ ಹೆಂಗಸರಿಗೆ ಇರಬೇಕಾದ ಸಮಸ್ತ ಶುಭಲಕ್ಷಣಗಳೂ ತುಂಬಿರುವುವು. ರಾಮನು ಪುರುಷೋತ್ತಮನೆನಿಸಿಕೊಂಡಿರುವುದಕ್ಕೆ ತಕ್ಕಂತೆ, ಆಕೆಯೂ ಸ್ತ್ರೀರತ್ನವೆನಿಸಿಕೊಂಡಿರುವಳು. ಆಕೆಯೂ ಪತಿಯನ್ನಗಲಿರ ಲಾರದೆ, ಚಂದ್ರನನ್ನು ಹಿಂಬಾಲಿಸಿ ಹೋಗುವ [2]ರೋಹಿಣಿಯಂತೆ ರಾಮನನ್ನು ಹಿಂಬಾಲಿಸಿ ಹೊರಟಳು. ಹಾಗೆಯೇ ರಾಮನ ಅಗಲಿಕೆಯನ್ನು ಸಹಿಸದೆ ಪಟ್ಟಣವಾಸಿಗಳೆಲ್ಲರೂ ಬಹುದೂರದವರೆಗೆ ಆತನನ್ನು ಹಿಂಬಾಲಿಸಿಹೋದರು. ತಂದೆಯಾದ ದಶರಥನೂ ಪುತ್ರವಾತ್ಸಲ್ಯದಿಂದ ಸ್ವಲ್ಪದೂರದವರೆಗೆ ಬಂದು ಹಿಂತಿರುಗಿದನು. ರಾಮನು ತನ್ನನ್ನು ಬಿಟ್ಟಿರಲಾರದೆ ಹಿಂಬಾಲಿಸಿ ಬರುತ್ತಿದ್ದ

ಜನಕಾತ್ಮಜಾಮ್ | ಅಯೋಧ್ಯಾಮಟವೀಂ ವಿದ್ಧಿ ಗಚ್ಛ ತಾತ ಯಥಾ ಸುಖಮ್ ||" ಎಂದೂ, ಅವತಾರರಹಸ್ಯವನ್ನು ತಿಳಿದ ಸುಮಿತ್ರಾದೇವಿಯು ಮುಂದೆ ಹೇಳುವ ವಾಕ್ಯಗಳಿಂದ ಇದು ಸ್ಪಷ್ಟಪಡುವುದು.

1. ಈ ವಿಷಯವೂ ಕೂಡ "ನ ಚ ಸೀತಾ ತ್ವಯಾ ಹೀನಾ ನ ಚಾಹ-ಮಪಿ ರಾಘವ | ಮುಹೂರ್ತಮಪಿ ಜೀವಾವೋ ಜಲಾನ್ಮತ್ಸ್ಯಾವಿವೋ-ದ್ಧೃತೌ ||" ಎಂದು ಮುಂದೆ ವಿವರಿಸಲ್ಪಡುವುದು.

2. ರೋಹಿಣಿಯೆಂಬವಳು ಚಂದ್ರನಿಗೆ ಅಸಾಧಾರಣೆಯಾದ ಧರ್ಮ-ಪತ್ನಿಯು. ಅವನ ಪತ್ನಿಯರೊಳಗೆಲ್ಲಾ ಬಹಳ ಮೇಲಾದವಳು. ಈಕೆಯು ನಿಮಿಷಮಾತ್ರವಾದರೂ ಚಂದ್ರನನ್ನು ಬಿಟ್ಟು ಅಗಲಿರಳು. "ವರಿಷ್ಠಾ ಸರ್ವನಾರೀಣಾಮೇಷಾ ಚ ದಿವಿ ದೇವತಾ | ರೋಹಿಣೀ ನ ವಿನಾ ಚಂದ್ರಂ ಮುಹೂರ್ತಮಪಿ ದೃಶ್ಯತೇ ||" ಎಂಬ ವಾಕ್ಯದಿಂದ ಈ ವಿಷಯವು ಸ್ಪಷ್ಟಪಡುವುದು.

ಪುರಜನರೆಲ್ಲರನ್ನೂ ಹಿಂದಕ್ಕೆ ಕಳುಹಿಸಿ, ಗಂಗಾತೀರದಲ್ಲಿದ್ದ [1]"ಶೃಂಗಿಬೇರ"ವೆಂಬ ಪಟ್ಟಣವನ್ನು ಸೇರಿದನು. ಅಲ್ಲಿ ಬೇಡರಿಗೆಲ್ಲಾ ದೊರೆಯಾದ [2]ಗುಹನೆಂಬವನು, ತನ್ನಲ್ಲಿ ವಿಶೇಷ ವಿಶ್ವಾಸವನ್ನು ತೋರಿಸಿದುದರಿಂದ, ಆತನ ಸ್ನೇಹವನ್ನು ಬೆಳೆಸಿ, ಅಲ್ಲಿನವರೆಗೂ ತನ್ನನ್ನು ಬಿಡದೆ ಅನುಸರಿಸಿ ಬಂದ ಸುಮಂತ್ರನೆಂಬ ಸಾರಥಿಯನ್ನು ಹಿಂದಕ್ಕೆ ಕಳುಹಿಸಿಬಿಟ್ಟನು. ಆಮೇಲೆ ಗುಹನ ಸಹಾಯದಿಂದ ಸೀತಾಲಕ್ಷ್ಮಣರೊಡನೆ ಆ ನದಿಯನ್ನು ದಾಟಿ, [3]ಕಾಲುನಡೆಯಿಂದಲೇ

---

1. ಶೃಂಗಿಬೇರವೆಂದರೆ (ಶೃಂಗಿಣಾಂ ಬೇರಾಣಿ ಕೃತ್ರಿಮಶೃಂಗಾಣಿ ಯಸ್ಮಿನ್ ತತ್ ಶೃಂಗಿಬೇರಂ) ಎಂಬ ವ್ಯುತ್ಪತ್ತಿಯಿಂದ, ಆ ಊರಿನಲ್ಲಿ ಬೇಡರು ಮೃಗಗಳನ್ನು ಹಿಡಿಯುವುದಕ್ಕಾಗಿ ಆಯಾ ಮೃಗಗಳಂತೆ ಕೃತ್ರಿಮವಾದ ಆಕಾರವನ್ನು ತೋರಿಸಿ, ಅವುಗಳನ್ನು ಮರುಳುಗೊಳಿಸಿ ಹಿಡಿಯುತ್ತಿರುವರೆಂದು ಅರ್ಥವು.

2. ಗುಹನೆಂದರೆ "ಗುಹಃ, ಗೋಪಯತಿ, ವಂಚಯತಿ ಪರಸ್ವಮಿತಿ ಗುಹಃ" ಎಂಬ ವ್ಯುತ್ಪತ್ತಿಯಿಂದ ಪರದ್ರವ್ಯವನ್ನು ವಂಚಿಸಿ ಅಪಹರಿಸುವವನೆಂದರ್ಥವು. ಹೀಗೆ ನೀಚ ಜಾತಿಯಲ್ಲಿ ಹುಟ್ಟಿ, ನೀಚವೃತ್ತಿಯಲ್ಲಿ ಬೆಳೆಯುತ್ತಿದ್ದ ಗುಹನೊಡನೆಯೂ ಸ್ನೇಹವನ್ನು ಬೆಳಸಿದನೆಂದು ಹೇಳಿದುದರಿಂದ ಶ್ರೀರಾಮನ ಸೌಜನ್ಯವು ಇಲ್ಲಿ ಸೂಚಿಸಲ್ಪಟ್ಟಿದೆ.

3. ಇಲ್ಲಿ "ತೇ ವನೇನ ವನಂ ಗತ್ವಾ ನದೀಸ್ತೀರ್ತ್ವಾ ಬಹೂದಕಾಃ | ಚಿತ್ರಕೂಟಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್ || ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇ ತ್ರಯಃ | ದೇವಗಂಧರ್ವಸಂಕಾಶಾಸ್ತತ್ರ ತೇನ ವಸನ್ ಸುಖಮ್ || ಎಂಬುದೇ ಇದಕ್ಕೆ ಮೂಲವು. ಇದರ ಸಾಮಾನ್ಯಾರ್ಥವು ಮೇಲಿನ ವಾಕ್ಯಗಳಲ್ಲಿಯೇ ವಿವರಿಸಲ್ಪಟ್ಟಿದೆ. ಇದಕ್ಕೆ ತನಿಶ್ಲೋಕಿಯಲ್ಲಿ ಕಾಣುವ ಅರ್ಥಸ್ವಾರಸ್ಯಗಳೇನಂದರೆ :—

"ತೇ ಅವನೇನ ವನಂ ಗತ್ವಾ" ಎಂದು ಪದವಿಭಾಗಮಾಡಿ, 'ಅವನೇನ' ಎಂದರೆ ಅವರು ಪರಸ್ಪರ ರಕ್ಷಣೆಯಿಂದ ಹೋಗುತ್ತಿದ್ದರೆಂದು ಭಾವವನ್ನು ಕಲ್ಪಿಸಿರುವರು. "ಅಗ್ರತೋ ಗಚ್ಛ ಸೌಮಿತ್ರೇ ಸೀತಾ ತ್ವಾಮನುಗಚ್ಛತು | ಪೃಷ್ಠತೋಽಹಂ ಗಮಿಷ್ಯಾಮಿ ತ್ವಾಂ ಚ ಸೀತಾಂ ಚ ಪಾಲಯನ್ || ಅನ್ಯೋನ್ಯಸ್ಯೇಹ ನೋ ರಕ್ಷಾ ಕರ್ತವ್ಯಾ ಪುರುಷರ್ಷಭ" ಎಂಬ ವಾಕ್ಯದಿಂದ ಇದು ಮುಂದೆ ಸ್ಪಷ್ಟವಾಗುವುದು. ಅಥವಾ 'ಅವನೇನ' ಎಂದರೆ, ಪಿತೃವಾಕ್ಯಪರಿಪಾಲನಕ್ಕಾಗಿಯಾಗಲಿ, ರಾಕ್ಷಸವಧದಿಂದ ಲೋಕ ರಕ್ಷಣಕ್ಕಾಗಿ

ಅನೇಕ ವಿಪಿನಗಳನ್ನೂ, ನದಿಗಳನ್ನೂ, ಅತಿಕ್ರಮಿಸಿ, ಭರದ್ವಾಜಾಶ್ರಮವನ್ನು ಸೇರಿದನು. ಆ ಮಹರ್ಷಿಯ ಅಪ್ಪಣೆಯಂತೆ ಚಿತ್ರಕೂಟಪರ್ವತದಲ್ಲಿ ಒಂದು ಪರ್ಣಶಾಲೆಯನ್ನು ಮಾಡಿಕೊಂಡು ಅಲ್ಲಲ್ಲಿ ಮನೋಹರಗಳಾದ ವನಗಳಲ್ಲಿಯೂ, ಕೊಳಗಳಲ್ಲಿಯೂ ವಿನೋದದಿಂದ ದೇವಗಂಧರ್ವರಂತೆ ವಿಹರಿಸುತ್ತಾ, ಈ ಮೂವರೂ ಸುಖವಾಗಿ ಕಾಲವನ್ನು ಕಳೆಯುತ್ತಿದ್ದರು.

ಯಾಗಲಿ ಕಾಡಿಗೆ ಹೋದರೆಂದೂ ಅರ್ಥವು ತೋರುವುದು. ಅಥವಾ, "ತೀವನೇನ" ಎಂದು ಒಂದೇ ಪದವಾಗಿ ಮಾಡಿ, 'ತೀವ್ರ ದೇವನೇ' ಎಂಬ ಧಾತ್ವರ್ಥದಿಂದ ಆಟದಿಂದಲೇ (ಅನಾಯಾಸವಾಗಿಯೇ), ಕಾಡುಗಳನ್ನೆಲ್ಲಾ ಸುತ್ತಿ ಅಥವಾ ಮೃಗಯಾವಿಹಾರದಿಂದ ಕಾಡುಗಳನ್ನು ಸುತ್ತಿ ಎಂದೂ ಅರ್ಥವು. ತೀವನವೆಂದರೆ ಕಾಲುನಡೆಯಿಂದಲೇ ಸುತ್ತಿ ಎಂಬೀ ಮೊದಲಾದ ಇನ್ನೂ ಅನೇಕಾರ್ಥಗಳನ್ನು ಹೇಳಬಹುದು. "ಬಹೂದಕಾಃ ನದೀಃ ತೀರ್ತ್ವಾ" ನೀರುತುಂಬಿ ದೋಣಿಗಳಿಂದಲೇ ದಾಟುವುದಕ್ಕೆ ಯೋಗ್ಯಗಳಾದ ಗಂಗೆ, ಯಮುನೆ, ಚಿತ್ರಕೂಟದ ತಳದಲ್ಲಿರುವ ಮಂದಾಕಿನಿ, ಮುಂತಾದ ನದಿಗಳನ್ನು ದಾಟಿ; 'ಭರದ್ವಾಜಸ್ಯ ಶಾಸನಾತ್' ಭರದ್ವಾಜನೆಂದರೆ, ಪ್ರಜೆಗಳನ್ನು ಭರಿಸತಕ್ಕವನು ಎಂದರ್ಥವು. "ಏಷ ವೈ ಬಿಭ್ರದ್ವಾಜ ಪ್ರಜಾ ವೈ ವಾಜಸ್ತಾ ಏಷ ಬಿಭರ್ತಿ" ಎಂದು ಋಗ್ವೇದದ ಆರಣ್ಯಕದಲ್ಲಿ ಹೇಳಲ್ಪಟ್ಟಿದೆ. ಅಥವಾ ವಾಜವೆಂದರೆ ರೇತಸ್ಸು, ಅದನ್ನು ಬಿಡದೆ ಭರಿಸಿರುವವನು, ಎಂದೂ ವ್ಯುತ್ಪತ್ತಿಯುಂಟು. "ಭರದ್ವಾಜೋ ಹ ತ್ರಿಭಿರಾಯುರ್ಭಿ ಬ್ರಹ್ಮಚರ್ಯಮುವಾಸ" ಎಂದು, ಈತನು ಬಹುಕಾಲದವರೆಗೆ ಬ್ರಹ್ಮಚರ್ಯದಲ್ಲಿದ್ದನೆಂದು ಶ್ರುತಿಯು. ಇಂತಹ ಮಹರ್ಷಿಯ ಅಪ್ಪಣೆಯಿಂದ, (ಚಿತ್ರಕೂಟಮನುಪ್ರಾಪ್ಯ) ಚಿತ್ರಕೂಟಪರ್ವತವನ್ನು ಸೇರಿ, ವಿಚಿತ್ರವಾದ ಶಿಖರಗಳುಳ್ಳದ್ದರಿಂದ "ಚಿತ್ರಕೂಟ"ವೆಂದು ಇದಕ್ಕೆ ಹೆಸರು. (ರಮಮಾಣಃ) ಸೀತಾರಾಮರಿಬ್ಬರೂ ಪುಷ್ಪಾಪಚಯ, ಜಲಕ್ರೀಡೆ, ಮುಂತಾದುವುಗಳಿಂದ ಸಂತೋಷಿಸುತ್ತಿದ್ದರೆಂದೂ, ಲಕ್ಷ್ಮಣನು ಇವರಿಬ್ಬರ ಶುಶ್ರೂಷೆಯಿಂದಲೇ ಸಂತೋಷಿಸುತ್ತಿದ್ದನೆಂದೂ ಭಾವವು. (ತ್ರಯೋ ರಮಮಣಾಃ) ಎಂಬುದರಿಂದ, ಮೇಲೆ ಹೇಳಿದಂತೆ ಈ ಮೂವರಿಗೂ ಸಂತೋಷಕ್ಕೆ ಕಾರಣಗಳು ಭಿನ್ನವಾಗಿದ್ದರೂ, ಈ ಮೂವರ ಸಂತೋಷವೂ ಹೆಚ್ಚುಕಡಿಮೆಯಿಲ್ಲದೆ ಒಂದೇ ವಿಧವಾಗಿದ್ದುದೆಂದು ಭಾವವು. (ದೇವಗಂಧರ್ವಸಂಕಾಶಾಃ) ದೇವಗಂಧರ್ವರುಗಳು ಮನುಷ್ಯಗಂಧರ್ವರಿಗಿಂತಲೂ ಅಧಿಕವಾದ ಆನಂದವನ್ನು ಹೊಂದುವರೆಂದು ಅಭಿಪ್ರಾಯವು.

ಇತ್ತಲಾಗಿ ದಶರಥನು ಮಗನನ್ನು ಅಗಲಿರಲಾರದೆ, ವಿಶೇಷವಾದ ಪುತ್ರವಾತ್ಸಲ್ಯದಿಂದ ರಾಮನನ್ನೇ ಆಗಾಗ ಸ್ಮರಿಸಿ ಗೋಳಿಡುತ್ತ, ಆ ಪುತ್ರ ಶೋಕದಿಂದಲೇ ಸ್ವರ್ಗಸ್ಥನಾದನು. ಇದನ್ನು ನೋಡಿ ವಸಿಷ್ಠರೇ ಮೊದಲಾದ ಬ್ರಾಹ್ಮಣರು ಭರತನಿಗೆ ರಾಜ್ಯಾಭಿಷೇಕವನ್ನು ಮಾಡಬೇಕೆಂದು ಯತ್ನಿಸಿದರು. ಈತನು ಮಹಾಬಲಶಾಲಿಯಾಗಿ ತಾನೇ ರಾಜ್ಯವನ್ನು ನಡೆಸುವ ವಿಷಯದಲ್ಲಿ ಸಮರ್ಥನಾಗಿದ್ದರೂ ಅದಕ್ಕೆ ಇಷ್ಟಪಡದೆ, ಜಿತೇಂದ್ರಿಯನಾಗಿ, ರಾಮನನ್ನೇ ಸಮಾಧಾನಪಡಿಸಿ ಹಿಂದಕ್ಕೆ ಕರೆತಂದು ರಾಜ್ಯದಲ್ಲಿರಿಸಬೇಕೆಂಬ ಉದ್ದೇಶದಿಂದ ತಾನೂ ಕಾಡಿಗೆ ಹೊರಟು ರಾಮನಿರುವ ಸ್ಥಳಕ್ಕೆ ಬಂದು, ಅನೇಕ ವಿಧದಲ್ಲಿ ಆತನನ್ನು ಪ್ರಾರ್ಥಿಸಿದನು. ಶ್ರೀರಾಮನು ಆಶ್ರಿತವತ್ಸಲ

ಅಥವಾ, (ದೇವೀಚ ದೇವಶ್ಚ ದೇವೌ, ಎಂದರೆ ಲಕ್ಷ್ಮೀನಾರಾಯಣಸ್ವರೂಪಿಗಳಾದ ದೇವತೆಗಳೆಂದರ್ಥವು. "ಗಾನಂ ಧಾರಯತೀತಿ ಗಂಧರ್ವಃ" ಎಂಬ ವ್ಯುತ್ಪತ್ತಿಯಿಂದ, "ಏತತ್ಸಾಮಗಾಯನ್ನಾಸ್ತೇ" ಎಂದು ಹೇಳಲ್ಪಟ್ಟ ಸಾಮಗಾನವನ್ನು ಮಾಡುತ್ತಿರುವ ಮುಕ್ತನೇ ಗಂಧರ್ವನು. "ದೇವೌ ಚ ಗಂಧರ್ವಶ್ಚ ದೇವಗಂಧರ್ವಾಃ" ಎಂಬ ವಿಗ್ರಹವಾಕ್ಯದಿಂದ, ಆ ಮೂವರೂ ಗಂಧರ್ವರೆನಿಸುವರು. ಅವರಂತೆ ಎಂದರೆ, ಪರಮಪದದಲ್ಲಿ ಶ್ರೀಮನ್ನಾರಾಯಣನೂ ಮತ್ತು ಶ್ರೀ ಮಹಾಲಕ್ಷ್ಮಿಯೂ, ಇವರ ಕೈಂಕರ್ಯವನ್ನು ಮಾಡುತ್ತಿರುವ ಮುಕ್ತನೂ ಎಷ್ಟು ಸಂತೋಷಾತಿಶಯದಿಂದಿರುವರೋ ಹಾಗೆಯೇ, ಈ ಸೀತಾ ರಾಮಲಕ್ಷ್ಮಣರ ಆನಂದಕ್ಕೆ ಪಾರವೇ ಇರಲಿಲ್ಲವೆಂದು ಭಾವವು. ಆಮೂಲಾಗ್ರವಾಗಿ ಈ ಶ್ಲೋಕಾರ್ಥದಿಂದ, ಯಾವನು ತನ್ನ ನಿಜಸ್ವರೂಪವನ್ನು ತಿಳಿದು ಭಗವಂತನಲ್ಲಿ ಪರಮ ಪ್ರೀತಿಯಿಂದಿರುವನೋ ಅವನನ್ನು ಶ್ರೀಮನ್ನಾರಾಯಣನು ಮಹಾಲಕ್ಷ್ಮೀಸಮೇತನಾಗಿ ಬಂದು, ದಿವ್ಯ ವಿಮಾನದಲ್ಲಿ ಏರಿಸಿಕೊಂಡು, ಬಹಳವಾಗಿ ಸತ್ಕರಿಸಿ, ವಿರಜಾ ನದಿಯನ್ನೂ, ಶಲ್ಯಕಾಂತಾರವನ್ನೂ ದಾಟಿಸಿ, ಅಮಾನವನಿಂದ ಅನುಮತಿಯನ್ನು ಕೊಡಿಸಿ ದಿವ್ಯಲೋಕಕ್ಕೆ ಸೇರಿಸಿ, ಅಲ್ಲಿ ತಾನು ಮಹಾಲಕ್ಷ್ಮಿಯೊಡನೆ ದಿವ್ಯಸಿಂಹಾಸನದಲ್ಲಿ ಕುಳಿತು, ಅತ್ಯಾನಂದವನ್ನು ಹೊಂದಿ, ಆತನಿಂದ ಸರ್ವದೇಶ, ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಸಕಲವಿಧ ಕೈಂಕರ್ಯವನ್ನೂ ಮಾಡಿಸಿಕೊಳ್ಳುತ್ತಾ, ಅವನಿಗೂ ತನಗೆ ಸಮಾನವಾದ ಆನಂದವನ್ನು ಕೊಟ್ಟು, ಕಾಲತತ್ವವಿರುವವರೆಗೂ ಆತನೊಡನೆ ಕಲೆತು ಆನಂದಿಸುತ್ತಿರುವನೆಂಬ ಅಭಿಪ್ರಾಯವು ಸೂಚಿತವಾಗುವುದು.

*

ನಾಗಿ ಮನಸ್ಸುಳ್ಳವನಾಗಿದ್ದರೂ, ತನ್ನ ಸತ್ಯಕ್ಕೆ ಲೋಪವುಂಟಾಗಬಾರದೆಂಬ ದೃಢಸಂಕಲ್ಪವುಳ್ಳವನಾದುದರಿಂದ ಭರತನ ಪ್ರಾರ್ಥನೆಗೆ ಒಪ್ಪಲಿಲ್ಲ. ಆದರೂ ಬಿಡದೆ ಭರತನು ವಿನಯದಿಂದಲೂ, ಪೂಜ್ಯಭಾವದಿಂದಲೂ ರಾಮನನ್ನು ಬಹಳವಾಗಿ ನಿರ್ಬಂಧಿಸಿ, "ಅಣ್ಣಾ! ನಿನಗಿಂತಲೂ ಧರ್ಮಜ್ಞರಾದವರು ಯಾರುಂಟು? ಹಿರಿಯ ಮಗನಾದ ನೀನು ರಾಜ್ಯಕ್ಕೆ ಅರ್ಹನಾಗಿರುವಾಗ ಕಿರಿಯರಿಗೆ ಅರ್ಹತೆಯುಂಟೆ? ಆದುದರಿಂದ ನಿನ್ನ ರಾಜ್ಯವನ್ನು ನೀನೇ ಕೈಗೊಳ್ಳಬೇಕು" ಎಂದು ನಾನಾವಿಧದಲ್ಲಿ ಪ್ರಾರ್ಥಿಸಿ ಕೇಳಿಕೊಂಡನು. ರಾಮನು ತನ್ನನ್ನೇ ಕೇಳಿದರೂ ಕೊಡುವಷ್ಟು ಉದಾರಸ್ವಭಾವವುಳ್ಳವನು. ಯಾಚಕರು ತನ್ನಲ್ಲಿಗೆ ಬಂದು ಯಾಚಿಸುವಾಗ ನಗುಮುಖದಿಂದಲೇ ಅವರ ಕೋರಿಕೆಯನ್ನು ಸಲ್ಲಿಸಿ ಸಂತೋಷಪಡಿಸತಕ್ಕವನು. ಹೆಚ್ಚಾಗಿ ಹೇಳಿದುದರಿಂದೇನು? ಕಾಕುತ್ಸ್ಥವಂಶದವರಲ್ಲಿ ಹೋಗಿ ತಮ್ಮ ತಮ್ಮ ಕೋರಿಕೆಗಳನ್ನು ಈಡೇರಿಸಿಕೊಳ್ಳದೆ ಬಂದವರೊಬ್ಬರೂ ಇಲ್ಲವೆಂಬ ಕೀರ್ತಿಯು ಈತನ ವಂಶಪರಂಪರೆಯಾಗಿಯೇ ಬಂದಿರುವುದು. ಇಷ್ಟೇ ಅಲ್ಲದೆ ತನ್ನಲ್ಲಿ ಮರೆಹೊಕ್ಕವರ ಕೋರಿಕೆಯನ್ನು ಸಲ್ಲಿಸುವುದರಲ್ಲಿ ಶ್ರೀರಾಮನು ಯಾವಾಗಲೂ ಹಿಂಜರಿಯತಕ್ಕವನಲ್ಲ. ಹೀಗಿದ್ದರೂ ಮಾಡತಕ್ಕುದೇನು? ತಂದೆಯಾಜ್ಞೆಯು ಪ್ರತಿಬಂಧಕವಾಯಿತು. ಭರತನು ಪ್ರಾರ್ಥಿಸಿಕೊಂಡು ದೆಲ್ಲವೂ ವಿಫಲವಾಯಿತು. ಆದರೇನು? ಎಷ್ಟು ಹೇಳಿದರೂ ಭರತನು ತಾನಾಗಿ ಸ್ವತಂತ್ರಿಸಿ ರಾಜ್ಯಭಾರಮಾಡುವುದಕ್ಕೆ ಒಪ್ಪದಿರಲು, ರಾಮನು ತನ್ನ ಪಾದುಕೆಗಳೆರಡನ್ನೂ ತನಗೆ ಪ್ರತಿನಿಧಿಯಾಗಿ ಇಟ್ಟುಕೊಳ್ಳುವಂತೆ ಕೊಟ್ಟನು. ಹೀಗಿದ್ದರೂ ತನ್ನನ್ನು ಅಗಲಿರಲಾರದೆ ಭರತನು ಬಹಳವಾಗಿ ಚಿಂತಿಸುತ್ತಿರಲು, ಬಾರಿಬಾರಿಗೂ ಆತನನ್ನು ಸಮಾಧಾನಪಡಿಸಿ ಹಿಂತಿರುಗಿಸಿ ದನು. ರಾಮನನ್ನು ರಾಜ್ಯದಲ್ಲಿರಿಸಿ ತಾನು ಆತನ ಶುಶ್ರೂಷೆಯಲ್ಲಿದ್ದು ಕೃತಾರ್ಥನಾಗಬೇಕೆಂದು ಬಂದ ಭರತನ ಉದ್ದೇಶವು ಈಡೇರದೆಹೋಯಿತು. ಆದರೆ, ಪಾದುಕೆಗಳಾದರೂ ತನಗೆ ಲಭಿಸಿದುದೇ ತನ್ನ ಭಾಗ್ಯೋದಯ ವೆಂದೆಣಿಸಿ, ಅವುಗಳನ್ನು ಪ್ರತಿದಿನವೂ ಪೂಜಿಸುತ್ತಾ, ರಾಮನಿಲ್ಲದ ಅಯೋಧ್ಯೆಗೆ ತಾನೂ ಪ್ರವೇಶಿಸುವುದಿಲ್ಲವೆಂದು ಸಂಕಲ್ಪಿಸಿ, ಆ ರಾಮನ ಪ್ರತ್ಯಾಗಮನವನ್ನೇ ನಿರೀಕ್ಷಿಸುತ್ತಾ ಅಯೋಧ್ಯೆಯ ಸಮೀಪದಲ್ಲಿರುವ ನಂದಿಗ್ರಾಮದಲ್ಲಿ ನಿಂತು, ಆ ಪಾದುಕೆಗಳನ್ನೇ ಸಿಂಹಾಸನದಲ್ಲಿರಿಸಿ, ರಾಜ್ಯ ಭಾರವನ್ನು ನಡೆಸುತ್ತಿದ್ದನು.

ಇತ್ತಲಾಗಿ ರಾಮನು ರಾಜ್ಯವನ್ನು ಕೈಸೇರಿಸಿಕೊಳ್ಳುವುದಕ್ಕೆ ಇದೊಂದು ನೆಪವು ಸಿಕ್ಕಿದರೂ ಅದಕ್ಕಾಸೆಪಡದೆ, ಸತ್ಯಕ್ಕೆ ಕಟ್ಟುಬಿದ್ದು, ಜಿತೇಂದ್ರಿಯನಾಗಿಯೇ ಇದ್ದುಬಿಟ್ಟನಲ್ಲದೆ, ಭರತನು ಹಿಂತಿರುಗಿದಮೇಲೆಯೂ ಆಗಾಗ ಅಯೋಧ್ಯಾನಿವಾಸಿಗಳು ಬಂದು ತನ್ನನ್ನು ನಿರ್ಬಂಧಿಸುವರೆಂಬ ಶಂಕೆಯಿಂದ, ಒಡನೆಯೇ ಆ ಚಿತ್ರಕೂಟವನ್ನು ಬಿಟ್ಟು, ಅನೇಕ ರಾಕ್ಷಸರಿಂದ ತುಂಬಿದ [1]ದಂಡಕಾರಣ್ಯವನ್ನು ಪ್ರವೇಶಿಸಿದನು. ಈ ಮಹಾರಣ್ಯದಲ್ಲಿದ್ದ ವಿರಾಧನೆಂಬ ರಾಕ್ಷಸನನ್ನು ಸಂಹರಿಸಿ, ಆತನ ವಧವನ್ನೇ ಕಾಣಿಕೆಯನ್ನಾಗಿ ತೆಗೆದುಕೊಂಡು, ಅಲ್ಲಿದ್ದ ಶರಭಂಗಮಹರ್ಷಿಯನ್ನು ನಮಸ್ಕರಿಸಿ, ಆತನ ಅಪ್ಪಣೆಯಿಂದ ಮುಂದೆ ಹೊರಟು, ಸುತೀಕ್ಷ್ಣರನ್ನೂ, ಅಗಸ್ತ್ಯರನ್ನೂ, ಅವರ ತಮ್ಮಂದಿರಾದ ಸುದರ್ಶನರೆಂಬ ಮಹರ್ಷಿಯನ್ನೂ ದರ್ಶನಮಾಡಿದನು. ಆಗ ಅಗಸ್ತ್ಯಮಹರ್ಷಿಯು ತನಗೆ ಇಂದ್ರನು ಕೊಟ್ಟಿದ್ದ ಬಿಲ್ಲನ್ನೂ, ಕತ್ತಿಯನ್ನೂ, ಅಕ್ಷಯಬಾಣವುಳ್ಳ ಎರಡು ಬತ್ತಳಿಕೆಗಳನ್ನೂ ರಾಮನಿಗೆ ಅನುಗ್ರಹಿಸಿ ಕೊಡಲು ಅವುಗಳನ್ನು ವಿನಯದಿಂದಲೂ, ಸಂತೋಷದಿಂದಲೂ ಕೈಕೊಂಡು ಆ ಶರಭಂಗಾಶ್ರಮದಲ್ಲಿಯೇ ವಾನಪ್ರಸ್ಥಾಶ್ರಮದಲ್ಲಿರುವ ಋಷಿಗಳೊಳಗೂಡಿ ವಾಸಮಾಡುತ್ತಿದ್ದನು. ಈತನು ಹಿಂಸಾಯೋಗ್ಯವಲ್ಲದ ತಾಪಸರೂಪವನ್ನು ಧರಿಸಿದ್ದರೂ, ಅವನ ತೇಜೋವಿಶೇಷದಿಂದ ದುಷ್ಟನಿಗ್ರಹಾರ್ಥವಾಗಿ ಭೂಲೋಕದಲ್ಲಿ ಅವತರಿಸಿರುವ ಸರ್ವೇಶ್ವರನೇ ಈತನೆಂದು ನಿಶ್ಚಯಿಸಿ, ಅನೇಕ ಋಷಿಗಳು ರಾಕ್ಷಸಬಾಧೆಯನ್ನು ಸಹಿಸಲಾರದೆ ಬಂದು ಮರೆಹೊಕ್ಕರು. ಅವರ ಪ್ರಾರ್ಥನೆಯನ್ನಂಗೀಕರಿಸಿ, ಅಗ್ನಿಕಲ್ಪರಾದ ಆ ಮಹರ್ಷಿಗಳೆಲ್ಲರ ಮುಂದೆಯೇ ರಾಕ್ಷಸರೆಲ್ಲರನ್ನೂ ಕೊಂದು ಅವರ ಕೋರಿಕೆಯನ್ನು ಸಲ್ಲಿಸುವುದಾಗಿ ಪ್ರತಿಜ್ಞೆ ಮಾಡಿದನು. ಹೀಗಿರುವಾಗ ಅಲ್ಲಿಗೆ ಸಮೀಪದಲ್ಲಿ ಜನಸ್ಥಾನವೆಂಬ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಶೂರ್ಪಣಖೆಯೆಂಬ ಕಾಮರೂಪಿಣಿಯಾದ ರಾಕ್ಷಸಿಯೊಬ್ಬಳು ಈ ರಾಮ ಲಕ್ಷ್ಮಣರನ್ನು ಮರುಳುಮಾಡಿ ವಂಚಿಸುವುದಕ್ಕೆ ಬರಲು, ಲಕ್ಷ್ಮಣನು ಅವಳ ಕಿವಿಮೂಗುಗಳನ್ನು ಕತ್ತರಿಸಿ ವಿರೂಪಮಾಡಿ ಕಳುಹಿಸಿದನು. ಅವಳ ಪ್ರೇರಣೆಯಿಂದ ಅಲ್ಲಿದ್ದ ಖರದೂಷಣ ತ್ರಿಶಿರಸ್ಸುಗಳೆಂಬ ಮೂವರು ರಾಕ್ಷಸಮುಖ್ಯರು, ಅನೇಕ

---

1. (ದಂಡಕಾರಣ್ಯವು) ಇದು ದಂಡಕನೆಂಬ ಅರಸನ ರಾಜ್ಯವಾಗಿದ್ದು, ಶುಕ್ರಶಾಪದಿಂದ ಕಾಡಾಗಿಹೋಯಿತೆಂದು ಪ್ರಸಿದ್ಧಿಯುಂಟು.

ರಾಕ್ಷಸಸೈನ್ಯದೊಡನೆ ಬಂದು ಇವರನ್ನು ಇದಿರಿಸಿದರು. ಹದಿನಾಲ್ಕುಸಾವಿರ ಸಂಖ್ಯೆಯುಳ್ಳ ಆ ರಾಕ್ಷಸ ಸೈನ್ಯಗಳನ್ನೆಲ್ಲಾ ಈ ರಾಮ ಲಕ್ಷ್ಮಣರಿಬ್ಬರೂ ನಿಮಿಷಮಾತ್ರದಲ್ಲಿ ಸಂಹರಿಸಿದರು.

ಲಂಕೆಯನ್ನು ಆಳುತ್ತಿದ್ದ ರಾವಣನೆಂಬ ಪ್ರಬಲ ರಾಕ್ಷಸನೊಬ್ಬನು, ತನ್ನ ಬಂಧುಗಳಾದ ಈ ರಾಕ್ಷಸರ ವಧವನ್ನು ಕೇಳಿ ಬಹಳ ಕೋಪಗೊಂಡು, ಈ ರಾಮಲಕ್ಷ್ಮಣರನ್ನು ಹೇಗಾದರೂ ವಂಚಿಸಬೇಕೆಂಬ ಉದ್ದೇಶದಿಂದ ಮಾರೀಚನ ಸಹಾಯವನ್ನು ಕೋರಿದನು. ಈ ಮಾತನ್ನು ಕೇಳಿದೊಡನೆಯೇ ಮಾರೀಚನು ರಾಮನ ಹೆಸರಿಗೆ ಬೆಜ್ಜರಗೊಂಡು, ರಾವಣನನ್ನು ಕುರಿತು “ಅಯ್ಯಾ! ಖರದೂಷಣಾದಿ ಮಹಾಪರಾಕ್ರಮಿಗಳನ್ನೆಲ್ಲಾ ಧೂಳೆಬ್ಬಿಸಿದ ರಾಮನೊಡನೆ ದ್ವೇಷಿಸುವುದು ಯುಕ್ತವಲ್ಲ! ನನಗೆ ಹಿಂದೆಯೇ ಅನುಭವ ವುಂಟು! ಖಂಡಿತವಾಗಿ ಈ ಪ್ರಯತ್ನವನ್ನು ಬಿಡು!” ಎಂದು ಅನೇಕ ವಿಧವಾಗಿ ಬುದ್ಧಿವಾದ ಹೇಳಿದನು. ಎಷ್ಟು ಹೇಳಿದರೇನು! ಮೃತ್ಯುವಿನಿಂದ ಪ್ರೇರಿತನಾದವನಿಗೆ ಹಿತವಾದಗಳು ಕಿವಿಗೇರುವುವೆ? ಆ ರಾವಣನು ಮಾರೀಚನ ಮಾತನ್ನು ಲಕ್ಷಿಸದೆ, ಅವನನ್ನು ನಿರ್ಬಂಧಿಸಿ ರಾಮನಿರುವ ಸ್ಥಳಕ್ಕೆ ಕರೆತಂದನು. ಇಲ್ಲಿಗೆ ಬಂದಕೂಡಲೇ ಮಾರೀಚನನ್ನು ಕುರಿತು ರಾವಣನು “ಎಲೈ ಮಿತ್ರನೆ! ನೀನು ಮಾಯೆಯಲ್ಲಿ ಬಹಳ ನಿಪುಣನಾದುದರಿಂದ, ವಿಚಿತ್ರವಾದ ಒಂದು ಚಿನ್ನದ ಮೃಗದ ರೂಪವನ್ನು ಧರಿಸಿ, ಈ ರಾಮ ಲಕ್ಷ್ಮಣರನ್ನು ಮರೆಳುಗೊಳಿಸಿ ದೂರಕ್ಕೆ ಕರೆದುಕೊಂಡುಹೋಗು” ಎಂದು ನಿಯಮಿಸಿ ಕಳುಹಿಸಿದನು. ಆದರಂತೆ ಮಾರೀಚನು ಸೀತಾಲಕ್ಷ್ಮಣರೊಡನೆ ರಾಮನಿರುವ ಸ್ಥಳಕ್ಕೆ ಬಂದು, ಅವರ ಮುಂದೆ ಮೃಗರೂಪವನ್ನು ಧರಿಸಿ ಆಡುತ್ತಾ, ಅವರನ್ನು ಬಹುದೂರಕ್ಕೆ ಕರೆದುಕೊಂಡು ಹೋದನು. ಇತ್ತಲಾಗಿ ಆಶ್ರಮದಲ್ಲಿ ಏಕಾಕಿನಿಯಾಗಿದ್ದ ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋಗುತ್ತಾ, ಅಡ್ಡಗಟ್ಟಿದ ಜಟಾಯುವನ್ನು ಕೊಂದು, ಸೀತೆಯನ್ನು ಎತ್ತಿ ಕೊಂಡುಹೋಗಿ ಲಂಕಾಪಟ್ಟಣದಲ್ಲಿರಿಸಿದನು. ಇತ್ತಲಾಗಿ ರಾಮನು ಹಿಂತಿ ರುಗಿ ಬಂದು, ಆಶ್ರಮದಲ್ಲಿ ಸೀತೆಯನ್ನು ಕಾಣದೆ, ಸಂಕಟಪಡುತ್ತಾ, ಅಲ್ಲಿ ಅರ್ಧಪ್ರಾಣದಿಂದ ಬಿದ್ದು ನರಳುತ್ತಿದ್ದ ಜಟಾಯುವನ್ನು ನೋಡಿ, ಅವನಿಂದ ತನ್ನ ಪ್ರಿಯಪತ್ನಿಯಾದ ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋದುದನ್ನು ಕೇಳಿ, ಬಹಳವಾದ ಶೋಕಾಗ್ನಿಯಿಂದ ಬೆಂದವನಾಗಿ

[1]ಪ್ರಲಾಪಿಸುತ್ತಿದ್ದನು. ಸೀತೆಯು ಅಪಹೃತಳಾದುದಕ್ಕಿಂತಲೂ ಜಟಾಯುವಿನ ಮರಣವು ಈತನಿಗೆ ದುಃಖವನ್ನು ಬಹಳವಾಗಿ ಹೆಚ್ಚಿಸಿತು. ಈ ದುಃಖದಲ್ಲಿಯೇ ಜಟಾಯುವಿಗೆ ಬ್ರಹ್ಮಮೇಧ ಸಂಸ್ಕಾರವನ್ನು ಮಾಡಿ, ಸೀತೆಯನ್ನು ಅಲ್ಲಲ್ಲಿ ಹುಡುಕುತ್ತಾ ಸಂಚರಿಸುತ್ತಿದ್ದನು. ಹೀಗಿರುವಾಗ ಬಹಳ ವಿಕಾರ ರೂಪವುಳ್ಳ ಕಬಂಧಕನೆಂಬ ಘೋರರಾಕ್ಷಸನೊಬ್ಬನು ಇವರನ್ನಿದಿರಿಸಲು ಅವನನ್ನು ಕೊಂದುಹಾಕಿ, ಅವನು ಪ್ರಾರ್ಥಿಸಿಕೊಂಡ ಮೇರೆಗೆ ಆತನಿಗೂ ತನ್ನ ಕೈಯಿಂದಲೇ ಅಗ್ನಿಸಂಸ್ಕಾರವನ್ನು ಮಾಡಿದನು. ಆ ರಾಕ್ಷಸನು ಒಡನೆಯೇ ದೇವರೂಪವನ್ನು ಹೊಂದಿ ಸ್ವರ್ಗಕ್ಕೆ ಹೋಗುತ್ತ ಅರ್ಧ ಮಾರ್ಗದಲ್ಲಿ ನಿಂತು, ರಾಮನನ್ನು ಕುರಿತು "ಎಲೈ ಮಹಾತ್ಮನೆ! ಇದೋ ಇತ್ತಲಾಗಿ ಶಬರಿಯೆಂಬ ಒಬ್ಬ ಪರಿವ್ರಾಜಕೆಯು ಇರುವಳು. ಅವಳು ಬಹಳ ಧರ್ಮಶೀಲೆಯು; ವಿಶೇಷವಾದ ಭಗವದ್ಭಕ್ತಿಯುಳ್ಳವಳು; ಅತಿಥಿಸತ್ಕಾರ ಧರ್ಮವನ್ನು ಚೆನ್ನಾಗಿ ಬಲ್ಲವಳು. ಅವಳನ್ನು ಕಂಡು ಮುಂದೆ ಹೋಗು" ಎಂದು ಹೇಳಿ ಕಣ್ಮರೆಯಾದನು. ಅದರಂತೆಯೇ ರಾಮನು ಶಬರಿಯನ್ನು

---

1. ಬಹಳ ಗಂಭೀರಸ್ವಭಾವವುಳ್ಳ ಮಹಾಪುರುಷನಾದ ಶ್ರೀರಾಮನು ಸಾಮಾನ್ಯಳಾದ ಒಬ್ಬ ಸ್ತ್ರೀಯನ್ನು ಕಾಣದುದಕ್ಕಾಗಿ ಇಷ್ಟು ವ್ಯಸನ ಪಡಬಹುದೆ? ಎಂದರೆ, ಇದರಿಂದ, ಈ ರಾಮನಲ್ಲಿರುವ ಸದ್ಗುಣಪಕ್ಷಪಾತಿತ್ವವೂ ಇಂತಹ ಗಂಭೀರಸ್ವಭಾವವುಳ್ಳ ರಾಮನಿಗೂ ವಿಶೇಷದುಃಖವುಂಟಾಗುವ ಹಾಗೆ ಅವನ ಮನಸ್ಸನ್ನು ಆಕರ್ಷಿಸಿದುದರಿಂದ, ಆ ವಸ್ತುವಿನಲ್ಲಿ (ಸೀತೆಯಲ್ಲಿ) ಇರತಕ್ಕ ಲೋಕೋತ್ತರವಾದ ಗುಣಾತಿಶಯವೂ ಸೂಚಿತವಾಗುವುದೆಂದೇ ಗ್ರಹಿಸಬೇಕು. ಇದಲ್ಲದೆ, "ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ" ಪರಮದುಃಖವನ್ನು ನೋಡಿ ಅವರಿಗಿಂತಲೂ ಹೆಚ್ಚಾಗಿ ದುಃಖಿಸುವುದೇ ಮಹಾಪುರುಷಲಕ್ಷಣವು. ಮತ್ತು ಒಂದು ಸ್ತ್ರೀಮಾತ್ರಕ್ಕಾಗಿ ಇಷ್ಟು ವ್ಯಸನಪಡುವವರುಂಟೇ? ಎಂದು ಮೊದಲು ಸಂದೇಹಿಸುತ್ತಿದ್ದ ಆಂಜನೇಯನು ಕೂಡ ಸೀತೆಯ ಆಕೃತಿಯನ್ನು ನೋಡಿದಮೇಲೆ ಆಶ್ಚರ್ಯಪಟ್ಟು, ದುಷ್ಕರಂ ಕೃತವಾನ್ ರಾಮೋ ಹೀನೋ ಯದನಯಾ ಪ್ರಭುಃ| ಧಾರಯತ್ಯಾತ್ಮನೋ ದೇಹಂ ನ ದುಃಖೇನಾವಸೀದತಿ" ಎಂದು ರಾಮನು ಸೀತೆಯನ್ನಗಲಿಯೂ ಜೀವಿಸಿರುವುದು ಪರಮಾಶ್ಚರ್ಯವೆಂದು ಹೇಳಿದುದಾಗಿ ಮುಂದೆ ಸ್ಪಷ್ಟವಾಗುವುದು. ಆದುದರಿಂದ ಇದು ನ್ಯಾಯವೆಂದೇ ಗ್ರಹಿಸಬೇಕು.

ನೋಡಿ, ಅವಳ ಸತ್ಕಾರಗಳನ್ನೆಲ್ಲಾ ಪ್ರೀತಿಯಿಂದ ಸ್ವೀಕರಿಸಿ, ಅಲ್ಲಿಂದ ಹೊರಟು ಪಂಪಾತೀರಕ್ಕೆ ಬಂದನು.

ಅಲ್ಲಿ ಹನುಮಂತನೆಂಬ ಕಪಿಯನ್ನು ಕಂಡು, ಅವನ ಮೂಲಕವಾಗಿ ಸುಗ್ರೀವನೆಂಬ ಕಪಿರಾಜನ ಬಳಿಗೆ ಹೋಗಿ, ಅವನಿಗೆ ತನ್ನ ಪೂರ್ವವೃತ್ತಾಂತವೆಲ್ಲವನ್ನೂ ತಿಳಿಸಿ, ಅದರಲ್ಲಿಯೂ ಮುಖ್ಯವಾಗಿ ಸೀತೆಯ ವೃತ್ತಾಂತವನ್ನು ವಿವರಿಸಿ ಹೇಳಿದನು. ಅದೆಲ್ಲವನ್ನೂ ಸುಗ್ರೀವನು ಕೇಳಿ, ಈ ವಿಷಯದಲ್ಲಿ ರಾಮನಿಗೆ ತಾನು ಸಹಾಯಮಾಡುವುದರಿಂದ ತನ್ನ ಕಾರ್ಯವನ್ನೂ ನೆರವೇರಿಸಿಕೊಳ್ಳಬಹುದೆಂದು ಬಹಳ ಸಂತೋಷಪಟ್ಟವನಾಗಿ, ಅಗ್ನಿಸಾಕ್ಷಿಕವಾಗಿ ಆತನಲ್ಲಿ ಸ್ನೇಹವನ್ನು ಬೆಳೆಸಿದನು. ಆಮೇಲೆ ಸುಗ್ರೀವನು ತನ್ನ ಪೂರ್ವದುಃಖಗಳೆಲ್ಲವನ್ನೂ ನೆನೆಸಿಕೊಂಡು ಕಣ್ಣೀರುಬಿಡುತ್ತಾ, ತನ್ನ ಅಣ್ಣನಾದ ವಾಲಿಗೂ, ತನಗೂ ಉಂಟಾದ ದ್ವೇಷಕ್ಕೆ ಕಾರಣವನ್ನು ವಿಸ್ತಾರವಾಗಿ ರಾಮನಿಗೆ ಹೇಳಿದನು. ಇದನ್ನು ಕೇಳಿ ರಾಮನು ಆ ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆಮಾಡಿಕೊಟ್ಟನು. ಆದರೆ, ಮಹಾಬಲವುಳ್ಳ ವಾಲಿಯನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದ ರಾಮನ ಮಾತಿನಲ್ಲಿ ಸುಗ್ರೀವನಿಗೆ ನಂಬಿಕೆ ಹುಟ್ಟಲಿಲ್ಲ. ಈ ಶಂಕೆಯನ್ನು ಹೋಗಲಾಡಿಸಿಕೊಳ್ಳುವುದಕ್ಕಾಗಿ ರಾಮನಿಗೆ ವಾಲಿಯ ಬಲವು ಈ ವಿಧವಾದುದೆಂಬುದನ್ನು ತೋರಿಸುವುದಕ್ಕೂ, ರಾಮನ ಶಕ್ತಿಯನ್ನು ತಾನು ತಿಳಿದುಕೊಳ್ಳುವುದಕ್ಕೂ ಉಪಾಯವನ್ನಾಲೋಚಿಸಿ, ಮುಂದೆ ಬೆಟ್ಟದಂತೆ ಬಿದ್ದಿದ್ದ ದುಂದುಭಿಯೆಂಬ ರಾಕ್ಷಸನ ಮೃತದೇಹವನ್ನು ತೋರಿಸಿ, “ಎಲೈ ರಾಮನೆ! ಇದೋ ನೋಡು! ಈ ಅಸ್ಥಿಪಂಜರವನ್ನು ನಮ್ಮ ಅಣ್ಣನಾದ ವಾಲಿಯು ತನ್ನ ಕಾಲಿನಿಂದಲೇ ಇಷ್ಟು ದೂರದವರೆಗೆ ಬಂದು ಬೀಳುವಂತೆ ಚಿಮ್ಮಿದನು” ಎಂದು ಹೇಳಲು, ಮಹಾಬಲಶಾಲಿಯಾದ ಶ್ರೀರಾಮನು ಮುಗುಳ್ನಗೆ ನಕ್ಕು, ತನ್ನ ಅಂಗುಷ್ಠದಿಂದಲೇ ಅದನ್ನು ಚಿಮ್ಮಲು, ಅದು ಹತ್ತುಯೋಜನ ದೂರದವರೆಗೆ ಹೋಗಿ ಬಿತ್ತು. ಅದರಲ್ಲಿಯೂ ಸುಗ್ರೀವನಿಗೆ ಸಂಪೂರ್ಣವಾದ ನಂಬಿಕೆ ಹುಟ್ಟಲಿಲ್ಲ. ಇದನ್ನು ನೋಡಿ ರಾಮನು ಆತನಿಗೆ ಇನ್ನೂ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ ಒಂದೇ ಬಾಣವನ್ನು ಪ್ರಯೋಗಿಸಿ ಏಳು ಸಾಲವೃಕ್ಷಗಳನ್ನು ಭೇದಿಸಿದನು. ಇವುಗಳನ್ನು ಭೇದಿಸುವುದಕ್ಕಾಗಿ ರಾಮನು ಬಿಟ್ಟ ಬಾಣವು ಮುಂದಿದ್ದ ಅನೇಕ ಬೆಟ್ಟಗಳನ್ನು ಕೊರೆದುಕೊಂಡುಹೋಗಿ ಕೊನೆಗೆ ಪಾತಾಳವನ್ನೂ

ಪ್ರವೇಶಿಸಿತು. ಹೀಗೆ ಶ್ರೀರಾಮನು ತೋರಿಸಿದ ಅತಿಮಾನುಷಕೃತ್ಯಗಳನ್ನು ನೋಡಿದಮೇಲೆ ಸುಗ್ರೀವನಿಗೆ ಸಂಪೂರ್ಣವಾದ ನಂಬಿಕೆಯು ಹುಟ್ಟಿತು. ಇನ್ನು ತನಗೆ ರಾಜ್ಯವು ಕೈಗೂಡಿತೆಂದೇ ನಿಶ್ಚಯಿಸಿ, ಸಂತೋಷದಿಂದ ಹೊಂಬಣ್ಣದ ಮೈಯುಳ್ಳ ಆ ಸುಗ್ರೀವನು ರಾಮನೊಡನೆ ಕಿಷ್ಕಿಂಧೆಯೆಂಬ ಗುಹೆಯ ಬಾಗಿಲಿಗೆ ಬಂದು, ಅಲ್ಲಿ ದೊಡ್ಡ ಸಿಂಹನಾದವನ್ನು ಮಾಡಿ ಗರ್ಜಿಸಿದನು. ಅಪೂರ್ವವಾದ ಈ ಗರ್ಜನೆಯ ಧ್ವನಿಯನ್ನು ಕೇಳಿದೊಡನೆಯೇ ವಾಲಿಯು ಬಹಳ ಕೋಪದಿಂದ ಗುಹೆಯನ್ನು ಬಿಟ್ಟು ಹೊರಗೆ ಬರುತ್ತಿರುವಾಗ, ತಾರೆಯೆಂಬ ಆತನ ಪತ್ನಿಯು ಅನೇಕವಿಧವಾಗಿ ತಡೆದರೂ ಕೇಳದೆ, ಅವಳಿಗೆ ಸಮಾಧಾನವನ್ನು ಹೇಳಿ, ಸುಗ್ರೀವನೊಡನೆ ಯುದ್ಧಕ್ಕೆ ನಿಂತನು. ಇವರಿಬ್ಬರೂ ಯುದ್ಧಮಾಡುತ್ತಿರುವಾಗ, ಧರ್ಮಸೂಕ್ಷ್ಮವನ್ನರಿತ ರಾಮನು ಒಂದು ಬಾಣದಿಂದ ವಾಲಿಯನ್ನು ಕೊಂದನು. ಸುಗ್ರೀವನಿಗೆ ತಾನು ಪ್ರತಿಜ್ಞೆ ಮಾಡಿಕೊಟ್ಟಂತೆ ಅಲ್ಲಿನ ಕಿಷ್ಕಿಂಧಾಪಟ್ಟಣದಲ್ಲಿ ರಾಜ್ಯಾಭಿಷೇಕ ಮಾಡಿದನು. ಸುಗ್ರೀವನು ಒಡನೆಯೇ ಕಪಿಗಳೆಲ್ಲರನ್ನೂ ಕರೆಸಿ ಸೀತೆಯನ್ನು ಹುಡುಕುವುದಕ್ಕಾಗಿ ನಾನಾದಿಕ್ಕುಗಳಿಗೆ ಕಳುಹಿಸಿದನು. ಹೀಗೆ ಹೊರಟ ಕಪಿಗಳಲ್ಲಿ ಬಹಳ ಬಲಶಾಲಿಯಾದ ಹನುಮಂತನೆಂಬವನು ದಾರಿಯಲ್ಲಿ ಸಂಪಾತಿಯೆಂಬ ಗೃಧ್ರರಾಜನನ್ನು ಕಂಡು, ಅವನ ಮಾತಿನಮೇಲೆ ನೂರು ಯೋಜನ ವಿಸ್ತಾರವುಳ್ಳ ಸಮುದ್ರವನ್ನು ಲಂಘಿಸಿ, ರಾವಣ ಪಾಲಿತವಾದ ಲಂಕಾದ್ವೀಪವನ್ನು ಸೇರಿದನು.

ಅಲ್ಲಲ್ಲಿ ಹುಡುಕುತ್ತ ಕೊನೆಗೆ ರಾವಣನ ಪ್ರಮದವನವಾಗಿದ್ದ ಅಶೋಕವನವನ್ನು ಪ್ರವೇಶಿಸಿದನು. ಅಲ್ಲಿ ಒಂದು ಮರದ ಕೆಳಗೆ ಕುಳಿತು, ಯಾವಾಗಲೂ ರಾಮನನ್ನೇ ಧ್ಯಾನಿಸುತ್ತ, ಕೃಶಳಾದ ಸೀತೆಯನ್ನು ಕಂಡನು. ಆಕೆಗೆ ತಾನು ರಾಮದೂತನೆಂಬ ನಂಬಿಕೆಯನ್ನು ಹುಟ್ಟಿಸುವುದಕ್ಕಾಗಿ, ತಾನು ತಂದಿದ್ದ ರಾಮಮುದ್ರಿಕೆಯನ್ನು ಕೊಟ್ಟು, ಹಿಂದೆ ನಡೆದ ವೃತ್ತಾಂತಗಳನ್ನೆಲ್ಲ ವಿವರವಾಗಿ ತಿಳಿಸಿ, ಸ್ವಲ್ಪಕಾಲದೊಳಗಾಗಿಯೇ ರಾಮನನ್ನು ಕರೆತರುವುದಾಗಿ ಅವಳಿಗೆ ಸಮಾಧಾನವನ್ನು ಹೇಳಿ ಹಿಂತಿರುಗಿದನು. ಬರುತ್ತಿರುವಾಗ ಆ ತೋಟದ ಹೊರಬಾಗಿಲ ಗೋಪುರವನ್ನು ಕೆಡಿಸಿ, ಅಲ್ಲಿ ತನ್ನನ್ನು ಇದಿರಿಸುವುದಕ್ಕೆ ಬಂದ ಐದು ರಾಕ್ಷಸ ಸೇನಾಧಿಪತಿಗಳನ್ನೂ, ಏಳು ಮಂತ್ರಿಪುತ್ರರನ್ನೂ ಕೊಂದು, ರಾವಣನ ಎರಡನೆಯ ಮಗನಾದ ಮಹಾಬಲಶಾಲಿ

ಯಾದ ಅಕ್ಷಕುಮಾರನನ್ನೂ ಸಂಹರಿಸಿದನು. ಆಮೇಲೆ ರಾವಣನ ಮತ್ತೊಬ್ಬ ಮಗನಾದ ಇಂದ್ರಜಿತ್ತೆಂಬವನು ಈತನನ್ನು ಬ್ರಹ್ಮಾಸ್ತ್ರದಿಂದ ಕಟ್ಟಿಹಾಕಿದನು. ಆದರೆ ಈ ಅಸ್ತ್ರವು ಐದು ಗಳಿಗೆಗಳವರೆಗೆ ಮಾತ್ರವೇ ಇವನನ್ನು ಕಟ್ಟಿಟ್ಟು, ಆಮೇಲೆ ಬಿಟ್ಟುಹೋಗುವುದಾಗಿ ಈತನಿಗೆ ಬ್ರಹ್ಮನ ವರವಿದ್ದುದರಿಂದ, ಒಡನೆಯೇ ಅದರಿಂದ ವಿಮುಕ್ತನಾದನು. ತನ್ನನ್ನು ಕಟ್ಟಿಹಾಕಿದ ರಾಕ್ಷಸರೆಲ್ಲರನ್ನೂ ನಿಮಿಷಮಾತ್ರದಲ್ಲಿ ಧ್ವಂಸಮಾಡುವುದಕ್ಕೆ ಈ ಹನುಮಂತ ತಕ್ಕ ಶಕ್ತಿಯುಳ್ಳವನಾಗಿದ್ದರೂ, ಮುಂದಿನ ಕಾರ್ಯಾತುರದಿಂದ ಅವರೆಲ್ಲರನ್ನೂ ಮನ್ನಿಸಿ ಬಿಟ್ಟುಬಿಟ್ಟು, ಸೀತೆಯಿದ್ದ ಸ್ಥಾನವನ್ನು ಹೊರತು, ಆ ಲಂಕಾಪಟ್ಟಣದ ಎಲ್ಲಾ ಸ್ಥಳಗಳನ್ನೂ ಸುಟ್ಟು ಬೂದಿಮಾಡಿ ಹಿಂತಿರುಗಿ ಹೊರಟನು. ರಾಮನ ಬಳಿಗೆ ಬಂದು, ಆತನಿಗೆ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, "ಸ್ವಾಮಿ! ಸಿಕ್ಕಿದಳು ಸೀತೆ" ಎಂದು ಅಲ್ಲಿ ನಡೆದ ಪ್ರಿಯವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ತಿಳಿಸಿದನು.

ಒಡನೆಯೇ ಶ್ರೀರಾಮನು ಸುಗ್ರೀವನೊಡನೆ ಸಮುದ್ರ ತೀರಕ್ಕೆ ಬಂದನು. ಸಮುದ್ರವು ದಾರಿಕೊಡದೆ ಗರ್ವದಿಂದ ಅಡ್ಡಲಾಗಿರುವುದನ್ನು ನೋಡಿ, ಬಹಳ ಕೋಪಗೊಂಡು, ಆ ಸಮುದ್ರವನ್ನೆಲ್ಲಾ ಬಾಣಗಳಿಂದ ಅಲ್ಲೋಲಕಲ್ಲೋಲವಾಗುವಂತೆ ಕ್ಷೋಭೆಹೊಂದಿಸಿದನು. ಕೂಡಲೆ ನದಿಗಳಿಗೆಲ್ಲಾ ಒಡೆಯನಾದ ಸಮುದ್ರನು ಭಯಪಟ್ಟು, ನಿಜರೂಪದಿಂದ ಬಂದು, ಶ್ರೀರಾಮನನ್ನು ಮರೆಹೊಕ್ಕು, ನಳನೆಂಬ ಕಪಿಯ ಮೂಲಕವಾಗಿ ಸೇತುವನ್ನು ಕಟ್ಟಿಸಿಕೊಳ್ಳುವಂತೆ ಹೇಳಿದನು. ಅದರಂತೆ ರಾಮನು ಸೇತುವನ್ನು ಕಟ್ಟಿಸಿ, ಸಮುದ್ರವನ್ನು ದಾಟಿ, ಲಂಕಾಪುರಕ್ಕೆಹೋಗಿ, ಯುದ್ಧದಲ್ಲಿ ರಾವಣನನ್ನು ಕೊಂದು ಸೀತೆಯನ್ನು ಕರೆತರಿಸಿದನು. ಆದರೆ ಆಗ ಶ್ರೀರಾಮನ ಮನಸ್ಸಿನಲ್ಲಿ "ತನ್ನ ಪೌರುಷವನ್ನು ಕಾಪಾಡಿಕೊಳ್ಳುವುದಕ್ಕಾಗಿ ಶತ್ರುವನ್ನು ಸಂಹರಿಸಿದುದು ನ್ಯಾಯವಾದರೂ, ಪರಗೃಹದಲ್ಲಿ ಬಹುಕಾಲದವರೆಗೆ ವಾಸಮಾಡುತ್ತಿದ್ದ ಹೆಂಡತಿಯನ್ನು ತಿರುಗಿ ಸೇರಿಸಿಕೊಳ್ಳುವುದು ಉಚಿತವೆ?" ಎಂಬ ಶಂಕೆಯೂ, ನಾಚಿಕೆಯೂ, ಬಹಳವಾಗಿ ಉಂಟಾಗಲು, ಅಲ್ಲಿದ್ದ ದೇವಗಂಧರ್ವದಾನವರ ಮುಂದೆಯೇ ಆ ಸೀತೆಯನ್ನು ಕುರಿತು ಮರ್ಮಭೇದಕಗಳಾದ ಕೆಲವು ಮಾತುಗಳನ್ನಾಡಿದನು. ಈ ಮಾತುಗಳನ್ನು ಕೇಳಿ ಸೀತೆಗೆ ಸಹಿಸಲಾರದ ಸಂಕಟವುಂಟಾಗಲು, ಒಡನೆಯೇ ಆಕೆಯು ಅಗ್ನಿಪ್ರವೇಶ

ಮಾಡಿದಳು. ಈಕೆಯ ಮಹಿಮೆಯನ್ನು ಏನೆಂದು ಹೇಳಲಿ! ಇವಳ ಪಾತಿವ್ರತ್ಯಕ್ಕೆ ಅಗ್ನಿಯೂ ತಣ್ಣಗಾಗಿ, ಇವಳ ಹೂಮುಡಿಯನ್ನು ಕೂಡ ಬಾಡಿಸದೆ ರಾಮನಿಗೆ ತಂದೊಪ್ಪಿಸಿ, ಅವನನ್ನು ಕುರಿತು "ಎಲೈ ರಾಮನೆ! ಇವಳು ಮಹಾ ಪತಿವ್ರತೆಯು, ಇವಳನ್ನು ಸ್ವೀಕರಿಸು!" ಎಂದು ಹೇಳಲು ಆಗ ರಾಮನಿಗೆ ಇವಳಲ್ಲಿ ದೋಷವಿಲ್ಲವೆಂಬ ನಂಬಿಕೆಯುಂಟಾಯಿತು. ಸಮಸ್ತ ದೇವತೆಗಳೂ ಹೀಗೆ ಸೀತಾಸಮೇತನಾದ ರಾಮನನ್ನು ಭಕ್ತಿಯಿಂದ ಕೊಂಡಾಡಿ ಪುಷ್ಪವೃಷ್ಟಿಯನ್ನು ಕರೆದರು. ಮಹಾತ್ಮನಾದ ಶ್ರೀರಾಮನು ಮಾಡಿದ ಮಹಾಕಾರ್ಯಕ್ಕಾಗಿ ದೇವತೆಗಳೂ, ಋಷಿಗಳೂ, ಚರಾಚರಾತ್ಮಕವಾದ ಸಕಲಪ್ರಪಂಚವೂ [1]ಸಂತೋಷಹೊಂದಿತು. ಒಡನೆಯೇ ರಾಮನು ವಿಭೀಷಣನಿಗೆ ತಾನು ಮಾತು ಕೊಟ್ಟಿದ್ದಂತೆ ಆ ಲಂಕಾರಾಜ್ಯದಲ್ಲಿ ಅಭಿಷೇಕವನ್ನು ಮಾಡಿ, ತನ್ನ ಪ್ರತಿಜ್ಞೆಯು ನೆರವೇರಿದುದಕ್ಕಾಗಿ ಅತ್ಯಂತ ಸಂತೋಷವುಳ್ಳವನಾದನು. ಇದಕ್ಕೆ ಮೊದಲು ರಾಮನು "ಭರತನಂತೆಯೇ ಈ ವಿಭೀಷಣನೂ ಈಗ ತನಗೆ ರಾಜ್ಯವು ಬೇಡವೆಂದು ಹೇಳಿದರೆ ತನ್ನ ಪ್ರತಿಜ್ಞೆಯು ನೆರವೇರುವುದು ಹೇಗೆ" ಎಂದು ಚಿಂತಾಜ್ವರದಿಂದ ವಿವರ್ಣನಾಗಿದ್ದು, ಆತನು ರಾಜ್ಯಭಾರವನ್ನು ಕೈಕೊಂಡಮೇಲೆ ತಾನು ಕೃತಕೃತ್ಯನಾದೆನೆಂದು ತೃಪ್ತಿ ಹೊಂದಿದನು. ದೇವತೆಗಳೆಲ್ಲರೂ ಈ ಶ್ರೀರಾಮನ ಕೋರಿಕೆಯಮೇಲೆ ಯುದ್ಧದಲ್ಲಿ ಹತರಾದ ಕಪಿಗಳೆಲ್ಲರೂ ಪುನಃ ಬದುಕುವಂತೆ ವರವನ್ನು ಕೊಟ್ಟರು. ಆಮೇಲೆ ಶ್ರೀರಾಮನು ಸುಗ್ರೀವನೇ ಮೊದಲಾದ ಮಿತ್ರರೊಡಗೂಡಿ, ಪುಷ್ಪಕವಿಮಾನವನ್ನೇರಿ, ಅಯೋಧ್ಯಾಭಿಮುಖವಾಗಿ ಹೊರಟು, ಭರದ್ವಾಜಾಶ್ರಮಕ್ಕೆ ಬಂದನು. ಅಷ್ಟರೊಳಗಾಗಿ ಹದಿನಾಲ್ಕು ವರುಷಗಳು ಮುಗಿಯುತ್ತಾ ಬಂದುವು. ಆ ಕಾಲಕ್ಕೆ ಸರಿಯಾಗಿ ತಾನು ಹಿಂತಿರುಗಿ ಬಂದು ಅಯೋಧ್ಯೆಯನ್ನು ಸೇರುವುದಾಗಿ ಭರತನಿಗೆ ಪ್ರತಿಜ್ಞೆಮಾಡಿಕೊಟ್ಟಿದುದನ್ನು ತಪ್ಪಬಾರದೆಂಬ ಸತ್ಯಸಂಧತೆಯಿಂದ,

---

1. ಥಟ್ಟನೆ ಇದ್ದಕ್ಕಿದ್ದ ಹಾಗೆಯೇ ಚಿಗುರುವುದು, ಪುಷ್ಪಿಸುವುದು ಇವೇ ಮೊದಲಾದ ಚಿಹ್ನೆಗಳಿಂದ ಮರಗಿಡಗಳು ಮೊದಲಾದ ಅಚರವಸ್ತುಗಳ ಸಂತೋಷವನ್ನೂ ತಿಳಿಯಬಹುದೆಂದು ಭಾವವು. "ಅಂತಸ್ಸಂಜ್ಞಾ ಭವಂತ್ಯೇತೇ"ಎಂದು ವಿಷ್ಣುಪುರಾಣದಲ್ಲಿ ಹೇಳಲ್ಪಟ್ಟಿರುವಂತೆ ಸ್ಥಾವರಗಳಿಗೂ ಒಳಗೆ ಜ್ಞಾನವುಂಟೆಂದು ಗ್ರಹಿಸಬೇಕು.

ಮೊದಲು ಹನುಮಂತನನ್ನು ಭರತನ ಸಮೀಪಕ್ಕೆ ಕಳುಹಿಸಿಬಿಟ್ಟನು. ಆಮೇಲೆ ಭರದ್ವಾಜಾಶ್ರಮದಿಂದ ಹೊರಟು, ವಿಮಾನದಲ್ಲಿ ಬರುತ್ತಿರುವಾಗ, ಸುಗ್ರೀವನೇ ಮೊದಲಾದವರಿಗೆ ಭರತನ ವೃತ್ತಾಂತಗಳನ್ನು ತಿಳಿಸುತ್ತಾ ನಂದಿಗ್ರಾಮಕ್ಕೆ ಬಂದು ಸೇರಿದನು.

ಹೀಗೆ ಪಿತೃವಾಕ್ಯಪರಿಪಾಲನವನ್ನೂ, ಸುಗ್ರೀವ ವಿಭೀಷಣ ಭರತಾದಿಗಳಿಗೆ ಮಾಡಿಕೊಟ್ಟ ಪ್ರತಿಜ್ಞೆಯನ್ನೂ, ಸ್ವಲ್ಪವೂ ಲೋಪಬಾರದಂತೆ ನಡೆಸಿಕೊಟ್ಟು, ಆ ನಂದಿಗ್ರಾಮದಲ್ಲಿ ಭರತನೇ ಮೊದಲಾದ ತಮ್ಮಂದಿರೊಡಗೂಡಿ ಜಡೆ, ನಾರುಮಡಿ ಮೊದಲಾದ ವೇಷಗಳನ್ನು ತೆಗೆದುಬಿಟ್ಟು, ರಾಜಯೋಗ್ಯವಾದ ವೇಷವನ್ನು ಧರಿಸಿ, ಅಯೋಧ್ಯೆಗೆ ಬಂದು ಸೀತಾದೇವಿಯೊಡನೆ ಸಿಂಹಾಸನವನ್ನೇರಿ ಪಟ್ಟಾಭಿಷಿಕ್ತನಾಗಿ ರಾಜ್ಯಭಾರವನ್ನು ವಹಿಸಿದನು. ರಾಮನ ಅಗಲಿಕೆಯಿಂದ ಕೃಶವಾಗಿದ್ದ ಪ್ರಜೆಗಳ ದೇಹವೆಲ್ಲವೂ ಸಂತೋಷದಿಂದ ಪುನಃ ಉಬ್ಬಿತು. ಸಮಸ್ತ ಪ್ರಜೆಗಳೂ ರಾಮಭಕ್ತಿಪೂರ್ವಕವಾದ ಕರ್ಮಗಳನ್ನೂ, ಆತನ ಶ್ರೇಯೋಭಿವೃದ್ಧಿಗಾಗಿ ಮಾಡಬೇಕಾದ ಇಷ್ಟದೇವತಾ ಪ್ರಾರ್ಥನರೂಪವಾದ ಕರ್ಮಗಳನ್ನೂ ನಡೆಸುತ್ತಿರುವುದರಿಂದ, ಆ ರಾಜ್ಯದಲ್ಲಿ ಆಧಿವ್ಯಾಧಿಗಳಾಗಲಿ, ಕ್ಷಾಮಡಾಮರಾದ್ಯುಪದ್ರವಗಳಾಗಲಿ, [1]ಉಂಟಾಗವು. ತಂದೆತಾಯಿಗಳಿಗೆ ಪುತ್ರಶೋಕವು, ಹೆಂಗಸರಿಗೆ [2]ವೈಧವ್ಯ ದುಃಖವೂ ಆ

---

1. ಇಲ್ಲಿಂದ ಮುಂದೆ ಭವಿಷ್ಯದರ್ಥಗಳನ್ನು ಹೇಳುವುದೇಕೆಂದರೆ, "ಪ್ರಾಪ್ತರಾಜ್ಯಸ್ಯ ರಾಮಸ್ಯ ವಾಲ್ಮೀಕಿರ್ಭಗವಾನೃಷಿಃ | ಚಕಾರ ಚರಿತಂ ಕೃತ್ಸ್ನಂ ವಿಚಿತ್ರಪದಮಾತ್ಮವಾನ್ ||" ಎಂದು, ರಾವಣವಧವಾದಮೇಲೆ ರಾಮನು ಬಂದು ಪಟ್ಟಾಭಿಷಿಕ್ತನಾಗಿ ರಾಜ್ಯಕ್ಕೆ ಆರಂಭಿಸಿದ್ದಾಗಲೇ, ವಾಲ್ಮೀಕಿಯು ಈ ರಾಮಾಯಣವನ್ನು ರಚಿಸಿದುದಾಗಿ ಹೇಳಿರುವುದರಿಂದ, ಆತನ ರಾಜ್ಯಭಾರದಲ್ಲಿ ಮುಂದೆ ಪ್ರಜೆಗಳಿಗೆ ಉಂಟಾಗಬಹುದಾದ ಕ್ಷೇಮಗಳನ್ನೆಲ್ಲಾ ಭವಿಷ್ಯದರ್ಥದಲ್ಲಿ ಸೂಚಿಸಿರುವನೆಂದು ತಿಳಿಯಬೇಕು.

2. ರಾಮರಾಜ್ಯದಲ್ಲಿ ಹೆಂಗಸರಿಗೆ ವೈಧವ್ಯದುಃಖವೇ ಇಲ್ಲವೆಂದರೆ, ಗಂಡಸರಿಗೆ ಸಾವೇ ಇಲ್ಲವೆಂದೆಣಿಸಕೂಡದು. ಸ್ತ್ರೀಯರೆಲ್ಲರೂ ಪಾತಿವ್ರತ್ಯಪರರಾಗಿದ್ದು ಕೊನೆಗೆ ತಮ್ಮ ತಮ್ಮ ಪತಿಗಳೊಡನೆ ಸಹಗಮನಮಾಡುತಿದ್ದರೆಂದೂ, ಅಥವಾ ಬದುಕಿದ್ದರೂ "ಆತ್ಮಾ ವೈ ಪುತ್ರನಾಮಾಸಿ" ಎಂಬಂತೆ, ಪತಿಯ ಅಂಶಭೂತರೇ ಆಗಿರುವ ಮಕ್ಕಳನ್ನು ಪಡೆದು ಸನಾಥರಂತೆಯೇ

ರಾಜ್ಯದಲ್ಲಿ ಎಂದಿಗೂ ಸಂಭವಿಸುವುದಿಲ್ಲ. ಯಾವ ಹೆಂಗಸರೂ ತಮ್ಮ ಪಾತಿವ್ರತ್ಯವನ್ನು ಬಿಡರು. [1]ಬೆಂಕಿ, ಗಾಳಿ, ನೀರು ಇವುಗಳಿಂದ ಯಾರಿಗೂ ಭಯವಿಲ್ಲ. ಜ್ವರದಿಂದಾಗಲಿ, ಹಸಿವಿನಿಂದಲಾಗಲಿ ಯಾರೂ ಸಾಯುವುದಿಲ್ಲ! ಕಳ್ಳರ ಭಯವೆಂಬುದು ಸ್ವಲ್ಪವೂ ಇಲ್ಲದೆ ಸಮಸ್ತ ಪ್ರದೇಶಗಳೂ ಧನಧಾನ್ಯಗಳಿಂದ ತುಂಬಿರುವುವು. ಕೃತಯುಗದಲ್ಲಿದ್ದಂತೆ ಸಮಸ್ತ ಪ್ರಜೆಗಳೂ ನಿತ್ಯ ಸಂತೋಷಿಗಳಾಗಿರುವರು.

ಹೀಗೆ ಧರ್ಮದಿಂದ ರಾಜ್ಯಪರಿಪಾಲನವನ್ನು ಮಾಡುತ್ತಿರುವ ಶ್ರೀರಾಮನು, ಇನ್ನು ಮುಂದೆ ನೂರಾರು ಅಶ್ವಮೇಧಗಳನ್ನೂ ಬಹುಸುವರ್ಣವೆಂಬ ಯಾಗಗಳನ್ನೂ ಮಾಡಿ, ಕೋಟಿಕೋಟಿ ಸಂಖ್ಯೆಯುಳ್ಳ ಗೋದಾನಗಳಿಂದಲೂ, ಅಪರಿಮಿತವಾದ ದ್ರವ್ಯಗಳಿಂದಲೂ, ಸಮಸ್ತ ಬ್ರಾಹ್ಮಣರನ್ನೂ ಸಂತೋಷಪಡಿಸಿ, ಕ್ಷತ್ರಿಯ ವಂಶಗಳನ್ನು ಅನೇಕವಾಗಿ ವೃದ್ಧಿಪಡಿಸುವನು. ಈ ರಾಮನು ತನ್ನ ರಾಜ್ಯಭಾರದಲ್ಲಿ ಚತುರ್ವರ್ಣದವರೂ ತಮ್ಮ ತಮ್ಮ ಧರ್ಮಗಳಿಗೆ ಸ್ವಲ್ಪವೂ ಲೋಪಬಾರದಂತೆ ನಡೆಯುವ ಹಾಗೆ ಮಾಡುವನು. ಈ ರೀತಿಯಾಗಿ ಹನ್ನೊಂದು ಸಾವಿರ ವರ್ಷಗಳ ವರೆಗೆ ಧರ್ಮದಿಂದ ರಾಜ್ಯವನ್ನು ಪಾಲಿಸಿ ಆಮೇಲೆ ಬ್ರಹ್ಮಲೋಕವನ್ನು ಸೇರುವನು. ಪಾಪನಿವಾರಕವಾಗಿಯೂ, ಪುಣ್ಯಹೇತುವಾಗಿಯೂ ಇರುವ ಈ ಶ್ರೀ ರಾಮಚರಿತ್ರವನ್ನು ಭಕ್ತಿಪೂರ್ವಕವಾಗಿ ಯಾರು ಪಠಿಸುವರೋ, ಅವರು ಸಮಸ್ತ ಪಾಪಗಳಿಂದಲೂ ಬಿಡಲ್ಪಡುವರು. ಈ ಚರಿತ್ರವು ವೇದಗಳಿಗೆ ಸಮಾನವಾಗಿ ಬಹಳ ಪರಿಶುದ್ಧವಾದುದು. ಆಯುರ್ವೃದ್ಧಿಕರವಾದ ಈ ರಾಮಾಯಣವನ್ನು ಅನುಸಂಧಾನಮಾಡುವವರು ಇಹಲೋಕದಲ್ಲಿ ಪುತ್ರಪೌತ್ರಾದಿಸಕಲಸಂಪತ್ತು

ಇರುವರೆಂದೂ ತಿಳಿಯಬೇಕು. ಕೌಸಲ್ಯೆ ಮುಂತಾದವರು ದಶರಥನ ಮರಣದಿಂದ ವಿಧವಾತ್ವವನ್ನು ಹೊಂದಿದ್ದರೂ, ರಾಮನೇ ಮೊದಲಾದ ಪುತ್ರರತ್ನಗಳನ್ನು ಪಡೆದಿರುವುದರಿಂದ ವಿಧವೆಯರಲ್ಲವೆಂದು ಕೆಲವರ ಮತವು.

1. ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ತಾಪತ್ರಯಗಳೊಂದೂ ಅಲ್ಲಿ ಇರುವುದಿಲ್ಲವೆಂದು ಭಾವವು. ಬೆಂಕಿ, ಗಾಳಿ, ನೀರು ಮುಂತಾದವುಗಳಿಂದುಂಟಾಗತಕ್ಕ ಭಯವು ಆಧಿದೈವಿಕವು. ದೇಹದಲ್ಲಿ ಉಂಟಾಗತಕ್ಕ ಜ್ವರಾದಿರೋಗಗಳ ಭಯವೇ ಆಧ್ಯಾತ್ಮಿಕವು. ಕಳ್ಳರು ಮೊದಲಾದ ಇತರ ಪ್ರಾಣಿಗಳಿಂದುಂಟಾಗತಕ್ಕ ಭಯವು ಆಧಿಭೌತಿಕವು.

ಗಳನ್ನೂ ಅನುಭವಿಸುವರು. ಇದನ್ನು ಓದುವುದರಿಂದ ಬ್ರಾಹ್ಮಣರಿಗೆ ವಿದ್ಯಾಲಕ್ಷ್ಮಿಯೂ ಕ್ಷತ್ರಿಯರಿಗೆ ರಾಜ್ಯಲಕ್ಷ್ಮಿಯೂ ವೈಶ್ಯರಿಗೆ ಧನಲಕ್ಷ್ಮಿಯೂ ಕೈಗೂಡುವಳು. ಶೂದ್ರರು ಸ್ವಜನರಲ್ಲಿ ವಿಶೇಷ ಗೌರವವನ್ನು ಹೊಂದುವರು.

ಇಲ್ಲಿಗೆ ಮೊದಲನೆಯ ಸರ್ಗವು

ಬ್ರಹ್ಮನು ಪ್ರತ್ಯಕ್ಷನಾಗಿ ವಾಲ್ಮೀಕಿಯನ್ನು ಅನುಗ್ರಹಿಸಿದುದು

[1]ಧರ್ಮಾತ್ಮನಾದ ವಾಲ್ಮೀಕಿ ಮಹಾಮುನಿಯು, ತಾನು ಕೇಳಿದ ಪ್ರಶ್ನೆಗೆ ನಾರದನು ಉತ್ತರಕೊಟ್ಟ ವಿಷಯಗಳನ್ನು ಕೇಳಿ, ತನ್ನ ಶಿಷ್ಯರೊಡಗೂಡಿ ಆ ನಾರದನನ್ನು ಬಹಳವಾಗಿ ಸತ್ಕರಿಸಿದನು. ಆ ಸತ್ಕಾರವನ್ನು ಕೈಕೊಂಡು ನಾರದನು, ಈತನ ಅನುಮತಿಯನ್ನು ಪಡೆದು, ಅಂತರಿಕ್ಷಕ್ಕಭಿಮುಖವಾಗಿ ಹೊರಟು, ದೇವಲೋಕವನ್ನು ಸೇರಿದನು. ಇತ್ತಲಾಗಿ ವಾಲ್ಮೀಕಿಯು ಗಂಗೆಯ ಸಮೀಪದಲ್ಲಿರುವ ತಮಸಾನದಿಯ ತೀರಕ್ಕೆ ಮಧ್ಯಾಹ್ನ ಸ್ನಾನಾರ್ಥವಾಗಿ ಹೋದನು. ಬಹಳ ತಿಳುವಾಗಿ ಕೆಸರಿಲ್ಲದ ಆ ನದಿಯ ನೀರನ್ನು ನೋಡಿ ತನ್ನ ಪಕ್ಕದಲ್ಲಿದ್ದ ಶಿಷ್ಯನನ್ನು ಕುರಿತು, "ಎಲೈ ಭರದ್ವಾಜನೇ ಇದೋ! ಈ ತೀರ್ಥವನ್ನು ನೋಡು! ಎಷ್ಟು ನಿಷ್ಕಲ್ಮಷವಾಗಿರುವುದು! ಸತ್ಪುರುಷರ ಮನಸ್ಸಿನಂತೆ ಬಹಳ ತಿಳುವಾಗಿ, ನೋಡುವುದಕ್ಕೆ ಬಹಳ ಅಂದವಾಗಿರುವುದು! "ಅಪ್ಪ ಮಗು! ಕಮಂಡಲವನ್ನು ಇಲ್ಲಿಡು. ನಾರುಮಡಿಯನ್ನು ನನ್ನ ಕೈಗೆ ಕೊಡು! ಇದು ಬಹಳ ಪುಣ್ಯತೀರ್ಥವು. ಇದರಲ್ಲಿಯೇ ಸ್ನಾನಮಾಡುವೆನು" ಎಂದನು. ವಿಶೇಷವಾದ ಗುರುಭಕ್ತಿಯುಳ್ಳ

---

1. "ಇಷ್ಟಂ ಹಿ ವಿದುಷಾಂ ಲೋಕೇ ಸಮಾಸವ್ಯಾಸಧಾರಣಂ" ಎಂಬಂತೆ ಒಂದೇ ವಿಷಯವನ್ನು ಸಂಗ್ರಹಿಸಿಯೂ ವಿಸ್ತರಿಸಿಯೂ ಹೇಳುವುದು ವಿದ್ವಜ್ಜನರ ಅಭಿಮತವಾದುದರಿಂದ, ಹಿಂದೆ ಸಂಗ್ರಹಿಸಿ ಹೇಳಲ್ಪಟ್ಟ ರಾಮಚರಿತ್ರವನ್ನು ವಿಸ್ತರಿಸಿ ಹೇಳಬೇಕೆಂದು ವಾಲ್ಮೀಕಿಯು ಉದ್ದೇಶಿಸಿದನು. ಅದು ರಸಿಕ ರಂಜಕವಾಗುವಂತೆ ಇರಬೇಕಾದರೆ, ಕವಿ ಕಾವ್ಯ ಕಥಾನಾಯಕರಲ್ಲಿರುವ ವೈಲಕ್ಷಣ್ಯವನ್ನು ತೋರಿಸಬೇಕಾದುದು ಅವಶ್ಯಕವಾದುದರಿಂದ ಮೊದಲು ಈ ಸರ್ಗದಲ್ಲಿ ವಕ್ತೃವೈಲಕ್ಷಣ್ಯವೆಂದರೆ, ಗ್ರಂಥಕರ್ತನಾದ ವಾಲ್ಮೀಕಿಗೆ ಬ್ರಹ್ಮವರಪ್ರಸಾದದಿಂದುಂಟಾದ ಅಸಾಧಾರಣ ಸಾಮರ್ಥ್ಯವೂ ಆತನ ಜ್ಞಾನಾತಿಶಯವೂ, ಸೂಚಿಸಲ್ಪಡುವುವು.

ಆ ಭರದ್ವಾಜನು ಕೈಯಲ್ಲಿದ್ದ ನಾರುಮಡಿಯನ್ನು ಅವನ ಕೈಗೆ ಕೊಡಲು, ಅದನ್ನು ವಾಲ್ಮೀಕಿಯು ಕೈಗೆ ತೆಗೆದುಕೊಂಡನು. ಈತನು ಎಷ್ಟೇ ಜಿತೇಂದ್ರಿಯನಾಗಿದ್ದರೇನು? [1]ವಿಧಿವಶದಿಂದ ಈತನಿಗೆ ಅಂದವಾದ ಆ ವನವನ್ನು ಸುತ್ತಲೂ ನೋಡಿಬರಬೇಕೆಂಬ ಆಸೆ ಹುಟ್ಟಿತು. ಹೀಗೆ ಸಂಚರಿಸುತ್ತಿರುವಾಗ ಸಮೀಪದಲ್ಲಿ ಎರಡು ಕ್ರೌಂಚಪಕ್ಷಿಗಳು ಬಹಳ ಮನೋಹರವಾದ ಧ್ವನಿಯನ್ನು ಮಾಡುತ್ತಾ ಒಂದನ್ನೊಂದಗಲದೆ ನಿರಾತಂಕವಾಗಿ ಸಂಚರಿಸುತ್ತಿದ್ದುದನ್ನು ಕಂಡನು. ಇಷ್ಟರೊಳಗಾಗಿ ಪಾಪಬುದ್ಧಿಯುಳ್ಳ ಒಬ್ಬ ಬೇಡನು ಬಂದು, ಆ ವಾಲ್ಮೀಕಿಯು ನೋಡುತ್ತಿದ್ದ ಹಾಗೆಯೇ ಅವುಗಳಲ್ಲಿ ಒಂದಾದ ಗಂಡುಹಕ್ಕಿಯನ್ನು ಬಿಲ್ಲಿನಿಂದ ಹೊಡೆದನು. ಒಡನೆಯೇ ಆ ಹಕ್ಕಿಯು ರಕ್ತಮಯವಾಗಿ ನೆಲದಲ್ಲಿ ಬಿದ್ದು ಹೊರಳಾಡಿ ಪ್ರಾಣವನ್ನು ಬಿಟ್ಟಿತು. ಈ ಅವಸ್ಥೆಯನ್ನು ನೋಡಿ ಆ ಹೆಣ್ಣು ಹಕ್ಕಿಯು ಬಹಳ ದೀನಸ್ವರದಿಂದ ಕೂಗಿಕೊಳ್ಳುತ್ತಿತ್ತು. ಕೆಂಪಾದ ಶಿಖೆಯಿಂದಲೂ, ತುಂಬಿದ ಗರಿಗಳಿಂದಲೂ ಕೂಡಿ, ತನ್ನನ್ನು ಎಡೆಬಿಡದೆ ಹಿಂಬಾಲಿಸುತ್ತಿದ್ದ ಗಂಡುಹಕ್ಕಿಯು ಬಾಣದಿಂದ ಭೇದಿಸಲ್ಪಟ್ಟು ಬಿದ್ದಿರುವುದನ್ನು ನೋಡಿ ಸಹಿಸಲಾರದೆ ಹೆಣ್ಣು ಹಕ್ಕಿಯು ಬಹಳವಾಗಿ ಗೋಳಾಡಿತು. ಹೀಗೆ ಸತ್ತುಬಿದ್ದ ಗಂಡುಹಕ್ಕಿಯನ್ನೂ, ಅದನ್ನು ನೋಡಿ ಗೋಳಾಡುತ್ತಿರುವ ಹೆಣ್ಣು ಹಕ್ಕಿಯನ್ನೂ ನೋಡಿ, ಬಹಳ ದಯಾರ್ದ್ರಹೃದಯನಾದ ಮತ್ತು ಧರ್ಮಾತ್ಮನಾದ ವಾಲ್ಮೀಕಿಗೆ ಮರುಕ ಹುಟ್ಟಿತು. ಆಗ ಋಷಿಯು ದುಃಖದಿಂದ ಮೈಮರೆತು,

[2]"ಮಾ ನಿಷಾದ ಪ್ರತಿಷ್ಠಾಂ ತ್ವಮಗಮಶ್ಶಾಶ್ವತೀಸ್ಸಮಾಃ |
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್ ||"

---

1. ಇಂದ್ರಿಯಗಳನ್ನು ಜಯಿಸಿದವನಿಗೆ ಈ ವಿಧವಾದ ಆಶೆಯು ಹುಟ್ಟಿದುದು ದೈವಿಕವೆಂದೇ ಗ್ರಹಿಸಬೇಕು. ಸ್ನಾನಯೋಗ್ಯವಾದ ಸ್ಥಳವನ್ನು ಹುಡುಕುವುದಕ್ಕಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದನೆಂದು ಕೆಲವರು ಅಭಿಪ್ರಾಯಪಡುವರು. ಆದರೆ "ಇದಮೇವಾವಗಾಹಿಷ್ಯೇ" ಎಂದು ವಾಲ್ಮೀಕಿಯು ಮೊದಲೇ ಹೇಳಿರುವುದರಿಂದ ಬೇರೆ ಸ್ಥಳವನ್ನು ಹುಡುಕುವುದಕ್ಕೆ ಹೋದನೆಂಬುದು ಸಮಂಜಸವಲ್ಲವು.

2. ಇದರ ಸಾಮಾನ್ಯವಾದ ಅರ್ಥವು ಮೇಲೆಯೇ ಸೂಚಿಸಲ್ಪಟ್ಟಿದೆ. ಆದರೆ ಕೆಲವು ವ್ಯಾಖ್ಯಾನಕರ್ತರು ವಾಲ್ಮೀಕಿಯ ಬಾಯಿಯಿಂದ ಹೊರಟ

"ಎಲೈ ನಿಷಾದನೇ! ಮೋಹದಿಂದ ಮೈಮರೆತಿದ್ದ ಈ ಪಕ್ಷಿದಂಪತಿಗಳಲ್ಲಿ, ಒಂದನ್ನು ನೀನು ಕೊಂದುದರಿಂದ ಅನೇಕ ಸಂವತ್ಸರಗಳವರೆಗೆ

ಮೊಟ್ಟಮೊದಲಿನ ಈ ಶ್ಲೋಕಕ್ಕೇ ಈ ಶಾಪಪರವಾದ ಅರ್ಥವು ಯುಕ್ತವಲ್ಲವೆಂದೂ, ಇದರಿಂದ ವಾಲ್ಮೀಕಿಯು ಭಗವಂತನಿಗೆ ಮಂಗಳಾಶಾಸನವನ್ನು ಮಾಡಿರುವನೆಂದೂ, ಬೇರೆ ವ್ಯಾಖ್ಯಾನವನ್ನು ಮಾಡಿರುವರು. ಹೇಗೆಂದರೆ, ನಿಷಾದಶಬ್ದಕ್ಕೆ "ನಿಷೀದತ್ಯಸ್ಮಿನ್ನಿತಿನಿಷಾದಃ" ಎಂಬ ವ್ಯುತ್ಪತ್ತಿಯಿಂದ ನಿವಾಸವೆಂದರ್ಥವು. "ಮಾ" ಎಂದರೆ ಲಕ್ಷ್ಮಿಯು (ಮಾನಿಷಾದ) ಎಲೈ, ಶ್ರೀನಿವಾಸನೆ! (ಯತ್) ಯಾವ ಕಾರಣದಿಂದ, ಕ್ರೌಂಚಮಿಥುನಾತ್ ರಾವಣಮಂಡೋದರಿಗಳೆಂಬ ರಾಕ್ಷಸ ಮಿಥುನದಿಂದ, (ಕಾಮಮೋಹಿತಂ) ಮನ್ಮಥನಿಂದ ಮರುಳುಮಾಡಲ್ಪಟ್ಟ, ಕಾಮಪರವಶನಾಗಿ ಸೀತೆಯನ್ನು ಅಪಹರಿಸಿದ, (ಏಕಂ) ಒಬ್ಬನಾದ ರಾವಣನನ್ನು, (ಅವಧೀಃ) ಕೊಂದೆಯೋ, ಆ ಕಾರಣದಿಂದ (ಶಾಶ್ವತೀಸ್ಸಮಾಃ) ಅನೇಕ ಕಾಲಗಳವರೆಗೆ, (ಪ್ರತಿಷ್ಠಾಂ) ಮಹಿಮೆಯನ್ನು, ಖ್ಯಾತಿಯನ್ನು (ಅಗಮಃ) ಹೊಂದು, ಈ ಅರ್ಥದಿಂದ ಇಷ್ಟದೇವತೆಯಾದ ಭಗವಂತನಿಗೆ ಮಂಗಳಾಚರಣೆಯನ್ನು ಮಾಡಿರುವನೆಂದು ಭಾವವು.

"ಕಾವ್ಯಾರ್ಥಸೂಚನಂ ಕೈಶ್ಚಿನ್ನಾನ್ದ್ಯಮೇವ ನಿರೂಪ್ಯತೇ" ಎಂಬಂತೆ ವಾಲ್ಮೀಕಿಯು ರಾಮಾಯಣವನ್ನು ರಚಿಸುವುದಕ್ಕೆ ಮೊದಲು ಹೇಳಿದ ಈ ಶ್ಲೋಕದಲ್ಲಿ ಮುಂದಿನ ಕಥೆಗಳೆಲ್ಲವೂ ಸಂಕ್ಷೇಪವಾಗಿ ಸೂಚಿಸಲ್ಪಟ್ಟಿರುವುವೆಂದು ಹೇಳುವರು. ಹೇಗೆಂದರೆ, "ಮಾನಿಷಾದ" ಎಂಬುದರಿಂದ ಲಕ್ಷ್ಮೀದೇವಿಯ ಅಂಶಭೂತೆಯಾದ ಸೀತೆಯನ್ನು ವಿವಾಹಮಾಡಿಕೊಂಡನೆಂಬ ಬಾಲಕಾಂಡದ ಕಥೆಯು ಸೂಚಿಸಲ್ಪಡುವುದು. "ಪ್ರತಿಷ್ಠಾಂ ತ್ವಮಗಮಃ" ಎಂಬುದರಿಂದ ಪಿತೃವಾಕ್ಯಪರಿಪಾಲನದಿಂದ ಖ್ಯಾತಿಯನ್ನು ಹೊಂದಿದವನೆಂಬ ಅಯೋಧ್ಯಾ ಕಾಂಡದ ಕಥೆಯು ಸೂಚಿತವಾಗುವುದು. "ಶಾಶ್ವತೀಸ್ಸಮಾಃ" ಎಂಬುದರಿಂದ ಅನೇಕವರ್ಷಗಳವರೆಗೆ ಅರಣ್ಯವಾಸಮಾಡಿದ ಅರಣ್ಯಕಾಂಡದ ಕಥೆಯು ಸೂಚಿಸಲ್ಪಡುವುದು. "ಕ್ರೌಂಚಮಿಥುನಾತ್" ಎಂಬಲ್ಲಿ "ಕ್ರುಂಚಗತಿ ಕೌಟಿಲ್ಯಾಲ್ಪೀಭಾವಯೋಃ" ಎಂಬ ಅರ್ಥದಿಂದ ಕ್ರುಂಚ್ ಎಂಬ ಧಾತುವಿಗೆ ಕೌಟಿಲ್ಯಾಲ್ಪೀಭಾವಗಳೆಂಬ ಎರಡರ್ಥಗಳಿರುವುದರಿಂದ ಕುಟಿಲರಾದ, ಎಂದರೆ, ತಿರ್ಯಕ್ಕುಗಳಾದ ತಾರಾವಾಲಿಗಳೆಂಬ ಮಿಥುನದಲ್ಲಿ "ಏಕಂ ಕಾಮಮೋಹಿತಂ" ಕಾಮದಿಂದ ಸುಗ್ರೀವನ ಹೆಂಡತಿಯನ್ನು ಅಪಹರಿಸಿದ ವಾಲಿಯನ್ನು ಕೊಂದವ

ಸ್ಥಿರವಾಗಿ ಬದುಕಲಾರೆ” ಎಂದು ಹೇಳಿದನು. ಹೀಗೆ ಕ್ರೌಂಚಪಕ್ಷಿಗಳಲ್ಲಿ

ನೆಂದು ಕಿಷ್ಕಿಂಧಾಕಾಂಡದ ಕಥೆಯು ಸೂಚಿತವಾಗುವುದು. ಕ್ರೌಂಚವೆಂದರೆ ಅಲ್ಪೀಭಾವವೆಂದು ಅರ್ಥವನ್ನು ಮಾಡಿ, “ಕ್ರೌಂಚಮಿಥುನಾತ್” ಎಂದರೆ ಒಬ್ಬರನ್ನೊಬ್ಬರು ಅಗಲಿ ಕೃಶರಾಗಿದ್ದ ಸೀತಾರಾಮರೆಂಬ ಮಿಥುನದಿಂದ (ಏಕಂ) ಸೀತೆಯನ್ನು (ಅವಧೀಃ) ಕೊಂದೆಯೆಂದರೆ, ಕೊಲ್ಲುವಷ್ಟು ಹಿಂಸೆಮಾಡಿದೆಯೆಂದು, ಸುಂದರಕಾಂಡದ ಕಥೆಯು ಸೂಚಿತವಾಗುವುದು. ಕ್ರೌಂಚವೆಂದರೆ ಕುಟಿಲಬುದ್ಧಿಯುಳ್ಳ ಅಥವಾ ಕುಟಿಲಸ್ವರೂಪರಾದ ರಾಕ್ಷಸರು; ಅವರಲ್ಲಿ ರಾವಣ ಮಂಡೋದರಿಗಳೆಂಬ ದಂಪತಿಗಳಿಂದ, ಸೀತೆಯಲ್ಲಿ ಕಾಮಮೋಹಿತನಾದ, ರಾವಣನೆಂಬೊಬ್ಬನನ್ನು ಕೊಂದೆಯೆಂದು ಯುದ್ಧ ಕಾಂಡದ ಕಥೆಯೂ ಸೂಚಿತವಾಗುವುದು. ಕಾಮವೆಂದರೆ ಅಭಿಲಾಷೆಯೆಂದೂ ಅರ್ಥವಿರುವುದರಿಂದ ದಂಡಕಾರಣ್ಯವಾಸಿಗಳಾದ ಋಷಿಪತ್ನಿಯರನ್ನು ನೋಡ ಬೇಕೆಂಬ ಆಶೆಯುಳ್ಳ ಸೀತೆಯನ್ನು (ಅವಧೀಃ) ಪೀಡಿಸಿದೆಯೆಂದು ಉತ್ತರ ಕಾಂಡದ ಕಥೆಯೂ ಕೂಡ ಸೂಚಿಸಲ್ಪಟ್ಟಿದೆ.

ಇದೇ ಕಾವ್ಯಾರ್ಥಸೂಚನೆಯನ್ನು ಮತ್ತೆ ಕೆಲವರು ಬೇರೆ ವಿಧವಾಗಿ ಹೇಳುವರು. (ಸಾದಯತಿ ಪೀಡಯತೀತಿ ನಿಷಾದಃ) ಎಂಬ ವ್ಯುತ್ಪತ್ತಿಯಿಂದ ನಿಷಾದ ಎಂದರೆ ಎಲೈ, ಲೋಕಕಂಟಕನಾದ ರಾವಣನೆ! (ಕ್ರೌಂಚ ಮಿಥುನಾತ್) ಅಲ್ಪೀಭೂತವಾದ ಮಿಥುನದಿಂದ ಎಂದರೆ, ರಾಜ್ಯಭ್ರಂಶ ವನವಾಸ ಕ್ಲೇಶಾದಿಗಳಿಂದ ಬಹಳ ಕೃಶರಾಗಿದ್ದ ಸೀತಾರಾಮರೆಂಬ ಮಿಥುನದಿಂದ (ಏಕಂ) ಒಬ್ಬಳಾದ ಸೀತೆಯನ್ನು, (ಅವಧೀ) ಸಾಧಿಸಿದ ಕಾರಣ, (ಪ್ರತಿಷ್ಠಾಂ) ಬ್ರಹ್ಮವರದಿಂದುಂಟಾದ ಸಮಸ್ತವಿಭವಗಳನ್ನೂ (ಮಾಗಮಃ) ಬಹಳಕಾಲದವರೆಗೆ ಹೊಂದಿರಬೇಡವೆಂದು, ತ್ರಿಲೋಕ ಕಂಟಕನಾದ ರಾವಣನನ್ನು ಶಪಿಸಿದುದರಿಂದ, ಮೂರುಲೋಕಕ್ಕೂ ಕ್ಷೇಮ ವುಂಟಾದುವೆಂಬ ಮಂಗಳವು ವಾಲ್ಮೀಕಿಯ ಬಾಯಿಯಿಂದ ತಾನಾಗಿಯೇ ಹೊರಟಿತೆಂದು ಕೆಲವರ ಮತವು. ಆದರೆ ಕೆಲವರು ಈ ಅರ್ಥವನ್ನು ಮಾಡುವುದು ಯುಕ್ತವಲ್ಲವೆಂದು ಹೇಳುವರು. ಏಕೆಂದರೆ, ರಾವಣನನ್ನು ಕೊಂದು ರಾಮನು ರಾಜ್ಯವನ್ನು ಹೊಂದಿದಮೇಲೆಯೇ, ವಾಲ್ಮೀಕಿಯು ನಾರದನನ್ನು ಕುರಿತು ಪ್ರಶ್ನೆಮಾಡಿರುವುದರಿಂದಲೂ, ಈ ಪ್ರಶ್ನೆಯನ್ನು ಕೇಳಿದ ಮೇಲೆಯೇ ಈ ಶ್ಲೋಕವು ಉಚ್ಚರಿಸಲ್ಪಟ್ಟುದರಿಂದಲೂ, ರಾವಣ ವಧವಾದಮೇಲೆ ಹೇಳಲ್ಪಟ್ಟ ಈ ಶ್ಲೋಕದಲ್ಲಿ, ಲೋಕಕ್ಷೇಮಾರ್ಥವಾಗಿ

ಮರುಕದಿಂದ ಹೇಳಿದ ಈ ಋಷಿಗೆ, ಆಮೇಲೆ ಮನಸ್ಸಿನಲ್ಲಿ ಒಂದುವಿಧವಾದ

ರಾವಣನು ಸಾಯಲೆಂದು ಭವಿಷ್ಯದರ್ಥದಿಂದ ಶಪಿಸಿದನೆಂದು ಹೇಗೆ? ಸರ್ವಜ್ಞ ಳಾದ ಸತ್ಯಸರಸ್ವತಿಯು, ಹಿಂದೆ ನಡೆದುಹೋದ ವಿಷಯವನ್ನು ಮುಂದೆ ನಡೆಯುವ ಹಾಗೆ ಹೇಳುವುದು ಯುಕ್ತವೆ? ಮತ್ತು ಕವಿಯು ತನ್ನ ಬುದ್ಧಿ ಪೂರ್ವಕವಾಗಿಯೇ ಕಾವ್ಯಾರ್ಥವನ್ನು ಸೂಚಿಸುವಹಾಗೆ ಈ ಶ್ಲೋಕವನ್ನು ಹೇಳಿದನೆಂದು ಹೇಳುವುದಕ್ಕೂ ಇಲ್ಲ. 'ಕಿಮಿದಂ ವ್ಯಾಹೃತಂ ಮಯಾ' ಇದೇನು ನಾನು ಹೇಳಿದುದು? ಎಂದರೆ, ತನ್ನ ಬಾಯಿಂದ ಹೊರಟು ದೇನೆಂದು ತಾನೇ ಸಂದೇಹಿಸುತ್ತಿದ್ದನಲ್ಲವೆ? ಅಥವಾ ಅದಕ್ಕೆ "ಇದು ಪದ್ಯವೇ ಗದ್ಯವೇ!" ಎಂದು ವಿತರ್ಕಿಸಿದನೆಂದು ಹೇಳುವುದಕ್ಕೂ ಇಲ್ಲ. ಏಕೆಂದರೆ, "ತದಪ್ಯೇಷ ಶ್ಲೋಕೋಽಭಿಗೀತಃ" ಇತ್ಯಾದಿ ಶ್ರುತಿಗಳಲ್ಲಿ, ಶ್ಲೋಕದ ಪ್ರಸ್ತಾವವಿರುವುದರಿಂದ, ಸರ್ವವೇದಗಳನ್ನೂ ತಿಳಿದ ವಾಲ್ಮೀಕಿಗೆ ಅದು ಶ್ಲೋಕವೆಂಬುದು ತಿಳಿಯದೆ ವಿತರ್ಕಿಸಿದನೆಂದು ಹೇಳುವುದು ಯುಕ್ತವೇ? ನಾರದನು ಹೇಳಿದುದೂ, ಮೊದಲ ಶ್ಲೋಕದ ಸ್ವರೂಪ ವಾಗಿಯೇ ಇದ್ದುದರಿಂದ ಅದನ್ನು ಕೇಳುವಾಗಲೇ ಇದೇನೆಂದು ಸಂದೇಹ ವುಂಟಾಗುತ್ತಿತ್ತಲ್ಲವೆ? ಆದರೆ, ಅದು ಮೊದಲು ವಾಕ್ಯರೂಪವಾಗಿಯೇ ಇತ್ತೆಂದೂ, ಈ ಶ್ಲೋಕವು ಹೊರಟಮೇಲೆಯೇ ಅದೂ ಶ್ಲೋಕರೂಪವಾಗಿ ರಚಿಸಲ್ಪಟ್ಟತೆಂದೂ ಹೇಳುವುದಾದರೆ, ಅದು ಕೇವಲ ಊಹೆಯೇ ಹೊರತು, ಹೀಗೆ ನಿರ್ಣಯಿಸುವುದಕ್ಕೆ ಪ್ರಮಾಣವೇನೂ ಇಲ್ಲ. ಬ್ರಹ್ಮನು ಬಂದು ಉಪದೇಶಿಸಿದಮೇಲೆಯೇ ಕವಿಗೆ ಈ ಕಾವ್ಯವನ್ನು ರಚಿಸಬೇಕೆಂಬ ಬುದ್ಧಿಯು ಹುಟ್ಟಿತೇ ಹೊರತು, ಅದಕ್ಕೆ ಮೊದಲು ಈ ಸೂಚನೆಯೇ ಇರಲಿಲ್ಲವಾದುದ ರಿಂದ, ಕಾವ್ಯಾರ್ಥವನ್ನು ಇದರಲ್ಲಿ ಸೂಚಿಸಿರುವುದು ಹೇಗೆ? ಬೇಡನ ಕೃತ್ಯವು ಅಧರ್ಮವೆಂಬ ಬುದ್ಧಿಯಿಂದ ಹೇಳಿದ ಈ ಶ್ಲೋಕವು, ಈ ಅರ್ಥದಲ್ಲಿ ಪರ್ಯವಸಾನ ಹೊಂದುವುದು ಅಸಂಭವವು. ಆದುದರಿಂದ ಈ ಕೆಳಗಿರುವುದೇ ಇದರ ಯಥಾರ್ಥವಾದ ಭಾವವೆಂದು ತಿಳಿಯಬೇಕು. ವಾಲ್ಮೀಕಿಯು ನಾರದನಿಂದ ರಾಮನ ಚರಿತ್ರವನ್ನು ಕೇಳಿದಮೇಲೆ, ಅದನ್ನೇ ಒಂದು ಕಾವ್ಯವಾಗಿ ರಚಿಸಬೇಕೆಂದು ಯೋಚಿಸಿದುದನ್ನು ಭಗವಂತನಾದ ರಾಮನು ತಿಳಿದು, ತನ್ನ ಚರಿತ್ರವೆಲ್ಲವೂ ವಿಶೇಷವಾಗಿ ಕರುಣರಸಪ್ರಭಾವವಾಗಿಯೇ ಇರುವುದರಿಂದ, ಅತಿಕರುಣಮನಸ್ಸುಳ್ಳವರೇ ಅದನ್ನು ಚೆನ್ನಾಗಿ ರಚಿಸಬಲ್ಲವ ರೆಂದರಿತು, ವಾಲ್ಮೀಕಿಗೆ ಈ ವಿಧವಾದ ಸ್ವಾಭಾವಿಕ ಗುಣವಿರುವುದೇ ಇಲ್ಲವೇ

ಚಿಂತೆಯು ಹುಟ್ಟಿತು. "ಇದೇನು ನಾನು ಹೇಳಿದುದು! ಆಹಾ! ಈ ದುಃಖಾತಿಶಯದಿಂದ ನನಗೇನೂ ತೋರಲಿಲ್ಲ!" ವೆಂದು ಬಹಳವಾಗಿ ಪರಿತಪಿಸಿ, ಆತನು ಮಹಾಪ್ರಾಜ್ಞನಾಗಿಯೂ, ಬುದ್ಧಿವಂತನಾಗಿಯೂ,

---

ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿಯೂ, ತನಗೆ ಮೊದಲು ಭೃಗುವು ಕೊಟ್ಟ ಶಾಪವನ್ನು ಪುನಃ ವಾಲ್ಮೀಕಿಯಿಂದ ತಪ್ಪಿಸಿಕೊಳ್ಳಬೇಕೆಂದೂ, ಆ ಶ್ರೀರಾಮನೇ ಈ ಬೇಡನ ವೇಷದಿಂದ ಬಂದು, ಆ ಋಷಿಯು ನೋಡುತ್ತಿದ್ದಾಗಲೇ ಕ್ರೌಂಚರೂಪದ ರಾಕ್ಷಸನನ್ನು ಕೊಂದನು. ಆಗ ವಾಲ್ಮೀಕಿಗೆ ಬುದ್ಧಿಪೂರ್ವಕವಾಗಿಯೂ, ಅಂತರ್ಯಾಮಿಯಾದ ಭಗವಂತನ ಪ್ರೇರಣೆಯಿಂದಲೂ, ಆ ಬೇಡನಲ್ಲಿ ಕೋಪವೂ, ಆ ಪಕ್ಷಿಯಲ್ಲಿ ದಯೆಯೂ ಹುಟ್ಟಿ, ಮೇಲೆ ಹೇಳಿದಂತೆ ಶಪಿಸಿದನೆಂದು ತಿಳಿಯಬೇಕು. ಆ ಕ್ರೌಂಚವು ರಾಕ್ಷಸನೆಂಬುದು ಹೇಗೆಂದರೆ, ಬ್ರಹ್ಮನಿಂದ ಸಮಸ್ತ ವೃತ್ತಾಂತಗಳೂ ತಿಳಿಯುವ ಹಾಗೆ ವಾಲ್ಮೀಕಿಯು ವರವನ್ನು ಪಡೆದಮೇಲೆ, "ತಸ್ಮಾತ್ತು ಮಿಥುನಾದೇಕಂ" ಎಂದು ಮಾಡಿದ ಶ್ಲೋಕದಲ್ಲಿ "ವೈರನಿಲಯಃ" ಎಂಬ ವಿಶೇಷಣದಿಂದಲೇ ರಾಕ್ಷಸನೆಂಬುದು ಸೂಚಿಸಲ್ಪಟ್ಟಿದೆ. ಹೇಗೆಂದರೆ, ಲೌಕಿಕದೃಷ್ಟಿಯಿಂದ ನೋಡಿದರೂ ಭಗವಂತನಿಗೆ ರಾಕ್ಷಸರಲ್ಲಿ ನಿತ್ಯವೈರವಿರುವುದರಿಂದ, ಅವರನ್ನು ಕುರಿತೇ ವೈರನಿಲಯವೆಂದು ಹೇಳಲ್ಪಟ್ಟಿರುವುದು. ಬೇಡರು ಪಕ್ಷಿಗಳನ್ನು ಕೊಲ್ಲುವುದು ಆಹಾರಾರ್ಥವೇ ಹೊರತು ವೈರದಿಂದಲ್ಲ. ಆದುದರಿಂದ ಕೇವಲ ಪಕ್ಷಿಯನ್ನೂ, ಬೇಡನನ್ನೂ ಕುರಿತು ಹೇಳುವಾಗ, ವೈರನಿಲಯವೆಂಬ ಮಾತು ಒಪ್ಪಲಾರದು. ಈ ಕಾರಣದಿಂದ ಕ್ರೌಂಚವನ್ನು ರಾಕ್ಷಸನೆಂದೂ, ರಾಮನನ್ನು ಬೇಡನೆಂದೂ ಹೇಳುವುದೇ ಯುಕ್ತವಾಗಿದೆ. ಇದುವರೆಗೆ ಹೇಳಿದ ವಿಷಯಗಳೇ ಪದ್ಮಪುರಾಣದಲ್ಲಿ ಶಿವನೂ, ಪಾರ್ವತಿಯೂ ಸಂವಾದಮಾಡುತ್ತಿರುವ ಘಟ್ಟದಲ್ಲಿ, "ಆಹೂಯ ಲಕ್ಷ್ಮಣಂ ಪ್ರಾಹ ರಾಮೋ ರಾಜೀವಲೋಚನಃ। ಶೃಣು ಮೇ ವಚನಂ ಗುಹ್ಯಂ ಸೀತಾಸಂತ್ಯಾಗ ಕಾರಣಮ್॥ ವಾಲ್ಮೀಕಿನಾಥ ಭೃಗುಣಾ ಶಪ್ತೋಽಸ್ಮಿ ಕಿಲ ಲಕ್ಷ್ಮಣ। ತಸ್ಮಾದೇನಾಂ ತ್ಯಜಾಮ್ಯದ್ಯ ಜನೋ ನೈವಾತ್ರ ಕಾರಣಮ್॥" ಎಂಬ ವಾಕ್ಯದಿಂದ, ಸೀತೆಯನ್ನು ಬಿಟ್ಟುಬಿಡುವುದಕ್ಕೆ ಭೃಗುವಾಲ್ಮೀಕಿಗಳ ಶಾಪವೇ ಕಾರಣವಲ್ಲದೆ ಜನಾಪವಾದವು ಕಾರಣವಲ್ಲವೆಂದು ಹೇಳಿರುವನು. ಹೀಗೆಯೇ ಸ್ಕಾಂದಪುರಾಣದ ಪಾತಾಳಖಂಡದಲ್ಲಿಯೂ ಕೂಡ "ಶಾಪೋಕ್ತ್ಯಾ ಹೃದಿ ಸಂತಪ್ತಂ ಪ್ರಾಚೇತಸಮಕಲ್ಮಷಮ್। ಪ್ರೋವಾಚ ವಚನಂ ಬ್ರಹ್ಮಾ ತತ್ರಾಗತ್ಯ

*

ಇದ್ದುದರಿಂದ, ಕೊನೆಗೆ ಮನಸ್ಸನ್ನು ಸ್ಥಿಮಿತಕ್ಕೆ ತಂದುಕೊಂಡು, ಪಕ್ಕ ದಲ್ಲಿದ್ದ ಶಿಷ್ಯನನ್ನು ಕುರಿತು ಈ ಮಾತನ್ನು ಹೇಳುವನು. [1]"ವತ್ಸನೇ! ಈ ಕ್ರೌಂಚಪಕ್ಷಿಯಲ್ಲಿ ದುಃಖಾತಿಶಯದಿಂದ ನಾನು ಈಗ ಹೇಳಿದ ಈ ವಾಕ್ಯವು ನಾಲ್ಕು ಪಾದಗಳುಳ್ಳುದಾಗಿರುವುದು! ಪ್ರತಿಪಾದಗಳಿಗೂ ಸಮ ವಾದ ಅಕ್ಷರಗಳಿರುವುವು! ಲಯಬದ್ಧವಾಗಿರುವುದು! ತಂತ್ರೀವಾದ್ಯ ಗಳೊಡನೆ ಶ್ರುತಿಯೊಡಗೂಡಿ ಹಾಡುವುದಕ್ಕೂ ಯೋಗ್ಯವಾಗಿರುವುದು! ಆದುದರಿಂದ ಇದೊಂದು ವೃತ್ತವೆಂದೇ ತೋರುವುದು" ಎಂದನು. ಹೀಗೆ ಹೇಳಿದ ಮಹರ್ಷಿಯ ವಾಕ್ಯವನ್ನು ಕೇಳಿ, ಶಿಷ್ಯನಿಗೂ ಮಿತಿಮೀರಿದ ಆಶ್ಚರ್ಯವುಂಟಾಯಿತು. ಗುರುವು ಹೇಳಿದ ಆ ವಾಕ್ಯವನ್ನೇ ಪುನಃ ಅವನೂ ಹೇಳಲು, ವಾಲ್ಮೀಕಿಯು ಕೇಳಿ ಬಹಳ ಸಂತೋಷಪಟ್ಟನು.

ಸುಸತ್ಕೃತಃ || ನ ನಿಷಾದಸ್ಸ ವೈ ರಾಮೋ ಮೃಗಯಾಂ ಚರ್ತು ಮಾಗತಃ | ತಸ್ಯ ಸಂವರ್ಣನೇನೈವ ಸುಶ್ಲೋಕಸ್ತ್ವಂ ಭವಿಷ್ಯಸಿ || ಇತ್ಯುಕ್ತ್ವಾ ತಂ ಜಗಾಮಾಶು ಬ್ರಹ್ಮಲೋಕಂ ಸನಾತನಮ್ | ತತಸ್ಸಂ ವರ್ಣಯಾಮಾಸ ರಾಘವಂ ಗ್ರಂಥಕೋಟಿಭಿಃ ||" ಎಂದು, ಈ ಬೇಡನೇ ರಾಮನೆಂದು ವಾಲ್ಮೀಕಿಗೆ ಬ್ರಹ್ಮನು ಹೇಳಿದುದಾಗಿ ಸೂಚಿಸಲ್ಪಟ್ಟಿದೆ. ಆದುದರಿಂದ ಈ ಭಾವವೇ ಸಮಂಜಸವೆಂದು ಗ್ರಹಿಸಬೇಕು. ಕೆಲವರು ಕಾವ್ಯಾರಂಭದಲ್ಲಿ ಶಾಪೋಕ್ತಿಯೇ ಕೂಡದೆಂದು ಅದಕ್ಕೆ ಹಿತೋಪದೇಶ ರೂಪವಾದ ಬೇರೊಂದು ವ್ಯಾಖ್ಯಾನವನ್ನು ಮಾಡಿರುವರು. ಹೇಗೆಂದರೆ (ನಿಷಾದ) ಎಲೈ ಬೇಡನೆ! (ತ್ವಂ ಶಾಶ್ವತೀಸ್ಸಮಾಃ ಪ್ರತಿಷ್ಠಾಮಗಮಃ) ನೀನು ಬಹಳಕಾಲ ಬಾಳಿದವನು. ಎಂದರೆ ಬಹಳ ವಯೋವೃದ್ಧನು. ಆದುದರಿಂದ (ಕ್ರೌಂಚಮಿಥುನಾದೇಕಮವಧೀಃ, ಇತಿ ಯತ್) ಈ ಕ್ರೌಂಚ ಪಕ್ಷಿಗಳಲ್ಲಿ ಒಂದನ್ನು ನೀನು ಕೊಂದುದು ಯಾವುದುಂಟೋ ಅದು (ಮಾಸ್ತು) ಇನ್ನುಮೇಲೆ ಇಲ್ಲದಿರಲಿ! ಎಂದರೆ ಇನ್ನುಮೇಲೆ ಈ ವಿಧವಾದ ಪ್ರಾಣಿಹಿಂಸೆ ಗಳನ್ನು ಮಾಡಬೇಡವೆಂದರ್ಥವು.

1. ಶ್ಲೋಕವೆಂದರೆ ಯಶಸ್ಸೆಂಬ ಅರ್ಥವೂ ಇರುವುದರಿಂದ, "ಶ್ಲೋಕೋ ಭವತು ನಾನ್ಯಥಾ" ನಾನು ದುಃಖದಲ್ಲಿ ಅನುಚಿತವಾದ ಶಾಪ ಕಾರ್ಯಕ್ಕೆ ಪ್ರವರ್ತಿಸಿದರೂ, ನನಗೆ ಇದು ಯಶಸ್ಕರವಾಗಿಯೇ ಇದ್ದು, ಅಪಯಶಸ್ಸನ್ನುಂಟುಮಾಡದಿರಲಿ" ಎಂದೂ ಅರ್ಥ ಮಾಡುವರು.

ಆಮೇಲೆ ವಾಲ್ಮೀಕಿಯು, ಆ ತೀರ್ಥದಲ್ಲಿ ವೈದಿಕಕ್ರಮದಿಂದ ಸ್ನಾನಾದಿಮಾಧ್ಯಾಹ್ನಿಕಗಳನ್ನು ತೀರಿಸಿಕೊಂಡು, ಆ ಶ್ಲೋಕವನ್ನೇ ಬಾರಿ ಬಾರಿಗೂ ಮನಸ್ಸಿನಲ್ಲಿ ನೆನೆಸುತ್ತಾ ಆಶ್ರಮಕ್ಕೆ ಹಿಂತಿರುಗಿದನು. ಆತನ ಶಿಷ್ಯನಾದ ಭರದ್ವಾಜನೂ ಕೂಡ ಬಹಳ ವಿನಯವುಳ್ಳವನೂ, ಶಾಸ್ತ್ರಜ್ಞನೂ ಆದುದರಿಂದ, ತೀರ್ಥಕಲಶವನ್ನು ಕೈಯಲ್ಲಿ ತೆಗೆದುಕೊಂಡು, ಆ ಶ್ಲೋಕವನ್ನೇ ತಾನೂ ಮನನಮಾಡುತ್ತಾ ಗುರುವನ್ನು ಹಿಂಬಾಲಿಸಿ ಬಂದನು. ಹೀಗೆ ವಾಲ್ಮೀಕಿಯು ಶಿಷ್ಯನೊಡಗೂಡಿ ಆಶ್ರಮಕ್ಕೆ ಬಂದು ಸೇರಿದಮೇಲೆ, ದೇವ ಪೂಜಾದಿಧರ್ಮಗಳನ್ನೆಲ್ಲಾ ನಡೆಸಿ, ಸುಖವಾಗಿ ಕುಳಿತು, ಮನಸ್ಸಿನಲ್ಲಿ ಆ ಶ್ಲೋಕವನ್ನೇ ಆಗಾಗ ನೆನೆಸುತ್ತಾ, ಹೊರಗೆ ಮಾತ್ರ ಬೇರೆಬೇರೆ ಪುಣ್ಯ ಚರಿತ್ರಗಳನ್ನು ಹೇಳುತ್ತಾ, ವಿನೋದದಿಂದ ಕಾಲವನ್ನು ಕಳೆಯುತ್ತಿದ್ದನು.

ಹೀಗಿರಲು, ಜಗತ್ಸೃಷ್ಟಿಕರ್ತನಾಗಿ, ಸರ್ವಲೋಕಪ್ರಭುವಾಗಿ, ಮಹಾ ತೇಜಸ್ವಿಯಾಗಿರುವ ಚತುರ್ಮುಖಬ್ರಹ್ಮನು, ಈ ವಾಲ್ಮೀಕಿಯನ್ನು ನೋಡು ವುದಕ್ಕಾಗಿ ತಾನಾಗಿಯೇ ಬಂದನು. ವಾಲ್ಮೀಕಿಯು ಒಡನೆಯೇ ಇದಿರೆದ್ದು ಕೈಮುಗಿದುಕೊಂಡು, ಆಶ್ಚರ್ಯದಿಂದ ಮಾತಾಡಲಾರದೆ ಬೆರಗಾಗಿ ನಿಂತಿದ್ದು, ಆಮೇಲೆ ಆ ಪಿತಾಮಹನನ್ನು ಅರ್ಘ್ಯಪಾದ್ಯಗಳಿಂದ ಸತ್ಕರಿಸಿ, [1]ವಿಧ್ಯುಕ್ತವಾಗಿ ನಮಸ್ಕಾರಮಾಡಿ, ಕುಶಲಪ್ರಶ್ನೆಯನ್ನು ಕೇಳಿ ಪೂಜಿಸಿದನು. ಆಗ ಪೂಜ್ಯ ನಾದ ಬ್ರಹ್ಮನು, ವಾಲ್ಮೀಕಿಯು ತನಗೆ ಮಾಡಿದ ಸತ್ಕಾರಗಳಿಂದ ಬಹಳ ಸಂತೋಷಪಟ್ಟು, ಆತನು ಕೊಟ್ಟ ಆಸನದ ಮೇಲೆ ಕುಳಿತು, ವಾಲ್ಮೀಕಿ ಯನ್ನೂ ಕುಳಿತುಕೊಳ್ಳುವಂತೆ ಹೇಳಿದನು. ಬ್ರಹ್ಮನ ಅಪ್ಪಣೆಯಮೇಲೆ ವಾಲ್ಮೀಕಿಯೂ ಕುಳಿತುಕೊಂಡನು. ಲೋಕಪಿತಾಮಹನಾದ ಬ್ರಹ್ಮನೇ ತಾನಾಗಿ ಬಂದು ಇದಿರಿಗೆ ಕುಳಿತಿದ್ದರೂ, ವಾಲ್ಮೀಕಿಯು ಆ ಪಕ್ಷಿಯ ವಿಷಯ ವನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ "ಆಹಾ! ವೈರಬುದ್ಧಿಯುಳ್ಳ ನೀಚನಾದ ಮತ್ತು ಘಾತುಕನಾದ ಬೇಡನಿಂದ ನಿಷ್ಕಾರಣವಾಗಿ ಆ ಕ್ರೌಂಚಪಕ್ಷಿಯು

---

1. ವಿಧ್ಯುಕ್ತವಾದ ನಮಸ್ಕಾರವಾವುದೆಂದರೆ, "ಮನೋಬುದ್ಧ್ಯಭಿ-ಮಾನೇನ ಸಹನ್ಯಸ್ತಧರಾತಲೇ | ಕೂರ್ಮವಚ್ಚತುರಃ ಪಾದಾನ್ ಶಿರಸ್ತ ತ್ರೈವ ಪಂಚಮಮ್| ಪ್ರದಕ್ಷಿಣ ಸಮೇತೇನ ಹ್ಯೇವಂ ರೂಪೇಣ ಸರ್ವಥಾ| ಅಷ್ಟಾಂಗೇನ ನಮಸ್ಕೃತ್ವಾ ಹ್ಯುಪವಿಶ್ಯಾಗ್ರತೋ ಗುರೋಃ ||" ಎಂಬ ಸಾಷ್ಟಾಂಗನಮಸ್ಕಾರವು.

ಕೊಲ್ಲಲ್ಪಟ್ಟಿತು. ಅಯ್ಯೋ! ಅವನೆಂತಹ ಪಾಪಿಯು!" ಎಂದು ಮನಸ್ಸಿನಲ್ಲಿಯೇ ಬಹಳವಾಗಿ ಸಂಕಟಪಡುತ್ತಾ ಆಶ್ಚರ್ಯದಿಂದ ಆ ಶ್ಲೋಕದ ವಿಷಯವನ್ನೇ ಚಿಂತಿಸುತ್ತಿದ್ದನು. ಆಗ ಬ್ರಹ್ಮನು ಈ ಋಷಿಯನ್ನು ನೋಡಿ ನಕ್ಕು, "ಎಲೈ ಋಷಿಯೇ! ಏತಕ್ಕೆ ಚಿಂತಿಸುವೆ! ನೀನು ರಚಿಸಿದುದು ಶ್ಲೋಕವಲ್ಲದೆ ಬೇರೆಯಲ್ಲ! ಈ ವಾಕ್ಕು ನನ್ನ ಸಂಕಲ್ಪದಿಂದಲೇ ನಿನ್ನ ಬಾಯಿಂದ ಹೊರಟಿರುವುದು. ಎಲೈ ಮುನಿಶ್ರೇಷ್ಠನೇ! ಈ ಛಂದಸ್ಸಿನಿಂದಲೇ ರಾಮನ ಚರಿತ್ರವೆಲ್ಲವನ್ನೂ ಪ್ರಬಂಧರೂಪವಾಗಿ ರಚಿಸು. ನಾರದನು ನಿನಗೆ ಉಪದೇಶಿಸಿದ ಕ್ರಮದಿಂದ [1]ಧಾರ್ಮಿಕನಾಗಿ, ಸಮಸ್ತ ಕಲ್ಯಾಣಗುಣವಿಶಿಷ್ಟನಾಗಿ, ಮಹಾಬುದ್ಧಿವಂತನಾಗಿ, ಧೀರನಾಗಿರುವ ಶ್ರೀ ರಾಮನ ಚರಿತ್ರವನ್ನು ವಿವರಿಸು. ಈ ಕಾರ್ಯಕ್ಕೆ ನೀನೇ ಸಮರ್ಥನು. ಇಷ್ಟೇ ಅಲ್ಲ. ಆ ರಾಮಲಕ್ಷ್ಮಣರೂ, ರಾಕ್ಷಸರೂ, ಭರತಾದಿಗಳೂ, ಸೀತಾದೇವಿಯೂ ಪರೋಕ್ಷದಲ್ಲಿಯೇ ಆಗಲಿ, ಪ್ರತ್ಯಕ್ಷದಲ್ಲಿಯೇ ಆಗಲಿ ನಡೆಸಿದ ಸಮಸ್ತ ವ್ಯಾಪಾರಗಳೂ, ಅವರ ಸಮಸ್ತ ಚರಿತ್ರಗಳೂ ನಿನಗೆ ಚೆನ್ನಾಗಿ ಗೋಚರಿಸಲಿ! ನಾರದನಿಂದ ಹೇಳಲ್ಪಡದ ವಿಷಯಗಳೂ ಕೂಡ ನಿನಗೆ ಸ್ಪಷ್ಟವಾಗಿ ತಿಳಿಯುವುವು. ನೀನು ರಚಿಸಿದ ಕಾವ್ಯಗಳಲ್ಲಿ ಯಾವ ವಿಷಯವೂ ಸುಳ್ಳಾಗಿಯಾಗಲಿ, ದೋಷಯುಕ್ತವಾಗಿಯಾಗಲಿ ಇರದು. ರಾಮಚರಿತ್ರವು ಸಮಸ್ತಪಾಪಗಳನ್ನೂ ಹೋಗಲಾಡಿಸತಕ್ಕುದು. ಕರ್ಣಾನಂದವನ್ನುಂಟು ಮಾಡತಕ್ಕುದು. ಆದುದರಿಂದ ಅದೆಲ್ಲವನ್ನೂ ಶ್ಲೋಕರೂಪವಾಗಿ ರಚಿಸು. ಈ ಭೂಮಿಯಲ್ಲಿ ನದಿಗಳೂ, ಬೆಟ್ಟಗಳೂ ಎಂದಿನವರೆಗೆ ಸ್ಥಿರವಾಗಿ ನಿಂತಿರುವುವೋ, ಅದುವರೆಗೂ ಈ ರಾಮಾಯಣ ಕಥೆಯು ಸಮಸ್ತ ಲೋಕಗಳಲ್ಲಿಯೂ ಪ್ರಚಾರಹೊಂದಿರಲಿ! ಹಾಗೆ ನೀನು ರಚಿಸಿದ ರಾಮಾಯಣವು ಪ್ರಚಾರದಲ್ಲಿರುವವರೆಗೂ, ನೀನು ನನ್ನಿಂದ ಸೃಷ್ಟಿಸಲ್ಪಟ್ಟಿರುವ ಮೇಲಿನ ಮತ್ತು ಕೆಳಗಿನ ಲೋಕಗಳೊಳಗೆಲ್ಲಾ ತಡೆಯಿಲ್ಲದೆ ಸಂಚರಿಸಬಹುದು.

---

1. "ಮಹಾಕುಲೀನತೌಜ್ಜ್ವಲ್ಯಂ ಮಹಾಭಾಗ್ಯಮುದಾರತಾ | ತೇಜಸ್ವಿತಾ ವಿದಗ್ಧತ್ವಂ ಧಾರ್ಮಿಕತ್ವಾದಯೋ ಗುಣಾಃ ||" ಎಂಬಂತೆ, ಈ ಕಾವ್ಯಕ್ಕೆ ಕಥಾನಾಯಕನಾದ ಶ್ರೀರಾಮನಲ್ಲಿ ಮೇಲೆ ಹೇಳಿದ ಲಕ್ಷಣೋಕ್ತವಾದ ಧೀರೋದಾತ್ತಗುಣಗಳೆಲ್ಲವೂ ಇರುವುವೆಂಬುದನ್ನು ಇಲ್ಲಿನ ವಿಶೇಷಣಗಳು ತಿಳಿಸುವುವು.

ಕೊನೆಗೆ ನನ್ನೊಡನೆ ಮುಕ್ತಿಯನ್ನೂ ಹೊಂದುವೆ" ಎಂದು ಹೇಳಿ, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಇವೆಲ್ಲವೂ ವಾಲ್ಮೀಕಿಗೂ, ಅವನ ಶಿಷ್ಯರಿಗೂ ಅತ್ಯಾಶ್ಚರ್ಯವನ್ನುಂಟು ಮಾಡಲು, ಅವರೆಲ್ಲರೂ ಬೆರಗಾಗಿದ್ದರು. ಆ ಶಿಷ್ಯರಲ್ಲಿ ಒಬ್ಬೊಬ್ಬರೂ ಅದನ್ನೇ ಬಾರಿಬಾರಿಗೂ ಗಾನಮಾಡುತ್ತ, ಆಶ್ಚರ್ಯದಿಂದಲೂ ಸಂತೋಷದಿಂದಲೂ ಒಬ್ಬರಿಗೊಬ್ಬರು "ಆಹಾ ! ಇದೇನಾಶ್ಚರ್ಯವು !" ಎಂದು ಆ ವಿಷಯ ವನ್ನೇ ಕುರಿತು ಮಾತಾಡುತ್ತಿದ್ದರು. ಸಮವಾದ ಅಕ್ಷರಗಳುಳ್ಳ ನಾಲ್ಕು ಪಾದಗಳಿಂದ, ವಾಲ್ಮೀಕಿಮುನಿಯು ಗಾನಮಾಡಿದ ಆ ವಾಕ್ಯವನ್ನು ಆತನ ಶಿಷ್ಯರು ಪುನಃ ಪುನಃ ಕೊಂಡಾಡುತ್ತಿದ್ದುದರಿಂದ, ಅದು [1]ಶ್ಲೋಕವೆನಿಸಿತು. (ಆ ವಾಲ್ಮೀಕಿಯು ಕ್ರೌಂಚಪಕ್ಷಿಯಲ್ಲಿ ಮರುಕದಿಂದ, ಸಮವಾದ ಅಕ್ಷರ ಗಳುಳ್ಳ ನಾಲ್ಕು ಪಾದಗಳಿಂದ ಕೂಡಿಸಿ ಹೇಳಿದ ಶೋಕವಾರ್ತೆಯೇ ಶ್ಲೋಕ ರೂಪವಾಗಿ ಪರಿಣಮಿಸಿತು). ಯಾವಾಗಲೂ ಪರಮಾತ್ಮಧ್ಯಾನದಲ್ಲಿರುವ ಆ ವಾಲ್ಮೀಕಿಗೆ ಈ ವಿಧವಾದ ಶ್ಲೋಕಗಳಿಂದಲೇ ರಾಮಾಯಣವೆಲ್ಲವನ್ನೂ ಸಂಪೂರ್ಣವಾಗಿ ರಚಿಸಬೇಕೆಂಬ ಸಂಕಲ್ಪವು ಹುಟ್ಟಿತು. ಅದರಂತೆಯೇ ಕೀರ್ತಿ ಮಂತನಾಗಿಯೂ, ಉತ್ಕೃಷ್ಟವಾದ ಬುದ್ಧಿಚಾತುರ್ಯವುಳ್ಳವನಾಗಿಯೂ ಇರುವ ಆ ವಾಲ್ಮೀಕಿಯು, ಅತ್ಯಂತ ಯಶಸ್ಕರವಾದ ಈ ಕಾವ್ಯವನ್ನು ಉತ್ಕೃಷ್ಟವಾದ ವೃತ್ತಗಳಿಂದಲೂ, ದ್ರಾಕ್ಷಾದಿಪಾಕಗಳಿಂದ ಕೂಡಿದ ಅರ್ಥ ಗಳಿಂದಲೂ, ಮೃದುಮಧುರಗಳಾದ ಪಾದಸಮೂಹಗಳಿಂದಲೂ, ಬಹಳ ಮನೋಹರವಾಗಿರುವಂತೆ, ಸಮವಾದ ಅಕ್ಷರಗಳುಳ್ಳ ನೂರು ಶ್ಲೋಕಗಳಿಂದ ಆಗಲೇ ರಚಿಸಿದನು. ಹೀಗೆ ಲಕ್ಷಣಾನುಗುಣವಾದ ಸಂಧಿಸಮಾಸಗಳಿಂದಲೂ, ಪದಗಳಿಂದಲೂ, ಹೆಚ್ಚು ಕಡಿಮೆಯಿಲ್ಲದೆ ಸಮವಾದ ವಾಕ್ಯಗಳಿಂದಲೂ,

---

1. "ಶೋಕಶ್ಲೋಕತ್ವಮಾಗತಃ" "ಶ್ಲೋಕಶ್ಲೋಕತ್ವಮಾಗತಃ" ಎಂಬ ಎರಡು ಪಾಠಗಳೂ ಉಂಟು. ಈ ಎರಡು ಪಾಠಗಳಿಂದು ತೋರುವ ಅರ್ಥಗಳೆರಡೂ ಮೇಲೆ ವಿವರಿಸಲ್ಪಟಿವೆ. ಎರಡನೆಯ ಪಾದದಲ್ಲಿ "ಪ್ರಾಹುಶ್ಚ ಭೃಶವಿಸ್ಮಿತಾಃ" ಎಂಬ ಹಿಂದಿನ ವಾಕ್ಯದೊಡನೆ ಅನ್ವಯಿಸಿ, ಇದಕ್ಕೆ "ಆ ವಾಲ್ಮೀಕಿಗೆ ಉಂಟಾದ ದುಃಖಾತಿಶಯವು ಒಳಗಡಗಿರಲಾರದೆ ಶ್ಲೋಕ ರೂಪವಾಗಿ ಹೊರಬಿದ್ದಿತೆಂದು ನಾವು ಎಣಿಸುವೆವು" ಎಂದು ಅಲ್ಲಿದ್ದ ಶಿಷ್ಯ ರೆಲ್ಲರೂ ಆಶ್ಚರ್ಯದಿಂದ ಮಾತಾಡಿಕೊಳ್ಳುತ್ತಿದ್ದರೆಂದು ಅರ್ಥ ಮಾಡಬೇಕು.

ಮಧುರವಾದ ಅರ್ಥಗಳಿಂದಲೂ ಕೂಡಿ, ಸಮಸ್ತಜನಗಳಿಂದಲೂ ಉಪಾದೇಯವಾಗಿರುವಂತೆ, ರಾವಣವಧಪ್ರಧಾನವಾಗಿ ತನ್ನಿಂದ ರಚಿತವಾದ ಶ್ರೀರಾಮನ ಚರಿತ್ರವನ್ನು ವಾಲ್ಮೀಕಿಯೇ ಶಿಷ್ಯರಿಗೆ ಹೇಳಿರುವನು. ಆ ಕಾವ್ಯವನ್ನು ಕೇಳಿರಿ!"

ಇಲ್ಲಿಗೆ ಎರಡನೆಯ ಸರ್ಗವು

ಶ್ರೀರಾಮಾಯಣ ವಿಷಯ ಸಂಗ್ರಹವು

ವಾಲ್ಮೀಕಿಯು ಧರ್ಮಪ್ರಚುರವಾದ ರಾಮಚರಿತ್ರವೆಲ್ಲವನ್ನೂ ಪೂರ್ಣವಾಗಿ ನಾರದನಿಂದ ಕೇಳಿದ್ದರೂ, ಆ ಶ್ರೀರಾಮನ ಚರಿತ್ರದಲ್ಲಿ ಇನ್ನೂ ಹೆಚ್ಚು ವಿಷಯಗಳು ಯಾವುದಾದರೂ ಇದ್ದರೆ, ಅದನ್ನೂ ಸೇರಿಸಿ ದೊಡ್ಡ ಕಾವ್ಯವನ್ನು ರಚಿಸಬೇಕೆಂದು ಧ್ಯಾನದೃಷ್ಟಿಯಿಂದ, ಆಲೋಚಿಸುತ್ತ, ಶಾಸ್ತ್ರೋಕ್ತರೀತಿಯಿಂದ ಆಚಮನವನ್ನು ಮಾಡಿ, ಪೂರ್ವಾಗ್ರವುಳ್ಳ ದರ್ಭಾಸನದಲ್ಲಿ ಕುಳಿತು, ಕೈಜೋಡಿಸಿಕೊಂಡು, ಏಕಾಗ್ರಚಿತ್ತನಾಗಿ ಚಿಂತಿಸುತ್ತಿದ್ದನು. ಆಗಲೇ ಆತನಿಗೆ ಬ್ರಹ್ಮನು ಕೊಟ್ಟ ವರಪ್ರಸಾದದಿಂದ ಸಮಸ್ತ ವಿಷಯಗಳೂ ಪ್ರತ್ಯಕ್ಷವಾಗಿ ನಡೆದಂತೆ ಗೋಚರಿಸಿದುವು. ರಾಮಲಕ್ಷ್ಮಣರೂ, ಸೀತೆಯೂ, ರಾಜನಾದ ದಶರಥನೂ, ಕೌಸಲ್ಯೆ ಮೊದಲಾದ ಆತನ ಪತ್ನಿಯರೂ, ಯಾವ ಯಾವ ಕಾರ್ಯಗಳನ್ನು ನಡೆಸಿದರೋ, ಅವೆಲ್ಲವೂ ಸ್ಪಷ್ಟವಾಗಿ ತಿಳಿದುಬಂದುವು. ಅವರವರ ಹಾವಭಾವಗಳು, ನಗೆನೋಟಗಳು, ನಡೆನುಡಿಗಳು ಇವೆಲ್ಲವೂ ಯಥಾಸ್ಥಿತವಾಗಿಯೇ ತೋರಿಬಂದವು. ಹೀಗೆ ಶ್ರೀರಾಮನು ಅಯೋಧ್ಯಾಪಟ್ಟಣದಲ್ಲಿರುವಾಗ ನಡೆದ ವೃತ್ತಾಂತಗಳೆಲ್ಲವೂ ಮನಸ್ಸಿಗೆ ಗೋಚರಿಸಿದಮೇಲೆ, ಸತ್ಯಸಂಧನಾದ ಆತನು ಸೀತಾಲಕ್ಷ್ಮಣರೊಡಗೂಡಿ ವನದಲ್ಲಿ ವಾಸಮಾಡುತ್ತಿದ್ದಾಗ ನಡೆದ ವೃತ್ತಾಂತಗಳೆಲ್ಲವನ್ನೂ ವಾಲ್ಮೀಕಿಯು ಧ್ಯಾನದಿಂದಲೇ ಕಂಡುಕೊಂಡನು. ಹೀಗೆ ಬ್ರಹ್ಮನ ವರಪ್ರಭಾವದಿಂದಲೂ, ತನ್ನ ಯೋಗಶಕ್ತಿಯಿಂದಲೂ, ವಾಲ್ಮೀಕಿಯು ಅಲ್ಲಲ್ಲಿ ನಡೆದ ಸಮಸ್ತ ವೃತ್ತಾಂತಗಳನ್ನೂ ಅಂಗೈನೆಲ್ಲಿಯಂತೆ ಸ್ಪಷ್ಟವಾಗಿ ತಿಳಿದುಕೊಂಡಮೇಲೆ ಆ ಚರಿತ್ರವನ್ನು ರಚಿಸುವುದಕ್ಕೆ ಯತ್ನಿಸಿ, ಅರ್ಥಕಾಮಗಳೆಂಬ ಪುರುಷಾರ್ಥಗಳ ಸ್ವರೂಪವನ್ನು ಅಪ್ರಧಾನವಾಗಿ ಸೂಚಿಸತಕ್ಕುದಾಗಿಯೂ, ಧರ್ಮಮೋಕ್ಷಗಳನ್ನು ಪ್ರಧಾನವಾಗಿ ತಿಳಿಸತಕ್ಕುದಾಗಿಯೂ, ಅನರ್ಘ್ಯಗಳಾದ

ರತ್ನಗಳಿಂದ ತುಂಬಿದ ಮಹಾಸಮುದ್ರದಂತೆ ಎಲ್ಲಾ ಉಪನಿಷತ್ಸಾರಗಳಿಂದ ಪೂರ್ಣವಾಗಿಯೂ ಇರುವ ಶ್ರೀರಘುವಂಶಲಲಾಮನಾದ ರಾಮನ ಚರಿತ್ರವನ್ನು ನಾರದನು ತನಗೆ ಉಪದೇಶಿಸಿದ್ದ ಕ್ರಮದಲ್ಲಿಯೇ ರಚಿಸಿದ್ದನು.

ಇದರಲ್ಲಿ ಮೊದಲು ದಶರಥಚಕ್ರವರ್ತಿಯ ತಪಃಫಲವಾಗಿ ರಾಮರೂಪದಿಂದ ಅವತರಿಸಿದ ವಿಷ್ಣುವಿನ ಅವತಾರರಹಸ್ಯವೂ, ತಾಟಕೆ, ಸುಬಾಹು ಮುಂತಾದವರನ್ನು ನಿಗ್ರಹಿಸುವ ವಿಷಯದಲ್ಲಿ ರಾಮನು ತೋರಿಸಿದ ಮಹಾವೀರ್ಯವೂ, ಆತನಿಗೆ ಪ್ರಜೆಗಳಲ್ಲಿದ್ದ ಅನುರಾಗವೂ, ಆತನಲ್ಲಿ ಪ್ರಜೆಗಳಿಗಿದ್ದ ವಿಶ್ವಾಸವೂ, ಆತನ ತಾಳ್ಮೆ, ಸೌಮ್ಯತೆ, ಸತ್ಯಸಂಧತೆ ಮುಂತಾದ ಸದ್ಗುಣಗಳೂ, ರಾಮಲಕ್ಷ್ಮಣರಿಬ್ಬರಿಗೂ ವಿಶ್ವಾಮಿತ್ರನನ್ನು ಹಿಂಬಾಲಿಸಿಹೋದಾಗ ನಡೆದ ವಿಚಿತ್ರ ವ್ಯಾಪಾರಗಳೂ, ರುದ್ರಧನುಸ್ಸನ್ನು ಮುರಿದು ಸೀತೆಯನ್ನು ವಿವಾಹ ಮಾಡಿಕೊಂಡ ವೃತ್ತಾಂತಗಳೂ. ಆತನಿಗೆ ಪರಶುರಾಮನೊಡನೆ ನಡೆದ ವಿವಾದಗಳೂ, ರಾಮನಲ್ಲಿದ್ದ ಅಸಾಧಾರಣವಾದ ಗುಣಾತಿಶಯಗಳೂ, ಆತನ ಪಟ್ಟಾಭಿಷೇಕ ಪ್ರಯತ್ನಗಳೂ, ಕೈಕೇಯಿಯ ದುಷ್ಟಸ್ವಭಾವವೂ, ಪಟ್ಟಾಭಿಷೇಕಕ್ಕೆ ವಿಘ್ನವುಂಟಾದುದೂ, ರಾಮನಿಗೆ ವನವಾಸಪ್ರಾಪ್ತಿಯೂ, ರಾಮನ ಅಗಲಿಕೆಯಿಂದ ದಶರಥನಿಗೂ ಪ್ರಜೆಗಳಿಗೂ ಉಂಟಾದ ದುಃಖವಿಲಾಪಗಳೂ, ದಶರಥನ ಪರಲೋಕಪ್ರಾಪ್ತಿಯೂ, ರಾಮನು ತನ್ನನ್ನು ಹಿಂಬಾಲಿಸಿ ಬಂದ ಪ್ರಜೆಗಳನ್ನು ಹಿಂದಕ್ಕೆ ಕಳುಹಿಸಿದುದೂ, ಗುಹನೊಡನೆ ಸ್ನೇಹವನ್ನು ಬೆಳೆಸಿದುದೂ ಸುಮಂತ್ರನೆಂಬ ಸಾರಥಿಯ ಪ್ರತ್ಯಾಗಮನವೂ, ರಾಮನು ಗಂಗೆಯನ್ನು ದಾಟಿ, ಭರದ್ವಾಜಾಶ್ರಮವನ್ನು ಸೇರಿ, ಅವನ ಅನುಜ್ಞೆಯಿಂದ ಚಿತ್ರಕೂಟವನ್ನು ಪ್ರವೇಶಿಸಿದುದೂ, ಅಲ್ಲಿ ಶಾಸ್ತ್ರೋಕ್ತವಾಗಿ ಪರ್ಣಶಾಲೆಯನ್ನು ಕಟ್ಟಿಕೊಂಡು ವಾಸಮಾಡುತ್ತಿರುವಾಗ ಭರತನು ಬಂದು ರಾಮನನ್ನು ಪ್ರಾರ್ಥಿಸಿದುದೂ, ರಾಮನು ತಂದೆಗೆ ತಿಲೋದಕವನ್ನು ಬಿಟ್ಟುದೂ, ಭರತನು ರಾಮಪಾದುಕೆಗಳನ್ನು ತಂದು, ಅವುಗಳಿಗೆ ಪಟ್ಟಾಭಿಷೇಕಮಾಡಿ ನಂದಿಗ್ರಾಮದಲ್ಲಿದ್ದುದೂ, ರಾಮನು ದಂಡಕಾರಣ್ಯವನ್ನು ಪ್ರವೇಶಿಸಿದಮೇಲೆ ಅಲ್ಲಿ ನಡೆದ ವಿರಾಧವಧೆ, ಶರಭಂಗದರ್ಶನ, ಸುತೀಕ್ಷ್ಣ್ಣ್ಯಸಮಾಗಮ ಮುಂತಾದ ವಿಶೇಷಗಳೂ, [1]ಸೀತೆಯು ಅನುಸೂಯೆ

1. ಈ ಸರ್ಗದಲ್ಲಿ ರಾಮಾಯಣದ ವಿಷಯಗಳನ್ನು ಸಂಗ್ರಹಿಸಿ ಹೇಳುವುದು ಮಾತ್ರವೇ ಉದ್ದೇಶ್ಯವೇ ಹೊರತು, ಕಥಾಕ್ರಮದಲ್ಲಿ ತಾತ್ಪರ್ಯ

ಯೊಡನೆ ವಾಸಮಾಡುತ್ತಿದ್ದುದೂ, ಅನಸೂಯೆಯು ಅಂಗರಾಗವನ್ನು ಕೊಟ್ಟುದೂ, ಅಗಸ್ತ್ಯದರ್ಶನವೂ, ಜಟಾಯುಸಂಗಮವೂ, ಪಂಚವಟೀ ಪ್ರವೇಶವಾದಮೇಲೆ ನಡೆದ ಶೂರ್ಪನಖಾವೃತ್ತಾಂತವೂ, ಖರದೂಷಣಾದಿಗಳ ವಧೆ, ರಾವಣಾಗಮನ, ಮಾರೀಚಸಂಹಾರ, ಸೀತಾಹರಣ ಮೊದಲಾದ ವೃತ್ತಾಂತಗಳೂ, ರಾಮನ ವಿಲಾಪವೂ, ಜಟಾಯು ವಧವೂ, ಕಬಂಧ ದರ್ಶನವೂ, ಪಂಪಾಗಮನವೂ, ಶಬರಿಯ ದರ್ಶನವೂ, ಹನುಮಂತನೊಡನೆ ಋಷ್ಯಮೂಕಕ್ಕೆ ಹೋದುದೂ, ಸುಗ್ರೀವನೊಡನೆ ಸ್ನೇಹವೂ, ಸಾಲವೃಕ್ಷ ಗಳನ್ನು ಭೇದಿಸುವುದರಿಂದ ಸುಗ್ರೀವನಿಗೆ ನಂಬಿಕೆಯನ್ನು ಹುಟ್ಟಿಸಿದುದೂ, ವಾಲಿಸುಗ್ರೀವರ ಯುದ್ಧದಲ್ಲಿ ವಾಲಿಯನ್ನು ಕೊಂದುದೂ, ಸುಗ್ರೀವನ ಪಟ್ಟಾಭಿಷೇಕವೂ, ತಾರೆಯ ವಿಲಾಪವೂ, ಶರತ್ಕಾಲದಲ್ಲಿ ಸೀತಾನ್ವೇಷಣ ವನ್ನೂ, ದಂಡಯಾತ್ರೆಯನ್ನೂ ಮಾಡುವುದಾಗಿ ಸಂಕೇತಮಾಡಿಕೊಂಡು ಮಳೆಗಾಲವನ್ನು ಅಲ್ಲಿಯೇ ಕಳೆದುದೂ, ಸುಗ್ರೀವನಮೇಲೆ ರಾಮನಿಗೆ ಹುಟ್ಟಿದ ಕೋಪವೂ, ಕಪಿಸೈನ್ಯವನ್ನು ದಿಕ್ಕುದಿಕ್ಕುಗಳಿಗೆ ಹೊರಡಿಸಿದುದೂ, ರಾಮನು ಆಂಜನೇಯನ ಕೈಯಲ್ಲಿ ಗುರುತಿಗಾಗಿ ತನ್ನ ಉಂಗುರವನ್ನು ಕೊಟ್ಟುದೂ, ಜಾಂಬವಂತನು ಸ್ವಯಪ್ರಭೆಯೆಂಬವಳು ವಾಸಮಾಡುತ್ತಿದ್ದ ಗುಹೆಯನ್ನು ನೋಡಿದುದೂ, ಸಂಪಾತಿ ದರ್ಶನವೂ, ಪ್ರಾಯೋಪವೇಶ ಪ್ರಯತ್ನವೂ, ಮಲಯಪರ್ವತವನ್ನೇರಿ ಹನುಮಂತನು ಸಮುದ್ರವನ್ನು ಲಂಘಿಸಿದುದೂ, ಸಮುದ್ರನ ಮಾತಿನಂತೆ ಮೇಲಕ್ಕೆದ್ದುಬಂದ ಮೈನಾಕ ಪರ್ವತವನ್ನು ನೋಡಿದುದೂ, ಸಿಂಹಿಕೆಯೆಂಬವಳ ಸಂಹಾರವೂ, ಲಂಕೆ ಯಲ್ಲಿದ್ದ [1]ಮಲಯಪರ್ವತವನ್ನು ಕಂಡುದೂ, ರಾತ್ರಿಯಲ್ಲಿ ಹನುಮಂತನು ಲಂಕೆಯನ್ನು ಪ್ರವೇಶಿಸಿ ಏಕಾಕಿಯಾಗಿ ಚಿಂತಿಸುತ್ತಿದ್ದುದೂ, ರಾವಣನನ್ನೂ, ಪುಷ್ಪಕವಿಮಾನವನ್ನೂ ನೋಡಿದುದೂ, ಮದ್ಯಪಾನಸ್ಥಳಕ್ಕೆ ಹೋದುದೂ,

---

ವಿಲ್ಲ. ಆದುದರಿಂದಲೇ, ಅಗಸ್ತ್ಯದರ್ಶನವೂ, ಅನುಸೂಯಾಸಹವಾಸವೂ, ಹಿಂದುಮುಂದಾಗಿ ಹೇಳಲ್ಪಟ್ಟಿರುವುದು. ಇನ್ನೂ ಕೆಲವು ಕಡೆಗಳಲ್ಲಿಯೂ ಹೀಗೆಯೇ ಕ್ರಮಭಂಗವಿರುವುದು.

1. ಇದು ಲಂಕೆಗೆ ಆಧಾರವಾದ ಪರ್ವತದ ಒಂದು ಭಾಗವು. ಸಮುದ್ರ ವನ್ನು ದಾಟುವಾಗ ಹನುಮಂತನು ಏರಿದ ಮಲಯವೂ ಬೇರೊಂದುಂಟು. "ಮಲಯಃ ಪರ್ವತಾಂತರೇ, ಪರ್ವತಾಂಶೇ" ಎಂದು ನಿಘಂಟುವಿನಲ್ಲಿದೆ.

ಅಂತಃಪುರದರ್ಶನವೂ, ಅಶೋಕವನಕ್ಕೆ ಹೋಗಿ ಸೀತೆಯನ್ನು ನೋಡಿ, ರಾಮನ ಉಂಗುರವನ್ನು ಆಕೆಗೆ ಕೊಟ್ಟುದೂ, ಪುನಃ ರಾವಣನನ್ನು ನೋಡಿ ದುದೂ, ರಾಕ್ಷಸಸ್ತ್ರೀಯರು ಸೀತೆಯನ್ನು ಹೆದರಿಸುತ್ತಿದ್ದುದೂ, ತ್ರಿಜಟೆಯ ಸ್ವಪ್ನವೂ, ಸೀತೆಯು ಚೂಡಾಮಣಿಯನ್ನು ತೆಗೆದುಕೊಟ್ಟುದೂ, ಹನುಮಂತನು ಅಶೋಕವನದಲ್ಲಿದ್ದ ಮರಗಳೆಲ್ಲವನ್ನೂ ಮುರಿದು, ರಾಕ್ಷಸ ಸ್ತ್ರೀಯರನ್ನೂ ಓಡಿಸಿ, ರಾಕ್ಷಸಭಟರೆಲ್ಲರನ್ನೂ ಕೊಂದು, ಇಂದ್ರಜಿತ್ತಿನ ಬ್ರಹ್ಮಾಸ್ತ್ರದಿಂದ ಕಟ್ಟಲ್ಪಟ್ಟುದೂ, ಲಂಕಾದಹನವೂ, ಲಂಕಾಪಟ್ಟಣದ ಜನರ ಗೋಳಾಟವೂ, ಆಂಜನೇಯನು ಹಿಂತಿರುಗಿ ಸಮುದ್ರವನ್ನು ಲಂಘಿಸಿ ಮಧುವನವನ್ನು ಕೊಳ್ಳೆಹೊಡೆದುದೂ, ಚೂಡಾಮಣಿಯನ್ನು ಕೊಟ್ಟು ರಾಮನನ್ನು ಸಮಾಧಾನಪಡಿಸಿದುದೂ, ರಾಮನು ಸಮುದ್ರತೀರಕ್ಕೆ ಹೋಗಿ, ನಳನಿಂದ ಸೇತುವನ್ನು ಕಟ್ಟಿಸಿ, ಸಮುದ್ರವನ್ನು ದಾಟಿದುದೂ, ರಾತ್ರಿಯಲ್ಲಿ ಲಂಕೆಯನ್ನು ಮುತ್ತಿಗೆ ಹಾಕಿದುದೂ, ವಿಭೀಷಣನೊಡನೆ ಸ್ನೇಹವನ್ನು ಬೆಳೆಸಿ, ಆತನಿಂದ ರಾಕ್ಷಸರ ವಧೋಪಾಯವನ್ನು ತಿಳಿದು ಕೊಂಡುದೂ, ಕುಂಭಕರ್ಣ, ಮೇಘನಾದ ಮುಂತಾದವರ ವಧವೂ, ರಾವಣಸಂಹಾರವೂ, ಸೀತೆಯನ್ನು ಹೊಂದಿದುದೂ, ವಿಭೀಷಣ ಪಟ್ಟಾಭಿ ಷೇಕವೂ, ಪುಷ್ಪಕದಮೇಲೆ ಅಯೋಧ್ಯೆಗೆ ಹೊರಟು, ಭರದ್ವಾಜಾಶ್ರಮಕ್ಕೆ ಬಂದು, ಭರತನ ಬಳಿಗೆ ಆಂಜನೇಯನನ್ನು ಮುಂದಾಗಿ ಕಳುಹಿಸಿದುದೂ, ಭರತನೊಡನೆ ಅಯೋಧ್ಯೆಗೆ ಬಂದುದೂ, ರಾಮನ ಪಟ್ಟಾಭಿಷೇಕವೂ, ಸಮಸ್ತ ಸೈನ್ಯಗಳನ್ನೂ ಅವರವರ ಸ್ಥಾನಕ್ಕೆ ಹಿಂತಿರುಗಿಸಿ ಕಳುಹಿಸಿದುದೂ ರಾಷ್ಟ್ರದ ಪ್ರಜೆಗಳನ್ನೆಲ್ಲಾ ತನ್ನ ಧರ್ಮಪರಿಪಾಲನದಿಂದ ಸಂತೋಷಪಡಿಸಿ ದುದೂ, ಸೀತೆಯನ್ನು ಕಾಡಿಗೆ ಕಳುಹಿಸಿದುದೂ, ಇವೆಲ್ಲವನ್ನೂ ಕ್ರಮವಾಗಿ ವಿವರಿಸಿ, ಮುಂದೆ ನಡೆಯಬಹುದಾದ ಆತನ [1]ಅಲ್ಪಸ್ವಲ್ಪ ಚರಿತ್ರಗಳನ್ನೆಲ್ಲಾ ಉತ್ತರಕಾಂಡದಲ್ಲಿ ಸೇರಿಸಿ, ಈ ರಾಮಾಯಣಗ್ರಂಥವನ್ನು ರಚಿಸಿ ಮುಗಿಸಿದನು.

ಇಲ್ಲಿಗೆ ಮೂರನೆಯ ಸರ್ಗವು

---

1. ಅಲ್ಪಸ್ವಲ್ಪವೆಂಬುದರಿಂದ ಸೀತೆಯನ್ನು ಬಿಡುವುದಕ್ಕೆ ಮೊದಲು ಬಹಳಕಾಲ ರಾಜ್ಯಪರಿಪಾಲನೆ ಮಾಡಿದನೆಂದೂ, ಮೇಲಿನಕಾಲವು ಬಹಳ ಸ್ವಲ್ಪವೆಂದೂ ತಿಳಿದುಬರುವುದು.

ಕುಶಲವರು ರಾಮಾಯಣವನ್ನು ಗಾನಮಾಡಿದುದು.

ರಾಮನು ರಾಜ್ಯಕ್ಕೆ ಬಂದಮೇಲೆಯೇ ಮಹಾತ್ಮನಾದ ವಾಲ್ಮೀಕಿಯು ಈ ರಾಮಾಯಣವನ್ನೆಲ್ಲಾ ವಿಚಿತ್ರವಾದ ಶಬ್ದಾಲಂಕಾರಗಳಿಂದಲೂ, ಅರ್ಥಾಲಂಕಾರಗಳಿಂದಲೂ, ಕೂಡಿರುವಂತೆ, ಬಹಳ ಮನೋಹರವಾಗಿ ರಚಿಸಿದನು. ಹೀಗೆ ರಚಿಸಿದ ರಾಮಾಯಣದಲ್ಲಿ ಇಪ್ಪತ್ತುನಾಲ್ಕುಸಾವಿರ ಶ್ಲೋಕಗಳೂ, ಐನೂರು ಸರ್ಗಗಳೂ, ಆರು ಕಾಂಡಗಳೂ ಇದ್ದುವು. ಇದಲ್ಲದೆ ರಾಮಪಟ್ಟಾಭಿಷೇಕವಾದಮೇಲೆ ಸೀತೆಯು ಭೂಪ್ರವೇಶಮಾಡುವವರೆಗೂ ನಡೆದ ಕಥೆಗಳೆಲ್ಲವೂ ಉತ್ತರಕಾಂಡವೆಂಬ ಮತ್ತೊಂದು ಭಾಗವಾಗಿ ರಚಿಸಲ್ಪಟ್ಟಿತು. ಅದಕ್ಕೂ ಮುಂದೆ ನಡೆದ ಭವಿಷ್ಯಚ್ಚರಿತ್ರಗಳೆಲ್ಲವನ್ನೂ ಬೇರೆಯಾಗಿ ವಿವರಿಸಿದನು. ಹೀಗೆ ತನ್ನಿಂದ ರಚಿತವಾದ ಈ ಮಹಾಕಾವ್ಯವನ್ನು ಮೊದಲು ಯಾರಿಗೆ ಉಪದೇಶಿಸಬೇಕೆಂದು ಪರಮಾತ್ಮಧ್ಯಾನಪರನಾಗಿ ಈ ವಾಲ್ಮೀಕಿಯು ಚಿಂತಿಸುತ್ತಿರಲು, ಆ ಕಾಲಕ್ಕೆ ಸರಿಯಾಗಿ ಒಂದೇ ವಯಸ್ಸುಳ್ಳ ಮಹಾತೇಜಸ್ವಿಗಳಾದ ಕುಶಲವರೆಂಬ ರಾಜಕುಮಾರರಿಬ್ಬರೂ ಬಂದು, ಈತನ ಪಾದಗಳನ್ನು ಹಿಡಿದು ನಮಸ್ಕರಿಸಿ, "ಸ್ವಾಮಿ! ನಾವು ಅದನ್ನು ಕಲಿಯಬಲ್ಲೆವು" ಎಂದು ಪ್ರಾರ್ಥಿಸಿದರು. ಇವರಿಬ್ಬರೂ ರಾಜಕುಮಾರರಾಗಿದ್ದರೂ, ಮುನಿವೇಷವನ್ನು ಧರಿಸಿ ಆಶ್ರಮದಲ್ಲಿಯೇ ವಾಸಮಾಡುತ್ತಿದ್ದುದರಿಂದ, ಗುರುಶುಶ್ರೂಷೆಯೆಂಬ ಧರ್ಮವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಇಬ್ಬರೂ ಗಾನವಿದ್ಯೆಯಲ್ಲಿ ಚತುರರು. ಅವಳಿಮಕ್ಕಳಾದುದರಿಂದ, ಇವರಿಬ್ಬರ ಆಕಾರವೂ, ರೂಪವೂ, ಶರೀರವೂ ಒಂದೇ ಸಮವಾಗಿದ್ದುವು. ಬಹಳ ಬುದ್ಧಿಶಾಲಿಗಳಾಗಿಯೂ, ವೇದಾರ್ಥಗಳನ್ನು ತಿಳಿಯುವುದರಲ್ಲಿ ಆಸೆಯುಳ್ಳವರಾಗಿಯೂ ಇದ್ದ ಈ [1]ಬಾಲಕರಿಬ್ಬರನ್ನೂ ಕಂಡು ವಾಲ್ಮೀಕಿಯು, ತಾನು ಮಾಡಿದ ಗ್ರಂಥವನ್ನು ಉಪದೇಶಹೊಂದುವುದಕ್ಕೆ ಇವರೇ ಅರ್ಹರೆಂದು ನಿಶ್ಚಯಿಸಿಕೊಂಡನು.

---

1. ರಾಮನು ರಾಜ್ಯಕ್ಕೆ ಬಂದು ಅದನ್ನು ಪರಿಪಾಲಿಸುತ್ತಿರುವಾಗ ರಚಿಸಲ್ಪಟ್ಟ ಈ ರಾಮಾಯಣವನ್ನು ಉಪದೇಶಹೊಂದುವುದಕ್ಕೆ ತಕ್ಕ ಶಿಷ್ಯರಿಲ್ಲದೆ, ವಾಲ್ಮೀಕಿಯು ನಿರೀಕ್ಷಿಸುತ್ತಿದ್ದಾಗ, ಕೆಲವು ದಿವಸಗಳಮೇಲೆ ಕುಶಲವರಿಬ್ಬರೂ ಹುಟ್ಟಿದರೆಂದು ಇದರಿಂದ ಸೂಚಿತವಾಗುವುದು. ರಾಮನು ಇದನ್ನು ತಿಳಿದೇ ವಾಲ್ಮೀಕ್ಯಾಶ್ರಮದಲ್ಲಿ ಸೀತೆಯನ್ನು ಬಿಟ್ಟದ್ದನೆಂದೂ ತಿಳಿಯಬೇಕು.

ರಾಮಾಯಣವೆಂಬ ಹೆಸರನ್ನು ಹೊಂದಿದ್ದರೂ ವಿಶೇಷವಾಗಿ ಸೀತೆಯ ಚರಿತ್ರೆಯನ್ನೊಳಕೊಂಡು [1]ರಾವಣಸಂಹಾರವೇ ಪ್ರಧಾನವಾಗಿವುಳ್ಳ ಆ ಕಾವ್ಯವೆಲ್ಲವನ್ನೂ ಆಮೂಲಾಗ್ರವಾಗಿ ಆ ಬಾಲಕರಿಗೆ ಉಪದೇಶಿಸಿ, ಅವರಿಂದ ಗಾನಮಾಡಿಸಿದನು. ಆ ಬಾಲಕರೂ ಕೂಡ ಸಂಗೀತಶಾಸ್ತ್ರದ ಮರ್ಮವನ್ನು ಚೆನ್ನಾಗಿ ಬಲ್ಲವರಾದುದರಿಂದ, [2]ನವರಸಭರಿತವಾದ ಆ ಕಾವ್ಯವನ್ನು, ಷಡ್ಜಾದಿ ಸಪ್ತಸ್ವರಗಳಿಂದಲೂ, ಮಂದ್ರಾದಿಗಳಾದ ಮೂರು ಸ್ಥಾಯಿಗಳಿಂದಲೂ, ತ್ರ್ಯಶ್ರ ಚತುರಶ್ರ ಮಿಶ್ರಗಳೆಂಬ ಮೂರು ಪ್ರಮಾಣಗಳಿಂದಲೂ, ಕೂಡಿರುವಂತೆ, ಶ್ರುತಿಲಯಬದ್ಧವಾಗಿ ರಾಗಮೂರ್ಛೆಗಳ ಸ್ಥಾನಗಳನ್ನು ತಿಳಿದು, ಇಂಪಾದ ಸ್ವರದಿಂದ ಒಂದೇ ಶಾರೀರವುಳ್ಳ ಇಬ್ಬರೂ ಕೂಡಿ ಮೊದಲಿಂದ ಕೊನೆಯವರೆಗೂ ಹಾಡಿದರು. ಈ ಸಹೋದರರಿಬ್ಬರೂ ರಾಮದೇಹವೆಂಬ ಅಚ್ಚಿನಲ್ಲಿ ಎರಕಹುಯ್ದಿಳಿಸಿದ ಎರಡು ವಿಗ್ರಹಗಳಂತೆಯೂ ಸಾಕ್ಷಾದ್ಗಂಧರ್ವರಂತೆಯೂ, ರೂಪಲಕ್ಷಣಗಳಿಂದ ಕೂಡಿದವರಾಗಿದ್ದರು. ಆ ಆಶ್ರಮದಲ್ಲಿ ಋಷಿಗಳೂ, ಬ್ರಾಹ್ಮಣರೂ, ಸಾಧುಗಳೂ, ಸಭೆಯಲ್ಲಿ ಸೇರಿದ್ದ ಕಾಲಗಳಲ್ಲಿ, ವಾಲ್ಮೀಕಿಯು ತಮಗೆ ಉಪದೇಶಮಾಡಿದಂತೆಯೇ ಧರ್ಮಪ್ರಚುರವಾದ ಆ ಕಾವ್ಯವನ್ನು ಆಗಾಗ ವಾಚೋವಿಧೇಯವಾಗಿ ಹಾಡುತ್ತಿದ್ದರು.

ಒಂದಾನೊಂದು ಕಾಲದಲ್ಲಿ ಶ್ರೀರಾಮನ ಅಶ್ವಮೇಧಕ್ಕಾಗಿ ಬಂದಿದ್ದ ಮಹರ್ಷಿಗಳೆಲ್ಲರೂ ಹೋಮಕಾರ್ಯಗಳನ್ನು ಮುಗಿಸಿಕೊಂಡಮೇಲೆ,

---

1. ಮಾಘ ಕಾವ್ಯವು ಶಿಶುಪಾಲವಧವೆಂಬ ಹೆಸರಿನಿಂದ ಕೃಷ್ಣಚರಿತ್ರವನ್ನು ವರ್ಣಿಸಿದುದು ಹೇಗೋ ಹಾಗೆಯೇ ಈ ಕಾವ್ಯವೂ ರಾವಣವಧವೆಂಬ ಹೆಸರಿನಿಂದ ರಾಮಚರಿತ್ರವನ್ನು ಅಪ್ರಧಾನವಾಗಿಯೂ, ಸೀತಾಚರಿತ್ರವನ್ನು ಪ್ರಧಾನವಾಗಿಯೂ ವರ್ಣಿಸುವುದೆಂದು ಗ್ರಹಿಸಬೇಕು.

2. "ಶೋಕಶ್ಲೋಕತ್ವಮಾಗತಃ" ಎಂಬುದರಿಂದ ಈ ಕಾವ್ಯವು ಶೋಕರಸಪ್ರಧಾನವಾದುದೆಂದು ಕೆಲವರು ಹೇಳುವರು. ಮತ್ತೆ ಕೆಲವರು "ರಾವಣಸ್ಯ ವಧಂ ಕೃತ್ಸ್ನಂ" ಎಂಬುದಾಗಿ ರಾವಣವಧಕ್ಕೆ ಪ್ರಾಧಾನ್ಯವು ಹೇಳಲ್ಪಟ್ಟಿರುವುದರಿಂದ ವೀರರಸಪ್ರಧಾನವಾದುದೆಂದು ಹೇಳುವರು. ಇನ್ನು ಕೆಲವರು "ಸೀತಾಯಾಶ್ಚರಿತಂ ಮಹತ್" ಎಂದು ಸೀತಾವೃತ್ತಾಂತವನ್ನೇ ಮುಖ್ಯವಾಗಿ ಹೇಳಿರುವುದರಿಂದ ಶೃಂಗಾರರಸಪ್ರಧಾನವಾದ ಕಾವ್ಯವೆನ್ನುವರು.

ಪರಮಾತ್ಮಧ್ಯಾನಪರರಾಗಿ ಸುಖಾಸನದಲ್ಲಿ ಕುಳಿತಿರುವಾಗ, ಸರ್ವಲಕ್ಷಣ ಸಂಪನ್ನರಾದ ಬಾಲಕರು ಇವರ ಮುಂದೆ ಅದನ್ನು ಹಾಡಲು, ಋಷಿಗಳೆಲ್ಲರೂ ಅತ್ಯಾಶ್ಚರ್ಯಪಟ್ಟು ಆನಂದಬಾಷ್ಪವನ್ನು ಸುರಿಸುತ್ತಾ, "ಭಲೆ, ಭಲೆ!" ಎಂದು ಕೊಂಡಾಡಿದರು. ಹೀಗೆ ಋಷಿಗಳೆಲ್ಲರೂ ಪರಮಾನಂದಭರಿತರಾಗಿ ಆ ಮಕ್ಕಳನ್ನು ನೋಡಿ "ಆಃ! ಇವರ ಗಾನವು ಅತ್ಯದ್ಭುತವಾಗಿರುವುದು! ಅದರಲ್ಲಿಯೂ ಶ್ಲೋಕಗಳು ಕರ್ಣಾಮೃತಪ್ರಾಯವಾಗಿರುವುವು! ಇವೆಲ್ಲವೂ ಬಹುಕಾಲಕ್ಕೆ ಹಿಂದೆ ನಡೆದುಹೋದ ಚರಿತ್ರಗಳಾಗಿದ್ದರೂ, ಈಗ ಕಣ್ಣೆದುರಿಗೆ ನಡೆಯುವಂತೆಯೇ ತೋರುತ್ತಿರುವುದು." ಆಯಾ ಕಥಾಸಂದರ್ಭಗಳಿಗೆ ತಕ್ಕ ಭಾವಗಳನ್ನು ತೋರಿಸುತ್ತಾ, ಇಂಪಾದ ಸ್ವರಗಳೊಡಗೂಡಿ ಹಾಡುತ್ತಿರುವ ಇವರ ಗಾನವು ಎಷ್ಟು ಮನೋಹರವಾಗಿರುವುದು" ಎಂದು ಒಬ್ಬೊಬ್ಬರೂ ಶ್ಲಾಘಿಸುತ್ತಿದ್ದರು. ಹೀಗೆ ಸಂತೋಷಪಟ್ಟ ಋಷಿಗಳಲ್ಲಿ ಒಬ್ಬನು, ಅವರಿಗೆ ತಾನು ಕೈಯಲ್ಲಿ ಹಿಡಿದಿದ್ದ ಕಲಶವನ್ನು ಬಹುಮಾನವಾಗಿ ಕೊಟ್ಟನು. ಹಾಗೆಯೇ ಮತ್ತೊಬ್ಬನು ನಾರುಮಡಿಯನ್ನೂ, ಇನ್ನೊಬ್ಬನು ಕೃಷ್ಣಾಜಿನ ವನ್ನೂ, ಒಬ್ಬನು ಮೌಂಜಿಯನ್ನೂ ಒಬ್ಬನು ಕಮಂಡಲುವನ್ನೂ, ಕೆಲವರು ಜನಿವಾರವನ್ನೂ, ಮತ್ತೆ ಕೆಲವರು ಅತ್ತಿಯ ಎಲೆಗಳಿಂದ ಮಾಡಲ್ಪಟ್ಟ ತಮ್ಮ ಯೋಗಾಸನಗಳನ್ನೂ, ಕೆಲವರು ಜಪಮಾಲೆಗಳನ್ನೂ ಕೊಟ್ಟರು. ಮತ್ತೆ ಕೆಲವರು ದೀರ್ಘಾಯುಷ್ಯವಂತರಾಗಿರಬೇಕೆಂದು ಅವರನ್ನು ಆಶೀರ್ವದಿ ಸಿದರು. ಅಲ್ಲಿನ ಸಮಸ್ತಜನರೂ ಇವರನ್ನು ನೋಡಿ ವಾಲ್ಮೀಕಿಮುನಿಯಿಂದ ವಿಸ್ತಾರವಾಗಿ ರಚಿಸಲ್ಪಟ್ಟು, ಕವಿಗಳಿಗೆ ಮಾರ್ಗದರ್ಶಕವಾದ ಈ ಇತಿಹಾಸವು ಒಂದೇಕ್ರಮದಿಂದ ಪೂರ್ತಿಯನ್ನು ಹೊಂದಿರುವುದು! ಆಹಾ! ಏನಾಶ್ಚ ರ್ಯವು! ಆಯುಷ್ಕರವಾಗಿ, ಸಮಸ್ತ ಶ್ರೇಯಸ್ಸುಗಳಿಗೂ ಕಾರಣವಾಗಿ, ಸಮಸ್ತಶಾಸ್ತ್ರಾರ್ಥಗಳಿಂದ ಕೂಡಿ, ಕಿವಿಗಳಿಗೆ ಇಂಪಾದ ಈ ಕಾವ್ಯವನ್ನು ಗಾನ ಶಾಸ್ತ್ರದಲ್ಲಿ ನಿಪುಣರಾದ ನೀವು ಬಹಳ ಚೆನ್ನಾಗಿ ಹಾಡಿದಿರಿ!" ಎಂದು ಬೀದಿ ಬೀದಿಗಳಲ್ಲಿಯೂ ಕೊಂಡಾಡುತ್ತಿದ್ದರು.

ಇದನ್ನು ಯಜ್ಞದೀಕ್ಷೆಯಲ್ಲಿದ್ದ ಶ್ರೀರಾಮನು ಭರತನಿಂದ ಕೇಳಿ, ಆ ಮಕ್ಕಳನ್ನು ಅರಮನೆಗೆ ಕರೆತಂದು ಅನೇಕ ವಿಧದಲ್ಲಿ ಸತ್ಕರಿಸಿ, ಸುವರ್ಣ ಮಯವಾದ ದಿವ್ಯಸಿಂಹಾಸನದಲ್ಲಿ ತಾನು ಕುಳಿತುಕೊಂಡು, ಮಂತ್ರಿ ಗಳಿಂದಲೂ, ತಮ್ಮಂದಿರಿಂದಲೂ ಪರಿವೇಷ್ಟಿತನಾಗಿ, ಈ ಇಬ್ಬರು ಕುಮಾರ

ರನ್ನು ನೋಡಿ, ತನ್ನ ಮೂವರು ತಮ್ಮಂದಿರನ್ನೂ ಕುರಿತು, ಒಂದಾನೊಂದು ಮಾತನ್ನು ಹೇಳಿದನು. "ದೇವತೆಗಳಂತೆ ಮಹಾ ವರ್ಚಸ್ವಿಗಳಾದ ಈ ಬಾಲಕರಿಬ್ಬರೂ, ವಿಚಿತ್ರವಾದ ಶಬ್ದಾರ್ಥಾಲಂಕಾರಗಳಿಂದ ಕೂಡಿದ ಒಂದು ಉಪಾಖ್ಯಾನವನ್ನು ಹಾಡುವರು. ಅದನ್ನು ನೀವು ಕೇಳಬೇಕು" ಎಂದು ಹೇಳಿ, ಆ ಮಕ್ಕಳನ್ನು ಗಾನಮಾಡುವಂತೆ ಹೇಳಿದನು. ಆ ಮಕ್ಕಳೂ ಕೂಡ ಶ್ರುತಿಲಯಬದ್ಧವಾಗಿ ಇಂಪಾದ ಸ್ವರದಿಂದಲೂ, ಸ್ಪಷ್ಟವಾದ ಅರ್ಥದಿಂದಲೂ ಕೂಡಿರುವಂತೆ ಗಾನಮಾಡಿದರು. ಆ ಗಾನವು ಸಭಿಕರೆಲ್ಲರಿಗೂ ಕರ್ಣಾಮೃತ ಪ್ರಾಯವಾಗಿ ರೋಮಾಂಚವನ್ನು ಹುಟ್ಟಿಸಿತು. ಅಲ್ಲಿದ್ದ ಸಮಸ್ತ ಜನರ ಮನಸ್ಸಿಗೂ, ಅದಕ್ಕಾಶ್ರಯವಾದ ಹೃದಯಕ್ಕೂ ಅತ್ಯಾನಂದವನ್ನುಂಟು ಮಾಡಿತು. ಈ ಇಬ್ಬರು ಕುಮಾರರೂ ಮುನಿವೇಷವನ್ನು ಧರಿಸಿದ್ದರೂ ರಾಜಲಕ್ಷಣಗಳಿಂದ ಕೂಡಿದವರಾಗಿಯೂ, ಗಾಯಕರಾಗಿದ್ದರೂ ಮಹಾತಪಸ್ವಿಗಳಾಗಿಯೂ ತೋರುತ್ತಿದ್ದರು! ಆಗ ರಾಮನು ಸಭಿಕರನ್ನು ನೋಡಿ, "ಈ ಚರಿತ್ರವಾದರೋ ಸೀತಾವೃತ್ತಾಂತದೊಡಗೂಡಿ [1]ಮಹಾಮಹಿಮೆಯುಳ್ಳದಾಗಿ, ಪತ್ನೀವಿಯೋಗದಿಂದ ಮರುಗುತ್ತಿರುವ ನನಗೆ ಪ್ರಾಣವನ್ನು ನಿಲ್ಲಿಸುವಂತಿರುವುದು. ಅಂತಹ ಮಹಾಚರಿತ್ರವನ್ನು ಇವರು ಹಾಡುತ್ತಿರುವರು.

---

1. ಈ ಚರಿತ್ರವು ಸೀತಾವೃತ್ತಾಂತವನ್ನು ತಿಳಿಸುವುದರಿಂದಲೇ ಮಹಾ ಮಹಿಮೆಯುಳ್ಳದೆಂದು ರಾಮನು ಹೇಳಿದನೆಂದೆಣಿಸಬೇಕು. ಅದಕ್ಕಾಗಿಯೇ ಹಿಂದೆ ಸೀತಾಚರಿತ್ರವೇ ಪ್ರಧಾನವಾಗಿಉಳ್ಳ ಕಾವ್ಯವೆಂದು ಹೇಳಲ್ಪಟ್ಟಿತು. ತನ್ನ ಚರಿತ್ರವನ್ನು ತಾನೇ ಮಹಾಮಹಿಮೆಯುಳ್ಳದೆಂದು ಹೇಳಿದುದಾಗಿ ಅಭಿಪ್ರಾಯಪಡುವುದು ಯುಕ್ತವಲ್ಲ. ಧೀರೋದಾತ್ತನಾಯಕನಾದ ರಾಮನಲ್ಲಿ ಆತ್ಮಪ್ರಶಂಸಾರೂಪವಾದ ದೋಷವು ಹೇಳಲ್ಪಟ್ಟಂತಾಗುವುದು. ಸೀತೆಯ ಅಗಲಿಕೆಯಿಂದ ಕೃಶನಾದ ರಾಮನಿಗೆ ಅವಳ ಗುಣವರ್ಣನವನ್ನು ಕೇಳುತ್ತಿರುವುದರಿಂದ ಆಪ್ಯಾಯನವುಂಟಾಗುವುದೆಂದು ಹೇಳಿದುದಾಗಿ ತಿಳಿಯಬೇಕು. ವಿರಹಿಗಳಿಗೆ ನಾಯಿಕಾವೃತ್ತಾಂತವು ಪ್ರೀತಿಕರವಲ್ಲವೆ? ಯಾರೂ ತನ್ನ ಕಥೆಯನ್ನೇ ತನಗೆ ಮೇಲುಂಟುಮಾಡತಕ್ಕುದೆಂದು ಹೇಳಲಾರರು. ಈ ರಾಮಾಯಣದಲ್ಲಿ ಸೀತಾಚರಿತ್ರವೇ ಪ್ರಧಾನವೆಂಬುದನ್ನು ನಿರೂಪಿಸತಕ್ಕ ಒಂದು ಚಾಟುಶ್ಲೋಕವೂ ಉಂಟು. ಅವುದೆಂದರೆ, "ಪ್ರಾತ-ರ್ದ್ಯೂತಪ್ರಸಂಗೇನ ಮಧ್ಯಾಹ್ನೇ ಸ್ತ್ರೀಪ್ರಸಂಗತಃ। ರಾತ್ರೌ ಚೌರ್ಯ ಪ್ರಸಂಗೇನ ಕಾಲೋ ಗಚ್ಛತಿ ಧೀಮತಾಮ್ ॥" ಎಂದರೆ, ದುರ್ಜನರಂತೆಯೇ

ನಾವೆಲ್ಲರೂ ಬಹಳ ಗಮನವಿಟ್ಟು ಕೇಳುತ್ತಿರಬೇಕೆಂದು ಆ ಮಕ್ಕಳಿಗೆ ವಿಶೇಷ ವಾಗಿ ಉತ್ಸಾಹವನ್ನುಂಟುಮಾಡುತ್ತಿದ್ದನು. ಈ ಕೊಂಡಾಟದ ಮಾತು ಗಳಿಂದ ಆ ಬಾಲಕರೂ ಬಹಳ ಉತ್ಸಾಹವುಳ್ಳವರಾಗಿ, ಮಾರ್ಗವೆಂಬ ಆಲಾಪನ ಕ್ರಮವನ್ನನುಸರಿಸಿ, ನಾನಾವಿಧವಾದ ರಾಗಗಳಿಂದ ಕರ್ಣಾಮೃತವಾಗಿ ಹಾಡಿದರು. ಶ್ರೀರಾಮನೂ ಸಭಿಕರ ನಡುವೆ ಕುಳಿತು, ಅತ್ಯಾದರವನ್ನು ತೋರಿಸುತ್ತಾ ಆ ಗಾನಾನಂದವನ್ನನುಭವಿಸುತ್ತಿದ್ದನು.

ಇಲ್ಲಿಗೆ ನಾಲ್ಕನೆಯ ಸರ್ಗವು.

ಅಯೋಧ್ಯಾಪುರ ವರ್ಣನವು.

[1]ಮನುಪ್ರಜಾಪತಿ ಮೊದಲುಗೊಂಡು, ಯಾವ ರಾಜಸಂತತಿಯವರು ಭಾಗ್ಯಸಮೃದ್ಧವಾದ ಈ ಸಮಸ್ತಭೂಮಂಡಲವನ್ನೂ ತಮ್ಮ ಭುಜಬಲ

ಸತ್ಪುರುಷರೂ ಕೂಡ ಬೆಳಗಿನ ಕಾಲವನ್ನೆಲ್ಲಾ ದ್ಯೂತಪ್ರಸಕ್ತಿಯಿಂದಲೂ, ಮಧ್ಯಾಹ್ನಕಾಲವನ್ನು ಸ್ತ್ರೀ ಪ್ರಸಂಗದಿಂದಲೂ, ರಾತ್ರಿ ಕಾಲವನ್ನೆಲ್ಲಾ ಚೌರ್ಯಪ್ರಸಕ್ತಿಯಿಂದಲೂ ಕಳೆಯುತ್ತಿರುವರೆಂದರ್ಥವು. ಇದರಲ್ಲಿರುವ ಚಮತ್ಕಾರವೇನೆಂದರೆ, ಸತ್ಪುರುಷರು ಬೆಳಿಗ್ಗೆ ದ್ಯೂತಪ್ರಧಾನವಾದ ಭಾರತ ವನ್ನೂ, ಮಧ್ಯಾಹ್ನಕಾಲದಲ್ಲಿ ಸೀತಾಚರಿತ್ರ ಪ್ರಧಾನವಾದ ರಾಮಾಯಣ ವನ್ನೂ, ರಾತ್ರಿಕಾಲದಲ್ಲಿ ಕೃಷ್ಣಚರಿತ್ರ ಪ್ರಧಾನವಾದ ಭಾಗವತವನ್ನೂ ಪಾರಾಯಣ ಮಾಡುತ್ತಾ ಕಾಲವನ್ನು ಕಳೆಯುವರೆಂದು ಮುಖ್ಯಭಾವವು.

1. ಈ ಸರ್ಗದಿಂದಲೇ ರಾಮಾಯಣ ಕಥೆಗೆ ಆರಂಭವು. ಇದರ ಹಿಂದಿನ ವಿಷಯಗಳೆಲ್ಲ ಉಪೋದ್ಘಾತಗಳೆನಿಸುವುವು. ಆದರೆ ರಾಮಾಯಣವನ್ನು ಕುಶ ಲವರಿಗೆ ಉಪದೇಶಿಸಿದುದೂ, ಅವರು ಅದನ್ನು ಗಾನಮಾಡಿದುದೂ, ಇವೆಲ್ಲವೂ ವಾಲ್ಮೀಕಿಯು ರಾಮಾಯಣವನ್ನೆಲ್ಲಾ ರಚಿಸಿ ಪೂರೈಸಿದ ಮೇಲೆಯೇ ನಡೆದ ವಿಷಯಗಳಾಗಿರುವುದರಿಂದ, ಅದಕ್ಕೆ ಮೊದಲೇ ಆ ಸರ್ಗ ಗಳಿರುವುದು ಹೇಗೆಂಬ ಆಕ್ಷೇಪಣೆಗೆ ಅವಕಾಶವುಂಟಾಗಬಹುದಲ್ಲವೆ ? ಇದಕ್ಕಾಗಿ ತ್ರಿಕಾಲಜ್ಞನಾದ ವಾಲ್ಮೀಕಿಯು, ಮುಂದೆ ನಡೆಯಬಹುದಾದ ಈ ವಿಷಯ ಗಳನ್ನು ಮೊದಲೇ ಸೇರಿಸಿಟ್ಟಿರಬಹುದೆಂದು ಕೆಲವರು ಸಮಾಧಾನವನ್ನು ಹೇಳುವರು. ಆದರೆ "ವಾಲ್ಮೀಕಿರ್ಭಗವಾನೃಷಿಃ| ಚಕಾರ ಚರಿತಂ ಕೃತ್ಸ್ನಂ ರಾಮಾಯಣಮನುತ್ತಮಂ" ಇತ್ಯಾದಿ ವಾಕ್ಯಗಳನ್ನು ನೋಡಿದರೆ, ವಾಲ್ಮೀ ಕಿಯು ಆತ್ಮಪ್ರಶಂಸೆಮಾಡಿಕೊಂಡಿರುವನೆಂಬ ದೋಷಕ್ಕೆ ಆಸ್ಪದವಾಗುವುದು.

ದಿಂದ ವಶಪಡಿಸಿಕೊಂಡು, ಏಕಾಧಿಪತ್ಯದಿಂದ ಆಳುತ್ತಿದ್ದರೋ, ಯಾವ ಸಂತತಿಯಲ್ಲಿ ಹುಟ್ಟಿದ ಸಗರಚಕ್ರವರ್ತಿಯು ತನ್ನ ಅರುವತ್ತುಸಾವಿರ ಮಕ್ಕಳೊಡಗೂಡಿ ಜೈತ್ರಯಾತ್ರೆ ಮಾಡುತ್ತಿದ್ದು, ಮಹಾಸಾಗರಗಳನ್ನು ನಿರ್ಮಿಸಿ ಪ್ರಸಿದ್ಧನಾದನೋ, ಅಂತಹ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಶ್ರೀರಾಮನ ಚರಿತ್ರವಾದ ರಾಮಾಯಣವನ್ನು ಆಮೂಲಾಗ್ರವಾಗಿ ವರ್ಣಿಸುವೆನು. ಧರ್ಮಾರ್ಥಕಾಮಗಳೆಂಬ ಪುರುಷಾರ್ಥಗಳನ್ನು ಕೊಡತಕ್ಕ ಈ ಮಹಾಕಾವ್ಯವನ್ನು ಎಲ್ಲರೂ ನಿರ್ಮತ್ಸರರಾಗಿ ಕೇಳಬೇಕು !

ಸರಯೂನದೀತೀರದಲ್ಲಿ ನಿತ್ಯಸಂತೋಷಿಗಳಾದ ಅನೇಕ ಜನಗಳಿಂದ ತುಂಬಿ ಧನ-ಧಾನ್ಯ ಸಮೃದ್ಧಿಗಳಿಂದ ಕೂಡಿದ ವಿಸ್ತಾರವಾದ ಕೋಸಲವೆಂಬ ದೇಶವೊಂದುಂಟು. ಅದರಲ್ಲಿ ಲೋಕಪ್ರಸಿದ್ಧವಾದ ಅಯೋಧ್ಯೆಯೆಂಬ ಪಟ್ಟಣವಿರುವುದು. ಇದನ್ನು ಮೊದಲು ಮನುಚಕ್ರವರ್ತಿಯು ತನ್ನ ಮನಸ್ಸಿನಿಂದ ನಿರ್ಮಿಸಿದನು. ಈ ಮಹಾಪಟ್ಟಣವು ಹನ್ನೆರಡು ಯೋಜನಗಳ ಉದ್ದವುಳ್ಳದಾಗಿಯೂ, ಮೂರು ಯೋಜನ ಅಗಲವುಳ್ಳದಾಗಿಯೂ, ಭಾಗ್ಯಸಮೃದ್ಧವಾಗಿಯೂ ಇರುವುದು. ಇಲ್ಲಿ ವಿಸ್ತಾರವಾದ ಅನೇಕ ರಾಜಮಾರ್ಗಗಳುಂಟು. ಅವೆಲ್ಲವೂ ಯಾವಾಗಲೂ ಸಾಲುಮರಗಳಿಂದಲೂ, ಪುಷ್ಪೋಪಹಾರಗಳಿಂದಲೂ, ಜಲಸೇಚನದಿಂದಲೂ ಶೋಭಿಸುವುವು. ಈ ಪಟ್ಟಣದಲ್ಲಿ ದಶರಥಚಕ್ರವರ್ತಿಯು ವೈವಸ್ವತಮನುವಿನಂತೆ ಧರ್ಮದಿಂದ

ಆದುದರಿಂದ ವಾಲ್ಮೀಕಿಯ ಶಿಷ್ಯರಲ್ಲಿ ಯಾವನೋ ಒಬ್ಬನು ರಾಮಾಯಣವೆಲ್ಲವನ್ನೂ ಗುರುಮುಖದಿಂದ ಕೇಳಿ, ಅದರ ವೈಭವವನ್ನು ಜನರಿಗೆ ತಿಳಿಸುವುದಕ್ಕಾಗಿ ಹಿಂದಿನ ಮೂರು ಸರ್ಗಗಳನ್ನೂ ಮಾಡಿ, ಇದರೊಡನೆ ಸೇರಿಸಿಟ್ಟಿರಬಹುದೆಂದು ಕೆಲವರು ಊಹಿಸಿರುವರು. ಈ ಕಾರಣದಿಂದಲೇ ಹಿಂದೆ ಎರಡನೆಯ ಸರ್ಗದ ಕೊನೆಯಲ್ಲಿ "ರಘುವರಚರಿತಂ ಮುನಿಪ್ರಣೀತಂ ದಶಶಿರಸಶ್ಚ ವಧಂ ನಿಶಾಮಯಧ್ವಂ" ಎಂದು ಹೇಳಲ್ಪಟ್ಟಿರುವುದು. ಇದಕ್ಕೆ "ವಾಲ್ಮೀಕಿ ಮಹಾಮುನಿಯಿಂದ ರಚಿಸಲ್ಪಟ್ಟಿರುವ ಕಾವ್ಯವನ್ನು ನೀವೆಲ್ಲರೂ ಕೇಳಿರಿ" ಎಂದು, ಜನರನ್ನು ಕುರಿತು ಸಂಬೋಧಿಸಿದ ಹಾಗೆ ತಿಳಿಯಬೇಕು. ಈ ಮೇಲಿನ ವಾಕ್ಯವು ವಾಲ್ಮೀಕಿಯ ಬಾಯಿಂದಲೇ ಹೊರಟಿರುವುದಾದರೆ, ತನ್ನಿಂದ ಪ್ರಣೀತವಾದುದೆಂದು ಹೇಳಲ್ಪಡುತ್ತಿತ್ತೇ ಹೊರತು "ಮುನಿಪ್ರಣೀತಂ" ಎಂದಿರಲಾರದೆಂಬ ಕಾರಣಗಳನ್ನೂ ಊಹಿಸಬಹುದು.

ಪ್ರಜಾಪಾಲನವನ್ನು ಮಾಡುತ್ತ, ತನ್ನ ರಾಜ್ಯವನ್ನು ವಿಶೇಷವಾಗಿ ಹೆಚ್ಚಿಸಿಕೊಂಡು ಅಮರಾವತಿಯಲ್ಲಿ ದೇವೇಂದ್ರನಂತೆ ವಿಶೇಷ ವೈಭವದಿಂದಿರುತ್ತಿದ್ದನು. ಆ ಪುರದ ಹೊರಬಾಗಿಲುಗಳೆಲ್ಲವೂ ಎತ್ತರವಾಗಿ, ಅಂದವಾದ ಮತ್ತು ಬಲವಾದ ಕಡೆಗಳಿಂದ ಕೂಡಿರುವುವು. ಅಂಗಡಿಬೀದಿಗಳೆಲ್ಲವೂ ಪ್ರತ್ಯೇಕ ಪ್ರತ್ಯೇಕವಾಗಿ ಸಮಸ್ತವಸ್ತುಗಳಿಂದಲೂ ತುಂಬಿರುವುವು. ಯಂತ್ರಶಾಲೆಗಳೂ, ಆಯುಧಶಾಲೆಗಳೂ, ಅಸಂಖ್ಯಾತವಾಗಿರುವುವು. ಚತುರರಾದ ಶಿಲ್ಪಿಗಳೂ, [1]ವಂದಿಗಳೂ, ಮಾಗಧರೂ, ವಿಶೇಷವಾಗಿ ಇದರಲ್ಲಿ ತುಂಬಿರುವರು. ಎಲ್ಲಿ ನೋಡಿದರೂ, ಕಾಂತಿಸಮೃದ್ಧವಾಗಿರುವುದು. ಎತ್ತರವಾದ ಅಟ್ಟಲೆಗಳೂ, ಅದರ ಮೇಲೆ ಏರಿಸಲ್ಪಟ್ಟಿರುವ ಫಿರಂಗಿಗಳೂ ಶತ್ರುಗಳಿಗೆ ಭಯವನ್ನುಂಟುಮಾಡತಕ್ಕವುಗಳಾಗಿರುವುವು. ಹೆಂಗಸರ ನಾಟಕಶಾಲೆಗಳೂ, ಹೂತೋಟಗಳೂ, ಮಾವಿನತೋಪುಗಳೂ, ನೋಡುವವರಿಗೆ ಅತ್ಯಾನಂದಕರವಾಗಿರುವುವು. ದೊಡ್ಡ ದೊಡ್ಡ ಗೋಪುರಗಳೂ, ಪ್ರಾಕಾರಗಳೂ, ಕೋಟೆಗಳೂ ಕಂಗೊಳಿಸುತ್ತಿರುವುವು. ಅದು ಶತ್ರುಗಳಿಂದ ದಾಟುವುದಕ್ಕಸಾಧ್ಯವಾದ ಆಳವಾದ ಅಗುಳಿನಿಂದ ಸುತ್ತಲ್ಪಟ್ಟಿರುವುದು. ಆನೆಗಳು, ಕುದುರೆಗಳು, ಒಂಟೆಗಳು, ಪಶುಗಳು, ಹೇಸರಕತ್ತೆಗಳು ಮುಂತಾದ ಮೃಗಜಾತಿಗಳೆಲ್ಲವೂ ಅದರಲ್ಲಿ ವಿಶೇಷವಾಗಿ ತುಂಬಿರುವುವು. ಕಪ್ಪವನ್ನು ಕೊಡುವುದಕ್ಕಾಗಿ ಬಂದಿರುವ ಅನೇಕ ಸಾಮಂತರಾಜರಿಂದಲೂ, ವ್ಯಾಪಾರಕ್ಕಾಗಿ ದೇಶದೇಶಗಳಿಂದ ಬಂದಿರುವ ವರ್ತಕಸಮೂಹದಿಂದಲೂ, ಆ ಪಟ್ಟಣವು ಯಾವಾಗಲೂ ನಿಬಿಡವಾಗಿರುವುದು. ರತ್ನದಿಂದ ಕೆತ್ತಲ್ಪಟ್ಟ ಅರಮನೆಗಳಿಂದಲೂ, ಅನೇಕ ಕ್ರೀಡಾಪರ್ವತಗಳಿಂದಲೂ, ಉಪ್ಪರಿಗೆಗಳಿಂದಲೂ ಕೂಡಿ, ಅದು ಇಂದ್ರನ ಅಮರಾವತೀ ಪಟ್ಟಣದಂತೆಯೇ ನೇತ್ರಾನಂದಕರವಾಗಿರುವುದು. ಮತ್ತು ಅಲ್ಲಲ್ಲಿ ವಿಚಿತ್ರವಾದ ಅರಮನೆಗಳು ಪ್ರಕಾಶಿಸುತ್ತಿರುವುದರಿಂದ, ನೆತ್ತದ ಹಲಗೆಯಂತೆ ಸಮನಾದ ಬೀದಿಗಳಿಂದಲೂ, ಹೆಚ್ಚುತಗ್ಗಿಲ್ಲದ ನೆಲದಿಂದಲೂ ಮನೋಹರವಾಗಿರುವುದು. ಅಲ್ಲಿನ ಸ್ತ್ರೀಯರೊಬ್ಬೊಬ್ಬರೂ ಸೌಂದರ್ಯಶಾಲಿನಿಯರಾಗಿಯೇ ಇರುವರು. ಅಲ್ಲಿ ಸಮಸ್ತ ರತ್ನಗಳೂ ತುಂಬಿರುವುವು. ಅಲ್ಲಿನ

1. ಸಭೆಯಲ್ಲಿ ರಾಜರ ವಂಶಾವಳಿಗಳನ್ನೂ ಬಿರುದುಗಳನ್ನೂ ಹೊಗಳುವವರು ವಂದಿಗಳು. ಬೆಳಗ್ಗೆ ಸುಪ್ರಭಾತವನ್ನು ಹೇಳಿ ರಾಜರನ್ನು ನಿದ್ರೆಯಿಂದ ಎಚ್ಚರಗೊಳಿಸುವವರು ಮಾಗಧರು.

ಮನೆಗಳೆಲ್ಲವೂ ದೇವವಿಮಾನಗಳಂತಿರುವುವು. ಎಲ್ಲಿ ನೋಡಿದರೂ ಗೃಹಸ್ಥರ ಮನೆಗಳು ದಟ್ಟವಾಗಿ ತುಂಬಿರುವುವು. ನಿರ್ಜನವಾಗಿ ವಾಸಯೋಗ್ಯವಲ್ಲದ ಸ್ಥಳವು ಸ್ವಲ್ಪಮಾತ್ರವೂ ಇಲ್ಲ. ಎಲ್ಲಿ ನೋಡಿದರೂ ಬತ್ತದ ಪೈರುಗಳೂ, ಕಬ್ಬಿನ ಗದ್ದೆಗಳೂ ಕಾಣುವುವು. ಅಲ್ಲಿನ ನೀರು ಕಬ್ಬಿನ ರಸದಂತೆ ಬಹಳ ರುಚಿಯುಳ್ಳುದಾಗಿರುವುದು. ವೀಣೆ, ವೇಣು, ಮೃದಂಗ ಮೊದಲಾದ ಮಂಗಳ ವಾದ್ಯಗಳು ಅಲ್ಲಿ ಯಾವಾಗಲೂ ಧ್ವನಿ ಮಾಡುತ್ತಿರುವುವು. ಭೂಮಂಡಲದಲ್ಲೆಲ್ಲಾ ಎಣೆಯಿಲ್ಲದ ಸೌಂದರ್ಯದಿಂದ ಕೂಡಿ, ಸ್ವರ್ಗಲೋಕದಲ್ಲಿ ಸಿದ್ಧರು ತಮ್ಮ ತಪೋಮಹಿಮೆಯಿಂದ ಪಡೆದ ದಿವ್ಯವಿಮಾನಗಳಂತೆ ಕಾಣುತ್ತಿರುವ ಉಪ್ಪರಿಗೆಗಳಿಂದ ಕಂಗೊಳಿಸುತ್ತಿರುವುದು. ರಾಜರೂ, ಪಂಡಿತರೂ ಅಲ್ಲಿ ಅಸಂಖ್ಯಾತರಾಗಿರುವರು. ಅಸ್ತ್ರವಿದ್ಯೆಯಲ್ಲಿ ನಿಪುಣರಾದ ಅನೇಕ ಮಹಾರಥರು ವಾಸಿಸುತ್ತಿರುವರು. ಇವರು ಎಣೆಯಿಲ್ಲದ ಸಾಮರ್ಥ್ಯವುಳ್ಳವರಾದರೂ, ಅಸಹಾಯರಾಗಿರುವವರನ್ನಾಗಲಿ, ಮುದುಕರನ್ನಾಗಲಿ, ಬಹಳ ಬಾಲಕರನ್ನಾಗಲಿ, ಸಂತತಿಗೆ ಒಬ್ಬನೇ ಮಗನಾಗಿ ಹುಟ್ಟಿರುವವನನ್ನಾಗಲಿ, ಇದಿರಿಸತಕ್ಕವರಲ್ಲ. ಕಣ್ಣಿದಿರಿಗೆ ಬಾರದೆ ಶಬ್ದವನ್ನೇ ಗುರಿನೋಡಿ ಹೊಡೆಯಬೇಕಾದವನನ್ನಾಗಲಿ, ಯುದ್ಧದಲ್ಲಿ ಬೆನ್ನು ಕೊಟ್ಟು ಓಡಿದವನನ್ನಾಗಲಿ ಕುರಿತು ಬಾಣವನ್ನು ಪ್ರಯೋಗಿಸುತ್ತಿರಲಿಲ್ಲ. ಸಿಂಹ, ಹುಲಿ, ಕರಡಿ ಮುಂತಾದ ಕೊಬ್ಬಿದ ಕ್ರೂರಮೃಗಗಳು ಕಾಡಿನಲ್ಲಿ ಹೆಚ್ಚಿ ದೇಶಕ್ಕೆ ಹಿಂಸೆಯುಂಟಾದಾಗ, ಅವುಗಳನ್ನು ಶಸ್ತ್ರಗಳಿಂದಲೂ, ಬಾಹುಬಲದಿಂದಲೂ ಇದಿರಿಸಿ ಕೊಲ್ಲತಕ್ಕ ವೀರರು ಇಲ್ಲಿ ಅನೇಕವಾಗಿದ್ದರು. ಹೀಗೆ ಮಹಾವೀರರೇ ಅಲ್ಲದೆ ಆಹಿತಾಗ್ನಿಗಳಾಗಿಯೂ, ಗುಣಶಾಲಿಗಳಾಗಿಯೂ, ವೇದ ವೇದಾಂಗಗಳನ್ನು ಚೆನ್ನಾಗಿ ತಿಳಿದವರಾಗಿಯೂ, ಅನೇಕ ಶಾಸ್ತ್ರಾರ್ಥಗಳನ್ನು ಉಪದೇಶಿಸತಕ್ಕವರಾಗಿಯೂ, ಸತ್ಯಸಂಧರಾಗಿಯೂ, ದಾನಶೀಲರಾಗಿಯೂ, ಇರುವ ಬ್ರಾಹ್ಮಣರಿಂದಲೂ, ಮಹಾಮಹಿಮೆಯುಳ್ಳ ಋಷಿಗಳಿಂದಲೂ, ಕೂಡಿದ್ದ ಆ ಅಯೋಧ್ಯಾಪಟ್ಟಣವನ್ನು ದಶರಥನೆಂಬ ರಾಜನು ಧರ್ಮದಿಂದ ಪರಿಪಾಲಿಸುತ್ತಿದ್ದನು.

ಇಲ್ಲಿಗೆ ಐದನೆಯ ಸರ್ಗವು.

ದಶರಥ ಚಕ್ರವರ್ತಿಯು ಮತ್ತು ಆತನ ಪ್ರಜೆಗಳ ವರ್ಣನವು

ಈ ಅಯೋಧ್ಯಾಪಟ್ಟಣವನ್ನಾಳುತ್ತಿದ್ದ ದಶರಥನು ಸಮಸ್ತ ವೇದಗಳನ್ನೂ ಬಲ್ಲವನು. ಸರ್ವಜ್ಞನು. ಬಹಳ ದೂರದೃಷ್ಟಿಯುಳ್ಳವನು. ಮಹಾತೇಜಸ್ವಿಯು. ದೇಶದ ಜನರೆಲ್ಲರ ಪ್ರೀತಿಗೂ ಪಾತ್ರನಾಗಿ ಪ್ರಜೆಗಳನ್ನು ಬಹಳ ವಿಶ್ವಾಸದಿಂದ ಕಾಪಾಡುತ್ತಿದ್ದನು. ಇಕ್ಷ್ವಾಕುವಂಶದೊಳಗೆಲ್ಲಾ ಅತಿರಥನೆಂಬ ಖ್ಯಾತಿಯನ್ನು ಪಡೆದಿದ್ದನು. ಅನೇಕ ಯಾಗಗಳನ್ನು ಮಾಡಿದವನು. ಧರ್ಮಬುದ್ಧಿಯುಳ್ಳವನು. ಇಂದ್ರಿಯಗಳನ್ನು ನಿಗ್ರಹಿಸಿದವನು. ಈತನು ಕ್ಷತ್ರಿಯಧರ್ಮಗಳನ್ನೆಲ್ಲಾ ಚೆನ್ನಾಗಿ ಬಲ್ಲವನಾದುದರಿಂದ, ರಾಜರ್ಷಿಯೆನಿಸಿಕೊಂಡಿದ್ದರೂ, ಮಹರ್ಷಿಗಳಿಗೆ ಸಮಾನನಾಗಿದ್ದನು. ಮೂರುಲೋಕಗಳಲ್ಲಿ ಪ್ರಸಿದ್ಧವಾದ ಕೀರ್ತಿಯುಳ್ಳವನು. ಬಹಳ ಬಲವುಳ್ಳವನು. ಶತ್ರುಗಳನ್ನೆಲ್ಲಾ ಜಯಿಸಿದವನು. ಬಹಳ ಸ್ನೇಹಪರನು. ಎಣೆಯಿಲ್ಲದ ವೈಭವದಿಂದ ಇಂದ್ರನನ್ನೂ, ಧನಸಮೃದ್ಧಿಯಿಂದ ಕುಬೇರನನ್ನೂ ಹೋಲುತ್ತಿರುವನು. ಹೀಗೆ ಧರ್ಮಾರ್ಥಕಾಮಗಳನ್ನನುಸರಿಸಿ, ಸತ್ಯಸಂಧನಾಗಿ, ಮನುಚಕ್ರವರ್ತಿಯಂತೆ ರಾಜ್ಯಪರಿಪಾಲನಮಾಡುತ್ತಿದ್ದ ಆ ದಶರಥನು ಅಮರಾವತಿಯನ್ನು ಪಾಲಿಸುತ್ತಿದ್ದ ಇಂದ್ರನಂತೆಯೇ ತೋರುತ್ತಿದ್ದನು.

ಆ ದೇಶದಲ್ಲಿರುವವರೆಲ್ಲರೂ ನಿತ್ಯಸಂತುಷ್ಟರಾಗಿ ತಮ್ಮ ತಮ್ಮ ಧರ್ಮಗಳನ್ನು ಬಿಡದೆ ನಡೆಸುತ್ತಿದ್ದರು. ಒಬ್ಬೊಬ್ಬರೂ ಅನೇಕ ಶಾಸ್ತ್ರಗಳನ್ನು ಓದಿದವರಾಗಿದ್ದರು. ಸಮಸ್ತ ಜನರೂ ತಮಗೆ ಇದ್ದುದರಲ್ಲಿ ತೃಪ್ತಿ ಹೊಂದಿ, ಪರಸ್ವತ್ತಿಗೆ ಆಸೆಪಡದೆ, ಸತ್ಯವನ್ನು ಬಿಡದೆ ನಡೆಯುತ್ತಿದ್ದರು. ಆ ಪಟ್ಟಣದಲ್ಲಿ ವಿಶೇಷ ಕಾಮಾಸಕ್ತರಾಗಲಿ, ಕ್ರೂರರಾಗಲಿ, ಅಜ್ಞರಾಗಲಿ, ನಾಸ್ತಿಕರಾಗಲಿ, ಕಾಣುತ್ತಿರಲಿಲ್ಲ. ಧನಧಾನ್ಯಪಶುಸಮೃದ್ಧಿಗಳಿಲ್ಲದ ಕುಟುಂಬಿಗಳು ಒಬ್ಬರಾದರೂ ಇರಲಿಲ್ಲ. ಹೆಂಗಸರಲ್ಲಿಯಾಗಲಿ, ಗಂಡಸರಲ್ಲಿಯಾಗಲಿ ಆಬಾಲವೃದ್ಧರೂ ತಮ್ಮ ತಮ್ಮ ಧರ್ಮಗಳನ್ನು ಬಿಡದೆ ನಡೆಸುತ್ತಾ, ಒಳ್ಳೇ ನಡತೆಯುಳ್ಳವರಾಗಿ ಮಹರ್ಷಿಗಳಂತೆ ಶುದ್ಧರಾಗಿಯೇ ಇರುತ್ತಿದ್ದರು. ಕಿವಿಯಲ್ಲಿ ಕಡುಕಿಲ್ಲದವರಾಗಲಿ, ತಲೆಯಲ್ಲಿ ಕಿರೀಟವಿಲ್ಲದವರಾಗಲಿ, ಕಂಠದಲ್ಲಿ ಹಾರವಿಲ್ಲದವರಾಗಲಿ, ದೇಹದಲ್ಲಿ ಚಂದನಾದ್ಯನುಲೇಪನಗಳಿಲ್ಲದವರಾಗಲಿ, ಕಸ್ತೂರಿ, ಕುಂಕುಮ ಮೊದಲಾದ ಸುಗಂಧ ದ್ರವ್ಯಗಳಿಂದ ಅಲಂಕರಿಸಿಕೊಳ್ಳದವರಾಗಲಿ ಒಬ್ಬರೂ ಇರಲಿಲ್ಲ. ಒಬ್ಬೊಬ್ಬರೂ ದಾನಶಾಲಿಗಳು; ಒಬ್ಬೊಬ್ಬರೂ

ಜಿತೇಂದ್ರಿಯರು; ಒಬ್ಬೊಬ್ಬರೂ ಸರ್ವಾಭರಣಭೂಷಿತರು. ಇದಲ್ಲದೆ ಬ್ರಾಹ್ಮಣರಲ್ಲಿ ಆಹಿತಾಗ್ನಿಗಳಲ್ಲದವರಾಗಲಿ, ಯಾಗಮಾಡದವರಾಗಲಿ, ಅಲ್ಪವಾದ ವಿದ್ಯೆಯನ್ನೂ, ಐಶ್ವರ್ಯವನ್ನೂ ಹೊಂದಿದವರಾಗಲಿ, ಕ್ರೂರ ಬುದ್ಧಿಯುಳ್ಳವರಾಗಲಿ ಯಾರೂ ಇರಲಿಲ್ಲ. ವರ್ಣಸಂಕರವೆಂಬುದು ಆ ಅಯೋಧ್ಯೆಯ ಜನಗಳಲ್ಲಿ ಇರಲೇ ಇಲ್ಲ. ಒಬ್ಬೊಬ್ಬರೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿ ಜಿತೇಂದ್ರಿಯರಾಗಿ, ಯಜನ ಯಾಜನ ಮುಂತಾದ ಷಟ್ಕರ್ಮಗಳನ್ನೂ ಬಿಡದೆ ನಡೆಸುತ್ತಿದ್ದರು. ಅಲ್ಲಿನ ಜನರಲ್ಲಿ ಸುಳ್ಳು, ಅಸೂಯೆ, ಮುಂತಾದ ದುರ್ಗುಣಗಳೊಂದಾದರೂ ಇರಲಿಲ್ಲ. ಎಲ್ಲರೂ ಅನೇಕಶಾಸ್ತ್ರಶ್ರವಣಮಾಡಿದವರು. ಯಾವ ಕಾರ್ಯವನ್ನಾದರೂ ಹಿಂಜರಿಯದೆ ಸಾಧಿಸತಕ್ಕ ಶಕ್ತಿಯುಳ್ಳವರು. ಅಜ್ಞರಾಗಲಿ, ಕರ್ಮಭ್ರಷ್ಟರಾಗಲಿ, ವ್ಯಾಧಿ ಪೀಡಿತರಾಗಲಿ, ಕೃಪಣರಾಗಲಿ, ಕ್ರೂರರಾಗಲಿ, ಅಲ್ಲಿರಲಿಲ್ಲ. ಎಲ್ಲರೂ ವೇದ ವೇದಾಂಗಗಳನ್ನು ತಿಳಿದವರು. ಎಲ್ಲರೂ ಸಹಸ್ರಸಂಖ್ಯೆಯಿಂದ ದಾನಮಾಡ ತಕ್ಕವರು. ಆ ದೇಶದ ಪುರುಷರಲ್ಲಿಯಾಗಲಿ, ಸ್ತ್ರೀಯರಲ್ಲಿಯಾಗಲಿ, ಕುರೂಪಿಗಳಾದವರೊಬ್ಬರೂ ಇರಲಿಲ್ಲ. ಎಲ್ಲರೂ ರಾಜಭಕ್ತಿಯುಳ್ಳವರು. ನಾಲ್ಕು ವರ್ಣದವರೂ ದೇವತೆಗಳನ್ನೂ, ಅತಿಥಿಗಳನ್ನೂ ಪೂಜಿಸುವುದರಲ್ಲಿ ಬಹಳ ಅಕ್ಕರೆಯುಳ್ಳವರಾಗಿದ್ದರೂ ಒಬ್ಬೊಬ್ಬರೂ ಕೃತಜ್ಞರಾಗಿಯೂ, ಧಾರ್ಮಿಕರಾಗಿಯೂ, ಸತ್ಯವಂತರಾಗಿಯೂ, ದೀರ್ಘಾಯುಸ್ಸುಳ್ಳವ ರಾಗಿಯೂ ಇರುತ್ತಿದ್ದರು. ಒಬ್ಬೊಬ್ಬರೂ ತಮ್ಮ ತಮ್ಮ ಪುತ್ರಪೌತ್ರ ರೊಡಗೂಡಿ ಸಂತೋಷಿಸುತ್ತಿದ್ದರು. ಅಪತ್ನೀಕರಾದವರೊಬ್ಬರೂ ಇರಲಿಲ್ಲ. ಅಲ್ಲಿ ಕ್ಷತ್ರಿಯರು ಬ್ರಾಹ್ಮಣರನ್ನೂ, ವೈಶ್ಯರು ಕ್ಷತ್ರಿಯರನ್ನೂ ಅನುವರ್ತಿಸಿ, ಅವರ ಆಜ್ಞೆಯಂತೆ ನಡೆಸುತ್ತಿದ್ದರು. ಶೂದ್ರರು ಸ್ವಧರ್ಮವನ್ನು ಬಿಡದೆ ಇತರ ಮೂರು ವರ್ಣದವರನ್ನೂ ಉಪಚರಿಸುತ್ತಿದ್ದರು. ಮೊದಲು ಮನು ಚಕ್ರವರ್ತಿಯಿಂದ ಹೇಗೋ ಹಾಗೆಯೇ ಆ ಪಟ್ಟಣವು ಇಕ್ಷ್ವಾಕುವಂಶಶ್ರೇಷ್ಠ ನಾದ ದಶರಥನಿಂದ ಪಾಲಿಸಲ್ಪಡುತ್ತಿತ್ತು. ಅಗ್ನಿಗೆ ಸಮಾನರಾಗಿ ವರ್ಚಸ್ವಿ ಗಳಾಗಿ, ಶೌರ್ಯಾತಿಶಯವುಳ್ಳವರಾಗಿ, ಶಸ್ತ್ರಾಸ್ತ್ರವಿದ್ಯೆಗಳನ್ನೋದಿ ತಿಳಿದವ ರಾಗಿದ್ದ ಅನೇಕ ವೀರಪುರುಷರಿಂದ ಆ ಪಟ್ಟಣವು ಕಾಪಾಡಲ್ಪಡುತ್ತಿದ್ದುದರಿಂದ, ಅನೇಕ ಸಿಂಹಗಳಿಂದ ರಕ್ಷಿತವಾದ ಪರ್ವತಗುಹೆಯಂತೆ ಶತ್ರುಗಳಿಗೆ ದುರ್ಗಮ ವಾಗಿತ್ತು. ಮತ್ತು ಅದು ಕಾಂಭೋಜ, ಬಾಹ್ಲಿಕ, ವನಾಯುಜ, ಸಿಂಧು,

ಮೊದಲಾದ ದೇಶಗಳಲ್ಲಿ ಹುಟ್ಟಿದ ಉತ್ತಮ ಜಾತಿಯ ಕುದುರೆಗಳಿಂದಲೂ, ವಿಂಧ್ಯವೇ ಮೊದಲಾದ ಪರ್ವತಪ್ರದೇಶಗಳಲ್ಲಿ ಹುಟ್ಟಿ, ದೊಡ್ಡ ದೊಡ್ಡ ಬೆಟ್ಟಗಳಂತಿರುವ ಮಹಾಬಲವುಳ್ಳ ಮದ್ದಾನೆಗಳಿಂದಲೂ ಪ್ರಕಾಶಿಸುತ್ತಿತ್ತು. ಐರಾವತ, ಪುಂಡರೀಕ, ವಾಮನ, ಅಂಜನ, ಮೊದಲಾದ ದಿಗ್ಗಜಗಳ ವಂಶದಲ್ಲಿ ಹುಟ್ಟಿದ ಆನೆಗಳೇ ಅಲ್ಲಿ ಅಪರಿಮಿತವಾಗಿದ್ದುವು ಮತ್ತು [1]ಭದ್ರ, ಮಂದ್ರ, ಮೃಗಗಳೆಂಬ ಮೂರು ಜಾತಿಯ ಆನೆಗಳೂ, ಭದ್ರಮಂದ್ರ, ಭದ್ರಮೃಗ, ಮೃಗಮಂದ್ರ ಭದ್ರಮಂದ್ರ ಮೃಗಗಳೆಂಬ ಸಂಕೀರ್ಣ ಜಾತಿಯ ಆನೆಗಳೂ. ಆ ಪಟ್ಟಣದಲ್ಲಿ ಯಾವಾಗಲೂ ಸಂಚರಿಸುತ್ತಿದ್ದುವು. ಚದುರಂಗ ಸೈನ್ಯಗಳ ಸಮೃದ್ಧಿಯಿಂದ, ಸುತ್ತಲೂ ಎರಡು ಯೋಜನಗಳ ದೂರದ ವರೆಗೂ, ಶತ್ರುಗಳ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಅದನ್ನು ದಶರಥ ಮಹಾ ರಾಜನು ಕಾಪಾಡುತ್ತಿದ್ದುದರಿಂದಲೇ ಅದಕ್ಕೆ ಅಯೋಧ್ಯೆಯೆಂಬ ಹೆಸರನ್ನು ಸಾರ್ಥಕಪಡಿಸುತ್ತ ರಾಜ್ಯಭಾರ ಮಾಡುತ್ತಿದ್ದನು. ಹೀಗೆ ಆ ಮಹಾರಾಜನು ನಕ್ಷತ್ರಗಳ ಮಧ್ಯದಲ್ಲಿರುವ ಚಂದ್ರನಂತೆ ತನ್ನ ತೇಜಸ್ಸಿನಿಂದಲೇ ಶತ್ರುಗಳ ನ್ನೆಲ್ಲಾ ಅಡಗಿಸಿ, ಧರ್ಮದಿಂದ ರಾಜ್ಯವನ್ನು ನಡೆಸುತ್ತಿದ್ದುದರಿಂದ, ಆ ದೇಶಕ್ಕೆ ಈ ವಿಧವಾದ ಅತಿಶಯವುಂಟಾಯಿತು. ಹೀಗೆ ವಿಚಿತ್ರವಾದ ಮನೆಗಳಿಂದಲೂ, ಅನೇಕ ಸಹಸ್ರ ಪ್ರಜೆಗಳಿಂದಲೂ, ತುಂಬಿದ ಆ ಪಟ್ಟಣವನ್ನು ಆಳುತ್ತಿದ್ದ ದಶರಥನು ಇಂದ್ರನಂತೆ ಸಕಲ ಸೌಭಾಗ್ಯಸಂಪನ್ನನಾಗಿ ಪ್ರಕಾಶಿಸುತ್ತಿದ್ದನು.

ಇಲ್ಲಿಗೆ ಆರನೆಯ ಸರ್ಗವು

ಮಂತ್ರಿ ಪುರೋಹಿತಾದಿಗಳ ವರ್ಣನವು

ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಮಹಾತ್ಮನಾದ ಆ ದಶರಥನಿಗೆ ಎಂಟುಮಂದಿ ಮಂತ್ರಿಗಳುಂಟು. ಇವರು ಕಾರ್ಯಾಲೋಚನೆಯಲ್ಲಿ ಮಹಾ ನಿಪುಣರಾಗಿಯೂ, ಇತರರ ಮುಖವನ್ನು ನೋಡಿದಮಾತ್ರದಿಂದಲೇ ಅವರ

1. "ಅಂಗಪ್ರತ್ಯಂಗಭದ್ರತ್ವಂ ಸಂಕ್ಷಿಪ್ತಂ ಭದ್ರಲಕ್ಷಣಮ್ | ಪೃಥುತ್ವಂ ಶ್ಲಥತಾ ಸ್ಥೌಲ್ಯಂ ಸಂಕ್ಷಿಪ್ತಂ ಮಂದಲಕ್ಷಣಮ್ || ತನುಪ್ರತ್ಯಂಗದೀರ್ಘಶ್ಚ ಪ್ರಾಯೋ ಮೃಗಗುಣೋ ಮತಃ |" ಎಂಬುದೇ ಭದ್ರಮಂದ್ರಮೃಗಜಾತಿಗಳ ಲಕ್ಷಣವು. "ಭದ್ರಮಂದ್ರೋ ಭದ್ರಮೃಗೋ ಭದ್ರಮಂದ್ರಮೃಗೋಽಪಿ ಚ | ಮೃಗಮಂದ್ರಾದಯೋಽಪ್ಯೇವಮಿತಿ ಸಂಕರಜಾತಯಃ ||" ಎಂಬಿವು, ಆ ಮೂರು ಜಾತಿಗಳಿಂದ ಹುಟ್ಟಿದ ಸಂಕರಜಾತಿಗಳೆಂದು ತಿಳಿಯಬೇಕು.

ಮನೋಭಿಪ್ರಾಯಗಳನ್ನು ತಿಳಿಯಬಲ್ಲವರಾಗಿಯೂ, ಯಾವಾಗಲೂ ರಾಜನಿಗೆ ಹಿತವನ್ನೇ ಬಯಸುವವರಾಗಿಯೂ, ಮಂತ್ರಿಗಳಿಗಿರಬೇಕಾದ ಸಮಸ್ತ ಗುಣಗಳಿಂದಲೂ ಕೂಡಿದವರಾಗಿಯೂ, ರಾಜಕಾರ್ಯಗಳನ್ನು ನಡೆಸುವುದರಲ್ಲಿ ಬಹಳ ಅಕ್ಕರೆಯುಳ್ಳವರಾಗಿಯೂ, ಕೀರ್ತಿವಂತರಾಗಿಯೂ, ಪರಿಶುದ್ಧಾತ್ಮರಾಗಿಯೂ ಇರುವರು. ಅವರಿಗೆ ಕ್ರಮವಾಗಿ ಧೃಷ್ಟಿ, ಜಯಂತ, ವಿಜಯ, ಸಿದ್ಧಾರ್ಥ, ಅರ್ಥಸಾಧಕ, ಅಶೋಕ, ಮಂತ್ರಪಾಲ, ಸುಮಂತ್ರರೆಂದು ಹೆಸರು. ಈ ರಾಜನಿಗೆ ವಸಿಷ್ಠನೆಂದೂ, ವಾಮದೇವನೆಂದೂ ಮುಖ್ಯ ಪುರೋಹಿತರಿಬ್ಬರಿರುವರು. ಇವರೇ ಅಲ್ಲದೆ, ಜಾಬಾಲಿ[1] ಮೊದಲಾದ ಬೇರೆ ಕೆಲವು ಮಹರ್ಷಿಗಳೂಕೂಡ ಮಂತ್ರಿಗಳಾಗಿಯೂ ಪುರೋಹಿತರಾಗಿಯೂ ಇರುತ್ತಿರುವರು. ಇವರೆಲ್ಲರೂ ವಿಶೇಷ ವಿದ್ಯಾವಂತರಾಗಿದ್ದರೂ ಗರ್ವಪಡದೆ ವಿನಯವುಳ್ಳವರಾಗಿರುವರು. ಇವರು ವಿಶೇಷವಾಗಿ ನಾಚಿಕೆಯ ಸ್ವಭಾವವುಳ್ಳವರಾದುದರಿಂದ ದುಷ್ಕಾರ್ಯಗಳಿಗೆ ಎಂದಿಗೂ ಮನಸ್ಸು ಕೊಡತಕ್ಕವರಲ್ಲ. ಬಹಳ ಬುದ್ಧಿಶಾಲಿಗಳು. ಇಂದ್ರಿಯಗಳನ್ನು ತಡೆದವರು. ಭಾಗ್ಯಸಂಪನ್ನರು. ನೀತಿಶಾಸ್ತ್ರಗಳನ್ನೆಲ್ಲಾ ಚೆನ್ನಾಗಿ ಬಲ್ಲವರು. ಬಹಳ ಸಾಹಸಿಗಳು. ಆಡಿದ ಮಾತನ್ನು ತಪ್ಪದೆ ನಡೆಸತಕ್ಕವರು. ತಮ್ಮ ಮಂತ್ರನೈಪುಣ್ಯದಿಂದ ಅಪಾರವಾದ ಖ್ಯಾತಿಯನ್ನು ಪಡೆದವರು. ಯಾವ ಕಾರ್ಯಗಳಲ್ಲಿಯಾದರೂ ಬಹಳ ಎಚ್ಚರವುಳ್ಳವರು. ಬಹಳ ತಾಳ್ಮೆಯುಳ್ಳವರು. ಯಾವಾಗಲೂ ನಗುಮುಖವುಳ್ಳವರಾಗಿಯೇ ಮಾತಾಡತಕ್ಕವರು. ಕೋಪದಲ್ಲಿಯಾಗಲಿ, ಕಾಮದಲ್ಲಿಯಾಗಲಿ, ಅಥವಾ ಇನ್ನಾವ ಸಂದರ್ಭವಿಶೇಷಗಳಲ್ಲಿಯೇ ಆಗಲಿ, ಯಾವಾಗಲೂ ಸುಳ್ಳೆಂಬುದು ಅವರ ಬಾಯಿಯಿಂದ ಹೊರಡದು. ತಮ್ಮ ರಾಷ್ಟ್ರದಲ್ಲಿಯಾಗಲಿ, ಅಥವಾ ಪರರಾಷ್ಟ್ರಗಳಲ್ಲಿಯಾಗಲಿ ನಡೆಯುವ ವಿಷಯಗಳಲ್ಲಿ ಇವರಿಗೆ ತಿಳಿಯದುದೊಂದಾದರೂ ಇಲ್ಲ. ಭೂತಭವಿಷ್ಯದ್ವರ್ತಮಾನಗಳನ್ನೆಲ್ಲಾ ಚಾರರಿಂದ ತಿಳಿದುಕೊಳ್ಳತಕ್ಕ ಅದ್ಭುತವಾದ ಚಾತುರ್ಯವುಳ್ಳವರು. ಸಮಸ್ತಲೋಕವ್ಯವಹಾರಗಳನ್ನೂ ಚೆನ್ನಾಗಿ ಬಲ್ಲವರು. ತಪ್ಪು

1. ಜಾಬಾಲಿಮೊದಲಾದವರೆಂದರೆ, "ಸುಯಜ್ಞೋಽಪ್ಯಥ ಜಾಬಾಲಿಃ ಕಾಶ್ಯಪೋಽಪ್ಯಥ ಗೌತಮಃ | ಮಾರ್ಕಂಡೇಯಸ್ತು ದೀರ್ಘಾಯುಸ್ತಥಾ ಕಾತ್ಯಾಯನೋ ಮುನಿಃ || ಏತೈರ್ಬ್ರಹ್ಮರ್ಷಿಭಿರ್ನಿತ್ಯಮೃತ್ವಿಜಸ್ತಸ್ಯ ಪೌರ್ವಕಾಃ |" ಎಂಬಂತೆ ಉಳಿದ ಋಷಿಗಳೆಂದು ತಿಳಿಯಬೇಕು.

ಮಾಡಿದವರು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಾಗಿದ್ದರೂ, ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸದೆ ಬಿಡರು. ಭಂಡಾರವನ್ನು ಹೆಚ್ಚಿಸುವುದರಲ್ಲಿಯೂ, ಸೈನ್ಯಗಳನ್ನು ಕೂಡಿಸುವುದರಲ್ಲಿಯೂ ಬಹಳ ಅಕ್ಕರೆಯುಳ್ಳವರು. ತಮಗೆ ಜನ್ಮದ್ವೇಷಿಯಾಗಿದ್ದರೂ ತಪ್ಪಿಲ್ಲದವನನ್ನು ದಂಡಿಸರು. ಶತ್ರುಗಳನ್ನು ನಿಗ್ರಹಿಸುವುದಕ್ಕೆ ತಕ್ಕ ವೀರ್ಯವೂ, ಕಾರ್ಯಗಳಲ್ಲಿ ಉತ್ಸಾಹವೂ, ನೀತಿಶಾಸ್ತ್ರಗಳಿಗೆ ತಕ್ಕ ಅನುಷ್ಠಾನವೂ ಇವರಲ್ಲಿ ಪೂರ್ಣವಾಗಿ ನೆಲೆಗೊಂಡಿರುವುವು. ಪರಿಶುದ್ಧಾತ್ಮರಾದ ತಮ್ಮ ದೇಶವಾಸಿಗಳನ್ನು ಚೆನ್ನಾಗಿ ಕಾಪಾಡುವರು. ಭಂಡಾರವನ್ನು ಹೆಚ್ಚಿಸಬೇಕೆಂಬ ಉದ್ದೇಶವನ್ನೇ ಮುಖ್ಯವಾಗಿಟ್ಟುಕೊಂಡು, ಬ್ರಾಹ್ಮಣರನ್ನಾಗಲಿ, ಕ್ಷತ್ರಿಯರನ್ನಾಗಲಿ, ನಿಷ್ಕಾರಣವಾಗಿ ಹಿಂಸಿಸಿ, ಅವರ ಆಸ್ತಿಯನ್ನು ಅಪಹರಿಸತಕ್ಕವರಲ್ಲ. ಯಾರಾದರೂ ತಪ್ಪು ಮಾಡಿದರೆ ಆ ತಪ್ಪಿತದ ಬಲಾಬಲವನ್ನು ಚೆನ್ನಾಗಿ ಪರ್ಯಾಲೋಚಿಸಿ, ದೇಶಕಾಲಗಳ ಸ್ಥಿತಿಯನ್ನೂ ನೋಡಿ, ಆಯಾ ಅಪರಾಧಿಗಳ ವಯಸ್ಸನ್ನೂ ದೇಹದಾರ್ಢ್ಯವನ್ನೂ ಪರೀಕ್ಷಿಸಿ ಅವುಗಳಿಗನುಗುಣವಾದ ದಂಡವನ್ನೇ ವಿಧಿಸುವರು.

ಹೀಗೆ ಮಂತ್ರಿಗಳೆಲ್ಲರೂ ತ್ರಿಕರಣಶುದ್ಧಿಯುಳ್ಳವರಾಗಿಯೂ, ಐಕಮತ್ಯವುಳ್ಳವರಾಗಿಯೂ ಇದ್ದುದರಿಂದ, ಆ ದೇಶದಲ್ಲಿ ಅಸತ್ಯವನ್ನು ನುಡಿಯುವವನಾಗಲಿ, ದ್ರೋಹಿಯಾಗಲಿ, ಪರಸ್ತ್ರೀಕಾಮುಕನಾಗಲಿ, ಒಬ್ಬನಾದರೂ ಇರಲಿಲ್ಲ. ಸಮಸ್ತರಾಜ್ಯವೂ ನಿರಾತಂಕವಾಗಿ, ನೆಮ್ಮದಿಯಿಂದಿತ್ತು. ಇದಲ್ಲದೆ ಮಂತ್ರಿಗಳೆಲ್ಲರೂ ಅನರ್ಘ್ಯಗಳಾದ ಉಡಿಗೆತೊಡಿಗೆಗಳನ್ನು ಧರಿಸಿ, ಒಳ್ಳೆ ನಡತೆಯುಳ್ಳವರಾಗಿ ಸ್ವಾಮಿಭಕ್ತಿಯುಳ್ಳವರಾಗಿ, ರಾಜನಿಗೆ ಹಿತವನ್ನೇ ಬಯಸುತ್ತ, ಯಾವಾಗಲೂ ನ್ಯಾಯದೃಷ್ಟಿಯಿಂದ, ಜಾಗರೂಕರಾಗಿ ರಾಜಕಾರ್ಯಗಳನ್ನು ನಡೆಸುತ್ತಿದ್ದರು. ಗುಣದೋಷಗಳೆರಡನ್ನೂ ಚೆನ್ನಾಗಿ ಗ್ರಹಿಸಬಲ್ಲವರಾಗಿದ್ದರೂ, ತಮ್ಮ ಪ್ರಭುವಿನಲ್ಲಿದ್ದ ಗುಣಗಳನ್ನೇ ವಿಶೇಷವಾಗಿ ಹೊರಕ್ಕೆ ತಂದು ಕೊಂಡಾಡುವರು. ಪರಾಕ್ರಮದ ವಿಷಯದಲ್ಲಿಯಾಗಲಿ, ಕಾರ್ಯಾಲೋಚನೆಯ ವಿಷಯದಲ್ಲಿಯಾಗಲಿ, ಇವರನ್ನು ಮೀರಿಸಿದವರೇ ಇಲ್ಲವೆಂಬ ಪ್ರಖ್ಯಾತಿಯನ್ನು ಪಡೆದಿದ್ದರು. ಇವರ ಖ್ಯಾತಿಯು ಸ್ವದೇಶದಲ್ಲಿ ಮಾತ್ರವೇ ಅಲ್ಲದೆ, ಪರದೇಶಗಳಲ್ಲಿಯೂ ಹರಡಿತು. ಇವರು ಸಂಧಿವಿಗ್ರಹಾದಿ ಷಡ್ಗುಣಗಳನ್ನೂ ಚೆನ್ನಾಗಿ ಬಲ್ಲವರಾಗಿದ್ದರು. ಸಂಪತ್ತುಳ್ಳವರಾಗಿದ್ದರೂ, ಇಲ್ಲದಿದ್ದರೂ ಮಹಾಭಾಗ್ಯವುಳ್ಳವರಂತೆಯೇ ನಡೆಯುವ ಸ್ವಭಾವವುಳ್ಳವ

ರಾಗಿದ್ದರು. ಇಷ್ಟೇ ಅಲ್ಲದೆ, ಅವರು ರಾಜಕಾರ್ಯಾಲೋಚನೆಗಳನ್ನೆಲ್ಲಾ ಬಹಳ ರಹಸ್ಯವಾಗಿ ಕಾಪಾಡಿಡುವ ಶಕ್ತಿಯುಳ್ಳವರಾಗಿ, ಸೂಕ್ಷ್ಮವಿಷಯಗಳನ್ನು ಯೋಚಿಸಿ ತಿಳಿಯುವ ಕುಶಾಗ್ರಬುದ್ಧಿಯುಳ್ಳವರಾಗಿ, ನೀತಿಶಾಸ್ತ್ರಗಳೆಲ್ಲ ವನ್ನೂ ತಿಳಿದವರಾಗಿದ್ದರು. ತಮ್ಮ ಅಧಿಕಾರಮದದಿಂದ ಕಾರ್ಯಾರ್ಥಿಗಳಾಗಿ ಬಂದ ಪ್ರಜೆಗಳನ್ನು ಧಿಕ್ಕರಿಸದೆ, ಯಾವಾಗಲೂ ಪ್ರಿಯವನ್ನೇ ನುಡಿಯು ತ್ತಿರುವರು.

ಇಂತಹ ಮಂತ್ರಿಗಳೊಡಗೂಡಿ ದಶರಥಚಕ್ರವರ್ತಿಯು, ನಿಶ್ಚಿಂತನಾಗಿ, ಚಾರರಿಂದ ದೇಶದ ಸಕಲವೃತ್ತಾಂತಗಳನ್ನೂ ತಿಳಿದುಕೊಳ್ಳುತ್ತ ಪ್ರಜೆಗಳ ಕಷ್ಟಗಳನ್ನು ನೀಗಿಸಿ, ಅವರ ಕೋರಿಕೆಗಳನ್ನು ಸಲ್ಲಿಸುತ್ತ, ತನ್ನ ಔದಾರ್ಯ ದಿಂದಲೂ, ಸತ್ಯಸಂಧತೆಯಿಂದಲೂ, ಪರಾಕ್ರಮದಿಂದಲೂ ಮಹಾಪ್ರಖ್ಯಾತಿ ಯನ್ನು ಹೊಂದಿ ಸಮಸ್ತಭೂಮಂಡಲವನ್ನೂ ಧರ್ಮದಿಂದ ಪಾಲಿಸುತ್ತಿದ್ದನು. ಹೀಗೆ ರಾಜ್ಯವನ್ನಾಳುತ್ತಿರುವ ಆ ದಶರಥನಿಗೆ ಸಮಾನನಾದ ಅಥವಾ ಇವನನ್ನು ಮೀರಿಸಿದ ಶತ್ರುವೊಬ್ಬನಾದರೂ ಇರಲಿಲ್ಲ. ಇತರ ರಾಜರೆಲ್ಲರೂ ಇವನಲ್ಲಿ ಸ್ನೇಹವನ್ನೇ ಬೆಳೆಸುತ್ತಿದ್ದರು. ಅನೇಕ ರಾಜರು ಇವನಲ್ಲಿ ಶರಣಾಗತಿ ಹೊಂದುತ್ತಿದ್ದರು. ಹೀಗೆ ಪರಾಕ್ರಮದಿಂದ ಸಮಸ್ತ ಶತ್ರುಗಳನ್ನೂ ಅಡಗಿಸಿದ್ದ ದಶರಥನು, ದೇವೇಂದ್ರನು ಸ್ವರ್ಗವನ್ನು ಹೇಗೋ ಹಾಗೆ ಈ ಭೂಮಂಡಲ ವನ್ನು ಪಾಲಿಸುತ್ತಿದ್ದನು. ಕಾರ್ಯಾಲೋಚನೆಯಲ್ಲಿಯೂ, ತನ್ನ ಶ್ರೇಯೋಭಿ ವೃದ್ಧಿಯಲ್ಲಿಯೂ ಬಹಳ ಅಕ್ಕರೆಯುಳ್ಳವರಾಗಿ, ಮಹಾ ಬುದ್ಧಿಶಾಲಿಗಳೂ, ಕಾರ್ಯಸಮರ್ಥರೂ ಆದ ಮಂತ್ರಿಗಳೆಲ್ಲರೂ ತನಗನುಕೂಲರಾಗಿ ಕಾರ್ಯ ಗಳನ್ನು ನಡೆಸುತ್ತಿರಲು ತೇಜೋಮಯವಾದ ಕಿರಣಗಳಿಂದ ಕೂಡಿ ಪ್ರಪಂಚ ವನ್ನೆಲ್ಲಾ ಬೆಳಗುವ ಸೂರ್ಯನಂತೆ ದಶರಥ ಚಕ್ರವರ್ತಿಯು ಮಹಾದೀಪ್ತಿ ಮಂತನಾಗಿ ಪ್ರಕಾಶಿಸುತ್ತಿದ್ದನು.

ಇಲ್ಲಿಗೆ ಏಳನೆಯ ಸರ್ಗವು.

ದಶರಥನು ಪುತ್ರಕಾಮೇಷ್ಟಿಯಾಗಕ್ಕೆ ಪ್ರಯತ್ನಿಸಿದುದು

ಇಂತಹ ಮಹಿಮೆಯುಳ್ಳವನಾಗಿ, ಸಮಸ್ತ ಧರ್ಮಗಳನ್ನೂ ತಿಳಿದು ರಾಜ್ಯವನ್ನು ನಡೆಸುತ್ತಿದ್ದ ಆ ಮಹಾತ್ಮನಿಗೆ ವಂಶಾಭಿವೃದ್ಧಿಯನ್ನುಂಟು ಮಾಡತಕ್ಕ ಸತ್ಪುತ್ರನಿಲ್ಲವೆಂಬ ಚಿಂತೆಯೊಂದು ಮಾತ್ರ ಬಹಳವಾಗಿತ್ತು.

ಸಂತಾನಾರ್ಥವಾಗಿ ಅನೇಕ ತಪಸ್ಸುಗಳನ್ನು ಮಾಡಿದರೂ, ಇವನ ಕೋರಿಕೆಯು ಕೈಗೂಡಲಿಲ್ಲ. ಹೀಗಿರುವಾಗ ಒಂದಾನೊಂದು ದಿವಸದಲ್ಲಿ ಅದಕ್ಕಾಗಿ ಅಶ್ವಮೇಧಯಾಗವನ್ನು ಮಾಡಬೇಕೆಂಬ ಬುದ್ಧಿಯು ಆತನಿಗೆ ತಾನಾಗಿ ಹುಟ್ಟಿತು. ಹೇಗಾದರೂ ಈ ಯಾಗವನ್ನು ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು, ಧರ್ಮಾತ್ಮರಾದ ತನ್ನ ಮಂತ್ರಿಗಳೊಡಗೂಡಿ ಆಲೋಚಿಸಿ, ಕೊನೆಗೆ ಸುಮಂತ್ರನೆಂಬ ತನ್ನ ಮುಖ್ಯಮಂತ್ರಿಯನ್ನು ಕರೆದು "ಎಲೈ ಮಂತ್ರಿಯೆ! ನಮ್ಮ ಸಮಸ್ತಗುರುಗಳನ್ನೂ, ಪುರೋಹಿತರನ್ನೂ, ಈಗಲೇ ಕರೆತರುವವನಾಗು" ಎಂದನು. ದಶರಥನ ವಾಕ್ಯವನ್ನು ಕೇಳಿ, ಸುಮಂತ್ರನು ಒಡನೆಯೇ ಹೊರಟು, ವೇದಪಾರಂಗತರಾದ ಸುಯಜ್ಞ, ವಾಮದೇವ, ಜಾಬಾಲಿ, ಕಾಶ್ಯಪರೇ ಮೊದಲಾದ ಋಷಿಗಳೆಲ್ಲರನ್ನೂ, ಕುಲಪುರೋಹಿತರಾದ ವಸಿಷ್ಠರನ್ನೂ, ಇನ್ನೂ ಅನೇಕ ಬ್ರಾಹ್ಮಣರನ್ನೂ ಕರೆತಂದನು. ದಶರಥನು ಈ ಬ್ರಾಹ್ಮಣರೆಲ್ಲರನ್ನೂ ಯಥೋಚಿತವಾಗಿ ಪೂಜಿಸಿ, ಧರ್ಮಾರ್ಥಯುಕ್ತವಾಗಿಯೂ, ಇಂಪಾಗಿಯೂ, ಇರುವ ಮಾತುಗಳಿಂದ "ಎಲೈ ಮಹರ್ಷಿಗಳೆ! ಸಂತಾನವಿಲ್ಲದೆ ಬಹಳವಾಗಿ ಕೊರಗುತ್ತಿರುವೆನು. ನನಗೆ ಇದುವರೆಗೂ ಆ ಭಾಗ್ಯವನ್ನು ಪಡೆಯತಕ್ಕ ಅದೃಷ್ಟವಿಲ್ಲದೆ ಹೋಯಿತು. ಈಗ ಪುತ್ರಾರ್ಥವಾಗಿ ಅಶ್ವಮೇಧವನ್ನಾದರೂ ಮಾಡಬೇಕೆಂದು ನನ್ನ ಮನಸ್ಸಿಗೆ ತೋರಿರುವುದು. ಆದುದರಿಂದ ಶಾಸ್ತ್ರೋಕ್ತವಾದ ರೀತಿಯಲ್ಲಿ ಆ ಯಜ್ಞವನ್ನು ಮಾಡಬೇಕಾಗಿರುವುದು. ಈ ನನ್ನ ಉದ್ದೇಶವು ಹೇಗೆ ಕೈಗೂಡುವುದೋ ಆ ಉಪಾಯವನ್ನು ನೀವೆಲ್ಲರೂ ಆಲೋಚಿಸಿ ಹೇಳಬೇಕು" ಎಂದು ವಿನಯದಿಂದ ಪ್ರಾರ್ಥಿಸಿದನು. ಅದನ್ನು ಕೇಳಿ ವಸಿಷ್ಠರೇ ಮೊದಲಾದ ಸಮಸ್ತ ಬ್ರಾಹ್ಮಣರೂ ಆ ರಾಜನಿಗೆ ಇತರರ ಪ್ರೇರಣೆಯಿಲ್ಲದೆಯೇ ಈ ಉದ್ದೇಶವು ಹುಟ್ಟಿದುದಕ್ಕಾಗಿ ಬಹಳ ಸಂತೋಷಪಟ್ಟು ದಶರಥನನ್ನು ನೋಡಿ "ಎಲೈ ಮಹಾರಾಜನೆ! ಯಜ್ಞಕ್ಕೆ ಬೇಕಾದ ಸಮಸ್ತ ಸಂಭಾರಗಳನ್ನೂ ಸಿದ್ಧಪಡಿಸು. ಕುದುರೆಯನ್ನು ದೇಶದೇಶಗಳ ಮೇಲೆ ಬಿಡು. ಈಗ ನಿನಗೆ ಹುಟ್ಟಿರುವ ಈ ಉದ್ದೇಶವು ಬಹಳ ಶ್ಲಾಘ್ಯವಾದುದು. ನಿನ್ನ ಇಷ್ಟದಂತೆ ಸತ್ಪುತ್ರರನ್ನು ಪಡೆಯುವುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ" ಎಂದರು. ಇದನ್ನು ಕೇಳಿ ದಶರಥನು ಬಹಳ ಸಂತೋಷಪಟ್ಟು ಕಣ್ಣಿನಲ್ಲಿ ಆನಂದಬಾಷ್ಪವನ್ನು ತುಳುಕಿಸುತ್ತ, ತನ್ನ ಮಂತ್ರಿಗಳನ್ನು ನೋಡಿ "ಈ ಗುರುಗಳ ಅಪ್ಪಣೆಯಂತೆ ಸಮಸ್ತ ಸಂಭಾರಗಳನ್ನೂ

ಸಿದ್ಧಪಡಿಸಿರಿ! ಸಮರ್ಥರಾದ ಅಂಗರಕ್ಷಕರೊಡನೆಯೂ, ಋತ್ವಿಕ್ಕುಗಳೊಡನೆಯೂ, ಕುದುರೆಯನ್ನು ದೇಶ ದೇಶದ ಮೇಲೆ ಕಳುಹಿಸಿರಿ! ಸರಯೂನದಿಗೆ ಉತ್ತರತೀರದಲ್ಲಿ ಯಜ್ಞಭೂಮಿಯನ್ನು ಮಾಡಿರಿ! ಶಾಸ್ತ್ರೋಕ್ತವಾದ ಶಾಂತಿ ಕರ್ಮಗಳೆಲ್ಲವನ್ನೂ ನಡೆಸಿರಿ! ಅತ್ಯುತ್ತಮವಾದ ಈ ಯಜ್ಞದಲ್ಲಿ ಕ್ಲೇಶಕರಗಳಾದ ಅಪಚಾರಗಳೊಂದೂ ಸಂಭವಿಸದಿದ್ದರೆ, ಸಾಮಾನ್ಯರಾದ ರಾಜರೂ ಕೂಡ ಇದನ್ನು ಸುಲಭವಾಗಿ ನಡೆಸಿಬಿಡಬಹುದು. ಈ ಯಜ್ಞಸ್ವರೂಪವನ್ನು ಚೆನ್ನಾಗಿ ತಿಳಿದ ಬ್ರಹ್ಮರಾಕ್ಷಸರು ಇದರಲ್ಲಿ ಯಾವಾಗಲೂ ದೋಷವನ್ನೇ ಹುಡುಕುತ್ತಿರುವರು. ಇದರಲ್ಲಿ ಸ್ವಲ್ಪ ದೋಷವು ಕಂಡುಬಂದರೂ ಯಜ್ಞವು ಕೆಟ್ಟುಹೋಗುವುದಲ್ಲದೆ, ಆದರೆ ಯಜಮಾನನಿಗೆ ಒಡನೆಯೇ ನಾಶವುಂಟಾಗುವುದು. ಆದುದರಿಂದ ಯಜ್ಞಕಾರ್ಯಗಳಲ್ಲಿ ಸಮರ್ಥರಾದ ನೀವೆಲ್ಲರೂ, ಈ ಯಜ್ಞವು ಹೇಗೆ ಶಾಸ್ತ್ರೋಕ್ತವಾಗಿ ಮುಗಿಸಲ್ಪಡುವುದೋ ಹಾಗೆ ತಕ್ಕ ಪ್ರಯತ್ನಗಳನ್ನು ಮಾಡಬೇಕು" ಎಂದನು. ಈ ಮಾತನ್ನು ಕೇಳಿ ಮಂತ್ರಿಗಳೆಲ್ಲರೂ "ಮಹಾರಾಜನ ಅಪ್ಪಣೆಯಂತೆ ಆಗಲಿ" ಎಂದು ಹೇಳಿ, ಆತನ ದೃಢವಾದ ಸಂಕಲ್ಪಕ್ಕೆ ಮೆಚ್ಚಿ, ಅವನನ್ನು ಬಹಳವಾಗಿ ಕೊಂಡಾಡಿದರು. ಹಾಗೆಯೇ ಧರ್ಮಜ್ಞರಾದ ಬ್ರಾಹ್ಮಣರೆಲ್ಲರೂ ರಾಜನಿಗೆ ಅನೇಕಾಶೀರ್ವಾದಗಳನ್ನು ಮಾಡಿ, ಅವನ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು. ದಶರಥನು ಪುನಃ ಮಂತ್ರಿಗಳನ್ನು ನೋಡಿ "ಈ ಋತ್ವಿಕ್ಕುಗಳು ಉಪದೇಶಿಸಿದಂತೆ ಸಮಸ್ತ ಯಜ್ಞಸಂಭಾರಗಳೂ ಸಿದ್ಧಮಾಡಲ್ಪಡಲಿ!" ಎಂದು ಹೇಳಿ, ಆ ಮಂತ್ರಿಗಳೆಲ್ಲರನ್ನೂ ಕಳುಹಿಸಿಬಿಟ್ಟು, ತಾನೂ ತನ್ನ ಅರಮನೆಗೆ ಹೋಗಿ, ತನ್ನ ಪ್ರಿಯಪತ್ನಿಯರನ್ನು ಕುರಿತು "ನಾನು ಪುತ್ರಾರ್ಥವಾಗಿ ಯಾಗಮಾಡಬೇಕೆಂದಿರುವೆನು. ನೀವೆಲ್ಲರೂ ದೀಕ್ಷೆಯಲ್ಲಿರಬೇಕು" ಎಂದು ಸೂಚಿಸಿದನು. ಈ ಮಾತನ್ನು ಕೇಳಿದೊಡನೆಯೇ, ಅವರೆಲ್ಲರಿಗೂ ಅತ್ಯಾನಂದವುಂಟಾಗಲು, ಹೇಮಂತಋತುವು ಕಳೆದಮೇಲೆ ಕಮಲಗಳು ಹೇಗೆ ವಿಕಾಸವನ್ನು ಹೊಂದುವುವೋ, ಹಾಗೆ ಅವರ ಮುಖದಲ್ಲಿ ವಿಕಾಸ ಉಂಟಾಯಿತು.

ಇಲ್ಲಿಗೆ ಎಂಟನೆಯ ಸರ್ಗವು.

ಋಶ್ಯಶೃಂಗಚರಿತ್ರವು

ದಶರಥನು ಪುತ್ರಾರ್ಥವಾಗಿ ಅಶ್ವಮೇಧಯಾಗವನ್ನು ಮಾಡುವನೆಂಬ ವಾಕ್ಯವನ್ನು ಕೇಳಿ, ಸಾರಥಿಯಾದ ಸುಮಂತ್ರನು ರಾಜನನ್ನು ಕುರಿತು ಏಕಾಂತದಲ್ಲಿ, "ಎಲೈ ಮಹಾರಾಜನೆ! ಋತ್ವಿಕ್ಕುಗಳು ನಿನಗೆ ಅಶ್ವಮೇಧ ಯಾಗವನ್ನು ಮಾಡಬೇಕೆಂದು ಉಪದೇಶಿಸಿರುವರಲ್ಲವೆ ? ನಾನಾದರೋ ಇದನ್ನು ಇತಿಹಾಸ ರೂಪವಾಗಿ ಮೊದಲೇ ಕೇಳಿದ್ದೆನು. ಪೂಜ್ಯನಾದ ಸನತ್ಕುಮಾರನು ನಿನ್ನ ಸಂತಾನಪ್ರಾಪ್ತಿ ವಿಷಯವಾಗಿ ಈಗ ನಡೆಯಬಹು ದಾದ ಕೆಲವು ವೃತ್ತಾಂತಗಳನ್ನು ಕುರಿತು ಅನೇಕ ಋಷಿಗಳ ಮುಂದೆ ಮೊದಲೇ ಒಂದು ಕಥೆಯನ್ನು ಹೇಳಿರುವನು. ಅದನ್ನು ಹೇಳುವೆನು ಕೇಳು. "ಕಶ್ಯಪ ನಿಗೆ ವಿಭಂಡಕನೆಂಬ ಒಬ್ಬ ಪುತ್ರನುಂಟು. ಮುಂದೆ ಅವನಿಗೆ ಋಶ್ಯಶೃಂಗನೆಂಬ ಪುತ್ರನೊಬ್ಬನು ಹುಟ್ಟುವನು. ಆ ಋಷಿಯು ಯಾವಾಗಲೂ ಕಾಡಿನಲ್ಲಿಯೇ ಬೆಳೆದು ಅಲ್ಲಲ್ಲಿ ಸಂಚರಿಸುತ್ತಾ, ತನ್ನ ತಂದೆಯ ಶುಶ್ರೂಷೆಯೊಂದಲ್ಲದೆ ಮತ್ತಾವುದನ್ನೂ ಕಂಡು ತಿಳಿಯುವನಲ್ಲ. ಆತನು ವನಪ್ರದೇಶವನ್ನು ಹೊರತು ಬೇರೆ ಗ್ರಾಮಗಳನ್ನಾಗಲಿ, ಗ್ರಾಮವಾಸಿಗಳನ್ನಾಗಲಿ ಕಾಣುವವ ನಲ್ಲ. ಹೀಗೆ ಆ ಮಹಾತ್ಮನು ನಡೆಸಿಕೊಂಡು ಬರುತ್ತಿರುವ ಬ್ರಹ್ಮಚರ್ಯವು ಭಂಗಹೊಂದಿ ಆತನು ಗೃಹಸ್ಥನಾಗುವನು. ಆದುದರಿಂದ ಅವನ [1]ಬ್ರಹ್ಮ ಚರ್ಯವು ಎರಡು ಬಗೆಯಾಗುವುದು; ಲೋಕಪ್ರಸಿದ್ಧವಾದ ಅಜಿನ ದಂಡಾದಿಗಳನ್ನು ಧರಿಸಿ ನಡೆಸುವುದೊಂದು ; ಸ್ಮೃತಿಕರ್ತರಾದ ಬ್ರಾಹ್ಮಣರು ಹೇಳಿರುವಂತೆ ವಿವಾಹವಾದಮೇಲೆ ನಿಯತಕಾಲಕ್ಕೆ ಪತ್ನಿಯೊಡಗೂಡು ವುದು ಮತ್ತೊಂದು; ಹೀಗೆ ದ್ವೈವಿಧ್ಯವನ್ನು ಹೊಂದುವುದು. ಹೀಗೆ ಅಗ್ನಿಹೋತ್ರಗಳನ್ನು ನಡೆಸುತ್ತಾ, ಪಿತೃಶುಶ್ರೂಷೆಯನ್ನು ಮಾಡಿಕೊಂಡು, ಮೊದಲನೆಯ ಬ್ರಹ್ಮಚರ್ಯದಲ್ಲಿಯೇ ಕೆಲವುಕಾಲ ಕಳೆಯುವನು. ಈ ಬ್ರಹ್ಮಚರ್ಯದಲ್ಲಿರುವಾಗಲೇ ಪ್ರತಾಪವಂತನಾದ ರೋಮಪಾದನೆಂಬ ರಾಜ

1. ಬ್ರಹ್ಮಚರ್ಯದಲ್ಲಿ ಎರಡು ವಿಧವುಂಟು. ಮದುವೆಯಾಗುವುದಕ್ಕೆ ಮೊದಲು ಅಜಿನ, ಮುಂಜಿ ದಂಡ ಮುಂತಾದುವುಗಳನ್ನು ಧರಿಸಿ ವನದಲ್ಲಿರು ವುದು ಒಂದು ವಿಧವು. ಮದುವೆಯಾದಮೇಲೆಯೂ ಋತುಕಾಲಗಳಲ್ಲಿ ಮಾತ್ರ ಪತ್ನಿಯೊಡಗೂಡುವ ನಿಯಮದಿಂದಿರುವುದು ಮತ್ತೊಂದು ವಿಧವು. ಆದುದರಿಂದ ಸಪತ್ನೀಕರಾದವರಿಗೂ ಬ್ರಹ್ಮಚರ್ಯವುಂಟೆಂದು ತಿಳಿಯಬೇಕು.

ನೊಬ್ಬನು ಅಂಗದೇಶಕ್ಕೆ ರಾಜನಾಗಿ ಬರುವನು. ಆ ರಾಜನು ಧರ್ಮವನ್ನತಿಕ್ರಮಿಸುವುದರಿಂದ, ಆತನ ದೇಶದಲ್ಲಿ ಅನಾವೃಷ್ಟಿಯಿಂದ ಬಹಳ ಭಯಂಕರವಾದ ಕ್ಷಾಮವುಂಟಾಗುವುದು. ಈ ಕ್ಷಾಮವು ಬಹುಕಾಲದವರೆಗೆ ಅವನ ದೇಶದಲ್ಲಿ ನೆಲೆಯಾಗಿ ನಿಲ್ಲುವುದರಿಂದ ಆ ರಾಜನು ಚಿಂತಾಕ್ರಾಂತನಾಗಿ, ಅನೇಕ ಶಾಸ್ತ್ರಗಳನ್ನು ಕೇಳಿ ಒಂದಾನೊಂದುದಿನ ಜ್ಞಾನವೃದ್ಧರಾಗಿಯೂ, ವಯೋವೃದ್ಧರಾಗಿಯೂ ಇರುವ ಬ್ರಾಹ್ಮಣರೆಲ್ಲರನ್ನೂ ಕರೆಸಿ "ಎಲೈ ಬ್ರಾಹ್ಮಣೋತ್ತಮರೆ! ನೀವು ಸಮಸ್ತಧರ್ಮಗಳನ್ನೂ ಕೇಳಿರುವಿರಿ. ಲೋಕವ್ಯಾಪಾರಗಳೆಲ್ಲವೂ ನಿಮಗೆ ಚೆನ್ನಾಗಿ ತಿಳಿದಿರುವುವು. ನಮ್ಮ ದೇಶದಲ್ಲಿ ಈ ಅನಾವೃಷ್ಟಿಗೆ ಕಾರಣವೇನು? ಇದಕ್ಕೆ ಪ್ರಾಯಶ್ಚಿತ್ತವಾವುದು? ನಡೆಸಬೇಕಾದ ನಿಯಮಗಳೇನು? ಇವೆಲ್ಲವನ್ನೂ ನನಗೆ ಅನುಗ್ರಹಿಸಿ ತಿಳಿಸಬೇಕು" ಎಂದು ಪ್ರಾರ್ಥಿಸುವನು.

ಅದನ್ನು ಕೇಳಿ ವೇದಪಾರಂಗತರಾದ ಆ ಬ್ರಾಹ್ಮಣರೆಲ್ಲರೂ "ಎಲೈ ರಾಜನೆ! ನಿನ್ನಿಂದಾದಷ್ಟು ಪ್ರಯತ್ನಮಾಡಿ ವಿಭಂಡಕನ ಮಗನಾದ ಋಶ್ಯಶೃಂಗನನ್ನು ಇಲ್ಲಿಗೆ ಕರೆತರಿಸು. ಆತನನ್ನು ಸಮಸ್ತಸತ್ಕಾರಗಳಿಂದಲೂ ಪೂಜಿಸಿ, ನಿನ್ನ ಮಗಳಾದ ಶಾಂತೆಯನ್ನು ಆತನಿಗೆ ಕೊಟ್ಟು ಶಾಸ್ತ್ರೋಕ್ತವಾಗಿ ವಿವಾಹವನ್ನು ನಡೆಸು" ಎನ್ನುವರು. ಈ ಮಾತನ್ನು ಕೇಳಿ ರಾಜನು ತನ್ನ ಮನಸ್ಸಿನಲ್ಲಿ "ಆ ಮಹರ್ಷಿಯನ್ನು ಇಲ್ಲಿಗೆ ಕರೆತರುವುದಕ್ಕೆ ಉಪಾಯವೇನು?" ಎಂದು ಚಿಂತಿಸುತ್ತಾ, ಕೊನೆಗೆ ಮಂತ್ರಿಗಳೊಡನೆ ಕಲೆತು ಆಲೋಚಿಸಿ, ಬ್ರಾಹ್ಮಣರ ಮೂಲಕವಾಗಿಯೇ ಆತನನ್ನು ಇಲ್ಲಿಗೆ ಕರೆತರಬೇಕೆಂದು ನಿಶ್ಚಯಿಸಿಕೊಂಡು, ಆಮೇಲೆ ಪುರೋಹಿತರನ್ನೂ ಮಂತ್ರಿಗಳನ್ನೂ ಕರೆದು ಅವರೆಲ್ಲರನ್ನೂ ಯಥೋಚಿತವಾಗಿ ಸತ್ಕರಿಸಿ, ತನ್ನ ಉದ್ದೇಶವನ್ನು ತಿಳಿಸಿ, ಅಲ್ಲಿಗೆ ಹೋಗಿಬರಬೇಕೆಂದು ಪ್ರಾರ್ಥಿಸುವನು. ಇದನ್ನು ಕೇಳಿ ಅವರೆಲ್ಲರೂ ಚಿಂತೆಯಿಂದ ತಲೆಯನ್ನು ಬಗ್ಗಿಸಿ, "ಎಲೈ ಮಹಾರಾಜನೆ! ಆ ವಿಭಂಡಕ ಋಷಿಯನ್ನು ಕಂಡಮಾತ್ರಕ್ಕೆ ನಮಗೆ ಭಯವುಂಟಾಗುವುದು. ಇದು ನಮ್ಮಿಂದ ಸಾಧ್ಯವಲ್ಲ. ನಾವು ಅದಕ್ಕೆ ಯಾವುದಾದರೂ ಬೇರೆ ಉಪಾಯವನ್ನು ಆಲೋಚಿಸಿ ಹೇಳುವೆವು" ಎಂದು ಸಮಾಧಾನಹೇಳಿ, ಕೊನೆಗೆ ಎಲ್ಲರೂ ಕಲೆತು ಆಲೋಚಿಸಿ, "ರಾಜನೆ! ಒಂದು ಉಪಾಯದಿಂದ ಆ ಋಷಿಯನ್ನು ಕರೆತರಬಹುದು. ಅದರಿಂದ ಯಾರಿಗೂ ಯಾವ ದೋಷವೂ ಉಂಟಾಗದು.

ನಮಗೂ ವಿಭಂಡಕನಿಂದ ಯಾವ ಭಯವೂ ಇಲ್ಲ. ಈ ಅನಾವೃಷ್ಟಿ ಭಯವೂ ತಪ್ಪುವುದು" ಎನ್ನುವರು. ಅವರ ಹೇಳಿಕೆಯಂತೆ ಅಂಗರಾಜನು ವೇಶ್ಯೆಯ ರನ್ನು ಕಳುಹಿಸಿ, ಆ ಋಶ್ಯಶೃಂಗನನ್ನು ಕರೆಯಿಸುವನು. ಒಡನೆಯೇ ವಿಶೇಷ ವಾದ ಸುವೃಷ್ಟಿಯು ಸುರಿಯುವುದು. ಶಾಂತಾದೇವಿಯನ್ನು ಆತನಿಗೆ ಕೊಟ್ಟು ವಿವಾಹವನ್ನೂ ಮಾಡುವನು. ಆದುದರಿಂದ [1]ಅಳಿಯನಾದ ಆ ಋಶ್ಯ ಶೃಂಗನೇ ದಶರಥನಿಗೂ ಪುತ್ರೋತ್ಪತ್ತಿಯಾಗುವಂತೆ ಮಾಡುವನು" ಎಂದು ಸನತ್ಕುಮಾರನು ಹಿಂದೆ ನನಗೆ ಹೇಳಿದ ವೃತ್ತಾಂತವನ್ನು ಈಗ ನಾನು ನಿನಗೆ ಹೇಳಿರುವೆನು" ಎಂದನು. ಸುಮಂತ್ರನ ಈ ಮಾತನ್ನು ಕೇಳಿ ದಶರಥನು ಬಹಳ ಸಂತೋಷಹೊಂದಿ, "ಎಲೈ ಮಂತ್ರಿಯೆ! ಆಗ ಋಶ್ಯಶೃಂಗನನ್ನು ಕರೆತಂದ ರೀತಿಯೆಲ್ಲವನ್ನೂ ನನಗೆ ವಿಸ್ತಾರವಾಗಿ ತಿಳಿಸು" ಎಂದು ಕೇಳಿದನು.

ಇಲ್ಲಿಗೆ ಒಂಬತ್ತನೆಯ ಸರ್ಗವು.

ವೇಶ್ಯಾಸ್ತ್ರೀಯರು ಋಶ್ಯಶೃಂಗನನ್ನು ವಂಚಿಸಿ ಕರೆತಂದುದು

ಹೀಗೆ ಕೇಳಿದ ರಾಜನನ್ನು ನೋಡಿ ಸುಮಂತ್ರನು "ಎಲೈ ರಾಜನೆ! ಮಂತ್ರಿಗಳು ಆ ಋಶ್ಯಶೃಂಗನನ್ನು ಕರೆತಂದ ರೀತಿಯನ್ನು ವಿಸ್ತಾರವಾಗಿ ಹೇಳುವೆನು ಕೇಳು. ಆ ಪುರೋಹಿತನು ಎಲ್ಲಾ ಮಂತ್ರಿಗಳೊಡನೆಯೂ ಕಲೆತು ಆಲೋಚಿಸಿ ರೋಮಪಾದನನ್ನು ಕುರಿತು "ಎಲೈ ರಾಜೇಂದ್ರನೆ! ನಾವು ಆ ಋಶ್ಯಶೃಂಗನನ್ನು ಕರೆತರುವುದಕ್ಕೆ ಒಂದು ಉಪಾಯವನ್ನು ಹುಡು ಕಿರುವೆವು. ಅದರಿಂದ ಯಾವ ಅಪಾಯವೂ ಇರದು. ಈ ಮಹರ್ಷಿಯು ಯಾವಾಗಲೂ ಕಾಡಿನಲ್ಲಿಯೇ ಸಂಚರಿಸತಕ್ಕವನು. ಯಾವಾಗಲೂ, ತಪಸ್ಸು, ವೇದಾಧ್ಯಯನ, ಮುಂತಾದುವುಗಳಲ್ಲಿಯೇ ಕಾಲವನ್ನು ಕಳೆಯುತ್ತಿರುವನು. ಆತನು ಹೆಂಗಸರ ಮುಖವನ್ನೇ ನೋಡಿದವನಲ್ಲ. ವಿಷಯಸುಖಗಳು ಹೇಗಿ ರುವುವೆಂಬುದನ್ನೂ ಆತನು ತಿಳಿದವನಲ್ಲ. ಸ್ರಕ್ಚಂಡನ ವನಿತಾದಿಗಳೆಂಬ ವಿಷಯಗಳು ಇಂದ್ರಿಯಗಳಿಗೆ ಆಸೆಯನ್ನುಂಟುಮಾಡಿ ಎಂತಹ ವಿರಕ್ತರ

---

1. ಶಾಂತೆಯೆಂಬುವಳು ದಶರಥನ ಔರಸಪುತ್ರಿಯು. ಇವಳನ್ನು ದಶರಥನು ರೋಮಪಾದನಿಗೆ ಸ್ನೇಹಕಾರರೂಪವಾಗಿ ಕೊಟ್ಟುಬಿಟ್ಟುದರಿಂದ, ಆ ರೋಮಪಾದನಿಗೆ ದತ್ತು ಮಗಳಾದಳು. ಆದುದರಿಂದ ಋಶ್ಯಶೃಂಗನು ಅವರಿಬ್ಬರಿಗೂ ಅಳಿಯನೆನಿಸಿಕೊಂಡನು.

ಮನಸ್ಸನ್ನಾದರೂ ನಿಮಿಷಮಾತ್ರದಲ್ಲಿ ತನ್ನ ಕಡೆಗೆ ಎಳೆದು ಬಿಡುವುವಲ್ಲವೆ? ಈ ವಿಧವಾದ ಉಪಾಯಗಳಿಂದಲೇ ಅವನನ್ನು ಮರುಳುಮಾಡಿ ನಮ್ಮ ಪಟ್ಟಣಕ್ಕೆ ಕರೆದುಕೊಂಡು ಬರಬೇಕು. ಅದಕ್ಕೆ ತಕ್ಕ ಪ್ರಯತ್ನಗಳನ್ನು ಮಾಡು. ಒಳ್ಳೇ ರೂಪವುಳ್ಳ ಕೆಲವು ವೇಶ್ಯೆಯರನ್ನು ಕರೆಸಿ, ಅವರಿಗೆ ಚೆನ್ನಾಗಿ ಅಲಂಕಾರಮಾಡಿ ಆ ತಪೋವನಕ್ಕೆ ಕಳುಹಿಸು. ಅವರು ಬಗೆಬಗೆಯಾದ ಉಪಾಯಗಳಿಂದ ಆತನನ್ನು ವಂಚಿಸಿ ಇಲ್ಲಿಗೆ ಕರೆತರುವರು" ಎಂದರು. ಈ ಮಾತಿಗೆ ರಾಜನೂ ಒಪ್ಪಿದನು. ಒಡನೆಯೇ ಪುರೋಹಿತನು ಈ ವಿಷಯವನ್ನು ಮಂತ್ರಿಗಳಿಗೆ ತಿಳಿಸಲು, ಮಂತ್ರಿಗಳು ಅನೇಕ ವೇಶ್ಯಾಸ್ತ್ರೀಯರನ್ನು ಕರೆತರಿಸಿ, ಆ ತಪೋವನಕ್ಕೆ ಕಳುಹಿಸಿದನು. ಈ ಸ್ತ್ರೀಯರು ಅಲ್ಲಿ ಹೋಗಿ, ಆ ಆಶ್ರಮಕ್ಕೆ ಸ್ವಲ್ಪದೂರದಲ್ಲಿ ನಿಂತು, ಆ ಋಷಿಯನ್ನು ನೋಡುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡುತ್ತಿದ್ದರು. ಬಹುಕಾಲದವರೆಗೆ ಇವರ ಪ್ರಯತ್ನವು ಕೈಗೂಡಲಿಲ್ಲ. ಏಕೆಂದರೆ, ಆ ಋಷಿಪುತ್ರನು ಬಹಳ ಜಿತೇಂದ್ರಿಯನು. ಯಾವಾಗಲೂ ಆ ಆಶ್ರಮವನ್ನು ಬಿಟ್ಟು ಹೊರಕ್ಕೆ ಬರ ತಕ್ಕವನಲ್ಲ. ವಿಷಯೋಪಭೋಗಗಳಿಗೆ ಸುಲಭವಾಗಿ ವಶವಾಗತಕ್ಕವನಲ್ಲ. ಈತನು ತಂದೆಯು ಬಳಿಯಲ್ಲಿಯೇ ಇದ್ದು ಯಾವಾಗಲೂ ಆತನನ್ನುಪಚರಿಸುತ್ತಿದ್ದುದರಿಂದ, ಬೇರೆ ಯಾವ ವಿಷಯಕ್ಕೂ ಗಮನಕೊಡತಕ್ಕವನಲ್ಲ. ಈತನ ಸಂತೋಷವೆಲ್ಲವೂ ಪಿತೃಶುಶ್ರೂಷೆಯೊಂದರಲ್ಲಿಯೇ ಅಡಗಿತ್ತು. ಈತನು ಹುಟ್ಟಿದುದು ಮೊದಲು ಒಬ್ಬ ಸ್ತ್ರೀಯನ್ನಾಗಲಿ, ಪುರುಷನನ್ನಾಗಲಿ ಕಂಡವನಲ್ಲ. ಗ್ರಾಮಗಳಲ್ಲಿಯಾಗಲಿ, ನಗರಗಳಲ್ಲಿಯಾಗಲಿ ಹುಟ್ಟಿದ ಯಾವ ಪದಾರ್ಥಗಳನ್ನೂ ಇವನು ಇದುವರೆಗೂ ನೋಡಿದವನಲ್ಲ. ಹೀಗಿದ್ದರೂ ಆಕಸ್ಮಿಕವಾಗಿ ಒಂದಾನೊಂದು ದಿವಸ ಆ ಋಷಿಕುಮಾರನು ಈ ಸ್ತ್ರೀಯರಿದ್ದ ಕಡೆಗೆ ಬಂದು ಇವರನ್ನು ನೋಡಿಬಿಟ್ಟನು. ವಿಚಿತ್ರವಾದ ಉಡಿಗೆತೊಡಿಗೆಗಳುಳ್ಳ ಆ ಸ್ತ್ರೀಯರೂ ಕೂಡ ಈ ಋಷಿಕುಮಾರನನ್ನು ಕಂಡೊಡನೆ, ಇಂಪಾದ ಸ್ವರಗಳಿಂದ ಹಾಡುತ್ತ, ಈತನ ಸಮೀಪಕ್ಕೆ ಬಂದು, "ಎಲೈ ಬ್ರಾಹ್ಮಣನೆ! ನೀನು ಯಾರು? ಇಲ್ಲೇನು ಮಾಡುತ್ತಿರುವೆ? ಈ ಭಯಂಕರವಾದ ಕಾಡಿನಲ್ಲಿ ಒಬ್ಬನೇ ಸಂಚರಿಸುತ್ತಿರುವುದಕ್ಕೆ ಕಾರಣವೇನು? ಇದೆಲ್ಲವನ್ನೂ ತಿಳಿದುಕೊಳ್ಳಬೇಕೆಂದು ನಮಗೆ ಬಹಳವಾದ ಕುತೂಹಲವುಂಟು" ಎಂದು ಕೇಳಿದರು.

ಈ ಋಷಿಯು ಇಂತಹ ವಿಚಿತ್ರವಾದ ರೂಪವನ್ನು ಹಿಂದೆ ಯಾವಾಗಲೂ ನೋಡಿದ್ದವನಲ್ಲ. ಆ ಸ್ತ್ರೀಯರನ್ನು ನೋಡಿದೊಡನೆ ಇವನಿಗೂ ಮನಸ್ಸು ಕದಲಿತು. ಇವನಿಗೆ ಅವರಲ್ಲಿ ಒಂದು ವಿಧವಾದ ಸ್ನೇಹವುಂಟಾಯಿತು. ತನ್ನ ಪಿತೃ ವೃತ್ತಾಂತಗಳನ್ನೆಲ್ಲಾ ಅವರಿಗೆ ತಿಳಿಸಬೇಕೆಂಬ ಬುದ್ಧಿಯೂ ಹುಟ್ಟಿತು. ಆಗ ಅವರನ್ನು ನೋಡಿ "ನನ್ನ ತಂದೆಯು ವಿಭಂಡಕನು, ನನಗೆ ಋಶ್ಯಶೃಂಗನೆಂದು ಹೆಸರು. ನಮ್ಮ ತಪಃಕರ್ಮಗಳು ಈ ಆಶ್ರಮಗಳೊಳಗೆಲ್ಲಾ ಬಹಳ ಪ್ರಸಿದ್ಧವಾದುವು. ಇದೋ! ಈ ಪಕ್ಕದಲ್ಲಿಯೇ ನಮ್ಮ ಆಶ್ರಮವಿರುವುದು. ಎಲೈ ಮಂಗಳಸ್ವರೂಪವುಳ್ಳವರೇ! ನೀವು ನಮ್ಮ ಆಶ್ರಮಕ್ಕೆ ಬಂದು, ನಮ್ಮ ವಿಧಿಪೂರ್ವಕಗಳಾದ ಅತಿಥಿಸತ್ಕಾರಗಳನ್ನು ಕೈಗೊಳ್ಳಬೇಕು!" ಎಂದು ಕೇಳಿಕೊಂಡನು. ಇದನ್ನು ಕೇಳಿದೊಡನೆ ಆ ಸ್ತ್ರೀಯರಿಗೆ ಆಶ್ರಮವನ್ನು ನೋಡಿಬರಬೇಕೆಂಬ ಆಸೆಹುಟ್ಟಿ ಅವನೊಡನೆ ಎಲ್ಲರೂ ಆಶ್ರಮಕ್ಕೆ ಹೋದರು. ಇವರೆಲ್ಲರಿಗೂ ಆ ಋಷಿಯು ಅರ್ಘ್ಯ ಪಾದ್ಯಗಳನ್ನೂ, ನಾನಾವಿಧವಾದ ಹಣ್ಣುಗಳನ್ನೂ ತಂದುಕೊಟ್ಟು, ಅನೇಕ ವಿಧವಾಗಿ ಪೂಜಿಸಿ ಸತ್ಕರಿಸಿದನು. ಈ ಉಪಚಾರಗಳೆಲ್ಲವನ್ನೂ ಆ ವೇಶ್ಯಾ ಸ್ತ್ರೀಯರು ಬಹಳ ಸಂತೋಷದಿಂದ ಕೈಕೊಂಡು, ಸ್ವಲ್ಪಕಾಲದವರೆಗೆ ಆತನೊಡನೆ ವಿನೋದದಿಂದ ಮಾತುಗಳನ್ನಾಡುತ್ತಿದ್ದರು. ಆದರೆ ಅವರಿಗೆ ಮನಸ್ಸಿನಲ್ಲಿ ವಿಭಂಡಕ ಮಹಾಮುನಿಯ ಭಯವು ಬಹಳವಾಗಿದ್ದುದರಿಂದ ಬೇಗ ಹಿಂತಿರುಗಿ ಹೋಗಬೇಕೆಂಬ ಆತುರವು ಹುಟ್ಟಿತು. ಈ ಸ್ತ್ರೀಯರೂ ಕೂಡ ತಪೋವನಕ್ಕೆ ಹೊರಡುವಾಗ ಆ ಋಷಿಪುತ್ರನಿಗೆ ಕೊಡುವುದಕ್ಕಾಗಿ ಕಡುಬು ಮೊದಲಾದ ನಾನಾ ವಿಧವಾದ ಭಕ್ಷ್ಯಗಳನ್ನು ತಂದಿದ್ದರಾದುದರಿಂದ, ಅವೆಲ್ಲವನ್ನೂ ಆ ಋಷಿಯ ಮುಂದಿಟ್ಟು, "ಎಲೈ, ಬ್ರಾಹ್ಮಣನೆ! ಇದೋ ಇವೆಲ್ಲವೂ ನಮ್ಮ ಆಶ್ರಮದಲ್ಲಿ-ಬೆಳೆದ ಹಣ್ಣುಗಳು! ಇವುಗಳ ರುಚಿಯನ್ನು ನೋಡು! ಇವು ದೇಹಕ್ಕೆ ಬಹಳ ಆರೋಗ್ಯವನ್ನುಂಟುಮಾಡತಕ್ಕುವು. ಸಾವಕಾಶಮಾಡಬೇಡ! ಈಗಲೇ ಇವೆಲ್ಲವನ್ನೂ ಭಕ್ಷಿಸು!" ಎಂದು ನಿರ್ಬಂಧಿಸಿದರು! ತೇಜೋನಿಧಿಯಾದ ಆ ಋಷಿಪುತ್ರನು ಅವುಗಳ ರುಚಿಯನ್ನು ಹಿಂದೆ ಯಾವಾಗಲೂ ಕಂಡರಿಯದವನಾದುದರಿಂದ, ಹಣ್ಣುಗಳೆಂಬ ಭ್ರಾಂತಿಯಿಂದಲೇ ಅವೆಲ್ಲವನ್ನೂ ತಿಂದನು. ಆಮೇಲೆ ವಾರಸ್ತ್ರೀಯರೆಲ್ಲರೂ ಬಹಳ ಸಂತೋಷದಿಂದ ಆ ಋಷಿಯನ್ನು ಆಗಾಗ ಅಪ್ಪಿಕೊಳ್ಳುತ್ತ, ಸ್ವಲ್ಪ

ಹೊತ್ತಿನವರೆಗೆ ವಿನೋದದಿಂದಿದ್ದರು. ಕೊನೆಗೆ ಇವರಿಗೆ ವಿಭಂಡಕ ಮಹಾಮುನಿಯ ಭಯವು ಕ್ಷಣಕ್ಷಣಕ್ಕೂ ಹೆಚ್ಚುತ್ತಿದ್ದುದರಿಂದ ಯಾವುದೋ ಒಂದು ವ್ರತವನ್ನು ನಡೆಸಬೇಕೆಂಬ ನೆಪವನ್ನಿಟ್ಟುಕೊಂಡು, ಆ ಋಷಿಯ ಅನುಜ್ಞೆಯನ್ನು ಪಡೆದು ಹಿಂತಿರುಗಿದರು.

ಇವರೆಲ್ಲರೂ ಆ ಆಶ್ರಮವನ್ನು ಬಿಟ್ಟು ಹೊರಟಕೂಡಲೆ, ವಿಭಂಡಕ ಪುತ್ರನಾದ ಆ ಋಷ್ಯಶೃಂಗನ ಮನಸ್ಸು ಕಳವಳಹೊಂದಿತು. ಮರುದಿನದ ವರೆಗೆ ದುಃಖದಿಂದ ಬಹಳವಾಗಿ ಪರಿತಪಿಸುತ್ತ, ನಿಂತ ಕಡೆಯಲ್ಲಿ ನಿಲ್ಲದೆ, ಕೊನೆಗೆ ಆ ಸ್ತ್ರೀಯರು ಹೋದ ದಾರಿಯನ್ನೇ ಹುಡುಕುತ್ತ ತಾನು ಮೊದಲು ಅವರನ್ನು ಕಂಡ ಸ್ಥಾನಕ್ಕೆ ಬಂದು ನೋಡಿದನು. ಆತನು ಎಷ್ಟೇ ಜಿತೇಂದ್ರಿಯ ನಾಗಿ, ನಿಯತಬ್ರಹ್ಮಚರ್ಯವುಳ್ಳವನಾಗಿದ್ದರೂ, ಆ ವಾರಸ್ತ್ರೀಯರ ಮೋಸಕ್ಕೆ ಮರುಳಾದನು. ಹೀಗೆ ಬರುತ್ತಿರುವ ಋಷಿಯನ್ನು ನೋಡಿ ಮೊದಲಿನಂತೆಯೇ ಅಲ್ಲಿ ನಿಂತಿದ್ದ ಸ್ತ್ರೀಯರು ಆತನು ತಮ್ಮ ಪಾಶಕ್ಕೆ ಸಿಕ್ಕಿಬಿದ್ದನೆಂಬ ಸಂತೋಷ ದಿಂದ, ಅವನ ಸಮೀಪಕ್ಕೆ ಬಂದು, "ಸೌಮ್ಯನೆ! ನೀನು ಒಂದಾವರ್ತಿ ಯಾದರೂ ನಮ್ಮ ಆಶ್ರಮಕ್ಕೆ ಬರಬಾರದೇಕೆ? ನಾವೂ ನಿನ್ನಂತೆಯೇ ಸತ್ಕರಿಸುವೆವು" ಎಂದು ಪ್ರಾರ್ಥಿಸಿದರು. ಈ ಇಂಪಾದ ಮಾತುಗಳನ್ನು ಕೇಳಿದೊಡನೆ ಅವನಿಗೆ ಸಂತೋಷವುಂಟಾಗಿ, ಅವರೊಡನೆ ಬರುವುದಾಗಿ ಒಪ್ಪಿಕೊಳ್ಳಲು, ಆ ಸ್ತ್ರೀಯರು ಆತನನ್ನು ಕರೆದುಕೊಂಡು ಬರುತ್ತಿದ್ದರು. ಮಹಾತ್ಮನಾದ ಋಷಿಯು ಅಂಗದೇಶಕ್ಕೆ ಕಾಲಿಟ್ಟಕೂಡಲೆ, ಪರ್ಜನ್ಯನು ಸಮಸ್ತ ಪ್ರಜೆಗಳಿಗೂ ತೃಪ್ತಿಯುಂಟಾಗುವಂತೆ ವಿಶೇಷವಾದ ಮಳೆಯನ್ನು ಸುರಿಸಿದನು. ಹೀಗೆ ಋಷ್ಯಶೃಂಗನು ಅತ್ಯುತ್ತಮವಾದ ಸುವೃಷ್ಟಿಯೊಡನೆ, ತನ್ನ ದೇಶಕ್ಕೆ ಪ್ರವೇಶಮಾಡಿದುದನ್ನು ನೋಡಿ ರೋಮಪಾದನು ಬಹಳ ಸಂತೋಷದಿಂದ ಆತನನ್ನು ಇದಿರುಗೊಂಡು, ಆತನ ಪಾದವನ್ನು ಹಿಡಿದು ವಿನಯದಿಂದ ನಮಸ್ಕರಿಸಿ, ಶಾಸ್ತ್ರೋಕ್ತವಾದ ಅರ್ಘ್ಯಪಾದ್ಯಾದಿಗಳಿಂದ ಆತನನ್ನು ಬಹಳವಾಗಿ ಸತ್ಕರಿಸಿದನು. ಮತ್ತು ಅವನನ್ನು ತಾನು ವಾರ ಸ್ತ್ರೀಯರ ಮೂಲಕವಾಗಿ ವಂಚಿಸಿ ಕರೆತಂದುದಕ್ಕಾಗಿ, ತನ್ನಲ್ಲಿ ಕೋಪವಿಲ್ಲ ದಿರಬೇಕೆಂದು ಆತನ ಅನುಗ್ರಹವನ್ನು ಬೇಡಿದನು. ಆಮೇಲೆ ರೋಮ ಪಾದನು ಆ ಋಷಿಯನ್ನು ಸಂಗಡ ಕರೆದುಕೊಂಡು ಅಂತಃಪುರಕ್ಕೆ ಹೋಗಿ, ತನ್ನ ಮಗಳಾದ ಶಾಂತಾದೇವಿಯನ್ನು ಕೊಟ್ಟು, ಶಾಸ್ತ್ರೋಕ್ತವಾಗಿ ವಿವಾಹ

ಮಾಡಿದನು. ಋಷಿಯೂ ಕೂಡ ಪರಮಸಂತೋಷವುಳ್ಳವನಾಗಿ, ಸಮಸ್ತ ಭೋಗಗಳನ್ನೂ ಅನುಭವಿಸುತ್ತ ಶಾಂತೆಯೊಡಗೂಡಿ ಸುಖದಿಂದಿದ್ದನು.

ಇಲ್ಲಿಗೆ ಹತ್ತನೆಯ ಸರ್ಗವು

ದಶರಥನು ಅಂಗದೇಶದಿಂದ ಋಷ್ಯಶೃಂಗನನ್ನು ಕರೆತರಿಸಿದುದು

"ಎಲೈ ರಾಜೇಂದ್ರನೆ? ದೇವಶ್ರೇಷ್ಠನಾದ ಆ ಸನತ್ಕುಮಾರನು ಇನ್ನೂ ಕೆಲವು ವೃತ್ತಾಂತಗಳನ್ನು ಹೇಳಿರುವನು. ನಿನಗೆ ಹಿತಕರವಾದ ಆ ವಿಷಯಗಳನ್ನೂ ಹೇಳುವೆನು ಕೇಳು— ಇಕ್ಷ್ವಾಕುವಂಶದಲ್ಲಿ ಬಹಳ ಧಾರ್ಮಿಕನೆಂದೂ, ಸತ್ಯಸಂಧನೆಂದೂ ಖ್ಯಾತಿ ಹೊಂದತಕ್ಕ ದಶರಥನೆಂಬ ಒಬ್ಬ ರಾಜನು ಹುಟ್ಟುವನು. ಆತನಿಗೆ ಅಂಗದೇಶದ ರಾಜನೊಡನೆ ಸ್ನೇಹವುಂಟಾಗುವುದು. ಈ ಅಂಗರಾಜನಿಗೆ ರೋಮಪಾದನೆಂಬ ಒಬ್ಬ ಕುಮಾರನು ಹುಟ್ಟುವನು. ಇವನಿಗೆ ಶಾಂತೆಯೆಂಬ ಭಾಗ್ಯಸಂಪನ್ನೆಯಾದ ಕನ್ಯೆಯೊಬ್ಬಳಿರುವಳು. ಮಹಾಯಶಸ್ವಿಯಾದ ದಶರಥನು ಆ ರೋಮಪಾದನ ಬಳಿಗೆ ಹೋಗಿ, ಎಲೈ ಧರ್ಮಾತ್ಮನೆ! ನನಗೆ ಸಂತಾನವಿಲ್ಲವು. ಅದಕ್ಕಾಗಿ ಯಜ್ಞವನ್ನಾರಂಭಿಸಿರುವೆನು. ಶಾಂತಾದೇವಿಗೆ ಪ್ರಾಣಪ್ರಿಯನಾದ ನಿನ್ನ ಅಳಿಯನನ್ನು ಕಳುಹಿಸಿಕೊಡು! ಆ ಮಹರ್ಷಿಯಿಂದಲೇ ನನ್ನ ಯಜ್ಞವು ಸಮಾಪ್ತಿ ಹೊಂದಬೇಕಾಗಿರುವುದು—ಎಂದು ಪ್ರಾರ್ಥಿಸಲು, ರೋಮಪಾದನು ಸ್ವಲ್ಪ ಹೊತ್ತು ಮನಸ್ಸಿನಲ್ಲಿ ಚಿಂತಿಸಿ, ಕೊನೆಗೆ ತನ್ನ ಅಳಿಯನಾದ ಋಷ್ಯಶೃಂಗನನ್ನು ಕಳುಹಿಸಿಕೊಡುವನು. ದಶರಥನೂ ಆ ಬ್ರಾಹ್ಮಣನನ್ನು ಕರೆತಂದು, ಸಂತೋಷದಿಂದ ಯಜ್ಞವನ್ನು ಮುಗಿಸುವನು. ಯಶಸ್ಕಾಮನಾದ ದಶರಥನು ಋಷ್ಯಶೃಂಗಮಹರ್ಷಿಯನ್ನು, ತನ್ನ ಯಜ್ಞಪರಿಪೂರ್ತಿಗಾಗಿ ಮಾತ್ರವಲ್ಲದೆ, ಸಂತಾನಪ್ರಾಪ್ತಿಗಾಗಿಯೂ, ಸ್ವರ್ಗಾದಿಪುಣ್ಯಲೋಕಗಳನ್ನು ಪಡೆಯಬೇಕೆಂಬ ಉದ್ದೇಶದಿಂದಲೂ ವರಿಸಿದವನಾಗಿ, ಆತನ ಮೂಲಕವಾಗಿ ತನ್ನ ಉದ್ದೇಶಗಳನ್ನೆಲ್ಲಾ ಹೊಂದುವನು. ಇದರಿಂದ ಈ ರಾಜನಿಗೆ, ವಂಶೋದ್ಧಾರಕರಾಗಿಯೂ, ಲೋಕವಿಖ್ಯಾತರಾಗಿಯೂ, ಮಹಾಪರಾಕ್ರಮಶಾಲಿಗಳಾಗಿಯೂ ಇರುವ ನಾಲ್ವರು ಗಂಡುಮಕ್ಕಳು ಹುಟ್ಟುವರು. ಹೀಗೆಂದು ಪೂಜ್ಯನಾದ ಆ ಸನತ್ಕುಮಾರನು ಬಹುಕಾಲದಹಿಂದೆ ಎಂದರೆ, ಕೃತಯುಗದಲ್ಲಿಯೇ ನನಗೆ ಈ ಭವಿಷ್ಯದ್ವೃತ್ತಾಂತವನ್ನು ಸೂಚಿಸಿರುವನು.

ಆದುದರಿಂದ, ಎಲೈ ಮಹಾರಾಜನೆ! ನೀನು ಈಗಲೇ ಹೋಗಿ, ಆ ಋಷ್ಯಶೃಂಗನನ್ನು ಸತ್ಕರಿಸಿ ಕರೆದುಕೊಂಡು ಬಾ! ಆತನ ಮರ್ಯಾದಾರ್ಥ ವಾಗಿ ನಿನ್ನ ಸಮಸ್ತಸೈನ್ಯಗಳನ್ನೂ, ವಾಹನಗಳನ್ನೂ ಸಂಗಡ ಕರೆದುಕೊಂಡು ಹೋಗು" ಎಂದನು.

ಸುಮಂತ್ರನ ಈ ವಾಕ್ಯವನ್ನು ಕೇಳಿದೊಡನೆ ದಶರಥನು ಕುಲ ಪುರೋಹಿತರಾದ ವಸಿಷ್ಠರಿಗೆ ತಿಳಿಸಿ, ಈ ವಿಷಯದಲ್ಲಿ ಅವರ ಅನುಮತಿ ಯನ್ನೂ ಪಡೆದು ತನ್ನ ಮಂತ್ರಿಗಳನ್ನೂ, ಅಂತಃಪುರಸ್ತ್ರೀಯರನ್ನೂ ಸಂಗಡ ಕರೆದುಕೊಂಡು, ಸಮಸ್ತಸೈನ್ಯಗಳೊಡನೆ ಆ ಬ್ರಾಹ್ಮಣನಿರುವ ದೇಶಕ್ಕೆ ಹೊರಟನು. ದಾರಿಯಲ್ಲಿ ಅನೇಕ ನದಿಗಳನ್ನೂ ಕಾಡುಗಳನ್ನೂ ದಾಟಿ, ಅವುಗಳ ಸೌಂದರ್ಯವನ್ನು ನೋಡುತ್ತ, ಅಂಗದೇಶವನ್ನು ಸೇರಿ, ಅಲ್ಲಿ ರೋಮಪಾದನ ಬಳಿಯಲ್ಲಿ ಅಗ್ನಿಯಂತೆ ಜ್ವಲಿಸುತ್ತಿರುವ ಋಷ್ಯಶೃಂಗನನ್ನು ಕಂಡು ಬಹಳ ಭಕ್ತಿಯಿಂದ ಆತನ ಪಾದಗಳಿಗೆ ನಮಸ್ಕರಿಸಿದನು. ಆಗ ರೋಮಪಾದನು ದಶರಥನಲ್ಲಿ ತನಗಿದ್ದ ವಿಶೇಷವಾದ ಸ್ನೇಹದಿಂದ, ಆತನು ಬಂದುದಕ್ಕಾಗಿ ಬಹಳ ಸಂತೋಷಪಟ್ಟು, ಅವನನ್ನು ವಿಶೇಷವಾಗಿ ಸತ್ಕರಿಸಿ, ಯಥೋಚಿತವಾದ ಮರ್ಯಾದೆಗಳನ್ನೆಲ್ಲಾ ನಡೆಸಿದನು. ಆಮೇಲೆ ಪಕ್ಕದಲ್ಲಿ ಋಷ್ಯಶೃಂಗನನ್ನು ಕುರಿತು, "ಇದೋ! ಈತನು ನನ್ನ ತಂದೆಗೆ ಬಹಳ ಪ್ರಿಯ ಮಿತ್ರನು; ಇಷ್ಟುಮಾತ್ರವೇ ಅಲ್ಲದೆ, ನಿನ್ನ ಹೆಂಡತಿಯಾದ ಶಾಂತೆಗೆ ಈತನೇ ಹೆತ್ತತಂದೆಯು. ಆದುದರಿಂದ ನಿನಗೂ ಈತನಿಗೂ ಬಹಳ ಸಮೀಪ ಬಾಂಧವ್ಯ ವುಂಟು" ಎಂದನು. ಇದನ್ನು ಕೇಳಿ ಋಷ್ಯಶೃಂಗನು ತನ್ನ ಮಾವನಾದ ದಶರಥನಲ್ಲಿ ಬಹಳ ಗೌರವವನ್ನು ತೋರಿಸಿ ಪೂಜಿಸಿದನು. ಹೀಗೆ ದಶರಥನು ಅವರಿಬ್ಬರಿಂದಲೂ ಸತ್ಕರಿಸಲ್ಪಟ್ಟು ಏಳೆಂಟು ದಿನಗಳವರೆಗೆ ಅಲ್ಲಿಯೇ ವಾಸ ವಾಗಿದ್ದು, ಕೊನೆಗೆ ಆ ರಾಜನನ್ನು ನೋಡಿ ಎಲೈ ಮಿತ್ರನೆ! "ನಿನ್ನ ಮಗಳಾದ ಶಾಂತೆಯನ್ನು ಆಕೆಯ ಪತಿಯೊಡನೆ ನನ್ನ ಪಟ್ಟಣಕ್ಕೆ ಕರೆದು ಕೊಂಡು ಹೋಗಬೇಕೆಂದಿರುವೆನು. ನನಗೆ ಅದರಿಂದ ಒಂದು ದೊಡ್ಡ ಕೆಲಸವಾಗಬೇಕಾಗಿರುವುದು" ಎಂದು ಕೇಳಲು, ಆ ರೋಮಪಾದನು ಹಾಗೆಯೇ ಆಗಲೆಂದು ಒಪ್ಪಿ, ಆ ಬ್ರಾಹ್ಮಣನನ್ನು ನೋಡಿ "ನೀವು ಪತ್ನೀಸಮೇತರಾಗಿಯೇ ಈ ದಶರಥನ ಸಂಗಡ ಹೋಗಬೇಕು" ಎಂದನು. ಆ ಮುನಿಕುಮಾರನೂ ರೋಮಪಾದನ ಮಾತಿನಂತೆ ತನ್ನ ಹೆಂಡತಿಯನ್ನು

ಕರೆದುಕೊಂಡು ಪ್ರಯಾಣಸನ್ನದ್ಧನಾದನು. ದಶರಥನೂ ರೋಮಪಾದನೂ, ಬಹಳ ಸಂತೋಷದಿಂದ ಪರಸ್ಪರವಾಗಿ ಆಲಿಂಗನಾದಿಗಳನ್ನು ಮಾಡಿಕೊಂಡು, ಒಬ್ಬರಿಗೊಬ್ಬರು ಕೈಮುಗಿಯುತ್ತಾ, ಬಹಳ ಪ್ರೀತಿಯನ್ನು ತೋರಿಸಿದರು. ಕೊನೆಗೆ ದಶರಥನು ಆ ರೋಮಪಾದನ ಅನುಮತಿಯನ್ನು ಪಡೆದು ತನ್ನ ಪಟ್ಟಣದ ಜನಗಳಿಗೆ ತಮ್ಮ ಆಗಮನವನ್ನು ಮುಂದಾಗಿಯೇ ಸೂಚಿಸುವುದಕ್ಕಾಗಿ ಬಹಳ ವೇಗಶಾಲಿಗಳಾದ ದೂತರನ್ನು ಕರೆಸಿ ಅವರೆಲ್ಲರನ್ನೂ ನೋಡಿ "ಎಲೈ ಚಾರರೆ! ನಮ್ಮ ಪಟ್ಟಣವೆಲ್ಲವನ್ನೂ ಚೆನ್ನಾಗಿ ಅಲಂಕರಿಸುವಂತೆ ಪೌರರಿಗೆ ತಿಳಿಸತಕ್ಕುದು. ಎಲ್ಲಾ ಕಡೆಯಲ್ಲಿಯೂ ಧ್ವಜಗಳು ಕಟ್ಟಲ್ಪಡಲಿ! ಧೂಪದಿಂದಲೂ, ದೀಪಗಳಿಂದಲೂ ಪುಷ್ಪಹಾರಗಳಿಂದಲೂ ಬೀದಿಗಳೆಲ್ಲವೂ ಅಲಂಕರಿಸಲ್ಪಡಲಿ" ಎಂದನು. ಈ ರಾಜಾಜ್ಞೆಯಂತೆ ದೂತರು ಅಯೋಧ್ಯೆಗೆ ಹೋಗಿ, ಆ ಪಟ್ಟಣವಾಸಿಗಳೆಲ್ಲರಿಗೂ ಈ ಶುಭವೃತ್ತಾಂತವನ್ನು ತಿಳಿಸಲು, ಅಲ್ಲಿನ ಜನರೆಲ್ಲರೂ ರಾಜನ ಅಪ್ಪಣೆಯಂತೆ ಪಟ್ಟಣವನ್ನು ಅಲಂಕರಿಸಿಟ್ಟರು. ಇತ್ತಲಾಗಿ ದಶರಥನು ಆ ಬ್ರಾಹ್ಮಣನನ್ನು ಮುಂದಿಟ್ಟುಕೊಂಡು, ವಿಚಿತ್ರಾಲಂಕಾರಗಳಿಂದಲೂ, ಶಂಖ ದುಂದುಭಿ ಮೊದಲಾದ ಮಂಗಳವಾದ್ಯಗಳಿಂದಲೂ ಶೋಭಿಸುತ್ತಿದ್ದ ತನ್ನ ಅಯೋಧ್ಯಾಪಟ್ಟಣವನ್ನು ಪ್ರವೇಶಿಸಿದನು. ಇಂದ್ರವೈಭವದಿಂದ ದಶರಥನು ಆ ಬ್ರಾಹ್ಮಣನನ್ನು ಪಟ್ಟಣಕ್ಕೆ ಕರೆತರುವುದನ್ನು ನೋಡಿ ಎಲ್ಲರೂ ಬಹಳ ಸಂತೋಷಿಸಿದರು. ರಾಜನು ಆತನನ್ನು ಅಂತಃಪುರಕ್ಕೆ ಕರೆದುಕೊಂಡುಹೋಗಿ, ಶಾಸ್ತ್ರೋಕ್ತವಾಗಿ ಪೂಜಿಸಿ, ಆ ಬ್ರಾಹ್ಮಣನು ತನ್ನ ಸಂಗಡ ಬಂದುದಕ್ಕಾಗಿ, ಆಗಲೀಗ ತಾನು ಕೃತಕೃತ್ಯನೆಂದು ಸಂತೋಷಿಸುತ್ತಿದ್ದನು. ಅಂತಃಪುರಸ್ತ್ರೀಯರೂ ಪತಿಯೊಡಗೂಡಿ ಬಂದ ಆ ಶಾಂತಾದೇವಿಯನ್ನು ನೋಡಿ, ಆಕೆಯಲ್ಲಿ ಬಹಳ ಪ್ರೇಮವನ್ನು ತೋರಿಸುತ್ತಾ ಆನಂದಭರಿತರಾಗಿದ್ದರು. ಆ ಶಾಂತಾದೇವಿಯೂ ಕೂಡ, ಅಂತಃಪುರಸ್ತ್ರೀಯರೂ ರಾಜನೂ ತನಗೆ ಮಾಡಿದ ವಿಶೇಷ ಸತ್ಕಾರಗಳಿಗಾಗಿ ಬಹಳ ಸಂತೋಷಪಟ್ಟು, ಕೆಲವು ಕಾಲದವರೆಗೆ ತನ್ನ ಪತಿಯೊಡನೆ ಅಲ್ಲಿಯೇ ಸುಖದಿಂದಿದ್ದಳು.

ಇಲ್ಲಿಗೆ ಹನ್ನೊಂದನೆಯ ಸರ್ಗವು

ದಶರಥನ ಯಜ್ಞಸನ್ನಾಹವು

ಹೀಗೆ ಅನೇಕ ದಿವಸಗಳು ಕಳೆದುವು. ಬಹಳ ಮನೋಹರವಾದ ಒಂದಾನೊಂದು ವಸಂತಕಾಲವು ಪ್ರಾಪ್ತವಾಯಿತು. ಆಗ ದಶರಥನು ಬಿಸಿಲು ಮಳೆ ಗಾಳಿಗಳ ತೊಂದರೆಗಳಿಲ್ಲದೆ ಯಜ್ಞವು ನಿರ್ವಿಘ್ನವಾಗಿ ಸಮಾಪ್ತಿಹೊಂದು ವುದಕ್ಕೆ ಇದೇ ತಕ್ಕ ಕಾಲವೆಂದು ಯೋಚಿಸಿ ಋಷ್ಯಶೃಂಗಮಹರ್ಷಿಯ ಬಳಿಗೆ ಹೋಗಿ, ಸಂತಾನಾರ್ಥವಾಗಿ ತಾನು ಮಾಡಬೇಕೆಂದಿರುವ ಯಜ್ಞಕ್ಕೆ ಅವನನ್ನು ಪುರೋಹಿತನಾಗಿರಬೇಕೆಂದು ಪ್ರಾರ್ಥಿಸಿಕೊಂಡನು. ಆ ಋಷಿಯು ಹಾಗೆಯೇ ಆಗಲೆಂದು ಹೇಳಿ ಯಾಗಸಾಮಗ್ರಿಗಳೆಲ್ಲವನ್ನೂ ಸಿದ್ಧ ಪಡಿಸುವಂತೆಯೂ, ಕುದುರೆಯನ್ನು ದೇಶದೇಶಗಳ ಮೇಲೆ ಬಿಡುವಂತೆಯೂ ಹೇಳಿದನು. ಒಡನೆಯೇ ದಶರಥನು ಮಂತ್ರಿಶ್ರೇಷ್ಠನಾದ ಸುಮಂತ್ರನನ್ನು ಕರೆದು “ ಎಲೈ ಮಂತ್ರಿಯೇ ! ವೇದಪಾರಂಗತರಾದ ಸುಯಜ್ಞ, ವಾಮ ದೇವ, ಜಾಬಾಲಿ, ಕಾಶ್ಯಪರೇ ಮೊದಲಾದ ಋತ್ವಿಕ್ಕುಗಳನ್ನೂ, ಕುಲ ಪುರೋಹಿತರಾದ ವಸಿಷ್ಠರನ್ನೂ ಇನ್ನೂ ಯೋಗ್ಯರಾದ ಇತರ ಬ್ರಾಹ್ಮ ಣೋತ್ತಮರನ್ನೂ ಈಗಲೇ ಕರೆಸು”ಎಂದು ಅಪ್ಪಣೆಮಾಡಿದನು. ಅದರಂತೆಯೇ ಸುಮಂತ್ರನು ಒಡನೆಯೇ ಹೋಗಿ, ಶಾಸ್ತ್ರಜ್ಞರಾದ ಸಮಸ್ತ ಬ್ರಾಹ್ಮಣ ರನ್ನೂ ಕರೆತರಲು, ಧರ್ಮಾತ್ಮನಾದ ದಶರಥರಾಜನು ಅವರೆಲ್ಲರನ್ನೂ ತಕ್ಕ ರೀತಿಯಲ್ಲಿ ಪೂಜಿಸಿ, ಧರ್ಮಾರ್ಥಯುಕ್ತವಾದ ಮೃದುವಾಕ್ಯಗಳಿಂದ ಅವರನ್ನು ಕುರಿತು, “ ಎಲೈ, ಮಹಾತ್ಮರೆ ! ಸಂತಾನಾಪೇಕ್ಷೆಯಿಂದ ಅನೇಕ ವ್ರತಗಳನ್ನು ಮಾಡಿದರೂ, ನನಗೆ ಆ ಸುಖವೆಂಬುದಿಲ್ಲದೆ ಹೋಯಿತು. ಅದಕ್ಕಾಗಿ ಅಶ್ವಮೇಧಯಾಗವನ್ನು ಶಾಸ್ತ್ರೋಕ್ತವಾಗಿ ನಡೆಸಬೇಕೆಂದು ಅಪೇಕ್ಷಿಸುವೆನು. ಈ ವಿಭಂಡಕಪುತ್ರರಾದ ಋಶ್ಯಶೃಂಗರ ಪ್ರಭಾವದಿಂದ ನನ್ನ ಕೋರಿಕೆಗಳು ನೆರವೇರುವುದರಲ್ಲಿ ಸಂದೇಹವಿರದು. ಆದುದರಿಂದ ನೀವೆಲ್ಲರೂ ಈ ವಿಷಯ ದಲ್ಲಿ ಸಹಾಯಕರಾಗಬೇಕು ” ಎಂದನು. ವಸಿಷ್ಠರೇ ಮೊದಲಾದ ಬ್ರಾಹ್ಮಣ ಶ್ರೇಷ್ಠರೆಲ್ಲರೂ ಆ ವಾಕ್ಯವನ್ನು ಬಹಳವಾಗಿ ಅನುಮೋದಿಸಿದರು. ಆಗ ಋಶ್ಯಶೃಂಗನೂ, ಇತರ ಪುರೋಹಿತರುಗಳೂ ರಾಜನನ್ನು ನೋಡಿ, “ ಎಲೈ ರಾಜೇಂದ್ರನೆ ! ಯಜ್ಞಸಾಮಗ್ರಿಗಳನ್ನು ಸಿದ್ಧಪಡಿಸಿ ಕುದುರೆಯನ್ನು ಹೊರ ಡಿಸು. ಪುತ್ರಾರ್ಥವಾಗಿ ಯಜ್ಞವನ್ನು ಮಾಡಬೇಕೆಂಬ ಈ ಧರ್ಮಬುದ್ಧಿಯು ನಿನಗೆ ಹುಟ್ಟಿದುದು ಬಹಳ ಶ್ಲಾಘ್ಯವೇ ಸರಿ. ಇದರಿಂದ ಎಣೆಯಿಲ್ಲದ

ಪರಾಕ್ರಮವುಳ್ಳ ನಾಲ್ಕು ಮಕ್ಕಳು ನಿನಗೆ ಹುಟ್ಟುವರು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ" ಎಂದರು.

ಈ ಬ್ರಾಹ್ಮಣರ ಮಾತನ್ನು ಕೇಳಿ ರಾಜನು ಸಂತೋಷದಿಂದುಬ್ಬಿದವನಾಗಿ, ಮಂತ್ರಿಗಳನ್ನು ಕುರಿತು "ಎಲೈ ಮಂತ್ರಿಗಳೇ! ಗುರುಗಳು ಹೇಳಿದಂತೆ ಸಮಸ್ತ ಸಾಮಗ್ರಿಗಳೂ ಸಿದ್ಧಪಡಿಸಲ್ಪಡಲಿ! ಸಮರ್ಥರಾದ ಅಂಗರಕ್ಷಕರೊಡನೆಯೂ, ಪುರೋಹಿತರೊಡನೆಯೂ ಯಜ್ಞಾಶ್ವವು ಕಳುಹಿಸಲ್ಪಡಲಿ! ಸರಯೂನದಿಯ ಉತ್ತರದಲ್ಲಿ ಯಜ್ಞಭೂಮಿಯನ್ನು ಮಾಡಿರಿ! ಕಲ್ಪೋಕ್ತವಾದ ಶಾಂತಿಕರ್ಮಗಳೆಲ್ಲವೂ ನಡೆಸಲ್ಪಡಲಿ. ಈ ಯಜ್ಞವನ್ನು ಯಾವ ದೊರೆಗಳಾದರೂ ಸುಲಭವಾಗಿ ನಡೆಸಿಬಿಡಬಹುದಾದರೂ, ಇದರಲ್ಲಿ ಅಲ್ಪಸ್ವಲ್ಪವೂ ಲೋಪವುಂಟಾಗಕೂಡದು. ಅದರಿಂದ ಬಹಳ ಅನರ್ಥಗಳುಂಟು! ಈ ಭಯದಿಂದಲೇ ಯಾರೂ ಈ ಯಜ್ಞಕ್ಕೆ ಪ್ರಯತ್ನಿಸುವುದೇ ಇಲ್ಲ. ಈ ಯಜ್ಞಸ್ವರೂಪವನ್ನು ಚೆನ್ನಾಗಿ ಬಲ್ಲ ಬ್ರಹ್ಮರಾಕ್ಷಸರು ಕೆಲವರುಂಟು. ಅವರು ದೋಷವನ್ನೇ ಹುಡುಕುತ್ತ ಕಾದಿರುವರು. ಆದುದರಿಂದ, ನಾವೆಲ್ಲರೂ ಬಹಳ ಜಾಗರೂಕರಾಗಿ ಇದನ್ನು ನಡೆಸಬೇಕು! ಹಾಗಿಲ್ಲದೆ ಆ ಯಜ್ಞದಲ್ಲಿ, ಕ್ರಿಯಾಲೋಪವಾಗಲಿ, ಮಂತ್ರಲೋಪವಾಗಲಿ, ದ್ರವ್ಯಲೋಪಗಳಾಗಲಿ, ಸ್ವಲ್ಪಮಟ್ಟಿಗೆ ಕಂಡುಬಂದರೂ, ಅದರ ಯಜಮಾನನಿಗೆ ನಾಶವುಂಟಾಗುವುದು! ಆದುದರಿಂದ ಈ ಕಾರ್ಯದಲ್ಲಿ ಸಮರ್ಥರಾದ ಬ್ರಾಹ್ಮಣರನ್ನು ಮುಂದಿಟ್ಟುಕೊಂಡೇ ಇದನ್ನು ನಡೆಸಬೇಕು. ನೀವೆಲ್ಲರೂ ಅದಕ್ಕೆ ತಕ್ಕ ಸನ್ನಾಹವನ್ನು ಮಾಡಿರಿ. ನೀವು ಈ ವಿಷಯದಲ್ಲಿ ಬಹಳ ತಿಳಿದವರಾದುದರಿಂದ ನಾನು ಹೇಳಬೇಕಾದುದೇನೂ ಇಲ್ಲ" ಎಂದನು. ಮಂತ್ರಿಗಳು, "ಅಪ್ಪಣೆ" ಎಂದು ಅದರಂತೆಯೇ ಎಲ್ಲವನ್ನೂ ನಡೆಸಿದರು. ಆಮೇಲೆ ಬ್ರಾಹ್ಮಣರೂ ಕೂಡ ಧರ್ಮಜ್ಞನಾದ ಆ ರಾಜನನ್ನು ಸ್ತೋತ್ರಮಾಡುತ್ತಾ, ಅವನ ಅನುಮತಿಯನ್ನು ಪಡೆದು, ತಮ್ಮ ಸ್ಥಾನಗಳಿಗೆ ಹೊರಟುಹೋದರು. ರಾಜನು ಮಂತ್ರಿಗಳೆಲ್ಲರನ್ನೂ ಅವರವರ ಸ್ಥಾನಕ್ಕೆ ಕಳುಹಿಸಿ ತನ್ನ ಅಂತಃಪುರವನ್ನು ಪ್ರವೇಶಿಸಿದನು.

ಇಲ್ಲಿಗೆ ಹನ್ನೆರಡನೆಯ ಸರ್ಗವು.

ಯಜ್ಞಸಂಭಾರಗಳನ್ನು ಸಿದ್ಧಪಡಿಸಿದುದು.

ಹೀಗೆ ಋಷ್ಯಶೃಂಗನನ್ನು ಕರೆದು ಪುರೋಹಿತನನ್ನಾಗಿಟ್ಟುದು ಮೊದಲು, ಯಜ್ಞಕಲಾಪಗಳನ್ನು[1] ನಡೆಸುವುದರಲ್ಲಿಯೇ ಒಂದು ವರ್ಷಕಾಲವು ಕಳೆದು, ತಿರುಗಿ ಮೂರನೆಯ ವರ್ಷದ ವಸಂತಕಾಲವು ಪ್ರಾಪ್ತವಾಯಿತು. ವೀರ್ಯವಂತನಾದ ಆ ದಶರಥನು ಪುತ್ರಾರ್ಥವಾಗಿ ಅಶ್ವಮೇಧಯಾಗಕ್ಕೆ ತೊಡಗಿದನು. ಮೊದಲು ವಸಿಷ್ಠನ ಬಳಿಗೆ ಹೋಗಿ, ಆತನಿಗೆ ಶಾಸ್ತ್ರರೀತಿಯಿಂದ ಪೂಜೆಯನ್ನು ಮಾಡಿ ನಮಸ್ಕರಿಸಿ, ಆ ಬ್ರಾಹ್ಮಣೋತ್ತಮನನ್ನು ಕುರಿತು ವಿನಯದಿಂದ, 'ಎಲೈ ಮುನಿವರ್ಯರೆ! ಈಗ ನಾನು ಪುತ್ರಾರ್ಥವಾಗಿ ಮಾಡಬೇಕೆಂದಿರುವ ಯಜ್ಞವು, ಶಾಸ್ತ್ರೋಕ್ತವಾಗಿ ನಡೆಯುವಂತೆಯೂ. ಯಜ್ಞಾಂಗಗಳಲ್ಲಿ ಯಾವುದೊಂದು ವಿಘ್ನವೂ ಬಾರದಂತೆಯೂ ಮುಗಿಯುವ ಹಾಗೆ ಮಾಡಬೇಕು. ನೀವು ನಮಗೆ ಯಾವಾಗಲೂ ಮೇಲ್ಮೆಯನ್ನು ಕೋರುತ್ತಿರುವವರು. ನೀವೇ ನಮಗೆ ಪರಮಗುರುಗಳು. ಆದುದರಿಂದ ಈ ಯಜ್ಞವನ್ನು ನಡೆಸತಕ್ಕ ಸಮಸ್ತ ಭಾರವೂ ನಿಮ್ಮದಾಗಿದೆ" ಎಂದು ಪ್ರಾರ್ಥಿಸಿದನು.

ಇದನ್ನು ಕೇಳಿ ಆ ಬ್ರಾಹ್ಮಣನು "ಎಲೈ ರಾಜನೆ! ಹಾಗೆಯೇ ಆಗಲಿ! ನೀನು ಹೇಳಿದಂತೆಯೇ ಎಲ್ಲವನ್ನೂ ನಡೆಸುವೆನು" ಎಂದು ಹೇಳಿ ಆಮೇಲೆ ಯಜ್ಞಕಾರ್ಯಗಳಲ್ಲಿ ನಿಪುಣರಾದ ಮತ್ತು ವಯೋವೃದ್ಧರಾದ

---

1. ಯಜ್ಞದ ಪ್ರಯತ್ನಕ್ಕೆ ಆರಂಭವಾಗಿ ಇದುವರೆಗೆ ಒಂದು ವರ್ಷಕಾಲವಾಯಿತು. ಋಷ್ಯಶೃಂಗನನ್ನು ಕರೆಸಿದುದು, ಯಜ್ಞಸಂಭಾರಗಳನ್ನು ಸಿದ್ಧಪಡಿಸಿದುದು, ಯಜ್ಞಭೂಮಿಯನ್ನು ಮಾಡಿದುದು, ಶಾಂತಿಕರ್ಮಗಳನ್ನು ನಡೆಸಿದುದು, ಸಮರ್ಥರಾದ ಕಾವಲಿನವರೊಡನೆಯೂ, ಋತ್ವಿಕ್ಪುರೋಹಿತಾದಿಗಳೊಡನೆಯೂ, ಕುದುರೆಯನ್ನು ದೇಶದೇಶದಮೇಲೆ ಕಳುಹಿಸಿದುದು, ಅವರು ಆ ಕುದುರೆಯನ್ನು ಹಿಂಬಾಲಿಸಿ ಹೋಗುತ್ತಿರುವಾಗ, ಅಲ್ಲಲ್ಲಿ ಸಾವಿತ್ರಾದಿ ಕರ್ಮಗಳನ್ನು ನಡೆಸುತ್ತಿದ್ದುದು, ಇವೇ ಮೊದಲಾದ ಕಾರ್ಯಗಳೆಲ್ಲವೂ, ಈ ನಡುವೆ ಒಂದು ಸಂವತ್ಸರ ಕಾಲದವರೆಗೆ ನಡೆಯುತ್ತಿದ್ದು, ಪುನಃ ವಸಂತಋತುವು ಪ್ರಾರಂಭಿಸಿತೆಂದು ಭಾವವು. "ಅಥ ಸಂವತ್ಸರಾಂತೇ ದೀಕ್ಷೇತ" ಎಂಬಂತೆ ಒಂದು ವರ್ಷಕಾಲದಲ್ಲಿ ಕುದುರೆಯನ್ನು ಬಿಟ್ಟು, ಮತ್ತೊಂದು ವಸಂತಕಾಲವು ಬರುವವರೆಗೂ ಒಂದು ವರ್ಷ ಕಾಲ ದೀಕ್ಷೆಯಲ್ಲಿದ್ದು ಆಮೇಲೆ ಯಜ್ಞವನ್ನಾರಂಭಿಸಬೇಕೆಂಬ ವಿಧಿಯುಂಟು.

ಬ್ರಾಹ್ಮಣರನ್ನೂ, ಆಯಾ ಯಜ್ಞಸಾಮಗ್ರಿಗಳನ್ನು ಒದಗಿಸಿ ಕೊಡುವುದರಲ್ಲಿ ಚಟುವಟಿಕೆಯುಳ್ಳ ಪುರುಷರನ್ನೂ, ಪರಮಧಾರ್ಮಿಕರಾದ ಋತ್ವಿಕ್ಕುಗಳನ್ನೂ, ಕೂಲಿಯವರನ್ನೂ, ಕಮ್ಮರರನ್ನೂ, ಶಿಲ್ಪಿಗಳನ್ನೂ, ಸ್ರುಕ್ಕು, ಸ್ರುವೆ, ಚಮಸ, ಗ್ರಹ, ಯೂಪಗಳೇ ಮೊದಲಾದ ಉಪಕರಣಗಳನ್ನು ಮಾಡಿಕೊಡತಕ್ಕ ಕೆಲಸಗಾರರನ್ನೂ, ಕೊಳ, ಬಾವಿ ಮುಂತಾದುವುಗಳನ್ನು ತೋಡುವುದರಲ್ಲಿ ಸಮರ್ಥರಾದ ಪುರುಷರನ್ನೂ, ಜ್ಯೋತಿಷ್ಕರನ್ನೂ, ನಟನರ್ತಕಾದಿಗಳನ್ನೂ ಬಹುವಿಷಯುಗಳನ್ನು ಕೇಳಿ ತಿಳಿದವರಾಗಿಯೂ ಪ್ರಯೋಗಗಳನ್ನು ಚೆನ್ನಾಗಿ ಬಲ್ಲವರಾಗಿಯೂ, ಪರಿಶುದ್ಧಾತ್ಮರಾಗಿಯೂ ಇರುವ ವಿದ್ವಾಂಸರನ್ನೂ ಕರೆದು "ಇದೋ! ಈಗ ರಾಜಾಜ್ಞೆಯಾಗಿರುವುದು! ಯಜ್ಞಕರ್ಮಕ್ಕೆ ಉಪಕರಣಗಳನ್ನು ಸಿದ್ಧಪಡಿಸಿರಿ! ಅನೇಕ ಸಹಸ್ರಸಂಖ್ಯಾಕಗಳಾದ ಇಟ್ಟಿಗೆಗಳನ್ನು ಒಡನೆಯೇ ತಂದು ಸೇರಿಸಿರಿ! ಸಮಸ್ತ ಸೌಕರ್ಯಗಳಿಂದಲೂ ಕೂಡಿರುವಂತೆ ಅಭ್ಯಾಗತರಾದ ರಾಜರಿಗೆ ಮೇಲಾದ ಅರಮನೆಗಳನ್ನು ಕಟ್ಟಿಡಬೇಕು, ಬ್ರಾಹ್ಮಣರು ವಾಸಮಾಡುವುದಕ್ಕೆ ತಕ್ಕಂತೆ, ಅನೇಕ ವಿಧವಾದ ಭಕ್ಷ್ಯ, ಭೋಜ್ಯ, ಪಾನೀಯಾದ್ಯಾಹಾರಪದಾರ್ಥಗಳಿಂದ ತುಂಬಿ, ಮಳೆಗಾಳಿಗಳಿಗೆ ತಡೆಯುವಂತೆ ಬಲವಾದ ಕಟ್ಟಡಗಳುಳ್ಳ ಕೆಲವು ಮನೆಗಳನ್ನು ಶುಚಿಯಾದ ಸ್ಥಳಗಳಲ್ಲಿ ಕಟ್ಟಿಡಬೇಕು. ನಮ್ಮ ಪಟ್ಟಣದ ಜನರಿಗಾಗಿಯೂ ವಿಸ್ತಾರವಾದ ಕೆಲವು ವಾಸಸ್ಥಾನಗಳನ್ನು ಕಟ್ಟಿಸಬೇಕು. ಅದರಲ್ಲಿ ಸಮಸ್ತ ಭಕ್ಷ್ಯಗಳನ್ನೂ ಅವರವರಿಗೆ ಬೇಕಾದ ಪದಾರ್ಥಗಳನ್ನೂ ಸಿದ್ಧಪಡಿಸಿಡಬೇಕು. ಹಾಗೆಯೇ ಗ್ರಾಮಾಂತರಗಳಿಂದ ಇಲ್ಲಿಗೆ ಬರತಕ್ಕ ನಮ್ಮ ದೇಶಿಯರಿಗೂ ತಕ್ಕ ಸ್ಥಳಗಳನ್ನು ಕಲ್ಪಿಸಿ, ಅವರಿಗೆ ಮೃಷ್ಟಾನ್ನ ಭೋಜನವನ್ನಿಟ್ಟು, ಶಾಸ್ತ್ರೋಕ್ತವಾದ ರೀತಿ ಸತ್ಕರಿಸಬೇಕು. ಯಾರಲ್ಲಿಯೂ ಸ್ವಲ್ಪವಾದರೂ ಅನಾದರಣೆಯನ್ನು ತೋರಿಸಬಾರದು! ಮುಖ್ಯವಾಗಿ ಅವರಿವರೆಂಬ ಭೇದವನ್ನು ನೋಡದೆ ಸಮಸ್ತವರ್ಣದವರನ್ನೂ ಅತ್ಯಾದರಪೂರ್ವಕವಾಗಿ ಸತ್ಕರಿಸಬೇಕು. ಸ್ನೇಹಭಾವದಿಂದಾಗಲಿ, ದ್ವೇಷಬುದ್ಧಿಯಿಂದಾಗಲಿ, ಸಲಿಗೆಯಿಂದಾಗಲಿ, ಹಾಸ್ಯಕ್ಕಾಗಲಿ, ಯಾರನ್ನೂ ಅವಮಾನಪಡಿಸಕೂಡದು! ಈ ಯಜ್ಞಕಾರ್ಯಗಳಲ್ಲಿ ಸಂಬಂಧಿಸಿ ಕೆಲಸಮಾಡುತ್ತಿರುವ ಶಿಲ್ಪಿಗಳು ಮುಂತಾದವರಿಗೂ ಕೂಡ, ಅವರವರ ಮರ್ಯಾದೆಗೆ ಲೋಪವಿಲ್ಲದಂತೆ, ಉಚಿತ ರೀತಿಯಲ್ಲಿ ಸತ್ಕಾರಗಳನ್ನು ಮಾಡಬೇಕು! ಅವರೆಲ್ಲರೂ

ಭೋಜನಾದಿಗಳಲ್ಲಿಯಾಗಲಿ, ದ್ರವ್ಯದಲ್ಲಿಯಾಗಲಿ, ಅತೃಪ್ತರಾಗಿ ಹೋಗದಂತೆ ಅತ್ಯಾದರದಿಂದ ಉಪಚರಿಸಬೇಕು. ಮುಖ್ಯವಾಗಿ ಯಾವ ವಿಷಯದಲ್ಲಿಯೂ ಕೊರತೆಯಿಲ್ಲದಂತೆ ಸರಿಯಾಗಿ ನಡೆಯುವ ಹಾಗೆ ನೀವೆಲ್ಲರೂ ಗಮನವಿಟ್ಟು ನೋಡಿಕೊಳ್ಳಬೇಕು !" ಎಂದರು.

ಆಗ ಅವರೆಲ್ಲರೂ ವಿನಯದಿಂದ ಕೈಮುಗಿದು ನಿಂತು, ವಸಿಷ್ಠರನ್ನು ನೋಡಿ "ಎಲೈ ಮಹಾತ್ಮನೆ! ನೀನು ಹೇಳಿದುದರಲ್ಲಿ ಯಾವ ಲೋಪವೂ ಇಲ್ಲದಂತೆ ಎಲ್ಲವನ್ನೂ ಸಿದ್ಧಪಡಿಸುವೆವು. ನಡೆಸಬೇಕಾದ ಕಾರ್ಯಗಳಾವುದಿದ್ದರೂ ಅವೆಲ್ಲವನ್ನೂ ಕೊರತೆಬಾರದಂತೆ ನಡೆಸಲು ಸಿದ್ಧರಾಗಿರುವೆವು" ಎಂದರು. ಆಮೇಲೆ ವಸಿಷ್ಠನು ಸುಮಂತ್ರನನ್ನು ಕರೆಸಿ, "ಎಲೈ ಮಂತ್ರಿಯೇ, ಈ ಭೂಮಿಯಲ್ಲಿರುವ ಸಮಸ್ತರಾಜರಿಗೂ ಪತ್ರಿಕೆಗಳನ್ನು ಬರೆದು ಕರೆಸು. ಅಷ್ಟಿಷ್ಟೆಂಬ ಸಂಖ್ಯಾನಿಯಮವನ್ನು ನೋಡದೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರಲ್ಲಿಯೂ ಸಾವಿರಾರು ಮಂದಿಯನ್ನು ಕರೆಸು. ಇತರ ದೇಶದ ಪ್ರಜೆಗಳನ್ನೂ ಮರ್ಯಾದೆಯಿಂದ ಬರಮಾಡು. ಮಿಥಿಲಾಧಿಪತಿಯಾದ ಜನಕಮಹಾರಾಜನನ್ನೂ ನೀನೇ ಹೋಗಿ ಸತ್ಕರಿಸಿ ಕರೆದುಕೊಂಡು ಬಾ ! ಆತನು ಮಹಾಶೂರನು. ಸತ್ಯಪರಾಕ್ರಮವುಳ್ಳವನು. ಸಮಸ್ತಶಾಸ್ತ್ರಗಳನ್ನೂ, ವೇದಗಳನ್ನೂ ಚೆನ್ನಾಗಿ ಬಲ್ಲವನು. ನಮ್ಮ ದಶರಥನಿಗೂ ಆತನಿಗೂ ಬಹುಕಾಲದ ಬಾಂಧವ್ಯವುಂಟು. ಆದುದರಿಂದ ಎಲ್ಲರಿಗಿಂತಲೂ ಮೊದಲೇ ಆತನನ್ನು ಕರೆತರಿಸಬೇಕು. ಹಾಗೆಯೇ ಕಾಶೀರಾಜನನ್ನೂ ನೀನೇ ಹೋಗಿ ಕರೆದುಕೊಂಡು ಬರಬೇಕು. ಆತನು ನಮ್ಮ ರಾಜನಿಗೆ ಬಹಳ ಪ್ರಿಯಮಿತ್ರನು. ಬಹಳ ಸ್ನೇಹಪರನು. ಯಾವಾಗಲೂ ಪ್ರಿಯವನ್ನೇ ನುಡಿಯತಕ್ಕವನು. ಇದಲ್ಲದೆ ಪರಮಧಾರ್ಮಿಕನಾಗಿ, ವೃದ್ಧನಾಗಿ ನಮ್ಮ ರಾಜನಿಗೆ ಮಾವನಾದ ಕೇಕಯ ರಾಜನನ್ನೂ ಆತನ ಪುತ್ರರೊಡನೆ ಕರೆದುಕೊಂಡು ಬಾ ! ಮಹಾಯಶಸ್ವಿಯಾಗಿ ನಮ್ಮ ರಾಜನಿಗೆ ಪ್ರಿಯಮಿತ್ರನಾಗಿರುವ ಅಂಗರಾಜನಾದ ರೋಮಪಾದನನ್ನೂ ಸತ್ಕರಿಸಿ ಕರೆದುಕೊಂಡು ಬಾ ! ಮತ್ತು ಪೂರ್ವದಿಕ್ಕಿನಲ್ಲಿರುವ ರಾಜರನ್ನೂ, ಸಿಂಧು, ಸೌವೀರ, ಸೌರಾಷ್ಟ್ರ ದೇಶಾಧಿಪತಿಗಳನ್ನೂ, ದಕ್ಷಿಣದಿಕ್ಕಿನಲ್ಲಿರುವ ದೇಶಾಧಿಪತಿಗಳನ್ನೂ ದೂತರ ಮೂಲಕವಾಗಿ ಕರೆತರಿಸು ! ಇನ್ನೂ ನಮಗೆ ಮಿತ್ರರಾದ ದೇಶಾಧಿಪತಿಗಳು ಯಾರು ಯಾರುಂಟೋ, ಅವರೆಲ್ಲರನ್ನೂ ಕುಟುಂಬ ಸಹಿತರಾಗಿ ಬರುವಂತೆ ಹೇಳಿಕಳುಹಿಸು" ಎಂದನು.

ಇದನ್ನು ಕೇಳಿ ಸುಮಂತ್ರನು ಒಡನೆಯೇ ಸಮರ್ಥರಾದ ದೂತರನ್ನು ಕರೆಸಿ, ಆಯಾ ರಾಜರನ್ನು ಕರೆತರುವುದಕ್ಕಾಗಿ ಕಳುಹಿಸಿದನು. ವಸಿಷ್ಠಾಜ್ಞೆಯಂತೆ ಕೆಲವು ಪ್ರಮುಖ ರಾಜರನ್ನು ಕರೆಯುವುದಕ್ಕಾಗಿ ತಾನೇ ಹೊರಟನು. ಇತ್ತಲಾಗಿ ಯಜ್ಞಸಂಭಾರಗಳನ್ನು ಸಿದ್ಧಪಡಿಸುವುದಕ್ಕೋಸ್ಕರ ಹೋಗಿದ್ದ ಕೆಲಸಗಾರರೆಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಸ್ವಲ್ಪವೂ ಲೋಪವಿಲ್ಲದೆ ಸಿದ್ಧಪಡಿಸಿಟ್ಟಿರುವುದಾಗಿ ವಸಿಷ್ಠರಿಗೆ ತಿಳಿಸಿದರು. ಇದನ್ನು ಕೇಳಿ ವಸಿಷ್ಠನು ಬಹಳ ಸಂತೋಷಪಟ್ಟು, ಅವರೆಲ್ಲರನ್ನೂ ಕುರಿತು, “ಈ ಯಜ್ಞ ಸಮಯದಲ್ಲಿ ಯಾರು ಯಾವುದನ್ನು ಕೇಳಿದರೂ ಅತ್ಯಾದರದಿಂದಲೂ ಪ್ರೀತಿಯಿಂದಲೂ ಕೊಡತಕ್ಕದು. ಸ್ವಲ್ಪವಾದರೂ ಔದಾಸೀನ್ಯವನ್ನಾಗಲಿ ಅನಾದರವನ್ನಾಗಲಿ ತೋರಿಸಕೂಡದು. ಆದರವಿಲ್ಲದೆ ಮಾಡಿದ ದಾನವು, ಹಾಗೆ ದಾನಮಾಡಿದವನನ್ನು ಒಡನೆಯೇ ಕೊಂದುಬಿಡುವುದು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ” ಎಂದನು. ಆಮೇಲೆ ಕೆಲವು ದಿವಸಗಳೊಳಗಾಗಿ ನಾನಾ ದಿಕ್ಕುಗಳಿಂದಲೂ ರಾಜರು ದಶರಥನಿಗೋಸ್ಕರ ವಸ್ತ್ರಾಭರಣಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಅಯೋಧ್ಯೆಗೆ ಬಂದಿಳಿದರು. ಇದನ್ನು ನೋಡಿ ವಸಿಷ್ಠನು ಬಹಳ ಸಂತೋಷದಿಂದ ದಶರಥನ ಬಳಿಗೆ ಹೋಗಿ “ಎಲೈ ರಾಜೇಂದ್ರನೆ! ನಿನ್ನ ಅಪ್ಪಣೆಯಂತೆ ಸಮಸ್ತರಾಜರೂ ಬಂದಿರುವರು. ನಾನೇ ಹೋಗಿ ಅವರೆಲ್ಲರನ್ನೂ ತಕ್ಕರೀತಿಯಲ್ಲಿ ಸತ್ಕರಿಸಿ ಬಂದಿರುವೆನು. ಚತುರರಾದ ಕೆಲಸಗಾರರಿಂದ ಯಜ್ಞಕ್ಕೆ ಬೇಕಾದ ಉಪಕರಣಗಳೆಲ್ಲವೂ ಸಿದ್ಧಪಡಿಸಲ್ಪಟ್ಟಿರುವುವು. ಇನ್ನು ನೀನು ಯಜ್ಞಶಾಲೆಗೆ ಹೊರಡು. ಮನಸ್ಸಂಕಲ್ಪದಿಂದಲೇ ನಿರ್ಮಿಸಲ್ಪಟ್ಟಂತೆ ಬೇಕು ಬೇಕಾದ ಸಮಸ್ತ ಸಾಮಗ್ರಿಗಳೂ ಬಹುಶೀಘ್ರವಾಗಿ ಒದಗಿಸಲ್ಪಟ್ಟಿರುವುವು. ನೀನು ಅದನ್ನು ಅವಶ್ಯವಾಗಿ ನೋಡಬೇಕು” ಎಂದನು. ಕೂಡಲೇ ದಶರಥನು ಒಳ್ಳೆಯ ಸುಮುಹೂರ್ತದಲ್ಲಿ ಯಾಗಶಾಲೆಯ ಕಡೆಗೆ ಹೊರಟನು. ವಸಿಷ್ಠರೇ ಮೊದಲಾದ ಬ್ರಾಹ್ಮಣೋತ್ತಮರೂ ಋಷ್ಯಶೃಂಗನನ್ನು ಮುಂದಿಟ್ಟುಕೊಂಡು, ಕಲ್ಪೋಕ್ತವಾಗಿ ಕರ್ಮಗಳನ್ನು ಆರಂಭಿಸಿದರು.

ಇಲ್ಲಿಗೆ ಹದಿಮೂರನೆಯ ಸರ್ಗವು.

ದಶರಥನು ಅಶ್ವಮೇಧಯಾಗವನ್ನು ಮಾಡಿದುದು

ಆ ಸಂವತ್ಸರವು ಮುಗಿಯುವಷ್ಟಕ್ಕೆ ಸರಿಯಾಗಿ ಯಜ್ಞಾಶ್ವವು ಹಿಂತಿರುಗಿ ಅಯೋಧ್ಯೆಯನ್ನು ಸೇರಿತು. ಸರಯೂನದಿಯ ಉತ್ತರದಲ್ಲಿ ಯಜ್ಞವೂ

ಆರಂಭಿಸಲ್ಪಟ್ಟಿತು. ಬ್ರಾಹ್ಮಣೋತ್ತಮರೆಲ್ಲರೂ ಋಷ್ಯಶೃಂಗನನ್ನು ಮುಂದಿಟ್ಟುಕೊಂಡು ಕರ್ಮಗಳನ್ನು ನಡೆಸುತ್ತಿದ್ದರು. ವೇದಪಾರಂಗತರಾದ ಋತ್ವಿಕ್ಕುಗಳು ಮೀಮಾಂಸೆಯಲ್ಲಿಯೂ, ಕಲ್ಪಸೂತ್ರಗಳಲ್ಲಿಯೂ ಹೇಳಿರುವಂತೆ ಶಾಸ್ತ್ರೋಕ್ತವಾಗಿಯೇ ಯಜ್ಞಕರ್ಮಗಳನ್ನು ಮಾಡಿದರು. ಪ್ರವರ್ಗವೆಂಬ ಕರ್ಮವೂ ಉಪಸತ್ತೆಂಬ ಇಷ್ಟಿಯೂ, ಬ್ರಾಹ್ಮಣರಿಂದ ವಿಧ್ಯುಕ್ತವಾಗಿ ನಡೆಸಲ್ಪಟ್ಟವು. ಇವೇ ಅಲ್ಲದೆ ಇನ್ನೂ ಮಾಡಬೇಕಾದ ಅಧಿಕ ಕರ್ಮಗಳನ್ನೂ ಶಾಸ್ತ್ರೋಕ್ತವಾಗಿಯೇ ಮಾಡಿ, ಕರ್ಮದೇವತೆಗಳ ಪೂಜೆಯನ್ನು ವಿಧ್ಯುಕ್ತವಾಗಿ ಮುಗಿಸಿದರು. ಪ್ರಾತಸ್ಸವನವೇ ಮುಂತಾದ ಕರ್ಮಗಳೆಲ್ಲವೂ ನಡೆಸಲ್ಪಟ್ಟುವು. ಇಂದ್ರನಿಗೆ ಕೊಡಬೇಕಾದ ಹವಿರ್ಭಾಗವೂ ಲೋಪವಿಲ್ಲದೆ ಸಲ್ಲಿಸಲ್ಪಟ್ಟಿತು. ನಿರ್ದೋಷವಾದ ಸೋಮರಸವನ್ನು ಸ್ತುತಿಸಿದರು. ಕ್ರಮವಾಗಿ ಮಾಧ್ಯಂದಿನಸವನ, ಸಾಯಂಸವನಗಳೆಂಬ ಕರ್ಮಗಳೂ ನಡೆಸಲ್ಪಟ್ಟುವು. ಆ ಬ್ರಾಹ್ಮಣೋತ್ತಮರೆಲ್ಲರೂ ಶಾಸ್ತ್ರದೃಷ್ಟಿಯಿಂದಲೇ ಎಲ್ಲಾ ಕರ್ಮಗಳನ್ನೂ ಲೋಪವಿಲ್ಲದೆ ನಡೆಸಿದರು. ಮಂತ್ರಲೋಪ, ಕ್ರಿಯಾಲೋಪ ದ್ರವ್ಯಲೋಪಗಳೆಂಬ ಯಾವ ದೋಷಕ್ಕೂ ಅವಕಾಶವಿಲ್ಲದಂತೆ ಎಲ್ಲವೂ ಮಂತ್ರವತ್ತಾಗಿಯೇ ನಿರ್ವಿಘ್ನವಾಗಿ ನಡೆದುವು. ಆ ಯಜ್ಞದಿವಸಗಳಲ್ಲಿ ಹಸಿವು, ಬಾಯಾರಿಕೆ ಮುಂತಾದುವುಗಳಿಂದ ಬಳಲುತ್ತಿದ್ದವನೊಬ್ಬರಾದರೂ ಇರಲಿಲ್ಲ. ಎಲ್ಲಿ ನೋಡಿದರೂ ಅರವಟಿಗೆಗಳೂ, ಭೋಜನಶಾಲೆಗಳೂ ಕಾಣುತ್ತಿದ್ದುವು. ಭೋಜನದಿಂದ ತೃಪ್ತಿಹೊಂದಿದವರು ಬ್ರಾಹ್ಮಣರು ಮಾತ್ರವೇ ಅಲ್ಲ, ಶೂದ್ರಾದಿಗಳೂ ಕೂಡ ತೃಪ್ತಿಹೊಂದುತ್ತಿದ್ದರು. ತಾಪಸರು, ಸನ್ಯಾಸಿಗಳು, ಹೆಂಗಸರು, ಮಕ್ಕಳು, ಮುದುಕರು, ರೋಗಿಗಳು, ಮುಂತಾದ ಸಮಸ್ತಜನರೂ ಯಾವಾಗಲೂ ಭೋಜನದಿಂದ ತೃಪ್ತಿಹೊಂದುತ್ತಲೇ ಇದ್ದರು. ಇಲ್ಲಿಗೆ ಬಂದಿದ್ದ ಬ್ರಾಹ್ಮಣರಲ್ಲಿ ಅಪಂಡಿತನಾದವನೊಬ್ಬನೂ ಇರಲಿಲ್ಲ. ಒಬ್ಬೊಬ್ಬನೂ ನೂರಾರುಮಂದಿ ಶಿಷ್ಯರೊಡಗೂಡಿಯೇ ಇರುತ್ತಿದ್ದನು. ಅಲ್ಲಿ ಯಾವಾಗಲೂ ಊಟಮಾಡುತ್ತಿದ್ದರೂ, ಪದಾರ್ಥಗಳ ರುಚಿಯು ಮೇಲೆಮೇಲೆ ಊಟಮಾಡಬೇಕೆಂಬ ಆಸೆಯನ್ನೇ ಹುಟ್ಟಿಸುತ್ತಿತ್ತು. “ಇದೋ ಇಲ್ಲಿ ವಸ್ತ್ರಗಳು ! ಇದೋ ಇಲ್ಲಿ ಆಭರಣಗಳು” ಎಂದು ಕೂಗಿ ಕೊಡುತ್ತಿದ್ದ ರಾಜಸೇವಕರು ಎಲ್ಲಾ ಕಡೆಯಲ್ಲಿಯೂ ತುಂಬಿದ್ದರು. ನಾನಾದೇಶಗಳಿಂದ ಬಂದಿದ್ದ ಆಬಾಲವೃದ್ಧರೂ ಅನ್ನಪಾನಾದಿಗಳಿಂದ ವಿಶೇಷವಾಗಿ ತೃಪ್ತಿಯನ್ನು ಹೊಂದಿದರು. ಅಲ್ಲಿ ಊಟಮಾಡಿ

ಬ್ರಾಹ್ಮಣರೆಲ್ಲರೂ "ಆಹಾ! ಏನು ರುಚಿ! ಏನು ಉಪಚಾರ! ಎಂದಿಗೂ ಇಂತಹ ಭೋಜನವನ್ನು ಮಾಡಿದುದೇ ಇಲ್ಲ! ಹೀಗೆ ಅನ್ನದಾತನಾದ ದಶರಥಚಕ್ರವರ್ತಿಯು ದೀರ್ಘಾಯುಷ್ಯವಂತನಾಗಿರಲಿ! ಆತನಿಗೆ ಸಮಸ್ತ ಮಂಗಳವೂ ಉಂಟಾಗಲಿ" ಎಂದು ಆಶೀರ್ವಾದ ಮಾಡುತ್ತಿದ್ದರು. ಆ ಬ್ರಾಹ್ಮಣರನ್ನು ಭಕ್ಷ್ಯಭೋಜ್ಯಾದಿಗಳಿಂದ ಉಪಚರಿಸುವುದಕ್ಕಾಗಿ, ಕಿರೀಟ ಕುಂಡಲಾದಿಗಳಿಂದಲೂ, ಉತ್ತಮವಾದ ಉಡುಪುಗಳಿಂದಲೂ ಅಲಂಕೃತವಾದ ಪುರುಷರೇ ನಿಯಮಿಸಲ್ಪಟ್ಟಿದ್ದರು. ನಡುನಡುವೆ ಅವಕಾಶವಿದ್ದಾಗ ಭೋಜನ ಮಾಡಿ ಕುಳಿತ ಆ ಬ್ರಾಹ್ಮಣರೆಲ್ಲರೂ ಸೇರಿ, ಯುಕ್ತಿವಾದಗಳನ್ನು ಮಾಡುತ್ತಾ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟದಿಂದ ಶಾಸ್ತ್ರಾರ್ಥಗಳನ್ನು ಚರ್ಚಿಸುತ್ತಿದ್ದರು. ಆ ಯಜ್ಞದಲ್ಲಿ ವಯೋವೃದ್ಧರಾದವರೆಲ್ಲರೂ ಸೇರಿ, ಸ್ವಾನುಭವದಿಂದಲೂ, ಶಾಸ್ತ್ರಜ್ಞಾನದಿಂದಲೂ ಚೆನ್ನಾಗಿ ವಿಮರ್ಶಿಸಿ, ಋತ್ವಿಕ್ಕುಗಳ ಮೂಲಕವಾಗಿ ಆಯಾ ಕೆಲಸಗಳನ್ನು ನಡೆಸುತ್ತಿದ್ದರು. ಆ ಕರ್ಮದಲ್ಲಿ ಸೇರಿದ್ದ ಬ್ರಾಹ್ಮಣರೊಳಗೆ ಒಬ್ಬೊಬ್ಬನೂ ವೇದವೇದಾಂಗಗಳನ್ನೆಲ್ಲಾ ತಿಳಿದವನು, ಒಬ್ಬೊಬ್ಬನೂ ವ್ರತನಿಷ್ಠನು, ಒಬ್ಬೊಬ್ಬನೂ ಅನೇಕ ಶಾಸ್ತ್ರಗಳನ್ನು ಕೇಳಿದವನು, ಒಬ್ಬೊಬ್ಬನೂ ಶಾಸ್ತ್ರವಿವಾದಗಳಲ್ಲಿ ಸಮರ್ಥನು.

ಯೂಪಸ್ತಂಭಗಳನ್ನು ನಿಲ್ಲಿಸುವ ಸಮಯ ಬಂದಾಗ, ಬಿಲ್ವ, ಖದಿರ, ಮುತ್ತುಗ, ಈ ಮರಗಳಿಂದ ಆರಾರು ಯೂಪಸ್ತಂಭಗಳನ್ನೂ ಶ್ಲೇಷ್ಮಾತಕ, ದೇವದಾರುವೃಕ್ಷಗಳ ಒಂದೊಂದು ಯೂಪಸ್ತಂಭವನ್ನೂ ರಚಿಸಿದರು. ಆ ಯೂಪಗಳನ್ನು ನಿಲ್ಲಿಸುವಾಗ, ಅವುಗಳ ನಡುವೆ ಒಂದಕ್ಕೊಂದಕ್ಕೆ ಮಾರುದೂರ ಬಿಟ್ಟಿರುವಂತೆ ಅವುಗಳನ್ನು ನಟ್ಟರು. ಈ ಕಂಬಗಳೆಲ್ಲವೂ ಹುಳುಕಿಲ್ಲದಂತೆ ಯಜ್ಞಶಾಸ್ತ್ರದಲ್ಲಿ ನಿಪುಣರಾದವರಿಂಲೇ ಮಾಡಲ್ಪಟ್ಟು ಬಂಗಾರದ ಕಟ್ಟುಗಳಿಂದಲಂಕರಿಸಲ್ಪಟ್ಟುವು. ಈ ಇಪ್ಪತ್ತೊಂದು ಯೂಪಗಳೂ ಬೇರೆಬೇರೆಯಾಗಿ ಇಪ್ಪತ್ತೊಂದು ಮೊಳಗಳ ಉದ್ದವುಳ್ಳವುಗಳಾಗಿ, ಒಂದೊಂದೂ ಒಂದೊಂದು ವಸ್ತ್ರದಿಂದ ಅಲಂಕರಿಸಲ್ಪಟ್ಟುವು. ಇವೆಲ್ಲವೂ ಶಿಲ್ಪಿಗಳಿಂದ ಶಾಸ್ತ್ರೋಕ್ತವಾಗಿ ಚೆನ್ನಾಗಿ ಮಾಡಲ್ಪಟ್ಟು, ಬಲವಾಗಿ ನಡಲ್ಪಟ್ಟಿದ್ದುವು. ಒಂದೊಂದೂ ಎಂಟು ಮೂಲೆಗಳುಳ್ಳದಾಗಿ ನುಣುಪಾಗಿ ಹೊಳೆಯುತ್ತ, ವಸ್ತ್ರಗಳಿಂದಲೂ, ಗಂಧಪುಷ್ಪಾದಿಗಳಿಂದಲೂ, ಅಲಂಕರಿಸಲ್ಪಟ್ಟು ಆಕಾಶದಲ್ಲಿರುವ ಸಪ್ತಋಷಿಮಂಡಲಂತೆ ಪ್ರಕಾಶಿಸುತ್ತಿದ್ದುವು.

ಶಾಸ್ತ್ರಾನುಸಾರವಾಗಿ ಅಳತೆಯಿಂದ ಇಟ್ಟಿಗೆಗಳನ್ನು ಮಾಡಿಸಿ ಅದರಿಂದ ವೇದಿಕೆಯನ್ನು ಕಟ್ಟಿದರು. ಶುಲ್ಬವೆಂಬ ಯಜ್ಞಕಾರ್ಯದಲ್ಲಿ ನಿಪುಣರಾದ ಬ್ರಾಹ್ಮಣರಿಂದ ಅಗ್ನಿಯು ಉರಿಸಲ್ಪಟ್ಟಿತು. ಕುಶಲರಾದ ಬ್ರಾಹ್ಮಣರಿಂದ ಶಾಸ್ತ್ರೋಕ್ತವಾಗಿ ಚಿತಾಗ್ನಿವೇದಿಕೆಯು ನಿರ್ಮಿಸಲ್ಪಟ್ಟು, ಗರುಡಾಕಾರವನ್ನು ಹೊಂದಿ [1]ಸುವರ್ಣಮಯವಾದ ರೆಕ್ಕೆಗಳುಳ್ಳದಾಗಿ, ಸಾಮಾನ್ಯವಾಗಿ ಇರಬೇಕಾದ ಆರು ಪ್ರಸ್ತಾರಗಳಿಗಿಂತ [2]ಮುಮ್ಮಡಿಯಾಗಿ, ಎಂದರೆ ಹದಿನೆಂಟು ಪ್ರಸ್ತಾರಗಳುಳ್ಳದಾಗಿತ್ತು. ಶಾಸ್ತ್ರವಿಹಿತಗಳಾದ ಪಶುಗಳು, ಸರ್ಪಗಳು, ಪಕ್ಷಿಗಳು, ಇವೆಲ್ಲವೂ [3]ಆಯಾ ದೇಶಗಳನ್ನುದ್ದೇಶಿಸಿ ವಿಧ್ಯುಕ್ತವಾಗಿ ಆಯಾ ಯೂಪಸ್ತಂಭಗಳಿಗೆ ಕಟ್ಟಲ್ಪಟ್ಟಿದ್ದುವು. ಪಶು ಮೊದಲಾದವುಗಳನ್ನು ವಧಿಸತಕ್ಕ ಕರ್ಮವು ಬಂದಾಗ, ಈ ಯಾಗಕ್ಕೆ ಸಂಬಂಧಪಟ್ಟ ಕುದುರೆಯನ್ನೂ, ಆಮೆ ಮೊದಲಾದ ಜಲಚರಗಳನ್ನೂ, ಇನ್ನೂ ಅಲ್ಲಿರಬೇಕಾದ ಇತರ ಪಶುಗಳನ್ನೂ ಶಾಸ್ತ್ರೋಕ್ತವಾಗಿ ಋತ್ವಿಕ್ಕುಗಳು ತಂದು ನಿಯೋಗಿಸಿದರು. ಆ ಯೂಪಗಳಲ್ಲಿ ಮುನ್ನೂರು ಇತರ ಪಶುಗಳೊಡನೆ ಈ ಅಶ್ವರತ್ನವೂ ಕಟ್ಟಲ್ಪಟ್ಟಿತು. ಆಗ ಕೌಸಲ್ಯೆಯು, ಆ ಕುದುರೆಯನ್ನು ಪೂಜಾದಿಗಳಿಂದ ಸತ್ಕರಿಸಿ ಇತರ ಪತ್ನಿಯರೊಡಗೂಡಿ ಪ್ರದಕ್ಷಿಣೆಮಾಡಿ ಮೂರು ಕತ್ತಿಗಳಿಂದ [4](ಬಂಗಾರದ ಸೂಜಿಗಳಿಂದ) ಅದನ್ನು ಕೀರಿದಳು. ಹೀಗೆ

---

1. "ಸಹಸ್ರಂ ಹಿರಣ್ಯಶಕಲೈಃ ಪ್ರತಿದಿಶಮಗ್ನಿಂ ಪ್ರೋಕ್ಷತಿ" ಎಂಬ ಸೂತ್ರಾನುಸಾರವಾಗಿ, ಸುವರ್ಣಶಕಲಗಳಿಂದ ಮನೋಹರವಾದ ರೆಕ್ಕೆಗಳುಳ್ಳದೆಂದು ಭಾವವು.

2. "ಷಟ್‌ಚಿತಯೋ ಭವಂತಿ" ಎಂಬಂತೆ, ಸಾಮಾನ್ಯವಾಗಿ ಅಗ್ನಿವೇದಿಕೆಯಲ್ಲಿ ಆರು ಪ್ರಸ್ತಾರಗಳಿರಬೇಕು. ಆದರೆ, ಅಶ್ವಮೇಧದಲ್ಲಿ "ತ್ರಿಸ್ತಾವೋಗ್ನಿರ್ಭವತೀತ್ಯಶ್ವಮೇಧೇ ವಿಜ್ಞಾಯತೇ" ಎಂಬ ವಿಧಿಯನ್ನನುಸರಿಸಿ ಮೂರರಷ್ಟು ಇರಬೇಕಾದುದರಿಂದ ಹದಿನೆಂಟು ಪ್ರಸ್ತಾರಗಳುಳ್ಳದೆಂದು ಗ್ರಹಿಸಬೇಕು.

3. "ಇಂದ್ರಾಯ ರಾಜ್ಞೇ ಸೂಕರೋ ವರುಣಾಯ ರಾಜ್ಞೇ ಕೃಷ್ಣ" ಈ ಮೊದಲಾದ ಅನುವಾಕಗಳಲ್ಲಿ, ಕೆಲಕೆಲವು ಪಶುಗಳು ಕೆಲಕೆಲವು ದೇವತೆಗಳಿಗೆಂದು ವಿಧಿಸಲ್ಪಟ್ಟಿವೆ.

4. "ಸೌವರ್ಣೀಭಿಸ್ಸೂಚಿಭಿಃ ಪತ್ನ್ಯಯೋಽಶ್ವಸ್ಯಾಸಿಪಥಾನ್ ಕಲ್ಪಯಂತಿ" ಎಂಬಂತೆ ಕತ್ತಿಗಳೆಂದರೆ ಬಂಗಾರದ ಸೂಜಿಗಳೆಂದು ಗ್ರಹಿಸಬೇಕು.

ಮಾಡಿದಮೇಲೆ ಆ ಮೃತದೇಹವನ್ನು ಮುಟ್ಟುವ ವಿಷಯದಲ್ಲಿಯೂ ಸ್ವಲ್ಪವೂ ಹಿಂಜರಿಯದೆ, ಧರ್ಮಸಿದ್ಧಿಗಾಗಿ ದೃಢವಾದ ಮನಸ್ಸಿನಿಂದ ಆ ಕುದುರೆಯೊಡನೆಯೇ ಆ ರಾತ್ರಿಯನ್ನು ಕಳೆದಳು. ಆಗ ದಶರಥನು ಅಧ್ವರ್ಯು, ಉದ್ಗಾತೃ, ಹೋತೃ, ಬ್ರಹ್ಮ, ಎಂಬ ನಾಲ್ಕು ಋತ್ವಿಕ್ಕುಗಳಿಗೂ [1]ಮಹಿಷಿ, ಪರಿವೃತ್ತಿ, ವಾವಾತೆ, ವಾಲಾಕಲಿ, ಎಂಬ ಪತ್ನಿಯರನ್ನು ದಕ್ಷಿಣಾರೂಪ ವಾಗಿ ಕೊಡಲು, ಅವರೆಲ್ಲರನ್ನೂ ಆ ಋತ್ವಿಕ್ಕುಗಳು ಪತ್ನಿಗಳಂತೆ ಪರಿಗ್ರಹಿಸಿ ದರು. ಜಿತೇಂದ್ರಿಯನಾಗಿಯೂ, ಪ್ರಯೋಗಶಾಸ್ತ್ರನಿಪುಣನಾಗಿಯೂ ಇರುವ ಅಧ್ವರ್ಯುವು, ಆ ಕುದುರೆಯ ವಪೆಯೆಂಬ ಭಾಗವನ್ನು ತೆಗೆದು, ಶಾಸ್ತ್ರ ಕ್ರಮದಿಂದ ಪಚನಮಾಡಿದನು. ಈ ವಪೆಯು ಬೇಯುತ್ತಿರುವ ಕಾಲದಲ್ಲಿ ರಾಜನು ತನ್ನ ಪಾಪಪರಿಹಾರಾರ್ಥವಾಗಿ ಅದರ ಹೊಗೆಯ ವಾಸನೆಯನ್ನು ಶಾಸ್ತ್ರರೀತಿಯಿಂದ ಆಘ್ರಾಣಿಸಿದನು. ಮಂತ್ರಜ್ಞರಾದ ಹದಿನಾರು ಮಂದಿ ಋತ್ವಿಕ್ಕುಗಳು ಆ ಕುದುರೆಯ ಅವಯವಗಳೆಲ್ಲವನ್ನೂ ಅಗ್ನಿಯಲ್ಲಿ ಬೇಯಿ ಸಿದರು. ಇತರ ಯಜ್ಞಗಳಲ್ಲಿ ಆಲದ ಕೊಂಬೆಗಳಿಂದ ಹವಿಸ್ಸು ಸಂಸ್ಕರಿಸಲ್ಪಡು ವುದು. ಅಶ್ವಮೇಧಯಜ್ಞದಲ್ಲಿಯಾದರೋ ವೇತಸವೃಕ್ಷದ (ನೀರಂಜಿಯ) ಕೊಂಬೆಗಳಿಂದ ಸಂಸ್ಕರಿಸಲ್ಪಡುವುದು. ಹೀಗೆ ಕಲ್ಪಸೂತ್ರಪ್ರಕಾರವಾಗಿ ಅಶ್ವಮೇಧವು [2]ಮೂರು ದಿವಸಗಳ ಯಜ್ಞವೆಂದು ನಿರ್ಣಯಿಸಲ್ಪಟ್ಟು,

---

1. "ಕೃತಾಭಿಷೇಕಾ ಮಹಿಷೀ ಪರಿವೃತ್ತಿರುಪೇಕ್ಷಿತಾ | ವಾವಾತಾ ಭೋಗಿನೀ ಪಾತ್ರಪ್ರದಾ ವಾಲಾಕಲೀ ಮತಾ ||" ಎಂಬಂತೆ ರಾಜನಿಗೆ ಪಟ್ಟದಹೆಂಡತಿಯು ಮಹಿಷಿಯೆನಿಸುವಳು. ರಾಜನು ಅನುಭವಿಸಿ ಬಿಟ್ಟುಬಿಟ್ಟ ದಾಸಿಯು ಪರಿವೃತ್ತಿಯೆನಿಸುವಳು. ರಾಜನ ವೇಶ್ಯೆಯೇ ವಾವಾತೆಯೆನಿಸು ವಳು. ರಾಜನಿಗೆ ಪಾತ್ರವನ್ನೊಪ್ಪಿಸುವವಳು ವಾಲಾಕಲಿ. ಕೆಲವರು ರಾಜನಿಗೆ ಕ್ಷತ್ರಿಯಜಾತಿಯಲ್ಲಿ ಹುಟ್ಟಿದ ಹೆಂಡತಿಯು ಮಹಿಷಿಯೆಂದೂ, ವೈಶ್ಯ ಜಾತಿ ಯವಳು ವಾವಾತೆಯೆಂದೂ, ಶೂದ್ರಜಾತಿ ಭಾರ್ಯೆಯು ಪರಿವೃತ್ತಿಯೆಂದೂ ಹೇಳುವರು. ಈ ನಾಲ್ಕೂ ಪತ್ನಿಯರನ್ನೂ, ರಾಜನು, ಹೋತೃ ಅಧ್ವರ್ಯು, ಉದ್ಗಾತೃ, ಬ್ರಹ್ಮ ಎಂಬ ನಾಲ್ವರು ಋತ್ವಿಕ್ಕುಗಳಿಗೂ ದಕ್ಷಿಣಾರೂಪವಾಗಿ ಕೊಡುವುದುಂಟು. ಆ ಋತ್ವಿಕ್ಕುಗಳೂ ಆ ಪತ್ನಿಯರಿಗೆ ಪ್ರತಿನಿಧಿಯಾಗಿ ದ್ರವ್ಯವನ್ನು ತೆಗೆದುಕೊಂಡು ಅವರನ್ನು ಹಿಂತಿರುಗಿ ಕೊಟ್ಟುಬಿಡುವರು.

2. ತ್ರಿವೃತ್ತು, ಪಂಚದಶ, ಸಪ್ತದಶ, ಏಕವಿಂಶಗಳೆಂಬ ನಾಲ್ಕು ಸ್ತೋಮಗಳಿಂದ ಕೂಡಿದುದು ಅಗ್ನಿಷ್ಟೋಮವೆನಿಸುವುದು. ಇವುಗಳನ್ನು

ಮೊದಲನೆಯದಿವಸದಲ್ಲಿ ಅತಿರಾತ್ರವೆಂದೂ ಕರೆಯಲ್ಪಡುವುದು. ಇತರಶಾಸ್ತ್ರಗಳಲ್ಲಿ ಇನ್ನೂ ಅನೇಕ ಯಜ್ಞಭೇದಗಳು ವಿಧಿಸಲ್ಪಟ್ಟಿರುವುದರಿಂದ, ಅವೆಲ್ಲವೂ ಕೂಡ ನಡೆಸಲ್ಪಟ್ಟುವು. ಜ್ಯೋತಿಷ್ಟೋಮವೂ, ಆಯುರ್ಯಾಗವೂ, ಎರಡು ಅತಿರಾತ್ರವೆಂಬ ಯಾಗಗಳೂ, ಅಭಿಜಿತ್ತು, ವಿಶ್ವಜಿತ್ತು, ಅಪ್ತೋರ್ಯಾಮಗಳೆಂಬ ಯಾಗಗಳೂ, ಮಹಾಕ್ರತುವೆಂಬ ಯಾಗವೂ, ಆ ಮೂರು ದಿವಸಗಳಿಗೆ ಮೇಲೆ ನಡೆಸಲ್ಪಟ್ಟುವು.

ಪೂರ್ವದಲ್ಲಿ ಸ್ವಯಂಭುವಾದ ಬ್ರಹ್ಮನು ಅಶ್ವಮೇಧ ಯಾಗವನ್ನು ಮಾಡಿದಾಗ, ಋತ್ವಿಕ್ಕುಗಳಿಗೆ ಕೊಟ್ಟ ದಕ್ಷಿಣೆಯ ಕ್ರಮವನ್ನನುಸರಿಸಿಯೇ, ಈ ದಶರಥನೂ ತನ್ನ ವಂಶಾಭಿವೃದ್ಧಿಗಾಗಿ, ಅಧ್ವರ್ಯುವಿಗೆ ಪಶ್ಚಿಮದಿಕ್ಕಿನ ದೇಶಗಳನ್ನೂ, ಹೋತೃವಿಗೆ ಪೂರ್ವದಿಕ್ಕಿನ ದೇಶಗಳನ್ನೂ, ಉದ್ಗಾತೃವಿಗೆ ಉತ್ತರದಿಕ್ಕಿನ ದೇಶಗಳನ್ನೂ, ಬ್ರಹ್ಮನಿಗೆ ದಕ್ಷಿಣದಿಕ್ಕಿನ ದೇಶಗಳನ್ನೂ ದಕ್ಷಿಣಾರೂಪವಾಗಿ ಕೊಟ್ಟನು. ಹೀಗೆ ಆ ಪುರುಷಶ್ರೇಷ್ಠನಾದ ದಶರಥನು ಸಾಂಗೋಪಾಂಗವಾಗಿ ಯಜ್ಞಕರ್ಮಗಳನ್ನೆಲ್ಲಾ ಮುಗಿಸಿ, ಕರ್ಮಸಾದ್ಗುಣ್ಯಾರ್ಥವಾಗಿ ಸಮಸ್ತ ಭೂಮಂಡಲವನ್ನೂ ಋತ್ವಿಕ್ಕುಗಳಿಗೆ ದಕ್ಷಿಣಾರೂಪವಾಗಿ ಧಾರೆಯೆರೆದು ಕೊಟ್ಟುಬಿಟ್ಟಮೇಲೆ, ಆ ಋತ್ವಿಕ್ಕುಗಳೆಲ್ಲರೂ ಕಲ್ಮಷರಹಿತನಾದ ಆ ರಾಜನನ್ನು ನೋಡಿ, "ಈ ಸಮಸ್ತ ಭೂಮಂಡಲವನ್ನೂ ಪಾಲಿಸುವುದಕ್ಕೆ ನೀನೊಬ್ಬನೇ ಅರ್ಹನು! ಯಾವಾಗಲೂ ವೇದಾಧ್ಯಯನಗಳಿಂದ ಕಾಲವನ್ನು ಕಳೆಯುತ್ತಿರುವ ನಮಗೆ ರಾಜ್ಯಭಾರಕ್ರಮವೊಂದೂ ತಿಳಿಯದು. ಈ ಭೂಮಿಯಿಂದ ನಮಗೇನು? ಪ್ರಜಾಪಾಲನವೆಂಬುದು ನಿಮ್ಮವರಿಗೆ ಕುಲಧರ್ಮವು. ಆದುದರಿಂದ ಅದಕ್ಕೆ ತಕ್ಕ ದ್ರವ್ಯವನ್ನು

ನಡೆಸುವುದರಿಂದ ಮೊದಲನೆಯ ದಿನವು ಚತುಷ್ಟೋಮವೆನಿಸುವುದು. ಇಪ್ಪತ್ತೊಂದು ಉಕ್ಥ್ಯಗಳೊಡಗೂಡಿರುವುದರಿಂದ ಜ್ಯೋತಿಷ್ಟೋಮದ ಎರಡನೆಯ ಸಂಸ್ಥೆಯು ಉಕ್ಥ್ಯವೆನಿಸುವುದು. ಅದು ಎರಡನೆಯ ದಿವಸದಲ್ಲಿ ನಡೆಸಲ್ಪಡುವುದು. ಸರ್ವಸ್ತೋಮವು ಅತಿರಾತ್ರವೆನಿಸುವುದು. ಇದು ಮೂರನೆಯ ದಿವಸದ ಕಾರ್ಯವು. ಹೀಗೆ ಅಶ್ವಮೇಧದಲ್ಲಿ ಮೂರು ದಿನಗಳಲ್ಲಿಯೂ ಈ ಮೂರೇ ನಡೆಸಲ್ಪಡಬೇಕಾಗಿದ್ದರೂ, ಉಪದೇಶ ಶಾಸ್ತ್ರಗಳಲ್ಲಿ ಕಾಣುವ ಇತರ ಯಾಗಗಳನ್ನೂ ರಾಜನು ಅದರ ಮೇಲಿನ ಕೆಲವು ದಿವಸಗಳವರೆಗೂ ನಡೆಸಿದನೆಂದು ತಿಳಿಯಬೇಕು

ಕೊಟ್ಟು ಇವೆಲ್ಲವನ್ನೂ ನೀನೇ ಹಿಂತಿರುಗಿ ತೆಗೆದುಕೊಳ್ಳುವನಾಗು! ಅಮೂಲ್ಯವಾದ ಈ ಭೂಮಂಡಲಕ್ಕೆ ತಕ್ಕ ಬೆಲೆಯನ್ನು ಹೇಗೆ ಕೊಡುವು ದಕ್ಕಾದೀತೆಂದು ನೀನು ಶಂಕಿಸಬೇಡ! ನೀನು ಕೊಟ್ಟಷ್ಟರಲ್ಲಿಯೇ ನಾವು ತೃಪ್ತಿಹೊಂದುವೆವು. ರತ್ನಗಳನ್ನಾಗಲಿ, ಸುವರ್ಣವನ್ನಾಗಲಿ, ಗೋವುಗಳ ನ್ನಾಗಲಿ, ಅಥವಾ ನಿನ್ನಲ್ಲಿರುವ ಬೇರೆ ಯಾವ ವಸ್ತುಗಳನ್ನಾಗಲಿ ಕೊಡು! ನಮಗೆ ಈ ಭೂಮಿಯಿಂದ ಏನೇನೂ ಪ್ರಯೋಜನವಿಲ್ಲ" ಎಂದರು. ಇದನ್ನು ಕೇಳಿ ದಶರಥನು ಆ ಬ್ರಾಹ್ಮಣರಿಗೆ ಹತ್ತುಲಕ್ಷ ಗೋವುಗಳನ್ನೂ, ಹತ್ತುಕೋಟಿ ಸುವರ್ಣಗಳನ್ನೂ, ಇವುಗಳಿಗೆ ನಾಲ್ಕರಷ್ಟು ಬೆಳ್ಳಿಯ ನಾಣ್ಯಗಳನ್ನೂ ರಾಜ್ಯಕ್ಕೆ ಪ್ರತಿನಿಧಿಯಾಗಿ ದಾನಮಾಡಿದನು. ಇದೆಲ್ಲವನ್ನೂ ಆ ಬ್ರಾಹ್ಮಣರು ಸಂತೋಷಪೂರ್ವಕವಾಗಿ ತೆಗೆದುಕೊಂಡು ಎಲ್ಲವನ್ನೂ ಒಟ್ಟುಗೂಡಿಸಿ, ಅದನ್ನು ತಮಗೆ ಹಂಚಿಕೊಡುವುದಕ್ಕಾಗಿ ಮಹರ್ಷಿಯಾದ ಋಷ್ಯಶೃಂಗ ನನ್ನೂ, ವಸಿಷ್ಠನನ್ನೂ ಪ್ರಾರ್ಥಿಸಿ, ಅವರ ಮುಂದೆ ತಂದಿಡಲು, ಅವರಿಬ್ಬರೂ ನ್ಯಾಯರೀತಿಯಿಂದ ಅದನ್ನು ಆ ಬ್ರಾಹ್ಮಣರಿಗೆ ಹಂಚಿಕೊಟ್ಟರು. ಆ ಬ್ರಾಹ್ಮಣರು ಅದೆಲ್ಲವನ್ನೂ ಸ್ವೀಕರಿಸಿ, ಬಹಳಸಂತುಷ್ಟರಾಗಿ, ಇವರನ್ನು ವಿಶೇಷ ವಾಗಿ ಕೊಂಡಾಡುತ್ತ ಹಿಂತಿರುಗಿದರು. ಆಮೇಲೆ ರಾಜನು ಯಜ್ಞವನ್ನು ನೋಡುವುದಕ್ಕಾಗಿ ಬಂದಿದ್ದ ಇತರ ಬ್ರಾಹ್ಮಣರೆಲ್ಲರಿಗೂ ಕೋಟಿಕೋಟಿಸಂಖ್ಯೆ ಯಿಂದ ಸುವರ್ಣದಾನವನ್ನು ಮಾಡಿದನು. ಆಗ ಅಲ್ಲಿದ್ದ ಬಡಬ್ರಾಹ್ಮಣ ನೊಬ್ಬನು ದಶರಥನ ಕೈಯಲ್ಲಿದ್ದ ಬಂಗಾರದ ಕಡಗವನ್ನು ಯಾಚಿಸಲು, ರಾಜನು ಬಹಳ ಸಂತೋಷದೊಡನೆ ಅದನ್ನೇ ಆತನಿಗೆ ಕೊಟ್ಟುಬಿಟ್ಟನು. ಹೀಗೆ ಯಥೇಷ್ಟವಾಗಿ ದಕ್ಷಿಣೆಯನ್ನು ಹೊಂದಿ ತೃಪ್ತಿಪಟ್ಟ ಬ್ರಾಹ್ಮಣರೆಲ್ಲರನ್ನೂ ಬಹಳ ಪ್ರೀತಿಯಿಂದ ಆದರಿಸಿ, ಅವರೆಲ್ಲರಿಗೂ ನಮಸ್ಕಾರಮಾಡಲು ಆ ಬ್ರಾಹ್ಮಣರೆಲ್ಲರೂ ವೇದೋಕ್ತವಾದ ಆಶೀರ್ವಾದವನ್ನು ಮಾಡಿದರು. ಹೀಗೆ ದಶರಥನು ಪಾಪಪರಿಹಾರಕವಾಗಿಯೂ, ಪುಣ್ಯಲೋಕವನ್ನು ಕೊಡತಕ್ಕು ದಾಗಿಯೂ, ಬೇರೆ ದೊರೆಗಳಿಗೆ ಅಸಾಧ್ಯವಾಗಿಯೂ ಇರುವ ಆ ಮಹಾ ಯಜ್ಞವನ್ನು ಮುಗಿಸಿದ ಮೇಲೆ ಋಷ್ಯಶೃಂಗನನ್ನು ನೋಡಿ! "ಎಲೈ ವ್ರತನಿಷ್ಠನೆ! ಇನ್ನುಮೇಲೆ ನನ್ನ ವಂಶಾಭಿವೃದ್ಧಿಗೆ ಕಾರಣವಾದ ಕರ್ಮ ವನ್ನೂ ನೀನೇ ಮಾಡಿಸಬೇಕಾಗಿರುವುದು" ಎಂದು ಪ್ರಾರ್ಥಿಸಿದನು. ಋಷ್ಯಶೃಂಗನು ಹಾಗೆಯೇ ಆಗಲೆಂದು ಒಪ್ಪಿಕೊಂಡು, ಕೊನೆಗೆ "ಎಲೈ

ರಾಜನೆ! ನಿನಗೆ ವಂಶೋದ್ಧಾರಕರಾದ ನಾಲ್ವರು ಕುಮಾರರು ಹುಟ್ಟುವರು, ಸಂದೇಹಪಡಬೇಡ" ಎಂದನು. ಇದನ್ನು ಕೇಳಿ ದಶರಥನು ಬಹಳ ಸಂತೋಷ ದಿಂದ ಆತನಿಗೆ ನಮಸ್ಕರಿಸಿದನು. ಪುನಃ ಆ ಋಷ್ಯಶೃಂಗನು ರಾಜನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವನು.

ಇಲ್ಲಿಗೆ ಹದಿನಾಲ್ಕನೆಯ ಸರ್ಗವು.

※ ರಾವಣನ ಬಾಧೆಗಾಗಿ ದೇವತೆಗಳೆಲ್ಲರೂ ಮಹಾವಿಷ್ಣುವಿನಲ್ಲಿ ದೂರ-ಹೇಳಿದುದು ※

ವೇದಗಳೆಲ್ಲವನ್ನೂ ತಿಳಿದು ಮಹಾಬುದ್ಧಿ ಕುಶಲನಾದ ಋಷ್ಯಶೃಂಗನು, ದಶರಥನಿಗೆ ತಾನು ಮಾತುಕೊಟ್ಟ ಮೇರೆಗೆ, ವಂಶಾಭಿವೃದ್ಧಿಗಾಗಿ ಆತನಿಂದ ಮಾಡಿಸಬೇಕಾದ ಕರ್ಮವಾವುದೆಂದು ಸ್ವಲ್ಪಹೊತ್ತು ಯೋಚಿಸುತ್ತಿದ್ದು, ಕೊನೆಗೆ ಒಂದುಪಾಯವನ್ನು ಮನಸ್ಸಿಗೆ ತಂದುಕೊಂಡು ರಾಜನನ್ನು ನೋಡಿ, 'ಎಲೈ ರಾಜನೆ! ಅಥರ್ವಣವೇದದ ಕೊನೆಯಲ್ಲಿ ಹೇಳಲ್ಪಟ್ಟ ಮಂತ್ರ ಗಳಿಂದ ನಡೆಸತಕ್ಕ ಒಂದು ಕರ್ಮವುಂಟು. ಅದೇ ಪುತ್ರಕಾಮೇಷ್ಟಿಯೆನಿಸು ವುದು. ನಿನ್ನ ಸಂತಾನಾರ್ಥವಾಗಿ ಆ ಯಾಗವನ್ನೇ ಈಗ ಮಾಡಿಸುವೆನು" ಎಂದು ಶಾಸ್ತ್ರೋಕ್ತವಾಗಿ ಆ ಯಜ್ಞವನ್ನಾರಂಭಿಸಿ, ಮಂತ್ರಪೂರ್ವಕವಾದ ಆಹುತಿಗಳನ್ನು ಅಗ್ನಿಯಲ್ಲಿ ಬಿಡುತ್ತಿದ್ದನು. ಕೂಡಲೆ ದೇವತೆಗಳು, ಗಂಧರ್ವರು, ಸಿದ್ಧರು, ಮಹರ್ಷಿಗಳು ಮುಂತಾದವರೆಲ್ಲರೂ, ತಮ್ಮ ತಮ್ಮ ಹವಿರ್ಭಾಗ ಗಳನ್ನು ತೆಗೆದುಕೊಳ್ಳುವುದಕ್ಕಾಗಿ ಬಂದು ಗುಂಪುಕೂಡಿದರು. ಹೀಗೆ ಆ ಯಾಗಕಾಲದಲ್ಲಿ ಇತರರಿಗೆ ಕಾಣಿಸದಂತೆ ಸಾಲಾಗಿ ನೆರೆದಿದ್ದ ದೇವತೆಗಳೆಲ್ಲರೂ ಲೋಕಕರ್ತನಾದ ಚತುರ್ಮುಖಬ್ರಹ್ಮನನ್ನು ನೋಡಿ, ಒಂದಾನೊಂದು ಮಾತನ್ನು ಹೇಳುವರು. "ಎಲೈ ಪೂಜ್ಯನೆ! ನಿನ್ನ ವರಪ್ರಸಾದದ ಬಲದಿಂದ ಮಹಾವೀರ್ಯವುಳ್ಳವನಾದ ರಾವಣನೆಂಬ ರಾಕ್ಷಸನು ನಮ್ಮೆಲ್ಲರನ್ನೂ ಬಹಳವಾಗಿ ಬಾಧಿಸುತ್ತಿರುವನು. ಅವನನ್ನು ಅಡಗಿಸುವುದು ನಮ್ಮಿಂದ ಸಾಧ್ಯವಲ್ಲ. ಪೂರ್ವದಲ್ಲಿ ನೀನು ಆತನ ತಪಸ್ಸಿಗೆ ಮೆಚ್ಚಿ ನಮ್ಮಿಂದ ಸಾವಿಲ್ಲದಂತೆ ವರವನ್ನು ಕೊಟ್ಟಿರುವೆ. ಇದಕ್ಕಾಗಿಯೇ ನಾವು ಅವನು ಮಾಡತಕ್ಕ ತೊಂದರೆ ಗಳೆಲ್ಲವನ್ನೂ ಸಹಿಸಿಕೊಂಡು ಆತನನ್ನೂ ಗೌರವಿಸಬೇಕಾಗಿದೆ. ಅವನು ಮೂರು ಲೋಕಗಳನ್ನೂ ಹೆದರಿಸುತ್ತಿರುವನು. ದಿಕ್ಪಾಲಕರೆಲ್ಲರನ್ನೂ ದ್ವೇಷಿಸುತ್ತಿರುವನು. ನಮಗೆಲ್ಲಾ ಒಡೆಯನಾದ ಇಂದ್ರನನ್ನೇ ರಾಜ್ಯದಿಂದ

ತಪ್ಪಿಸಬೇಕೆಂದೆಣಿಸಿರುವನು. ನೀನು ಕೊಟ್ಟಿರುವ ವರಗಳ ಬಲದಿಂದ ಮೈಮರೆತಿರುವ ಆ ಕ್ರೂರರಾಕ್ಷಸನು, ಋಷಿಗಳನ್ನೂ, ದೇವತೆಗಳನ್ನೂ, ಯಕ್ಷರನ್ನೂ, ಗಂಧರ್ವರನ್ನೂ, ಬ್ರಾಹ್ಮಣರನ್ನೂ ಬಹಳವಾಗಿ ಬಾಧಿಸುತ್ತಿರುವನು. ಆತನಿಗೆ ಭಯಪಟ್ಟು ಸೂರ್ಯನು ಆತನ ಮೇಲೆ ತನ್ನ ಬಿಸಿಲನ್ನು ಬೀಳಿಸುವುದಿಲ್ಲ. ವಾಯುವು ಆತನ ಪಕ್ಕದಲ್ಲಿ ವೇಗವಾಗಿ ಬೀಸಲಾರನು. ಯಾವಾಗಲೂ ಅಲೆಗಳಿಂದುಬ್ಬಿ ಆರ್ಭಟಿಸುತ್ತಿರುವ ಸ್ವಭಾವವುಳ್ಳ ಸಮುದ್ರನು ಕೂಡ ಆ ರಾಕ್ಷಸನ ಮುಂದೆ ಚಲಿಸದೆ ಸ್ತಬ್ಧನಾಗಿ ನಿಂತುಬಿಡುವನು. ಭಯಂಕರ ಸ್ವರೂಪವುಳ್ಳ ಆ ರಾಕ್ಷಸನಿಂದ ನಮಗೆ ಬಹಳವಾದ ಅಂಜಿಕೆಯುಂಟಾಗಿರುವುದು. ಈಗ ಆತನನ್ನು ಕೊಲ್ಲುವುದಕ್ಕೆ ತಕ್ಕ ಉಪಾಯವನ್ನೂ ನೀನೇ ಯೋಚಿಸಬೇಕು" ಎಂದರು.

ಇದನ್ನು ಕೇಳಿ ಬ್ರಹ್ಮನು ಒಂದು ಕ್ಷಣಕಾಲದವರೆಗೆ ಚಿಂತಿಸಿ, ಆಮೇಲೆ ದೇವತೆಗಳನ್ನು ಕುರಿತು, "ಇರಲಿ! ದುರಾತ್ಮನಾದ ಆ ರಾವಣನನ್ನು ಕೊಲ್ಲುವುದಕ್ಕೆ ಒಂದುಪಾಯವು ಈಗ ನನಗೆ ತೋರಿತು. ಆತನು ನನ್ನಲ್ಲಿ ವರವನ್ನು ಕೇಳಿಕೊಂಡಾಗ, ದೇವದಾನವಯಕ್ಷರಾಕ್ಷಸಗಂಧರ್ವರಲ್ಲಿ ಯಾರಿಂದಲೂ ತನಗೆ ಮರಣವಿಲ್ಲದಹಾಗೆ ಅನುಗ್ರಹಿಸಬೇಕೆಂದು ಕೋರಿದನು. ನಾನೂ ಹಾಗೆಯೇ ಆಗಲೆಂದು ವರವನ್ನು ಕೊಟ್ಟುಬಿಟ್ಟೆನು. ಆ ಕಾಲದಲ್ಲಿ ಆತನು ಮನುಷ್ಯರ ಹೆಸರನ್ನು ಅದರಲ್ಲಿ ಸೇರಿಸುವುದು ತನಗೆ ಅವಮಾನಕರವೆಂಬ ಅಲಕ್ಷ್ಯಭಾವದಿಂದ ಅದನ್ನು ಹೇಳಲೇ ಇಲ್ಲ. ಆದುದರಿಂದ ಭೂಲೋಕದಲ್ಲಿ ಹುಟ್ಟಿದ ಮನುಷ್ಯರಿಂದಲೇ ಆತನಿಗೆ ಸಾವುಂಟಾಗಬೇಕೇ ಹೊರತು ಇತರರಿಂದ ಸಾಧ್ಯವಲ್ಲ" ಎಂದನು. ಈ [1]ಪ್ರಿಯವಾಕ್ಯವನ್ನು ಕೇಳಿದೊಡನೆ

---

1. ಈ ಮುಂದಿನ ವಾಕ್ಯದಲ್ಲಿ ಭಗವಂತನಿಗೆ ಆಶ್ರಿತರಕ್ಷಣೆಯಲ್ಲಿರುವ ಅತ್ಯಾತುರವು ಕಾಣಿಸಲ್ಪಡುವುದು. ಹೇಗೆಂದರೆ—"ಅಷ್ಟರೊಳಗಾಗಿ ಎಂದರೆ, ಈ ದೇವತೆಗಳು ತಮ್ಮ ಕಷ್ಟವನ್ನು ನೀಗಿಸುವವರು ಯಾರೆಂದು ವಿಚಾರಿಸುವಷ್ಟರಲ್ಲಿಯೇ ಬಂದನೆಂಬುದರಿಂದ, ಅವರು ತಮ್ಮಲ್ಲಿಯೇ ಯಾವನಾದರೂ ಒಬ್ಬನನ್ನು ರಾವಣವಧಕ್ಕಾಗಿ ನೇಮಿಸಿಬಿಟ್ಟರೆ, ತನಗೆ ಆಶ್ರಿತರಕ್ಷಣವಿಲ್ಲದೆ ಹೋಗುವುದೆಂಬ ಆತುರದಿಂದ, ಅವರು ತೀರ್ಮಾನಿಸುವುದರೊಳಗಾಗಿಯೇ ಬಂದನೆಂದು ಅಭಿಪ್ರಾಯವು. ಮತ್ತು ತಾನಾಗಿಯೇ ಬಂದನೆಂಬುದರಿಂದ, ಅಪ್ರಾರ್ಥಿತನಾಗಿಯೇ ಬಂದು ಆಶ್ರಿತರ ಕಷ್ಟವನ್ನು ನೀಗಿಸತಕ್ಕವನೆಂಬ ಆತನ

ಅಲ್ಲಿದ್ದ ದೇವತೆಗಳೆಲ್ಲರೂ ಬಹಳ ಸಂತೋಷವುಳ್ಳವರಾಗಿದ್ದರು. ಇಷ್ಟರೊಳಗಾಗಿ ಶಂಖಚಕ್ರಗದಾಪಾಣಿಯಾಗಿಯೂ, ಪೀತಾಂಬರವನ್ನು ಧರಿಸಿದವನಾಗಿಯೂ, ಅದ್ಭುತವಾದ ದೇಹಕಾಂತಿಯುಳ್ಳವನಾಗಿಯೂ ಇರುವ ಜಗತ್ಪತಿಯಾದ ಶ್ರೀ ಮಹಾವಿಷ್ಣುವು ತಾನಾಗಿಯೇ ಆ ಸಭೆಗೆ ಬಂದನು. ಹೀಗೆ ಬಂದ ಶ್ರೀಮನ್ನಾರಾಯಣನು ಬ್ರಹ್ಮನಿದ್ದ ಕಡೆಗೆ ಹೋಗಿ, ಆತನೊಡನೆ ಸೇರಿ ನಿಂತಿರಲು, ದೇವತೆಗಳೆಲ್ಲರೂ ಸ್ತೋತ್ರಮಾಡುತ್ತ, ಸಾಷ್ಟಾಂಗಪ್ರಣಾಮ ವನ್ನು ಮಾಡಿ, ವಿನಯದಿಂದ ವಿಜ್ಞಾಪಿಸುವರು. "ಎಲೈ ಮಹಾತ್ಮನೆ! ಮೂರು ಲೋಕಗಳಿಗೂ ಹಿತವನ್ನುಂಟುಮಾಡುವುದಕ್ಕಾಗಿಯೇ ನೀನು ಬದ್ಧ ದೀಕ್ಷನಾಗಿರುವುದರಿಂದ ನಿನ್ನನ್ನು ಆ ಕಾರ್ಯಕ್ಕಾಗಿಯೇ ನಾವು ನಿಯೋಗಿಸ ಬೇಕೆಂದಿರುವೆವು. ಧರ್ಮಜ್ಞನಾಗಿ, ಉದಾರನಾಗಿ, ಮಹರ್ಷಿಗಳಿಗೆ ಸಮಾನ ವಾದ ತೇಜಸ್ಸುಳ್ಳವನಾಗಿ, ಅಯೋಧ್ಯೆಯನ್ನಾಳುತ್ತಿರುವ, ಈ ದಶರಥ ಮಹಾರಾಜನಿಗೆ ನೀನು ಪುತ್ರನಾಗಿ, ಲಜ್ಜೆ, ಲಕ್ಷ್ಮಿ, ಕೀರ್ತಿ ಎಂಬಿವು ಮೂರೂ ಮೂರ್ತೀಭವಿಸಿದಂತೆ ಲೋಕೋತ್ತರಗುಣವುಳ್ಳ ಆತನ ಮೂರು ಮಂದಿ ಪತ್ನಿಯರಲ್ಲಿ ನಿನ್ನ [1]ಅಂಶವನ್ನೇ ನಾಲ್ಕಾಗಿ ವಿಭಾಗಿಸಿಕೊಂಡು, ನಾಲ್ಕು ಮಕ್ಕಳಾಗಿ ಮನುಷ್ಯಸ್ವರೂಪದಿಂದ ಹುಟ್ಟಬೇಕು. ಲೋಕಕಂಟಕನಾಗಿರುವ ರಾವಣನೆಂಬ ದೊಡ್ಡ ರಾಕ್ಷಸನು ದಿನ ದಿನಕ್ಕೂ ಹೆಚ್ಚುತ್ತಿರುವನು. ಆತನನ್ನು ಕೊಲ್ಲುವುದಕ್ಕೆ ಯಾವ ದೇವತೆಗಳಿಂದಲೂ ಸಾಧ್ಯವಲ್ಲ. ಆತನು ತನ್ನ ಪರಾಕ್ರಮದ ಕೆಚ್ಚಿನಿಂದ ದೇವತೆಗಳನ್ನೂ, ಗಂಧರ್ವರನ್ನೂ, ಸಿದ್ಧರನ್ನೂ ಆಗಾಗ ಪೀಡಿಸುತ್ತಿರುವನು. ಗಂಧರ್ವರೂ, ಅಪ್ಸರಸ್ಸುಗಳೂ, ನಂದನವನದಲ್ಲಿ

ಪರಮದಯಾಳುತ್ವವೂ, ತಾನು ಸರ್ವೇಶ್ವರನಾಗಿದ್ದರೂ ಆಶ್ರಿತರ ವಿಷಯದಲ್ಲಿ ಆತನಿಗಿರುವ ಸೌಲಭ್ಯವೂ ತೋರುವುದು. ಶಂಖಚಕ್ರಾದಿಗಳೊಡನೆ ಬಂದ ನೆಂಬುದರಿಂದ, ಈ ಯಜ್ಞಕಾಲದಲ್ಲಿ ಹವಿಸ್ಸನ್ನು ತೆಗೆದುಕೊಳ್ಳುವುದಕ್ಕಾಗಿ ಮಾತ್ರವೇ ಬೇಕಾದ ಸನ್ನಾಹವನ್ನು ಮಾಡಿಕೊಂಡು ಬಂದಿರುವ ಇತರ ದೇವತೆಗಳಂತಲ್ಲದೆ, ಆಶ್ರಿತರ ವಿರೋಧಿಗಳನ್ನು ನಿಗ್ರಹಿಸಬೇಕೆಂಬ ಆತುರದಿಂದ ಆಯುಧಗಳನ್ನು ಹಿಡಿದು ಸಿದ್ಧನಾಗಿಯೇ ಬಂದನೆಂದೂ ಭಾವವು.

1. ರಾವಣನನ್ನೂ, ಇಂದ್ರಜಿತ್ತನ್ನೂ, ಲವಣಾಸುರನನ್ನೂ, ಗಂಧರ್ವ ನನ್ನೂ ಕ್ರಮವಾಗಿ ಕೊಲ್ಲುವುದಕ್ಕಾಗಿ ಈ ನಾಲ್ಕು ಅಂಶಗಳೆಂದು ತಿಳಿಯ ಬೇಕು.

*

ಕ್ರೀಡಿಸುತ್ತಿರುವಾಗ ನಿಷ್ಕಾರಣವಾಗಿ ಅವರನ್ನು ಬಾಧಿಸುವನು. ನಾವೆಲ್ಲರೂ ಇಲ್ಲಿಗೆ ಬಂದು ನಿನ್ನಲ್ಲಿ ಶರಣಾಗತರಾಗಿರುವೆವು. ಹೇಗಾದರೂ ಆತನನ್ನು ಕೊಲ್ಲತಕ್ಕ ಭಾರವು ನಿನಗೆ ಸೇರಿದೆ. ನಮ್ಮೆಲ್ಲರಿಗೂ ನೀನಲ್ಲದೆ ಬೇರೆ ರಕ್ಷಕರು ಯಾರೂ ಇಲ್ಲ. ಆದುದರಿಂದ ಎಲೈ ಲೋಕರಕ್ಷಕನೇ! ಈ ಶತ್ರುಗಳನ್ನು ಸಂಹರಿಸುವುದಕ್ಕಾಗಿ ನೀನು ಭೂಲೋಕದಲ್ಲಿ ಅವತರಿಸಬೇಕು" ಎಂದರು.

ದೇವದೇವನಾದ ಮಹಾವಿಷ್ಣುವು ಈ ಮಾತನ್ನು ಕೇಳಿ, ಬ್ರಹ್ಮನೇ ಮೊದಲಾದ ಆ ದೇವತೆಗಳೆಲ್ಲರನ್ನೂ ಕುರಿತು "ಎಲೈ ದೇವತೆಗಳಿರಾ! ಇನ್ನು ಭಯವನ್ನು ಬಿಡಿರಿ! ನಿಮಗೆ ಕ್ಷೇಮವುಂಟಾಗುವುದು. ಆತನ ಪುತ್ರಪೌತ್ರರೊಡನೆಯೂ, ಮಂತ್ರಿಗಳೊಡನೆಯೂ, ಜ್ಞಾತಿಗಳೊಡನೆಯೂ, ಬಂಧುಗಳೊಡನೆಯೂ ಕ್ರೂರನಾದ ರಾವಣನನ್ನು ಕೊಂದು ನಿಮಗೆ ಕ್ಷೇಮವನ್ನುಂಟುಮಾಡುವೆನು. ಮನುಷ್ಯಲೋಕದಲ್ಲಿ ನಾನು ಹುಟ್ಟಿ ಹನ್ನೊಂದು ಸಾವಿರ ವರ್ಷಗಳವರೆಗೆ ಆ ಭೂಮಿಯನ್ನು ಧರ್ಮದಿಂದ ಪಾಲಿಸುತ್ತಿರುವೆನು. ಇನ್ನು ನೀವು ಚಿಂತಿಸಬೇಕಾದುದಿಲ್ಲ" ಎಂದು ವರವನ್ನು ಕೊಟ್ಟು, ತಾನೂ ಭೂಲೋಕದಲ್ಲಿ ಅವತರಿಸುವಂತೆ ಮನಸ್ಸಿನಲ್ಲಿ ಸಂಕಲ್ಪಿಸಿಕೊಂಡನು. ಆಮೇಲೆ ಕಮಲದಳದಂತೆ ವಿಸ್ತಾರವಾದ ಕಣ್ಣುಳ್ಳ ಆ ಮಹಾವಿಷ್ಣುವು ತನ್ನ ಅಂಶವನ್ನು ನಾಲ್ಕಾಗಿ ವಿಭಾಗಿಸಿಕೊಂಡು, ದಶರಥನನ್ನೇ ತನ್ನ ತಂದೆಯನ್ನಾಗಿ ನಿಶ್ಚಯಿಸಿದನು. ಆಮೇಲೆ ಅಲ್ಲಿದ್ದ ದೇವತೆಗಳೂ, ಗಂಧರ್ವರೂ, ರುದ್ರರೂ, ಅಪ್ಸರಸ್ಸುಗಳೂ, ದಿವ್ಯಸ್ತುತಿಗಳಿಂದ ಹೀಗೆಂದು ಸ್ತೋತ್ರಮಾಡಿದರು. "ಎಲೈ ದೇವದೇವನೆ! ಗರ್ವಿಷ್ಠನಾಗಿ, ಕ್ರೂರಪರಾಕ್ರಮಿಯಾಗಿ, ಕೊಬ್ಬಿದವನಾಗಿ, ದೇವತೆಗಳಿಗೆ ದ್ವೇಷಿಯಾಗಿ, ತ್ರೈಲೋಕ್ಯವನ್ನೂ ಗೋಳಾಡಿಸತಕ್ಕವನಾಗಿ ಸಾಧುಗಳಿಗೂ, ತಪಸ್ವಿಗಳಿಗೂ ಕಂಟಕಪ್ರಾಯನಾಗಿ ಭಯಂಕರಸ್ವರೂಪನಾಗಿರುವ ಆ ರಾವಣನನ್ನು ಬಂಧುಮಿತ್ರಪರಿವಾರಗಳೊಡನೆ ಕೊಂದು ನಿಶ್ಚಿಂತನಾಗಿ ಹಿಂತಿರುಗಿ, ಶಾಶ್ವತವಾದ ನಿನ್ನ ಲೋಕವನ್ನು ಸೇರುವವನಾಗು" ಎಂದರು.

ಇಲ್ಲಿಗೆ ಹದಿನೈದನೆಯ ಸರ್ಗವು.

ದೇವತೆಗಳ ಪ್ರಾರ್ಥನೆಯಂತೆ ವಿಷ್ಣುವು ಮನುಷ್ಯರೂಪದಿಂದ ಹುಟ್ಟುವುದಾಗಿ ಅಭಯವನ್ನು ಕೊಟ್ಟುದು

ಹೀಗೆ ಸೃಷ್ಟಿಸ್ಥಿತಿಲಯಗಳನ್ನೇ ತನ್ನ ಲೀಲೆಯಾಗಿಟ್ಟುಕೊಂಡು ವಿನೋದಿಸುತ್ತಿರುವ ಸರ್ವಾಂತರ್ಯಾಮಿಯಾದ ಶ್ರೀಮನ್ನಾರಾಯಣನು, ರಾವಣವಧೋಪಾಯವನ್ನು ತಾನು ಬಲ್ಲವನಾಗಿದ್ದರೂ, ತಾನು ಆಶ್ರಿತರಿಗೆ ಪರತಂತ್ರನಾಗಿರುವವನೆಂಬ ಸೌಲಭ್ಯವನ್ನು ತೋರಿಸುವುದಕ್ಕಾಗಿಯೂ, ದೇವತೆಗಳನ್ನು ಗೌರವಿಸುವುದಕ್ಕಾಗಿಯೂ, ಅವರೆಲ್ಲರನ್ನೂ ಕುರಿತು "ಎಲೈ ದೇವತೆಗಳೇ! ಋಷಿಕಂಟಕನಾದ ಆ ದುರಾತ್ಮನನ್ನು ಕೊಲ್ಲುವುದಕ್ಕೆ ಉಪಾಯವೇನು?" ಎಂದು ಮೃದುವಾದ ಮಾತಿನಿಂದ ಕೇಳಲು, ಅದಕ್ಕೆ ಆ ದೇವತೆಗಳು, "ಸ್ವಾಮಿ! ಮನುಷ್ಯರೂಪದಿಂದಲೇ ಅವತರಿಸಿ ಯುದ್ಧದಲ್ಲಿ ಆತನನ್ನು ಕೊಲ್ಲಬೇಕು. ಏಕೆಂದರೆ, ಆತನು ಪೂರ್ವದಲ್ಲಿ ಬ್ರಹ್ಮನನ್ನು ಕುರಿತು ಬಹುಕಾಲದವರೆಗೆ ಘೋರವಾದ ತಪಸ್ಸನ್ನು ಮಾಡಿದನು. ಆತನ ತಪಸ್ಸಿಗೆ ಸೃಷ್ಟಿಕರ್ತನಾದ ಬ್ರಹ್ಮನು ಮೆಚ್ಚಿ, ಮನುಷ್ಯರು ಹೊರತು, ಬೇರೆ ಯಾವ ಪ್ರಾಣಿಗಳಿಂದಲೂ ಭಯವಿಲ್ಲದಂತೆ ವರವನ್ನು ಕೊಟ್ಟಿರುವನು. ಈ ವರವನ್ನು ಕೇಳುವಾಗ ಆ ರಾವಣನು ಬಹಳ ಅಲಕ್ಷ್ಯದಿಂದ ಮನುಷ್ಯರ ಹೆಸರನ್ನೇ ಬಿಟ್ಟುಬಿಟ್ಟಿರುವನು. ಈ ವರದ ಬಲದಿಂದಲೇ ಆ ರಾಕ್ಷಸನು ಕೊಬ್ಬಿದವನಾಗಿ, ಬಹಳ ಗರ್ವದಿಂದ ಮೂರು ಲೋಕಗಳನ್ನೂ ಗೋಳಾಡಿಸುತ್ತಿರುವನು. ಕಂಡ ಕಂಡ ಕಡೆಯಲ್ಲಿ ದೇವಕನ್ನಿಕೆಯರನ್ನು ಎಳೆಯುತ್ತಿರುವನು. ಮನುಷ್ಯರಿಂದ ಹೊರತು ಆತನನ್ನು ಕೊಲ್ಲುವುದಕ್ಕೆ ಬೇರೆ ಯಾರಿಂದಲೂ ಸಾಧ್ಯವಿಲ್ಲ" ಎಂದರು.

ಇದನ್ನು ಕೇಳಿ ಭಗವಂತನು, ದಶರಥನ ಹೊಟ್ಟೆಯಲ್ಲಿ ತಾನು ಹುಟ್ಟುವುದಾಗಿ ಸಂಕಲ್ಪಿಸಿಕೊಂಡನು. ಈ ಕಾಲಕ್ಕೆ ಸರಿಯಾಗಿಯೇ ದಶರಥನೂ ಸಂತಾನಾರ್ಥವಾಗಿ ಪುತ್ರಕಾಮೇಷ್ಟಿಯನ್ನು ಮಾಡುತ್ತಿದ್ದುದರಿಂದ ಮಹಾವಿಷ್ಣುವು ಹೀಗೆ ನಿಶ್ಚಯಿಸಿ, ಬ್ರಹ್ಮನ ಅನುಮತಿಯನ್ನು ಪಡೆದು ದೇವತೆಗಳೂ, ಮಹರ್ಷಿಗಳೂ, ಸ್ತೋತ್ರಮಾಡುತ್ತಿರುವ ಹಾಗೆಯೇ ಅಂತರ್ಧಾನವನ್ನು ಹೊಂದಿದನು. ಒಡನೆಯೇ ಇತ್ತಲಾಗಿ ಯಾಗಮಾಡುತ್ತಿರುವ ದಶರಥನ ಯಜ್ಞಕುಂಡದಿಂದ ಎಣೆಯಿಲ್ಲದ ಕಾಂತಿಯುಳ್ಳ ಒಂದು ದೊಡ್ಡ ಪುರುಷಾಕೃತಿಯು ಉದ್ಭವಿಸಿತು. ಅದು ಮಹಾವೀರ್ಯವುಳ್ಳುದಾಗಿಯೂ ಬಲವುಳ್ಳದಾಗಿಯೂ,

ಕೆಂಪು ಕಪ್ಪು ಬಣ್ಣಗಳಿಂದ ಕೂಡಿದ ವಸ್ತ್ರವನ್ನು ಧರಿಸಿದುದಾಗಿಯೂ ಇತ್ತು. ಮತ್ತು ಅದರ ಮುಖವು ಕೆಂಪಾಗಿಯೂ, ಧ್ವನಿಯು ದುಂದುಭಿಧ್ವನಿಯಂತೆ ಗಂಭೀರವಾಗಿಯೂ, ಅದರ ಕೂದಲುಗಳೆಲ್ಲವೂ ಸಿಂಹದ ಮೈಕೂದಲಿನಂತೆ ನುಣುಪಾಗಿಯೂ ಇದ್ದುವು. ಹೀಗೆ ಶುಭಲಕ್ಷಣಗಳಿಂದ ಕೂಡಿ, ದಿವ್ಯಾಭರಣಗಳಿಂದಲಂಕೃತವಾಗಿ, ಬೆಟ್ಟದ ಶಿಖರದಂತೆ ಎತ್ತರವಾದ ಆಕೃತಿಯುಳ್ಳುದಾಗಿ, ಕೊಬ್ಬಿದ ಹುಲಿಯಂತೆ ಕ್ರೂರವಾದ ಪರಾಕ್ರಮವುಳ್ಳುದಾಗಿ, ಸೂರ್ಯನಂತೆಯೂ, ಉರಿಯುತ್ತಿರುವ ಬೆಂಕಿಯ ಜ್ವಾಲೆಯಂತೆಯೂ ಪ್ರಕಾಶಿಸುತ್ತಿತ್ತು. ಅದರ ಕೈಯಲ್ಲಿ ಬೆಳ್ಳಿಯ ಕಟ್ಟುಹಾಕಿದ ಸುವರ್ಣಕಲಶವೊಂದು ದಿವ್ಯಪಾಯಸ ಪೂರ್ಣವಾಗಿ ಶೋಭಿಸುತ್ತಿತ್ತು. ಪ್ರಿಯಪತ್ನಿಯನ್ನು ಕೈಹಿಡಿದು ಕರೆತರುವಂತೆ ಆ ಭೂತವು ದೊಡ್ಡಪಾತ್ರೆಯನ್ನು ಎರಡು ತೋಳುಗಳಿಂದಲೂ ಎತ್ತಿ ತಂದು, ದಶರಥ ರಾಜನನ್ನು ನೋಡಿ, “ಎಲೈ ರಾಜನೆ! ನನ್ನನ್ನು ಬ್ರಹ್ಮನ ಕಡೆಯುವನೆಂದು ತಿಳಿ! ಆತನಿಂದಲೇ ನಾನು ಕಳುಹಿಸಲ್ಪಟ್ಟಿರುವೆನು” ಎಂದು ಹೇಳಲು, ಆ ರಾಜನು ಕೈಜೋಡಿಸಿ ನಿಂತು, “ಎಲೈ ಪೂಜ್ಯನೇ! ನಿನಗೆ ಸುಖಾಗಮನವುಂಟಾಗಲಿ! ನಿನಗೆ ನನ್ನಿಂದ ಆಗಬೇಕಾದ ಕೆಲಸವೇನು?” ಎಂದು ಕೇಳಿದನು. ಅದಕ್ಕೆ ಆ ಪುರುಷನು “ಎಲೈ ರಾಜನೆ! ನೀನು ಯಾಗಗಳನ್ನು ಮಾಡಿ ಅನೇಕ ದೇವತೆಗಳನ್ನು ತೃಪ್ತಿಪಡಿಸಿರುವೆ! ಆದುದರಿಂದ ಇದೋ! ಈ ಪಾಯಸವು ನಿನಗೆ ದೊರೆತಿರುವುದು. ಇದು ದೇವತೆಗಳ ಕೈಯಿಂದಲೇ ಮಾಡಲ್ಪಟ್ಟುದು. ಇದು ಸಂತಾನವನ್ನು ಕೊಡುವುದಲ್ಲದೆ ದೇಹಾರೋಗ್ಯವನ್ನೂ ಹೆಚ್ಚಿಸುವುದು. ಇದನ್ನು ಸ್ವೀಕರಿಸು! ನಿನ್ನ ಮೂವರು ಪತ್ನಿಯರಿಗೂ ಇದನ್ನು ಹಂಚಿಕೊಟ್ಟು ಭುಜಿಸುವ ಹಾಗೆ ಹೇಳು. ನೀನು ಯಾವುದಕ್ಕೋಸ್ಕರ ಯಾಗಮಾಡುತ್ತಿರುವೆಯೋ ಆ ಇಷ್ಟಾರ್ಥವು ಇದರಿಂದ ನೆರವೇರುವುದು. ಇದರಿಂದಲೇ ನೀನು ಪುತ್ರರನ್ನು ಪಡೆಯುವೆ!” ಎಂದನು.

ರಾಜನು ಬಹಳ ಸಂತೋಷಪಟ್ಟು ಹಾಗೆಯೇ ಆಗಲೆಂದು ದಿವ್ಯಪಾಯಸ ಸಂಪೂರ್ಣವಾದ ಆ ಪಾತ್ರೆಯನ್ನು ವಿನಯದಿಂದ ಕೈಗೆ ತೆಗೆದುಕೊಂಡು ಆಶ್ಚರ್ಯಕರವಾಗಿಯೂ, ಮೋಹಕರವಾಗಿಯೂ ಇರುವ ರೂಪವುಳ್ಳ ದಿವ್ಯಪುರುಷನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ನಿಧಿಯನ್ನು ಕಂಡ ದರಿದ್ರನಂತೆ ಮಿತಿಮೀರಿದ ಸಂತೋಷದಿಂದಿದ್ದನು. ಆಮೇಲೆ ಆ ತೇಜೋ

ಮಯವಾದ ಭೂತವು ಆ ಅಗ್ನಿಯಲ್ಲಿಯೇ ಕಣ್ಮರೆಯಾಯಿತು. ಶರತ್ಕಾಲದ ಚಂದ್ರಕಿರಣಗಳಿಂದ ಅಂತರಿಕ್ಷವು ಹೇಗೋ ಹಾಗೆ ಸಂತೋಷದ ಕಾಂತಿಯಿಂದ ಆ ರಾಜನ ಅಂತಃಪುರವೆಲ್ಲವೂ ಉಲ್ಲಾಸಹೊಂದಿತು. ಒಡನೆಯೇ ರಾಜನು ಆ ದಿವ್ಯಪಾಯಸವನ್ನು ಅಂತಃಪುರಕ್ಕೆ ತೆಗೆದುಕೊಂಡು ಹೋಗಿ, ಕೌಸಲ್ಯೆಯನ್ನು ಕುರಿತು, "ಪ್ರಿಯೆ! ಇದೋ ಈ ಪಾಯಸವನ್ನು ಸ್ವೀಕರಿಸು! ಇದು ಸಂತಾನಪ್ರದವಾದುದು" ಎಂದು, ಅದರಲ್ಲಿ ಅರ್ಧಭಾಗವನ್ನು ಅವಳಿಗೆ ಕೊಟ್ಟನು. ಉಳಿದ ಅರ್ಧದಲ್ಲಿ ಎರಡು ಭಾಗವಮಾಡಿ, ಒಂದನ್ನು ಸುಮಿತ್ರೆಗೆ ಕೊಟ್ಟನು. ಉಳಿದುದರಲ್ಲಿ ಪುನಃ ಅರ್ಧಭಾಗ ಮಾಡಿ, ಒಂದು ಭಾಗವನ್ನು ಕೈಕೇಯಿಗೆ ಕೊಟ್ಟನು. ಇದೆಲ್ಲವೂ ಆದಮೇಲೆ, ತನ್ನ ಕೈಯಲ್ಲಿ ಉಳಿದ ಎಂಟನೆಯ ಭಾಗವನ್ನು ಪುನಃ ಕೈಕೇಯಿಗೇ ಕೊಟ್ಟರೆ, ಇವಳಿಗೂ ಸುಮಿತ್ರೆಗೂ ಸಮಪ್ರಮಾಣವಾಗುವುದೆಂದೂ, ಸುಮಿತ್ರೆಯು ಕೈಕೇಯಿಗಿಂತ ದೊಡ್ಡವಳಾದುದರಿಂದ ಅವಳಿಗೆ ಹೆಚ್ಚು ಭಾಗವು ಸೇರಬೇಕಾದುದುಚಿತವೆಂದೂ, ಮನಸ್ಸಿನಲ್ಲಿ ಯೋಚಿಸಿ, ಕೈಯಲ್ಲಿದ್ದ ಆ ಪಾಯಸವನ್ನೂ ಸುಮಿತ್ರೆಗೇ ಕೊಟ್ಟುಬಿಟ್ಟನು. ಹೀಗೆ ರಾಜನು ತನ್ನ ಮೂವರು ಪತ್ನಿಯರಿಗೂ ಬೇರೆಬೇರೆಯಾಗಿ ಪಾಯಸವನ್ನು ಹಂಚಿಕೊಟ್ಟಮೇಲೆ, ಅವರೆಲ್ಲರೂ ಸಂತೋಷದಿಂದ ಅದನ್ನು ತೆಗೆದುಕೊಂಡು, ವಿಧ್ಯುಕ್ತವಾಗಿ ಭುಜಿಸಿ, ಸ್ವಲ್ಪಕಾಲದೊಳಗಾಗಿಯೇ ಅಗ್ನಿಯಂತೆಯೂ, ಸೂರ್ಯನಂತೆಯೂ, ಮಹಾತೇಜಸ್ಸುಳ್ಳವರಾಗಿ ಪ್ರಕಾಶಿಸುತ್ತಾ, ಕ್ರಮಕ್ರಮವಾಗಿ ಗರ್ಭವನ್ನು ಧರಿಸಿದರು. ಆ ರಾಜನೂ ಗರ್ಭಿಣಿಯರಾದ ಆ ಸ್ತ್ರೀಯರನ್ನು ನೋಡಿ ನಿಶ್ಚಿಂತನಾದ ಮನಸ್ಸುಳ್ಳವನಾಗಿ, ಆಕಾಶದಲ್ಲಿ ದೇವಗಂಧರ್ವಸಿದ್ಧರ್ಷಿಪೂಜಿತನಾಗಿ ಪ್ರಕಾಶಿಸುತ್ತಿರುವ ಇಂದ್ರನಂತೆ ಸಂತೋಷದಿಂದ ಉಬ್ಬುತ್ತಿದ್ದನು.

ಇಲ್ಲಿಗೆ ಹದಿನಾರನೆಯ ಸರ್ಗವು.

ದೇವತೆಗಳು ತಮ್ಮ ಅಂಶದಿಂದ ವಾನರರನ್ನು ಸೃಷ್ಟಿಸಿದುದು

ಹೀಗೆ ಮಹಾವಿಷ್ಣುವು ದಶರಥನ ಹೊಟ್ಟೆಯಲ್ಲಿ ಹುಟ್ಟುವುದಾಗಿ ಅಭಯಕೊಟ್ಟು ಹೋದಮೇಲೆ, ದೂರದೃಷ್ಟಿಯುಳ್ಳ ಬ್ರಹ್ಮನು, ದೇವತೆಗಳನ್ನು ಕುರಿತು, "ಎಲೈ ದೇವತೆಗಳೇ! ನಮಗೆ ಯಾವಾಗಲೂ ಹಿತವನ್ನೇ

ಬಯಸತಕ್ಕವನಾಗಿ, ಸತ್ಯಸಂಧನಾದ ಶ್ರೀಮಹಾವಿಷ್ಣುವು ಭೂಲೋಕದಲ್ಲಿ ಮನುಷ್ಯರೂಪದಿಂದವತರಿಸಿರುವಾಗ, ಆತನಿಗೆ ಸಹಾಯಾರ್ಥವಾಗಿ ಬಲಶಾಲಿಗಳಾಗಿಯೂ, ಕಾಮರೂಪಿಗಳಾಗಿಯೂ, ಮಾಯೆಯನ್ನು ಬಲ್ಲವರಾಗಿಯೂ, ಶೂರರಾಗಿಯೂ, ವಾಯುವೇಗವುಳ್ಳವರಾಗಿಯೂ, ಇರತಕ್ಕ ಕೆಲವು ವ್ಯಕ್ತಿಗಳನ್ನು ನಾವು ಹುಟ್ಟಿಸಬೇಕು. ಮತ್ತು ಅವರು ನ್ಯಾಯಶೀಲರಾಗಿಯೂ, ಬಹಳ ಬುದ್ಧಿಶಾಲಿಗಳಾಗಿಯೂ, ಸಾಕ್ಷಾದ್ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳವರಾಗಿಯೂ, ಇತರರಿಂದ ಕೊಲ್ಲುವುದಕ್ಕಸಾಧ್ಯವಾದ ದಿವ್ಯದೇಹವುಳ್ಳವರಾಗಿಯೂ, ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳನ್ನೂ ತಿಳಿದವರಾಗಿಯೂ, ಸಮಸ್ತವಾದ ಅಸ್ತ್ರವಿದ್ಯೆಗಳನ್ನು ಬಲ್ಲವರಾಗಿಯೂ ಇರಬೇಕು. ಮತ್ತು ಅವರು ಉತ್ತಮರಾದ [1]ಯಕ್ಷಕನ್ಯಕೆಯರಲ್ಲಿಯೂ, ನಾಗಕನ್ಯಕೆಯರಲ್ಲಿಯೂ, ಕಿನ್ನರಸ್ತ್ರೀಯರುಗಳಲ್ಲಿಯೂ, ವಿದ್ಯಾಧರಸ್ತ್ರೀಯರುಗಳಲ್ಲಿಯೂ, ಋಕ್ಷವಾನರಾದಿಯೋನಿಗಳಲ್ಲಿಯೂ ಹುಟ್ಟಿದವರಾಗಿರಬೇಕು. ಇವರೆಲ್ಲರೂ ಸಮಾನವಾದ ಬಲವುಳ್ಳವರಾಗಿ ವಾನರರೂಪದಿಂದಲೇ ಹುಟ್ಟಿದವರಾಗಲಿ! ಇದಕ್ಕಾಗಿಯೇ ಪೂರ್ವದಲ್ಲಿ ಜಾಂಬವಂತನೆಂಬ ಋಷಿಶ್ರೇಷ್ಠನೊಬ್ಬನು, ನನ್ನಿಂದ ಬಹುಕಾಲದ ಹಿಂದೆ ಸೃಷ್ಟಿಸಲ್ಪಟ್ಟಿರುವನು. ನಾನು ಒಂದಾನೊಂದು ಕಾಲದಲ್ಲಿ ಆಕಳಿಸುತ್ತಿರುವಾಗ, ಆತನು ನನ್ನ ಬಾಯಿಂದ ಹೊರಕ್ಕೆ ಬಿದ್ದನು" ಎಂದನು.

ಈ ಮಾತನ್ನು ಕೇಳಿ ದೇವತೆಗಳೆಲ್ಲರೂ ಹಾಗೆಯೇ ಆಗಲೆಂದು ಒಪ್ಪಿಕೊಂಡು, ವಾನರರೂಪವುಳ್ಳ, ಅನೇಕ ಪುತ್ರರನ್ನು ಸೃಷ್ಟಿಸಿದರು. ಹೀಗೆಯೇ ಮಹಾತ್ಮರಾದ ಋಷಿಗಳೂ, ಸಿದ್ಧಚಾರಣ ಗಂಧರ್ವರೇ ಮೊದಲಾದ ದೇವತೆಗಳೂ ತಮ್ಮ ತಮ್ಮ ಅಂಶದಿಂದ ಅನೇಕ ವಾನರರನ್ನು ಸೃಷ್ಟಿಸಿದರು.

---

1. ದೇವತೆಗಳಿಗೆ ಪಾರ್ವತೀಶಾಪದಿಂದ ಅವರವರ ಪತ್ನಿಯರಲ್ಲಿ ಪುತ್ರಸಂತಾನವಿಲ್ಲವಾದುದರಿಂದ, ಇಲ್ಲಿ ಅಪ್ಸರಸ್ತ್ರೀಯರುಗಳನ್ನು ಕ್ಷೇತ್ರಗಳಾಗಿ ಹೇಳಿರುವರು. ರಾವಣನು ದಿಗ್ವಿಜಯಕಾಲದಲ್ಲಿ, ಕೈಲಾಸದಲ್ಲಿದ್ದ ನಂದಿಯನ್ನು ನೋಡಿ ಕಪಿಯೆಂದು ಹಾಸ್ಯಮಾಡಲು, ನಂದಿಯು ಕೋಪಗೊಂಡು "ನನ್ನಂತಿರುವ ಕಪಿಗಳಿಂದಲೇ ನಿನಗೆ ಸಾವುಂಟಾಗಲಿ" ಎಂದು ಶಪಿಸಿದನು. ಅದಕ್ಕೆ ತಕ್ಕಂತೆ ವಾನರಾಕಾರವುಳ್ಳ ಮಕ್ಕಳನ್ನೇ ಸೃಷ್ಟಿಸುವಂತೆ ಬ್ರಹ್ಮನು ದೇವತೆಗಳಿಗೆ ನಿಯೋಗಿಸಿದನೆಂದು ತಿಳಿಯಬೇಕು.

ಇಂದ್ರನು ತನಗೆ ಸಮಾನನಾದ ವಾಲಿಯೆಂಬ ಒಬ್ಬ ಕಪಿಶ್ರೇಷ್ಠನನ್ನು ಸೃಷ್ಟಿಸಿದನು. ಮಹಾತೇಜಸ್ವಿಯಾದ ಸೂರ್ಯನು ಸುಗ್ರೀವನನ್ನೂ, ಬೃಹಸ್ಪತಿಯು ದಾರನೆಂಬ ಕಪಿಶ್ರೇಷ್ಠನನ್ನೂ ಸೃಷ್ಟಿಸಿದನು. ಈತನು ಸಮಸ್ತ ಕಪಿಗಳಲ್ಲಿಯೂ ಬಹಳ ಬುದ್ಧಿಶಾಲಿಯೆಂದು ಪ್ರಖ್ಯಾತಿಹೊಂದಿದನು. ಹೀಗೆಯೇ ಕುಬೇರನಿಗೆ ಗಂಧಮಾದನನೆಂಬುವನೂ, ವಿಶ್ವಕರ್ಮನಿಗೆ ನಳನೆಂಬುವನೂ, ಅಗ್ನಿಗೆ ನೀಲನೆಂಬುವನೂ ಪುತ್ರರಾಗಿ ಹುಟ್ಟಿದರು. ಈ ನೀಲನೆಂಬ ಕಪಿಯು ತನ್ನ ತಂದೆಯಂತೆಯೇ ಮಹಾತೇಜಸ್ವಿಯಾಗಿ, ಯಶಸ್ಸಿನಿಂದಲೂ, ವೀರ್ಯದಿಂದಲೂ, ಎಣೆಯಿಲ್ಲದವನಾಗಿದ್ದನು. ರೂಪದಿಂದಲೂ, ಭಾಗ್ಯದಿಂದಲೂ, ಪ್ರಖ್ಯಾತರಾದ ಅಶ್ವಿನೀದೇವತೆಗಳು ಮೈಂದದ್ವಿವಿದರೆಂಬ ಇಬ್ಬರು ಕಪಿಗಳನ್ನೂ, ವರುಣನು ಸುಷೇಣನನ್ನೂ, ಪರ್ಜನ್ಯನು ಮಹಾಬಲಶಾಲಿಯಾದ ಶರಭನನ್ನೂ ಸೃಷ್ಟಿಸಿದರು. ವಾಯುವಿನ ಅಂಶದಿಂದ ಹನುಮಂತನೆಂಬ ಕಪಿಶ್ರೇಷ್ಠನು ಹುಟ್ಟಿದನು. ಈತನು ವಜ್ರದಂತೆ ದೃಢವಾದ ದೇಹವುಳ್ಳವನಾಗಿಯೂ, ಗರುಡನಂತೆ ವೇಗವುಳ್ಳವನಾಗಿಯೂ, ಬುದ್ಧಿಯಲ್ಲಿಯೂ, ಪರಾಕ್ರಮದಲ್ಲಿಯೂ ಇತರ ವಾನರರೆಲ್ಲರಿಗಿಂತಲೂ ಮೇಲೆನಿಸಿದವನಾಗಿಯೂ ಇದ್ದನು. ಹೀಗೆ ಮಿತಿಯಿಲ್ಲದ ಪರಾಕ್ರಮವುಳ್ಳವರಾಗಿ ತಮತಮಗೆ ಇಷ್ಟಬಂದ ರೂಪವನ್ನು ಧರಿಸಿಕೊಳ್ಳುವುದಕ್ಕೆ ಸಮರ್ಥರಾಗಿರತಕ್ಕ ಅನೇಕ ಸಹಸ್ರ ಕಪಿಗಳು ರಾವಣವಧಾರ್ಥವಾಗಿ ಸೃಷ್ಟಿಸಲ್ಪಟ್ಟರು. ಒಬ್ಬೊಬ್ಬರೂ ಮಹಾಮೇರು ಮೊದಲಾದ ಪರ್ವತಗಳಂತೆ ದೊಡ್ಡ ದೇಹವುಳ್ಳವರಾಗಿ, ಮಹಾಬಲಶಾಲಿಗಳಾಗಿದ್ದರು. ಕೆಲವರು ಕರಡಿಗಳ ರೂಪದಿಂದಲೂ, ಕೆಲವರು ಬೇರೆಬೇರೆ ಜಾತಿಯ ಕಪಿಸ್ವರೂಪದಿಂದಲೂ ಹುಟ್ಟಿದರು. ಇವರೆಲ್ಲರಿಗೂ ಮುಖವು ಮಾತ್ರ ಕಪಿಯಂತಿದ್ದರೂ, ಇತರ ಶರೀರಸಂಸ್ಥಾನಾದಿಗಳಲ್ಲಿಯೂ, ರೂಪದಲ್ಲಿಯೂ, ವೇಷದಲ್ಲಿಯೂ, ಪರಾಕ್ರಮದಲ್ಲಿಯೂ, ಈ ಕಪಿಗಳಲ್ಲಿ ಒಬ್ಬೊಬ್ಬರೂ ತಮ್ಮ ತಮ್ಮನ್ನು ಹುಟ್ಟಿಸಿದ ದೇವತೆಗಳನ್ನೇ ಹೋಲುತ್ತಿರುವರು. ಹೀಗೆ ಅನೇಕ ಮಹರ್ಷಿಗಳೂ, ಗಂಧರ್ವರೂ, ತಾರ್ಕ್ಷ್ಯರೂ, ಯಕ್ಷರೂ, ಕಿಂಪುರುಷರೂ, ಇನ್ನೂ ಅನೇಕ ದೇವತೆಗಳೂ, ಅಪ್ಸರಸ್ತ್ರೀಯರಲ್ಲಿಯೂ, ವಿದ್ಯಾಧರ ಸ್ತ್ರೀಯರಲ್ಲಿಯೂ ನಾಗಕನ್ಯೆಯರೇ ಮೊದಲಾದ ದೇವಕನ್ಯೆಯರಲ್ಲಿಯೂ ಬಲಶಾಲಿಗಳಾದ ಅನೇಕ ವಾನರರನ್ನು ಸೃಷ್ಟಿಸಿದರು. ಈ ವಾನರರಲ್ಲಿ ಒಬ್ಬೊಬ್ಬರೂ ತಮತಮಗೆ ಇಷ್ಟಬಂದಕಾಲದಲ್ಲಿ ಇಷ್ಟಬಂದ

ರೂಪವನ್ನು ಧರಿಸತಕ್ಕ ಶಕ್ತಿಯುಳ್ಳವರಾಗಿಯೂ, ದೇವತೆಗಳಂತೆ ನೆನಸಿದ ಕ್ಷಣದಲ್ಲಿ ಇಷ್ಟಬಂದ ಕಡೆಗೆ ಹೋಗಿ ಸೇರುವ ಶಕ್ತಿಯುಳ್ಳವರಾಗಿಯೂ, ಜಾತಿಯಲ್ಲಿ ಕಪಿಗಳಾಗಿದ್ದರೂ, ಸಿಂಹದಂತೆಯೂ, ಹುಲಿಯಂತೆಯೂ, ಬಲವುಳ್ಳವರಾಗಿಯೂ, ಕಲ್ಲುಗಳಿಂದಲೂ, ಮರಗಳಿಂದಲೂ, ಉಗುರುಗಳಿಂದಲೂ, ಕೋರೆದಾಡೆಗಳಿಂದಲೂ, ಯುದ್ಧಮಾಡತಕ್ಕವರಾಗಿಯೂ ಇದ್ದರು. ಹೀಗಿದ್ದರೂ ಇವರು ಸಮಸ್ತ ಶಸ್ತ್ರಾಸ್ತ್ರಗಳನ್ನೂ ಬಲ್ಲವರಾಗಿದ್ದರು. ಇದಲ್ಲದೆ ಇವರು ಎಂತಹ ಬೆಟ್ಟಗಳನ್ನಾದರೂ, ಕೈಯಿಂದಲೇ ಆಡಿಸಿಬಿಡಬಲ್ಲರು. ಎಷ್ಟು ದೊಡ್ಡ ಗಿಡಗಳನ್ನಾಗಲಿ ಕೀಳಬಲ್ಲರು! ಸಮಸ್ತ ನದಿಗಳಿಗೂ ಪತಿಯಾದ ಸಮುದ್ರವನ್ನಾದರೂ ತಮ್ಮ ವೇಗದಿಂದ ಕಲಕಿಬಿಡಬಲ್ಲರು. ಕಾಲಿನಿಂದಲೇ ಭೂಮಿಯನ್ನು ಭೇದಿಸುವರು. ದೊಡ್ಡ ಸಮುದ್ರವನ್ನಾದರೂ ಲಂಘಿಸಬಲ್ಲರು! ಒಂದೇ ನೆಗೆತಕ್ಕೆ ಆಕಾಶವನ್ನು ಒಳಹೊಕ್ಕು, ಅಲ್ಲಿರುವ ಮೇಘಗಳನ್ನು ಹಿಡಿದು ತರಬಲ್ಲರು. ಕಾಡಿನಲ್ಲಿ ಸಂಚರಿಸುತ್ತಿರುವ ದೊಡ್ಡ ದೊಡ್ಡ ಮದಿಸಿದ ಆನೆಗಳನ್ನೆಲ್ಲಾ ಕೈಯಿಂದಲೇ ತಡೆದು ನಿಲ್ಲಿಸಬಲ್ಲರು! ಇವರು ಒಂದಾವರ್ತಿ ಗರ್ಜನಮಾಡಿದ ಮಾತ್ರಕ್ಕೆ ಅಂತರಿಕ್ಷದಲ್ಲಿ ಹಾರುವ ಪಕ್ಷಿಗಳೆಲ್ಲವೂ ಉದಿರಿ ಬೀಳುವುವು. ಹೀಗೆ ನೂರುಲಕ್ಷ ಸಂಖ್ಯೆಯಿಂದ ಕಾಮರೂಪಿಗಳಾದ ಕಪಿಗಳು ದೇವಾಂಶದಿಂದ ಭೂಮಿಯಲ್ಲಿ ಹುಟ್ಟಿದರು. ಇವರೆಲ್ಲರೂ ಕಪಿಶ್ರೇಷ್ಠರೆನಿಸಿಕೊಂಡು ಪ್ರಧಾನರಾಗಿದ್ದರು. ಇದಲ್ಲದೆ ಅವರು ಬಹಳ ಪರಾಕ್ರಮಶಾಲಿಗಳೆನಿಸಿಕೊಂಡು ಋಕ್ಷವಂತವೆಂಬ ಪರ್ವತದಲ್ಲಿ ವಾಸಿಸುತ್ತಿದ್ದರು. ಬೇರೆ ಕೆಲವರು ಬೇರೆಬೇರೆ ಬೆಟ್ಟಗಳನ್ನೂ, ಅಡವಿಗಳನ್ನೂ, ಆಶ್ರಯಿಸಿದರು. ಈ ಕಪಿಗಳೆಲ್ಲರೂ ಇಂದ್ರನ ಮಗನಾದ ವಾಲಿಯನ್ನು ರಾಜನನ್ನಾಗಿಯೂ, ಸೂರ್ಯಪುತ್ರನಾದ ಸುಗ್ರೀವನನ್ನು ಯುವರಾಜನನ್ನಾಗಿಯೂ ನಳ, ನೀಲ, ಹನುಮಂತನೇ ಮೊದಲಾದವರುಗಳನ್ನು ಮಂತ್ರಿಗಳನ್ನಾಗಿಯೂ, ಇನ್ನೂ ಇತರ ವಾನರಶ್ರೇಷ್ಠರನ್ನು ಸೇನಾಪತಿಗಳನ್ನಾಗಿಯೂ ಮಾಡಿಕೊಂಡು, ಉಳಿದವರು ಆತನ ಸೀಮೆಯಲ್ಲಿ ಇರುತ್ತಿದ್ದರು. ಈ ಕಪಿಗಳೆಲ್ಲರೂ ಗರುಡನಂತೆ ಬಲಾಢ್ಯರಾಗಿ, ಯುದ್ಧದಲ್ಲಿ ನಿಪುಣರಾಗಿ, ಕಾಡಿನಲ್ಲಿ ಸಂಚರಿಸುತ್ತ, ಸಿಕ್ಕಿದ ಹುಲಿ, ಸಿಂಹ, ಸರ್ಪಗಳೇ ಮೊದಲಾದ ಕ್ರೂರ ಜಂತುಗಳನ್ನು ಕೊಲ್ಲುತ್ತಿದ್ದರು. ಮಹಾಪರಾಕ್ರಮಶಾಲಿಯಾದ ವಾಲಿಯು ಇವರೆಲ್ಲರನ್ನೂ ಸುಖದಿಂದ ರಕ್ಷಿಸುತ್ತಿದ್ದನು. ಮತ್ತು ಅವರು ಬೇರೆಬೇರೆ ಆಕೃತಿಗಳನ್ನು ಧರಿಸಿ, ಬೇರೆಬೇರೆ

ಲಕ್ಷಣಗಳುಳ್ಳವರಾಗಿ, ಪರ್ವತಗಳಲ್ಲಿಯೂ, ನದೀತೀರಗಳಲ್ಲಿಯೂ, ಸಮುದ್ರ ತೀರಗಳಲ್ಲಿಯೂ ಸೇರಿ ಎಲ್ಲಾ ಕಡೆಗಳಲ್ಲಿಯೂ ವ್ಯಾಪಿಸಿದರು. ಪರ್ವತಶಿಖರ ಗಳಂತೆಯೂ, ಕಪ್ಪಾದ ಮೇಘಗಳ ಗುಂಪಿನಂತೆಯೂ ಮಹಾದೇಹವುಳ್ಳವ ರಾಗಿ, ಶ್ರೀರಾಮನ ಸಹಾಯಾರ್ಥವಾಗಿ ಭೂಮಿಯಲ್ಲಿ ಹುಟ್ಟಿದ ಈ ಕಪಿ ಯೂಥಪರಿಂದ ಸಮಸ್ತ ಭೂಭಾಗವೂ ವ್ಯಾಪಿಸಲ್ಪಟ್ಟಿತು.

ಇಲ್ಲಿಗೆ ಹದಿನೇಳನೆಯ ಸರ್ಗವು.

ಶ್ರೀರಾಮಾವತಾರಘಟ್ಟವು

ರಾಮಾದಿಗಳ ಜನನ, ವಿದ್ಯಾಭ್ಯಾಸ, ವಿಶ್ವಾಮಿತ್ರರ ಆಗಮನ ಮುಂತಾದವು

ಮಹಾತ್ಮನಾದ ದಶರಥನು ಅಶ್ವಮೇಧಯಾಗವನ್ನು ಪುತ್ರಕಾಮೇಷ್ಟಿ ಯೊಡನೆ ಮುಗಿಸಿದನು. ದೇವತೆಗಳೂ ತಮ್ಮ ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸಿ ಅವರವರ ಸ್ಥಾನಕ್ಕೆ ಹೋದರು. ದಶರಥನು ದೀಕ್ಷಾನಿಯಮಗಳ ನ್ನೆಲ್ಲ ಮುಗಿಸಿಕೊಂಡು ಪತ್ನಿಯರೊಗೂಡಿ ತನ್ನ ಸಮಸ್ತ ಪರಿವಾರಗಳೊಡನೆ, ಬಹಳ ವೈಭವದಿಂದ ಪುರಪ್ರವೇಶವನ್ನು ಮಾಡಿದನು. ಆಮೇಲೆ ಯಜ್ಞ ಕ್ಕಾಗಿ ಕರೆಸಲ್ಪಟ್ಟಿದ್ದ ರಾಜರೆಲ್ಲರನ್ನೂ ಅವರವರ ಮರ್ಯಾದೆಗೆ ತಕ್ಕಂತೆ ಸತ್ಕರಿಸಲು, ಅವರೆಲ್ಲರೂ ಬಹಳ ಸಂತೋಷಪಟ್ಟು ವಸಿಷ್ಠರಿಗೆ ನಮಸ್ಕರಿಸಿ, ತಮ್ಮ ತಮ್ಮ ದೇಶಗಳಿಗೆ ಹೊರಟರು. ಇವರು ಹೋಗುತ್ತಿರುವಾಗ ಅವರ ಸೈನ್ಯಗಳೂ ಕೂಡ ಈ ದಶರಥರಾಜನಿಂದ ವಿಶೇಷವಾಗಿ ವಸ್ತ್ರಾಭರಣಗಳಿಂದ ಸತ್ಕರಿಸಲ್ಪಟ್ಟುವು. ಹೀಗೆ ರಾಜರೆಲ್ಲರೂ ಹೊರಟುಹೋದಮೇಲೆ, ದಶರಥನು ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಅರಮನೆಯನ್ನು ಪ್ರವೇಶಿಸಿದನು. ಹೀಗೆ ಆ ರಾಜನಿಂದ ಬಹಳವಾಗಿ ಸತ್ಕರಿಸಲ್ಪಟ್ಟ ಋಶ್ಯಶೃಂಗನೂ ಕೂಡ ಶಾಂತಾದೇವಿಯೊಡಗೂಡಿ, ಧೀಮಂತನಾದ ರೋಮಪಾದನು ಸಪರಿವಾರ ನಾಗಿ ತನ್ನ ಸಂಗಡ ಹೊರಡಲು, ಇವರೆಲ್ಲರೂ ಒಟ್ಟಾಗಿ ಪ್ರಯಾಣ ಮಾಡಿದರು. ಹೀಗೆ ದಶರಥನು ಎಲ್ಲರನ್ನೂ ಸತ್ಕರಿಸಿ, ಅವರವರ ಸ್ಥಾನಕ್ಕೆ ಕಳುಹಿಸಿಬಿಟ್ಟಮೇಲೆ, ನಿಶ್ಚಿಂತನಾಗಿ ಪುತ್ರೋತ್ಪತ್ತಿಯನ್ನೇ ನಿರೀಕ್ಷಿಸುತ್ತಾ ಕೆಲವು ದಿವಸಗಳವರೆಗೆ ಸುಖದಿಂದಿದ್ದನು. ಇಷ್ಟರೊಳಗೆ ಯಜ್ಞವು ನಡೆದು

ಒಂದು ವರ್ಷ ಕಾಲವು ಕಳೆಯಿತು. ಹನ್ನೆರಡನೆಯ ತಿಂಗಳ ಕೊನೆಗೆ ಸರಿಯಾದ ಚೈತ್ರಮಾಸದ ನವಮೀ ತಿಥಿಯಲ್ಲಿ, ದಿತಿದೇವತಾತ್ಮಕವಾದ ಪುನರ್ವಸು ನಕ್ಷತ್ರದಲ್ಲಿ ಸೂರ್ಯ, ಅಂಗಾರಕ, ಶನಿ, ಬೃಹಸ್ಪತಿ ಶುಕ್ರರೆಂಬ ಐದು ಗ್ರಹಗಳೂ ತಮ್ಮ ತಮ್ಮ ಉಚ್ಚಸ್ಥಾನಗಳಾದ ಮೇಷ, ಮಕರ, ತುಲಾ, ಕರ್ಕಾಟಕ, ಮೀನಗಳೆಂಬ ರಾಶಿಗಳಲ್ಲಿರಲು, ಕರ್ಕಾಟಕ ಲಗ್ನದಲ್ಲಿ ಚಂದ್ರನು ಬೃಹಸ್ಪತಿಯೊಡನೆ ಸೇರಿರುವಾಗ, ಸಕಲಜಗನ್ನಾಯಕನಾಗಿಯೂ, ಸಕಲಲೋಕನಮಸ್ಕೃತನಾಗಿಯೂ, ಸಮಸ್ತ ಶುಭಲಕ್ಷಣಗಳಿಂದ ಕೂಡಿದವ ನಾಗಿಯೂ, ಇಕ್ಷ್ವಾಕುವಂಶವರ್ಧನನಾಗಿಯೂ, ಮಹಾಭಾಗ್ಯವಂತ ನಾಗಿಯೂ, ವಿಷ್ಣುವಿನ ಅರ್ಧಾಂಶವೆನಿಸಿಕೊಂಡವನಾಗಿಯೂ ಇರುವ ಶ್ರೀರಾಮನೆಂಬ ಪುತ್ರನು ಜನಿಸಿದನು. ಮಹಾತೇಜಸ್ವಿಯಾದ ಈ ಪುತ್ರ ರತ್ನದೊಡಗೂಡಿದ ಕೌಸಲ್ಯೆಯು ವಜ್ರಪಾಣಿಯಾದ ಇಂದ್ರನೊಡಗೂಡಿದ ಅದಿತಿದೇವಿಯಂತೆ ಪ್ರಕಾಶಿಸುತ್ತಿದ್ದಳು. ವಿಷ್ಣುವಿನ ನಾಲ್ಕನೆಯ ಭಾಗ ವೆನಿಸಿಕೊಂಡು, ಸರ್ವಗುಣಸಂಪನ್ನನಾಗಿ, ಸತ್ಯಪರಾಕ್ರಮವುಳ್ಳ ಭರತ ನೆಂಬವನು ಕೈಕೇಯಿಯಲ್ಲಿ ಹುಟ್ಟಿದನು. ಅದರಂತೆಯೇ ವಿಷ್ಣುವಿನ ಅಂಶ ಭೂತರಾಗಿ, ಸಮಸ್ತ ಶಸ್ತ್ರಾಸ್ತ್ರಗಳಲ್ಲಿಯೂ ಕುಶಲರಾಗಿ, ಮಹಾವೀರರೆನಿಸಿ ಕೊಂಡ ಲಕ್ಷ್ಮಣಶತ್ರುಘ್ನರೆಂಬ ಅವಳಿ ಮಕ್ಕಳು ಸುಮಿತ್ರೆಯಲ್ಲಿ ಜನಿಸಿದರು. ತೆಳುವಾದ ಬುದ್ಧಿಯುಳ್ಳ ಭರತನು, ಪುಷ್ಯನಕ್ಷತ್ರದ ಮೀನಲಗ್ನದಲ್ಲಿಯೂ, ಲಕ್ಷ್ಮಣಶತ್ರುಘ್ನರು ಆಶ್ಲೇಷಾನಕ್ಷತ್ರದ ಮಧ್ಯಾಹ್ನಕಾಲದಲ್ಲಿ ಕಟಕಲಗ್ನ ದಲ್ಲಿಯೂ ಹುಟ್ಟಿದರು. ಹೀಗೆ ದಶರಥರಾಜನಿಗೆ ಗುಣವಂತರಾಗಿಯೂ ತನಗೆ ಅನುರೂಪರಾಗಿಯೂ ಇರುವ ನಾಲ್ಕುಮಕ್ಕಳೂ, ನಾಲ್ಕುಪೂರ್ವಾಭಾದ್ರಾ ನಕ್ಷತ್ರಗಳಂತೆ ಮಹಾಕಾಂತಿಯುಳ್ಳವರಾಗಿ ಕಾಣುತ್ತಿದ್ದರು. ಈ ಕಾಲದಲ್ಲಿ ಗಂಧರ್ವರು ಸಂತೋಷದಿಂದ ಇಂಪಾದ ಗಾನವನ್ನು ಮಾಡಲಾರಂಭಿಸಿದರು. ಅಪ್ಸರಸ್ತ್ರೀಯರು ನರ್ತಿಸುತಿದ್ದರು. ದೇವದುಂದುಭಿಗಳು ಧ್ವನಿಮಾಡು ತ್ತಿದ್ದುವು. ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು. ಅಯೋಧ್ಯಾಪಟ್ಟಣ ದಲ್ಲಿ ಸಮಸ್ತ ಜನರೂ ಸಂತೋಷದಿಂದ ಈ ಉತ್ಸವವನ್ನು ಕೊಂಡಾಡು ತ್ತಿದ್ದರು. ಬೀದಿಬೀದಿಗಳಲ್ಲಿಯೂ ಜನಗಳು ಅಲ್ಲಲ್ಲಿ ಒಂದಾಗಿ ಸೇರಿ, ಒಂದು ಕಡೆಯಲ್ಲಿ ಅಭಿನಯಗಳನ್ನೂ, ಒಂದು ಕಡೆಯಲ್ಲಿ ಮಧುರವಾದ ಸಂಗೀತ ಗಳನ್ನೂ, ಬೇರೊಂದು ಕಡೆಯಲ್ಲಿ ವಾದ್ಯಗಳನ್ನೂ, ನಡೆಸುತ್ತಿದ್ದರು. ಈ ಕಾಲ

ದಲ್ಲಿ ದಶರಥನು, ಸ್ತುತಿವಾಕ್ಯಗಳನ್ನು ಹೇಳುತಿದ್ದ ಹೊಗಳುಭಟರಿಗೆಲ್ಲಾ ಉಡುಗೊರೆಗಳನ್ನು ಕೊಟ್ಟನು. ಪೌರಾಣಿಕರಾದ ಸೂತರಿಗೂ, ವಂಶಾವಳಿ ಯನ್ನು ಕೀರ್ತಿಸುತ್ತಿದ್ದ ಮಾಗಧರಿಗೂ ವಿಶೇಷವಾದ ಬಹುಮಾನಗಳನ್ನು ಮಾಡಿದನು. ಬ್ರಾಹ್ಮಣರಿಗೆ ಗೋದಾನಗಳನ್ನೂ, ಸುವರ್ಣದಾನಗಳನ್ನೂ, ಯಥೇಚ್ಛವಾಗಿ ಮಾಡಿದನು. ಆಮೇಲೆ ಲಕ್ಷ್ಮಣನು ಹುಟ್ಟಿದ [1]ಹನ್ನೊಂದ ನೆಯ ದಿವಸವೆಂದರೆ, ರಾಮನು ಹುಟ್ಟಿದ ಹನ್ನೆರಡನೆಯ ದಿವಸವು ಕಳೆಯಲು, ಹದಿಮೂರನೆಯ ದಿವಸದಲ್ಲಿ ಈ ಪುತ್ರರಿಗೆ ನಾಮಕರಣವನ್ನು ಮಾಡಬೇಕೆಂದು ಪ್ರಯತ್ನಿಸಿ, ವಸಿಷ್ಠನನ್ನು ಪ್ರಾರ್ಥಿಸಲು, ಅದರಂತೆಯೇ ವಸಿಷ್ಠನು ಜ್ಯೇಷ್ಠಪುತ್ರನಿಗೆ ರಾಮನೆಂದೂ, ಕೈಕೇಯಿಯಲ್ಲಿ ಹುಟ್ಟಿದ ಎರಡನೆಯವನಿಗೆ ಭರತನೆಂದೂ, ಸುಮಿತ್ರೆಯಲ್ಲಿ ಹುಟ್ಟಿದ ಮಕಳಿಬ್ಬರಿಗೂ ಕ್ರಮವಾಗಿ ಲಕ್ಷ್ಮಣ ಶತ್ರುಘ್ನರೆಂದೂ ಹೆಸರಿಟ್ಟನು. ಆ ಕಾಲದಲ್ಲಿ ರಾಜನು ತನ್ನ ಪಟ್ಟಣದಲ್ಲಿಯೂ, ದೇಶದಲ್ಲಿಯೂ ಇದ್ದ ಸಮಸ್ತ ಬ್ರಾಹ್ಮಣ ರಿಗೂ ಮೃಷ್ಟಾನ್ನಭೋಜನಗಳನ್ನು ಮಾಡಿಸಿ ಅನೇಕ ರತ್ನ ದಾನಗಳನ್ನೂ ಮಾಡಿದನು. ಈ ಮಕ್ಕಳಿಗೆ ಜಾತಕರ್ಮಾದಿ ಸಮಸ್ತ ಕರ್ಮಗಳೂ ಸಾಂಗೋಪಾಂಗವಾಗಿ ನೆರವೇರಿದುವು.

ಈ ನಾಲ್ಕು ಮಕ್ಕಳೂ ದಿನದಿನಕ್ಕೆ ಪ್ರವರ್ಧಮಾನರಾಗುತ್ತಿರಲು, ಅವರಲ್ಲಿ ಹಿರಿಯನಾದ ರಾಮನು ವಂಶಾಭಿವೃದ್ಧಿಯನ್ನು ತೋರಿಸತಕ್ಕ ಧ್ವಜದಂತೆ ಪ್ರಕಾಶಿಸುತ್ತ, ಬ್ರಹ್ಮದೇವನಂತೆ ಸಮಸ್ತ ಪ್ರಾಣಿಗಳಿಗೂ ಇಷ್ಟ

---

1. ಇಲ್ಲಿ ಲಕ್ಷ್ಮಣನು ಹುಟ್ಟಿದುದು ಮೊದಲು ಹನ್ನೊಂದನೆಯ ದಿನವೆಂದು ಗ್ರಹಿಸಬೇಕು. ಹಾಗಿಲ್ಲದಿದ್ದರೆ, ಶ್ರುತಿಗಳಲ್ಲಿ ಕ್ಷತ್ರಿಯರಿಗೆ ಹನ್ನೆರಡು ದಿನಗಳವರೆಗೆ ಸೂತಕವೆಂದು ವಿಧಿಸಲ್ಪಟ್ಟಿರುವುದರಿಂದಲೂ, ಅದಕ್ಕನುಸಾರ ವಾಗಿ ಸ್ಮೃತಿಗಳಲ್ಲಿಯೂ ಕ್ಷತ್ರಿಯರು ಹದಿಮೂರನೆಯ ದಿವಸದಲ್ಲಿ ನಾಮಕರಣವನ್ನು ಮಾಡಬೇಕೆಂದಿರುವುದರಿಂದಲೂ ರಾಮನು ಹುಟ್ಟಿ ಹನ್ನೊಂದು ದಿನಗಳು ಕಳೆದ ಮಾರನೆಯ ದಿವಸದಲ್ಲಿ (ಹನ್ನೆರಡನೆಯ ದಿವಸದಲ್ಲಿ) ನಾಮಕರಣವು ನಡೆಸಲ್ಪಟ್ಟಿತೆಂದರೆ ಶಾಸ್ತ್ರವಿರೋಧವುಂಟಾಗು ವುದು. ರಾಮನು ಹುಟ್ಟಿದ ಮಾರನೆಯ ದಿನದಲ್ಲಿಯೇ ಲಕ್ಷ್ಮಣನು ಹುಟ್ಟಿರುವುದರಿಂದ ಹದಿಮೂರನೆಯ ದಿವಸದಲ್ಲಿ ನಾಮಕರಣವು ನಡೆಯಿ ತೆಂದು ಗ್ರಹಿಸಬೇಕು.

ನಾಗಿ, ತಂದೆಗೆ ಸಂತೋಷವನ್ನುಂಟುಮಾಡುತ್ತಿದ್ದನು. ಈ ಮಕ್ಕಳಲ್ಲಿ ಒಬ್ಬೊಬ್ಬರೂ ಬಾಲ್ಯದಲ್ಲಿಯೇ ಸಮಸ್ತ ವೇದಗಳನ್ನೂ ಓದಿದವರಾಗಿಯೂ, ಧನುರ್ವಿದ್ಯೆಯಲ್ಲಿ ನಿಪುಣರಾಗಿಯೂ, ಪ್ರಜಾಕ್ಷೇಮವನ್ನೇ ಚಿಂತಿಸುವ ಸ್ವಭಾವವುಳ್ಳವರಾಗಿಯೂ, ಶೂರರಾಗಿಯೂ, ಮಹಾಜ್ಞಾನಿಗಳಾಗಿಯೂ, ಗುಣಶಾಲಿಗಳಾಗಿಯೂ ಇದ್ದರು. ಅದರಲ್ಲಿಯೂ ಮುಖ್ಯವಾಗಿ ರಾಮನು ಮಹಾತೇಜಸ್ವಿಯಾಗಿ, ನಿರ್ದುಷ್ಟವಾದ ಪರಾಕ್ರಮವುಳ್ಳವನಾಗಿ, ಕಳಂಕ ವಿಲ್ಲದ ಪೂರ್ಣಚಂದ್ರನಂತೆ ಸಮಸ್ತ ಲೋಕಕ್ಕೂ ಆನಂದವನ್ನುಂಟುಮಾಡು ತ್ತಿದ್ದನು. ಮತ್ತು ಇವನು ಆನೆಕುದುರೆಗಳನ್ನೇರುವುದರಲ್ಲಿಯೂ, ರಥಗಳನ್ನು ನಡೆಯಿಸುವುದರಲ್ಲಿಯೂ ಎಣೆಯಿಲ್ಲದ ಚಾತುರ್ಯವುಳ್ಳವನಾಗಿ, ಧನುರ್ವೇದ ಗಳನ್ನು ಚೆನ್ನಾಗಿ ಬಲ್ಲವನಾಗಿ, ಪಿತೃಶುಶ್ರೂಷೆಯಲ್ಲಿ ಬಹಳ ಆದರವುಳ್ಳವ ನಾಗಿದ್ದನು. ಭಾಗ್ಯಸಂಪನ್ನನಾದ ಲಕ್ಷ್ಮಣನಾದರೋ, ತನ್ನ ಹಿರಿಯಣ್ಣ ನಾದ ಶ್ರೀರಾಮನಿಗೆ ಯಾವಾಗಲೂ ಸೇವೆಮಾಡುತ್ತ, ಬಾಲ್ಯದಿಂದಲೂ ಆತನಲ್ಲಿ ಬಹಳ ವಿಶ್ವಾಸವನ್ನು ತೋರಿಸುತ್ತಿದ್ದನು. ರಾಮನೂ ಕೂಡ ಲಕ್ಷ್ಮಣನನ್ನು ತನ್ನ ಪ್ರಾಣದಂತೆ ಕಾಣುತ್ತ, ಆತನನ್ನು ಬಿಟ್ಟು ಒಂದುಕ್ಷಣ ಕಾಲವಾದರೂ ನಿದ್ರೆ ಮಾಡತಕ್ಕವನಲ್ಲ; ಆತನನ್ನು ಬಿಟ್ಟು ಊಟಮಾಡ ತಕ್ಕವನಲ್ಲ. ಶ್ರೀರಾಮನು ಕುದುರೆಯನ್ನೇರಿ ಬೇಟೆಗೆ ಹೋದಾಗಲೆಲ್ಲಾ, ಲಕ್ಷ್ಮಣನು ಧನುಸ್ಸನ್ನು ತೆಗೆದುಕೊಂಡು ಆತನ ಹಿಂದೆ ಹೋಗುವನು. ಇದರಂತೆಯೇ ಲಕ್ಷ್ಮಣನ ತಮ್ಮನಾದ ಶತ್ರುಘ್ನನೂ ಭರತನಲ್ಲಿ ಬಹಳ ವಿಶ್ವಾಸವುಳ್ಳವನಾಗಿದ್ದನು. ಇವರಿಬ್ಬರೂ ಒಬ್ಬರನ್ನೊಬ್ಬರು ಅಗಲದೆ ಪ್ರಾಣ ಪ್ರಿಯರಾಗುತ್ತಿದ್ದರು.

ಹೀಗೆ ಸಮಸ್ತಗುಣಸಂಪನ್ನರಾದ ಸತ್ಪುತ್ರರೊಡಗೂಡಿದ ದಶರಥನು ದಿಕ್ಪಾಲಕರೊಡಗೂಡಿದ ಬ್ರಹ್ಮನಂತೆ ಸಂತೋಷಭರಿತನಾಗಿದ್ದನು. ಈ ಮಕ್ಕಳು ದಿನದಿನಕ್ಕೆ ಜ್ಞಾನಸಂಪನ್ನರಾಗಿಯೂ, ಗುಣಾಢ್ಯರಾಗಿಯೂ, ಅಕೃತ್ಯಗಳಿಗೆ ನಾಚುವವರಾಗಿಯೂ, ಕೀರ್ತಿವಂತರಾಗಿಯೂ, ಲೌಕಿಕ ವೈದಿಕವ್ಯವಹಾರಗಳನ್ನು ಬಲ್ಲವರಾಗಿಯೂ, ದೂರಾಲೋಚನೆಯುಳ್ಳವ ರಾಗಿಯೂ, ಪ್ರವರ್ಧಮಾನರಾಗುತ್ತಿರುವುದನ್ನು ನೋಡಿ, ದಶರಥನು ಬಹಳವಾಗಿ ಹರ್ಷಿಸುತ್ತ, ಸಾಕ್ಷಾದ್ಬ್ರಹ್ಮಲೋಕಾಧಿಪತ್ಯವೇ ತನಗೆ ಲಭಿಸಿ ದಂತೆ ಎಣಿಸುತ್ತಿದ್ದನು. ಈ ನಾಲ್ವರು ಮಕ್ಕಳೂ ವೇದಾಧ್ಯಯನಸಂಪನ್ನ

ರಾಗಿ, ಯಾವಾಗಲೂ ಪಿತೃಶುಶ್ರೂಷೆಯನ್ನು ಮಾಡುತ್ತ, ಧನುರ್ವಿದ್ಯೆಗಳನ್ನು ಚೆನ್ನಾಗಿ ಕಲಿತಮೇಲೆ ದಶರಥನು ಅವರಿಗೆ ವಿವಾಹ ಮಾಡಬೇಕೆಂಬ ಪ್ರಯತ್ನ ದಿಂದ, ವಸಿಷ್ಠರೊಡನೆಯೂ, ಬಂಧುಗಳೊಡನೆಯೂ ಕಲೆತು ಆಲೋಚಿಸು ತ್ತಿದ್ದನು. ಹೀಗೆ ಎಲ್ಲರೂ ಕಲೆತು ಆಲೋಚಿಸುತ್ತಿರುವ ಸಮಯಕ್ಕೆ ಸರಿಯಾಗಿ ವಿಶ್ವಾಮಿತ್ರಮಹರ್ಷಿಯು ರಾಜನನ್ನು ನೋಡಬೇಕೆಂಬ ಉದ್ದೇಶ ದಿಂದ ಅರಮನೆಯ ಬಾಗಿಲಿಗೆ ಬಂದು ನಿಂತು, ಅಲ್ಲಿದ್ದ ಹೊರಗಾವಲಿನವರನ್ನು ನೋಡಿ, "ಎಲೈ ದ್ವಾರಪಾಲಕರೆ! ಗಾಧಿಪುತ್ರನಾದ ವಿಶ್ವಾಮಿತ್ರನು ಬಂದಿರುವನೆಂದು ಈಗಲೇ ಹೋಗಿ ನಿಮ್ಮ ರಾಜನಿಗೆ ತಿಳಿಸಿರಿ" ಎಂದನು. ಇದನ್ನು ಕೇಳಿದೊಡನೆಯೇ ಅಲ್ಲಿದ್ದ ಕಾವಲುಗಾರರು ಭಯದಿಂದ ಬೆಚ್ಚ ರ ಬಿದ್ದು, ರಾಜನ ಬಳಿಗೆ ಓಡಿಬಂದು ಈ ವೃತ್ತಾಂತವನ್ನು ತಿಳಿಸಿದರು. ಈ ಮಾತನ್ನು ಕೇಳಿ ದಶರಥನು ಸಂಭ್ರಮದಿಂದೆದ್ದು, ವಸಿಷ್ಠರೊಡಗೂಡಿ ಹೊರಟು, ಬ್ರಹ್ಮನನ್ನು ಇದಿರುಗೊಳ್ಳುವುದಕ್ಕಾಗಿ ಬರುತ್ತಿರುವ ದೇವೇಂದ್ರ ನಂತೆ ಆ ವಿಶ್ವಾಮಿತ್ರನ ಬಳಿಗೆ ಬಂದನು. ಅಲ್ಲಿ ಮಹಾತೇಜಸ್ವಿಯಾಗಿ ಜ್ವಲಿಸುತ್ತಿರುವ ಆ ತಪೋನಿಧಿಯನ್ನು ಕಂಡಕೂಡಲೆ, ರಾಜನು ಸಂತೋಷ ದಿಂದ ಉಬ್ಬಿದವನಾಗಿ, ಆತನಿಗೆ ಪುರೋಹಿತರ ಕೈಯಿಂದಲೇ ಅರ್ಘ್ಯವನ್ನು ಕೊಡಿಸಿದನು. ಹೀಗೆ ಶಾಸ್ತ್ರಕ್ರಮದಿಂದ ಕೊಡಲ್ಪಟ್ಟ ಅರ್ಘ್ಯವನ್ನು ವಿಶ್ವಾಮಿತ್ರನು ಪ್ರೀತಿಯಿಂದ ಕೈಕೊಂಡು, "ಎಲೈ ರಾಜನೆ! ಕ್ಷೇಮವೆ? ನಿನ್ನ ಕೋರಿಕೆಗಳೆಲ್ಲವೂ ಕೊರತೆಯಿಲ್ಲದೆ ಕೈಗೂಡುತ್ತಿವೆಯೆ? ನಿನ್ನ ಪಟ್ಟಣವೂ, ದೇಶವೂ, ನಿನ್ನ ಬೊಕ್ಕಸವೂ ಸಮೃದ್ಧವಾಗಿರುವುದೆ? ನಿನ್ನ ಬಂಧುಮಿತ್ರರೆಲ್ಲರೂ ಕ್ಷೇಮದಿಂದಿರುವರೆ? ನಿನ್ನಿಂದ ಜಯಿಸಲ್ಪಟ್ಟ ಸಾಮಂತರಾಜರೆಲ್ಲರೂ ನಿನಗೆ ತಗ್ಗಿ ನಡೆಯುತ್ತಿರುವರೆ? ಯಜ್ಞಗಳು, ದೇವತಾರ್ಚನಗಳು, ಇವೇ ಮುಂತಾದ ದೈವಿಕಕಾರ್ಯಗಳೂ, ಅತಿಥಿ ಸತ್ಕಾರವೇ ಮೊದಲಾದ ಮಾನುಷಕರ್ಮಗಳೂ ಲೋಪವಿಲ್ಲದೆ ನಡೆಯು ತ್ತಿವೆಯೆ?" ಎಂದು ಕುಶಲಪ್ರಶ್ನೆಯನ್ನು ಮಾಡಿದನು. ಆಮೇಲೆ ವಸಿಷ್ಠ ರನ್ನೂ, ಅಲ್ಲಿದ್ದ ಇತರ ಮಂತ್ರಿಪುರೋಹಿತಾದಿಬ್ರಾಹ್ಮಣೋತ್ತಮರನ್ನೂ ಕುಶಲಪ್ರಶ್ನೆ ಮಾಡಿದಮೇಲೆ ಅವರೆಲ್ಲರೂ ಬಹಳ ಸಂತೋಷದಿಂದ ವಿಶ್ವಾಮಿತ್ರನನ್ನು ಮುಂದಿಟ್ಟುಕೊಂಡು ಅರಮನೆಯೊಳಗೆ ಪ್ರವೇಶಿಸಿ, ಅಲ್ಲಿ ಅವರವರಿಗೆ ತಕ್ಕಂತೆ ಉಚಿತಾಸನಗಳಲ್ಲಿ ಕುಳಿತರು. ಆಮೇಲೆ ಉದಾರಸ್ವಭಾವ

ವುಳ್ಳ ಆ ದಶರಥನು, ವಿಶ್ವಾಮಿತ್ರರು ಅಪ್ರಾರ್ಥಿತರಾಗಿಯೇ ಮನೆಗೆ ಬಂದುದಕ್ಕಾಗಿ ಮಿತಿಮೀರಿದ ಸಂತೋಷದಿಂದ ಅವರನ್ನು ಕುರಿತು, "ಎಲೈ ಮಹರ್ಷಿಯೆ ! ನಾನು ಮಕ್ಕಳಿಗೆ ವಿವಾಹಮಾಡಬೇಕೆಂದು ಆಲೋಚಿಸುವ ಕಾಲಕ್ಕೆ ಸರಿಯಾಗಿ, ತಾವು ಇಲ್ಲಿಗೆ ದಯೆಮಾಡಿದುದು ನನಗೆ ಅಮೃತವೇ ಲಭಿಸಿದಂತೆಯೂ, ನಿರ್ಜಲಪ್ರದೇಶದಲ್ಲಿ ಸುವೃಷ್ಟಿಯಾದಂತೆಯೂ, ಬಹುಕಾಲ ಸಂತಾನವಿಲ್ಲದವರಿಗೆ ಸುಪುತ್ರಪ್ರಾಪ್ತಿಯಾದಂತೆಯೂ, ನಷ್ಟವಾದ ದ್ರವ್ಯವು ಪುನಃ ಕೈಗೆ ಸಿಕ್ಕಿದಂತೆಯೂ, ಉತ್ಸವಕಾಲದಲ್ಲಿ ಮತ್ತೊಂದಭ್ಯುದಯವು ಪ್ರಾಪ್ತವಾದಂತೆಯೂ ತೋರಿರುವುದು. ನಿಮಗೆ ಸುಖಾಗಮನವೆ? ತಾವು ಇಲ್ಲಿಗೆ ಬಂದ ಉದ್ದೇಶವೇನು? ನಾನು ಮಾಡಬೇಕಾದ ಕಾರ್ಯವೇನಿರುವುದು? ಇಂತಹ ಸತ್ಪಾತ್ರವು ನನಗೆ ದೊರಕಿದುದು ನನ್ನ ಭಾಗ್ಯೋದಯವೇ ಸರಿ. ಈ ಸತ್ಪಾತ್ರದಲ್ಲಿ ವಿನಿಯೋಗಿಸುವುದರಿಂದ ನನ್ನಲ್ಲಿರುವ ಯಾವ ವಸ್ತುವು ಸಾರ್ಥಕ್ಯವನ್ನು ಹೊಂದಬಹುದು? ಈಗಲೀಗ ನನ್ನ ಜನ್ಮವು ಸಫಲವಾಯಿತು! ನನ್ನ ಜೀವನವೂ ಸುಜೀವನವಾಯಿತು. ಮೊದಲು ರಾಜರ್ಷಿಯಾಗಿದ್ದು, ತಪಃಪ್ರಭಾವದಿಂದಲೇ ಬ್ರಹ್ಮರ್ಷಿತ್ವವನ್ನು ಪಡೆದ ಮಹಾಮಹಿಮೆಯುಳ್ಳ ನೀವು ನನಗೆ ಈ ಎರಡು ವಿಧದಲ್ಲಿಯೂ ಪೂಜ್ಯರಾಗಿರುವಿರಿ! ನಿಮ್ಮ ದರ್ಶನದಿಂದ ನಾನು ಮಾತ್ರವಲ್ಲದೆ, ನಿಮ್ಮ ಪಾದ ಸಂಬಂಧದಿಂದ ಈ ಕ್ಷೇತ್ರವೆಲ್ಲವೂ ಪುಣ್ಯಕ್ಷೇತ್ರಸಮಾನವಾಯಿತು. ಎಲೈ ಮಹಾತ್ಮರೆ! ಅದೆಲ್ಲ ಹಾಗಿರಲಿ! ತಾವು ಇಲ್ಲಿಗೆ ಬಂದ ಉದ್ದೇಶವೇನು? ನನ್ನಿಂದ ತಮಗೆ ನಡೆಯಬೇಕಾದ ಕೆಲಸವೇನಿರುವುದು? ಅದನ್ನು ಕೇಳಬೇಕೆಂದು ಬಹಳ ಕುತೂಹಲವಿರುವುದು. ನಿಮ್ಮ ಕೋರಿಕೆಯನ್ನು ತಿಳಿಸುವುದರಿಂದ ನನ್ನನ್ನು ಅನುಗೃಹೀತನನ್ನಾಗಿ ಮಾಡಬೇಕು. ನೀವೇ ನಮಗೆ ಪರದೈವದಂತಿರುವುದರಿಂದ ನಿಮ್ಮ ಕೋರಿಕೆಯನ್ನು ತಿಳಿಸುವ ವಿಷಯದಲ್ಲಿ ಸ್ವಲ್ಪವೂ ಸಂಕೋಚಪಡಕೂಡದು. ಎಂತಹ ಮಹಾಕಾರ್ಯವಾದರೂ ನಾನು ಅದನ್ನು ಹಿಂಜರಿಯದೆ ನಡೆಯಿಸುವೆನು. ನಿಮ್ಮ ಆಗಮನದಿಂದ ಸಮಸ್ತ ಧರ್ಮಗಳೂ ನನಗೆ ಕೈಗೂಡಿರುವಂತೆ ಭಾವಿಸಿರುವೆನು" ಎಂದನು. ಹೀಗೆ ದಶರಥನು ಹೇಳಿದ ಕಿವಿಗಿಂಪಾದ ವಾಕ್ಯವನ್ನು ಕೇಳಿ, ಗುಣವಂತನಾಗಿಯೂ, ಕೀರ್ತಿವಂತನಾಗಿಯೂ ಇರುವ ವಿಶ್ವಾಮಿತ್ರನು ಆತನ ವಿನಯಕ್ಕೂ, ಸೌಲಭ್ಯಕ್ಕೂ ಬಹಳ ಸಂತೋಷಿಸಿದನು.

ಇಲ್ಲಿಗೆ ಹದಿನೆಂಟನೆಯ ಸರ್ಗವು

ವಿಶ್ವಾಮಿತ್ರನು ರಾಮನನ್ನು ತನ್ನೊಡನೆ ಕಳುಹಿಸೆಂದು ದಶರಥನನ್ನು ಕೇಳಿದುದು

ಅತ್ಯಾಶ್ಚರ್ಯವನ್ನುಂಟುಮಾಡತಕ್ಕ ಈ ದಶರಥನ ವಿನಯವಾಕ್ಯಗಳನ್ನು ಕೇಳಿ ವಿಶ್ವಾಮಿತ್ರನಿಗೆ ಸಂತೋಷಾತಿಶಯದಿಂದ ಮೈಯಲ್ಲಿ ರೋಮಾಂಚವು ಹುಟ್ಟಿತು! ಮಹಾತೇಜಸ್ವಿಯಾದ ಈ ಋಷಿಯು ರಾಜನನ್ನು ಕುರಿತು "ಎಲೈ ರಾಜೇಂದ್ರನೇ! ಸರ್ವೋತ್ತಮವಾದ ವಂಶದಲ್ಲಿ ಹುಟ್ಟಿ, ಮಹರ್ಷಿಯಾದ ವಸಿಷ್ಠರ ಉಪದೇಶದಲ್ಲಿರುವ ನಿನಗೊಬ್ಬನಿಗೇ ಇಂತಹ ವಾಕ್ಯಗಳು ಉಚಿತವಲ್ಲದೆ ಮತ್ತೊಬ್ಬರಿಗೆ ಬಾರದು! ಇದರಲ್ಲಿ ಸಂದೇಹವೇ ಇಲ್ಲ! ಎಲೈ ಮಹಾರಾಜನೆ! ನಿನ್ನಲ್ಲಿ ನಾನು ಕೇಳಬೇಕೆಂದು ಉದ್ದೇಶಿಸಿರುವ ದೊಡ್ಡ ಕಾರ್ಯವೊಂದುಂಟು. ಅದನ್ನು ತಪ್ಪದೆ ನೀನು ನಡೆಸಿಕೊಡಬೇಕು. ನೀನು ಬಹಳ ಸತ್ಯಸಂಧನು. ಆಡಿದ ಮಾತಿಗೆ ತಪ್ಪತಕ್ಕವನಲ್ಲವೆಂಬ ಭರವಸವು ನಿನ್ನಲ್ಲಿ ನನಗೆ ಸಂಪೂರ್ಣವಾಗಿರುವುದು. ಯಾವುದೋ ಒಂದು ಸಿದ್ಧಿಗಾಗಿ ಈಗ ನಾನೊಂದು ಯಾಗವನ್ನು ಮಾಡುತ್ತಿರುವೆನು. ಕಾಮರೂಪಿಗಳಾದ ಇಬ್ಬರು ರಾಕ್ಷಸರು ಅದಕ್ಕೆ ಯಾವಾಗಲೂ ವಿಘ್ನವನ್ನು ಮಾಡುತ್ತಿರುವರು. ಆ ವ್ರತವು ಬಹಳಮಟ್ಟಿಗೆ ಮುಗಿಯುತ್ತಾ ಬಂದಿತ್ತು. ಆದರೆ ಅದು ಪೂರ್ತಿಹೊಂದುವಷ್ಟರೊಳಗಾಗಿಯೇ, ಮಹಾವೀರ್ಯವುಳ್ಳವರಾದ ಮಾರೀಚ ಸುಬಾಹುಗಳೆಂಬ ರಾಕ್ಷಸರಿಬ್ಬರೂ ರಕ್ತಮಾಂಸಗಳನ್ನು ಸುರಿದು, ನನ್ನ ಯಜ್ಞವೇದಿಕೆಯನ್ನೆಲ್ಲಾ ಹಾಳುಮಾಡಿದರು. ನಾನು ಆರಂಭಿಸಿದ ಈ ದೊಡ್ಡ ಯಾಗವು ಹೀಗೆ ಕೆಟ್ಟುಹೋದುದರಿಂದ, ನನ್ನ ಶ್ರಮವೆಲ್ಲವೂ ನಿಷ್ಫಲವಾಯಿತು. ಹೀಗೆ ನನ್ನ ಉತ್ಸಾಹಕ್ಕೆ ಭಂಗವಾದುದರಿಂದ ಆ ಪ್ರದೇಶವನ್ನು ಬಿಟ್ಟು ನಿನ್ನಲ್ಲಿಗೆ ಹೊರಟು ಬಂದೆನು. ಎಲೈ ರಾಜನೆ! ಅವರಿಗೆ ನಾನೇ ಏಕೆ ಶಾಪವನ್ನು ಕೊಡಬಾರದೆಂದು ನೀನು ಕೇಳಬಹುದು! ಅವರಲ್ಲಿ ಕೋಪವನ್ನು ತೋರಿಸುವುದಕ್ಕೆ ನನಗೆ ಬುದ್ಧಿಯೇ ಹುಟ್ಟದು. ಆ ವ್ರತದ ಮಧ್ಯದಲ್ಲಿ ಕೋಪವೆಂಬುದೇ ಇರಕೂಡದು. ಆದುದರಿಂದ ಅವರನ್ನು ಶಪಿಸುವುದಕ್ಕೂ ಅವಕಾಶವಿಲ್ಲ. ನಿನ್ನಿಂದಲೇ ಈ ಕೆಲಸವಾಗಬೇಕಾಗಿದೆ. ಇದಕ್ಕಾಗಿ ಸತ್ಯಪರಾಕ್ರಮನಾದ ನಿನ್ನ ಜ್ಯೇಷ್ಠಪುತ್ರನಾದ ರಾಮನನ್ನು ನನ್ನೊಡನೆ ಕಳುಹಿಸಿಕೊಡು. ಈತನು ಇನ್ನೂ ಬಹಳ ಚಿಕ್ಕವನೆಂಬ ಶಂಕೆಯು ನಿನಗೆ ಸ್ವಲ್ಪವೂ ಬೇಡ! ಈತನು ಸ್ವಾಭಾವಿಕ

ನಾಗಿಯೇ ಮಹಾತೇಜಸ್ಸುಳ್ಳವನು. ಇದರಮೇಲೆ ಅವನನ್ನು ರಕ್ಷಿಸಿಕೊಳ್ಳುವ ಭಾರವು ನನ್ನದಾಗಿದೆ. ಯಜ್ಞವಿಘ್ನಕಾರಿಗಳಾದ ಆ ರಾಕ್ಷಸರನ್ನು ಕೊಲ್ಲುವ ವಿಷಯದಲ್ಲಿ ಆತನು ಸಮರ್ಥನೆಂಬುದಕ್ಕೆ ಏನೇನೂ ಸಂದೇಹವಿಲ್ಲ. ಆತನಿಗೆ ಇನ್ನೂ ಅನೇಕ ಶ್ರೇಯಸ್ಸನ್ನುಂಟುಮಾಡುವೆನು. ಅದರಿಂದ ಮೂರು ಲೋಕ ದಲ್ಲಿಯೂ ಪ್ರಖ್ಯಾತಿಯನ್ನು ಪಡೆಯಲು ಅವಕಾಶವುಂಟು. ಆ ರಾಕ್ಷಸರು ಈ ರಾಮನ ಮುಂದೆ ಎಂದಿಗೂ ನಿಲ್ಲಲಾರರು! ರಾಮನು ಹೊರತು ಬೇರೆ ಯಾರೂ ಅವರನ್ನು ಸಂಹರಿಸುವುದಕ್ಕೆ ಸಮರ್ಥರಲ್ಲ. ರಾಮನು ಎಷ್ಟೇ ಬಲವಂತನಾಗಿದ್ದರೂ, ಮಹಾವೀರ್ಯವುಳ್ಳ ಆ ರಾಕ್ಷಸರನ್ನು ಗೆಲ್ಲುವುದು ಹೇಗೆ ಸಾಧ್ಯವೆಂದು ಶಂಕಿಸಬೇಡ! ಅವರಿಗೂ ಮರಣಕಾಲವು ಸನ್ನಿಹಿತವಾಗಿರುವು ದೆಂದೇ ತಿಳಿ! ಈ ರಾಮನ ಮುಂದೆ ಅವರ ಪರಾಕ್ರಮವು ಸ್ವಲ್ಪವೂ ಸಾಗದು. ರಾಮನಲ್ಲಿರುವ ಪುತ್ರಸ್ನೇಹದಿಂದ ನೀನು ಇದಕ್ಕೆ ವಿರೋಧವಾಗಿ ಹೇಳ ಕೂಡದು. ಅವನಲ್ಲಿ ನೀನು ಪುತ್ರನೆಂಬ ಅಭಿಮಾನವನ್ನೇ ಬಿಟ್ಟುಬಿಡು! ಇದೋ ನಾನು ಪ್ರತಿಜ್ಞೆಮಾಡಿಕೊಡುವೆನು! ಆ ರಾಕ್ಷಸರಿಬ್ಬರೂ ಹತರಾದ ರೆಂದೇ ತಿಳಿ! ಇದನ್ನು ನಾನು ಹೇಗೆ ಬಲ್ಲೆನೆಂದು ನೀನು ಕೇಳಬಹುದು. [1]ಈ

---

1. ಇಲ್ಲಿ "ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್ | ವಸಿಷ್ಠೋಽಪಿ ಮಹಾತೇಜಾ ಯೇ ಚೇಮೇ ತಪಸಿ ಸ್ಥಿತಾಃ ||" ಎಂಬುದೇ ಮೂಲವು. ಇದರಲ್ಲಿ ಕಾಣುವ ವಿಶೇಷಾರ್ಥಗಳೇನೆಂದರೆ, (ಅಹಂ ವೇದ್ಮಿ) "ನಾನು ಬಲ್ಲೆನು" ಎಂದು ಹೇಳಿರುವುದರಿಂದ ಅನೇಕ ಗುರುಜನರನ್ನು ಉಪಾಸನೆಮಾಡಿ, ಯೋಗಬಲದಿಂದಲೇ ಪರಾಪರತತ್ವಸ್ವರೂಪವನ್ನು ತಿಳಿದು, ಜಟಾವಲ್ಕಲಗಳನ್ನು ಧರಿಸಿ, ತಪೋನಿರತನಾಗಿ, ಸಾತ್ವಿಕಸ್ವಭಾವದಿಂದ ಕೂಡಿ, ಮೋಕ್ಷಸಾಧಕಗಳಾದ ಸತ್ಕರ್ಮಗಳನ್ನು ಮಾಡಿ, ಧರ್ಮಮೋಕ್ಷಗಳನ್ನು ಮಾತ್ರವೇ ಕೈಕೊಂಡು, ತಾನು ರಾಮನ ಗರ್ಭದಾನಕ್ಕೆ ಸೇರಿದವನೆಂಬು ದನ್ನೂ ಚೆನ್ನಾಗಿ ತಿಳಿದುಕೊಂಡಿರುವ ಬ್ರಹ್ಮರ್ಷಿಯಾದ ನಾನು ಬಲ್ಲೆನೇ ಹೊರತು ಇದಕ್ಕೆ ವಿರುದ್ಧವಾಗಿ, ಗುರೂಪಾಸನೆಯಿಲ್ಲದೆ, ಯೋಗಬಲವಿಲ್ಲದೆ, ಸಂಸಾರದಲ್ಲಿ ಮುಳುಗಿ, ಪುತ್ರಕಾಮೇಷ್ಟಿ ಮೊದಲಾದ ಕಾಮ್ಯಕರ್ಮಗಳಲ್ಲಿ ಬಿದ್ದು, ರಜೋಗುಣ ವಿಶಿಷ್ಟನಾಗಿ, ಅರ್ಥಕಾಮಗಳಲ್ಲಿಯೇ ನಿರತನಾಗಿದ್ದು, ರಾಮನೇ ತನ್ನ ಗರ್ಭಕ್ಕೆ ಸೇರಿದವನೆಂದು ಭ್ರಾಂತಿಗೊಂಡಿರುವ ಕ್ಷತ್ರಿಯರಾದ ನಿನ್ನಂಥವರು ಆತನ ನಿಜಸ್ವರೂಪವನ್ನು ಎಂದಿಗೂ ತಿಳಿಯಲಾರರೆಂದು

ರಾಮನ ಮಹಿಮೆಯೂ, ಈತನ ಪರಾಕ್ರಮವೂ ಚೆನ್ನಾಗಿ ಗೊತ್ತಿರುವುದು ನನಗೊಬ್ಬನಿಗೇ ಅಲ್ಲ. ಇದೋ! ಈ ವಸಿಷ್ಠ ಮಹರ್ಷಿಯೂ ಚೆನ್ನಾಗಿ ಬಲ್ಲನು. ಮತ್ತು ಇಲ್ಲಿರುವ ತಪೋನಿಷ್ಠರಾದ ಮಹರ್ಷಿಗಳೆಲ್ಲರೂ ಬಲ್ಲರು. ಎಲೈ ರಾಜನೆ! ಹೆಚ್ಚಾಗಿ ಹೇಳಿದುದರಿಂದೇನು? ಈ ಭೂಮಿಯಲ್ಲಿ ನಿನ್ನ ಧರ್ಮವೂ, ಯಶಸ್ಸೂ ಸ್ಥಿರವಾಗಿ ನಿಲ್ಲಬೇಕೆಂಬ ಆಸೆಯು ನಿನಗಿದ್ದರೆ, ನನ್ನ ವಶಕ್ಕೆ ರಾಮನನ್ನು ಕೊಟ್ಟುಬಿಡು. ಹಾಗೆ ನಿನಗೆ ಸಂದೇಹವಿದ್ದರೆ, ಇದೋ ಇಲ್ಲಿರುವ ನಿನ್ನ ಮಂತ್ರಿಗಳನ್ನು ಕೇಳು. ವಸಿಷ್ಠರೇ ಮೊದಲಾದ ಮಹರ್ಷಿ

ಭಾವವು. ಆತನೆಂತವನೆಂದರೆ, (ಮಹಾತ್ಮಾನಂ) ಮಹಾಮಹಿಮೆಯುಳ್ಳವನು. ಆತ್ಮಶಬ್ದಕ್ಕೆ "ಆತ್ಮಾ ಜೀವೇ ಧೃತೌ ದೇಹೇ ಸ್ವಭಾವೇ ಪರಮಾತ್ಮನಿ" ಇತ್ಯಾದಿ ನಿಘಂಟುವಿನ ಪ್ರಕಾರವಾಗಿ, ಅನೇಕಾರ್ಥಗಳಿರುವುದರಿಂದ, ಆತನು ಬಾಲ್ಯವಯಸ್ಸುಳ್ಳವನೆಂದೂ, ನ ತಸ್ಯ ಪ್ರಾಕೃತಾ ಮೂರ್ತಿಃ" ಎಂಬಂತೆ, ಪ್ರಕೃತಿಸಂಬಂಧವಿಲ್ಲದ ದಿವ್ಯದೇಹವುಳ್ಳವನೆಂದೂ, ಜೀವಾಂತರಾತ್ಮನೆಂದೂ, ಮಹಾಧೈರ್ಯವುಳ್ಳವನೆಂದೂ, "ಅಭಯಂ ಸರ್ವಭೂತೇಭ್ಯೋದದಾಮ್ಯೇ ತದ್ವ್ರತಂ ಮಮ" ಎಂಬಂತೆ ಮಹಾ ಸ್ವಭಾವವುಳ್ಳವನೆಂದೂ, ಪರಮಾತ್ಮ ಸ್ವರೂಪನೆಂದೂ, ಮಹಾ ಬುದ್ಧಿಯುಳ್ಳವನೆಂದೂ, ಮಹಾ ಪ್ರಯತ್ನವುಳ್ಳವ ನೆಂದೂ ಆತನ ಕಲ್ಯಾಣಗುಣಗಳೆಲ್ಲವೂ ಸೂಚಿತವಾಗುವುವು. ಮತ್ತು (ಸತ್ಯ ಪರಾಕ್ರಮಂ) ಕಪಟವಿಲ್ಲದ ಪರಾಕ್ರಮವುಳ್ಳವನು. ಅಥವಾ ಯಾವಾಗಲೂ ಒಂದೇ ವಿಧವಾದ ಪರಾಕ್ರಮವುಳ್ಳವನು, ಅಥವಾ ಸತ್ಯದಿಂದಲೇ ಶತ್ರುಗಳನ್ನು ಆಕ್ರಮಿಸತಕ್ಕವನು. ಪ್ರಕೃತಿಸಂಬಂಧದಿಂದ ಕೆಲವರು ಆತನಲ್ಲಿ ದ್ವೇಷಬುದ್ಧಿ ಯುಳ್ಳವರಾಗಿದ್ದರೂ, ಅವನು ಅವರಲ್ಲಿರುವ ದ್ವೇಷಬುದ್ಧಿಯನ್ನು ತಪ್ಪಿಸು ವುದಕ್ಕಾಗಿ ಅನೇಕಾವರ್ತಿ ಪ್ರಯತ್ನಿಸಿ, ಕೊನೆಗೂ ಅವರು ತಮ್ಮ ದ್ವೇಷ ವನ್ನು ಬಿಡದಿದ್ದರೆ, ಅಂತವರನ್ನು ಕೊಲ್ಲುವವನೆಂದು ಭಾವವು. "ಯದಿ ವಾ ರಾವಣಸ್ಸ್ವಯಂ | ಗಚ್ಛಾನುಜಾನಾಮಿ ರಣಾರ್ದಿತಸ್ತ್ವಂ ಪ್ರವಿಶ್ಯ ರಾತ್ರಿಂ- ಚರರಾಜಲಂಕಾಂ | ಆಶ್ವಾಸ್ಯ ನಿರ್ಯಾಹಿ ರಥೀ ಚ ಧನ್ವೀ ತದಾಬಲಂ ದ್ರಕ್ಷ್ಯಸಿ ಮೇ ರಥಸ್ಥಃ ||" ಎಂಬುದರಿಂದ ಈ ಮೇಲಿನ ವಿಷಯವು ಸ್ಪಷ್ಟಪಡುವುದು. (ವಸಿಷ್ಠೋಪಿ) ನಾನು ಕಾರ್ಯಾರ್ಥಿಯಾಗಿ ಬಂದಿರುವುದರಿಂದ, ಸ್ವಕಾರ್ಯ ಕ್ಕಾಗಿಯೇ ಹೀಗೆ ಹೇಳುತ್ತಿರುವೆನೆಂದೆಣಿಸಬೇಡ. ನಿನಗೆ ಆಪ್ತನಾಗಿ ಕುಲಗುರು ವಾದ ವಸಿಷ್ಠನೂ ಇದನ್ನು ಚೆನ್ನಾಗಿ ಬಲ್ಲನೆಂದರ್ಥವು. ಇಲ್ಲಿ (ಅಪಿ) ಎಂಬುದರಿಂದ ಆತನು ನನ್ನಲ್ಲಿ ಬದ್ಧವೈರವುಳ್ಳವನಾಗಿಯೂ, ಈ ವಿಷಯದಲ್ಲಿ

ಗಳೆಲ್ಲರನ್ನೂ ಕೇಳು. ಅವರೆಲ್ಲರೂ ಅನುಮತಿಸಿದ ಪಕ್ಷದಲ್ಲಿ ನೀನು ರಾಮನನ್ನು ಕಳುಹಿಸಬಹುದಲ್ಲವೆ! ಈ ರಾಮನನ್ನು ಬಹುಕಾಲ ಅಗಲಿರುವುದು ಹೇಗೆಂದು ಭಯಪಡಬೇಡ. ಅಷ್ಟೇನೂ ದೀರ್ಘಕಾಲವಿಲ್ಲ! ಹತ್ತು ದಿವಸಗಳ ವರೆಗೆ ನನ್ನೊಡನೆ ಕಳುಹಿಸಿದರೆ ಸಾಕು. ನೀನು ಈ ವಿಷಯದಲ್ಲಿ ಸ್ವಲ್ಪವೂ ಚಿಂತಿಸಬೇಡ! ಎಲೈ ದಶರಥನೆ! ನನ್ನ ಯಜ್ಞಕಾಲವು ಮೀರಿ ಹೋಗುತ್ತಿರುವುದು. ಸಾವಕಾಶಮಾಡದೆ ರಾಮನನ್ನು ಕಳುಹಿಸು" ಎಂದನು. ಹೀಗೆ ಮಹಾತೇಜಸ್ವಿಯಾಗಿ, ಧರ್ಮಗಳೆಲ್ಲವನ್ನೂ ತಿಳಿದ ಆ ವಿಶ್ವಾಮಿತ್ರನು, ಧರ್ಮಾರ್ಥಯುಕ್ತವಾದ ಈ ಮಾತನ್ನು ಹೇಳಿ ಸುಮ್ಮನಿರಲು, ಅದು ತನಗೆ ಹಿತಕರವಾದುದೆಂಬುದನ್ನು ತಿಳಿಯದೆ ದಶರಥನು, ಭಯದಿಂದಲೂ, ದುಃಖದಿಂದಲೂ ಕೂಡಿದವನಾಗಿ ಚಿಂತಿಸುತ್ತಿದ್ದನು. ಮತ್ತು ಹೃದಯಭೇದಕವಾದ ಆ ವಾಕ್ಯವು ಕಿವಿಗೆ ಬಿದ್ದೊಡನೆಯೇ ಇದ್ದ ಕಡೆಯಲ್ಲಿ ಇರಲಾರದೆ, ತನ್ನ ಆಸನವನ್ನು ಬಿಟ್ಟು ಎದ್ದನು.

ಇಲ್ಲಿಗೆ ಹತ್ತೊಂಬತ್ತನೆಯ ಸರ್ಗವು

ವ್ಯತ್ಯಾಸವಾಗಿ ಹೇಳುವುದಕ್ಕಿಲ್ಲವೆಂದು ಭಾವವು. (ಮಹಾತೇಜಾಃ) ಎಂಬುದರಿಂದ, ಬ್ರಹ್ಮಪುತ್ರನಾಗಿಯೂ, ಯೋಗಜ್ಞಾನವುಳ್ಳವನಾಗಿಯೂ, ಕ್ಷತ್ರಿಯಜಾತಿಯಲ್ಲಿ ಹುಟ್ಟಿದ ನನಗೂ ಬ್ರಹ್ಮರ್ಷಿತ್ವವನ್ನು ಕೊಟ್ಟವನಾಗಿಯೂ ಇರುವ ಮಹಾಮಹಿಮೆಯುಳ್ಳ ವಸಿಷ್ಠನೇ ಬಲ್ಲನೆಂದರ್ಥವು. ನಾವಿಬ್ಬರೂ ಬ್ರಾಹ್ಮಣರಾದುದರಿಂದ, ಈ ವಸಿಷ್ಠನು ಜಾತಿಪಕ್ಷಪಾತದಿಂದ ನನಗೆ ಅನುಕೂಲವಾಗಿಯೇ ಹೇಳಬಹುದೆಂದು ನಿನಗೆ ಸಂದೇಹವಿದ್ದ ಪಕ್ಷದಲ್ಲಿ (ಯೇಚೇಮೇ) ಇದೋ ಇಲ್ಲಿ "ಸತ್ಯಧೀರಾಃ ಪರಿಜಾನಂತಿ ಯೋನಿಂ" ಎಂಬಂತೆ ಅವತಾರ ರಹಸ್ಯವನ್ನು ಚೆನ್ನಾಗಿ ಬಲ್ಲವರಾಗಿರುವ ವಾಮದೇವಾದಿಗಳನ್ನು ಕೇಳು! ಅಥವಾ ಇವರೆಲ್ಲರೂ ರಾಜದ್ವಾರಸಂಬಂಧವುಳ್ಳವರಾಗಿರುವುದರಿಂದ, ಪಕ್ಷಪಾತ ಬುದ್ಧಿಯುಳ್ಳವರಾಗಿರಬಹುದೆಂದು ತೋರಿದರೆ, (ತಪಸಿಸ್ಥಿತಾಃ) ಕಾಯಿಕವ್ಯಾಪಾರಗಳನ್ನೆಲ್ಲಾ ಬಿಟ್ಟು ಯಾವಾಗಲೂ ತಪೋನಿರತರಾಗಿರುವವರು ಯಾರುಂಟೋ ಅವರನ್ನಾದರೂ ಕೇಳಿ ತಿಳಿ! ಇವರೆಲ್ಲರನ್ನೂ ಬೇರೆಬೇರೆಯಾಗಿ ವಿಚಾರಿಸಿ, ಎಲ್ಲರ ಅನುಮತಿಯನ್ನೂ ಕೇಳಿದಮೇಲಾದರೂ ರಾಮನನ್ನು ಕಳುಹಿಸಿಕೊಡು" ಎಂದು ವಿಶ್ವಾಮಿತ್ರನು ಹೇಳಿದುದಾಗಿ ಗ್ರಹಿಸಬೇಕು.

ದಶರಥನು ರಾಮನನ್ನು ಕಳುಹಿಸಲಾರದೆ ದುಃಖಿಸಿದುದು

ಈ ಮಾತನ್ನು ಕೇಳಿದೊಡನೆ ದಶರಥನು ಒಂದು ಮುಹೂರ್ತಕಾಲದ ವರೆಗೆ ಪ್ರಜ್ಞೆತಪ್ಪಿದವನಂತೆ ಮೈಮರೆತಿದ್ದು, ಆಮೇಲೆ ಮೆಲ್ಲಗೆ ಚೇತರಿಸಿ ಕೊಂಡು ವಿಶ್ವಾಮಿತ್ರನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವನು. "ಎಲೈ, ಮಹರ್ಷಿಯೆ! ಕಮಲದಳದಂತೆ ಕಣ್ಣುಳ್ಳ ಈ ನನ್ನ ಮುದ್ದು ಮಗನಾದ ರಾಮನಿಗೆ, ಇನ್ನೂ [1]ಹದಿನಾರು ವರ್ಷಗಳು ಕೂಡ ತುಂಬಿಲ್ಲ! ರಾಕ್ಷಸರೊಡನೆ ಯುದ್ಧಮಾಡುವಷ್ಟು ಶಕ್ತಿಯು ಈತನಿಗಿರುವಂತೆ ನನಗೆ ತೋರದು. ಇನ್ನೂ ಈತನಿಗೆ ಹನ್ನೆರಡನೆಯ ವರ್ಷವೇ ನಡೆಯುತ್ತಿರುವುದು. ಇಷ್ಟು ಚಿಕ್ಕವಯಸ್ಸಿನಲ್ಲಿ ಯುದ್ಧಮಾಡುವ ಸಾಮರ್ಥ್ಯವೆಲ್ಲಿಯದು? ಆದರೆ ಆಡಿದ ಮಾತಿಗೆ ನಾನೆಂದಿಗೂ ತಪ್ಪತಕ್ಕವನಲ್ಲ. ಇದೋ! ಪೂರ್ಣವಾಗಿ ಒಂದಕ್ಷೋಹಿಣೀಸೈನ್ಯವು ನನ್ನ ಪೋಷಣೆಯಲ್ಲಿರುವುದು. ಅದೆಲ್ಲವನ್ನೂ ಸೇರಿಸಿ ಕೊಂಡು ನಾನೇ ಹೋಗಿ ಆ ರಾಕ್ಷಸರೊಡನೆ ಯುದ್ಧಮಾಡುವೆನು. ಈ ನನ್ನ ಸೈನಿಕರೆಲ್ಲರೂ ಬಹಳ ಪರಾಕ್ರಮಶಾಲಿಗಳು! ಸಮಸ್ತ ಶಸ್ತ್ರಾಸ್ತ್ರಗಳನ್ನೂ

---

1. ರಾಮನಿಗೆ ಆಗಲೇ ಸರಿಯಾಗಿ ಹನ್ನೆರಡು ವರ್ಷಗಳು ತುಂಬಿದುವೆಂದು ಮುಂದೆ ಸ್ಪಷ್ಟವಾಗುವುದು. ಹಾಗಿದ್ದರೂ ಇಲ್ಲಿ ಹದಿನಾರುವರ್ಷಗಳನ್ನು ಹೇಳಿದುದೇಕೆಂದರೆ, ಬಹು ಪ್ರೀತಿಯಿಂದ ತಾನು ಅದುವರೆಗೂ ಅವನನ್ನು ಪೋಷಿಸುತ್ತಾ ಬಂದುದರಿಂದ ನೋಡುವವರ ಕಣ್ಣಿಗೆ ಹದಿನಾರು ವರ್ಷದ ಕುಮಾರನಂತೆ ಕಾಣಬಹುದಾದರೂ ಆತನಿಗೆ ಇನ್ನೂ ಅಷ್ಟು ವಯಸ್ಸಾಗಿಲ್ಲವೆಂದು ಭಾವವು. ಹದಿನಾರುವರ್ಷದ ಕುಮಾರನೇ ಯುದ್ಧಕ್ಕೆ ಅರ್ಹನೆಂಬ ವಿಧಿಯೂ ಉಂಟು! ಇಲ್ಲಿ ಮುಖ್ಯವಾಗಿ ತಿಳಿಯಬೇಕಾದುದೇನೆಂದರೆ— ರಾಮನಿಗೆ ಎಂಟನೆಯ ವರ್ಷದಲ್ಲಿಯೇ ಉಪನಯನವಾಯಿತು. ಅದರ ಮೇಲೆ ನಾಲ್ಕು ವರ್ಷಗಳವರೆಗೂ ವಿದ್ಯಾಭ್ಯಾಸ ಮಾಡಿ, ಸಮಸ್ತ ಶಸ್ತ್ರಾಸ್ತ್ರ ವಿದ್ಯೆಗಳನ್ನೆಲ್ಲಾ ಕಲಿತನು. ಹನ್ನೆರಡನೆಯ ವರ್ಷದಲ್ಲಿಯೇ ವಿಶ್ವಾಮಿತ್ರನೊಡನೆ ಪ್ರಯಾಣವೂ, ಸೀತಾವಿವಾಹವೂ ಒದಗಿತು. ಅದರಮೇಲೆ ಅಯೋಧ್ಯೆಯಲ್ಲಿ ಪತ್ನೀಸಹಿತನಾಗಿ ಹನ್ನೆರಡು ವರ್ಷಕಾಲವಿದ್ದು, ಮೂರನೆಯ ವರ್ಷದಲ್ಲಿ ವನವಾಸಕ್ಕೆ ಹೊರಟನೆಂದು ತಿಳಿಯಬೇಕು. ಈ ವಿಷಯವು ಮುಂದೆ ರಾವಣಸನ್ಯಾಸಿಗೂ ಸೀತೆಗೂ ವಿವಾದವು ನಡೆಯುವಾಗ ಸ್ಪಷ್ಟವಾಗುವುದು.

ಬಲ್ಲವರು. ಎಷ್ಟು ರಾಕ್ಷಸರನ್ನಾದರೂ ಇದಿರಿಸಬಲ್ಲರು! ಈ ಕಾರ್ಯಕ್ಕೆ ರಾಮನನ್ನು ಕರೆದುಕೊಂಡು ಹೋಗುವುದು ಯುಕ್ತವಲ್ಲ. ನಾನೇ ಧನುಷ್ಪಾಣಿಯಾಗಿ ಹೋಗಿ, ಈ ಸೈನ್ಯಗಳನ್ನೆಲ್ಲಾ ಕಾಪಾಡುತ್ತಾ ಯುದ್ಧ ಮಾಡುವೆನು. ನನ್ನ ಪ್ರಾಣಗಳಿರುವವರೆಗೂ ಹಿಂಜರಿಯದೆ ಹೋರಾಡುವೆನು. ತಮ್ಮ ವ್ರತವೆಲ್ಲವೂ ನಿರ್ವಿಘ್ನವಾಗಿಯೂ, ಸುರಕ್ಷಿತವಾಗಿಯೂ, ನಡೆಯುವಂತೆ ನನ್ನ ಕೈಲಾದಮಟ್ಟಿಗೂ ಪ್ರಯತ್ನಿಸುವೆನು. ರಾಮನನ್ನು ಮಾತ್ರ ಕರೆದುಕೊಂಡು ಹೋಗಬೇಡಿರಿ! ಈತನು ಬಹಳ ಚಿಕ್ಕವನು. ಧನುರ್ವಿದ್ಯೆಯನ್ನೂ ಚೆನ್ನಾಗಿ ತಿಳಿದವನಲ್ಲ. ಶತ್ರುಗಳ ಬಲಾಬಲವನ್ನೂ ತಿಳಿಯಲಾರನು. ಈತನಿಗೆ ಅಸ್ತ್ರಬಲವೂ ಸಂಪೂರ್ಣವಾಗಿಲ್ಲ. ಯುದ್ಧಮಾಡುವ ದಾರಿಯೇ ಈತನಿಗೆ ತಿಳಿಯದು. ಅದರಲ್ಲಿಯೂ ರಾಕ್ಷಸರೊಡನೆ ಯುದ್ಧಮಾಡತಕ್ಕ ಶಕ್ತಿಯು ಈತನಿಗೆ ಸ್ವಲ್ಪವಾದರೂ ಇಲ್ಲ. ರಾಕ್ಷಸರು ಯಾವಾಗಲೂ ಮಾಯೆಯಿಂದ ದೊಂಬಿಯುದ್ಧವನ್ನು ಮಾಡತಕ್ಕವರು. ಆದುದರಿಂದ ಆ ಘೋರರಾಕ್ಷಸರೊಡನೆ ಯುದ್ಧಮಾಡುವುದಕ್ಕೆ ಈತನಿಗೆ ಯೋಗ್ಯತೆಯೆಲ್ಲಿಯದು? ಎಲೈ! ಋಷಿಶ್ರೇಷ್ಠನೆ! ರಾಮನ ಯೋಗ್ಯತಾಯೋಗ್ಯತೆಗಳ ವಿಚಾರವೂ ಹಾಗಿರಲಿ. ಆತನನ್ನು ಬಿಟ್ಟು ಮುಹೂರ್ತವಾದರೂ ನಾನು ಬದುಕಿರಲಾರೆನು. ಆದುದರಿಂದ ರಾಮನನ್ನು ಬಿಟ್ಟುಬಿಡಿರಿ! ಹೇಗಾದರೂ ಈತನನ್ನು ಕರೆದುಕೊಂಡೇ ಹೋಗಬೇಕೆಂಬ ಹಟವು ನಿಮಗಿದ್ದಪಕ್ಷದಲ್ಲಿ, ಆತನನ್ನೂ ಕರೆದುಕೊಂಡು ನಾನೂ ಚತುರಂಗಸೈನ್ಯಗಳೊಡನೆ ಬರುವೆನು. ಈಗ ನನಗೆ ಅರವತ್ತು ಸಾವಿರ ವರ್ಷಗಳಾದಮೇಲೆ, ಬಹಳ ಶ್ರಮಪಟ್ಟು ಈ ಪುತ್ರನನ್ನು ಪಡೆದಿರುವೆನು. ಈ ರಾಮನನ್ನು ಮಾತ್ರ ಕರೆದುಕೊಂಡು ಹೋಗಬೇಡಿರಿ! ಈ ನಾಲ್ಕು ಮಕ್ಕಳೊಳಗೆ ಈತನಲ್ಲಿಯೇ ನನಗೆ ಹೆಚ್ಚಾದ ಪ್ರೀತಿಯಿರುವುದು. ಈತನೇ ನನ್ನ ಹಿರಿಯ ಮಗನು. ಈತನೇ ಕುಲಧರ್ಮಗಳೆಲ್ಲವನ್ನೂ ನಡೆಸತಕ್ಕವನು. ಈ ರಾಮನನ್ನು ಬಿಟ್ಟುಬಿಡಿರಿ! ಎಲೈ ಮಹರ್ಷಿಯೆ! ಆ ರಾಕ್ಷಸರ ಪರಾಕ್ರಮವೆಂತದು? ಯಾರ ಮಕ್ಕಳು! ಅವರ ಹೆಸರೇನು? ಅವರ ಆಕಾರವು ಹೇಗಿರುವುದು? ಅವರಿಗೆ ಅಂಗರಕ್ಷಕರಾರು? ಅವರನ್ನು ಜಯಿಸುವುದಕ್ಕೆ ರಾಮನಿಂದ ಹೇಗೆ ಸಾಧ್ಯವು? ದೊಂಬಿಯುದ್ಧಮಾಡತಕ್ಕ ಆ ರಾಕ್ಷಸರನ್ನು ಕೊಲ್ಲುವುದಕ್ಕೆ ನಾನಾಗಲಿ, ಸೈನ್ಯಗಳಾಗಲಿ ಅಥವಾ ರಾಮನೇ ಆಗಲಿ, ಮಾಡಬೇಕಾದ ಉಪಾಯಗಳೇನು? ಅವರೆಲ್ಲರೂ

ಪರಾಕ್ರಮದಿಂದ ಬಹಳ ಕೊಬ್ಬಿದವರು! ರಾಕ್ಷಸಜಾತಿಯವರು! ಬಹಳ ದುರ್ಬುದ್ಧಿಯುಳ್ಳವರು! ಅವರೊಡನೆ ಯುದ್ಧಮಾಡುವಾಗ ಹೇಗೆ ನಡೆದುಕೊಳ್ಳಬೇಕು? ಇವೆಲ್ಲವನ್ನೂ ವಿಸ್ತಾರವಾಗಿ ನನಗೆ ತಿಳಿಸಬೇಕು" ಎಂದನು.

ಈ ದಶರಥನ ವಾಕ್ಯವನ್ನು ಕೇಳಿ, ವಿಶ್ವಾಮಿತ್ರನು "ಎಲೈ, ರಾಜನೆ! ಪುಲಸ್ತ್ಯವಂಶದಲ್ಲಿ ಹುಟ್ಟಿದ ರಾವಣನೆಂಬ ರಾಕ್ಷಸನೊಬ್ಬನುಂಟು. ಆತನು ಬ್ರಹ್ಮನಿಂದ ವರವನ್ನು ಪಡೆದು, ಅವರ ಬಲದಿಂದ ಮೂರು ಲೋಕವನ್ನೂ ಬಹಳವಾಗಿ ಬಾಧಿಸುತ್ತಿರುವನು. ಆತನು ಮಹಾಬಲವುಳ್ಳವನು. ಮಹಾವೀರ್ಯವುಳ್ಳವನು. ಅನೇಕ ರಾಕ್ಷಸರು ಆತನ ಅಧೀನದಲ್ಲಿರುವರು. ಆತನು ಸಾಕ್ಷಾತ್ಕುಬೇರನ ತಮ್ಮನು. ವಿಶ್ರವಸ್ಸೆಂಬ ಮಹರ್ಷಿಯ ಪುತ್ರನು. ಆತನ ಪರಾಕ್ರಮವು ಲೋಕಪ್ರಸಿದ್ಧವಾದುದು. ನೀನೂ ಈ ವಿಷಯವನ್ನು ಕೇಳಿರಬಹುದು. ಆತನೇ ಋಷಿಗಳ ತಪಸ್ಸಿಗೆಲ್ಲಾ ಯಾವಾಗಲೂ ವಿಘ್ನ ಮಾಡುತ್ತಿರುವನು. ತಾನು ಬಾರದ ಕಾಲಗಳಲ್ಲಿ ಈ ರಾಕ್ಷಸರನ್ನು ಕಳುಹಿಸುವನು. ಅವರಲ್ಲಿ ಸುಬಾಹು ಮಾರೀಚರೆಂಬ ಮಹಾಬಲಶಾಲಿಗಳಾದ ಇಬ್ಬರು ರಾಕ್ಷಸರು ಪ್ರಧಾನರಾಗಿ ಬಂದು ನಮ್ಮ ಯಜ್ಞಕ್ಕೆ ವಿಘ್ನವನ್ನು ಮಾಡುತ್ತಿರುವರು" ಎಂದನು. ಈ ಮಾತನ್ನು ಕೇಳಿ ರಾಜನು ವಿಶ್ವಾಮಿತ್ರನನ್ನು ಕುರಿತು "ಅಬ್ಬಾ! ಇನ್ನೇನು? ಹಾಗಿದ್ದರೆ ಆ ದುರಾತ್ಮನಿದಿರಿಗೆ ನಾನೇ ನಿಲ್ಲಲಾರೆನಲ್ಲಾ! ಧರ್ಮಜ್ಞನೆ! ಮನ್ನಿಸು! ಈ ನನ್ನ ಚಿಕ್ಕಮಗುವಿನಲ್ಲಿ ದಯೆಯನ್ನಿಡು! ಭಾಗ್ಯಹೀನನಾದ ನನ್ನನ್ನೂ ಕಾಪಾಡು! ನೀನೇ ನನಗೆ ದೈವವು! ನೀನೇ ನನಗೆ ಪರಮ ಗುರುವು! ಎಲೈ ಮಹಾಮುನಿಯೆ! ಆ ರಾವಣನನ್ನು ನಾನು ಕೇಳಿ ಬಲ್ಲೆನು! ದೇವತೆಗಳಾಗಲಿ, ದಾನವರಾಗಲಿ, ಗಂಧರ್ವರಾಗಲಿ, ಯಕ್ಷಕಿನ್ನರರಾಗಲಿ ಆ ರಾವಣನ ಮುಂದೆ ನಿಲ್ಲಲಾರರು. ಮನುಷ್ಯ ಮಾತ್ರರಾದ ನಮ್ಮ ಪಾಡೇನು? ಆತನ ಪರಾಕ್ರಮದ ಮುಂದೆ ಯಾರ ಪರಾಕ್ರಮವೂ ಸಾಗದು! ಆದುದರಿಂದ ಆತನೊಡನೆಯಾಗಲಿ, ಆತನ ಸೈನಿಕರೊಡನೆಯಾಗಲಿ ನಾನು ಯುದ್ಧ ಮಾಡಲಾರೆನು. ನನ್ನ ಸಮಸ್ತ ಸೈನ್ಯಗಳನ್ನೂ ಕಟ್ಟಿಕೊಂಡು, ನನ್ನ ನಾಲ್ಕು ಮಕ್ಕಳೂ ನನಗೆ ಸಹಾಯಕವಾಗಿ ಬಂದರೂ ಇದು ಸಾಧ್ಯವಾದ ಕೆಲಸವಲ್ಲ. ಎಲೈ ಬ್ರಾಹ್ಮಣೋತ್ತಮನೆ! ದೇವತೆಗಳಂತೆ ಕಾಂತಿಯುಳ್ಳವನಾದರೂ ಯುದ್ಧದ ಸಂಗತಿಯನ್ನೇ ತಿಳಿಯದ, ಬಾಲಕನಾದ ಈ ರಾಮನನ್ನು ಎಂದಿಗೂ

ನಿನ್ನೊಡನೆ ನಾನು ಕಳುಹಿಸಲಾರೆನು ! ಇದೂ ಅಲ್ಲದೆ ಆ ಮಾರೀಚಸುಬಾಹು ಗಳೆಂಬ ರಾಕ್ಷಸರಿಬ್ಬರೂ ಸುಂದೋಪಸುಂದರ ಮಕ್ಕಳು. ಯುದ್ಧದಲ್ಲಿ ಯಮನಿಗೆ ಸಮಾನರಾದವರು. ಅಂತವರನ್ನು ಇದಿರಿಸುವುದಕ್ಕೆ ನನ್ನ ಮಗ ನನ್ನು ಎಂದಿಗೂ ಕಳುಹಿಸಲಾರೆನು. ಆ ರಾಕ್ಷಸರಿಬ್ಬರೂ ಬಹಳ ವೀರ್ಯ ವಂತರು. ಯುದ್ಧದಲ್ಲಿ ಮಹಾನಿಪುಣರು. ಇಂತವರಿಬ್ಬರೂ ಸೇರಿ ಬಂದಾಗ, ನನ್ನಿಂದಲೇ ಯುದ್ಧಮಾಡಲು ಸಾಧ್ಯವಲ್ಲ. ಒಂದುವೇಳೆ ಮಿತ್ರರಾದ ಅನೇಕ ರಾಜರನ್ನು ಸೇರಿಸಿಕೊಂಡು ಹೋಗಿ, ಅವರಲ್ಲಿ ಯಾವನಾದರೂ ಒಬ್ಬನೊಡನೆ ಮಾತ್ರ ಯುದ್ಧಕ್ಕೆ ನಿಂತರೆ, ಒಂದು ಕ್ಷಣಕಾಲದವರೆಗೆ ಹೋರಾಡಬಹುದು" ಎಂದನು. ಈ ಮಾತನ್ನು ಕೇಳಿದೊಡನೆ ಬ್ರಾಹ್ಮಣಶ್ರೇಷ್ಠನಾದ ವಿಶ್ವಾಮಿತ್ರನ ಮನಸ್ಸಿನಲ್ಲಿ ಸ್ವಲ್ಪಸ್ವಲ್ಪವಾಗಿ ಕೋಪವು ಅಂಕುರಿಸಿತು. ಕೊನೆಕೊನೆಗೆ ಯಜ್ಞ ಕುಂಡದಲ್ಲಿ ಆಜ್ಯಾಹುತಿಯನ್ನು ಮಾಡುವಾಗ ಮೇಲೆಮೇಲೆ ಜ್ವಾಲೆಗಳನ್ನು ಕೆದರುತ್ತಿರುವ ಹೋಮಾಗ್ನಿಯಂತೆ ಆ ಕೋಪಾಗ್ನಿಯು ಜ್ವಲಿಸಲಾರಂಭಿಸಿತು.

ಇಲ್ಲಿಗೆ ಇಪ್ಪತ್ತನೆಯ ಸರ್ಗವು.

ವಸಿಷ್ಠರು ವಿಶ್ವಾಮಿತ್ರನ ಮಹಿಮೆಯನ್ನು ತಿಳಿಸಿ ದಶರಥನನ್ನು ಸಮಾಧಾನಪಡಿಸಿದುದು

ಪುತ್ರಸ್ನೇಹದಿಂದ ದಶರಥನು ಸ್ಫುಟಾಕ್ಷರಗಳಿಲ್ಲದೆ ಹೇಳಿದ ವಾಕ್ಯ ವನ್ನು ಕೇಳಿ ವಿಶ್ವಾಮಿತ್ರನು ಬಹಳ ಕೋಪಗೊಂಡವನಾಗಿ, ಎಲೈ ರಾಜನೆ ! ನೀನು ನನ್ನ ಕೋರಿಕೆಯನ್ನು ನಡೆಸಿಕೊಡುವುದಾಗಿ ಮೊದಲೇ ವಾಗ್ದಾನ ಮಾಡಿರುವೆಯಲ್ಲವೆ ? ಈಗ ಆ ಮಾತಿಗೆ ತಪ್ಪುವಹಾಗೆ ತೋರುತ್ತಿದೆ. ಹೀಗೆ ಕೊಟ್ಟ ಭಾಷೆಗೆ ತಪ್ಪಿ ನಡೆಯುವುದು ರಘುವಂಶದ ದೊರೆಗಳಿಗೆ ಸಹಜವಲ್ಲ. ಎಲೈ ನರೇಂದ್ರನೆ ! ನಿನಗೆ ಇದೇ ಉಚಿತವೆಂದು ತೋರಿದ್ದರೆ, ಹಾಗೆಯೇ ನಡೆಸು ! ನಾನು ನನ್ನ ದಾರಿಯನ್ನು ಹಿಡಿದುಕೊಂಡು ಹೋಗುವೆನು ! ರಘುವಂಶದಲ್ಲಿ ಹುಟ್ಟಿದ ನೀನು, ಆಡಿದ ಮಾತಿಗೆ ತಪ್ಪಿದವನೆಂಬ ಅಪಖ್ಯಾತಿಗೀಡಾಗಿ ಬಂಧುಮಿತ್ರರೊಡನೆ ಸುಖವಾಗಿರು !" ಎಂದು ಆರ್ಭಟಿಸಿ ಮಾತಾಡಲು, ಕೋಪಾವೇಶದಿಂದ ಕೂಡಿದ ಆ ಮಹರ್ಷಿಯ ಮಾತಿಗೆ ಭೂಮಿಯೆಲ್ಲವೂ ನಡುಗಿತು. ದೇವತೆಗಳೆಲ್ಲರೂ ಹೆದರಿದರು. ಹೀಗೆ ಜಗ ತ್ತೆಲ್ಲವೂ ತತ್ತಳಿಸುತ್ತಿರುವುದನ್ನು ನೋಡಿ, ಮಹಾವ್ರತನಿಷ್ಠನಾದ ವಸಿಷ್ಠ

ಮಹರ್ಷಿಯು ರಾಜನನ್ನು ನೋಡಿ, ಗಂಭೀರಧ್ವನಿಯಿಂದ “ ಎಲೈ ಮಹಾ ರಾಜನೆ ! ನೀನು ಇಕ್ಷ್ವಾಕುವಂಶದಲ್ಲಿ ಹುಟ್ಟಿದವನು. ಬೇರೊಂದು ಧರ್ಮ ದೇವತೆಯೋ ಎಂಬಂತೆ ಲೋಕದಲ್ಲಿ ಖ್ಯಾತಿಯನ್ನು ಹೊಂದಿರುವೆ. ಯಾವ ವಿಪತ್ತುಗಳಲ್ಲಿಯೂ ಧೈರ್ಯವನ್ನು ಬಿಟ್ಟವನಲ್ಲ. ನೀನು ಮಹಾವ್ರತ ನಿಷ್ಠನು ! ಭಾಗ್ಯಶಾಲಿಯು ! ಇಂತಹ ನೀನೇ ಧರ್ಮವನ್ನು ಮೀರುವುದು ಉಚಿತವಲ್ಲ. ನಿನಗೆ ಮೂರು ಲೋಕಗಳಲ್ಲಿಯೂ ಧರ್ಮಾತ್ಮನೆಂಬ ಕೀರ್ತಿಯು ಪ್ರಖ್ಯಾತವಾಗಿರುವುದು. ಅಧರ್ಮಕ್ಕೆ ಪ್ರವರ್ತಿಸದೆ ಧರ್ಮವನ್ನೇ ಅನು ಸರಿಸು ! ಮೊದಲು ನೀನೇ ವಾಗ್ದಾನಮಾಡಿ, ಅದರಂತೆ ಈಗ ನಡೆಸದಿದ್ದರೆ, ಆಶಾಭಂಗವುಂಟುಮಾಡಿದಂತಾಗುವುದಿಲ್ಲವೆ ? ಇದರಿಂದ ಮೊದಲು ಮಾಡಿದ ಅಶ್ವಮೇಧಾದಿಯಾಗಗಳೂ, ವಾಪೀಕೂಪತಟಾಕಾದಿ ಧರ್ಮಗಳೂ ನಿಷ್ಫಲ ಗಳಾಗುವುವು. ಆದುದರಿಂದ ರಾಮನನ್ನು ಕಳುಹಿಸಿಬಿಡು. ರಾಮನಿಗೆ ಅಸ್ತ್ರ ದಲ್ಲಿ ಚೆನ್ನಾಗಿ ಪರಿಚಯವಿದ್ದರೂ ಅಥವಾ ಇಲ್ಲದಿದ್ದರೂ ಇವನನ್ನು ಜಯಿಸು ವುದು ರಾಕ್ಷಸರಿಂದ ಸಾಧ್ಯವಿಲ್ಲ ! ವಿಶ್ವಾಮಿತ್ರನು ಆತನಿಗೆ ರಕ್ಷಕನಾಗಿರುವಾಗ ಅಗ್ನಿಚಕ್ರದಿಂದ ಆವರಿಸಲ್ಪಟ್ಟ ಅಮೃತದಂತೆ ಸುರಕ್ಷಿತವಾಗಿರುವುದರಲ್ಲಿ ಏನೇನೂ ಸಂದೇಹವಿಲ್ಲ. ಈ ವಿಶ್ವಾಮಿತ್ರನು ಸಾಮಾನ್ಯನೆಂದು ತಿಳಿಯ ಬೇಡ ! ಧರ್ಮವೇ ಈ ರೀತಿಯಾಗಿ ಅವತರಿಸಿರುವುದು. ಈತನು ವೀರ್ಯ ವಂತರೊಳಗೆಲ್ಲಾ ಶ್ರೇಷ್ಠನು. ಬುದ್ಧಿಯಲ್ಲಿ ಈತನನ್ನು ಯಾರೂ ಮೀರರು. ತಪಸ್ಸುಗಳಿಗೆಲ್ಲಾ ಈತನೇ ಮುಖ್ಯಸ್ಥಾನವು. ಈತನು ಸಮಸ್ತಲೋಕ ಗಳಲ್ಲಿರುವ ಶಸ್ತ್ರಾಸ್ತ್ರಗಳನ್ನೂ ಚೆನ್ನಾಗಿ ಬಲ್ಲನು. ಈತನಿಗೆ ತಿಳಿದಿರುವ ಶಸ್ತ್ರಾಸ್ತ್ರಗಳನ್ನು ಮತ್ತೊಬ್ಬರೂ ಇದುವರೆಗೆ ತಿಳಿದಿಲ್ಲ. ಮುಂದಕ್ಕೂ ತಿಳಿಯ ಲಾರರು. ಹೆಚ್ಚಾಗಿ ಹೇಳಿದುದರಿಂದೇನು ! ದೇವಗಂಧರ್ವ ಕಿನ್ನರರೇ ಮೊದ ಲಾದ ದೇವತೆಗಳಲ್ಲಿಯಾಗಲಿ, ಋಷಿಗಳಲ್ಲಿಯಾಗಲಿ, ರಾಕ್ಷಸರಲ್ಲಿಯಾಗಲಿ ಯಾರೊಬ್ಬರೂ ಈತನಿಗೆ ತಿಳಿದಿರುವಷ್ಟು ಶಸ್ತ್ರಾಸ್ತ್ರಗಳನ್ನು ತಿಳಿದಿಲ್ಲ. ಪರಮ ಧಾರ್ಮಿಕರಾದ ಭೃಶಾಶ್ವನ ಮಕ್ಕಳೇ ಅಸ್ತ್ರರೂಪದಿಂದಿರುವರು. ಪೂರ್ವದಲ್ಲಿ ಈತನು ರಾಜ್ಯಭಾರ ಮಾಡುತ್ತಿರುವಾಗ, ಭೃಶಾಶ್ವನು ಅವೆಲ್ಲವನ್ನೂ ಈತನಿಗೆ ಕೊಟ್ಟನು. ಆ ಭೃಶಾಶ್ವನಿಗೆ ದಕ್ಷಪ್ರಜಾಪತಿಯ ಪುತ್ರಿಯರಿಬ್ಬರಲ್ಲಿ ಆ ಮಕ್ಕಳು ಹುಟ್ಟಿದರು. ಅವರು ಒಂದೇ ರೂಪದಲ್ಲಿರತಕ್ಕವರಲ್ಲ. ಮಹಾ ತೇಜಸ್ಸುಳ್ಳವರು. ಅವರಿದ್ದ ಕಡೆಯಲ್ಲಿ ಜಯವೆಂಬುದು ಸಿದ್ಧವು. ದಕ್ಷನಿಗೆ

ಜಯೆ, ಸುಪ್ರಭೆ ಎಂಬ ಪುತ್ರಿಯರಿಬ್ಬರಿದ್ದರು. ಅವರಿಬ್ಬರೂ ಮಹಾತೇಜಸ್ಸುಳ್ಳ ನೂರು ಶಸ್ತ್ರಾಸ್ತ್ರಗಳನ್ನು ಪ್ರಸವಿಸಿದರು. ಆ ಇಬ್ಬರು ಪುತ್ರಿಯರಲ್ಲಿ ಜಯೆಯೆಂಬುವಳು ರಾಕ್ಷಸರ ವಧಾರ್ಥವಾಗಿ ಐವತ್ತು ಮಕ್ಕಳನ್ನು ಹಡೆದಳು. ಅವರೆಲ್ಲರೂ ಇಷ್ಟಬಂದ ರೂಪವನ್ನು ಹೊಂದುವ ಶಕ್ತಿಯುಳ್ಳವರು. ಅದರಂತೆಯೇ ಸುಪ್ರಭೆಯೂ ಐವತ್ತು ಪುತ್ರರನ್ನು ಹಡೆದಳು. ಅವರನ್ನೂ ಯಾರೂ ಇದಿರಿಸಲಾರರು. ಆ ಅಸ್ತ್ರಗಳೆಲ್ಲವನ್ನೂ ಈ ವಿಶ್ವಾಮಿತ್ರನು ಚೆನ್ನಾಗಿ ತಿಳಿದಿರುವನು. ಅಷ್ಟು ಮಾತ್ರವೇ ಅಲ್ಲ. ಯಾರಿಗೂ ಇದುವರೆಗೆ ತಿಳಿಯದ ಹೊಸ ಶಸ್ತ್ರಗಳನ್ನು ಸೃಷ್ಟಿಸುವುದಕ್ಕೂ ಈತನಿಗೆ ಶಕ್ತಿಯುಂಟು. ಈ ವಿಶ್ವಾಮಿತ್ರನ ಶಕ್ತಿಯೂ, ತೇಜಸ್ಸೂ ಅಪಾರವಾದುದು. ಆದುದರಿಂದ "ಎಲೈ ರಾಜನೆ! ರಾಮನನ್ನು ಕಳುಹಿಸುವ ವಿಷಯದಲ್ಲಿ ಸ್ವಲ್ಪವೂ ಸಂದೇಹಪಡಬೇಡ. ಒಡನೆಯೇ ಕಳುಹಿಸಿಬಿಡು. ಈ ವಿಶ್ವಾಮಿತ್ರನು ತನ್ನ ಕೈಲಾಗದುದಕ್ಕಾಗಿ ನಿನ್ನ ಮಕ್ಕಳನ್ನು ಕರೆಯುವನೆಂದು ಸರ್ವಥಾ ತಿಳಿಯಬೇಡ! ಸಮಸ್ತ ಲೋಕಗಳನ್ನೂ ನಿಮಿಷಮಾತ್ರದಲ್ಲಿ ದಹಿಸಬಲ್ಲ ಶಕ್ತಿಯು ಈತನಲ್ಲಿರುವುದು. ರಾಕ್ಷಸರನ್ನು ನಿಗ್ರಹಿಸುವ ಶಕ್ತಿಯು ತನ್ನಲ್ಲಿದ್ದರೂ, ನಿನ್ನ ಮಕ್ಕಳ ಕ್ಷೇಮಕ್ಕಾಗಿಯೇ ಈತನು ಇಲ್ಲಿಗೆ ಬಂದು ನಿನ್ನನ್ನು ಯಾಚಿಸುತ್ತಿರುವನೆಂದು ತಿಳಿ" ಎಂದು ಅನೇಕ ವಿಧದಲ್ಲಿ ಬುದ್ಧಿವಾದವನ್ನು ಹೇಳಿದನು. ಈ ಮಾತನ್ನು ಕೇಳಿ, ದಶರಥನಿಗೆ ಮನಸ್ಸಿನ ಕಳವಳವು ಸ್ವಲ್ಪಮಟ್ಟಿಗೆ ತಗ್ಗಿ, ಸಂತೋಷವುಂಟಾಯಿತು. ಮುಖದಲ್ಲಿ ವಿಕಾಸವುಂಟಾಯಿತು. ಆಗ ವಿಶ್ವಾಮಿತ್ರನೊಡನೆ ರಾಮನನ್ನು ಕಳುಹಿಸಿಬಿಡುವುದಾಗಿ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು.

ಇಲ್ಲಿಗೆ ಇಪ್ಪತ್ತೊಂದನೆಯ ಸರ್ಗವು.

{ ವಿಶ್ವಾಮಿತ್ರನು ರಾಮಲಕ್ಷ್ಮಣರನ್ನು ಕರೆದುಕೊಂಡು ಹೋಗುತ್ತ, ಅವರಿಗೆ "ಬಲೆ, ಅತಿಬಲೆ" ಎಂಬ ಎರಡು ವಿದ್ಯೆಗಳನ್ನುಪದೇಶಿಸಿದುದು }

ವಸಿಷ್ಠನು ಹೇಳಿದ ಮಾತಿಗೆ ದಶರಥನು ಸಂತೋಷಿಸಿ, ಲಕ್ಷ್ಮಣನೊಡನೆ ರಾಮನನ್ನು ಕರೆದುಕೊಂಡು ಬರುವಹಾಗೆ ದೂತರನ್ನು ಕಳುಹಿಸಿ ಕರೆಸಿದನು. ತಾಯಿತಂದೆಗಳಿಬ್ಬರೂ ಆ ರಾಮನಿಗೆ ಮಂಗಳಕಾರ್ಯಗಳನ್ನು ನಡೆಸಿದರು. ಪುರೋಹಿತನಾದ ವಸಿಷ್ಠನೂ ಕೂಡ ಸ್ವಸ್ತಿವಾಕ್ಯಗಳಿಂದ ಅಭಿ

ಮಂತ್ರಿಸಿದನು. ಆಮೇಲೆ ದಶರಥನು ಪ್ರಿಯಪುತ್ರನಾದ ಆ ರಾಮನನ್ನು ಸಮೀಪಕ್ಕೆ ಕರೆದು, ಶಿರಸ್ಸಿನಲ್ಲಿ ಆಘ್ರಾಣಿಸಿ, ಸಂತೋಷಪೂರ್ವಕವಾಗಿ ಅವರಿಬ್ಬರನ್ನೂ ವಿಶ್ವಾಮಿತ್ರನ ವಶಕ್ಕೊಪ್ಪಿಸಿಬಿಟ್ಟನು. ತಾವರೆಯಂತೆ ಕಣ್ಣುಳ್ಳ ಆ ರಾಮನು ವಿಶ್ವಾಮಿತ್ರನನ್ನು ಸೇರಿದ ಕೂಡಲೇ ಗಾಳಿಯು ಧೂಳಿಲ್ಲದೆಯೂ, ಸುಖಸ್ಪರ್ಶವುಳ್ಳದಾಗಿಯೂ ಬೀಸಲಾರಂಭಿಸಿತು. ದೇವ ದುಂದುಭಿಧ್ವನಿಗಳೊಡನೆ ದೊಡ್ಡ ಪುಷ್ಪವೃಷ್ಟಿಯುಂಟಾಯಿತು. ಇವರು ಅಯೋಧ್ಯಾಪಟ್ಟಣವನ್ನು ಬಿಟ್ಟು ಹೊರಡುವಾಗ ಮಂಗಳಾರ್ಥವಾಗಿ ಶಂಖ ದುಂದುಭಿ ಮೊದಲಾದ ಶುಭವಾದ್ಯಗಳು ವಾದಿಸಲ್ಪಟ್ಟುವು. ವಿಶ್ವಾಮಿತ್ರನು ಮುಂದೆ ಹೋಗುತ್ತಿರಲು, ಆತನ ಹಿಂದೆ ಧನುರ್ಧಾರಿಯಾಗಿ ರಾಮನು ಹೊರಟನು. ಈ ರಾಮನ ಹಿಂದೆ ಬೇರೊಂದು ಧನುಸ್ಸನ್ನು ತೆಗೆದುಕೊಂಡು ಲಕ್ಷ್ಮಣನೂ ಹೊರಟನು. ಹೀಗೆ ರಾಮಲಕ್ಷ್ಮಣರಿಬ್ಬರೂ ಧನುಷ್ಪಾಣಿಗಳಾಗಿ, ಬಾಲಶಿಖೆಗಳುಳ್ಳವರಾಗಿ, ಒಬ್ಬೊಬ್ಬರೂ ಭುಜದ ಹಿಂದೆ ಎರಡೆರಡು ಬತ್ತಳಿಕೆಗಳನ್ನು ಧರಿಸಿ ಹೋಗುತ್ತಿರುವಾಗ, ಮೂರು ಹೆಡೆಯ ಸರ್ಪಗಳಂತೆ ಪ್ರಕಾಶಿಸುತ್ತಿದ್ದರು. ಅತಿಶಯವಾದ ರೂಪವೀರ್ಯಾದಿಗಳಿಂದ ಶೋಭಿಸುತ್ತಿರುವ ಈ ಬಾಲಕರಿಬ್ಬರೂ ಬ್ರಹ್ಮನನ್ನು ಹಿಂಬಾಲಿಸಿ ಹೋಗುವ ಅಶ್ವಿನೀ ದೇವತೆಗಳಂತೆ ವಿಶ್ವಾಮಿತ್ರನನ್ನು ಹಿಂಬಾಲಿಸಿ ಹೋಗುತ್ತಿದ್ದರು. ಹೀಗೆ ಧನುಸ್ಸನ್ನು ಹಿಡಿದು, ಚೆನ್ನಾಗಿ ಅಲಂಕರಿಸಿಕೊಂಡು, ಉಡುವಿನ ಚರ್ಮದಿಂದ ಮಾಡಲ್ಪಟ್ಟ ಕೈಚೀಲಗಳನ್ನಿಟ್ಟುಕೊಂಡು, ಖಡ್ಗಗಳನ್ನು ಧರಿಸಿ ಮಹಾ ಕಾಂತಿಯುಳ್ಳವರಾಗಿ, ಸರ್ವೋತ್ತಮವಾದ ದೇಹಸೌಂದರ್ಯವುಳ್ಳ ಈ ರಾಮಲಕ್ಷ್ಮಣರೆಂಬ ಒಡಹುಟ್ಟಿದ ಬಾಲಕರಿಬ್ಬರೂ ವಿಶ್ವಾಮಿತ್ರನನ್ನು ಹಿಂಬಾಲಿಸಿ ಹೋಗುತ್ತಿರುವಾಗ, ಎಣೆಯಿಲ್ಲದ ಮಹಿಮೆಯುಳ್ಳ ರುದ್ರನನ್ನು ಹಿಂಬಾಲಿಸಿ ಹೋಗುತ್ತಿರುವ ಅಗ್ನಿಪುತ್ರರಾದ [1]ಸ್ಕಂದವಿಶಾಖರಂತೆ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದರು.

---

1. "ತತೋಽಭವಚ್ಚತುರ್ಮೂರ್ತಿಃ ಕ್ಷಣೇನ ಭಗವಾನ್ ಪ್ರಭುಃ | ಸ್ಕಂದೋ ವಿಶಾಖಶ್ಯಾಕಚ್ಚ ನೈಗಮೇಶಶ್ಚ ಪೃಷ್ಠತಃ ||" ಇತ್ಯಾದಿ ಭಾರತ ವಚನ ಪ್ರಕಾರವಾಗಿ ಷಣ್ಮುಖನು ನಾಲ್ಕು ರೂಪಗಳನ್ನು ಧರಿಸಿರುವನೆಂದು ತಿಳಿಯಬೇಕು.

ಹೀಗೆ ಈ ಮೂವರೂ ಒಂದೂವರೆ ಯೋಜನದೂರದವರೆಗೆ ನಡೆದು, ಸರಯೂನದಿಯ ದಕ್ಷಿಣತೀರವನ್ನು ಸೇರಿದಮೇಲೆ ವಿಶ್ವಾಮಿತ್ರನು ಇಂಪಾದ ಧ್ವನಿಯಿಂದ "ರಾಮಾ!" ಎಂದು ಸಮೀಪಕ್ಕೆ ಕರೆದು, "ಎಲೈ ವತ್ಸನೆ! ಇದೋ! ಇಲ್ಲಿ ನೀರಿರುವುದು! ಶುದ್ಧಾಚಮನವನ್ನು ಮಾಡು! ಸಾವಕಾಶ ಮಾಡಬೇಡ. ಬಲೆ, ಅತಿಬಲೆ ಎಂಬ ಎರಡು ಮಂತ್ರಗಳನ್ನು ನಾನು ಉಪ ದೇಶಿಸುವೆನು. ಅದನ್ನು ಸ್ವೀಕರಿಸು. ಇದರಿಂದ ನಿನಗೆ ಬಳಲಿಕೆಯಾಗಲಿ, ತಾಪವಾಗಲಿ ತೋರದು! ನಿನ್ನ ರೂಪವೂ ಮಾರ್ಪಡದು. ನೀನು ಮಲಗಿರುವ ಕಾಲದಲ್ಲಿಯಾಗಲಿ, ಅಜಾಗ್ರತೆಯಿಂದಿರುವ ಕಾಲದಲ್ಲಿಯಾಗಲಿ ರಾಕ್ಷಸರು ನಿನ್ನನ್ನು ಇದಿರಿಸಲಾರರು. ಈ ಮಂತ್ರೋಪದೇಶವನ್ನು ಹೊಂದಿದಮೇಲೆ ಭೂಲೋಕದಲ್ಲಿ ನಿನಗೆ ಸಮಾನವಾದ ವೀರ್ಯವುಳ್ಳವನೊಬ್ಬನೂ ಇರನು! ಹೆಚ್ಚಾಗಿ ಹೇಳಿದುದರಿಂದೇನು? ಎಲೈ ರಾಮನೆ! ಈ ಮಂತ್ರೋಪದೇಶ ದಿಂದ ಸೌಂದರ್ಯದಲ್ಲಿಯಾಗಲಿ, ಸಾಮರ್ಥ್ಯದಲ್ಲಿಯಾಗಲಿ, ಬುದ್ಧಿಸೂಕ್ಷ್ಮತೆ ಯಲ್ಲಿಯಾಗಲಿ, ಯುಕ್ತಾಯುಕ್ತವಿವೇಚನೆಯಲ್ಲಿಯಾಗಲಿ, ಉತ್ತರಪ್ರತ್ಯು ತ್ತರಗಳಲ್ಲಿಯಾಗಲಿ ನಿನಗೆ ಸಮಾನನಾದವನು ಮೂರು ಲೋಕಗಳಲ್ಲಿಯೂ ಸಿಕ್ಕನು. ಸಮಸ್ತಜ್ಞಾನಕ್ಕೂ ತಾಯಿಯಂತಿರುವ ಬಲೆ, ಅತಿಬಲೆಯೆಂಬ ಎರಡು ವಿದ್ಯೆಗಳನ್ನೂ ನೀನು ಉಪದೇಶಹೊಂದಿದುದೇ ಆದರೆ ನಿನ್ನನ್ನು ಮೀರಿಸತಕ್ಕವರೊಬ್ಬರೂ ಇರರು. ದಾರಿ ನಡೆಯುತ್ತಿರುವಾಗ ಈ ಮಂತ್ರ ಗಳನ್ನು ಹೇಳುತ್ತಿದ್ದರೆ ಹಸಿವು ಬಾಯಾರಿಕೆಗಳೊಂದೂ ತೋರವು. ಇವು ಗಳನ್ನು ಅಧ್ಯಯನಮಾಡುವುದರಿಂದ ನೀನು ಎಣೆಯಿಲ್ಲದ ಕೀರ್ತಿಗೆ ಪಾತ್ರ ನಾಗುವೆ. ಈ ಎರಡು ವಿದ್ಯೆಗಳೂ ಸಾಕ್ಷಾತ್ಪರಬ್ರಹ್ಮನಿಂದಲೇ ಸೃಷ್ಟಿ ಸಲ್ಪಟ್ಟವುಗಳಾದುದರಿಂದ ಮಹಾಮಹಿಮೆಯುಳ್ಳವುಗಳಾಗಿರುವುವು. ನೀನು ಕಕುತ್‌ಸ್ಥ ವಂಶದಲ್ಲಿ ಹುಟ್ಟಿದವನಾಗಿಯೂ, ಧಾರ್ಮಿಕನಾಗಿಯೂ ಇರುವುದ ರಿಂದ, ಇವುಗಳನ್ನು ಉಪದೇಶಹೊಂದುವುದಕ್ಕೆ ನೀನೇ ಅರ್ಹನು. ಹಿಂದೆ ಹೇಳಿದ ಗುಣಗಳೆಲ್ಲವೂ ಮೊದಲೇ ನಿನ್ನಲ್ಲಿ ಸ್ವಾಭಾವಿಕವಾಗಿದ್ದರೂ, ತಪಸ್ಸಿ ನಿಂದ ಸಂಪಾದಿಸಲ್ಪಟ್ಟ ಈ ವಿದ್ಯೆಗಳು ಅವುಗಳನ್ನೇ ಅನೇಕ ಗುಣವಾಗಿ ಹೆಚ್ಚಿಸುವುವು" ಎಂದನು.

ಇದನ್ನು ಕೇಳಿ ರಾಮನು ಸಂತೋಷವುಳ್ಳವನಾಗಿ ಶುದ್ಧಾಚಮನವನ್ನು ಮಾಡಿ, ಮಹಾತ್ಮನಾದ ವಿಶ್ವಾಮಿತ್ರನಿಂದ ಆ ಎರಡು ವಿದ್ಯೆಗಳನ್ನೂ ಗ್ರಹಿಸಿ

ದನು. ಹೀಗೆ ರಾಮನು ಆ ಎರಡು ವಿದ್ಯೆಗಳನ್ನೂ ಉಪದೇಶಹೊಂದಿದಮೇಲೆ ಸಹಸ್ರಕಿರಣಗಳುಳ್ಳ ಸೂರ್ಯನು ಶರತ್ಕಾಲದಲ್ಲಿ ಹೇಗೆ ಪ್ರಕಾಶಿಸುವನೋ ಹಾಗೆ ಮಹಾತೇಜಸ್ಸುಳ್ಳವನಾಗಿ ಪ್ರಕಾಶಿಸುತ್ತಿದ್ದನು. ಆಮೇಲೆ ಶ್ರೀರಾಮ ಲಕ್ಷ್ಮಣರಿಬ್ಬರೂ ಆ ವಿಶ್ವಾಮಿತ್ರನಿಗೆ ಬೇಕಾದ ಶುಶ್ರೂಷೆಗಳನ್ನು ಮಾಡುತ್ತಾ, ಸರಯೂನದೀ ತೀರದಲ್ಲಿಯೇ ಆ ರಾತ್ರಿಯನ್ನು ಸುಖವಾಗಿ ಕಳೆದರು. ಹೀಗೆ ಚಕ್ರವರ್ತಿಯ ಹೊಟ್ಟೆಯಲ್ಲಿ ಹುಟ್ಟಿದ ಈ ರಾಮಲಕ್ಷ್ಮಣರಿಬ್ಬರೂ ತಮಗೆ ಯೋಗ್ಯವಲ್ಲದ ಹುಲ್ಲಿನ ಹಾಸಿಗೆಯಲ್ಲಿ ಮಲಗಿದ್ದರೂ, ಆ ವಿಶ್ವಾಮಿತ್ರನ ಮಾತುಗಳಿಂದ ಲಾಲಿಸಲ್ಪಟ್ಟ ಅವರಿಗೆ ಆ ರಾತ್ರಿಯು ಸುಖವಾಗಿಯೇ ಕಳೆಯಿತು.

ಇಲ್ಲಿಗೆ ಇಪ್ಪತ್ತೆರಡನೆಯ ಸರ್ಗವು.

ವಿಶ್ವಾಮಿತ್ರನು ಅಂಗದೇಶದ ವೃತ್ತಾಂತವನ್ನು ತಿಳಿಸಿದುದು.

ಹೀಗೆ ರಾತ್ರಿಯು ಕಳೆದು ಬೆಳಗಾಗುತ್ತಬರಲು, ವಿಶ್ವಾಮಿತ್ರನು [1]ಎಲೆಯ ಹಾಸಿಗೆಯಮೇಲೆ ಮಲಗಿರುವ ರಾಮಲಕ್ಷ್ಮಣರನ್ನು ಕುರಿತು, [2]"ಎಲೈ ಕೌಸಲ್ಯೆಯ ಸುಪುತ್ರನಾದ ರಾಮನೆ! ಪ್ರಾತಸ್ಸಂಧ್ಯಾಕಾಲವು

---

1. ಹಿಂದಿನ ಸರ್ಗದಲ್ಲಿ ಹುಲ್ಲಿನ ಹಾಸಿಗೆಯೆಂದು ಹೇಳಿ ಇಲ್ಲಿ ಪರ್ಣ ಶಯ್ಯೆಯೆಂದು ಹೇಳಿದುದು ವಿರುದ್ಧವಾಗಿ ತೋರಿದರೂ, ಹುಲ್ಲು, ಎಲೆ, ಇವೆರಡನ್ನೂ ಸೇರಿಸಿಮಾಡಿದ ಹಾಸಿಗೆಯೆಂದು ಗ್ರಹಿಸಬೇಕು.

2. ಈ ವಾಕ್ಯಕ್ಕೆ "ಕೌಸಲ್ಯಾಸುಪ್ರಜಾ ರಾಮ ಪೂರ್ವಾ ಸಂಧ್ಯಾ ಪ್ರವರ್ತತೇ | ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್ ||" ಎಂಬುದೇ ಮೂಲವು. ಮಲಗಿದ್ದ ರಾಮಲಕ್ಷ್ಮಣರಿಬ್ಬರನ್ನೂ ಎಚ್ಚರಗೊಳಿಸು ವುದಕ್ಕಾಗಿ ಬಂದ ವಿಶ್ವಾಮಿತ್ರನು, ಸುಖಸುಪ್ತನಾಗಿದ್ದ ಆ ರಾಮನ ಸೌಂದರ್ಯಾತಿಶಯವನ್ನು ನೋಡಿ ಮರುಳಾಗಿ, ತಾನು ಬಂದ ಕಾರ್ಯ ವನ್ನೇ ಮರೆತು, "ಆಹಾ! ಇಂತಹ ಸತ್ಪುತ್ರನನ್ನು ಪಡೆದ ಆ ಕೌಸಲ್ಯಾ ದೇವಿಯು ಏನು ಪುಣ್ಯವನ್ನು ಮಾಡಿದ್ದಳೋ" ಎಂದು ಆಶ್ಚರ್ಯಪಡುತ್ತಿದ್ದ ನೆಂದು ಭಾವವು. (ರಾಮ) ಸೌಂದರ್ಯಾತಿಶಯದಿಂದ ಲೋಕವೆಲ್ಲವನ್ನೂ ಸಂತೋಷಪಡಿಸತಕ್ಕವನೇ! (ಕೌಸಲ್ಯಾ) ನಿನ್ನ ತಾಯಿಯಾದ ಕೌಸಲ್ಯೆಯು (ಸುಪ್ರಜಾಃ) ನಿನ್ನಂತಹ ಸುಪುತ್ರನನ್ನು ಪಡೆದ ಮಹಾಭಾಗ್ಯಶಾಲಿನಿ ಯಲ್ಲವೆ? ಎಂದು ತನ್ನಷ್ಟಕ್ಕೆ ತಾನೇ ಮನಸ್ಸಿನಲ್ಲಿ ಹಿಗ್ಗುತ್ತಿರುವನೆಂದು

ಪ್ರಾಪ್ತವಾಯಿತು. ಎಲೈ ಪುರುಷಶಾರ್ದೂಲನೆ! ಏಳು! ದೇವತಾರಾಧನೆ ಮೊದಲಾದ ಆಹ್ನಿಕಕೃತ್ಯಗಳನ್ನು ನಡೆಸಬೇಕಾಗಿರುವುದು" ಎಂದನು. ಹೀಗೆ ವಿಶ್ವಾಮಿತ್ರನು ಹೇಳಿದ ಗಂಭೀರವಾದ ಮಾತನ್ನು ಕೇಳಿ, ಆ ಬಾಲಕರಿಬ್ಬರೂ ಒಡನೆಯೇ ಎದ್ದು ಸ್ನಾನಮಾಡಿ, ಅರ್ಘ್ಯವನ್ನು ಬಿಟ್ಟು ಗಾಯತ್ರೀಮಂತ್ರ ಜಪವನ್ನು ಮಾಡಿದರು. ಇನ್ನೂ ಮಾಡಬೇಕಾದ ಆಹ್ನಿಕಗಳೆಲ್ಲವನ್ನೂ ತೀರಿಸಿಕೊಂಡಮೇಲೆ, ತಪೋನಿಧಿಯಾದ ಆ ವಿಶ್ವಾಮಿತ್ರನಿಗೆ ನಮಸ್ಕರಿಸಿ, ಸಂತೋಷದಿಂದ ಮುಂದಕ್ಕೆ ಪ್ರಯಾಣ ಮಾಡಿದರು.

ಅಭಿಪ್ರಾಯವು. ಅಥವಾ (ಕೌಸಲ್ಯಾಸುಪ್ರಜಾಃ) ಕೌಸಲ್ಯೆಯ ಸುಪುತ್ರನಾದ (ರಾಮ) ಎಲೈ ರಾಮನೆ! ಎಂದು ರಾಮಶಬ್ದಕ್ಕೆ ವಿಶೇಷಣವನ್ನಾಗಿಮಾಡಿ ಸಂಬೋಧಿಸಿದುದಾಗಿಯೂ ಹೇಳಬಹುದು. ರಾಮನು ಕೌಸಲ್ಯಾ ದಶರಥ ರಿಬ್ಬರಿಗೂ ತಪಃಫಲವಾಗಿ ಅವತರಿಸಿರುವಾಗ, ಇಲ್ಲಿ ಕೌಸಲ್ಯೆಯನ್ನು ಮಾತ್ರ ಹೇಳಿದುದೇಕೆಂದರೆ, "ಮಾತೃದೇವೋ ಭವ, ಪಿತೃದೇವೋ ಭವ" ಎಂದು ಮೊದಲು ತಾಯಿಯನ್ನೇ ಪ್ರಧಾನವಾಗಿ ಹೇಳಿರುವುದರಿಂದಲೂ, "ಪಿತುಶ್ಶತ-ಗುಣಂ ಮಾತಾ" ಎಂಬ ಸ್ಮೃತಿಗನುಸಾರವಾಗಿಯೂ, ಕೌಸಲ್ಯೆಯ ಹೆಸರನ್ನೇ ಇಲ್ಲಿ ಹೇಳಿರುವುದೆಂದು ಗ್ರಹಿಸಬೇಕು. ಇದಲ್ಲದೆ ವಿಶ್ವಾಮಿತ್ರನು "ಅಹಂ ವೇದ್ಮಿ ಮಹಾತ್ಮಾನಂ" ಎಂದು ಶ್ರೀರಾಮನ ಪರತ್ವವನ್ನು ಅನೇಕ ವಿಧದಲ್ಲಿ ದಶರಥನಿಗೆ ತಿಳಿಸಿದರೂ, ದಶರಥನು ಅಜ್ಞತೆಯಿಂದ ರಾಮನನ್ನು ತನ್ನ ಮಗ ನೆಂದು ಭ್ರಾಂತಿಪಟ್ಟು ತನ್ನ ಸಂಗಡ ಕಳುಹಿಸಲಾರದೆ, ಕೊನೆಗೆ ವಸಿಷ್ಠರ ಮಾತಿನಮೇಲೆ ಕಳುಹಿಸಿಕೊಟ್ಟನು. ಕೌಸಲ್ಯೆಯು ರಾಮನಲ್ಲಿ ವಿಶೇಷ ವಾತ್ಸಲ್ಯವುಳ್ಳವಳಾಗಿದ್ದರೂ, ಆತನನ್ನು ತನ್ನೊಡನೆ ಕಳುಹಿಸಿಕೊಡುವ ಆ ವಿಷಯದಲ್ಲಿ ಹಿಂಜರಿಯದೆ, ಅತ್ಯಾದರವನ್ನೇ ತೋರಿಸುತ್ತಿದ್ದಳಾದುದರಿಂದ ಕೌಸಲ್ಯೆಯ ಗುಣಾತಿಶಯಕ್ಕಾಗಿ ವಿಶ್ವಾಮಿತ್ರನು ಸಂತೋಷಿಸಿ, ಅದನ್ನೇ ಇಲ್ಲಿ ಕೊಂಡಾಡುತ್ತಿದ್ದನೆಂದೂ ತಿಳಿಯಬೇಕು. ತಂದೆತಾಯಿಗಳ ಮಾತನ್ನು ಮೀರಬಾರದೆಂಬ ಧರ್ಮವನ್ನು ಲೋಕಕ್ಕೆ ತಿಳಿಸುವುದಕ್ಕಾಗಿ, ತಾನೇ ಅದನ್ನು ಮೊದಲು ಆಚರಿಸಿ ತೋರಿಸಿದನೆಂಬುದಕ್ಕಾಗಿ "ಸುಪ್ರಜಾಃ" ಎಂಬ ವಿಶೇಷಣವು ಉಪಯೋಗಿಸಲ್ಪಟ್ಟಿರುವುದು. (ಪೂರ್ವಾ ಸಂಧ್ಯಾ ಪ್ರವರ್ತತೇ) ನೀನು ಕೌಸಲ್ಯೆಗೆ ಪುತ್ರನಾಗಿ ಹುಟ್ಟಿ, ಅವಳ ಶುಶ್ರೂಷೆಯನ್ನು ಮಾಡು ವಂತೆಯೇ ಈ ಪೂರ್ವಸಂಧ್ಯೆಯನ್ನೂ ಉಪಚರಿಸುವವನಾಗೆಂದು ಭಾವವು. ಮತ್ತು ಸೂರ್ಯನಿಗೆ ಮಂದೇಹಾದಿ ರಾಕ್ಷಸರನ್ನು ಕೊಲ್ಲುವುದಕ್ಕೆ ಇದು

ಸ್ವಲ್ಪದೂರ ಹೋದಮೇಲೆ ಮಂಗಳಕರವಾದ ಸರಯೂ ಸಂಗಮದಲ್ಲಿ ಗಂಗಾನದಿಯನ್ನು ಕಂಡರು. ಅಲ್ಲಿ ಅನೇಕ ವರ್ಷಗಳಿಂದ ಉಗ್ರವಾದ ತಪಸ್ಸನ್ನು ಮಾಡುತ್ತಿದ್ದ ಮಹಾತೇಜಸ್ವಿಗಳಾದ ಋಷಿಗಳ ಆಶ್ರಮಗಳನ್ನು ನೋಡಿ, ವಿಶ್ವಾಮಿತ್ರನನ್ನು ಕುರಿತು "ಎಲೈ ಮಹರ್ಷಿಯೆ! ಇದು ಯಾರ ಆಶ್ರಮವು? ಇದರಲ್ಲಿ ವಾಸಮಾಡುತ್ತಿರುವ ಮಹಾತ್ಮರಾರು? ಇದನ್ನು ಕೇಳಬೇಕೆಂಬ ಕುತೂಹಲವು ನಮಗೆ ಬಹಳವಾಗಿರುವುದು" ಎಂದರು, ಇದನ್ನು ಕೇಳಿ ವಿಶ್ವಾಮಿತ್ರನು ಸ್ವಲ್ಪ ನಕ್ಕು "ಎಲೈ ರಾಮನೆ! ಇದು ಯಾರ ಆಶ್ರಮವೆಂಬುದನ್ನು ಹೇಳುವೆನು ಕೇಳು. ಪೂರ್ವದಲ್ಲಿ [1]ಕಾಮನೆಂದು ವಿದ್ವಾಂಸರಿಂದ ಕರೆಯಲ್ಪಡುತ್ತಿದ್ದ ಕಂದರ್ಪನು ದೇಹದೊಡಗೂಡಿಯೇ ಇರುತ್ತಿದ್ದನು. ಒಂದಾನೊಂದು ಕಾಲದಲ್ಲಿ ಮಹಾತ್ಮನಾದ ಶಿವನು ಪಾರ್ವತಿಯನ್ನು ವಿವಾಹಮಾಡಿಕೊಂಡು ನಿಯಮದೊಡನೆ ತಪಸ್ಸು ಮಾಡುತ್ತಿದ್ದು, ದೇವತೆಗಳೊಡಗೂಡಿ ಈ ಆಶ್ರಮಕ್ಕೆ ಬರುತ್ತಿರಲು, ಆಗ ದುಷ್ಟನಾದ ಮನ್ಮಥನು ಆತನನ್ನು ಇದಿರಿಸಿದನು. ಆಗ ರುದ್ರನು ಕೋಪಗೊಂಡು ಹುಂಕಾರಮಾಡಿ ಧಿಕ್ಕರಿಸುತ್ತಾ, ತನ್ನ ಫಾಲನೇತ್ರದಿಂದ ನೋಡಲು, ಆ ಮನ್ಮಥನ ಅವಯವಗಳೆಲ್ಲವೂ ದಹಿಸಲ್ಪಟ್ಟುವು. ಹೀಗೆ ರುದ್ರನ ಹಣೆಗಣ್ಣಿನಿಂದ ಸುಡಲ್ಪಟ್ಟ ಆ ಮನ್ಮಥನಿಗೆ ಅದು ಮೊದಲು ಅನಂಗನೆಂಬ ಹೆಸರುಂಟಾಯಿತು. ಮನ್ಮಥನು ಇಲ್ಲಿ ತನ್ನ ದೇಹವನ್ನು ಬಿಟ್ಟುದರಿಂದಲೇ ಇದಕ್ಕೆ

ಹೇಗೆ ತಕ್ಕಸಮಯವೋ, ಹಾಗೆಯೇ ನಿನಗೂ ಶತ್ರುನಿಗ್ರಹಕ್ಕೆ ತಕ್ಕ ಸಮಯವೆಂದೂ ಭಾವವು. (ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್) ಎಂಬಲ್ಲಿ, ಸಾಕ್ಷಾತ್ಪರಬ್ರಹ್ಮಸ್ವರೂಪನಾದ ನಿನಗೆ ಉಪಾಸನೆ ಮಾಡಬೇಕಾದ ವಸ್ತುವು ಬೇರೊಂದೂ ಇಲ್ಲದಿದ್ದರೂ "ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇ-ತರೇ ಜನಾಃ" ಎಂಬಂತೆ ಇತರ ಜನರಿಗೆ ದಾರಿತೋರಿಸುವುದಕ್ಕಾಗಿಯಾದರೂ, ಪುರುಷಶ್ರೇಷ್ಠನಾದ ನೀನೂ ಈ ಸಂಧ್ಯೋಪಾಸನೆಯನ್ನು ಮಾಡಬೇಕೆಂದು ಭಾವವು. ಅಥವಾ ದೇವತೆಗಳಿಗೂ, ಭೂದೇವತೆಗಳಾದ ಬ್ರಾಹ್ಮಣರಿಗೂ ಕ್ಷೇಮಾರ್ಥವಾಗಿ ಮಾಡಬೇಕಾದ ರಾಕ್ಷಸವಧರೂಪವಾದ ಕರ್ಮವನ್ನು ನಡೆಸಬೇಕಾದುದರಿಂದ ಏಳೆಂದೂ ಅಭಿಪ್ರಾಯವು.

1. ಕಂದರ್ಪನೆಂದರೆ ಕುತ್ಸಿತವಾದ ದರ್ಪವು. ಇದನ್ನೇ ಕಾಮವೆನ್ನುವರು. ಇದಕ್ಕೆ ಮೊದಲು ಆಕಾರವಿತ್ತು.

ಅಂಗದೇಶವೆಂಬ ಹೆಸರು ಬಂದಿರುವುದು. ಆ ರುದ್ರನ ಆಶ್ರಮವೇ ಇದು! ಇಲ್ಲಿರತಕ್ಕ ಋಷಿಗಳೆಲ್ಲರೂ ಬಹುಕಾಲದಿಂದಲೂ ಆತನ ಶಿಷ್ಯರಾಗಿದ್ದರು. ಇವರೆಲ್ಲರೂ ಯಾವಾಗಲೂ ಧರ್ಮದಲ್ಲಿಯೇ ಇರತಕ್ಕವರು. ಅವರಿಗೆ ಪಾಪ ವೆಂಬುದರ ಸಂಪರ್ಕವೇ ಇಲ್ಲ. ಎಲೈ ರಾಮನೆ! ಎರಡು ಪುಣ್ಯನದಿಗಳ ನಡುವೆ ಇರುವ ಈ ಆಶ್ರಮದಲ್ಲಿಯೇ ಈ ರಾತ್ರಿಯನ್ನು ಕಳೆದು, ನಾಳೆ ನದಿ ಯನ್ನು ದಾಟಿ ಮುಂದೆ ಪ್ರಯಾಣ ಮಾಡೋಣ. ಇನ್ನು ಸ್ನಾನಮಾಡಿ, ಜಪಗಳನ್ನು ನಡೆಸಿ, ಹವ್ಯಕಾರ್ಯಗಳನ್ನು ತೀರಿಸಿಕೊಂಡು, ಪರಿಶುದ್ಧವಾದ ಈ ಆಶ್ರಮಕ್ಕೆ ಹೋಗಿ ಋಷಿಗಳನ್ನು ದರ್ಶನಮಾಡುವೆವು ಎಂದನು. ಹೀಗೆ ಇವರು ಮಾತಾಡುತ್ತಿರುವುದನ್ನು ಆ ಆಶ್ರಮದಲ್ಲಿದ್ದ ಋಷಿಗಳು, ತಮ್ಮ ತಪೋಮಹಿಮೆಯಿಂದುಂಟಾದ ಜ್ಞಾನದೃಷ್ಟಿಯಿಂದಲೇ ತಿಳಿದವರಾಗಿ, ಮನಸ್ಸಿನಲ್ಲಿ ಸಂತೋಷಪಟ್ಟು, ವಿಶ್ವಾಮಿತ್ರನಿರುವ ಸ್ಥಳಕ್ಕೆ ಬಂದು ಮೊದಲು ಈ ಮಹರ್ಷಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು, ಆಮೇಲೆ ರಾಮಲಕ್ಷ್ಮಣ ರಿಗೂ ಕ್ರಮವಾಗಿ ಯಥೋಚಿತವಾದ ಆತಿಥ್ಯವನ್ನು ಮಾಡಿದರು. ಆಗ ಒಬ್ಬರಿಗೊಬ್ಬರು ಕುಶಲಪ್ರಶ್ನೆಯನ್ನು ಮಾಡಿ, ಎಲ್ಲರೂ ಕಲೆತು ವಿನೋದ ವಾದ ಮಾತುಗಳನ್ನಾಡುತ್ತಿದ್ದರು. ಸಾಯಂಕಾಲವಾದ ಮೇಲೆ [1]ಶಕ್ತ್ಯನುಸಾರ ವಾಗಿ ಜಪಗಳನ್ನು ಮುಗಿಸಿದರು. ಆಮೇಲೆ ಆ ಋಷಿಗಳೆಲ್ಲರೂ ಅತಿಥಿಗಳಾಗಿ ಬಂದ ಈ ಮೂವರನ್ನೂ ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋಗಲು, ಆ ಕಾಮಾಶ್ರಮದಲ್ಲಿಯೇ ಎಲ್ಲರೂ ಆ ರಾತ್ರಿಯನ್ನು ಕಳೆಯುತ್ತ ಸುಖವಾಗಿ ದ್ದರು. ಋಷಿಶ್ರೇಷ್ಠನಾದ [2]ವಿಶ್ವಾಮಿತ್ರನೂ ಕೂಡ ಅಲ್ಲಿ ರಾಮಲಕ್ಷ್ಮಣರಿಗೆ ಆ ಆಶ್ರಮದ ಮಹಿಮೆಯನ್ನು ಕುರಿತು ರಮಣೀಯವಾದ ಕಥೆಗಳನ್ನು ಹೇಳುತ್ತಾ ವಿನೋದಪಡಿಸುತ್ತಿದ್ದನು.

ಇಲ್ಲಿಗೆ ಇಪ್ಪತ್ತಮೂರನೆಯ ಸರ್ಗವು.

---

1. "ಶಕ್ತ್ಯನುಸಾರವಾಗಿ" ಎಂದರೆ "ಸಹಸ್ರಪರಮಾಂ ದೇವೀಂ ಶತ-ಮಧ್ಯಾಂ ದಶಾವರಾಮ್" ಎಂಬಂತೆ ಅವರವರ ಶಕ್ತಿಗೆ ತಕ್ಕಂತೆ ಗಾಯತ್ರೀ ಜಪಗಳನ್ನು ನಡೆಸಿದರೆಂದರ್ಥವು.

2. "ವಿಶ್ವಸ್ಯ ಮಿತ್ರಂ ವಿಶ್ವಾಮಿತ್ರಃ" ಎಂಬ ವ್ಯುತ್ಪತ್ತಿಯಿಂದ ಲೋಕ-ಸುಹೃತ್ತೆಂದು ಅವಯವಾರ್ಥವು.

—— ಮಲದ ಕರೂಶದೇಶಗಳ ವೃತ್ತಾಂತವು. ತಾಟಕಾವನ ಪ್ರವೇಶವು ——

ಆ ರಾತ್ರಿಯು ಕಳೆದು ಬೆಳಗಾದಕೂಡಲೆ ರಾಮಲಕ್ಷ್ಮಣರಿಬ್ಬರೂ, ಆಹ್ನಿಕವನ್ನು ಮಾಡಿದ ವಿಶ್ವಾಮಿತ್ರನನ್ನು ಮುಂದಿಟ್ಟುಕೊಂಡು, ಗಂಗಾ ತೀರಕ್ಕೆ ಬಂದು ಸೇರಿದರು. ಇಷ್ಟರೊಳಗಾಗಿ ಅಲ್ಲಿದ್ದ ವ್ರತನಿಷ್ಠರಾದ ಋಷಿ ಗಳೆಲ್ಲರೂ ಇವರಿಗಾಗಿ ನದಿಯನ್ನು ದಾಟುವುದಕ್ಕೆ ತಕ್ಕ ದೋಣಿಯನ್ನು ಸಿದ್ಧಪಡಿಸಿಟ್ಟು ವಿಶ್ವಾಮಿತ್ರನನ್ನು ಕುರಿತು “ಎಲೈ ಮಹರ್ಷಿಯೆ! ಇದೋ! ದೋಣಿಯು ಸಿದ್ಧವಾಗಿರುವುದು. ಈ ಮಕ್ಕಳನ್ನೇರಿಸಿ ತಾವೂ ಏರಬಹುದು. ಇನ್ನು ಕಾಲವಿಳಂಬವನ್ನು ಮಾಡಬೇಡಿರಿ! ದಾರಿಯಲ್ಲಿ ನಿಮಗೆ ಕ್ಷೇಮ ವುಂಟಾಗಲಿ” ಎಂದರು. ಇದನ್ನು ಕೇಳಿ ವಿಶ್ವಾಮಿತ್ರನು ಹಾಗೆಯೇ ಆಗ ಲೆಂದು ಅವರನ್ನು ಬಹಳವಾಗಿ ಪೂಜಿಸಿ, ದೋಣಿಯನ್ನು ಹತ್ತಿ ಹೊರಟನು. ನಡುನೀರಿಗೆ ಬಂದಕೂಡಲೆ, ಮೇಲೆಮೇಲೆ ಹೆಚ್ಚುತ್ತಿರುವ ಒಂದು ದೊಡ್ಡ ಶಬ್ದವು ಈ ಬಾಲಕರ ಕಿವಿಗೆ ಕೇಳಿಸಿತು. ಆಗ ರಾಮನು ವಿಶ್ವಾಮಿತ್ರನನ್ನು ನೋಡಿ “ಎಲೈ ತಾತನೆ! ಇದೇನು! ದೊಡ್ಡ ಶಬ್ದವು ಕೇಳಿಸುತ್ತಿರುವುದು! ಪ್ರವಾಹಧ್ವನಿಯಾಗಿರಬಹುದೆ!” ಎಂದನು. ಆಗ ಅದರ ನಿಜಸ್ಥಿತಿಯನ್ನು ಇವರಿಗೆ ತಿಳಿಸಬೇಕೆಂಬ ಕುತೂಹಲವು ವಿಶ್ವಾಮಿತ್ರನಿಗೂ ಹುಟ್ಟಲು, ರಾಮಲಕ್ಷ್ಮಣರನ್ನು ಕುರಿತು, “ವತ್ಸರೇ! ಕೈಲಾಸಪರ್ವತದಲ್ಲಿ ಒಂದು ಸರೋವರವುಂಟು. ಅದನ್ನು ಬ್ರಹ್ಮನು ತನ್ನ ಮನಸ್ಸಿನಿಂದಲೇ ಸೃಷ್ಟಿಸಿದುದ ರಿಂದ ಅದಕ್ಕೆ ಮಾನಸಸರೋವರವೆಂದು ಹೆಸರು. ಆ ಸರಸ್ಸಿನಲ್ಲಿ ಹುಟ್ಟಿದ [1]ಸರಯೂನದಿಯು ಅಯೋಧ್ಯಾಪಟ್ಟಣವನ್ನು ಸುತ್ತಿಕೊಂಡು ಹೋಗು ತ್ತಿರುವುದು. ಆ ಬ್ರಹ್ಮಸರಸ್ಸಿನಿಂದ ಹುಟ್ಟಿ ಬರುವುದರಿಂದಲೇ ಇದಕ್ಕೆ ಸರಯುವೆಂಬ ಹೆಸರು ಹುಟ್ಟಿರುವುದು. ಈ ನದಿಯು ಗಂಗಾನದಿಗೆ

---

1. ಸರಯುವೆಂಬ ನದಿಯು ಬ್ರಹ್ಮನಿರ್ಮಿತವಾದ ಮಾನಸಸರೋವರ ದಲ್ಲಿ ಹುಟ್ಟಿ, ಅಯೋಧ್ಯೆಯ ಪಶ್ಚಿಮದಲ್ಲಿ ಪ್ರವಹಿಸಿ, ಆಮೇಲೆ ಅದರ ಉತ್ತರದಿಕ್ಕಿನಮಾರ್ಗವಾಗಿ ಪೂರ್ವಕ್ಕೆ ಬಂದು, ಅಲ್ಲಿರುವ ಅಂಗದೇಶದಲ್ಲಿ ಗಂಗೆಯೊಡನೆ ಸೇರುವುದು. ಈ ಎರಡು ನದಿಗಳ ಸಂಗಮಸ್ಥಾನದಲ್ಲಿಯೇ ಸ್ಥಾಣ್ವಾಶ್ರಮವೆಂಬುದಿರುವುದು. ಆದುದರಿಂದ ಸರಯುವಿನೊಡಗೂಡಿದ ಗಂಗಾನದಿಯನ್ನು ದಾಟುವಾಗ, ಈ ಎರಡು ನದಿಗಳ ಪ್ರವಾಹ ಸಂಘಟನ ದಿಂದ ಉಂಟಾದುದೇ ಈ ದೊಡ್ಡ ಶಬ್ದವೆಂದು ಗ್ರಹಿಸಬೇಕು.

ಬೀಳುವಾಗ ಉಂಟಾಗತಕ್ಕ ಮಹಾಶಬ್ದವೇ ಇದು. ನೀವು ಈ ಪುಣ್ಯನದಿಗೆ ನಮಸ್ಕರಿಸಿರಿ!" ಎಂದನು. ಅದರಂತೆಯೇ ಧರ್ಮಬುದ್ಧಿಯುಳ್ಳ ಈ ರಾಮ ಲಕ್ಷ್ಮಣರಿಬ್ಬರೂ ಅವೆರಡು ಪುಣ್ಯನದಿಗಳಿಗೂ ನಮಸ್ಕಾರಮಾಡಿ, ಗಂಗೆಯ ದಕ್ಷಿಣತೀರವನ್ನು ಸೇರಿ, ಅಲ್ಲಿಂದ ಸ್ವಲ್ಪದೂರ ಮುಂದಕ್ಕೆ ಹೋದರು. ಮುಂದೆ ನಿರ್ಜನವಾಗಿ ಮಹಾಭಯಂಕರವಾದ ಅಡವಿಯೊಂದು ಕಾಣಿಸಿತು. ಎಡೆಬಿಡದೆ ಗಿಡಗಳಿಂದ ದಟ್ಟವಾದ ಆ ಘೋರಾರಣ್ಯವನ್ನು ಕಂಡು, ರಾಮನು ವಿಶ್ವಾಮಿತ್ರನನ್ನು ಕುರಿತು, "ಅಬ್ಬಾ! ಈ ಕಾಡು ಬಹಳ ಭಯಂಕರ ವಾಗಿರುವುದು! ಎಲ್ಲಿ ನೋಡಿದರೂ ಜೀರುಂಡೆಗಳು ಚೀರಿಡುತ್ತಿರುವುವು! ಭಯಂಕರವಾದ ಕ್ರೂರಮೃಗಗಳು ಸುತ್ತಲೂ ಸಂಚರಿಸುತ್ತಿರುವುವು! ಹಕ್ಕಿ ಗಳೆಲ್ಲವೂ ಕ್ರೂರಧ್ವನಿಯಿಂದ ಕೂಗುತ್ತಿರುವುವು! ಸಿಂಹಗಳು, ಹುಲಿಗಳು, ಕರಡಿಗಳು, ಕಾಡುಹಂದಿಗಳು, ಕಾಡಾನೆಗಳು ಮುಂತಾದ ಕ್ರೂರಮೃಗ ಗಳೆಲ್ಲವೂ ಭಯಂಕರವಾಗಿ ಗರ್ಜಿಸುತ್ತಿರುವುವು. ಬಿಲ್ವ, ಖದಿರ, ಅಶ್ವತ್ಥ, ಬದರಿ, ಪಾದರಿ ಮೊದಲಾದ ವೃಕ್ಷಗಳೆಲ್ಲವೂ ಎಡೆಬಿಡದೆ ತುಂಬಿರುವುವು. ಈ ಭಯಂಕರವಾದ ವನವಾವುದು? ಇದು ಯಾರಿಗೆ ಸೇರಿದುದು?" ಎಂದು ಕೇಳಿದರು. ಆಗ ವಿಶ್ವಾಮಿತ್ರನು, "ವತ್ಸ ರಾಮಾ! ಕೇಳು. ಪೂರ್ವದಲ್ಲಿ ಇದು ಧನಧಾನ್ಯಸಮೃದ್ಧಗಳಾದ ಎರಡು ದೇಶಗಳಾಗಿದ್ದುವು. ಅವೆರಡಕ್ಕೂ ಕ್ರಮವಾಗಿ ಮಲದವೆಂದೂ, ಕರೂಶವೆಂದೂ ಹೆಸರು. ಇವು ದೇವತೆಗಳಿಂದಲೇ ನಿರ್ಮಿಸಲ್ಪಟ್ಟುದರಿಂದ ದೇವಲೋಕಕ್ಕೆ ಸಮಾನವಾಗಿದ್ದುವು. ಮೊದಲು ಇಂದ್ರನು ವೃತ್ರಾಸುರನನ್ನು ಕೊಂದಾಗ ಒಡನೆಯೇ ಆತನಿಗೆ ಬ್ರಹ್ಮಹತ್ಯಾ ಪಾತಕವು ಸಂಭವಿಸಿತು. ಅದರಿಂದ ಆತನಿಗೆ ಅಶುಚಿತ್ವವೂ, ಹಸಿವೂ ಬಹಳ ವಾಗಿ ಉಂಟಾಯಿತು. ದೇವತೆಗಳೂ, ಋಷಿಗಳೂ ಆ ಇಂದ್ರನನ್ನು ಕರೆತಂದು ಗಂಗಾನದಿಯಲ್ಲಿ ಸ್ನಾನಮಾಡಿಸಿ, ಮಂತ್ರಪೂತವಾದ ಕಲಶಗಳ ನೀರನ್ನು ಆತನಮೇಲೆ ಪ್ರೋಕ್ಷಿಸಲು, ಆತನಿಗಿದ್ದ ಅಶುಚಿತ್ವವೂ, ಹಸಿವೂ ಒಡನೆಯೇ ಬಿಟ್ಟುಹೋಯಿತು. ಹೀಗೆ ಇಂದ್ರನ ದೇಹದಲ್ಲಿ ಅಂಟಿಕೊಂಡಿದ್ದ ಮಲವೂ, ಕರೂಶವೂ ಈ ಸ್ಥಳದಲ್ಲಿಯೇ ಬಿಟ್ಟುಹೋಗಲು, ಋಷಿಗಳೆಲ್ಲರೂ ಬಹಳ ಸಂತೋಷಪಟ್ಟರು. ದೋಷದಿಂದ ಬಿಡಲ್ಪಟ್ಟು, ಶುದ್ಧನಾದ ಇಂದ್ರನು ಪ್ರಸನ್ನನಾಗಿ, ತನ್ನ ದೇಹದಲ್ಲಿದ್ದ ಮಲ ಕರೂಶಗಳನ್ನು ಈ ಪ್ರದೇಶಗಳು ಧರಿಸಿಕೊಂಡುವಾದುದರಿಂದ, "ಇವು ಮಲದ ಕರೂಶಗಳೆಂಬ ಹೆಸರಿನಿಂದಲೇ

ಧನಧಾನ್ಯಸಮೃದ್ಧವಾದ ಎರಡು ದೇಶಗಳಾಗಿ ಪ್ರಸಿದ್ಧಿಹೊಂದಿರಲಿ” ಎಂದು ವರವನ್ನು ಕೊಟ್ಟನು. ಆಗ ದೇವತೆಗಳೆಲ್ಲರೂ ಇಂದ್ರನನ್ನು ಬಹಳವಾಗಿ ಕೊಂಡಾಡಿದರು. ಈ ಕಾರಣದಿಂದಲೇ ಆ ದೇಶಗಳು ಬಹುಕಾಲದವರೆಗೆ ಜನಸಮೃದ್ಧವಾಗಿ ಹೆಸರುಗೊಂಡಿದ್ದುವು. ಆಮೇಲೆ ಒಂದಾನೊಂದು ಕಾಲದಲ್ಲಿ ಸಾವಿರಾನೆಗಳ ಬಲವುಳ್ಳ ತಾಟಕೆಯೆಂಬ ಹೆಸರಿನ ಯಕ್ಷಕನ್ನಿಕೆಯೊಬ್ಬಳು ಹುಟ್ಟಿದಳು. ಆಕೆಯು ತನಗೆ ಇಷ್ಟಬಂದ ರೂಪವನ್ನು ಧರಿಸತಕ್ಕ ಶಕ್ತಿಯುಳ್ಳವಳು. ವತ್ಸ ರಾಮಾ! ಆಕೆಯಿಂದ ನಿನಗೆ ಯಾವ ಅಪಾಯವೂ ಇಲ್ಲದಿರಲೆಂದು ಕೋರುವೆನು. ಆ ಯಕ್ಷಿಯು ಸುಂದನೆಂಬವನನ್ನು ಮದುವೆಯಾಗಿ, ಮಾರೀಚನೆಂಬ ರಾಕ್ಷಸನನ್ನು ಹಡೆದಿರುವಳು. ಆತನಾದರೋ ಇಂದ್ರನಂತೆ ಪರಾಕ್ರಮವುಳ್ಳವನು. ದುಂಡಾದ ತೋಳುಗಳುಳ್ಳವನು. ಇತರರಿಂದ ಜಯಿಸಲಸಾಧ್ಯವಾದ ವೀರ್ಯವುಳ್ಳವನು. ಆತನ ಅಗಲವಾದ ಬಾಯಿಯೂ, ದೊಡ್ಡ ದೇಹವೂ, ನೋಡುವವರಿಗೆಲ್ಲಾ ಅತ್ಯಂತ ಭಯವನ್ನು ಹುಟ್ಟಿಸುವುದು. ಅದೂ ಹಾಗಿರಲಿ! ದುಷ್ಟಸ್ವಭಾವವುಳ್ಳ ಆ ತಾಟಕೆಯು ಈ ಮಲದ ಕರೂಶ ದೇಶಗಳಿಗೆ ಆಗಾಗ ಬಂದು, ಇವುಗಳನ್ನು ಹಾಳುಮಾಡುತ್ತಿರುವಳು. ಇದಲ್ಲದೆ ಆ ಪಟ್ಟಣಕ್ಕೆ ಹೋಗಿ ಬರುವವರನ್ನೆಲ್ಲಾ ಬಾಯಿಗೆ ಹಾಕಿಕೊಳ್ಳುತ್ತಿರುವಳು. ಆ ತಾಟಕೆಯ ವನವೇ ಇದು! ಅವಳನ್ನು ಕೊಲ್ಲುವುದಕ್ಕಾಗಿಯೇ ನಾವು ಈ ದಾರಿಯಲ್ಲಿ ಬರಬೇಕಾಯಿತು. ನಿನ್ನ ಬಾಹುಬಲದಿಂದ ಈ ದುಷ್ಟೆಯಾದ ರಾಕ್ಷಸಿಯನ್ನು ಕೊಲ್ಲು! ಇದೋ! ನನ್ನ ಆಜ್ಞೆಯಿಂದ ನೀನು ಸ್ವಲ್ಪವೂ ಶಂಕಿಸದೆ, ಈ ಪ್ರದೇಶವನ್ನೆಲ್ಲಾ ನಿಷ್ಕಂಟಕವಾಗಿ ಮಾಡು. ಈ ದೇಶವು ಇಂತಹ ಪುಣ್ಯಕ್ಷೇತ್ರವಾಗಿದ್ದರೂ, ತಾಟಕೆಯ ಭಯದಿಂದ ಯಾರೂ ಇಲ್ಲಿಗೆ ಬರುವುದಕ್ಕೆ ಅವಕಾಶವಿಲ್ಲ. ಈ ಕಾಡನ್ನೆಲ್ಲಾ ಆ ದುಷ್ಟರಾಕ್ಷಸಿಯೊಬ್ಬಳೇ ಆವರಿಸಿಕೊಂಡು ನಿರ್ಜನವಾಗಿ ಮಾಡುತ್ತಿರುವಳು. ಎಲೈ ರಾಮನೆ! ಇದೀಗ ಆ ದುಷ್ಟರಾಕ್ಷಸಿಯಿಂದ ಆವರಿಸಲ್ಪಟ್ಟ, ಮಹಾಭಯಂಕರವಾದ ಈ ಅರಣ್ಯದ ಚರಿತ್ರವು” ಎಂದನು.

ಇಲ್ಲಿಗೆ ಇಪ್ಪತ್ತನಾಲ್ಕನೆಯ ಸರ್ಗವು.

ತಾಟಕಾವೃತ್ತಾಂತವು

ಮಹಾಮಹಿಮೆಯುಳ್ಳ ವಿಶ್ವಾಮಿತ್ರನು ಹೇಳಿದ ಈ ವೃತ್ತಾಂತವನ್ನು ಕೇಳಿ ಪುರುಷಶ್ರೇಷ್ಠನಾದ ಶ್ರೀರಾಮನು, "ಎಲೈ ಋಷಿಶ್ರೇಷ್ಠನೆ! ಯಕ್ಷರು ಅಲ್ಪವೀರ್ಯವುಳ್ಳವರೆಂದು ಕೇಳಿರುವೆನು. ಹೀಗಿರುವಾಗ ಅಬಲೆಯಾದ ಆ ತಾಟಕೆಗೆ ಸಾವಿರಾನೆಗಳ ಬಲವುಂಟಾಗುವುದಕ್ಕೆ ಕಾರಣವೇನು? ಇದರ ಕಾರಣವನ್ನು ನನಗೆ ತಿಳಿಸಬೇಕು" ಎಂದು ಕೇಳಲು, ವಿಶ್ವಾಮಿತ್ರನು "ಎಲೈ ವತ್ಸನೆ! ಒಂದು ವರಪ್ರಸಾದದಿಂದ ಅವಳಿಗೆ ಅಷ್ಟು ವೀರ್ಯವುಂಟಾಗಿರುವುದು. ಪೂರ್ವದಲ್ಲಿ ಸುಕೇತುವೆಂಬ ಮಹಾವೀರ್ಯವುಳ್ಳ ಯಕ್ಷನೊಬ್ಬನಿದ್ದನು. ಆತನು ಬಹಳ ಒಳ್ಳೆಯ ನಡತೆಯುಳ್ಳವನಾಗಿ ಬಹುಕಾಲದವರೆಗೆ ಮಕ್ಕಳಿಲ್ಲದೆ ಸಂತಾನಾರ್ಥವಾಗಿ ದೊಡ್ಡ ತಪಸ್ಸನ್ನು ಮಾಡಿದನು. ಬ್ರಹ್ಮನು ಆತನ ತಪಸ್ಸಿಗೆ ಮೆಚ್ಚಿ ಅವನಿಗೆ ಕನ್ಯೆಯೊಬ್ಬಳು ಹುಟ್ಟುವಂತೆಯೂ ಅವಳಿಗೆ ಸಾವಿರಾನೆಗಳ ಬಲವುಂಟಾಗುವಂತೆಯೂ ಅನುಗ್ರಹಿಸಿದನು. ಆದರೆ ಆತನಿಗೆ ಗಂಡುಮಕ್ಕಳುಂಟಾಗುವಂತೆ ಮಾತ್ರ ವರವನ್ನು ಕೊಡಲಿಲ್ಲ. ಹೀಗೆ ಆ ಸುಕೇತುವಿನಲ್ಲಿ ಹುಟ್ಟಿದ ತಾಟಕೆಯು ದಿನದಿನಕ್ಕೆ ಹೆಚ್ಚಿ, ರೂಪಯೌವನಗಳಿಂದ ಕೂಡಿರುವುದನ್ನು ನೋಡಿ, ತಂದೆಯಾದ ಸುಕೇತುವು ಆಕೆಯನ್ನು ಜರ್ಝನೆಂಬ ಯಕ್ಷನ ಮಗನಾದ ಸುಂದನಿಗೆಕೊಟ್ಟು ಮದುವೆಮಾಡಿದನು. ಕೆಲವುಕಾಲದಮೇಲೆ ಆಕೆಯ ಹೊಟ್ಟೆಯಲ್ಲಿ ಮಾರೀಚನೆಂಬ ಪುತ್ರನೊಬ್ಬನು ಹುಟ್ಟಿ ಶಾಪದಿಂದ ರಾಕ್ಷಸನಾದನು. ಸುಂದನು ಅಗಸ್ತ್ಯನಿಂದ ಸಾವು ಹೊಂದಿದಮೇಲೆ, ಈ ತಾಟಕೆಯು ತನ್ನ ಮಗನಾದ ಮಾರೀಚನೊಡಗೂಡಿ ಋಷಿಶ್ರೇಷ್ಠನಾದ ಆ ಅಗಸ್ತ್ಯನನ್ನೆದಿರಿಸಿ, ಅವನನ್ನು ತಿಂದುಬಿಡಬೇಕೆಂಬ ಆಸೆಯಿಂದ ಗರ್ಜಿಸುತ್ತಾ ಆತನನ್ನು ಬೆನ್ನಟ್ಟಿದಳು. ಆಗ ಪೂಜ್ಯನಾದ ಅಗಸ್ತ್ಯನು "ರಾಕ್ಷಸನಾಗು" ಎಂದು ಆ ಮಾರೀಚನಿಗೆ ಶಾಪವನ್ನು ಕೊಟ್ಟನು. ಆಮೇಲೆ ತಾಟಕೆಯನ್ನು ನೋಡಿ, "ಎಲೆ ದುಷ್ಟೆ! ನೀನೂ ಈ ಯಕ್ಷಸ್ವರೂಪವನ್ನು ಬಿಟ್ಟು, ರಾಕ್ಷಸಸ್ವರೂಪವನ್ನು ಹೊಂದು. ಮನುಷ್ಯರನ್ನು ಭಕ್ಷಿಸತಕ್ಕ ವಿಕಾರವಾದ ಮುಖವೂ, ಭಯಂಕರಸ್ವರೂಪವೂ ನಿನಗುಂಟಾಗಲಿ" ಎಂದು ಅವಳನ್ನೂ ಶಪಿಸಿದನು. ಆ ಶಾಪದಿಂದುಂಟಾದ ಕೋಪಕ್ಕಾಗಿಯೇ ತಾಟಕೆಯು ಅಗಸ್ತ್ಯಮಹರ್ಷಿಯ ಮುಖ್ಯವಾಸಸ್ಥಾನವಾದ ಈ ಪ್ರದೇಶವನ್ನೆಲ್ಲಾ ಹಾಳುಮಾಡುತ್ತಿರುವಳು. ಎಲೈ ರಾಮನೆ!

ಭಯಂಕರ ಸ್ವರೂಪೆಯಾದ ಆ ದುಷ್ಟರಾಕ್ಷಸಿಯನ್ನು ಈಗಲೇ ಕೊಂದು ಬಿಡು. ಶಾಪಗ್ರಸ್ತಳಾದ ಆ ರಾಕ್ಷಸಿಯನ್ನು ಕೊಲ್ಲುವುದಕ್ಕೆ ಈ ಮೂರು ಲೋಕಗಳಲ್ಲಿಯೂ ನೀನೊಬ್ಬನು ಹೊರತು ಬೇರೊಬ್ಬರೂ ಸಮರ್ಥರಲ್ಲ. ಅವಳನ್ನು ಕೊಲ್ಲುವುದರಿಂದ ಗೋವುಗಳಿಗೂ, ಬ್ರಾಹ್ಮಣರಿಗೂ ಕ್ಷೇಮವುಂಟು. ಹೆಂಗಸನ್ನು ಹೇಗೆ ಕೊಲ್ಲುವುದೆಂದು ನೀನು ಹಿಂತೆಗೆಯಬೇಡ. ಆಕೆಯಲ್ಲಿ ಸ್ವಲ್ಪವೂ ದಯವನ್ನು ತೋರಿಸಕೂಡದು! ನಾಲ್ಕುವರ್ಣಗಳಿಗೂ ಕ್ಷೇಮ ವನ್ನು ಬಯಸುವುದೇ ರಾಜಧರ್ಮವಾದುದರಿಂದ, ಪ್ರಜೆಗಳನ್ನು ರಕ್ಷಿಸುವುದ ಕ್ಕಾಗಿ, ಪಾಪಪುಣ್ಯಗಳನ್ನೂ, ಯುಕ್ತಗಳನ್ನೂ ವಿಚಾರಿಸದೆಯೇ, ಯಾವ ಕೆಲಸವನ್ನಾದರೂ ಮಾಡಬಹುದು. ಆಕೆಯಲ್ಲಿ ಧರ್ಮವೆಂಬುದು ಸ್ವಲ್ಪವೂ ಇಲ್ಲ. ಆದುದರಿಂದ ನೀನು ನಿಸ್ಸಂದೇಹವಾಗಿ ಕೊಲ್ಲಬಹುದು. ಇದಕ್ಕೆ ಒಂದು ನಿದರ್ಶನವನ್ನೂ ಹೇಳುವೆನು ಕೇಳು. ಪೂರ್ವದಲ್ಲಿ ಇಂದ್ರನು ಭೂಮಿಯನ್ನೆಲ್ಲಾ ಬಾಧಿಸುತ್ತಿದ್ದ ವಿರೋಚನಪುತ್ರಿಯಾದ ಮಂಥರೆಯೆಂಬವ ಳನ್ನು ಕೊಂದುದಾಗಿ ಕೇಳಿರುವೆವು. ಮತ್ತು ಶುಕ್ರಾಚಾರ್ಯರ ತಾಯಿ ಯಾದ ಭೃಗು ಪತ್ನಿಯು ಲೋಕದಲ್ಲಿ ಇಂದ್ರನೇ ಇಲ್ಲದಂತೆ ಮಾಡಬೇಕೆಂದು ಪ್ರಯತ್ನಿಸುತ್ತಿರಲು, ಆಕೆಯನ್ನು ವಿಷ್ಣುವು ತಾನಾಗಿಯೇ ಸಂಹರಿಸಿದನು. ಹೀಗೆಯೇ ಇನ್ನೂ ಅನೇಕ ರಾಜರು ಅಧರ್ಮದಲ್ಲಿ ಪ್ರವರ್ತಿಸಿದ ಸ್ತ್ರೀಯ ರನ್ನು ಕೊಂದು ಲೋಕಕ್ಕೆ ಕ್ಷೇಮವನ್ನುಂಟುಮಾಡಿರುವರು. ಆದುದರಿಂದ ಎಲೈ ರಾಮನೆ! ದುಷ್ಟರಾದ ಸ್ತ್ರೀಯರನ್ನು ಕೊಲ್ಲುವುದು ಶಿಷ್ಟಾಚಾರದಿಂದ ಬಂದುದಲ್ಲದೆ ನಾನು ಕಲ್ಪಿಸಿ ಹೇಳಿದುದಲ್ಲ. ನೀನು ಸಂದೇಹವಿಲ್ಲದೆ ಈಕೆಯನ್ನು ಕೊಲ್ಲಬಹುದು" ಎಂದನು.

ಇಲ್ಲಿಗೆ ಇಪ್ಪತ್ತೈದನೆಯ ಸರ್ಗವು.

ತಾಟಕಾಸಂಹಾರವು

ವಿಶ್ವಾಮಿತ್ರನು ಹೇಳಿದ ಸಾರವತ್ತಾದ ಈ ವಾಕ್ಯವನ್ನು ಕೇಳಿ, ರಾಜ ಕುಮಾರನಾದ ಶ್ರೀರಾಮನು ತನ್ನ ಮನಸ್ಸಿನಲ್ಲಿ, "ನನ್ನ ತಂದೆಯು ವಿಶ್ವಾ ಮಿತ್ರನ ಅಪ್ಪಣೆಯಂತೆಯೇ ನಡೆಯಬೇಕೆಂದು ಆಜ್ಞಾಪಿಸಿರುವನು. ತಂದೆಯ ಆಜ್ಞೆಯನ್ನು ಗೌರವಿಸಬೇಕಾದುದೇ ನನಗೆ ಧರ್ಮವು. ಇದಲ್ಲದೆ ಪೂಜ್ಯನಾದ ವಿಶ್ವಾಮಿತ್ರನೇ ಆಜ್ಞಾಪಿಸುತ್ತಿರುವನಾದುದರಿಂದ ನಿಸ್ಸಂದೇಹ

ವಾಗಿ ಈ ಕೆಲಸವನ್ನು ನಾನು ಮಾಡಲೇಬೇಕು" ಎಂದು ನಿಶ್ಚಯಿಸಿಕೊಂಡು, ವಿಶ್ವಾಮಿತ್ರನಿಗೆ ಕೈಮುಗಿಯುತ್ತಾ, "ಮಹರ್ಷಿಯೆ! ಅಯೋಧ್ಯಾಪಟ್ಟಣದಲ್ಲಿ ಮಹಾತ್ಮನಾದ ನನ್ನ ತಂದೆಯು, ನಿನ್ನ ಅಪ್ಪಣೆಯನ್ನು ಮೀರಬಾರದೆಂದು ಅನೇಕ ಮಹರ್ಷಿಗಳ ನಡುವೆ ಆಜ್ಞೆಮಾಡಿರುವನು. ಅದನ್ನು ನಾನು ಮೀರಬಾರದಲ್ಲವೆ! ಇದೂ ಅಲ್ಲದೆ ಸಮಸ್ತ ಧರ್ಮಗಳನ್ನೂ ಬಲ್ಲ ನೀನೇ ಹೀಗೆ ಆಜ್ಞೆಮಾಡುತ್ತಿರುವಾಗ ನನಗೆ ಶಂಕೆಯೇನಿರುವುದು? ಆದುದರಿಂದ ಗೋಬ್ರಾಹ್ಮಣರ ಹಿತಾರ್ಥವಾಗಿಯೂ, ಪ್ರಜೆಗಳ ಕ್ಷೇಮಕ್ಕಾಗಿಯೂ ಮಾಡಬೇಕಾದ ಈ ತಾಟಕಾವಧವನ್ನು ಅವಶ್ಯವಾಗಿ ಮಾಡುವೆನು" ಎಂದು ಹೇಳಿ, ಕೂಡಲೇ ಧನುಸ್ಸನ್ನು ಹಿಡಿದು ಟಂಕಾರಮಾಡಿದನು. ಈ ಧ್ವನಿಯು ಸಮಸ್ತ ದಿಕ್ಕುಗಳನ್ನೂ ವ್ಯಾಪಿಸಿತು. ಆ ವನದಲ್ಲಿದ್ದ ಸಮಸ್ತ ಪ್ರಾಣಿಗಳೂ ಭಯದಿಂದ ನಡುಗಿದುವು. ಈ ಶಬ್ದವನ್ನು ಕೇಳಿದೊಡನೆ ತಾಟಕೆಯು ಕ್ಷಣಕಾಲದವರೆಗೆ ಬೆರಗಾಗಿ ನಿಂತು, ಆಮೇಲೆ ಬಹಳ ಕೋಪಗೊಂಡವಳಾಗಿ ಈ ಧ್ವನಿಯು ಯಾವ ದಿಕ್ಕಿನಿಂದ ಹೊರಟಿತೋ ಆ ಕಡೆಗಿದಿರಾಗಿ ಬಹುವೇಗದಿಂದ ಬರುತ್ತಿದ್ದಳು. ಹೀಗೆ ಬರುತ್ತಿರುವ ಘೋರರೂಪಿಣಿಯಾದ ಆ ರಾಕ್ಷಸಿಯ ದೊಡ್ಡ ಆಕಾರವನ್ನು ನೋಡಿ ಶ್ರೀರಾಮನು, ಲಕ್ಷ್ಮಣನನ್ನು ಕುರಿತು "ವತ್ಸ ಲಕ್ಷ್ಮಣಾ! ಭಯಂಕರವಾದ ಆಕೆಯ ಆಕಾರವನ್ನು ನೋಡಿದೆಯಾ? ಭೀರುಸ್ವಭಾವವುಳ್ಳವರು ಈಕೆಯನ್ನು ನೋಡಿದ ಮಾತ್ರದಿಂದಲೇ ಎದೆಯೊಡೆದು ಪ್ರಾಣಬಿಡುವರು. ಇವಳನ್ನಿದಿರಿಸುವುದು ಬಹಳ ಅಸಾಧ್ಯವು. ಈಕೆಯು ಬಹಳ ಮಾಯೆಯುಳ್ಳವಳೆಂದೂ ತೋರುವುದು. ಲಕ್ಷ್ಮಣಾ! ಆದರೇನು! ಈಗಲೇ ಇವಳ ಕಿವಿಮೂಗುಗಳನ್ನು ಕತ್ತರಿಸಿ ಓಡಿಸುವೆನು. ಸ್ತ್ರೀಸ್ವಭಾವವುಳ್ಳವಳಾದ್ದರಿಂದ ಇವಳನ್ನು ಕೊಲ್ಲುವುದಕ್ಕೆ ನನಗೆ ಮನಸ್ಸು ಬಾರದು. ಆದುದರಿಂದ ಇವಳ ಸಂಚಾರಶಕ್ತಿಯನ್ನಾದರೂ ಮುರಿಯುವೆನು" ಎಂದು ಹೇಳುತ್ತಿರುವಷ್ಟರಲ್ಲಿಯೇ, ತಾಟಕೆಯು ಬಹಳ ಕ್ರೋಧದಿಂದ ಗರ್ಜಿಸುತ್ತಾ, ಎರಡು ತೋಳುಗಳನ್ನೂ ಎತ್ತಿಕೊಂಡು ರಾಮನಿಗೆ ಇದಿರಾಗಿಯೇ ಬಂದಳು. ಇದನ್ನು ನೋಡಿ ವಿಶ್ವಾಮಿತ್ರನು ಹುಂಕಾರಪೂರ್ವಕವಾಗಿ ಅವಳನ್ನು ಗದರಿಸುತ್ತಾ, ರಾಮಲಕ್ಷ್ಮಣರನ್ನು ನೋಡಿ, "ನಿಮಗೆ ಜಯವುಂಟಾಗಲಿ" ಎಂದು ಆಶೀರ್ವದಿಸಿದನು.

ಇತ್ತಲಾಗಿ ಆ ತಾಟಕೆಯು ಮಾಯೆಯಿಂದ ದಿಕ್ಕುಗಳೆಲ್ಲವೂ ಮರೆಸುವಂತೆ ದೊಡ್ಡ ಧೂಳಿಯನ್ನೆಬ್ಬಿಸಿ, ಈ ರಾಜಕುಮಾರರಿಬ್ಬರಿಗೂ ಏನೂ ತೋರದಂತೆ ಮಾಡಿದಳು. ಮತ್ತು ಆಕಾಶದಿಂದ ರಾಮಲಕ್ಷ್ಮಣರಮೇಲೆ ದೊಡ್ಡ ಶಿಲಾವರ್ಷವನ್ನು ಸುರಿಸಿದಳು. ಆಗ ರಾಮನು ಬಹಳ ಕೋಪಾಕ್ರಾಂತನಾಗಿ ತನ್ನ ಬಾಣಪ್ರಯೋಗದಿಂದ ಆ ಶಿಲಾವರ್ಷವನ್ನು ತನ್ನಮೇಲೆ ಬೀಳದಹಾಗೆ ತಡೆದು, ಇದಿರಾಗಿ ಬರುತ್ತಿರುವ ಆ ತಾಟಕೆಯ ಎರಡು ಕೈಗಳನ್ನೂ ಕತ್ತರಿಸಿದನು. ಕೈಗಳೆರಡೂ ಮುರಿದುದರಿಂದ ಅವಳು ಬಹಳ ನೊಂದು, ಬಾಯಿಯಲ್ಲಿ ಮಾತ್ರ ಭಯಂಕರವಾಗಿ ಗರ್ಜಿಸುತ್ತಾ ಬರಲು, ಆ ತಾಟಕೆಯ ಕಿವಿಮೂಗುಗಳನ್ನು ಲಕ್ಷ್ಮಣನು ತನ್ನ ಬಾಣಗಳಿಂದ ಕತ್ತರಿಸಿದನು. ಇವಳು ಕಾಮರೂಪಿಣಿಯಾದುದರಿಂದ ಒಡನೆಯೇ ಅನೇಕರೂಪವನ್ನು ತಾಳಿ, ಇವರ ಕಣ್ಣಿಗೆ ಕಾಣಿಸದಂತೆಯೇ ಇದ್ದುಕೊಂಡು ಇವರನ್ನು ಮರುಳುಮಾಡುತ್ತಾ ಅಂತರಿಕ್ಷದಿಂದ ಪುನಃ ಶಿಲಾವರ್ಷವನ್ನೇ ಕರೆಯುತ್ತಿದ್ದಳು. ಹೀಗೆ ನಾಲ್ಕುಕಡೆಗಳಿಂದಲೂ ಈ ರಾಮ ಲಕ್ಷ್ಮಣರಮೇಲೆ ಕಲ್ಮಳೆಯು ಬೀಳುತ್ತಿದ್ದುದನ್ನು ಗಾಧಿಪುತ್ರನಾದ ವಿಶ್ವಾಮಿತ್ರನು ಕಂಡು, ರಾಮನನ್ನು ಕುರಿತು, "ಎಲೈ ವತ್ಸನೆ! ಈಕೆಯಲ್ಲಿ ಮರುಕವನ್ನು ಬಿಡು! ಮಹಾದುಷ್ಟೆಯಾದ ಇವಳನ್ನು ನೀನು ಕೊಲ್ಲದೆ ಬಿಟ್ಟಮಷ್ಟೂ ತನ್ನ ಮಾಯೆಯಿಂದ ಅನೇಕರೂಪಗಳನ್ನು ಹೊಂದುವಳು. ಅವಳು ಬದುಕಿರುವವರೆಗೂ ನಮ್ಮ ಯಜ್ಞಕ್ಕೆ ವಿಘ್ನವು ತಪ್ಪಿದುದಲ್ಲ. ಇದೊ! ಸಾಯಂಕಾಲವಾಗುತ್ತಾ ಬರುವುದು. ಕತ್ತಲೆಯಾದಮೇಲೆ ರಾಕ್ಷಸರೆನ್ನೆದಿರಿಸುವುದು ಅಸಾಧ್ಯವು. ಅಷ್ಟರೊಳಗಾಗಿಯೇ ಈಕೆಯನ್ನು ಸಂಹರಿಸಿಬಿಡು" ಎಂದನು. ಈ ಮಾತನ್ನು ಕೇಳಿ ರಾಮನು, ಕಣ್ಮರೆಯಾಗಿದ್ದುಕೊಂಡು ಶಿಲಾವರ್ಷವನ್ನು ಕರೆಯುತ್ತಿರುವ ಆ ತಾಟಕೆಯನ್ನು ಶಬ್ದದಿಂದಲೇ ಗುರಿಹಿಡಿದು ಬಾಣಗಳನ್ನು ಪ್ರಯೋಗಿಸುತ್ತಿದ್ದನು.

ಹೀಗೆ ರಾಮಲಕ್ಷ್ಮಣರಿಬ್ಬರೂ ತನ್ನಮೇಲೆ ಬಾಣಪ್ರಯೋಗಮಾಡುತ್ತಿರುವುದನ್ನು ನೋಡಿ ಆ ತಾಟಕೆಯು ಬಹಳ ಕೋಪಗೊಂಡು, ಇನ್ನು ತಾನು ಕಣ್ಮರೆಯಾಗಿದ್ದು ಪ್ರಯೋಜನವಿಲ್ಲವೆಂದು ನಿಶ್ಚಯಿಸಿ, ಪ್ರತ್ಯಕ್ಷವಾಗಿಯೇ ಬಂದು ರಾಮಲಕ್ಷ್ಮಣರನ್ನು ಎತ್ತಿಕೊಂಡು ಹೋಗುವುದಕ್ಕೆ ಯತ್ನಿಸಿದಳು. ಹೀಗೆ ಬಹುವೇಗದಿಂದ ಸಿಡಿಲಿನಂತೆ ಇದಿರಿಸುತ್ತಿರುವ ಅವಳನ್ನು

ನೋಡಿ ರಾಮನು, ಕ್ರೂರವಾದ ಒಂದು ಬಾಣವನ್ನು ಅವಳ ಎದೆಗೆ ಗುರಿ ಹಿಡಿದು ಪ್ರಯೋಗಿಸಲು, ಆ ಬಾಣದ ಪೆಟ್ಟಿಗೆ ತಡೆಯಲಾರದೆ ಆ ಕ್ಷಣದಲ್ಲಿಯೇ ರಾಕ್ಷಸಿಯು ಕೆಳಗೆ ಬಿದ್ದು ಸತ್ತಳು. ಹೀಗೆ ಸತ್ತುಬಿದ್ದ ತಾಟಕೆಯ ಭಯಂಕರವಾದ ದೇಹವನ್ನು ನೋಡಿ ಇಂದ್ರಾದಿದೇವತೆಗಳೆಲ್ಲರೂ ರಾಮನನ್ನು ಬಹಳವಾಗಿ ಕೊಂಡಾಡಿದರು. ಅವರೆಲ್ಲರೂ ಇಂದ್ರನನ್ನು ಮುಂದಿಟ್ಟುಕೊಂಡು ವಿಶ್ವಾಮಿತ್ರನ ಬಳಿಗೆ ಬಂದು ಆತನನ್ನು ಕುರಿತು, “ ಎಲೈ ಕೌಶಿಕಮುನಿಯೆ ! ನಿನಗೆ ಕ್ಷೇಮವುಂಟಾಗಲಿ ! ಈ ನಿನ್ನ ಕೆಲಸದಿಂದ ನಾವೆಲ್ಲರೂ ಬಹಳ ಸಂತೋಷಪಟ್ಟೆವು. ಇದಕ್ಕಾಗಿ ರಾಮನಲ್ಲಿ ನೀನು ಒಂದನುಗ್ರಹವನ್ನು ತೋರಿಸಬೇಕು. ಏನೆಂದರೆ, ಪೂರ್ವದಲ್ಲಿ ಭೃಶಾಶ್ವನಲ್ಲಿ ಹುಟ್ಟಿದ ಅಸ್ತ್ರಗಳನ್ನು ನೀನು ತಪೋಬಲದಿಂದ ಸಂಪಾದಿಸಿರುವೆಯಲ್ಲವೆ ! ಅವೆಲ್ಲವನ್ನೂ ಈ ರಾಮನಿಗೆ ಉಪದೇಶಿಸು. ಈತನು ಯಾವಾಗಲೂ ನಿನ್ನನ್ನೇ ಹಿಂಬಾಲಿಸುತ್ತಾ ನಿನ್ನನ್ನು ಶುಶ್ರೂಷೆಮಾಡುತ್ತಿರುವನು. ಆದುದರಿಂದ ಆ ಉಪದೇಶಕ್ಕೆ ಈತನೇ ತಕ್ಕ ಪಾತ್ರವು. ಈತನಿಂದ ಇನ್ನೂ ಮುಂದೆ ನಡೆಯಬೇಕಾದ ಅನೇಕ ಕಾರ್ಯಗಳುಂಟು ” ಎಂದರು. ಹೀಗೆ ದೇವತೆಗಳೆಲ್ಲರೂ ವಿಶ್ವಾಮಿತ್ರನನ್ನು ಪ್ರಾರ್ಥಿಸಿ, ತಾವು ಬಂದ ದಾರಿಯನ್ನು ಹಿಡಿದು ಸಂತೋಷದಿಂದ ಹೊರಟುಹೋದರು. ಇಷ್ಟರೊಳಗೆ ಸಾಯಂಕಾಲವಾಯಿತು. ಇತ್ತಲಾಗಿ ವಿಶ್ವಾಮಿತ್ರನು ತಾಟಕೆಯ ವಧವಿಂದ ಬಹಳ ಸಂತೋಷಪಟ್ಟವನಾಗಿ, ರಾಮನನ್ನು ಸಮೀಪಕ್ಕೆ ಕರೆದು, ಪ್ರೀತಿಯಿಂದ ತಲೆಯನ್ನಾಘ್ರಾಣಿಸಿ, “ ವತ್ಸ ರಾಮಾ ! ಈ ರಾತ್ರಿಯನ್ನು ಇಲ್ಲಿಯೇ ಕಳೆದು ಬೆಳಗಾದಮೇಲೆ ಹೊರಟು ನಾಳೆ ನಮ್ಮ ಆಶ್ರಮವನ್ನು ಸೇರುವೆವು ” ಎಂದನು. ಅದರಂತೆಯೇ ಆ ರಾತ್ರಿಯನ್ನು ತಾಟಕಾವನದಲ್ಲಿಯೇ ಕಳೆದರು. ತಾಟಕೆಯು ಸಂಹೃತಳಾದಕೂಡಲೆ ನಿಷ್ಕಂಟಕವಾದ ಆ ವನವು ಕುಬೇರನ ಚೈತ್ರರಥವೆಂಬ ಉದ್ಯಾನವನದಂತೆ ಅತ್ಯಂತ ಮನೋಹರವಾಗಿ ಕಾಣಿಸುತ್ತಿತ್ತು. ಹೀಗೆ ಶ್ರೀರಾಮನು ತಾಟಕೆಯನ್ನು ಕೊಂದು, ಸಮಸ್ತ ದೇವತೆಗಳಿಂದಲೂ ಸ್ತೋತ್ರಮಾಡಲ್ಪಟ್ಟವನಾಗಿ, ವಿಶ್ವಾಮಿತ್ರನೊಡನೆ ಆ ವನದಲ್ಲಿಯೇ ಇರುತ್ತಿದ್ದನು.

ಇಲ್ಲಿಗೆ ಇಪ್ಪತ್ತಾರನೆಯ ಸರ್ಗವು.

ವಿಶ್ವಾಮಿತ್ರನು ರಾಮನಿಗೆ ಅಸ್ತ್ರಗಳನ್ನುಪದೇಶಿಸಿದುದು.

ಮಹಾಯಶಸ್ವಿಯಾದ ವಿಶ್ವಾಮಿತ್ರನು ಆ ರಾತ್ರಿಯನ್ನು ಅಲ್ಲಿಯೇ ಕಳೆಯುತ್ತ, ರಾಮನನ್ನು ಕುರಿತು ಮಂದಹಾಸದೊಡನೆ ಮೃದುವಾದ ಒಂದಾನೊಂದು ಮಾತನ್ನು ಹೇಳುವನು. "ಎಲೈ ಕೀರ್ತಿಮಂತನಾದ ರಾಮನೆ! ಈಗಲೀಗ ನನಗೆ ಬಹಳ ಸಂತೋಷವುಂಟಾಯಿತು. ನಿನಗೆ ಮಂಗಳ ವಾಗಲಿ! ಇದೋ ನಾನು ನಿನಗೆ ಸಮಸ್ತಾಸ್ತ್ರಗಳನ್ನೂ[1] ಕೊಡುವೆನು. ದೇವದಾನವಗಂಧರ್ವರಲ್ಲಿ ಯಾರು ನಿನ್ನನ್ನು ಪ್ರತಿಭಟಿಸುವುದಕ್ಕೆ ಬಂದರೂ ಈ ಅಸ್ತ್ರಗಳ ಮಹಿಮೆಯಿಂದ ನಿಮಿಷಮಾತ್ರದಲ್ಲಿ ಅವರನ್ನು ಜಯಿಸಿ, ವಶಪಡಿಸಿಕೊಳ್ಳಬಹುದು. ನಿನ್ನ ವೀರ್ಯಕ್ಕೂ, ದೀರ್ಘವಾದ ಭುಜಕ್ಕೂ ತಕ್ಕಂತಿರುವ ದೇವಯೋಗ್ಯವಾದ ದಂಡಚಕ್ರವನ್ನೂ, ಹಾಗೆಯೇ ಧರ್ಮ ಚಕ್ರ, ಕಾಲಚಕ್ರವೆಂಬಿವುಗಳನ್ನೂ, ಅತ್ಯುಗ್ರವಾದ ವಿಷ್ಣುಚಕ್ರವನ್ನೂ, ಐಂದ್ರಾಸ್ತ್ರವಜ್ರಾಸ್ತ್ರಗಳನ್ನೂ, ಶಿವನಿಗೆ ಪ್ರಧಾನವಾದ ಶೂಲಾಸ್ತ್ರವನ್ನೂ, ಬ್ರಹ್ಮಾಸ್ತ್ರವನ್ನೂ, ಐಷೀಕ ಬ್ರಹ್ಮಶಿರೋಸ್ತ್ರಗಳೆಂಬ ದಿವ್ಯಾಸ್ತ್ರಗಳನ್ನೂ ಕೊಡುವೆನು. ಇವಲ್ಲದೆ ಮೋದಕಿ, ಶಿಖರಿಣಿ ಎಂಬ ಮಹಾತೇಜಸ್ಸುಳ್ಳ ಎರಡು ಗದೆಗಳನ್ನೂ ಕೊಡುವೆನು. ಧರ್ಮಪಾಶ, ಕಾಲಪಾಶ, ವಾರುಣಪಾಶ ಗಳೆಂಬ ಅತ್ಯುತ್ತಮಗಳಾದ ಮೂರು ಪಾಶಗಳನ್ನೂ ಕೊಡುವೆನು. ಶುಷ್ಕಾ ಶನಿ, ಆರ್ದ್ರಾಶನಿಗಳೆಂಬ ಎರಡು ಮಹಾಸ್ತ್ರಗಳನ್ನೂ ಮತ್ತು ಪೈನಾಕಾಸ್ತ್ರ, ನಾರಾಯಣಾಸ್ತ್ರಗಳನ್ನೂ, ಶಿಖರವೆಂಬ ಆಗ್ನೇಯಾಸ್ತ್ರವನ್ನೂ ಕೊಡುವೆನು. ಪ್ರಥನವೆಂಬ ವಾಯವ್ಯಾಸ್ತ್ರವನ್ನೂ. ಹಯಶಿರೋಸ್ತ್ರವನ್ನೂ, ಕ್ರೌಂಚಾಸ್ತ್ರ ವನ್ನೂ, ವಿಷ್ಣುಶಕ್ತಿ ರುದ್ರಶಕ್ತಿಗಳನ್ನೂ ಕೊಡುವೆನು. ಇವಲ್ಲದೆ ರಾಕ್ಷಸರಿಗೆ ಯೋಗ್ಯವಾದ ಕಂಕಾಳ, ಮುಸಲ, ಕಾಪಾಲ, ಕಂಕಣಗಳೆಂಬ ಭಯಂಕರ ಗಳಾದ ಅಸ್ತ್ರಗಳನ್ನೆಲ್ಲಾ ಸ್ವೀಕರಿಸು. ವಿದ್ಯಾಧರದೇವತಾತ್ಮಕವಾದ ನಂದನ ವೆಂಬ ಮಹಾಸ್ತ್ರವನ್ನೂ ಮಾನವ, ಪ್ರಸ್ವಾಪನ, ಪ್ರಶಮನಗಳೆಂಬ ಗಾಂಧರ್ವಾಸ್ತ್ರಗಳನ್ನೂ ಸೂರ್ಯ ದೇವತಾತ್ಮಕವಾದ ಸೌರಾಸ್ತ್ರವನ್ನೂ ಕೊಡುವೆನು. ಮನ್ಮಥದೇವತಾತ್ಮಕವಾದ ದರ್ಪಣ, ಶೋಷಣ, ಸಂತಾಪನ,

---

1. ಅಸ್ತ್ರಗಳನ್ನು ಕೊಡುವುದೆಂದರೆ, ಅಸ್ತ್ರಮಂತ್ರಗಳನ್ನುಪದೇಶಿಸುವು ದೆಂದು ಗ್ರಹಿಸಬೇಕು. ಈ ಅಸ್ತ್ರಗಳಿಗೆ ಭೃಶಾಶ್ವನ ಮಕ್ಕಳೇ ಅಧಿದೇವತೆ ಗಳಾಗಿರುವುದರಿಂದ, ಈ ಅಸ್ತ್ರಗಳಿಗೂ ಭೃಶಾಶ್ವನ ಮಕ್ಕಳೆಂದೇ ವ್ಯವಹಾರವು.

ವಿಲಾಪನ, ಮದನಗಳೆಂಬ ಮಹಾಸ್ತ್ರಗಳನ್ನೂ, ಪಿಶಾಚದೇವತಾತ್ಮಕವಾದ ಮೋಹನವೆಂಬ ಅಸ್ತ್ರವನ್ನೂ ಕೊಡುವೆನು. ಇದೇಅಲ್ಲದೆ, ತಾಮಸ, ಸೌಮನ, ಸಂವರ್ಥ, ಮೌಸಲವೆಂಬ ಮಹಾಸ್ತ್ರಗಳನ್ನೂ ಕೊಡುವೆನು. ಸತ್ಯ ಮಾಯಾಧರಗಳೆಂಬ ಅಸ್ತ್ರಗಳನ್ನೂ, ಶತ್ರುಗಳ ವೀರ್ಯವನ್ನಡಗಿಸತಕ್ಕ ಘೋರವಾದ, ತೇಜಃಪ್ರಭವೆಂಬ ಮಹಾಸ್ತ್ರವನ್ನೂ [1]ಶಿಶಿರವೆಂಬ ಸೌಮ್ಯಾಸ್ತ್ರವನ್ನೂ ತ್ವಷ್ಟೃದೇವತಾತ್ಮಕವಾದ ಸುಧಾಮನಾಸ್ತ್ರವನ್ನೂ, ಶಿತೇಷುವೆಂಬ ಹೆಸರುಳ್ಳ ಭಗಾಸ್ತ್ರವನ್ನೂ, ಮಾನವಾಸ್ತ್ರವೇ ಮೊದಲಾದ ಮಹಾಬಲವುಳ್ಳ ಮತ್ತು ಕಾಮರೂಪವುಳ್ಳ ಅಸ್ತ್ರಗಳನ್ನೂ ಕೊಡುವೆನು. ಇವೆಲ್ಲವೂ ಸರ್ವೋತ್ಕೃಷ್ಟವಾದುವುಗಳು. ಇವುಗಳನ್ನು ಈಗಲೇ ಗ್ರಹಿಸು" ಎಂದು ಹೇಳಿ, ಆ ಮಹರ್ಷಿಯು ಬಹಳ ಶುಚಿಯಾಗಿ ಪೂರ್ವಾಭಿಮುಖವಾಗಿ ಕುಳಿತುಕೊಂಡು ಆ ಮಂತ್ರಗಳೆಲ್ಲವನ್ನೂ ಶ್ರೀರಾಮನಿಗೆ ಉಪದೇಶಿಸಿದನು. ಈ ಅಸ್ತ್ರಗಳೆಲ್ಲವನ್ನೂ ತಿಳಿಯಬೇಕೆಂದರೆ ದೇವತೆಗಳಿಗೂ ಅಸಾಧ್ಯವು. ಅಂತಹ ಮಹಾಸ್ತ್ರಗಳೆಲ್ಲವನ್ನೂ ರಾಮನಿಗೆ ಉಪದೇಶಿಸಬೇಕೆಂದು ವಿಶ್ವಾಮಿತ್ರನು ಜಪವನ್ನು ಮಾಡುತ್ತಿರುವಾಗಲೇ, ಅವೆಲ್ಲವೂ ಆಕಾರದೊಡನೆ ಬಂದು ರಾಮನ ಸಮೀಪವನ್ನು ಸೇರಿ ಸಂತೋಷದಿಂದ ಕೈಮುಗಿದುಕೊಂಡು, "ಎಲೈ ರಾಮನೆ! ನಾವೆಲ್ಲರೂ ನಿನಗೆ ಕಿಂಕರರಾಗಿರುವೆವು" ಎಂದುವು. ರಾಮನೂ ಕೂಡ ಅವುಗಳ ಸೇವೆಯನ್ನಂಗೀಕರಿಸಿ, ಕೈಗಳಿಂದ ಸವರಿ "ಎಲೈ ಅಸ್ತ್ರಗಳೆ! ನೀವು ನನ್ನ ಮನಸಿನಲ್ಲಿ ಸೇರಿರಿ" ಎಂದು ಆಜ್ಞಾಪಿಸಿದನು. ಆಮೇಲೆ ರಾಮನು ಸಂತೋಷದಿಂದ ವಿಶ್ವಾಮಿತ್ರನಿಗೆ ನಮಸ್ಕರಿಸಿ ಮುಂದಿನ ಪ್ರಯಾಣಕ್ಕೆ ಸಿದ್ಧನಾದನು.

ಇಲ್ಲಿಗೆ ಇಪ್ಪತ್ತೇಳನೆಯ ಸರ್ಗವು.

ವಿಶ್ವಾಮಿತ್ರನು ರಾಮನಿಗೆ ಉಪಸಂಹಾರಮಂತ್ರಗಳನ್ನುಪದೇಶಿಸಿದುದು.

ಹೀಗೆ ರಾಮನು ಶುಚಿಯಾಗಿದ್ದು ಆ ಅಸ್ತ್ರಗಳೆಲ್ಲವನ್ನೂ ಪ್ರತಿಗ್ರಹಿಸಿದ ಮೇಲೆ, ಸಂತೋಷದಿಂದ ಅರಳಿದ ಮುಖವುಳ್ಳವನಾಗಿ ಪ್ರಯಾಣಮಾಡುತ್ತ, ವಿಶ್ವಾಮಿತ್ರನನ್ನು ನೋಡಿ, "ಎಲೈ ಪೂಜ್ಯನೆ! ನಿನ್ನ ಅನುಗ್ರಹದಿಂದ

1. "ನನ್ನ ಮನೋನುವರ್ತಿಗಳಾಗಿ ನಡೆಯಿರಿ" ಎಂದು ಭಾವವು.

ಸಮಸ್ತಾಸ್ತ್ರಗಳನ್ನೂ ಗ್ರಹಿಸಿದೆನು. ಆ ಅಸ್ತ್ರಗಳ ಪ್ರಭಾವದಿಂದ ದೇವತೆಗಳಿಗೂ ನಾನು ಅಜೇಯನಾದುದೇನೋ ಸಹಜವು. ಆದರೆ ಇವುಗಳ ಉಪಸಂಹಾರಮಂತ್ರವನ್ನೂ ನನಗೆ ಉಪದೇಶಿಸಬೇಕು" ಎಂದು ಪ್ರಾರ್ಥಿಸಿದನು. ಆಗ ವಿಶ್ವಾಮಿತ್ರನು ಶುಚಿಯಾಗಿ ಬಂದು, ಅವುಗಳ ಉಪಸಂಹಾರಮಂತ್ರವನ್ನೂ ರಾಮನಿಗೆ ಉಪದೇಶಿಸಲಾರಂಭಿಸಿದನು. "ರಾಮಾ! ಆತ್ಮವಂತ, ಸತ್ಯಕೀರ್ತಿ, ಧೃಷ್ಟ, ರಭಸ, ಪ್ರತೀಹಾರಕರ, ಪರಾಜ್ಮುಖ, ಅವಾಜ್ಮುಖ, ಲಕ್ಷಾಕ್ಷ, ವಿಷಮ, ದೃಢನಾಭ, ಸುನಾಭ, ದಶಾಕ್ಷ, ಶತವಕ್ತ್ರ, ದಶಶೀರ್ಷ, ಶಿತೋದರ, ಪದ್ಮನಾಭ, ಮಹಾನಾಭ, ದುಂದುನಾಭ, ಸುನಾಭಕ, ಜ್ಯೋತಿಷ, ಕ್ರಶನ, ನೈರಾಶ್ಯ, ವಿಮಲ, ಯೋಗಂಧರ, ಹರಿದ್ರ, ದೈತ್ಯ, ಪ್ರಶಮನ, (ಶುಚಿ, ಬಾಹು, ಮಹಾಬಾಹು, ನಿಷ್ಕಲಿ, ವಿರುಚಿ), ಸಾರ್ಚಿಮಾಲಿ, ಧೃತಿ, ಮಾಲಿ, ವೃತ್ತಿಮಂತ, ರುಚಿರ, ಪಿತ್ರ್ಯಸೌಮನಸ, ವಿಧೂತ, ಮಕರ, ಕರವೀರಕರ, ಧನ, ಧಾನ್ಯ, ಕಾಮರೂಪ, ಕಾಮರುಚಿ, ಮೋಹ, ಆವರಣ, ಜೃಂಭಕ, ಸರ್ವನಾಭ, ಸಂತಾನ, ವರಣಗಳೇ ಮೊದಲಾಗಿ ಭೃಶಾಶ್ವನಲ್ಲಿ ಹುಟ್ಟಿ ಕಾಮರೂಪಿಗಳಾಗಿರುವ ಉಪಸಂಹಾರಮಂತ್ರಗಳನ್ನೂ ಗ್ರಹಿಸು. ನಿನಗೆ ಮಂಗಳವುಂಟಾಗಲಿ! ನೀನೇ ಇವುಗಳಿಗೆ ತಕ್ಕ ಪಾತ್ರವು" ಎಂದು, ಅವೆಲ್ಲವನ್ನೂ ರಾಮನಿಗೆ ಕೊಟ್ಟನು. ರಾಮನು ಸಂತೋಷದಿಂದ ಗ್ರಹಿಸಲು, ಅವೆಲ್ಲವೂ ಪುರುಷಾಕಾರದಿಂದ ರಾಮನ ಸಮೀಪಕ್ಕೆ ಬಂದುವು. ಅವುಗಳಲ್ಲಿ ಕೆಲವು ತೇಜೋಮಯವಾದ ಆಕಾರವುಳ್ಳವುಗಳಾಗಿ ಶಂಖಪ್ರದಗಳಾಗಿದ್ದುವು. ಮತ್ತೆ ಕೆಲವು ಕೆಂಡದಂತೆಯೂ, ಕೆಲವು ಹೊಗೆಗಳಂತೆಯೂ, ಕೆಲವು ಚಂದ್ರಸೂರ್ಯರಂತೆಯೂ ಕಾಣಿಸುತ್ತಿದ್ದುವು. ಅವೆಲ್ಲವೂ ತಲೆಯನ್ನು ತಗ್ಗಿಸಿ ಕೈಮುಗಿದುಕೊಂಡು, ರಾಮನನ್ನು ನೋಡಿ, ಮೃದುವಾದ ಮಾತಿನಿಂದ "ಎಲೈ, ಪುರುಷಶ್ರೇಷ್ಠನೆ! ಇದೋ! ನಾವು ನಿನಗೆ ವಶರಾಗಿರುವೆವು. ಮಾಡಬೇಕಾದ ಕೆಲಸವನ್ನಾಜ್ಞಾಪಿಸು" ಎಂದು ಪ್ರಾರ್ಥಿಸಲು, ರಾಮನು ಅವೆಲ್ಲವನ್ನೂ ನೋಡಿ; "ನನಗೆ ಸಮಯ ಬಂದಾಗ ನಿಮ್ಮನ್ನು ಸ್ಮರಿಸುವೆನು. ಆಗ ನೀವು ನನಗೆ ಸಹಾಯಮಾಡಿರಿ. ಈಗ ನೀವು ಹೋಗಬಹುದು" ಎಂದನು. ಆಗ ಅವೆಲ್ಲವೂ ಹಾಗೆಯೇ ಆಗಲೆಂದು ಒಪ್ಪಿಕೊಂಡು, ರಾಮನನ್ನು ಪ್ರದಕ್ಷಿಣಮಾಡಿ ಹೊರಟುಹೋದುವು. ಆಮೇಲೆ ರಾಮನು ವಿಶ್ವಾಮಿತ್ರನ ಅಪ್ಪಣೆಯಮೇಲೆ ಲಕ್ಷ್ಮಣ

ನಿಗೂ ಅಸ್ತ್ರಗಳ ಪ್ರಯೋಗೋಪಸಂಹಾರಮಂತ್ರಗಳನ್ನು ಉಪದೇಶಿಸಿದನು. ಅನಂತರದಲ್ಲಿ ಮುಂದೆ ಮುಂದೆ ಪ್ರಯಾಣಮಾಡುತ್ತಿರುವಾಗ ರಾಮನು ವಿಶ್ವಾಮಿತ್ರನನ್ನು ಕುರಿತು "ಎಲೈ ಮಹರ್ಷಿಯೇ! ಇದೇನು? ಈ ಪರ್ವತ ಸಮೀಪದಲ್ಲಿ ಮೇಘದಂತಿರುವ ಗಿಡಗಳ ಸಮೂಹವಿರುವುದು. ಇದು ಮೃಗಗಳಿಂದಲೂ, ನಾನಾ ವಿಧವಾಗಿ ಗಾನಮಾಡುತ್ತಿರುವ ಪಕ್ಷಿಸಮೂಹ ದಿಂದಲೂ ನೋಡುವುದಕ್ಕೆ ಬಹಳ ಮನೋಹರವಾಗಿರುವುದು. ಆದುದರಿಂದ ಈ ಸ್ಥಳವಾವುದೆಂದು ತಿಳಿದುಕೊಳ್ಳಬೇಕೆಂಬ ಕುತೂಹಲವು ನನಗೆ ಬಹಳ ವಾಗಿರುವುದು. ಭಯಂಕರವಾದ ತಾಟಕಾವನವನ್ನು ನಾವು ದಾಟಿ ಬಂದು ಬಿಟ್ಟೆವಲ್ಲವೆ! ಈ ಪ್ರದೇಶವು ಬಹಳ ಸೌಮ್ಯವಾಗಿರುವುದರಿಂದ ಇದೊಂದು ಋಷ್ಯಾಶ್ರಮವಾಗಿರಬಹುದೆಂದು ತೋರುವುದು. ಇದು ಯಾರ ಆಶ್ರಮ ವೆಂಬುದನ್ನು ಹೇಳಬೇಕು. ಬ್ರಾಹ್ಮಣಘಾತುಕರಾಗಿಯೂ, ದುರಾತ್ಮ ರಾಗಿಯೂ, ಇರುವ ಮಾರೀಚನೇ ಮೊದಲಾದ ರಾಕ್ಷಸರು ನಿಮ್ಮ ಯಜ್ಞ ವನ್ನು ಕೆಡಿಸುವುದಕ್ಕೋಸ್ಕರ ಬರತಕ್ಕ ದಾರಿ ಯಾವುದು? ನಾವು ಅವರನ್ನು ಕೊಲ್ಲಬೇಕಾದುದೆಲ್ಲಿ? ನೀವು ಯಜ್ಞಕಾರ್ಯವನ್ನು ಮಾಡತಕ್ಕ ಸ್ಥಳವಾ ವುದು? ಇದೆಲ್ಲವನ್ನೂ ನಮಗೆ ನೀವು ವಿಸ್ತಾರವಾಗಿ ತಿಳಿಸಬೇಕು" ಎಂದನು.

ಇಲ್ಲಿಗೆ ಇಪ್ಪತ್ತೆಂಟನೆಯ ಸರ್ಗವು.

❋ ವಾಮನಮೂರ್ತಿ ವೃತ್ತಾಂತವು, ವಿಶ್ವಾಮಿತ್ರನು ದೀಕ್ಷೆಯನ್ನು ವಹಿಸಿದುದು. ❋

ಹೀಗೆ ಆ ವನದ ವೃತ್ತಾಂತವನ್ನು ಕೇಳಬೇಕೆಂದಿರುವ ರಾಮನಿಗೆ ಮಹಾತೇಜಸ್ವಿಯಾದ ವಿಶ್ವಾಮಿತ್ರನು ಅದನ್ನು ವಿವರಿಸಲಾರಂಭಿಸಿ, "ಎಲೈ ರಾಮನೆ! ದೇವದೇವನಾದ ಶ್ರೀಮಹಾವಿಷ್ಣುವು ಲೋಕದಲ್ಲಿ ತಪಸ್ಸನ್ನು ಪ್ರಚಾರಪಡಿಸುವುದಕ್ಕಾಗಿ [1]ತಾನೂ ತಪಸ್ಸುಮಾಡಬೇಕೆಂದು ನಿಶ್ಚಯಿಸಿ, ಅನೇಕ ಶತಸಂವತ್ಸರಗಳವರೆಗೆ ಈ ವನದಲ್ಲಿ ವಾಸಮಾಡುತ್ತಿದ್ದನು. ಇದೇ ಮಹಾತ್ಮನಾದ ಆ ವಾಮನನ ಆಶ್ರಮವು. ಮಹಾತಪಸ್ವಿಯಾದ ಕಾಶ್ಯಪನೂ ಇದರಲ್ಲಿಯೇ ಸಿದ್ಧಿಯನ್ನು ಹೊಂದಿದನು. ಈ ಕಾರಣದಿಂದಲೇ ಇದು

---

1. ಮೊದಲು ವಿಷ್ಣುಸ್ವರೂಪದಿಂದಲೂ, ಆಮೇಲೆ ವಾಮನಸ್ವರೂಪ ದಿಂದಲೂ ಇಲ್ಲಿ ತಪಸ್ಸು ಮಾಡುತ್ತಿದ್ದನೆಂದು ತಿಳಿಯಬೇಕು.

ಸಿದ್ಧಾಶ್ರಮವೆಂಬ ಅನ್ವರ್ಥನಾಮವನ್ನು ಹೊಂದಿರುವುದು. ಆ ದೇವನು ತಪಸ್ಸನ್ನಮಾಡುತ್ತಿದ್ದ ಕಾಲದಲ್ಲಿ ವಿರೋಚನನ ಮಗನಾದ ಬಲಿಯೆಂಬ ರಾಕ್ಷಸನು ಮರುದ್ಗಣಗಳೊಡಗೂಡಿದ ದೇವತೆಗಳನ್ನೂ, ಇಂದ್ರನನ್ನೂ ಜಯಿಸಿ, ಲೋಕಪ್ರಸಿದ್ಧನಾಗಿ ಆ ಸ್ವರ್ಗರಾಜ್ಯವನ್ನು ತಾನೇ ಆಕ್ರಮಿಸಿ ಕೊಂಡು ಪಾಲಿಸುತ್ತಿದ್ದನು. ಆ ಬಲಿಚಕ್ರವರ್ತಿಯು ಒಂದಾನೊಂದು ಯಜ್ಞ ವನ್ನಾರಂಭಿಸಿ ನಡೆಸುತ್ತಿರುವಾಗ ಅದನ್ನು ನೋಡಿ ದೇವತೆಗಳೆಲ್ಲರಿಗೂ ಭಯವು ಹುಟ್ಟಿತು. ಆಗ ಅವರೆಲ್ಲರೂ ಅಗ್ನಿಯನ್ನು ಮುಂದಿಟ್ಟುಕೊಂಡು ಗುಂಪಾಗಿ ಈ ಆಶ್ರಮಕ್ಕೆ ಬಂದು, ಇಲ್ಲಿದ್ದ ವಿಷ್ಣುವನ್ನು ನೋಡಿ, "ಎಲೈ ಮಹಾವಿಷ್ಣುವೆ! ವಿರೋಚನನ ಮಗನಾದ ಬಲಿಯು ಒಂದು ದೊಡ್ಡ [1]ಯಜ್ಞವನ್ನಾರಂಭಿಸಿರುವನು. ಅದು ಮುಗಿಯುವುದಕ್ಕೆ ಮೊದಲೇ ನಮ್ಮ ಕೆಲಸವನ್ನು ತೀರಿಸಿಕೊಳ್ಳಬೇಕು. ಈ ಯಜ್ಞದಲ್ಲಿ ಯಾರು ಯಾವುದನ್ನು ಯಾಚಿಸಿದರೂ, ಅದನ್ನು ದಾನಮಾಡಿಬಿಡುವುದಾಗಿ ಬಲಿಯು ಸಂಕಲ್ಪಿಸಿರು ವನು. ಈ ಸಂದರ್ಭದಲ್ಲಿ ನೀನು ನಮಗೆ ಮಾಡಬೇಕಾದ ಉಪಕಾರವೇನೆಂದರೆ, ನಿನ್ನ ಯೋಗಮಾಯೆಯಿಂದ ಈ ಪರಸ್ವರೂಪವನ್ನು ಮರೆಸಿಕೊಂಡು, ವಾಮನವೇಷವನ್ನು ಧರಿಸಿ, ಅಲ್ಲಿಗೆ ಹೋಗಿ, ಉಪಾಯದಿಂದ ನಮಗೆ ಜಯ ವನ್ನುಂಟುಮಾಡಬೇಕು" ಎಂದು ಪ್ರಾರ್ಥಿಸಿದರು.

[2]ಈ ಕಾಲಕ್ಕೆ ಸರಿಯಾಗಿ ಕಾಶ್ಯಪನು ಕಾಂತಿಯೊಡಗೂಡಿದ ಅಗ್ನಿ

---

1. ಯಜ್ಞವೆಂದರೆ ದೇವತೆಗಳ ಪ್ರೀತ್ಯರ್ಥವಾಗಿ ಮಾಡತಕ್ಕ ಕೆಲಸವು. ದೇವತೆಗಳಿಗೆ ಆಜನ್ಮದ್ವೇಷಿಯಾದ ಬಲಿಯು ಇಂದ್ರಾದಿದೇವತಾಪ್ರೀತ್ಯರ್ಥ ವಾಗಿ ಯಜ್ಞವನ್ನು ಮಾಡುವುದು ಹೇಗೆ ಸಮಂಜಸವು? ಎಂದು ಕೆಲವರು ಆಕ್ಷೇಪಿಸಬಹುದು. ವಿಷ್ಣುಭಕ್ತಾಗ್ರೇಸರನಾದ ಈ ಬಲಿಯು ಆತನ ಪ್ರೀತ್ಯರ್ಥ ವಾಗಿಯೇ ಈ ಯಾಗವನ್ನು ಮಾಡುತ್ತಿದ್ದನೆಂದು ತಿಳಿಯಬೇಕು. ಆದರೆ ವಿಷ್ಣುವು ತನ್ನ ಭಕ್ತನಿಗೇ ತಾನು ವಿರೋಧವನ್ನು ಮಾಡಬಹುದೆ? ಎಂದರೆ, ತಂದೆಯಾದವನು ತನ್ನ ಮಕ್ಕಳಲ್ಲಿ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದರೆ, ದುಷ್ಟನಾದವನನ್ನು ಶಿಕ್ಷಿಸುವಂತೆ, ಆಶ್ರಿತರಾದ ದೇವತೆಗಳಿಗೆ ವಿರೋಧಿಸುವ ಬಲಿಯನ್ನು ಶಿಕ್ಷಿಸುವುದು ವಿಷ್ಣುವಿಗೆ ನ್ಯಾಯವೆಂದೇ ಗ್ರಹಿಸಬೇಕು.

2. ಇಲ್ಲಿ ಕ್ರಮವು ಹೇಗೆಂದರೆ, "ಸೋಽಕಾಮಯತ ಬಹುಸ್ಯಾಂ ಪ್ರಜಾ- ಯೇಯೇತಿ, ಸ ತಪೋಽತಪ್ಯತ" ಎಂಬ ಶ್ರುತ್ಯನುಸಾರವಾಗಿ, ವಿಷ್ಣುವು

ಯಂತೆ ಅದಿತಿಯೊಡಗೂಡಿ ಒಂದು ಸಾವಿರ ದೇವವರ್ಷಗಳ ಕಾಲದವರೆಗೆ ವಿಷ್ಣುವನ್ನು ಕುರಿತು ತಪಸ್ಸುಮಾಡುತ್ತಿದ್ದನು. ಅದು ಮುಗಿದಮೇಲೆ ವಿಷ್ಣುವು ಪ್ರಸನ್ನನಾಗಿ ಪ್ರತ್ಯಕ್ಷನಾಗಲು, ಆ ಅದಿತಿ ಕಾಶ್ಯಪರಿಬ್ಬರೂ ಆ ವಿಷ್ಣುವನ್ನು ಕುರಿತು, "ಎಲೈ ದೇವನೇ! [1]ನೀನು ತಪೋಮಯನು. ನೀನೇ ತಪೋರಾಶಿಯು. ನೀನೇ ಜ್ಞಾನಸ್ವರೂಪನು. ತಪಸ್ಸೆಂಬುದು ನಿನ್ನ ಸ್ವರೂಪವಲ್ಲದೆ ಮತ್ತೊಂದಲ್ಲ. ನೀನು ಪುರುಷೋತ್ತಮನೆನಿಸಿಕೊಂಡಿರುವೆ. ಅನನ್ಯಪ್ರಯೋಜನವಾಗಿ ಇದುವರೆಗೆ ಮಾಡಿದ ತಪಸ್ಸಿನ ಪ್ರಭಾವದಿಂದ ಅಂತಹ ನಿನ್ನನ್ನು ಪ್ರತ್ಯಕ್ಷವಾಗಿ ನೋಡಿದೆನು. ಎಲೈ ಲೋಕನಾಯಕನೆ! ಚರಾಚರಾತ್ಮಕವಾದ ಸಮಸ್ತ ಪ್ರಪಂಚವೂ ನಿನ್ನ ಶರೀರದಲ್ಲಿ ಕಾಣಿಸುತ್ತಿರುವುದು. ನಿನಗಿಂತಲೂ ಮೊದಲು ಹುಟ್ಟಿದವರು ಯಾರೂ ಇಲ್ಲ. ನೀನು ಇಂತವನೆಂದು ನಿರ್ಣಯಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಇದೋ! ನಾನು ನಿನ್ನಲ್ಲಿ ಮರೆಹೊಕ್ಕಿರುವೆನು" ಎಂದು ಅನೇಕ ವಿಧದಲ್ಲಿ ಸ್ತೋತ್ರಮಾಡಿದನು. ಆಗ ವಿಷ್ಣುವು ಆತನ ಸ್ತೋತ್ರಕ್ಕೆ ಬಹಳವಾಗಿ ಮೆಚ್ಚಿ ನಿಷ್ಕಲ್ಮಷನಾದ ಆ ಕಾಶ್ಯಪನನ್ನು ನೋಡಿ, "ಎಲೈ ಕಾಶ್ಯಪನೆ, ನಾನು ನಿನ್ನ ತಪಸ್ಸಿಗೆ ಬಹಳವಾಗಿ ಮೆಚ್ಚಿದೆನು. ನಿನಗೆ ಶುಭವಾಗಲಿ! ನಿನಗೆ ಬೇಕಾದ ವರವನ್ನು ಕೇಳು" ಎಂದನು.

ಮರೀಚಿಪುತ್ರನಾದ ಕಾಶ್ಯಪನು ಈ ಮಾತನ್ನು ಕೇಳಿ, ವಿಷ್ಣುವನ್ನು ಕುರಿತು "ಎಲೈ ಪ್ರಭುವೆ! ಆಶ್ರಿತರನ್ನು ರಕ್ಷಿಸುವುದೇ ನಿನ್ನ ವ್ರತವು.

ಜಗದ್ರಕ್ಷಣಚಿಂತಾಪರನಾಗಿ ಈ ಪ್ರದೇಶದಲ್ಲಿ ಬಹುಕಾಲದವರೆಗೆ ಯಾರ ಕಣ್ಣಿಗೂ ಬೀಳದೆ ವಾಸಿಸುತ್ತಿದ್ದನು. ಇದನ್ನು ತಿಳಿದು ಕಾಶ್ಯಪನು ಆ ಮಹಾವಿಷ್ಣುವನ್ನು ತನ್ನ ಪುತ್ರನನ್ನಾಗಿ ಪಡೆಯಬೇಕೆಂದುದ್ದೇಶಿಸಿ, ಸಪತ್ನೀಕನಾಗಿ, ಅನೇಕ ಸಹಸ್ರ ವರ್ಷಗಳವರೆಗೆ ಆತನ ಆರಾಧನ ರೂಪವಾದ ಒಂದು ವ್ರತವನ್ನು ನಡೆಸುತ್ತಿದ್ದನು. ಅದನ್ನು ಮುಗಿಸುವಾಗ ತನಗೆ ಪ್ರಸನ್ನನಾಗಿ ಪ್ರತ್ಯಕ್ಷನಾದ ವಿಷ್ಣುವನ್ನು ಸ್ತುತಿಸುತ್ತಿದ್ದನು. ಆ ಕಾಲಕ್ಕೆ ಸರಿಯಾಗಿಯೇ ದೇವತೆಗಳೂ ಅಲ್ಲಿಗೆ ಬಂದು ಆತನನ್ನು ಪ್ರಾರ್ಥಿಸಿದರೆಂದು ಗ್ರಹಿಸಬೇಕು.

1. ತಪೋಮಯನೆಂದರೆ, ತಪಃಪ್ರಚುರನು ಅಥವಾ ಜ್ಞಾನಪ್ರಚುರನು. ತಪೋರಾಶಿಯೆಂದರೆ ತಪೋರಾಶಿ ಸ್ವರೂಪನು ಅಥವಾ ತೇಜೋರಾಶಿಯೆಂದರ್ಥವು.

ಆದುದರಿಂದ ನೀನು ನನಗೂ, ಈ ಅದಿತಿಗೂ, ಈ ದೇವತೆಗಳಿಗೂ, ಇಷ್ಟಾರ್ಥ ವನ್ನು ಕೈಗೂಡಿಸುವಂತೆ ಅನುಗ್ರಹವನ್ನು ಮಾಡಬೇಕು. ಅದೇನೆಂದರೆ, "ನೀನು ದಾನವರನ್ನು ಸಂಹರಿಸುವುದಕ್ಕಾಗಿ ಈ ಅದಿತಿಯ ಗರ್ಭದಲ್ಲಿ ನನಗೆ ಪುತ್ರನಾಗಿಯೂ, ಇಂದ್ರನಿಗೆ ಒಡಹುಟ್ಟಿದವನಾಗಿಯೂ ಅವತಾರಮಾಡಿ, ಆ ದಾನವರನ್ನು ಅಡಗಿಸಿ, ದೇವತೆಗಳಿಗೆ ಕ್ಷೇಮವನ್ನುಂಟುಮಾಡಬೇಕು. ಈ ಸ್ಥಳದಲ್ಲಿ ನನ್ನ ವ್ರತವು ಸಿದ್ಧಿಸಿದುದರಿಂದ ಇದಕ್ಕೂ "ಸಿದ್ಧಾಶ್ರಮ"ವೆಂಬ ಹೆಸರು ಪ್ರಸಿದ್ಧವಾಗಿರಬೇಕು. ಆದುದರಿಂದ ಈಗಲೇ ನೀನು ಈ ನಮ್ಮ ಕೋರಿಕೆಗಳನ್ನು ಸಲ್ಲಿಸುವುದಕ್ಕಾಗಿ ಹೊರಡು" ಎಂದು ಪ್ರಾರ್ಥಿಸಿದನು. ಒಡನೆಯೇ ವಿಷ್ಣುವು ಅದಿತಿದೇವಿಯಲ್ಲಿ ವಾಮನರೂಪದಿಂದ ಹುಟ್ಟಿ, ಬಲಿ ಚಕ್ರವರ್ತಿಯ ಬಳಿಗೆ ಬಂದು, ಅವನು ಯಾಗಮಾಡುತ್ತಿರುವ ಕಾಲದಲ್ಲಿ ತನಗೆ ಮೂರು ಹೆಜ್ಜೆಗಳ ಅಗಲವುಳ್ಳ ಭೂಮಿಯನ್ನು ದಾನಮಾಡಬೇಕೆಂದು ಯಾಚಿಸಿದನು. ಅದಕ್ಕಾಗಿ ಬಲಿಚಕ್ರವರ್ತಿಯು ಒಪ್ಪಿ, ಭೂಮಿಯನ್ನು ಧಾರೆ ಯೆರೆದು ಕೊಡುವಾಗ, ವಾಮನನು ದೊಡ್ಡ ಆಕಾರವನ್ನು ತಾಳಿ, ತನ್ನ ಮೂರು ಹೆಜ್ಜೆಯಿಂದಲೇ ಮೂರು ಲೋಕಗಳನ್ನೂ ಅಳೆದು ಸ್ವಾಧೀನಮಾಡಿ ಕೊಂಡು, ಮೂರನೆಯ ಹೆಜ್ಜೆಯಿಂದ ಆತನನ್ನು ಮೆಟ್ಟಿ ರಾಜ್ಯವನ್ನು ಪುನಃ ಇಂದ್ರನಿಗೆ ತೆಗೆದುಕೊಟ್ಟನು. ಆಗ ಇಂದ್ರನು ಆ ತ್ರೈಲೋಕ್ಯಾಧಿಪತ್ಯವನ್ನೂ ನಿಷ್ಕಂಟಕವಾಗಿ ನಡೆಸಿದನು. ರಾಮಾ! ಅಂತಹ ವಾಮನನು ವಾಸಮಾಡು ತ್ತಿದ್ದ ಆಶ್ರಮವೇ ಇದು. ನಾನೂ ಕೂಡ ಅತಿಭಕ್ತಿಯಿಂದ ಈ ಆಶ್ರಮ ದಲ್ಲಿಯೇ ಇರುತ್ತಿರುವೆನು. ನನ್ನ ಯಜ್ಞಕ್ಕೆ ವಿಘ್ನಕಾರಿಗಳಾದ ರಾಕ್ಷಸರೂ ಇಲ್ಲಿಗೇ ಬರುವರು. ಪುರುಷಸಿಂಹನಾದ ನೀನು ಆ ದುರಾತ್ಮರನ್ನು ಸಂಹರಿಸ ಬೇಕಾದುದೂ ಇಲ್ಲಿಯೇ! ಆದುದರಿಂದ ಎಲೈ ರಾಮನೆ! ಈಗಲೇ ನಾವು ಸಿದ್ಧಾಶ್ರಮಕ್ಕೆ ಹೋಗುವೆವು. ಈ ಆಶ್ರಮವು ನನಗೆ ಹೇಗೋ ಹಾಗೆಯೇ ನಿನಗೂ [1]ಸ್ವೀಯವೆಂದು ತಿಳಿ" ಎಂದು ವಿಶ್ವಾಮಿತ್ರನು ಅವರಿಬ್ಬರನ್ನೂ ಕರೆದುಕೊಂಡು ಆ ಆಶ್ರಮಕ್ಕೆ ಹೋಗುತ್ತಿರುವಾಗ, ಪುನರ್ವಸುನಕ್ಷತ್ರಗಳೊಡ ಗೂಡಿ ಹಿಮಸಂಬಂಧವಿಲ್ಲದೆ ಪ್ರಕಾಶಿಸುತ್ತಿರುವ ಚಂದ್ರನಂತೆ ಕಾಣುತ್ತಿದ್ದನು.

1. ನನ್ನಂತೆಯೇ ನೀನು ಇಲ್ಲಿ ಹಿಂದೆ ವಿಷ್ಣುವಾಗಿಯೂ, ವಾಮನ ನಾಗಿಯೂ ತಪಸ್ಸುಮಾಡುತ್ತಿದ್ದವನಾದುದರಿಂದ, ಈ ಸ್ಥಳವು ನನಗೆ ಹೇಗೋ ಹಾಗೆಯೇ ನಿನಗೂ ಸ್ವಂತವೆಂದು ಗೂಢಾರ್ಥವು.

ಹೀಗೆ ಬರುತ್ತಿರುವ ವಿಶ್ವಾಮಿತ್ರನನ್ನು ನೋಡಿದೊಡನೆ ಆ ಸಿದ್ಧಾಶ್ರಮದಲ್ಲಿದ್ದ ತಾಪಸರೆಲ್ಲರೂ ಮಿತಿಮೀರಿದ ಸಂತೋಷದಿಂದ ಹಾರಿ ಹಾರಿ ಕುಣಿಯುತ್ತಾ, ವಿಶ್ವಾಮಿತ್ರನಿಗೆ ಯಥೋಚಿತವಾದ ಪೂಜೆಯನ್ನು ಮಾಡಿ, ಆ ರಾಜಕುಮಾರರಿಗೂ ಅತಿಥಿಸತ್ಕಾರಗಳನ್ನು ನಡೆಸಿದರು. ಮಾರ್ಗಶ್ರಮದಿಂದ ಬಳಲಿದ್ದ ರಾಮಲಕ್ಷ್ಮಣರಿಬ್ಬರೂ ಅಲ್ಲಿ ಸ್ವಲ್ಪಕಾಲದವರೆಗೆ ವಿಶ್ರಾಂತಿಯನ್ನು ತೆಗೆದುಕೊಂಡವರಾಗಿದ್ದು, ಆಮೇಲೆ ವಿಶ್ವಾಮಿತ್ರನ ಬಳಿಗೆ ಬಂದು, "ಎಲೈ ಮಹಾತ್ಮನೆ! ಇನ್ನು ನೀನು ದೀಕ್ಷೆಯನ್ನು ವಹಿಸು. ನಿನಗೆ ಮಂಗಳವಾಗಲಿ! ನಿನ್ನ ಯಜ್ಞವು ಸಿದ್ಧಿಸುವುದರಿಂದ ನೀನು ಹೇಳಿದಂತೆ ಇದಕ್ಕೆ ಸಿದ್ಧಾಶ್ರಮವೆಂಬ ಹೆಸರು ಸಾರ್ಥಕವಾಗಲಿ!" ಎಂದರು. ಅದರಂತೆಯೇ ವಿಶ್ವಾಮಿತ್ರನು ಜಿತೇಂದ್ರಿಯನಾಗಿ ಆಗಲೇ ದೀಕ್ಷೆಯನ್ನು ವಹಿಸಿದನು. ಈ ರಾಜಕುಮಾರರೂ ಕೂಡ ಬಹಳ ಎಚ್ಚರಿಕೆಯಿಂದ ಆ ರಾತ್ರಿಯೆಲ್ಲವನ್ನೂ ಕಳೆದು, ಬೆಳಗಾದ ಕೂಡಲೆ ಎದ್ದು, ಪ್ರಾತಸ್ಸಂಧ್ಯಾವಂದನಾದಿಕರ್ಮಗಳನ್ನು ಬಹಳ ನಿಯಮದಿಂದ ನಡೆಸಿ, ಅತ್ತಲಾಗಿ [1]ಅಗ್ನಿಹೋತ್ರವನ್ನು ಮುಗಿಸಿ ಕುಳಿತಿದ್ದ ವಿಶ್ವಾಮಿತ್ರನ ಬಳಿಗೆ ಬಂದು ನಮಸ್ಕರಿಸಿದರು.

ಇಲ್ಲಿಗೆ ಇಪ್ಪತ್ತೊಂಬತ್ತನೆಯ ಸರ್ಗವು.

{ ಶ್ರೀರಾಮನು ಮಾರೀಚನನ್ನು ದೂರಕ್ಕೋಡಿಸಿ ಸುಬಾಹುವನ್ನು ಕೊಂದುದು. }

ಕಾಲದೇಶಸ್ಥಿತಿಯನ್ನರಿತು ಸಮಯೋಚಿತವಾದ ಮಾತುಗಳನ್ನಾಡುವುದರಲ್ಲಿ ಸಮರ್ಥರಾದ ಆ ರಾಜಕುಮಾರರಿಬ್ಬರೂ, ಆ ಕಾಲದಲ್ಲಿ ವಿಶ್ವಾಮಿತ್ರನನ್ನು ನೋಡಿ, "ಎಲೈ ಮಹಾತ್ಮನೆ! ಆ ರಾಕ್ಷಸರು ಯಾವಾಗ ಬರುವರು? ಅವರನ್ನು ನಿಗ್ರಹಿಸತಕ್ಕ ಕಾಲವಾವುದು? ಆ ಕಾಲಕ್ಕೆ ಸರಿಯಾಗಿ ನಮಗೆ ತಿಳಿಸಬೇಕು." ಎಂದು ಪ್ರಾರ್ಥಿಸಿದರು. ಹೀಗೆ ರಾಕ್ಷಸರನ್ನು ಕೊಲ್ಲುವುದಕ್ಕಾಗಿ ಅತ್ಯುತ್ಸಾಹದಿಂದ ಆತುರಪಟ್ಟು ಕೇಳುತ್ತಿರುವ ಈ ಬಾಲಕರನ್ನು ನೋಡಿ, ಆ ಆಶ್ರಮದಲ್ಲಿದ್ದ ಋಷಿಗಳೆಲ್ಲರೂ ಆಶ್ಚರ್ಯಪಟ್ಟು,

1. ದೀಕ್ಷಾಮಧ್ಯದಲ್ಲಿ "ನಾಗ್ನಿಹೋತ್ರಂ ನ ದರ್ಶಪೂರ್ಣಮಾಸಾಭ್ಯಾಂ ಯಜತೇ" ಎಂಬುದಾಗಿ, ಅಗ್ನಿಹೋತ್ರಾದಿಕಾರ್ಯಗಳೆಂದೂ ನಡೆಸಲ್ಪಡುವುದಿಲ್ಲವಾದುದರಿಂದ, ಇಲ್ಲಿ ಮಾನಸಾಗ್ನಿಹೋತ್ರವೆಂದು ಗ್ರಹಿಸಬೇಕು.

ಇವರ ಧೈರ್ಯವನ್ನು ಕೊಂಡಾಡುತ್ತ, ಈ ಬಾಲಕರನ್ನು ಕುರಿತು, "ಎಲೈ ರಾಜಕುಮಾರರೆ! ಇದು ಮೊದಲು ಆರು ದಿನಗಳ ವರೆಗೆ[1] ವಿಶ್ವಾಮಿತ್ರನು ದೀಕ್ಷೆಯನ್ನು ವಹಿಸಿ, ಅದು ಮುಗಿಯುವವರಗೂ ಯಾರೊಡನೆಯೂ ಮಾತಾಡದೆ ಮೌನವ್ರತದಿಂದಿರುವನು. ಈ ಆರು ದಿನಗಳವರೆಗೂ ನೀವು ಬಹಳ ಎಚ್ಚರಿಕೆಯಿಂದ ಕಾದಿರಬೇಕು" ಎಂದರು. ಯಶಸ್ವಿಗಳಾದ ಈ ಬಾಲಕರಿಬ್ಬರೂ ಅವರ ಮಾತಿನಂತೆ ಆ ಯಜ್ಞದಿನಗಳಲ್ಲಿ ಹಗಲು ರಾತ್ರಿಯೂ ನಿದ್ರೆಯಿಲ್ಲದೆ ತಪೋವನವನ್ನು ಕಾಯುತ್ತಿದ್ದರು. ಮತ್ತೆ ಬಹಳ ಜಾಗರೂಕತೆಯಿಂದ ವಿಶ್ವಾಮಿತ್ರಮಹರ್ಷಿಯ ಸೇವೆ ಮಾಡುತ್ತ ಧನುರ್ಧಾರಿಗಳಾಗಿ ಅವರಿಗೂ ಬೆಂಗಾವಲಾಗಿದ್ದರು. ಹೀಗೆ ಐದು ದಿನಗಳು ಕಳೆದು ಆರನೆಯ ದಿವಸವು ಬಂದಾಗ, ರಾಮನು ಲಕ್ಷ್ಮಣನನ್ನು ಕುರಿತು, "ವತ್ಸ ಲಕ್ಷ್ಮಣಾ! ಎಚ್ಚರಿಕೆಯಿಂದ ಸಿದ್ಧನಾಗಿರು" ಎಂದು ಅತ್ಯುತ್ಸಾಹ ದಿಂದ ಯುದ್ಧಕಾಲವನ್ನು ನಿರೀಕ್ಷಿಸುತ್ತಿದ್ದನು. ಋತ್ವಿಕ್ಪುರೋಹಿತರಿಂದಲೂ, ಉಪಾಧ್ಯಾಯರಾದ ವಿಶ್ವಾಮಿತ್ರನಿಂದಲೂ ಕೂಡಿದ ಆ ಯಜ್ಞವೇದಿ ಕೆಯು ಅತಿಶಯವಾದ ಜ್ವಾಲೆಯನ್ನು ಹೊರಡಿಸುತ್ತ ದರ್ಭೆ, ಸಮಿತ್ತು, ಸ್ರುಕ್ಕು, ಚಮಸ ಮೊದಲಾದ ಸಾಮಗ್ರಿಗಳೊಡನೆ[2] ಉರಿಯುವುದಕ್ಕಾರಂಭಿ ಸಿತು. ಆ ಯಜ್ಞವು ಮಂತ್ರವತ್ತಾಗಿಯೂ, ಶಾಸ್ತ್ರೋಕ್ತವಾಗಿಯೂ ನಡೆಸಲ್ಪಡುತ್ತಿತ್ತು.

ಇಷ್ಟರೊಳಗಾಗಿ ಆಕಾಶದಲ್ಲಿ ಭಯಂಕರವಾದ ಒಂದು ಶಬ್ದವು ಕೇಳಿಸಿತು. ಆಗ ರಾಮನು ಬಹಳ ಕೋಪಗೊಂಡವನಾಗಿ ಮೇಲೆ ನೋಡಲು, ಮಾರೀಚ ಸುಬಾಹುಗಳೆಂಬ ರಾಕ್ಷಸರಿಬ್ಬರೂ ಬಹುವೇಗದಿಂದ ಇದಿರಾಗಿಯೇ ಬರುತ್ತಿರುವುದನ್ನು ಕಂಡನು. ಮಳೆಗಾಲದಲ್ಲಿ ಮೇಘಗಳು

---

1. ಇಲ್ಲಿ ಇದು ಮೊದಲುಗೊಂಡು ಆರು ದಿವಸಗಳ ವರೆಗೆ ದೀಕ್ಷೆ ಯಲ್ಲಿರುವನೆಂದು ಹೇಳಲ್ಪಟ್ಟಿರುವುದರಿಂದಲೂ, ಹಿಂದಿನ ಸರ್ಗದಲ್ಲಿ ಇದಕ್ಕೆ ಮೊದಲು ದಿನವೇ ದೀಕ್ಷಾಪ್ರವೇಶವೆಂದು ಹೇಳಲ್ಪಟ್ಟಿರುವುದರಿಂದಲೂ, ಇದು ಏಳು ದಿನಗಳ ಯಾಗವೆಂದು ತಿಳಿಯಬೇಕು.

2. ಇದೊಂದು ಉತ್ಪಾತ ಸೂಚನೆಯು. ಇದೇ ರಾಕ್ಷಸರು ಬರುವು ದನ್ನು ತಿಳಿಸುವುದು. ಚಮಸವೆಂದರೆ ಪಾನಪಾತ್ರವು. ಸ್ರುಕ್ಕು ಎಂದರೆ ಹೋಮಪಾತ್ರವು.

ಆಕಾಶವನ್ನು ಮರೆಸಿಕೊಳ್ಳುವಂತೆ ಮಾಯೆಯಿಂದ ಕತ್ತಲೆಯನ್ನುಂಟುಮಾಡಿ ಆ ರಾಕ್ಷಸರಿಬ್ಬರೂ ಅತಿವೇಗದಿಂದ ಬರುತ್ತಿದ್ದರು. ಆ ಮಾರೀಚ ಸುಬಾಹುಗಳೂ, ಅವರ ಅನುಚರರೂ, ಗುಂಪುಗೂಡಿ ಭಯಂಕರ ಸ್ವರೂಪವನ್ನು ತೋರಿಸುತ್ತಾ ಮೇಲಿಂದ ರಕ್ತವನ್ನು ಸುರಿಸುತ್ತಿದ್ದರು. ಆ ರಕ್ತಪ್ರವಾಹವು ಯಜ್ಞವೇದಿಕೆಯ ಮೇಲೆ ಬೀಳುವುದನ್ನು ರಾಮಲಕ್ಷ್ಮಣರು ನೋಡಿದರು. ಆಗ ರಾಮನು ಲಕ್ಷ್ಮಣನನ್ನು ನೋಡಿ "ಎಲೈ ಲಕ್ಷ್ಮಣಾ! ನೋಡು! ಮಾಂಸಾಹಾರಿಗಳಾದ ಈ ದುಷ್ಟರಾಕ್ಷಸರೆಲ್ಲರನ್ನೂ ಗಾಳಿಯು ಮೇಘಗಳನ್ನು ಹೇಗೋ ಹಾಗೆ ಈ ಮಾನವಾಸ್ತ್ರದಿಂದ ತೂರಿಬಿಡುವೆನು." ಎಂದು ಹೇಳಿ, ಜ್ವಲಿಸುತ್ತಿರುವ ಉತ್ಕೃಷ್ಟವಾದ ಮಾನವಾಸ್ತ್ರವನ್ನು ಮಾರೀಚನ ಎದೆಗೆ ಗುರಿಹಿಡಿದು ಪ್ರಯೋಗಿಸಿದನು. ಆ ಅಸ್ತ್ರದಿಂದ ಹಾರಿಸಲ್ಪಟ್ಟ ಮಾರೀಚನು ಅಂತರಿಕ್ಷದಲ್ಲಿ ಗಾಳಿಗೆ ಸಿಕ್ಕಿದ ತರಗೆಲೆಯಂತೆ ತಿರುಗುತ್ತ, ಪ್ರಜ್ಞೆತಪ್ಪಿ, ನೂರು ಯೋಜನಗಳವರೆಗೆ ಹೋಗಿ ಸಮುದ್ರ ಮಧ್ಯದಲ್ಲಿ ಬಿದ್ದನು. ಶೀತಲವಾದ ಬಾಣಗಳಿಂದ ಉಯ್ಯಲ್ಪಡುವ ಮಾರೀಚನನ್ನು ನೋಡಿ, ರಾಮನು ಲಕ್ಷ್ಮಣನನ್ನು ಕುರಿತು "ಲಕ್ಷ್ಮಣಾ! ಮಂತ್ರವತ್ತಾಗಿ ಬಿಡಲ್ಪಟ್ಟ ಶೀತಲವಾದ ಈ ಮಾನವಾಸ್ತ್ರದ ಮಹಿಮೆಯನ್ನು ನೋಡಿದೆಯಾ! ಮಾರೀಚನಿಗೆ ಪ್ರಜ್ಞೆ ತಪ್ಪಿಸಿ ಬಹುದೂರಕ್ಕೆ ಸಾಗಿಸಿತೇ ಹೊರತು ಆತನನ್ನು ಕೊಲ್ಲಲಿಲ್ಲ. ಇದೋ ನೋಡು! ಇತರ ದುಷ್ಟರಾಕ್ಷಸರನ್ನು ಕೊಲ್ಲುವೆನು. ಇವರೆಲ್ಲರೂ ರಕ್ತಪಾನಮಾಡತಕ್ಕ ಮಹಾಪಾಪಿಗಳು. ಯಜ್ಞಕ್ಕೆ ವಿಘಾತವನ್ನುಂಟುಮಾಡತಕ್ಕವರು. ಆದುದರಿಂದ ಇವರನ್ನು ಈಗಲೇ ಕೊಂದುಬಿಡುವೆನು" ಎಂದು ಹೇಳಿ, ಆಗ್ನೇಯಾಸ್ತ್ರವನ್ನು ತೆಗೆದು ಸುಬಾಹುವಿನ ಎದೆಗೆ ಗುರಿಯಿಟ್ಟು ಹೊಡೆಯಲು, ಅದರಿಂದ ಆತನು ಸತ್ತುಬಿದ್ದನು. ಹಾಗೆಯೇ ಉಳಿದ ರಾಕ್ಷಸರನ್ನೂ ವಾಯುವ್ಯಾಸ್ತ್ರದಿಂದ ಹೊಡೆದು ಕೊಂದನು. ಈ ರೀತಿಯಲ್ಲಿ ರಾಮನು ಮಹರ್ಷಿಗಳ ಯಜ್ಞಕ್ಕೆ ವಿಘ್ನವನ್ನು ತರುತ್ತಿದ್ದ ರಾಕ್ಷಸರೆಲ್ಲರನ್ನೂ ಕೊಂದು, ಋಷಿಗಳಿಗೆ ಸಂತೋಷವನ್ನುಂಟುಮಾಡಿ, ಅವರಿಂದ ವಿಶೇಷವಾಗಿ ಪೂಜಿಸಲ್ಪಟ್ಟು, ಜಯಶೀಲನಾದ ಇಂದ್ರನಂತೆ ಪ್ರಕಾಶಿಸುತ್ತಿದ್ದನು. ಆಮೇಲೆ ಯಜ್ಞಕರ್ಮಗಳೆಲ್ಲವೂ ನಿರ್ವಿಘ್ನವಾಗಿ ನೆರವೇರಿದುವು. ನಾಲ್ಕು ಕಡೆಗಳಿಂದಲೂ ಯಾವ ಬಾಧೆಯೂ ಇಲ್ಲದೆ ದಿಕ್ಕುಗಳೆಲ್ಲವೂ ಶಾಂತವಾಗಿರುವುದನ್ನು ನೋಡಿ ವಿಶ್ವಾಮಿತ್ರನು ರಾಮನನ್ನು

ಕುರಿತು "ಎಲೈ, ಆಯುಷ್ಮಂತನೆ! ಈಗಲೀಗ ನಾನು ಕೃತಾರ್ಥನಾದೆನು! ನನ್ನ ಕೋರಿಕೆಯೆಲ್ಲವೂ ನೆರವೇರಿತು! ನೀನೂ ಗುರುವಚನವನ್ನು ಕಾಪಾಡಿದ ಹಾಗಾಯಿತು! ಎಲೈ ಮಹಾಯಶಸ್ವಿಯಾದ ರಾಮನೆ! ನನ್ನ ಯಜ್ಞವು ಇಲ್ಲಿ ನಿರ್ವಿಘ್ನವಾಗಿ ಸಿದ್ಧಿಸಿದುದರಿಂದ, ಈ ತಪೋವನಕ್ಕೆ ಮೊದಲಿದ್ದ ಸಿದ್ಧಾಶ್ರಮವೆಂಬ ಹೆಸರೂ ಈಗಲೇ ಸಾರ್ಥಕವಾಯಿತು" ಎಂದನು.

ಇಲ್ಲಿಗೆ ಮೂವತ್ತನೆಯ ಸರ್ಗವು.

ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆ ಮಿಥಿಲಾ ಪಟ್ಟಣಕ್ಕೆ ಹೋದುದು

ಹೀಗೆ ರಾಮಲಕ್ಷ್ಮಣರಿಬ್ಬರೂ ವಿಶ್ವಾಮಿತ್ರನ ಕಾರ್ಯವನ್ನು ನಡೆಸಿಕೊಟ್ಟುದರಿಂದ ಕೃತಾರ್ಥರಾಗಿ, ಬಹಳ ಸಂತೋಷದಿಂದ ಆ ರಾತ್ರಿಯನ್ನು ಅಲ್ಲಿಯೇ ಕಳೆದರು. ಬೆಳಗಾದಮೇಲೆ ಪ್ರಾತಃಕಾಲದಲ್ಲಿ ಮಾಡಬೇಕಾದ ನಿತ್ಯಕರ್ಮಗಳನ್ನು ತೀರಿಸಿಕೊಂಡು, ಇತರ ಋಷಿಗಳೊಡನೆ ಸೇರಿ, ಅಗ್ನಿಯಂತೆ ಮಹಾತೇಜಸ್ಸಿನಿಂದ ಜ್ವಲಿಸುತ್ತಿರುವ ವಿಶ್ವಾಮಿತ್ರನಿಗೆ ನಮಸ್ಕರಿಸಿ, ಗಂಭೀರವಾದ ಧ್ವನಿಯಿಂದ ಆ ಋಷಿಯನ್ನು ಕುರಿತು "ಎಲೈ ಋಷಿಶ್ರೇಷ್ಠನೆ! ನಾವಿಬ್ಬರೂ ನಿನ್ನ [1]ಕಿಂಕರರಾಗಿರುವೆವು. ಮುಂದೆ ನಾವು ಮಾಡಬೇಕಾದ ಕೆಲಸವನ್ನು ಆಜ್ಞಾಪಿಸಬೇಕು" ಎಂದರು. ಆಗ ಅಲ್ಲಿದ್ದ ಋಷಿಗಳೆಲ್ಲರೂ ವಿಶ್ವಾಮಿತ್ರನ ಅನುಮತಿಯನ್ನು ಪಡೆದು, ರಾಮನನ್ನು ನೋಡಿ, "ಎಲೈ ನರಶ್ರೇಷ್ಠನೆ! ಮಿಥಿಲಾಪಟ್ಟಣಕ್ಕೆ ಅಧಿಪತಿಯಾದ ಜನಕರಾಜನು ಅತಿ ಧರ್ಮಿಷ್ಠವಾದ ಒಂದು ಯಾಗವನ್ನಾರಂಭಿಸಿರುವನು. ಅಲ್ಲಿಗೆ ನಾವು ಹೋಗುವೆವು. ನೀನೂ ನಮ್ಮೊಡನೆ ಬರಬಹುದು. ಅಲ್ಲಿ ಅದ್ಭುತವಾದ ಒಂದು ಮಹಾಧನುಸ್ಸಿರುವುದು. ಅದನ್ನೂ ನೋಡಬಹುದು. ಅದನ್ನು ಪೂರ್ವದಲ್ಲಿ ದೇವತೆ

---

1. ಇಲ್ಲಿ ಶ್ರೀರಾಮನು ವಿಶ್ವಾಮಿತ್ರನನ್ನು ಕುರಿತು ಆತನಿಗೆ ತಾನು ಕಿಂಕರನೆಂದು ಹೇಳಿಕೊಂಡಿರುವುದರಿಂದ, "ಭಕ್ತಿಕ್ರೀತೋ ಜನಾರ್ದನಃ" ಎಂಬಂತೆ ಭಗವಂತನ ಆಶ್ರಿತವಾತ್ಸಲ್ಯವೂ ವಿಶ್ವಾಮಿತ್ರನ ಭಕ್ತ್ಯತಿಶಯವೂ ಸೂಚಿತವಾಗುವುದು.

ಗಳು [1]ಒಂದಾನೊಂದು ಯಾಗಕಾಲದಲ್ಲಿ ಈ ವಂಶಸ್ಥರಿಗೆ ಕೊಟ್ಟಿರುವರು. ಅದು ಮಿತಿಯಿಲ್ಲದ ಶಕ್ತಿಯುಳ್ಳುದಾಗಿಯೂ, ಬಹಳ ತೇಜಸ್ಸುಳ್ಳುದಾಗಿಯೂ ಇರುವುದು. ದೇವತೆಗಳಾಗಲಿ, ಗಂಧರ್ವರಾಗಲಿ, ರಾಕ್ಷಸರಾಗಲಿ ಅದಕ್ಕೆ ನಾಣನ್ನು ಏರಿಸಿ ಕಟ್ಟಲಾರರು! ಅದು ಮನುಷ್ಯರಿಗೆ ಸಾಧ್ಯವಾದ ಕೆಲಸವೇ ಅಲ್ಲ. ಮಹಾಬಲಶಾಲಿಗಳಾದ ಅನೇಕ ರಾಜರು ಅದರ ಶಕ್ತಿಯನ್ನು ತಿಳಿಯಬೇಕೆಂದು ಎಷ್ಟೋ ಪ್ರಯತ್ನಪಟ್ಟರು. ಯಾರಿಂದಲೂ ಏರಿಸುವುದಕ್ಕಾಗಲಿಲ್ಲ. ಎಲೈ ರಾಮನೆ! ನೀನು ಅಲ್ಲಿಗೆ ಬಂದರೆ, ಆ ಧನುಸ್ಸನ್ನೂ, ಅದ್ಭುತವಾದ ಯಜ್ಞವನ್ನೂ ನೋಡಬಹುದು. ಆ ಜನಕನು [2]ತನ್ನ ಯಜ್ಞದಿಂದ ಪ್ರಸನ್ನರಾದ ದೇವತೆಗಳನ್ನು ಕೇಳಿಕೊಂಡುದರ ಮೇಲೆ ದೇವತೆಗಳು ಆತನಿಗೆ ಈ ಧನುಸ್ಸನ್ನು ಅನುಗ್ರಹಿಸಿ ಕೊಟ್ಟರು. ಅದಕ್ಕೆ [3]'ಸುನಾಭ'ವೆಂದು ಹೆಸರು. ಈ ಧನುಸ್ಸನ್ನು ಜನಕಮಹಾರಾಜನು ತನ್ನ ಮನೆಯಲ್ಲಿಟ್ಟು ಪ್ರತಿದಿನವೂ ನಾನಾವಿಧವಾದ ಧೂಪದೀಪಗಳಿಂದ [4]ಪೂಜಿಸುತ್ತಿರುವನು" ಎಂದರು.

ಆಮೇಲೆ ವಿಶ್ವಾಮಿತ್ರನು ರಾಮಲಕ್ಷ್ಮಣರನ್ನೂ, ಋಷಿಸಮೂಹವನ್ನೂ ಸಂಗಡ ಕರೆದುಕೊಂಡು, ಪ್ರಯಾಣಸನ್ನದ್ಧನಾಗಿ, ತನ್ನ ಆಶ್ರಮದಲ್ಲಿದ್ದ ವನದೇವತೆಗಳನ್ನು ಕುರಿತು "ನಿಮ್ಮೆಲ್ಲರಿಗೂ ಮಂಗಳವುಂಟಾಗಲಿ! ಇಲ್ಲಿ ನನ್ನ ಕಾರ್ಯಸಿದ್ಧಿಯಾಯಿತು. ಆದುದರಿಂದ ಇನ್ನು ಈ ಸಿದ್ಧಾಶ್ರಮ

---

1. ಮೊದಲು ಶಿವನು ಈ ಧನುಸ್ಸನ್ನೇ ಹಿಡಿದು ದಕ್ಷಯಾಗವನ್ನು ಧ್ವಂಸಮಾಡಿದನು. ದೇವತೆಗಳು ರುದ್ರನನ್ನು ಪ್ರಾರ್ಥಿಸಿ ಆ ಬಿಲ್ಲನ್ನು ಪಡೆದುಕೊಂಡರು. ಜನಕ ವಂಶದಲ್ಲಿ ಹಿರಿಯನಾದ ದೇವರಾತನೆಂಬವನು ಒಂದಾನೊಂದು ಕಾಲದಲ್ಲಿ ಯಜ್ಞವನ್ನುಮಾಡಿ ದೇವತೆಗಳನ್ನು ಸಂತೋಷಪಡಿಸಿ ಆ ಬಿಲ್ಲನ್ನು ಪಡೆದನು.

2. "ಪ್ರೀತಶ್ಚ ಭಗವಾನೀಶಸ್ತ್ರಿಶೂಲೀ ನೀಲಲೋಹಿತಃ| ಪ್ರದದೌ ಶತ್ರುನಾಶಾರ್ಥಂ ಜನಕಾಯಾದ್ಭುತಂ ಧನುಃ"|| ಎಂದು ಕೂರ್ಮಪುರಾಣದಲ್ಲಿದೆ.

3. ನಾಭಿಯೆಂದರೆ ಮುಷ್ಟಿಬಂಧಸ್ಥಾನವು. ಸುನಾಭವೆಂಬುದಕ್ಕೆ ಉತ್ತಮವಾದ ಮುಷ್ಟಿಬಂಧನಸ್ಥಾನವುಳ್ಳುದೆಂದು ಅವಯವಾರ್ಥವು.

4. ಹೀಗೆ ಧನುರುತ್ಸವದಲ್ಲಿ ಪ್ರಧಾನವಾಗಿ ಪೂಜಿಸಲ್ಪಡುವ ಧನುಸ್ಸಿಗೆ, ಆಯಾಗವೆಂದು ಹೆಸರು.

ವನ್ನು ಬಿಟ್ಟು ಗಂಗಾನದಿಯ ಉತ್ತರ ತೀರದಲ್ಲಿರುವ ಹಿಮವತ್ಪರ್ವತಕ್ಕೆ ಹೋಗುವೆನು" ಎಂದು ಪ್ರಾರ್ಥಿಸಿ, ಅವರ ಅನುಮತಿಯನ್ನು ಪಡೆದು, ಆ ಸಿದ್ಧಾಶ್ರಮವನ್ನು ಪ್ರದಕ್ಷಿಣೆ ಮಾಡಿ ಉತ್ತರದಿಕ್ಕನ್ನು ಕುರಿತು ಹೊರಟನು. ಹೀಗೆ ಹೋಗುತ್ತಿರುವ ಆ ಋಷಿಯ ಹಿಂದೆ ಇವನ ಅನುಚರರಾದ ಬ್ರಹ್ಮವಾದಿಗಳೆಲ್ಲರೂ ತಮ್ಮ ತಮ್ಮ ಅಗ್ನಿಹೋತ್ರಕ್ಕೆ ಬೇಕಾದ ಸಾಮಗ್ರಿಗಳನ್ನು ನೂರು ಬಂಡಿಗಳಮೇಲೆ ಏರಿಸಿಕೊಂಡು ಹೊರಟರು. ಆ ಸಿದ್ಧಾಶ್ರಮದಲ್ಲಿದ್ದ ಮೃಗಪಕ್ಷಿಗಳೇ ಮೊದಲಾದ ಅಚೇತನಪ್ರಾಣಿಗಳೂ ಕೂಡ ಮಹಾತ್ಮನಾದ ಆ ವಿಶ್ವಾಮಿತ್ರಮುನಿಯನ್ನು ಬಿಟ್ಟಿರಲಾರದೆ ಆತನ ಹಿಂದೆ ಹೊರಡಲು, ಆತನು ಅವುಗಳನ್ನು ಸಮಾಧಾನಪಡಿಸಿ ಹಿಂತಿರುಗಿಸಿದನು. ಹೀಗೆ ಋಷಿಗಳೆಲ್ಲರೂ ಬಹುದೂರ ಪ್ರಯಾಣಮಾಡಿ, ಸಾಯಂಕಾಲವಾದಮೇಲೆ ಆ ರಾತ್ರಿಯನ್ನು ಶೋಣಾನದಿಯ ತೀರದಲ್ಲಿ ಕಳೆಯುವುದಾಗಿ ನಿಶ್ಚಯಿಸಿ, ಸೂರ್ಯನು ಅಸ್ತಂಗತನಾದಮೇಲೆ ಸ್ನಾನಮಾಡಿ ಅಗ್ನಿಹೋತ್ರಗಳನ್ನು ತೀರಿಸಿಕೊಂಡು ವಿಶ್ವಾಮಿತ್ರನ ಮುಂದೆ ಕುಳಿತರು. ರಾಮಲಕ್ಷ್ಮಣರೂ ಕೂಡ ಆ ಋಷಿಗಳೆಲ್ಲರಿಗೂ ಪ್ರಣಾಮಮಾಡಿ ವಿನಯದಿಂದ ವಿಶ್ವಾಮಿತ್ರನ ಪಕ್ಕದಲ್ಲಿ ಕುಳಿತರು. ಆಗ ರಾಮನು ವಿಶ್ವಾಮಿತ್ರನನ್ನು ನೋಡಿ, ಬಹಳ ಕುತೂಹಲದಿಂದ ಕೂಡಿದವನಾಗಿ "ಅನೇಕ ವನಗಳಿಂದ ತುಂಬಿದ ಈ ದೇಶವಾವುದು? ಇದನ್ನು ನಮಗೆ ತಿಳಿಸಬೇಕು" ಎಂದು ಕೇಳಲು, ತಪಸ್ವಿಯಾದ ವಿಶ್ವಾಮಿತ್ರನು ಆ ದೇಶವೃತ್ತಾಂತಗಳೆಲ್ಲವನ್ನೂ ಹೇಳಲಾರಂಭಿಸಿದನು.

ಇಲ್ಲಿಗೆ ಮೂವತ್ತೊಂದನೆಯ ಸರ್ಗವು.

ಕುಶ ಕುಶನಾಭರ ವೃತ್ತಾಂತವು.

"ಬ್ರಹ್ಮಪುತ್ರರಲ್ಲಿ ಪ್ರಖ್ಯಾತನಾದ [1]ಕುಶನೆಂಬ ಮಹಾತಪಸ್ವಿಯೊಬ್ಬನಿದ್ದನು. ಈತನು ಯಾವಾಗಲೂ ವ್ರತನಿಷ್ಠನಾಗಿ, ಧರ್ಮಗಳೆಲ್ಲವನ್ನೂ ತಿಳಿದು, ಸತ್ಪುರುಷರನ್ನು ಪೂಜಿಸುತ್ತಿದ್ದನು. ಈ ಮಹಾತ್ಮನು ಸತ್ಕುಲದಲ್ಲಿ

1. "ಕೌ ಶೇತೇ ಕುಶಃ" ಎಂಬ ವ್ಯುತ್ಪತ್ತಿಯಿಂದ ಭೂಮಿಯಲ್ಲಿರುವವನೆಂದರ್ಥವು. ಮೊದಲು ಬ್ರಹ್ಮಲೋಕದಲ್ಲಿದ್ದ ಈತನು ಪ್ರಜಾಪಾಲನವನ್ನು ಮಾಡಬೇಕೆಂಬ ಆಸೆಯಿಂದ ಭೂಲೋಕಕ್ಕೆ ಬಂದವನೆಂದಭಿಪ್ರಾಯವು.

ಹುಟ್ಟಿದವಳಾಗಿ ತನಗೆ ಅನುರೂಪಳಾಗಿದ್ದ ವೈದರ್ಭಿಯೆಂಬ ಪತ್ನಿಯಲ್ಲಿ ಗುಣಶಾಲಿಗಳಾದ ನಾಲ್ಕು ಮಕ್ಕಳನ್ನು ಪಡೆದನು. ಈ ನಾಲ್ವರಿಗೂ ಕ್ರಮವಾಗಿ ಕುಶಾಂಬ, ಕುಶನಾಭ, ಅಧೂರ್ತರಜಸ್ಸು, ವಸು ಎಂದು ಹೆಸರು. ಈ ನಾಲ್ವರೂ ಮಹಾತೇಜಸ್ವಿಗಳಾಗಿಯೂ, ವೀರ್ಯವುಳ್ಳವರಾಗಿಯೂ, ಧರ್ಮಿಷ್ಠರಾಗಿಯೂ, ಸತ್ಯವಾದಿಗಳಾಗಿಯೂ ಇರುತ್ತಿದ್ದರು. ಒಂದಾನೊಂದು ದಿವಸದಲ್ಲಿ ಈ ಕುಶನು ತನ್ನ ನಾಲ್ವರು ಪುತ್ರರನ್ನೂ ನೋಡಿ ಕ್ಷತ್ರಧರ್ಮವನ್ನನುಸರಿಸಿ "ಎಲೈ ಪುತ್ರರೆ! ಇನ್ನು ನೀವು ಪ್ರಜೆಗಳನ್ನು ಪಾಲಿಸುತ್ತ, ಕ್ಷತ್ರಧರ್ಮವನ್ನು ನಡೆಸಿರಿ" ಎಂದನು. ಈ ಮಾತನ್ನು ಕೇಳಿ ನಾಲ್ಕು ಮಕ್ಕಳೂ ನಾಲ್ಕು ಪಟ್ಟಣಗಳನ್ನು ಕಟ್ಟಿಕೊಂಡರು. ಕುಶಾಂಬನು ಕೌಶಾಂಬಿಯೆಂಬ ಪಟ್ಟಣವನ್ನೂ, ಕುಶನಾಭನು ಮಹೋದಯವೆಂಬ ಪಟ್ಟಣವನ್ನೂ, ಅಧೂರ್ತರಜಸ್ಸು ಧರ್ಮಾರಣ್ಯವೆಂಬುದನ್ನೂ, ನಾಲ್ಕನೆಯ ಮಗನಾದ ವಸುವು ಗಿರಿವ್ರಜವೆಂಬ ಪಟ್ಟಣವನ್ನೂ ಕಲ್ಪಿಸಿದರು. ಎಲೈ ರಾಜನೆ! ಇದೋ! ಈ ಶೋಣಾನದಿಯ ತೀರದಲ್ಲಿರುವ ಭೂಮಿಯೆಲ್ಲವೂ ಆ ಮಹಾತ್ಮನಾದ ವಸುರಾಜನಿಗೆ ಸೇರಿರುವುದು. ಇದರ ಸುತ್ತಲೂ ಐದು ಪರ್ವತಗಳಿರುವುವು. 'ಮಾಗಧಿ' ಎಂಬ ಪ್ರಸಿದ್ಧವಾದ ನದಿಯು ಮಗಧದೇಶದಲ್ಲಿ ಪ್ರವಹಿಸಿ ಈ ಐದು ಪರ್ವತಗಳ ನಡುವೆ ಪುಷ್ಪಮಾಲಿಕೆಯಂತೆ ಪ್ರಕಾಶಿಸುತ್ತಿರುವುದು. ಎಲೈ ರಾಮನೆ! ಈ ಶೋಣಾನದಿಯೂ ಕೂಡ ಮಹಾತ್ಮನಾದ ಆ ವಸುರಾಜನಿಗೇ ಸೇರಿರುವುದು. ಇದು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತಿರುವುದು. ಇದರ ಎರಡು ಪಕ್ಕಗಳಲ್ಲಿಯೂ ಪೈರುಗಳಿಂದ ತುಂಬಿದ ಅನೇಕವಾದ ಗದ್ದೆಗಳು ಕಾಣುತ್ತಿರುವುವು.

ಕುಶನ ಎರಡನೆಯ ಮಗನಾದ ಕುಶನಾಭನೆಂಬುವನು ಬಹಳ ಧಾರ್ಮಿಕನಾಗಿ ರಾಜರ್ಷಿಯೆನಿಸಿಕೊಂಡನು. ಈತನಿಗೆ 'ಘೃತಾಚಿ' ಎಂಬ ಅಪ್ಸರಸ್ತ್ರೀಯಲ್ಲಿ ನೂರು ಮಂದಿ ಹೆಣ್ಣುಮಕ್ಕಳು ಹುಟ್ಟಿದರು. ಇವರೆಲ್ಲರೂ ಅತಿಶಯವಾದ ರೂಪಯೌವನಗಳಿಂದ ಪ್ರಕಾಶಿಸುತ್ತಾ, ವಸ್ತ್ರಾಭರಣಗಳಿಂದಲೂ, ಗಂಧಪುಷ್ಪಾದಿಗಳಿಂದಲೂ ಅಲಂಕೃತರಾಗಿ, ಒಂದಾನೊಂದು ದಿನದಲ್ಲಿ ಉದ್ಯಾನವನಕ್ಕೆ ಬಂದು, ಹಾಡುತ್ತಲೂ, ಕುಣಿಯುತ್ತಲೂ, ವಾದ್ಯಗಳನ್ನು ನುಡಿಸುತ್ತಲೂ ಬಹಳ ವಿನೋದದಿಂದಿರುತ್ತಿದ್ದರು. ಹೀಗೆ ಅವರು ಅಂದವಾದ ರೂಪವುಳ್ಳವರಾಗಿ ಉದ್ಯಾನವನದಲ್ಲಿ

ಶರತ್ಕಾಲದ ನಕ್ಷತ್ರಗಳಂತೆ ಪ್ರಕಾಶಿಸುತ್ತಿರಲು, ವಾಯುದೇವನು ಇವರನ್ನು ನೋಡಿ ಮೋಹಿಸಿ “ಎಲೈ ಕನ್ಯಕೆಯರೆ! ನಿಮ್ಮಲ್ಲಿ ನನಗೆ ಬಹಳ ಮೋಹ ವುಂಟಾಗಿರುವುದು. ನೀವೆಲ್ಲರೂ ನನ್ನನ್ನು ವರಿಸಿರಿ! ಅಲ್ಪಾಯುಸ್ಸುಳ್ಳ ಮನುಷ್ಯ ಸ್ವಭಾವವನ್ನು ಬಿಟ್ಟುಬಿಡಿರಿ! ನೀವು ದೀರ್ಘಾಯುಷ್ಯವುಳ್ಳವರಾಗು ವಿರಿ! ಯೌವನವೆಂಬುದು ಬಹುಕಾಲಕ್ಕೆ ನಿಲ್ಲತಕ್ಕುದಲ್ಲ. ಅದರಲ್ಲಿಯೂ ಮನುಷ್ಯಜಾತಿಗೆ ಆ ಯೌವನಕಾಲವೆಂಬುದು ಬಹುಸ್ವಲ್ಪವಾಗಿರುವುದು. ನನ್ನನ್ನು ಕೈಹಿಡಿದು ದೇವಸ್ವರೂಪವನ್ನು ಹೊಂದಿ ನಿರಂತರವಾದ ಯೌವನ ಸುಖವನ್ನನುಭವಿಸಿರಿ” ಎಂದನು. ವಾಯುದೇವನ ಈ ಮಾತನ್ನು ಕೇಳಿ ಆ ನೂರು ಕನ್ಯಕೆಯರೂ ಹಾಸ್ಯಮಾಡಿ ನಗುತ್ತಾ, “ಎಲೈ ದೇವಶ್ರೇಷ್ಠನೆ! ನೀನು ಸಮಸ್ತಪ್ರಾಣಿಗಳ ದೇಹದಲ್ಲಿಯೂ ಸಂಚರಿಸತಕ್ಕವನು. ನಾವೆಲ್ಲರೂ ನಿನ್ನ ಮಹಿಮೆಯನ್ನು ಬಲ್ಲೆವು. ಏಕೆ ನಮ್ಮನ್ನು ಅವಮಾನಪಡಿಸುವೆ? ನಾವೆಲ್ಲರೂ ಕುಶನಾಭನ ಮಕ್ಕಳು. ಆದುದರಿಂದ ನಿನ್ನನ್ನೂ, ನಿನ್ನ ಪ್ರಭು ವಾದ ಇಂದ್ರನನ್ನೂ ಕೂಡ, ನಿಮ್ಮ ಅಧಿಕಾರಗಳಿಂದ ತಪ್ಪಿಸತಕ್ಕ ತಪ ಶ್ಶಕ್ತಿಯು ನಮ್ಮಲ್ಲಿರುವುದು. ಆದರೆ ಆ ತಪಸ್ಸನ್ನು ಕೆಡಿಸಿಕೊಳ್ಳಬಾರ ದೆಂಬುದಕ್ಕಾಗಿ ಈಗ ನಿನ್ನನ್ನು ಶಪಿಸದೆ ಬಿಟ್ಟುಬಿಟ್ಟೆವು. ನಮ್ಮ ತಂದೆಗೆ ಈ ನಿನ್ನ ದುರ್ಬುದ್ಧಿಯು ತಿಳಿದ ಪಕ್ಷದಲ್ಲಿ ನಿನಗೆ ಮೃತ್ಯುವೇ ನಿಶ್ಚಯವು. ಸತ್ಯವಾದಿಯಾದ ಆತನನ್ನು ಅವಮಾನಪಡಿಸಬೇಡ! ನಾವು ನಮ್ಮ ತಂದೆಯ ಆಜ್ಞೆಗೆ ಅಧೀನರಾಗಿ ನಡೆಯಬೇಕಲ್ಲವೆ! ಅವನು ಯಾರಿಗೆ ನಮ್ಮನ್ನು ಕೊಡುವನೋ ಅವರನ್ನೇ ನಾವು ವರಿಸಬೇಕು. ಈಗ ನಮಗೆ ತಂದೆಯೇ ದೈವವು! ತಂದೆಯೇ ಪ್ರಭುವು! ಅವನ ಅನುಮತಿಯಿಲ್ಲದೆ ನೀನು ನಮ್ಮನ್ನು ಮಾತಾಡಿಸಬಹುದೆ?” ಎಂದರು. ಈ ಮಾತನ್ನು ಕೇಳಿದೊಡನೆ ವಾಯುವು ಕೋಪಗೊಂಡು, ಅವರ ಅಂಗಾಂಗಳೊಳಗೆಲ್ಲಾ ಪ್ರವೇಶಿಸಿ, ಅವರ ದೇಹ ವೆಲ್ಲವನ್ನೂ ಸೆಳೆದುಬಿಟ್ಟನು. ಆಗ ಆ ಕನ್ಯಕೆಯರೆಲ್ಲರೂ ಕೊಬ್ಬಡಗಿ, ಗೇಣು ದ್ದದ ಆಕಾರಗಳನ್ನು ಹೊಂದಿ ನಡುಗುತ್ತಾ, ತಂದೆಯ ಮನೆಗೆ ಹೋಗಿ, ನಾಚಿಕೆಯಿಂದ ಕಣ್ಣೀರು ಬಿಡುತ್ತಾ, ಆತನ ಮುಂದೆ ಬಿದ್ದು ಹೊರಳಾಡಿ ದರು. ಆಗ ರಾಜನು ಹೀಗೆ ಮೈಯ್ಯುಡುಗಿ ವಿಕಾರರೂಪವನ್ನು ಹೊಂದಿದ ತನ್ನ ಕನ್ಯಕೆಯರನ್ನು ನೋಡಿ ಬೆಜ್ಜರಬಿದ್ದು “ಆಹಾ ಇದೇನು? ಎಲೈ ಕನ್ಯಕೆಯರೇ! ಯಾರು ನಿಮ್ಮನ್ನು ಹೀಗೆ ಅವಮಾನಪಡಿಸಿದವರು? ನಿಮ್ಮ

ಧರ್ಮವನ್ನು ನಿರಾಕರಿಸಿದವರಾರು? ನಿಮಗೆ ಈ ವಿಕಾರರೂಪವು ಯಾರಿಂದ ಉಂಟಾಯಿತು? ಇದೇನು! ನೀವು ಮಾತಾಡದಿರುವಿರಿ? ನಿಮ್ಮ ವೃತ್ತಾಂತ ವೆಲ್ಲವನ್ನೂ ನನಗೆ ವಿವರವಾಗಿ ತಿಳಿಸಿರಿ" ಎಂದು ಕೇಳಿ ನಿಟ್ಟುಸಿರುಬಿಡುತ್ತಾ ಬಹಳ ಆತುರದಿಂದ ನಿರೀಕ್ಷಿಸುತ್ತಿದ್ದನು.

ಇಲ್ಲಿಗೆ ಮೂವತ್ತೆರಡನೆಯ ಸರ್ಗವು.

ಬ್ರಹ್ಮದತ್ತನ ವೃತ್ತಾಂತವು. ಆತನು ಕುಶನಾಭನ ಕನ್ಯಕೆಯರನ್ನು ವಿವಾಹಮಾಡಿಕೊಂಡುದು.

ಕುಶನಾಭನ ಮಾತನ್ನು ಕೇಳಿ ಆ ನೂರು ಹೆಣ್ಣುಮಕ್ಕಳೂ ಆತನ ಕಾಲಿನ ಮೇಲೆ ಬಿದ್ದು, "ಎಲೈ ತಂದೆಯೆ! ಸರ್ವವ್ಯಾಪಿಯಾದ ವಾಯುವು ಧರ್ಮಮಾರ್ಗವನ್ನು ಬಿಟ್ಟು, ದುರ್ಮಾರ್ಗದಿಂದ ನಮ್ಮನ್ನು ಅವಮಾನ ಪಡಿಸುವುದಕ್ಕೆ ಪ್ರಯತ್ನಿಸಿದನು. ಆಗ ನಾವು ಅವನನ್ನು ಕುರಿತು "ನಾವು ತಂದೆಯ ಅಧೀನದಲ್ಲಿರುವವರಾದುದರಿಂದ ನಾವೇ ನಿನ್ನನ್ನು ವರಿಸುವುದಕ್ಕೆ ಸ್ವತಂತ್ರರಲ್ಲ. ಆದುದರಿಂದ ನೀನು ಹೋಗಿ ನಮ್ಮ ತಂದೆಯನ್ನೇ ಕೇಳು. ಅವನು ಅನುಮತಿಕೊಟ್ಟರೆ ನಾವು ನಿನ್ನ ಅಧೀನರಾಗುವೆವು" ಎಂದು ಅನೇಕ ವಿಧದಲ್ಲಿ ಹೇಳಿದರೂ, ಆ ವಾಯುವು ಪಾಪಬುದ್ಧಿಯಿಂದ ನಮ್ಮ ಮಾತನ್ನು ಕೇಳದೆ, ನಮ್ಮ ಅವಯವಗಳಲ್ಲಿ ಪ್ರವೇಶಿಸಿ ನಮಗೆ ಈ ಅವಸ್ಥೆಯನ್ನುಂಟು ಮಾಡಿರುವನು" ಎಂದರು. ಈ ಮಾತನ್ನು ಕೇಳಿ ಆ ರಾಜನು ಮಹಾ ವೀರ್ಯವುಳ್ಳವನಾದರೂ ಧರ್ಮಬುದ್ಧಿಯುಳ್ಳವನಾದುದರಿಂದ, ಆ ಕನ್ಯಕೆಯರನ್ನು ನೋಡಿ, "ಎಲೈ ಪುತ್ರಿಯರೆ! ಕ್ಷಮಾಗುಣವುಳ್ಳವರಿಗೆ ತಮಗೆ ಯಾರೇನು ಅಪರಾಧವನ್ನು ಮಾಡಿದರೂ, ಅವರನ್ನು ಮನ್ನಿಸುವುದೇ ಧರ್ಮವು. ನೀವು ಸರ್ವೋತ್ತಮವಾದ ಕೆಲಸವನ್ನು ಮಾಡಿದಿರಿ. ಸಾಕ್ಷಾದ್ವಾಯುದೇವನೇ ಬಂದು ನಿಮ್ಮನ್ನು ಪ್ರಾರ್ಥಿಸಿದರೂ ಮನಸ್ಸು ಕಲಗದೆಯೂ, ಆತನು ಬಂದು ನಿಮ್ಮನ್ನು ಭಂಗಪಡಿಸಿದರೂ ಕೋಪಿಸದೆಯೂ ಇದ್ದುದೇ ದೊಡ್ಡ ಕಾರ್ಯವಲ್ಲವೆ? ಇಷ್ಟುಮಾತ್ರವೇ ಅಲ್ಲ. ನೀವೆಲ್ಲರೂ ಐಕಮತ್ಯದಿಂದ ನಮ್ಮ ಕುಲಕ್ಕೆ ತಕ್ಕ ಕೆಲಸವನ್ನೇ ಮಾಡಿದಿರಿ! ಸ್ತ್ರೀಯರಿ

ಗಾಗಲಿ, ಪುರುಷರಿಗಾಗಲಿ ತಾಳ್ಮೆಯೆಂಬುದೇ ದೊಡ್ಡ ಭೂಷಣವು. ಕ್ಷಮಾ ಗುಣವೆಂಬುದು ಎಲ್ಲರಲ್ಲಿಯೂ ಇರುವುದು ಕಷ್ಟವು. ಅದರಲ್ಲಿಯೂ ರೂಪೈಶ್ವರ್ಯಾದಿಗಳಿಂದ ಕೂಡಿದ ದೇವತೆಗಳೇ ಬಂದು ನಿಮ್ಮನ್ನು ಪೀಡಿಸಿದಾಗ ನೀವು ತಾಳ್ಮೆಯಿಂದಿದ್ದುದು ಬಹಳ ಆಶ್ಚರ್ಯವು! ಅದರಲ್ಲಿಯೂ ನೀವೆಲ್ಲರೂ ಒಂದೇ ವಿಧವಾಗಿ ಈ ಗುಣವನ್ನು ತೋರಿಸಿದುದು ಇನ್ನೂ ಆಶ್ಚರ್ಯವಲ್ಲವೆ! ದಾನದಿಂದಲೂ, ಯಜ್ಞದಿಂದಲೂ ಸತ್ಯದಿಂದಲೂ, ಯಶಸ್ಸಿನಿಂದಲೂ, ಧರ್ಮದಿಂದಲೂ ಉಂಟಾಗತಕ್ಕ ಫಲಗಳೆಲ್ಲವೂ ಈ ಕ್ಷಮೆಯೊಂದರಿಂದಲೇ ಉಂಟಾಗುವುವು. ಆದುದರಿಂದ ಕ್ಷಮೆಯೇ ದಾನವು! ಇದೇ ಯಜ್ಞವು. ಸಮಸ್ತಧರ್ಮವೂ ಈ ಕ್ಷಮೆಯೇ ಆಗಿರುವುದು! ಭೂದೇವಿಗೆ ಅಸಾಧಾರಣವಾದ ಕ್ಷಮೆಯಿರುವುದರಿಂದಲೇ ಈ ಸಮಸ್ತ ಪ್ರಪಂಚವೂ ನಿಂತಿರುವುದಲ್ಲವೆ?" ಎಂದನು.

ದೇವತೆಗಳಂತೆ ಪರಾಕ್ರಮವುಳ್ಳ ಆ ಕುಶನಾಭನು ಹೀಗೆ ಹೇಳಿ, ಆ ಕನ್ನಿಕೆಯರೆಲ್ಲರನ್ನೂ ಕಳುಹಿಸಿಬಿಟ್ಟು, ಆಮೇಲೆ ಅವರನ್ನು ತಕ್ಕ ವರನಿಗೆ ಕೊಟ್ಟು ವಿವಾಹ ಮಾಡಬೇಕೆಂಬ ಉದ್ದೇಶದಿಂದ, ಮಂತ್ರಿಗಳನ್ನು ಕರೆದು ಅವರೊಡನೆ ಕಲೆತು ವಿವಾಹಕ್ಕೆ ಉಚಿತವಾದ ಕಾಲದೇಶಗಳನ್ನೂ, ಅನುರೂಪನಾದ ವರನನ್ನೂ ಹುಡುಕಬೇಕೆಂದು ಆಲೋಚಿಸುತ್ತಿದ್ದನು. ಈ ಕಾಲಕ್ಕೆ ಸರಿಯಾಗಿ ಹುಟ್ಟಿದುದುಮೊದಲು ಬ್ರಹ್ಮಚಾರಿಯಾಗಿಯೂ, ಒಳ್ಳೆ ನಡತೆಯುಳ್ಳವನಾಗಿಯೂ ಇದ್ದ ಚೂಳಿಯೆಂಬ ಋಷಿಯೊಬ್ಬನು ವೇದೋಕ್ತವಾದ ಒಂದು ತಪಸ್ಸನ್ನು ಮಾಡುತ್ತಿದ್ದನು. ಆಗ ಅಲ್ಲಿ ಊರ್ಮಿಳೆಯೆಂಬವಳ ಪುತ್ರಿಯಾದ ಸೋಮದೆಯೆಂಬ ಗಂಧರ್ವಕನ್ನಿಕೆಯೊಬ್ಬಳು ಈ ಋಷಿಯನ್ನು ಶುಶ್ರೂಷೆ ಮಾಡುತ್ತಿದ್ದಳು. ಹೀಗೆ ಇವಳು ಬಹಳ ವಿನಯದಿಂದಲೂ, ಭಕ್ತಿಯಿಂದಲೂ ಶುಶ್ರೂಷೆಮಾಡುತ್ತಿರುವುದನ್ನು ನೋಡಿ ಆ ಋಷಿಗೆ ಬಹಳ ಸಂತೋಷವುಂಟಾಯಿತು. ಆಗ ಆ ಮಹರ್ಷಿಯು ಅವಳನ್ನು ನೋಡಿ, "ನಿನ್ನ ಶುಶ್ರೂಷೆಗಾಗಿ ನಾನು ಬಹಳ ಸಂತೋಷಪಟ್ಟೆನು. ನಿನಗೆ ಮಂಗಳವಾಗಲಿ! ನಿನಗೆ ಬೇಕಾದುದನ್ನು ಕೇಳು. ಅದನ್ನು ನಾನು ನಡೆಸಿಕೊಡುವೆನು" ಎಂದನು. ಹೀಗೆ ಋಷಿಯು ತನಗೆ ಅನುಗ್ರಹಿಸಿದುದನ್ನು ನೋಡಿ ಆಕೆಯು ಬಹಳ ಸಂತೋಷಪಟ್ಟು, ಇಂಪಾದ ಧ್ವನಿಯಿಂದ ಋಷಿಯನ್ನು ಕುರಿತು, "ಎಲೈ ಮಹರ್ಷಿಯೆ! ನೀನು ಬ್ರಹ್ಮತೇಜಸ್ಸಿನಿಂದ ಎಲ್ಲರನ್ನೂ ಮೀರಿ

ಸಿರುವೆ ಮತ್ತು ಬ್ರಹ್ಮಸಮಾನನು! ಮಹಾತಪಸ್ವಿಯು. ಆದುದರಿಂದ ನಿನ್ನಂತೆಯೇ ಬ್ರಹ್ಮತೇಜಸ್ಸುಳ್ಳ ಮಹಾತಪಸ್ವಿಯಾದ ಪುತ್ರನನ್ನು ನನಗೆ ಕೊಡಬೇಕು ಮತ್ತು ಎಲೈ ಧಾರ್ಮಿಕನೆ! ನಾನು ಪತಿಯಿಲ್ಲದವಳು. ಆದರೆ ವಿತಂತುವಲ್ಲ! ಇದುವರೆಗೆ ನಾನು ಯಾರನ್ನೂ ವರಿಸಿದವಳಲ್ಲ. ಮುಂದೆಯೂ ನಾನು ಮದುವೆಮಾಡಿಕೊಳ್ಳತಕ್ಕವಳಲ್ಲ. ನಾನು ಹೀಗೆ ನೈಷ್ಠಿಕ ಬ್ರಹ್ಮ ಚಾರಿಣಿಯಾಗಿಯೇ ಪುತ್ರನನ್ನು ಪಡೆಯುವಂತೆ ಅನುಗ್ರಹಿಸಬೇಕು" ಎಂದಳು.

ಆಗ ಮಹರ್ಷಿಯು ಪ್ರಸನ್ನನಾಗಿ ತನ್ನ ಮನಸ್ಸಂಕಲ್ಪದಿಂದಲೇ ಬ್ರಹ್ಮ ದತ್ತನೆಂಬ ಒಬ್ಬ ಪುತ್ರನನ್ನು ಆಕೆಗೆ ಅನುಗ್ರಹಿಸಿದನು. ಆ ಬ್ರಹ್ಮದತ್ತ ನಾದರೋ ಕ್ಷತ್ರಿಯಸ್ತ್ರೀಯ ಪುತ್ರನಾದುದರಿಂದ ರಾಜನಾದನು. ಇತ್ತಲಾಗಿ ಕುಶನಾಭನು ಕನ್ಯಾಪ್ರದಾನವನ್ನು ಕುರಿತು ಆಲೋಚಿಸುತ್ತಿರುವಾಗ, ಸೋಮದೆಯ ಮಗನಾದ ಈ ಬ್ರಹ್ಮದತ್ತನು ಕಾಂಪಿಲ್ಯೆಯೆಂಬ ಪಟ್ಟಣವನ್ನು ಆಳುತ್ತಾ, ಸ್ವರ್ಗಾಧಿಪತಿಯಾದ ಇಂದ್ರನಂತೆ ಬಹಳ ವೈಭವದಿಂದಿದ್ದನು. ಆಗ ಧಾರ್ಮಿಕನಾದ ಕುಶನಾಭನು ಆ ಬ್ರಹ್ಮದತ್ತನಿಗೆ ತನ್ನ ನೂರು ಕನ್ನಿಕೆ ಯರನ್ನೂ ಕೊಡಬೇಕೆಂದು ನಿಶ್ಚಯಿಸಿ, ಅವನನ್ನು ತನ್ನ ಪಟ್ಟಣಕ್ಕೆ ಕರೆಯಿಸಿ, ತನ್ನ ಕನ್ನಿಕೆಯರೆಲ್ಲರನ್ನೂ ಆತನಿಗೆ ಕೊಟ್ಟು ವಿವಾಹಮಾಡಿದನು. ಆ ಬ್ರಹ್ಮದತ್ತನು ಕೂಡ ಕ್ರಮವಾಗಿ ಆ ಕನ್ನಿಕೆಯರಲ್ಲಿ ಒಬ್ಬೊಬ್ಬರ ಕೈಯನ್ನೂ ಹಿಡಿದು ಪಾಣಿಗ್ರಹಣಮಾಡಿಕೊಳ್ಳುತ್ತಿರುವಾಗ, ಅವನ ಕೈಮುಟ್ಟಿದ ಮಾತ್ರದಿಂದಲೇ ಅವರ ವಿಕಾರರೂಪಗಳೂ, ದೇಹದಲ್ಲಿದ್ದ ವ್ಯಾಧಿಯೂ ಪೋಯಿತು. ಮೊದಲಿನಂತೆ ಸೌಂದರ್ಯವತಿಯರಾಗಿ ಪ್ರಕಾ ಶಿಸಿದರು. ಹೀಗೆ ವಾಯುವ್ಯಾಧಿಯಿಂದ ಮುಕ್ತರಾಗಿ ರೂಪಯೌವನ ಸಂಪತ್ತುಗಳಿಂದ ಕೂಡಿದ ಆ ಕನ್ನಿಕೆಯರನ್ನು ನೋಡಿ, ಕುಶನಾಭನಿಗೆ ಪರಮಾನಂದವುಂಟಾಯಿತು. ಈ ವಿವಾಹವಾದಮೇಲೆ ಆ ರಾಜನು ಬ್ರಹ್ಮ ದತ್ತನನ್ನು ಹೆಣ್ಣುಮಕ್ಕಳೊಡನೆಯೂ, ಋತ್ವಿಕ್ಪುರೋಹಿತರೊಡನೆಯೂ, ಬಹಳ ವೈಭವದಿಂದ ಆತನ ಪಟ್ಟಣಕ್ಕೆ ಕಳುಹಿಸಿಕೊಟ್ಟನು. ಆ ಬ್ರಹ್ಮದತ್ತನ ತಾಯಿಯಾದ ಸೋಮದೆಯೂ ಕೂಡ ವಿವಾಹಿತನಾದ ಮಗನನ್ನು ನೋಡಿ ಬಹಳ ಸಂತೋಷಪಟ್ಟು, ಒಬ್ಬೊಬ್ಬ ಸೊಸೆಯನ್ನೂ ಕರೆದು ಮುದ್ದಾಡುತ್ತಾ ಬಹಳ ಆನಂದದಿಂದ ಕುಶನಾಭನನ್ನು ಬಹಳವಾಗಿ ಕೊಂಡಾಡಿದಳು.

ಇಲ್ಲಿಗೆ ಮೂವತ್ತಮೂರನೆಯ ಸರ್ಗವು.

ವಿಶ್ವಾಮಿತ್ರ ಕೌಶಿಕೀ ನದಿಗಳ ವೃತ್ತಾಂತವು.

"ಎಲೈ ರಾಮನೇ! ಹೀಗೆ ಬ್ರಹ್ಮದತ್ತನು ವಿವಾಹವಮಾಡಿಕೊಂಡು ಹೊರಟುಹೋದಮೇಲೆ, ಇತ್ತಲಾಗಿ ಕುಶನಾಭನು ಬಹುದಿನಗಳವರೆಗೂ ಮಕ್ಕಳಿಲ್ಲದೆ ಪುತ್ರಕಾಮೇಷ್ಟಿಯಾಗವನ್ನು ಮಾಡಿದನು. ಈ ಯಜ್ಞವು ನಡೆಯುತ್ತಿರುವಾಗ ದೀಕ್ಷಿತನಾದ ಕುಶನಾಭನನ್ನು ಕುರಿತು ಈತನ ತಂದೆ ಯಾದ ಕುಶನು ಒಂದಾನೊಂದು ಮಾತನ್ನು ಹೇಳಿದನು. "ಎಲೈ, ಪುತ್ರನೆ! ಮಹಾಧಾರ್ಮಿಕನಾಗಿ ನಿನಗೆ ಸಮಾನವಾದ ಗುಣವುಳ್ಳ ಪುತ್ರನೊಬ್ಬನು ನಿನಗೆ ಉಂಟಾಗುವನು. ಅವನೇ ಗಾಧಿಯೆನಿಸುವನು. ಆವನಿಂದ ನಿನಗೆ ಶಾಶ್ವತವಾದ ಕೀರ್ತಿಯುಂಟಾಗುವುದು." ಹೀಗೆಂದು ಹೇಳಿ ಆಕಾಶಕ್ಕೆ ಹಾರಿ ಹಾಗೆಯೇ ಕಣ್ಮರೆಯಾಗಿ ಬ್ರಹ್ಮಲೋಕವನ್ನು ಸೇರಿದನು. ಕೆಲವು ಕಾಲದಮೇಲೆ ಈ ಕುಶನಾಭನಿಗೆ ಪರಮಧರ್ಮಿಷ್ಠನಾದ ಒಬ್ಬ ಮಗನು ಹುಟ್ಟಿದನು. ಆತನು ಗಾಧಿಯೆಂಬ ಹೆಸರಿನಿಂದ ಪ್ರಸಿದ್ಧನಾದನು. ಎಲೈ ರಾಜನೆ! ಆತನೇ ನನ್ನ ತಂದೆಯು. ಆ ಕುಶಮಹಾರಾಜನ ವಂಶದಲ್ಲಿ ಹುಟ್ಟಿದುದರಿಂದಲೇ ನನಗೂ ಕೌಶಿಕನೆಂಬ ಹೆಸರುಂಟಾಯಿತು. ಮಹಾವ್ರತ ನಿಷ್ಠಳಾದ ಸತ್ಯವತಿಯೆಂಬ ನನ್ನ ಅಕ್ಕನು ಋಚೀಕನನ್ನು ಮದುವೆಯಾದಳು. ಆಕೆಯು ಮಹಾಪತಿವ್ರತೆಯಾಗಿ ತನ್ನ ಪತಿಯ ಅನುಗ್ರಹವನ್ನು ಪಡೆದಿದ್ದುದ ರಿಂದ, ಈ ಮನುಷ್ಯದೇಹದೊಡನೆಯೇ ಸ್ವರ್ಗವನ್ನೇರಿದಳು. ಇಷ್ಟು ಮಾತ್ರವೇ ಅಲ್ಲ. ಆಕೆಯೇ ಈಗ ಕೌಶಿಕಿಯೆಂಬ ಮಹಾಪುಣ್ಯನದಿ ಯಾಗಿಯೂ ಭೂಲೋಕದಲ್ಲಿ ಪ್ರವಹಿಸುತ್ತಿರುವಳು. ಏಕೆಂದರೆ, ಈ ಭೂಲೋಕದ ಜನಗಳಿಗೆ ಐಹಿಕಾಮುಷ್ಮಿಕಫಲಗಳನ್ನು ಕೊಡಬೇಕೆಂಬ ಉದ್ದೇಶ ದಿಂದಲೇ ನನ್ನ ಒಡಹುಟ್ಟಿದವಳಾದ ಆಕೆಯು, ಹೀಗೆ ಪುಣ್ಯನದಿಯರೂಪ ವನ್ನು ಹೊಂದಿ, ಸ್ವರ್ಗದಿಂದಿಳಿದು ಹಿಮವತ್ಪರ್ವತವನ್ನಾಶ್ರಯಿಸಿದಳು. ಅವಳು ಹಿಮವತ್ಪರ್ವತಕ್ಕೆ ಹೋದೊಡನೆಯೇ ಒಡಹುಟ್ಟಿದ ಸ್ನೇಹದಿಂದ ನಾನೂ ಆ ಹಿಮವತ್ಪರ್ವತದ ಪಾರ್ಶ್ವದಲ್ಲಿಯೇ ಸುಖವಾಗಿ ವಾಸಮಾಡು ತ್ತಿದ್ದೆನು. ಆ ಸತ್ಯವತಿಯು ಮಹಾಪರಿಶುದ್ಧೆಯಾದವಳು. ಹೆಸರಿಗೆ ತಕ್ಕಂತೆ ಆಕೆಯಲ್ಲಿ ಸತ್ಯವೂ, ಧರ್ಮವೂ ಸ್ಥಿರವಾಗಿದ್ದುವು. ಆಕೆಯು ಮಹಾಪತಿ ವ್ರತೆಯು. ಮಹಾಮಹಿಮೆಯುಳ್ಳವಳು. ಆಮೇಲೆ ನಾನು ಒಂದು ನಿಯಮ ವನ್ನು ಹಿಡಿದು ಈ ಸಿದ್ಧಾಶ್ರಮಕ್ಕೆ ಬಂದೆನು. ಎಲೈ ರಾಮನೆ! ನಿನ್ನ

ಪ್ರಭಾವದಿಂದಲೇ ಆ ಸಿದ್ಧಿಯು ನನಗೆ ಕೈಗೂಡಿತು. ಇದೇ ನನ್ನ ಜನ್ಮದ ಮತ್ತು ವಂಶದ ವೃತ್ತಾಂತವು. ಅವೆಲ್ಲವೂ ಹಾಗಿರಲಿ. ನೀನು ನನ್ನನ್ನು ಕೇಳಿದ ಈ ದೇಶವೃತ್ತಾಂತವನ್ನು ಹೇಳಿದೆನಲ್ಲವೆ! ಹೀಗೆ ನಾವು ಕಥೆಗಳನ್ನು ಹೇಳುತ್ತಿರುವುದರಲ್ಲಿಯೇ ರಾತ್ರಿಯಾಗುತ್ತಾ ಬಂದಿದೆ. ಇನ್ನು ನೀನು ಮಲಗು. ನಿನಗೆ ಮಂಗಳವುಂಟಾಗಲಿ. ಹಾಗಿಲ್ಲದಿದ್ದರೆ ಮುಂದಿನ ಪ್ರಯಾಣವು ಕಷ್ಟವಾಗುವುದು. ಇಲ್ಲಿ ನೋಡು! ಗಿಡಗಳೆಲ್ಲವೂ ಅಲುಗದೆ ಸ್ತಬ್ಧವಾಗಿರುವುವು. ಮೃಗಪಕ್ಷಿಗಳೆಲ್ಲವೂ ಗೂಡುಗಳೊಳಗೆ ನಿದ್ರಿಸುತ್ತಿರುವುವು. ಸುತ್ತಲೂ ಕತ್ತಲೆಯು ಕವಿದಿರುವುದು. ಸಂಧ್ಯಾಕಾಲದ ಗುರುತುಗಳೆಲ್ಲವೂ ಬಿಟ್ಟು ಹೋಗುತ್ತಿರುವುವು. ಆಕಾಶವು ಕಣ್ಣುಗಳನ್ನು ಬಿಟ್ಟು ನೋಡುತ್ತಿದೆಯೋ ಎಂಬಂತೆ ನಕ್ಷತ ಗಳೂ, ಗ್ರಹಗಳೂ ಮಿನುಗುತ್ತಿರುವುವು. ಸಮಸ್ತಪ್ರಾಣಿಗಳ ಮನಸ್ಸಿಗೂ, ಕಣ್ಣುಗಳಿಗೂ ಆನಂದವನ್ನುಂಟುಮಾಡತಕ್ಕ ಚಂದ್ರನು ಸ್ವಲ್ಪ ಸ್ವಲ್ಪವಾಗಿ ಉದಿಸುತ್ತಿರುವನು. ರಾತ್ರಿಯಲ್ಲಿ ಸಂಚರಿಸತಕ್ಕ ಭೂತಗಳೆಲ್ಲವೂ ಈಚೆಗೆ ಹೊರಟು ಅಲ್ಲಲ್ಲಿ ಸಂಚರಿಸುತ್ತಿರುವುವು. ಯಕ್ಷರು, ರಾಕ್ಷಸರು, ಪಿಶಾಚಿಗಳು ಮುಂತಾದ ಕ್ರೂರದೇವತೆಗಳೆಲ್ಲವೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವುವು. ಆದುದರಿಂದ ಎಲೈ ವತ್ಸನೆ! ಇನ್ನು ನೀನು ನಿದ್ರಿಸು" ಎಂದನು. ಈ ಮಾತನ್ನು ಕೇಳಿ ಅಲ್ಲಿದ್ದ ಋಷಿಗಳೆಲ್ಲರೂ ಅದನ್ನು ಅನುಮೋದಿಸಿ, ಆ ವಿಶ್ವಾಮಿತ್ರನ ಮಹಿಮೆಯನ್ನು ಕೊಂಡಾಡುತ್ತಾ "ಕೌಶಿಕ ವಂಶವಾದರೋ ಬಹಳ ದೊಡ್ಡದು! ಆ ವಂಶೀಯರೆಲ್ಲರೂ ಬಹಳ ಧಾರ್ಮಿಕರಾಗಿಯೂ, ಮಹಾತ್ಮರಾಗಿಯೂ, ಬ್ರಹ್ಮನಿಗೆ ಸಮಾನರಾಗಿಯೂ ಇರುವರು. ಅದರಲ್ಲಿಯೂ ಈತನ ಮಹಿಮೆಯು ಬಹಳ ಅತಿಶಯವಾದುದು! ನದೀರೂಪವಾಗಿ ಪ್ರವಹಿಸಿದ ಕೌಶಿಕಿಯು ಈ ವಂಶಕ್ಕೆ ತಿಲಕಪ್ರಾಯಳಾಗಿರುವಳು" ಎಂದು ಆತನನ್ನು ಶ್ಲಾಘಿಸುತ್ತಿರುವಾಗಲೇ, ವಿಶ್ವಾಮಿತ್ರನಿಗೆ ನಿದ್ರೆಯು ಪ್ರಾಪ್ತವಾಯಿತು. ಹೀಗೆ ಅಸ್ತಂಗತನಾದ ಸೂರ್ಯನಂತೆ ವಿಶ್ವಾಮಿತ್ರನು ನಿದ್ರೆಮಾಡುತ್ತಿರುವುದನ್ನು ನೋಡಿ, ರಾಮಲಕ್ಷ್ಮಣರಿಬ್ಬರೂ ಈ ಕಥೆಗಳಿಂದ ಆಶ್ಚರ್ಯಪಡುತ್ತಾ, ವಿಶ್ವಾಮಿತ್ರನನ್ನು ಬಹಳವಾಗಿ ಕೊಂಡಾಡುತ್ತ, ಹಾಗೆಯೇ ನಿದ್ರೆಯನ್ನು ಹೊಂದಿದರು.

ಇಲ್ಲಿಗೆ ಮೂವತ್ತನಾಲ್ಕನೆಯ ಸರ್ಗವು.

ಗಂಗಾಪಾರ್ವತಿಯರ ಜನ್ಮವೃತ್ತಾಂತವು.

ವಿಶ್ವಾಮಿತ್ರನು ಆ ಉಳಿದ ರಾತ್ರಿಯನ್ನು ಮಹರ್ಷಿಗಳೊಡಗೂಡಿ ಆ ಶೋಣಾನದಿಯ ತೀರದಲ್ಲಿಯೇ ಕಳೆದು, ಬೆಳಗಾದ ಕೂಡಲೆ ರಾಮನನ್ನು ಕುರಿತು, "ಎಲೈ ರಾಮನೆ! ಸುಪ್ರಭಾತವಾಯಿತು. ಪ್ರಾತಸ್ಸಂಧ್ಯೆಯು ನಡೆಯುತ್ತಿರುವುದು. ಏಳು! ಏಳು! ಮುಂದಿನ ಪ್ರಯಾಣಕ್ಕೆ ಸಿದ್ಧನಾಗು" ಎಂದನು. ಕೂಡಲೇ ರಾಮನು ಪ್ರಾತಃಕಾಲದಲ್ಲಿ ಮಾಡಬೇಕಾದ ಆಹ್ನಿಕ ಗಳೆಲ್ಲವನ್ನೂ ತೀರಿಸಿಕೊಂಡು, ಪ್ರಯಾಣಸನ್ನದ್ಧನಾಗಿ ನಿಂತು, ವಿಶ್ವಾಮಿತ್ರ ನನ್ನು ನೋಡಿ. "ಎಲೈ ಮಹರ್ಷಿಯೇ! ಪರಿಶುದ್ಧವಾದ ನೀರುಳ್ಳ ಈ ಶೋಣಾನದಿಯಲ್ಲಿ ಅಲ್ಲಲ್ಲಿ ವಿಶೇಷವಾಗಿ ಮಳಲುಗಳೇ ಕಾಣುತ್ತಿರುವುದರಿಂದ, ಬಹಳ ಆಳವಿರುವಂತೆ ತೋರುವುದಿಲ್ಲ. ನಾವು ದೋಣಿಯಿಲ್ಲದೆ ಇದನ್ನು ಹಾದುಹೋಗುವುದಕ್ಕೆ ದಾರಿಯೆಲ್ಲಿ?" ಎಂದು ಕೇಳಿದನು. ಅದಕ್ಕಾ ಮಹರ್ಷಿಯು "ಎಲೈ ರಾಮನೆ! ಅದೋ ನೋಡು! ಆ ಮಹರ್ಷಿಗಳು ಹೋಗುತ್ತಿರುವರು. ನಾನು ಉದ್ದೇಶಿಸಿದುದೂ ಅದೇ ದಾರಿಯು!" ಎಂದನು. ಹಾಗೆಯೇ ಅವರೆಲ್ಲರೂ ಋಷಿಗಳೊಡನೆ ಒಂದಾಗಿ ಕಲೆತು, ಆ ಹೊಳೆಯನ್ನು ದಾಟಿ ಅನೇಕ ತಪೋವನಗಳನ್ನೂ, ಕಾಡುಗಳನ್ನೂ, ನೋಡುತ್ತಾ, ದಾರಿನಡೆದು ಪ್ರಯಾಣಮಾಡಿದರು. ಹೀಗೆ ಬಹುದೂರ ಹೋದಮೇಲೆ, ಮಧ್ಯಾಹ್ನಕಾಲವು ಪ್ರಾಪ್ತವಾಗಲು, ಮುಂದೆ ಅನೇಕ ಮಹರ್ಷಿಗಳಿಂದ ಸೇವಿಸಲ್ಪಡುತ್ತಿರುವ ಗಂಗಾನದಿಯು ಇದಿರಿಗೆ ಕಾಣಿಸಿತು. ನದಿಗಳೊಳಗೆಲ್ಲಾ ಅತಿಶ್ರೇಷ್ಠವೆನಿಸಿ, ಪರಿಶುದ್ಧವಾದ ನೀರಿನಿಂದ ತುಂಬಿ, ಹಂಸಸಾರಸಾದಿ ಜಲಚರಗಳಿಂದ ಮನೋಹರವಾದ ಗಂಗಾನದಿಯನ್ನು ನೋಡಿ, ಋಷಿಗಳೆಲ್ಲರೂ ಬಹಳ ಸಂತೋಷವುಳ್ಳವರಾಗಿ, ರಾಮಲಕ್ಷ್ಮಣ ರೊಡಗೂಡಿ ಅಲ್ಲಿಯೇ ಇಳಿದರು. ಆಮೇಲೆ ಋಷಿಗಳೆಲ್ಲರೂ ಮಧ್ಯಾಹ್ನಿಕ ಸ್ನಾನವನ್ನು ಮಾಡಿ, ಪಿತೃತರ್ಪಣಗಳನ್ನೂ, ಅಗ್ನಿಹೋತ್ರವನ್ನೂ ತೀರಿಸಿ ಕೊಂಡಮೇಲೆ, ಅಲ್ಲಿ ಅಮೃತದಂತೆ ರುಚಿಕರವಾದ ಹೋಮಶೇಷವನ್ನೇ ಎಲ್ಲರೂ ಭುಜಿಸಿ, ಸಂತೋಷದಿಂದ ಆ ಗಂಗಾತೀರದಲ್ಲಿಯೇ ವಿಶ್ವಾಮಿತ್ರನ ಸುತ್ತಲೂ ಕುಳಿತುಕೊಂಡರು.

ಆಗ ರಾಮನು ವಿಶ್ವಾಮಿತ್ರನನ್ನು ನೋಡಿ, "ಎಲೈ ಮಹಾತ್ಮನೆ! ಈ ಗಂಗಾನದಿಗೆ 'ತ್ರಿಪಥಗೆ'ಯೆಂಬ ಹೆಸರು ಬರುವುದಕ್ಕೆ ಕಾರಣವೇನು?

ಈ ನದಿಯು ಮೂರು ದಾರಿಗಳಲ್ಲಿ ಪ್ರವಹಿಸಿದುದು ಹೇಗೆ? ಈ ವೃತ್ತಾಂತವನ್ನು ನಮಗೆ ತಿಳಿಸಬೇಕು" ಎಂದು ಕೇಳಿದನು. ಈ ಮಾತನ್ನು ಕೇಳಿ ವಿಶ್ವಾಮಿತ್ರನು ಆ ಗಂಗೆಯು ಹುಟ್ಟಿಬೆಳೆದ ವೃತ್ತಾಂತವೆಲ್ಲವನ್ನೂ ಹೇಳಲಾರಂಭಿಸಿ "ಎಲೈ ರಾಮನೆ ಕೇಳು! ಹಿಮವಂತವೆಂಬ ಒಂದು ಪರ್ವತಶ್ರೇಷ್ಠವುಂಟು. ಅದು ಅನೇಕ ಗೈರಿಕಾದಿ ಧಾತುಗಳಿಗೆಲ್ಲಾ ಆಶ್ರಯವಾದುದು. ಅದಕ್ಕೆ ಎಣೆಯಿಲ್ಲದ ಸೌಂದರ್ಯವುಳ್ಳ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಆ ಕನ್ನಿಕೆಯರಿಬ್ಬರೂ ಮೇರು ಪರ್ವತದ ಮಗಳಾದ ಮನೋರಮೆಯೆಂಬವಳಲ್ಲಿ ಜನಿಸಿದರು. ಅವರಲ್ಲಿ ಗಂಗೆಯೆಂಬವಳೇ ಹಿರಿಯವಳು. ಕಿರಿಯವಳಿಗೆ ಉಮೆಯೆಂದು ಹೆಸರು. ದೇವತೆಗಳು ತಮ್ಮ ಕಾರ್ಯಾರ್ಥವಾಗಿ ಈ ಗಂಗೆಯನ್ನು ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುವುದಾಗಿ ಹಿಮವಂತನನ್ನು ಪ್ರಾರ್ಥಿಸಲು, ಹಿಮವಂತನು ಮೂರುಲೋಕಕ್ಕೂ ಕ್ಷೇಮವನ್ನುಂಟುಮಾಡಬೇಕೆಂಬ ಧರ್ಮಬುದ್ಧಿಯಿಂದ, ಲೋಕಪಾವನೆಯಾಗಿಯೂ, ಇಷ್ಟಬಂದ ಕಡೆಗೆ ಹೋಗುವ ಶಕ್ತಿಯುಳ್ಳವಳಾಗಿಯೂ ಇರುವ, ತನ್ನ ಮಗಳಾದ ಗಂಗೆಯನ್ನು ದೇವತೆಗಳ ವಶಕ್ಕೆ ಒಪ್ಪಿಸಿಬಿಟ್ಟನು. ಆಗ ದೇವತೆಗಳೆಲ್ಲರೂ ಪರಮಸಂತೋಷದಿಂದ ಆ ಗಂಗೆಯನ್ನು ಸ್ವರ್ಗಲೋಕಕ್ಕೆ ಕರೆದುಕೊಂಡು ಹೋದರು. ಮತ್ತೊಬ್ಬ ಕನ್ಯೆಯಾದ ಉಮೆಯೆಂಬವಳು ಶಿವನನ್ನು ಕುರಿತು ಬಹಳ ಉಗ್ರವಾದ ಒಂದು ತಪಸ್ಸನ್ನು ಮಾಡಲು, ಆಕೆಯ ತಂದೆಯು ಅವಳನ್ನು ಆ ಮಹೇಶ್ವರನಿಗೇ ಕೊಟ್ಟು ಮದುವೆಮಾಡಿದನು. ಎಲೈ ರಾಮನೆ! ಹಿಮವಂತನ ಮಕ್ಕಳಾದ ಗಂಗೆ, ಉಮೆ, ಎಂಬೀ ಕನ್ಯೆಯರ ಚರಿತ್ರವೆಲ್ಲವನ್ನೂ ನಿನಗೆ ತಿಳಿಸಿದೆನು. ಮತ್ತು ಆ ಗಂಗೆಗೆ ಮೊದಲು ಸ್ವರ್ಗಲೋಕ ಸಂಚಾರವು ಹೇಗೆಂಬುದೂ ಇದರಿಂದ ಸ್ಪಷ್ಟವಾಯಿತಲ್ಲವೆ? ಹೀಗೆ ಪಾಪವಿನಾಶಿನಿಯಾಗಿಯೂ, ಯಾವಾಗಲೂ ಜಲಸಮೃದ್ಧವಾಗಿಯೂ ಇರುವ ಪರ್ವತಪುತ್ರಿಯಾದ ಆ ಗಂಗಾನದಿಯು ಆಗಿನಿಂದ ದೇವನದಿಯೆಂಬ ಪ್ರಸಿದ್ಧಿಯನ್ನು ಹೊಂದಿ ಸ್ವರ್ಗಲೋಕದಲ್ಲಿ ಪ್ರವಹಿಸುತ್ತಿದ್ದಳು" ಎಂದನು.

ಇಲ್ಲಿಗೆ ಮೂವತ್ತೈದನೆಯ ಸರ್ಗವು.

ಪಾರ್ವತೀ ವೃತ್ತಾಂತವು

ವಿಶ್ವಾಮಿತ್ರನು ಹೀಗೆ ಹೇಳಿದ ಕಥೆಯನ್ನು ಆ ರಾಮಲಕ್ಷ್ಮಣರಿಬ್ಬರೂ ಬಹಳವಾಗಿ ಕೊಂಡಾಡಿ, ಪುನಃ ಆತನನ್ನು ಕುರಿತು "ಎಲೈ ಮಹಾತ್ಮನೆ! ಪರ್ವತರಾಜನ ಜ್ಯೇಷ್ಠಪುತ್ರಿಯಾದ ಗಂಗಾದೇವಿಯ ವೃತ್ತಾಂತವು ಬಹಳ ಶ್ರೇಷ್ಠವಾಗಿಯೂ ಧರ್ಮಯುಕ್ತವಾಗಿಯೂ ಇರುವುದು. ಆಕೆಯು ಸ್ವರ್ಗ ಲೋಕದಲ್ಲಿ ಸೇರಿದುದನ್ನುಮಾತ್ರ ಹೇಳಿದೆಯಲ್ಲವೆ? ನೀನು ಆ ವೃತ್ತಾಂತ ವನ್ನೆಲ್ಲಾ ವಿವರವಾಗಿ ತಿಳಿದವನಾದುದರಿಂದ, ಗಂಗಾನದಿಗೆ ಈ ಲೋಕ ದಲ್ಲಿಯೂ, ಸ್ವರ್ಗಲೋಕದಲ್ಲಿಯೂ, ನಡೆದ ಇತರ ವೃತ್ತಾಂತಗಳನ್ನೂ ನಮಗೆ ವಿವರವಾಗಿ ತಿಳಿಸಬೇಕು. ಮತ್ತು ಆಕೆಯು ಈ ಮೂರು ಲೋಕ ಗಳಲ್ಲಿಯೂ ಪ್ರವಹಿಸಿದುದಕ್ಕೆ ಕಾರಣವೇನು? ಲೋಕಪಾವನೆಯಾದ ಆ ನದಿಯು ಅಲ್ಲಲ್ಲಿ ಮಾಡಿದ ಕೆಲಸಗಳೇನು? ಮತ್ತು ಆ ಗಂಗೆಯು ಸಮಸ್ತ ನದಿಗಳಲ್ಲಿಯೂ ಮೇಲೆನಿಸಿಕೊಂಡುದಕ್ಕೆ ಕಾರಣವೇನು?" ಎಂದರು. ಹೀಗೆ ಕೇಳಿದ ರಾಮನನ್ನು ನೋಡಿ ವಿಶ್ವಾಮಿತ್ರನು, ಆ ಋಷಿಗಳ ಮಧ್ಯದಲ್ಲಿ ಆ ಕಥೆಯೆಲ್ಲವನ್ನೂ ವಿವರವಾಗಿ ತಿಳಿಸಲುಪಕ್ರಮಿಸಿದನು—

"ಎಲೈ ರಾಮನೇ ಕೇಳು. ಪೂರ್ವದಲ್ಲಿ ಮಹಾತಪಸ್ವಿಯಾದ ರುದ್ರನು ಪಾರ್ವತಿಯನ್ನು ನೋಡಿ ಮೋಹಗೊಂಡು ಮದುವೆಮಾಡಿಕೊಂಡಮೇಲೆ, ಆಕೆಯೊಡನೆ ಸಮಾಗಮಸುಖದಲ್ಲಿ ನಿರತನಾಗಿದ್ದನು. ಹೀಗೆ ಪಾರ್ವತೀ ಪರಮೇಶ್ವರರಿಬ್ಬರೂ ಸೇರಿ ನೂರು ದೇವವರ್ಷಗಳು ಕಳೆದರೂ ಪುತ್ರೋತ್ಪತ್ತಿ ಯಾಗಲೇ ಇಲ್ಲ. ಆಗ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ 'ಇಷ್ಟು ದೀರ್ಘಕಾಲದವರೆಗೆ ಭೋಗಿಸಿದಮೇಲೆ, ಈ ಪಾರ್ವತಿಯಲ್ಲಿ ಹುಟ್ಟತಕ್ಕ ಭೂತವನ್ನು ಯಾರು ಧರಿಸಬಲ್ಲರೋ! ಎಂದು ಬಹಳ ಭಯಪಟ್ಟು, ಅವ ರೆಲ್ಲರೂ ರುದ್ರನ ಬಳಿಗೆ ಬಂದು ನಮಸ್ಕರಿಸಿ ಪ್ರಾರ್ಥಿಸುವರು. 'ಎಲೈ ದೇವದೇವನಾದ ಮಹೇಶ್ವರನೆ! ನೀನು ಸಮಸ್ತಲೋಕಗಳನ್ನೂ ರಕ್ಷಿಸ ತಕ್ಕವನಾದುದರಿಂದ, ನಾವೆಲ್ಲರೂ ನಿನ್ನಲ್ಲಿ ಮರೆಹೊಕ್ಕಿರುವೆವು. ನಮ್ಮಲ್ಲಿ ಪ್ರಸನ್ನನಾಗಿ ಅನುಗ್ರಹಿಸಬೇಕು. ನಿನ್ನ ವೀರ್ಯದಿಂದ ಹುಟ್ಟುವ ಪುತ್ರನನ್ನು ಈ ಭೂಮಿಯು ಧರಿಸಲಾರದು. ಆದುದರಿಂದ ನೀನು ಸಂತಾನಪ್ರಯತ್ನ ವನ್ನು ಬಿಟ್ಟು, ವೇದೋಕ್ತವಾದ ಯೋಗವನ್ನೇ ಕೈಕೊಂಡು, ಪಾರ್ವತಿ ಯೊಡನೆ ತಪಸ್ಸಿಗೆ ಹೋಗಬೇಕು. ನೀನು ಲೋಕಕ್ಷೇಮವನ್ನು ಬಯಸ

ತಕ್ಕವನಾದರೆ, ನಿನ್ನ ವೀರ್ಯವನ್ನು ತೇಜೋಮಯವಾದ ನಿನ್ನ ದೇಹ ದಲ್ಲಿಯೇ ಅಡಗಿಸಿಕೊಳ್ಳಬೇಕೇ ಹೊರತು, ಹೊರಕ್ಕೆ ಬಿಟ್ಟರೆ ಆ ಮೂರು ಲೋಕಗಳೂ ನಾಶಹೊಂದುವುವು. ಆದುದರಿಂದ ಈ ಸಮಸ್ತಲೋಕಗಳನ್ನೂ ದಯೆಯಿಂದ ರಕ್ಷಿಸು' ಎಂದು ಪ್ರಾರ್ಥಿಸಿದರು. ಹೀಗೆ ದೇವತೆಗಳು ಹೇಳಿದು ದನ್ನು ಸರ್ವಲೋಕೇಶ್ವರನಾದ ರುದ್ರನು ಕೇಳಿ, 'ಎಲೈ ದೇವತೆಗಳೆ! ಹಾಗೆಯೇ ಆಗಲಿ! ನಾನು ನನ್ನ ವೀರ್ಯವನ್ನು ನನ್ನ ದೇಹದಲ್ಲಿಯೇ ಅಡಗಿಸಿಕೊಳ್ಳುವೆನು. ಪಾರ್ವತಿಯೂ ತನ್ನ ಶೋಣಿತವನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುವಳು. ಸಮಸ್ತಲೋಕಗಳೂ ಕ್ಷೇಮದಿಂದಿರಲಿ! ಆದರೆ ಇಷ್ಟ ರೊಳಗಾಗಿಯೇ ಆ ವೀರ್ಯದಲ್ಲಿ ಒಂದು ಬಿಂದುವು ಮಾತ್ರ ಹೊರಕ್ಕೆ ಬಿದ್ದಿ ರುವುದರಿಂದ, ಅದನ್ನು ಪುನಃ ನನ್ನ ದೇಹದಲ್ಲಿ ಸೇರಿಸಿಕೊಳ್ಳುವುದಸಾಧ್ಯವು. ಆ ವೀರ್ಯಬಿಂದುವನ್ನು ಧರಿಸಬಲ್ಲವರಾರು? ಅದನ್ನು ನೀವೇ ನಿರ್ಧರಿಸ ಬೇಕು' ಎಂದನು.

ಈ ಮಾತನ್ನು ಕೇಳಿ ದೇವತೆಗಳೆಲ್ಲರೂ ರುದ್ರನನ್ನು ಕುರಿತು, 'ಎಲೈ ವೃಷಭಧ್ವಜನೆ! ಆ ವೀರ್ಯಬಿಂದುವನ್ನು ಭೂಮಿಯೇ ಧರಿಸುವಳು' ಎನಲು, ರುದ್ರನು ಆ ವೀರ್ಯವನ್ನು ಭೂಮಿಯಮೇಲೆ ಬಿಟ್ಟಕೂಡಲೆ, ಅದು ಸಮಸ್ತ ಪರ್ವತಗಳನ್ನೂ, ಕಾಡುಗಳನ್ನೂ ವ್ಯಾಪಿಸಿ ದಹಿಸಲಾರಂಭಿಸಿತು. ಆಗ ದೇವತೆಗಳೆಲ್ಲರೂ ಭಯಪಟ್ಟು ಅಗ್ನಿಯನ್ನು ಕುರಿತು 'ಎಲೈ ಅಗ್ನಿಯೇ ನೀನು ವಾಯುವಿನೊಡಗೂಡಿ ಈ ಶಿವನ ರೇತಸ್ಸನ್ನು ಪ್ರವೇಶಿಸು' ಎಂದು ಹೇಳಿದರು. ಒಡನೆಯೆ ಅಗ್ನಿಯು ಅದನ್ನು ವ್ಯಾಪಿಸಲು, ಅದು ಒಂದು ಶ್ವೇತಪರ್ವತವಾಗಿ ನಿಂತಿತು. ಆಮೇಲೆ ಆ ರೇತಸ್ಸೇ ಕಾಲವಶದಿಂದ ಸೂರ್ಯಾಗ್ನಿಗಳಿಗೆ ಸಮಾನವಾದ ಕಾಂತಿಯುಳ್ಳ, ಮತ್ತು ದಿವ್ಯವಾದ ಒಂದು (ಶರವಣದ) ನೊದೇಹುಲ್ಲಿನ ಕಾಡಾಗಿ ಪರಿಣಮಿಸಿತು. ಆಗಲೇ ಕೃತ್ತಿಕಾಪುತ್ರನಾಗಿಯೂ, ಅಗ್ನಿಸಂಭವನಾಗಿಯೂ ಇರುವ ಷಣ್ಮುಖನು ಹುಟ್ಟಿದನು. ದೇವತೆಗಳೆಲ್ಲರೂ ಪಾರ್ವತಿಪರಮೇಶ್ವರರ ಕೋಪಶಮನಾರ್ಥ ವಾಗಿ ಸ್ತೋತ್ರಮಾಡಿದರು. ಆದರೂ ಪಾರ್ವತಿಯು ಕೋಪದಿಂದ ದೇವತೆ ಗಳನ್ನು ನೋಡಿ, 'ಎಲೈ ದೇವತೆಗಳೆ! ನಮ್ಮ ಸೌಖ್ಯಕ್ಕೆ ನೀವು ಭಂಗವುಂಟು ಮಾಡಿದುದರಿಂದ, ಈ ನಿಮ್ಮ ಅಪರಾಧಕ್ಕೆ ತಕ್ಕ ಫಲವನ್ನು ಅನುಭವಿಸಿರಿ' ಎಂದು, ಕೈಯಲ್ಲಿ ಶಾಪಜಲವನ್ನು ಹಿಡಿದು, ಕೆಂಪಾದ ಕಣ್ಣುಳ್ಳವಳಾಗಿ

ಪುನಃ ಆ ದೇವತೆಗಳನ್ನು ಕುರಿತು, 'ನಾವು ಪುತ್ರಾಪೇಕ್ಷೆಯಿಂದ ಮಾಡುತ್ತಿದ್ದ ಸಂಭೋಗವನ್ನು ನೀವು ತಪ್ಪಿಸಿದುದರಿಂದ, ನಿಮ್ಮ ನಿಮ್ಮ ಪತ್ನಿಯರಲ್ಲಿಯೂ ನಿಮಗೆ ಪುತ್ರರುಂಟಾಗದಿರಲಿ! ಇದು ಮೊದಲುಗೊಂಡು ನಿಮ್ಮ ಪತ್ನಿಯರೆಲ್ಲರೂ ಬಂಜೆ (ಗೊಡ್ಡಿ) ಯರಾಗಲಿ!' ಎಂದು ಶಪಿಸಿದಳು. ಆಮೇಲೆ ಭೂಮಿಯನ್ನು ನೋಡಿ; "ಎಲೈ ಭೂಮಿಯೆ, ನೀನೂ ನನ್ನ ಪುತ್ರೋತ್ಪತ್ತಿಗೆ ಭಂಗವನ್ನು ಬಯಸಿದೆಯಾದುದರಿಂದ, ಒಂದೇ ರೂಪದಲ್ಲಿಲ್ಲದೆ, ಚೌಳು ಮುಂತಾದ ನಾನಾರೂಪಗಳನ್ನು ಹೊಂದಿ, ಅನೇಕ ರಾಜರಿಗೆ ಹೆಂಡತಿಯಾಗಿರು! ನಿನಗೂ ಪುತ್ರಸಂತಾನವಿಲ್ಲದಿರಲಿ" ಎಂದು ಶಪಿಸಿದಳು. ಹೀಗೆ ಶಾಪಹೊಂದಿದ ದೇವತೆಗಳೆಲ್ಲರೂ ನಾಚಿಕೆಗೊಂಡು ದುಃಖಿತರಾಗಿರುವುದನ್ನು ನೋಡಿ, ರುದ್ರನು ತನ್ನಲ್ಲಿ ತಾನು 'ಪತ್ನಿಯಾದ ಪಾರ್ವತಿಯು ಕೊಟ್ಟ ಶಾಪವನ್ನು ತಪ್ಪಿಸುವುದಕ್ಕೂ ಇಲ್ಲ. ದೇವತೆಗಳ ದುಃಖವನ್ನು ನೋಡುವುದಕ್ಕೂ ಕಷ್ಟವಾಗಿರುವುದು' ಎಂದು ಯೋಚಿಸಿ, ವರುಣನಿಂದ ರಕ್ಷಿಸಲ್ಪಟ್ಟ ಪಶ್ಚಿಮ ದಿಕ್ಕಿಗೆ ಹೋಗಿ, ಅಲ್ಲಿ ಹಿಮವತ್ಪರ್ವತದ ಉತ್ತರಶಿಖರದಲ್ಲಿ ಪಾರ್ವತಿಯೊಡಗೂಡಿ ತಪಸ್ಸನ್ನು ಮಾಡುತ್ತಿರುವುದಾಗಿ ನಿಶ್ಚಯಿಸಿಕೊಂಡನು.

ಎಲೈ ರಾಮನೆ! ಪಾರ್ವತೀವೃತ್ತಾಂತವೆಲ್ಲವನ್ನೂ ಈಗ ವಿಸ್ತಾರವಾಗಿ ನಿನಗೆ ತಿಳಿಸಿರುವೆನು. ಇನ್ನು ಗಂಗಾನದಿಯ ಪ್ರಭಾವವನ್ನೂ, ಗಂಗೆಯಲ್ಲಿ ಕುಮಾರಸ್ವಾಮಿಯು ಹುಟ್ಟಿದುದನ್ನೂ ಹೇಳುವೆನು ಕೇಳು" ಎಂದನು.

ಇಲ್ಲಿಗೆ ಮೂವತ್ತಾರನೆಯ ಸರ್ಗವು.

ಕುಮಾರೋತ್ಪತ್ತಿ ವೃತ್ತಾಂತವು

ಶಿವನು ಹೀಗೆ ತಪಸ್ಸುಮಾಡುತ್ತಿರುವಾಗ, ಇಂದ್ರಾಗ್ನಿಗಳೇ ಮೊದಲಾದ ದೇವತೆಗಳೂ, ಋಷಿಗಳೂ ಒಟ್ಟುಗೂಡಿ, ತಮಗೆ ಒಬ್ಬ ಸೇನಾಪತಿಯು ಬೇಕೆಂಬ ಉದ್ದೇಶದಿಂದ ಮಹಾತ್ಮನಾದ ಬ್ರಹ್ಮನ ಸಮೀಪಕ್ಕೆ ಹೋದರು. ಆತನಿಗೆ ನಮಸ್ಕರಿಸಿ "ಎಲೈ ದೇವನೆ! ಪೂರ್ವದಲ್ಲಿ ನೀನು ನಮಗೆ ಸೇನಾಪತಿಯಾಗಿ ಅನುಗ್ರಹಿಸಿದ ಆ ರುದ್ರನು, ಇನ್ನೂ ಹಿಮವ

ತ್ಪರ್ವತದ ಶಿಖರದಲ್ಲಿ ಪಾರ್ವತಿಯೊಡನೆ ದೊಡ್ಡ ತಪಸ್ಸನ್ನು ಮಾಡುತ್ತಿರುವನು. ಆದುದರಿಂದ ಲೋಕಕ್ಷೇಮಕ್ಕಾಗಿ ಈಗ ಮಾಡಬೇಕಾದುದೇನೆಂಬುದನ್ನು ನೀನೇ ಯೋಚಿಸಬೇಕಾಗಿರುವುದು. ನೀನಲ್ಲದೆ ನಮಗೆ ಬೇರೆ ಗತಿ ಯಾರು?" ಎಂದರು. ಆಗ ಬ್ರಹ್ಮನು ದೇವತೆಗಳನ್ನು ಮೃದುವಾದ ಮಾತುಗಳಿಂದ ಸಮಾಧಾನಪಡಿಸುತ್ತಾ "ಎಲೈ ದೇವತೆಗಳಿರಾ! ಶಿವನು ಉಗ್ರವಾದ ತಪಸ್ಸನ್ನು ಮಾಡುತ್ತಿರುವುದರಿಂದ ಅದನ್ನು ತಪ್ಪಿಸುವುದು ನಮ್ಮಿಂದ ಸಾಧ್ಯವಲ್ಲ. ಇದೂ ಅಲ್ಲದೆ ದೇವತೆಗಳಲ್ಲಿ ಮಕ್ಕಳು ಹುಟ್ಟದಿರಲೆಂದು ಪಾರ್ವತಿಯು ಕೊಟ್ಟ ಶಾಪವೂ ಕೂಡ ತಪ್ಪತಕ್ಕುದಲ್ಲ. ಹೀಗಿದ್ದರೂ ನೀವು ಚಿಂತಿಸಬೇಡಿ. ಅಗ್ನಿಯು ಆಕಾಶಗಂಗೆಯಲ್ಲಿ ಒಬ್ಬ ಪುತ್ರನನ್ನು ಹುಟ್ಟಿಸುವನು. ಅವನೇ ನಿಮಗೆ ಸೇನಾಪತಿಯಾಗುವನು. ಇದರಲ್ಲಿ ಯಾವ ಸಂದೇಹವೂ ಇಲ್ಲ. ಗಂಗೆಯು ಪರ್ವತರಾಜನಿಗೆ ಹಿರಿಯ ಮಗಳಾದುದರಿಂದ ಅವಳು ಬಹಳ ಪ್ರೀತಿಯಿಂದ ಆ ಮಗನನ್ನು ಪೋಷಿಸಿ ವೃದ್ಧಿಗೆ ತರುವಳು. ಪಾರ್ವತಿಗೂ ಇದು ಇಷ್ಟವಾಗಿರುವುದರಲ್ಲಿ ಸಂದೇಹವೇನೂ ಇರದು" ಎಂದನು.

ಈ ಮಾತನ್ನು ಕೇಳಿ ದೇವತೆಗಳೆಲ್ಲರೂ ಇನ್ನು ತಮ್ಮ ಕೆಲಸವು ಕೈಗೂಡಿತೆಂದು ಬಹಳ ಸಂತೋಷದಿಂದ ಬ್ರಹ್ಮನಿಗೆ ನಮಸ್ಕರಿಸಿ, ಅಲ್ಲಿಂದ ಹೊರಟು ಅನೇಕ ಗೈರಿಕಾದಿಧಾತುಗಳಿಂದ ಪ್ರಕಾಶಿಸುತ್ತಿರುವ ಕೈಲಾಸ ಪರ್ವತಕ್ಕೆ ಹೋಗಿ, ಪುತ್ರನನ್ನು ಹುಟ್ಟಿಸುವುದಕ್ಕಾಗಿ, ರುದ್ರತೇಜಸ್ಸಿನಲ್ಲಿ ರೂಪಾಂತರದಿಂದ ಅಡಗಿರುವ ಅಗ್ನಿಯನ್ನು ಕುರಿತು "ಎಲೈ ಅಗ್ನಿಯೆ! ನಿನ್ನಿಂದ ದೇವತೆಗಳಿಗೆ ಒಂದು ದೊಡ್ಡ ಕೆಲಸವಾಗಬೇಕಾಗಿರುವುದು. ಅದೇನೆಂದರೆ, ರುದ್ರಾಂಶದಿಂದ ಹುಟ್ಟಿ ನಿನ್ನಲ್ಲಿ ಅಡಗಿರುವ ತೇಜಸ್ಸನ್ನು ಪರ್ವತರಾಜನ ಹಿರಿಯ ಮಗಳಾದ ಗಂಗಾನದಿಯಲ್ಲಿ ಬಿಟ್ಟುಬಿಡು" ಎಂದು ಕೇಳಿಕೊಳ್ಳಲು, ಅಗ್ನಿಯು ಹಾಗೆಯೇ ಆಗಲೆಂದು ದೇವತೆಗಳಿಗೆ ಅಭಯವನ್ನು ಕೊಟ್ಟನು. ಆಮೇಲೆ ಗಂಗೆಯ ಬಳಿಗೆ ಬಂದು "ಎಲೆ ಗಂಗೆ! ನಾನು ನಿನ್ನಲ್ಲಿ ಒಂದು ತೇಜಸ್ಸನ್ನು ಬಿಡುವೆನು. ಅದನ್ನು ಗರ್ಭದಲ್ಲಿ ಧರಿಸು. ಇದರಿಂದ ದೇವತೆಗಳಿಗೆ ಬಹಳ ಕ್ಷೇಮವುಂಟು," ಎಂದನು. ಅದನ್ನು ಕೇಳಿ ಗಂಗೆಯು ದಿವ್ಯವಾದ ಒಂದು ಸ್ತ್ರೀರೂಪವನ್ನು ಧರಿಸಲು, ಅಗ್ನಿಯು ಅವಳ ಸೌಂದರ್ಯಾತಿಶಯಕ್ಕೆ ಮೋಹಿಸಿ, ಅವಳ ಎಲ್ಲಾ ಅವಯವಗಳಿಗೂ

ವ್ಯಾಪಿಸುವಂತೆ, ತನ್ನಲ್ಲಿದ್ದ ತೇಜಸ್ಸನ್ನು ಬಿಟ್ಟನು. ಹಾಗೆಯೇ ಗಂಗಾನದಿಯ ಅಂಗಾಂಗಗಳೊಳಗೆಲ್ಲಾ ಅದು ವ್ಯಾಪಿಸಿತು. ಆಗ ಗಂಗೆಯು ದೇವತೆಗಳಿಗೆ ಪುರೋಹಿತನಾದ ಆ ಅಗ್ನಿಯನ್ನು ನೋಡಿ "ಎಲೈ ಅಗ್ನಿಯೇ! ಈ ತೇಜಸ್ಸನ್ನು ನಾನು ತಡೆಯಲಾರೆನು. ಇದು ನನ್ನ ದೇಹವನ್ನೆಲ್ಲಾ ಸುಡುತ್ತಿರುವುದು" ಎಂದು ಬಹಳ ಸಂಕಟದಿಂದ ಹೇಳಿದಳು. ಆಗ ಅಗ್ನಿಯು ಆ ಗಂಗೆಯನ್ನು ಕುರಿತು, "ಎಲೆ ಗಂಗೆ! ಇದೋ ಹಿಮವತ್ಪರ್ವತದ ಪಾದದಲ್ಲಿಯೇ ಆ ಗರ್ಭವನ್ನು ಬಿಟ್ಟುಬಿಡು" ಎನಲು ಒಡನೆಯೇ ಆ ಗಂಗೆಯು ಮಹಾತೇಜಸ್ಸುಳ್ಳ ಆ ಗರ್ಭವನ್ನು ಅಲ್ಲಿಯೇ ಬಿಟ್ಟುಬಿಟ್ಟಳು. ಆ ಗರ್ಭವನ್ನು ಬಿಡುವಾಗ ಅವಳ ದೇಹದಿಂದ ಬಿದ್ದ ರಕ್ತ ಮುಂತಾದುವುಗಳು ಉತ್ಕೃಷ್ಟವಾದ ಸುವರ್ಣರೂಪವನ್ನು ಹೊಂದಿ ಭೂಮಿಯಲ್ಲಿ ಸೇರಿತು. ಈ ತೇಜಸ್ಸಿನ ಕಾವಿನಿಂದಲೇ ತಾಮ್ರ, ಕಬ್ಬಿಣ, ಮುಂತಾದುವುಗಳೆಲ್ಲವೂ ಹುಟ್ಟಿದುವು. ಅದರಿಂದ ಉಂಟಾದ ಮಲವೇ ತಗರವಾಗಿಯೂ, ಸೀಸವಾಗಿಯೂ ಪರಿಣಮಿಸಿತು. ಇದರಿಂದಲೇ ಇನ್ನೂ ಅನೇಕ ಗೈರಿಕಾದಿಧಾತುಗಳೂ ಹುಟ್ಟಿದುವು. ಈ ಗರ್ಭವನ್ನಿಟ್ಟಕೂಡಲೆ ಆ ಶ್ವೇತಪರ್ವತದಲ್ಲಿದ್ದ ವನವೆಲ್ಲವೂ ಸುವರ್ಣಮಯವಾಯಿತು. ಎಲೈ ಪುರುಷಶ್ರೇಷ್ಠನೆ! ಅದು ಹೀಗೆ ಸುವರ್ಣವೆಂಬ ರೂಪಾಂತರವನ್ನು ಹೊಂದಿದುದರಿಂದಲೇ ಅದು ಮೊದಲುಗೊಂಡು ಅದಕ್ಕೆ ಜಾತರೂಪವೆಂಬ ಹೆಸರುಂಟಾಯಿತು. ಈ ಕಾರಣದಿಂದಲೇ ಆ ಸುವರ್ಣಕ್ಕೆ ಅಗ್ನಿಯ ಹಾಗಿರುವ ಕಾಂತಿಯೂ ಉಂಟಾಯಿತು. ಆ ಶ್ವೇತಪರ್ವತದಲ್ಲಿದ್ದ ತೃಣ ವೃಕ್ಷ ಲತಾ ಗುಲ್ಮಾದಿಗಳೆಲ್ಲವೂ ಸ್ವರ್ಣಮಯವಾದುವು. ಅದರಲ್ಲಿ ಹುಟ್ಟಿದ ಕುಮಾರಸ್ವಾಮಿಗೆ ಸ್ತನ್ಯವನ್ನು ಕೊಡುವುದಕ್ಕಾಗಿ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಸೇರಿ, ಕೃತ್ತಿಕೆಗಳೆಂಬ ನಕ್ಷತ್ರದೇವತೆಗಳನ್ನು ನಿಯಮಿಸಿದರು. ಆ ಕೃತ್ತಿಕೆಯರೂ ಕೂಡ ಮಹಾತೇಜಸ್ವಿಯಾದ ಆ ಶಿಶುವು ತಮಗೆ ಪುತ್ರನಾಗಿರಬೇಕೆಂದು ಕೇಳಿಕೊಳ್ಳಲು, ದೇವತೆಗಳು ಹಾಗೆಯೇ ಆಗಲೆಂದೊಪ್ಪಿದಮೇಲೆ, ಅವರು ಹಾಲನ್ನು ಕೊಡುತ್ತಾಬರಲು, ದೇವತೆಗಳೆಲ್ಲರೂ, ಆ ಶಿಶುವು ಕಾರ್ತಿಕೇಯನೆಂದೇ ಲೋಕದಲ್ಲಿ ಪ್ರಸಿದ್ಧನಾಗಲೆಂದನುಗ್ರಹಿಸಿದರು. ಮಹಾಕಾಂತಿಯುಕ್ತವಾದ ಆ ಶಿಶುವು ಗರ್ಭಸ್ರಾವದಿಂದ ಹುಟ್ಟಿ ಬೆಳೆದುದರಿಂದ, ದೇವತೆಗಳೆಲ್ಲರೂ ಅದನ್ನು ಸ್ಕಂದನೆಂದೂ (ಗರ್ಭದಿಂದ ಜಾರಿಬಿದ್ದವನು) ಕರೆಯಲಾರಂಭಿಸಿದರು. ಹೀಗೆ ಗರ್ಭಸ್ರಾವ

ದಿಂದುಂಟಾದ ಆತನ ದೇಹದ ಮೇಲಿನ ಕೊಳೆಯೆಲ್ಲವನ್ನೂ ಹೋಗಲಾಡಿಸುವುದಕ್ಕಾಗಿ ಆ ಕೃತ್ತಿಕೆಯರು ಆತನ ಮೈಯನ್ನು ಚೆನ್ನಾಗಿ ತೊಳೆದು, ಹಾಲು ಕೊಡುವುದಕ್ಕಾರಂಭಿಸಿದಾಗ, ಈ ಕೃತ್ತಿಕಾದೇವತೆಯರು ಆರು ಮಂದಿಯಿದ್ದುದರಿಂದ ಆ ಆರು ಸ್ತ್ರೀಯರ ಸ್ತನ್ಯವನ್ನೂ ಆರು ಮುಖದಿಂದ ಈತನು ಕುಡಿಯಲಾರಂಭಿಸಲು ಈತನಿಗೆ ಆಗಿನಿಂದ ಷಣ್ಮುಖನೆಂಬ ಹೆಸರುಂಟಾಯಿತು. ಮಹಾತೇಜಸ್ವಿಯಾದ ಈ ಬಾಲಕನು ಸ್ತನ್ಯಪಾನವನ್ನು ಮಾಡಿ ಬಹಳ ಕೋಮಲವಾದ ಮೈಯುಳ್ಳವನಾಗಿದ್ದರೂ, ಶಿವವೀರ್ಯದಲ್ಲಿ ಹುಟ್ಟಿದವನಾದುದರಿಂದ ಬಾಲ್ಯದಲ್ಲಿಯೇ ಮಹಾಶಕ್ತಿಯುಳ್ಳವನಾಗಿ ಒಂದಾನೊಂದು ದಿವಸದಲ್ಲಿ ರಾಕ್ಷಸಸೈನ್ಯಗಳನ್ನೆಲ್ಲಾ ಗೆದ್ದನು. ಆಗ ಅಗ್ನಿಯೇ ಮೊದಲಾದ ದೇವತೆಗಳೆಲ್ಲರೂ ಸೇರಿ, ಎಣೆಯಿಲ್ಲದ ಕಾಂತಿಯಿಂದ ಜ್ವಲಿಸುತ್ತಿರುವ ಈ ಕುಮಾರನನ್ನು ತಮ್ಮ ಸೈನ್ಯಕ್ಕೆ ಅಧಿಪತಿಯನ್ನಾಗಿ ಮಾಡಿದರು. ಎಲೈ ರಾಮನೆ! ಇದೀಗ ಗಂಗೆಯ ಮತ್ತು ಆಕೆಯಲ್ಲಿ ಹುಟ್ಟಿದ ಕುಮಾರಸ್ವಾಮಿಯ ವೃತ್ತಾಂತವು. ಇದೆಲ್ಲವನ್ನೂ ನಿನಗೆ ವಿಸ್ತಾರವಾಗಿ ಹೇಳಿರುವೆನು. ಈ ಕಥೆಯು ಬಹಳ ಪವಿತ್ರವಾದುದು. ಎಲೈ ಕಾಕುತ್ಸ್ಥನೆ! ಯಾವ ಮನುಷ್ಯನು ಈ ಮಹಾತ್ಮನಾದ ಕುಮಾರಸ್ವಾಮಿಯಲ್ಲಿ ಭಕ್ತಿಯನ್ನಿಟ್ಟು ಈ ಚರಿತ್ರಗಳನ್ನು ಕೇಳುವನೋ, ಆತನು ಬಹುಕಾಲದವರೆಗೆ ಪುತ್ರಪೌತ್ರಸಮೇತನಾಗಿ ಭೂಲೋಕದಲ್ಲಿ ಸಮಸ್ತ ಸೌಭಾಗ್ಯಗಳನ್ನೂ ಅನುಭವಿಸಿ, ಕೊನೆಗೆ ಆ ಷಣ್ಮುಖನ ಸಾಲೋಕ್ಯವನ್ನೂ ಹೊಂದುವನು" ಎಂದನು.

ಇಲ್ಲಿಗೆ ಮೂವತ್ತೇಳನೆಯ ಸರ್ಗವು.

ಸಗರ ವೃತ್ತಾಂತವು

ವಿಶ್ವಾಮಿತ್ರನು ರಾಮನಿಗೆ ಈ ಕಥೆಯನ್ನು ಹೇಳಿದಮೇಲೆ ಪುನಃ ಜ್ಞಾಪಿಸಿಕೊಂಡು, ಮತ್ತೊಂದು ವಿಷಯವನ್ನು ಹೇಳಲಾರಂಭಿಸಿ, ಎಲೈ ರಾಮನೆ! ಪೂರ್ವದಲ್ಲಿ ಸಗರನೆಂಬ ರಾಜನೊಬ್ಬನು ಅಯೋಧ್ಯೆಯನ್ನಾಳುತ್ತಿದ್ದನು. ಆತನು ಬಹಳ ಧಾರ್ಮಿಕನು. ಆತನಿಗೆ ಬಹುಕಾಲದವರೆಗೆ ಸಂತಾನವಿಲ್ಲದುದರಿಂದ ಮಕ್ಕಳನ್ನು ಪಡೆಯಬೇಕೆಂಬ ಆಸೆಯು ಹುಟ್ಟಿತು. ಆತನಿಗೆ

ವಿದರ್ಭ ರಾಜನ ಮಗಳಾದ ಕೇಶಿನಿಯೆಂಬವಳೇ ಜ್ಯೇಷ್ಠಪತ್ನಿಯು. ಆಕೆಯು ಮಹಾಧರ್ಮಿಷ್ಠೆಯಾಗಿಯೂ, ಸತ್ಯವಾದಿನಿಯಾಗಿಯೂ ಇರುತ್ತಿದ್ದಳು. ಮತ್ತು ಆತನಿಗೆ ಅರಿಷ್ಟನೇಮಿಯೆಂಬವನ ಮಗಳಾದ ಸುಮತಿಯೆಂಬವಳು ಎರಡನೆಯ ಹೆಂಡತಿಯು. ಇವಳು ಎಣೆಯಿಲ್ಲದ ರೂಪದಿಂದ ಶೋಭಿಸುತ್ತಿದ್ದಳು. ಸಗರನು ಈ ಇಬ್ಬರು ಹೆಂಡತಿಯರೊಡಗೂಡಿ ಹಿಮವತ್ಪರ್ವತಕ್ಕೆ ಹೋಗಿ ಭೃಗುಪ್ರಸ್ರವಣವೆಂಬ ಆ ಪರ್ವತದ ಒಂದು ಪ್ರದೇಶದಲ್ಲಿ ಪುತ್ರಾರ್ಥಿಯಾಗಿ ದೊಡ್ಡ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ನೂರು ವರ್ಷಗಳು ಕಳೆಯಲು, ಸತ್ಯವಂತನಾದ ಭೃಗುಮಹರ್ಷಿಯು ಇವನ ತಪಸ್ಸಿಗೆ ಮೆಚ್ಚಿ ಇವನ ಬಳಿಗೆ ಬಂದು ಸಗರನನ್ನು ನೋಡಿ, "ಎಲೈ ನಿರ್ದೋಷಿಯಾದ ಪುರುಷಶ್ರೇಷ್ಠನೆ! ನಿನಗೆ ಎಣೆಯಿಲ್ಲದ ಕೀರ್ತಿಯನ್ನುಂಟುಮಾಡತಕ್ಕ ಪುತ್ರಸಂತಾನವುಂಟಾಗುವುದು. ಆದರೆ ನಿನ್ನ ಇಬ್ಬರು ಹೆಂಡತಿಯರಲ್ಲಿ ಒಬ್ಬಳು ವಂಶೋದ್ಧಾರಕನಾದ ಒಬ್ಬ ಪುತ್ರನನ್ನೇ ಪಡೆಯುವಳು. ಮತ್ತೊಬ್ಬಳಲ್ಲಿ ಅರವತ್ತುಸಾವಿರ ಮಕ್ಕಳು ಹುಟ್ಟುವರು ಎಂದು ವರಗಳನ್ನು ಕೊಟ್ಟನು. ಆಗ ಆ ರಾಜಪತ್ನಿಯರಿಬ್ಬರೂ ಕುತೂಹಲದಿಂದ ಭೃಗುವನ್ನು ನೋಡಿ, "ಎಲೈ ಬ್ರಾಹ್ಮಣೋತ್ತಮನೆ! ನಮ್ಮಲ್ಲಿ ಯಾರಿಗೆ ಒಬ್ಬಮಗನು ಹುಟ್ಟುವನು? ಅರವತ್ತುಸಾವಿರ ಮಕ್ಕಳನ್ನು ಪಡೆಯತಕ್ಕವಳಾವಳು? ಇದನ್ನು ವಿವರವಾಗಿ ನಮಗೆ ತಿಳಿಸಬೇಕು. ಮಹಾತ್ಮನಾದ ನಿನ್ನ ವಾಕ್ಯವು ಎಂದಿಗೂ ತಪ್ಪತಕ್ಕುದಲ್ಲ. ಆದುದರಿಂದ ಇದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ನಮಗಿರುವುದು" ಎಂದು ಕೈಮುಗಿದು ಪ್ರಾರ್ಥಿಸಿದರು. ಅದಕ್ಕಾ ಭೃಗುವು ಅವರನ್ನು ನೋಡಿ, "ಎಲೈ ಮಂಗಳಾಂಗಿಯರೆ! ನಿಮ್ಮ ನಿಮ್ಮ ಇಷ್ಟವನ್ನೇ ತಿಳಿಸಿರಿ. ವಂಶೋದ್ಧಾರಕನಾದ ಒಬ್ಬ ಮಗನನ್ನೇ ಅಪೇಕ್ಷಿಸಿದವರಿಗೆ ದೀರ್ಘಾಯುಷ್ಮಂತನಾದ ಆ ಒಬ್ಬ ಮಗನೇ ಹುಟ್ಟುವನು. ಹಾಗಿಲ್ಲದೆ ಮಹಾಬಲವುಳ್ಳವರಾಗಿಯೂ, ಕೀರ್ತಿಯನ್ನು ಪಡೆಯತಕ್ಕವರಾಗಿಯೂ ಇರತಕ್ಕ ಮಕ್ಕಳನ್ನು ಅಪೇಕ್ಷಿಸಿದವರಿಗೆ ಅಂತಹ ಶೂರರಾದ ಮಕ್ಕಳೇ ಹುಟ್ಟುವರು. ಈ ಎರಡು ವರಗಳಲ್ಲಿ ಯಾರಿಗೆ ಯಾವುದು ಬೇಕೆಂಬುದನ್ನು ತಿಳಿಸಿರಿ" ಎಂದು ಕೇಳಲು, ಆಗ ಹಿರಿಯ ಹೆಂಡತಿಯಾದ ಕೇಶಿನಿಯು ತನಗೆ ವಂಶೋದ್ಧಾರಕನಾದ ಒಬ್ಬ ಪುತ್ರನೇ ಸಾಕೆಂದಳು. ಗರುಡನಿಗೆ ಒಡಹುಟ್ಟಿದವಳಾದ ಸುಮತಿಯೆಂಬ ಕಿರಿಯ ಹೆಂಡತಿಯು

ತನಗೆ ವೀರರಾದ ಅನೇಕ ಪುತ್ರರು ಹುಟ್ಟಬೇಕೆಂದು ಬಯಸಿದಳು. ಹೀಗೆ ಪ್ರಾರ್ಥಿಸಿ, ಋಷಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, ಆತನ ಅನುಗ್ರಹ ವನ್ನು ಪಡೆದು ಸಗರಚಕ್ರವರ್ತಿಯು ತನ್ನ ಪತ್ನಿಯರೊಗೂಡಿ ತನ್ನ ಪಟ್ಟಣಕ್ಕೆ ಹಿಂತಿರುಗಿದನು.

ಕೆಲವುಕಾಲದಮೇಲೆ ಹಿರಿಯಹೆಂಡತಿಯಾದ ಕೇಶಿನಿಯು ಅಸಮಂಜ ನೆಂಬ ಒಬ್ಬ ಮಗನನ್ನು ಪಡೆದಳು. ಸುಮತಿಗಾದರೋ ಸೋರೆಕಾಯಿಯಂತೆ ದುಂಡಗೆ ದಪ್ಪನಾದ ಒಂದುಪಿಂಡವು ಮಾತ್ರ ಗರ್ಭದಲ್ಲಿ ಬೆಳೆಯಲಾರಂಭಿಸಿತು. ಆ ಪಿಂಡವು ಬೆಳೆಯುತ್ತಿರುವಾಗಲೇ ಅದನ್ನು ಬಲಾತ್ಕಾರದಿಂದ ಒಡೆದು ಬಿಡಲು, ಅದು ಅರುವತ್ತುಸಾವಿರ ಭಾಗಗಳಾಗಿ ಒಡೆದು, ಅರವತ್ತುಸಾವಿರ ಪುತ್ರರುಂಟಾದರು. ದಾದಿಯರು ಆ ಸಣ್ಣ ಮಕ್ಕಳೆಲ್ಲವನ್ನೂ ತುಪ್ಪದ ಕೊಡಗಳಲ್ಲಿಟ್ಟು ಬೆಳೆಸಲು, ಬಹುಕಾಲದಮೇಲೆ ಅವರೆಲ್ಲರೂ ಯೌವನವನ್ನು ಹೊಂದಿದರು. ಎಲೈ ರಾಮನೆ! ಈ ಸಗರಪುತ್ರರಲ್ಲಿ ಹಿರಿಯವನಾದ ಅಸಮಂಜನೆಂಬವನು ಪ್ರತಿದಿನವೂ, ಬೀದಿಯಲ್ಲಿ ತಿರುಗುತ್ತಿರುವ ಸಣ್ಣ ಸಣ್ಣ ಮಕ್ಕಳನ್ನು ಎತ್ತಿಕೊಂಡು ಹೋಗಿ, ಸರಯೂ ನದಿಯಲ್ಲಿ ಹಾಕುತ್ತಿದ್ದು, ಆ ಮಕ್ಕಳು ಸಂಕಟಪಟ್ಟು ಮುಳುಗಿ ಪ್ರಾಣಬಿಡುವುದನ್ನು ನೋಡಿ ಕೈತಟ್ಟಿ ನಗುತ್ತಿರುವನು. ಹೀಗೆ ಪಾಪಕಾರ್ಯವನ್ನೇ ಮಾಡುತ್ತ ಲೋಕಕಂಟಕ ನಾಗಿರುವುದನ್ನು ನೋಡಿ ಸಗರನು, ಆ ಮಗನನ್ನು ತನ್ನ ದೇಶದಿಂದ ಹೊರಡಿಸಿಬಿಟ್ಟನು. ಈ ಅಸಮಂಜನಿಗೆ ಅಂಶುಮಂತನೆಂಬ ಪುತ್ರನೊಬ್ಬನು ಹುಟ್ಟಿ, ಅವನು ಸಮಸ್ತ ಜನಗಳಿಗೂ ಇಷ್ಟನಾಗಿ ಬಹಳ ಗುಣಶಾಲಿ ಯಾಗಿದ್ದನು. ಬಹುಕಾಲದಮೇಲೆ ಈ ಸಗರನಿಗೆ ಯಜ್ಞಮಾಡಬೇಕೆಂಬ ಬುದ್ಧಿಯು ಹುಟ್ಟಲು, ಅನೇಕ ಋತ್ವಿಕ್ಪುರೋಹಿತರುಗಳನ್ನು ಕರೆಸಿ ಅಶ್ವಮೇಧಯಾಗವನ್ನು ಮಾಡುವುದಕ್ಕಾರಂಭಿಸಿದನು ಎಂದನು.

ಇಲ್ಲಿಗೆ ಮೂವತ್ತೆಂಟನೆಯ ಸರ್ಗವು.

ಸಗರಯಾಗದಲ್ಲಿ ಇಂದ್ರನು ಯಜ್ಞಾಶ್ವವನ್ನು ಕದ್ದುದು

ಹೀಗೆ ವಿಶ್ವಾಮಿತ್ರನು ಸಗರಚಕ್ರವರ್ತಿಯ ಯಜ್ಞವೃತ್ತಾಂತವನ್ನು ಸೂಚಿಸಿದಮಾತ್ರಕ್ಕೆ ರಾಮನು ಬಹಳ ಸಂತೋಷಪಟ್ಟು ಆ ವಿಶ್ವಾಮಿತ್ರನನ್ನು ಕುರಿತು "ಎಲೈ ಬ್ರಾಹ್ಮಣೋತ್ತಮನೆ! ನಿನಗೆ ಮಂಗಳವುಂಟಾಗಲಿ! ಆ ಯಜ್ಞಕಥೆಯನ್ನೂ ವಿಸ್ತಾರವಾಗಿ ಹೇಳು. ನಮ್ಮ ವಂಶದಲ್ಲಿ ಹಿರಿಯನಾದ ಸಗರಚಕ್ರವರ್ತಿಯು ಯಜ್ಞವನ್ನು ಮುಗಿಸಿದುದು ಹೇಗೆ?" ಎನಲು, ವಿಶ್ವಾಮಿತ್ರನು ಮನಸ್ಸಿನಲ್ಲಿ "ಆಹಾ! ಈತನು ಸರ್ವಜ್ಞನಾಗಿದ್ದರೂ, ಏನೂ ತಿಳಿಯದವನಂತೆ ಮನುಷ್ಯ ಸ್ವಭಾವವನ್ನು ನಟಿಸುತ್ತಿರುವನು" ಎಂದು ನಸುನಗುತ್ತ, ರಾಮನಿಗೆ ಅದನ್ನು ವಿಸ್ತಾರವಾಗಿ ಹೇಳಲಾರಂಭಿಸಿದನು. "ಎಲೈ ರಾಮನೆ! ಆ ಸಗರಚಕ್ರವರ್ತಿಯ ಯಜ್ಞವೃತ್ತಾಂತವನ್ನು ವಿಸ್ತಾರವಾಗಿ ಹೇಳುವೆನು ಕೇಳು. ರುದ್ರನಿಗೆ ಮಾವನಾದ ಹಿಮವತ್ಪರ್ವತವು ವಿಂಧ್ಯಪರ್ವತಕ್ಕೆ ಇದಿರಾಗಿ ಅತ್ಯುನ್ನತವಾಗಿ ನಿಂತಿರುವುದರಿಂದ, ಅವು ಒಂದನ್ನೊಂದು ತಲೆಯೆತ್ತಿ ನೋಡುತ್ತಿರುವಂತೆ ಕಾಣುವುವು. ಈ ಎರಡು ಪರ್ವತಗಳ ನಡುವೆ ಆ ಯಜ್ಞವು ಆರಂಭಿಸಲ್ಪಟ್ಟಿತು. ಈ ಪ್ರದೇಶವು [1]ಆರ್ಯಾವರ್ತವೆಂಬ ಪ್ರಸಿದ್ಧವಾದ ಹೆಸರಿನಿಂದ, ಯಜ್ಞಕರ್ಮಗಳನ್ನು ಮಾಡುವುದಕ್ಕೆ ಬಹಳ ಪ್ರಶಸ್ತವಾದ ಕ್ಷೇತ್ರವೆನಿಸಿಕೊಂಡಿರುವುದು. ಇಲ್ಲಿ ಯಜ್ಞವನ್ನು ಮಾಡಲಾರಂಭಿಸಿದ ಆ ಸಗರನು, ತನ್ನ ಯಜ್ಞದ ಕುದುರೆಯನ್ನು ದೇಶಸಂಚಾರಕ್ಕೆ ಕಳುಹಿಸಿದಾಗ, ಅಂಶುಮಂತನೆಂಬ ಮಹಾರಥನು ಆತನ ಅಪ್ಪಣೆಯಮೇಲೆ ಆ ಕುದುರೆಯ ಬೆಂಗಾವಲಿಗಾಗಿ ಪ್ರಶಸ್ತವಾದ ಧನುಸ್ಸನ್ನು ಹಿಡಿದು ಅದರ ಹಿಂದೆ ಹೊರಟನು. ಈ ಯಜ್ಞವು ನಡೆಯುತ್ತಿರುವಾಗಲೇ ಇಂದ್ರನು ಮಾಯೆಯಿಂದ ರಾಕ್ಷಸರೂಪವನ್ನು ಧರಿಸಿ ಯುಕ್ತ್ಯವೆಂಬ ಕರ್ಮವನ್ನು ನಡೆಸುವ ದಿನಕ್ಕೆ ಸರಿಯಾಗಿ ಆ ಕುದುರೆಯನ್ನ ಪಹರಿಸಿಕೊಂಡು ಹೋದನು. ಹೀಗೆ ಕುದುರೆಯನ್ನೆತ್ತಿಕೊಂಡು ಹೋಗುತ್ತಿರುವಾಗ, ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಯಜ್ಞದೀಕ್ಷೆಯನ್ನು ವಹಿಸಿದ್ದ ಸಗರನನ್ನು ಕುರಿತು, "ಈ ಸಮಯದಲ್ಲಿ ಈ ಕುದುರೆಯನ್ನು ಯಾರೋ ಬಹುವೇಗದಿಂದ ಎತ್ತಿಕೊಂಡು

---

1. ವಿಂಧ್ಯಕ್ಕೂ ಹಿಮಾಲಯ ಪರ್ವತಕ್ಕೂ ನಡುವೆ ಇರುವ ಪರಿಶುದ್ಧವಾದ ಭೂಮಿಗೆ "ಆರ್ಯಾವರ್ತ"ವೆಂದು ಹೆಸರು.

ಹೋಗುತ್ತಿರುವರು. ಎಲೈ ರಾಜನೆ! ಸಾವಕಾಶಮಾಡಬೇಡ! ಆತನನ್ನು ಕೊಂದು ಈಗಲೇ ಕುದುರೆಯನ್ನು ಹಿಂದಕ್ಕೆ ತರಿಸು. ಯಜ್ಞಕ್ಕೆ ವಿಘ್ನ ವುಂಟಾದರೆ, ನಮ್ಮೆಲ್ಲರಿಗೂ ಇದು ಬಹಳ ಅಮಂಗಳಕರವು. ಆದುದರಿಂದ ಈ ಯಜ್ಞಕ್ಕೆ ವಿಘ್ನಬಾರದಂತೆ ಮಾಡು" ಎಂದು ಕೂಗಿಕೊಂಡರು.

ಹೀಗೆ ಸಭೆಯಲ್ಲಿ ಕೂಗುತ್ತಿರುವ ಬ್ರಾಹ್ಮಣರ ಮೊರೆಯನ್ನು ಕೇಳಿ ದೊಡನೆ, ಸಗರಚಕ್ರವರ್ತಿಯು ತನ್ನ ಅರವತ್ತುಸಾವಿರ ಮಕ್ಕಳನ್ನೂ ಕರೆದು, "ಎಲೈ ಮಕ್ಕಳಿರಾ! ಈ ನಮ್ಮ ಮಹಾಯಜ್ಞವು ಬಹಳ ಪರಿಶುದ್ಧವಾಗಿ ಪೂಜ್ಯರಾದ ಋತ್ವಿಕ್ಕುಗಳಿಂದಲೇ ನಡೆಸಲ್ಪಡುತ್ತಿರುವುದು. ಆದುದರಿಂದ ಇದರಲ್ಲಿ ಮಂತ್ರಲೋಪವೇ ಮೊದಲಾದ ಯಾವ ದೋಷಗಳಿಗೂ ಅವಕಾಶ ವಿಲ್ಲ. ಇಂತಹ ಯಜ್ಞಕಾಲದಲ್ಲಿ ರಾಕ್ಷಸರು ಮಾಯೆಯಿಂದಾಗಲಿ, ಪ್ರತ್ಯಕ್ಷವಾಗಿಯಾಗಲಿ ಈ ಸ್ಥಳಕ್ಕೆ ಪ್ರವೇಶಿಸಲಾರರು. ಹೀಗಿದ್ದರೂ, ಕುದುರೆಯನ್ನು ಯಾರೋ ಎತ್ತಿಕೊಂಡು ಹೋಗಿರುವರಲ್ಲವೆ? ಅದನ್ನು ಹುಡುಕಿ ಹಿಂತಿರುಗಿ ತರಬೇಕಾಗಿದೆ. ಈ ಕಾರ್ಯದಲ್ಲಿ ನೀವೇ ಸಮರ್ಥರು. ನಿಮ್ಮೆಲ್ಲರಿಗೂ ಮಂಗಳವುಂಟಾಗಲಿ. ಸಮುದ್ರದಿಂದ ಸುತ್ತಲ್ಪಟ್ಟ ಸಮಸ್ತ ಭೂಭಾಗವನ್ನೂ ಹುಡುಕಿ ಬನ್ನಿರಿ! ಎಲೈ ಮಕ್ಕಳಿರಾ! ಈ ಭೂಮಂಡಲ ವಾದರೋ ಬಹಳ ವಿಸ್ತಾರವಾದುದು. ಆದುದರಿಂದ ನಿಮ್ಮಲ್ಲಿ ಒಬ್ಬೊ ಬ್ಬರೂ ಒಂದೊಂದು ಗಾವುದದ ದೂರವನ್ನು ನಿಮ್ಮೊಳಗೆ ಹಂಚಿಕೊಂಡು ಹುಡುಕತಕ್ಕುದು. ಕುದುರೆಯನ್ನು ಕದ್ದವನು ಈ ಭೂಮಿಯಮೇಲೆ ಒಂದುವೇಳೆ ನಿಮಗೆ ಸಿಕ್ಕದಿದ್ದರೂ, ಈ ನೆಲವನ್ನು ಪಾತಾಳದವರೆಗಾದರೂ ತೋಡಿ, ಆತನನ್ನು ಕಂಡುಹಿಡಿಯಬೇಕು. ನಾನು ಯಜ್ಞದೀಕ್ಷೆಯಲ್ಲಿರು ವುದರಿಂದ ಈ ಸ್ಥಳವನ್ನು ಬಿಟ್ಟು ಕದಲುವುದಕ್ಕೆ ಅವಕಾಶವಿಲ್ಲ. ಆದುದರಿಂದ ಈ ಪುರೋಹಿತರೊಡನೆಯೂ, ಮೊಮ್ಮಕ್ಕಳೊಡನೆಯೂ ಕೂಡಿ ನಾನು ಇಲ್ಲಿಯೇ ಇರಬೇಕಾಗಿರುವುದು. ನನ್ನ ಆಜ್ಞೆಯಮೇಲೆ ನೀವೇ ಹೋಗಿ ಕುದುರೆಯನ್ನು ಹುಡುಕಿ ತನ್ನಿರಿ! ನಿಮಗೆ ದಾರಿಯಲ್ಲಿ ಮಂಗಳವಾಗಲಿ" ಎಂದನು.

ಈ ಮಾತನ್ನು ಕೇಳಿದೊಡನೆ ಮಹಾಬಲಶಾಲಿಗಳಾದ ಆ ಮಕ್ಕಳೆ ಲ್ಲರೂ ಅತ್ಯುತ್ಸಾಹವುಳ್ಳವರಾಗಿ, ಆ ತಂದೆಯ ಮಾತಿನಮೇಲೆ ನಾನಾ ದಿಕ್ಕುಗಳಿಗೂ ಹೊರಟರು. ಆ ಮಕ್ಕಳಲ್ಲಿ ಒಬ್ಬೊಬ್ಬರೂ ಒಂದೊಂದು

ಗಾವುದದ ದೂರವನ್ನು ಹಂಚಿಕೊಂಡು, ಸುತ್ತಲೂ ಹುಡುಕುತ್ತಾ ಭೂಮಿಯ ಮೇಲೆ ಎಲ್ಲಿಯೂ ಆ ಕುದುರೆಯು ಕಾಣಿಸದುದರಿಂದ, ವಜ್ರಸಮಾನವಾದ ತಮ್ಮ ಉಗುರುಗಳಿಂದಲೂ, ಶೂಲಗಳಿಂದಲೂ, ಭಯಂಕರವಾದ ನೇಗಿಲು ಮುಂತಾದ ಸಾಮಗ್ರಿಗಳಿಂದಲೂ ಪಾತಾಳದವರೆಗೂ ನೆಲದ ಮಣ್ಣನ್ನು ತೋಡಲಾರಂಭಿಸಿದರು. ಆಗ ಪಾತಾಳಲೋಕದಲ್ಲಿದ್ದ ಸರ್ಪಗಳೂ, ರಾಕ್ಷಸರೂ, ದೈತ್ಯರೂ, ಇನ್ನೂ ಇತರ ಪ್ರಾಣಿಗಳೂ ಕೂಡ ಅಪಾಯಕ್ಕೆ ಸಿಕ್ಕಿ ಸಾಯುತ್ತಿರುವಾಗ, ಅವುಗಳ ಗೋಳಾಟದ ಧ್ವನಿಯು ಸಮಸ್ತ ಭೂಮಂಡಲ ವನ್ನೂ ವ್ಯಾಪಿಸಿತು. ಹೀಗೆ ಈ ಅರುವತ್ತು ಸಾವಿರ ಮಕ್ಕಳೂ ಅರವತ್ತು ಸಾವಿರ ಗಾವುದಗಳ ವಿಸ್ತಾರವುಳ್ಳ ಈ ಭೂಮಿಯನ್ನು ಪಾತಾಳದವರೆಗೂ ತೋಡಿಬಿಟ್ಟರು. ಅನೇಕ ಪರ್ವತಗಳಿಂದ ತುಂಬಿದ ಜಂಬೂದ್ವೀಪವೆಲ್ಲವನ್ನೂ ಅಗೆದು ಕೆಡಿಸುತ್ತಿರುವ ಈ ರಾಜಪುತ್ರರ ಹಾವಳಿಯನ್ನು ತಡೆಯಲಾರದೆ, ದೇವತೆಗಳೂ, ಗಂಧರ್ವರೂ, ದೈತ್ಯರೂ, ನಾಗರೂ ಬೆಜ್ಜರಬಿದ್ದು ಬ್ರಹ್ಮನ ಬಳಿಗೆ ಹೋಗಿ, ಬಹಳ ದುಃಖದಿಂದಲೂ, ಭಯದಿಂದಲೂ ಮೊರೆಯಿಡುತ್ತಾ ಆತನನ್ನು ಕುರಿತು, "ಎಲೈ ಪೂಜ್ಯನೆ! ಸಗರಪುತ್ರರು ಈ ಸಮಸ್ತ ಭೂಮಂಡಲವನ್ನೂ ಅಗೆದು ಕೆಡಿಸುತ್ತಿರುವರು. ತಮ್ಮ ಕಣ್ಣಿಗೆ ಬಿದ್ದವರ ನ್ನೆಲ್ಲಾ 'ಈತನೇ ನಮ್ಮ ಯಜ್ಞದ ಕುದುರೆಯನ್ನು ಕದ್ದುಕೊಂಡು ಹೋಗಿ ರುವ'ನೆಂದು ಕಂಡ ಕಡೆಯಲ್ಲಿ ಕೊಲ್ಲುತ್ತಿರುವರು. ಆದುದರಿಂದ ಈ ಅತ್ಯಾ ಹಿತವನ್ನು ತಪ್ಪಿಸತಕ್ಕ ಭಾರವು ನಿನ್ನದಾಗಿದೆ" ಎಂದು ಪ್ರಾರ್ಥಿಸಿದರು.

ಇಲ್ಲಿಗೆ ಮೂವತ್ತೊಂಭತ್ತನೆಯ ಸರ್ಗವು.

ಸಗರಪುತ್ರರು ಕಪಿಲನಿಂದ ಸುಡಲ್ಪಟ್ಟುದು.

ಹೀಗೆ ದೇವತೆಗಳು ಮರಣಭಯದಿಂದ ಮೊರೆಯಿಡುತ್ತಿರುವುದನ್ನು ಕೇಳಿ ಬ್ರಹ್ಮನು, "ಎಲೈ ದೇವತೆಗಳೆ! ಈ ಸಮಸ್ತ ಪ್ರಪಂಚವೂ ಮಹಾತ್ಮ ನಾದ ವಿಷ್ಣುವಿಗೆ ಸೇರಿದುದು. ಆ ಶ್ರೀಮನ್ನಾರಾಯಣನು ಕಪಿಲನೆಂಬ ಮಹರ್ಷಿಯ ರೂಪವನ್ನು ಧರಿಸಿ ಈ ಭೂಮಂಡಲವನ್ನು ಧರಿಸಿರುವನಾದುದ ರಿಂದ, ಆ ಕಪಿಲನ ಕೋಪಾಗ್ನಿಯಿಂದ ಸಗರಪುತ್ರರು ಇನ್ನು ಸ್ವಲ್ಪಕಾಲ ದೊಳಗಾಗಿಯೇ ದಗ್ಧರಾಗುವರು. ಪ್ರತಿಯೊಂದು ಕಲ್ಪದಲ್ಲಿಯೂ ಹೀಗೆ

ಅವಶ್ಯವಾಗಿ ಭೂಮಿಯು ಭೇದಿಸಲ್ಪಡಬೇಕೆಂದು ಮೊದಲೇ ನಿರ್ಣಯಿಸಲ್ಪಟ್ಟಿರುವುದು. ಇಷ್ಟುಮಾತ್ರವೇ ಅಲ್ಲ. ಈ ಸಗರಪುತ್ರರೂ ಕೂಡ ಬಹುಕಾಲದವರೆಗೆ ಜೀವಿಸಿರಬಾರದೆಂದೂ ಮೊದಲೇ ನಿಶ್ಚಯಿಸಲ್ಪಟ್ಟಿರುವುದು" ಎಂದನು. ಇದನ್ನು ಕೇಳಿ ಆ ಮೂವತ್ತುಮೂರುಕೋಟಿ ದೇವತೆಗಳೂ ಬಹು ಸಂತೋಷದಿಂದ ಹಿಂತಿರುಗಿಹೋದರು.

ಇತ್ತಲಾಗಿ ಸಗರಪುತ್ರರು ಭೂಮಿಯನ್ನು ಭೇದಿಸುತ್ತಿರುವಾಗ, ಅದರಿಂದ ಉಂಟಾದ ಧ್ವನಿಯು ಸಿಡಿಲಿನಂತೆ ಭಯಂಕರವಾಗಿ ಈ ಪ್ರಪಂಚವೆಲ್ಲವನ್ನೂ ವ್ಯಾಪಿಸಿತು. ಹೀಗೆ ಅವರೆಲ್ಲರೂ ಎಲ್ಲಾ ಕಡೆಗಳನ್ನು ತಿರುಗಿದರೂ ಕುದುರೆಯು ಸಿಕ್ಕದಿರಲು, ಎಲ್ಲರೂ ಹಿಂತಿರುಗಿ ಬಂದು ತಂದೆಯನ್ನು ಕುರಿತು, "ಎಲೈ ತಂದೆಯೆ! ಎಲ್ಲಾ ಕಡೆಗಳನ್ನೂ ಹುಡುಕಿದೆವು. ಮಹಾಬಲಶಾಲಿಗಳಾದ ದೇವಗಂಧರ್ವರಾಕ್ಷಸಪಿಶಾಚಾದಿಗಳೆಲ್ಲರನ್ನೂ ಕಂಡಕಂಡ ಕಡೆಯಲ್ಲಿ ಕೊಂದುಹಾಕಿದೆವು. ಆ ಕುದುರೆಯಾಗಲಿ, ಅದನ್ನು ಕದ್ದವನಾಗಲಿ ನಮ್ಮ ಕಣ್ಣಿಗೆ ಸಿಕ್ಕಲಿಲ್ಲ. ಇನ್ನು ಮಾಡಬೇಕಾದುದೇನು? ಮೇಲಿನ ಉಪಾಯವನ್ನು ನೀನೇ ಹೇಳಬೇಕು" ಎಂದರು. ಸಗರನು ಈ ಮಾತನ್ನು ಕೇಳಿದೊಡನೆ ಕುದುರೆಯು ಸಿಕ್ಕದುದಕ್ಕಾಗಿ ಬಹಳ ದುಃಖವನ್ನೂ, ಕೋಪವನ್ನೂ ಹೊಂದಿ, "ಎಲೈ ಮಕ್ಕಳಿರಾ! ನೀವು ಇನ್ನೂ ಒಂದಾವರ್ತಿ ಈ ಭೂಮಿಯನ್ನು ಭೇದಿಸಿ ಕುದುರೆಯನ್ನು ಹುಡುಕಿ ಬನ್ನಿರಿ. ನಿಮಗೆ ಮಂಗಳವಾಗಲಿ! ಈಗ ಆ ಕುದುರೆಯೂ, ಅದನ್ನು ಕದ್ದವನೂ ನಿಮಗೆ ಸಿಕ್ಕದಿರಲಾರನು. ನಿಮ್ಮ ಕೆಲಸವು ಕೈಗೂಡುವುದರಲ್ಲಿ ಸಂದೇಹವಿಲ್ಲ, ನೀವೆಲ್ಲರೂ ಹೋಗಿಬನ್ನಿರಿ!" ಎಂದು ಆಜ್ಞಾಪಿಸಿದನು.

ಹೀಗೆ ಮಹಾತ್ಮನಾದ ಸಗರನು ಹೇಳಿದ ಮಾತನ್ನು ಕೇಳಿ, ಆ ಮಕ್ಕಳೆಲ್ಲರೂ ಪುನಃ ಭೂಮಿಯನ್ನು ಭೇದಿಸಲಿಕ್ಕಾರಂಭಿಸಲು ಒಂದಾನೊಂದು ಸ್ಥಳದಲ್ಲಿ ಒಂದು ದೊಡ್ಡ ಪರ್ವತವನ್ನು ಕಂಡರು. ಅದರ ನಡುವೆ ಈ ಸಮಸ್ತ ಭೂಮಿಯನ್ನೂ ತಲೆಯಮೇಲೆ ಹೊತ್ತು ನಿಂತಿರುವ ವಿರೂಪಾಕ್ಷವೆಂಬ ದಿಗ್ಗಜವನ್ನು ಕಂಡರು. "ಎಲೈ ರಾಮನೆ! ಸಮಸ್ತ ಪ್ರಪಂಚವನ್ನೂ ಹೊತ್ತಿರುವ ಈ ಆನೆಯು ತನ್ನ ಶ್ರಮಪರಿಹಾರಕ್ಕಾಗಿ ಯಾವಾಗ ತಲೆಯನ್ನಾಡಿಸುವುದೋ ಆಗ ಭೂಮಿಯು ನಡುಗುವುದರಿಂದ ಅದನ್ನೇ ಭೂಕಂಪವೆಂದು ಹೇಳುವರು. ಸಗರಪುತ್ರರು ಪ್ರದಕ್ಷಿಣ ನಮಸ್ಕಾರಾದಿಗಳಿಂದ ಆ ಮಹಾಗಜವನ್ನು

ಪೂಜಿಸಿ ಪಾತಾಳವನ್ನು ಭೇದಿಸಿದರು. ಹೀಗೆ ಪೂರ್ವದಿಕ್ಕನ್ನು ಭೇದಿಸಿದ ಮೇಲೆ ದಕ್ಷಿಣದಿಕ್ಕನ್ನು ಭೇದಿಸುತ್ತಿರುವಾಗ ಅಲ್ಲಿಯೂ ದೊಡ್ಡ ಪರ್ವತ ದಂತಿರುವ ಮಹಾಪದ್ಮವೆಂಬ ಆನೆಯನ್ನು ಕಂಡರು. ಅದೂ ಕೂಡ ಈ ಭೂಮಂಡಲವನ್ನು ಹೊತ್ತಿರುವ ರೀತಿಯನ್ನು ನೋಡಿ ಅತ್ಯಾಶ್ಚರ್ಯಪಟ್ಟರು. ಅದಕ್ಕೂ ಪ್ರದಕ್ಷಿಣೆ ಮಾಡಿ, ಪಶ್ಚಿಮದಿಕ್ಕನ್ನು ಭೇದಿಸಲು, ಅಲ್ಲಿ ಮಹಾ ಬಲವುಳ್ಳ ಸೌಮನಸವೆಂಬ ದೊಡ್ಡ ದಿಗ್ಗಜವು ಕಾಣಿಸಿತು. ಅದಕ್ಕೂ ಪ್ರದಕ್ಷಿಣೆ ಮಾಡಿ, ಅದರ ಕ್ಷೇಮವನ್ನು ವಿಚಾರಿಸಿ, ಹಿಮವತ್ಪರ್ವತದಿಂದ ಶೋಭಿಸುತ್ತಿರುವ ಉತ್ತರದಿಕ್ಕನ್ನು ಅಗೆದರು. ಆ ದಿಕ್ಕಿನಲ್ಲಿ ಈ ಭೂಮಿಯನ್ನು ಹೊತ್ತು ಮಂಜಿನಂತೆ ಬಿಳುಪಾಗಿ ಶುಭಲಕ್ಷಣಗಳಿಂದ ಕೂಡಿದ ಭದ್ರವೆಂಬ ದಿಗ್ಗಜವನ್ನು ಕಂಡರು. ಅದನ್ನೂ ಬಹಳ ಪ್ರೀತಿಯಿಂದ ಸವರಿ, ಪ್ರದಕ್ಷಿಣೆ ಮಾಡಿ, ಈ ಸಗರಪುತ್ರರೆಲ್ಲರೂ ಇನ್ನೂ ಕೆಳಗೆ ನೆಲವನ್ನು ತೋಡಲಾರಂಭಿಸಿ ದರು. ಮಹಾಬಲಶಾಲಿಗಳಾಗಿಯೂ, ವೇಗವುಳ್ಳವರಾಗಿಯೂ ಇರುವ ಈ ವೀರರೆಲ್ಲರೂ ಹೀಗೆ ಕೆಳಕೆಳಗೆ ತೋಡುತ್ತಾ ಈಶಾನ್ಯದಿಕ್ಕಿಗೆ ಹೋಗಿ, ಬಹು ಕೋಪದಿಂದ ಪಾತಾಳವನ್ನು ಭೇದಿಸುತ್ತಿರುವಾಗ, ಅಲ್ಲಿ ಕಪಿಲರೂಪದಿಂದಿ ರುವ ಮಹಾವಿಷ್ಣುವನ್ನೂ, ಆತನ ಸಮೀಪದಲ್ಲಿ ಮೇಯುತ್ತಿರುವ ತಮ್ಮ ಯಜ್ಞದ ಕುದುರೆಯನ್ನೂ ಕಂಡರು. ಆಗ ಅವರೆಲ್ಲರಿಗೂ ಬಹಳ ಸಂತೋಷ ವುಂಟಾಯಿತು. ಈತನೇ ತಮ್ಮ ಕುದುರೆಯನ್ನು ಅಪಹರಿಸಿದನೆಂದೆಣಿಸಿ, ಮಿತಿಮೀರಿದ ಕೋಪಾವೇಶದಿಂದ ಕೆಂಪಾದ ಕಣ್ಣುಳ್ಳವರಾಗಿ, ತಮ್ಮಲ್ಲಿ ಇಟ್ಟುಕೊಂಡಿದ್ದ ಗುದ್ದಲಿ, ನೇಗಿಲು ಮುಂತಾದ ಆಯುಧಗಳನ್ನೂ, ಕಲ್ಲು, ಮರ ಮುಂತಾದ ಸಾಮಗ್ರಿಗಳನ್ನೂ ಬೀಸಿ, “ ಛೀ, ನೀಚನೆ ! ನಿಲ್ಲು ನಿಲ್ಲು ! ” ಎಂದು ಆರ್ಭಟಿಸುತ್ತ, ಪುನಃ ಆ ಕಪಿಲನನ್ನು ಕುರಿತು, “ ಎಲೈ ದುರ್ಬುದ್ಧಿಯೇ ! ನಮ್ಮ ಯಜ್ಞಾಶ್ವವನ್ನು ಇಲ್ಲಿಗೆ ಕದ್ದು ತಂದೆಯಾ ? ನಾವು ಸಗರಪುತ್ರರೆಂದು ನೀನು ತಿಳಿಯಲಿಲ್ಲವೆ ? ಛೀ ! ನಿಲ್ಲು” ಎಂದು ಧಿಕ್ಕರಿಸಿದರು. ಈ ಮಾತನ್ನು ಕೇಳಿದೊಡನೆ ಕಪಿಲನು ಬಹು ಕೋಪಗೊಂಡು ಹುಂಕರಿಸಿ ನೋಡಲು, ಎಣೆಯಿಲ್ಲದ ಮಹಿಮೆಯುಳ್ಳ ಆ ಮಹಾತ್ಮನ ಕೋಪಾಗ್ನಿ ಯಿಂದ ಆ ಅರವತ್ತುಸಾವಿರಮಂದಿ ಮಕ್ಕಳೂ ಅಲ್ಲಿಯೇ ದಗ್ಧರಾಗಿ ಭಸ್ಮ ರೂಪವನ್ನು ಹೊಂದಿದರು.

ಇಲ್ಲಿಗೆ ನಾಲ್ವತ್ತನೆಯ ಸರ್ಗವು.

ಅಂಶುಮಂತನು ಯಜ್ಞಾಶ್ವವನ್ನು ತಂದುದು

"ಎಲೈ ರಾಮನೆ! ಸಗರನು ತನ್ನ ಅರವತ್ತುಸಾವಿರಮಂದಿ ಮಕ್ಕಳೂ ಹೋಗಿ ಬಹುಕಾಲವಾದರೂ ಹಿಂತಿರುಗಿ ಬಾರದುದನ್ನು ನೋಡಿ ತೇಜಸ್ವಿಯಾದ ಅಂಶುಮಂತನೆಂಬ ತನ್ನ ಮೊಮ್ಮಗನನ್ನು ಕರೆದು, "ಎಲೈ ವತ್ಸನೆ! ನೀನು ಮಹಾಶೂರನು. ಶಸ್ತ್ರಾಸ್ತ್ರವಿದ್ಯೆಗಳನ್ನೆಲ್ಲಾ ತಿಳಿದವನು. ನೀನು ತೇಜಸ್ಸಿನಿಂದ ನಮ್ಮ ಹಿರಿಯರನ್ನು ಹೋಲುತ್ತಿರುವೆ. ನಿನ್ನ ಚಿಕ್ಕಪ್ಪಂದಿರು ಕುದುರೆಯನ್ನು ಹುಡುಕುವುದಕ್ಕಾಗಿ ಹೋಗಿ ಬಹಳ ದಿನಗಳಾದುವು. ಅವರನ್ನೂ, ಕುದುರೆಯನ್ನೂ ಹುಡುಕಿ ಬಾ! ಈ ಭೂಮಿಯ ಕೆಳಗಿರುವ ಪ್ರಾಣಿಗಳೆಲ್ಲವೂ ಬಹಳ ವೀರ್ಯವುಳ್ಳವುಗಳು. ಆಕಾರದಲ್ಲಿಯೂ ಬಹಳ ದೊಡ್ಡವುಗಳು. ಅವುಗಳನ್ನು ನಿಗ್ರಹಿಸುವುದಕ್ಕಾಗಿ ಉತ್ತಮವಾದ ಖಡ್ಗವನ್ನೂ, ಧನುಸ್ಸನ್ನೂ ತೆಗೆದುಕೊಂಡುಹೋಗು. ನಿನಗೆ ತಡೆಮಾಡುವವರನ್ನು ನಿಗ್ರಹಿಸು! ಪೂಜ್ಯರಾದವರನ್ನು ನಮಸ್ಕರಿಸು. ಕುದುರೆಯನ್ನು ಕದ್ದವನು ನಿನ್ನ ಕಣ್ಣಿಗೆ ಗೋಚರಿಸಿದರೆ ಒಡನೆಯೇ ಆತನನ್ನು ಸಂಹರಿಸಿ ಯಜ್ಞಾಶ್ವವನ್ನು ತೆಗೆದುಕೊಂಡು ಬಾ. ಎಲೈ ವತ್ಸನೆ! ಹೇಗಾದರೂ ಕಾರ್ಯಸಾಧನೆಯನ್ನು ಮಾಡಿಕೊಂಡು ಬಂದು, ನಮ್ಮ ಯಜ್ಞವನ್ನು ಕೊನೆಗಾಣಿಸುವ ಭಾರವು ನಿನ್ನದಾಗಿದೆ" ಎಂದನು.

ಮಹಾತ್ಮನಾದ ಸಗರನು ಹೀಗೆ ಒತ್ತಿ ಹೇಳುತ್ತಿರುವುದನ್ನು ಕೇಳಿ, ಅಂಶುಮಂತನು ಧನುಸ್ಸನ್ನೂ, ಖಡ್ಗವನ್ನೂ ತೆಗೆದುಕೊಂಡು ವೇಗದಿಂದ ಹೊರಟು, ತನ್ನ ಚಿಕ್ಕಪ್ಪಂದಿರು ತೋಡಿರುವ ದಾರಿಯಿಂದಲೇ ಪಾತಾಳವನ್ನು ಪ್ರವೇಶಿಸಿ, ಅಲ್ಲಿ ದೈತ್ಯದಾನವರಾಕ್ಷಸಾದಿಗಳಿಂದಲೂ, ಪಿಶಾಚಗಳಿಂದಲೂ, ನಾಗರಿಂದಲೂ, ಗರುಡರಿಂದಲೂ ಪೂಜಿಸಲ್ಪಡುತ್ತಿರುವ ದಿಗ್ಗಜವನ್ನು ಕಂಡು, ಅದಕ್ಕೆ ಪ್ರದಕ್ಷಿಣೆ ಮಾಡಿ, ಅದರ ಕ್ಷೇಮಲಾಭಗಳನ್ನು ವಿಚಾರಿಸಿದಮೇಲೆ, ಆ ಆನೆಯನ್ನು ಕುರಿತು, "ಎಲೈ ಮಹಾಗಜವೆ! ನಮ್ಮ ಚಿಕ್ಕಪ್ಪಂದಿರ ಮತ್ತು ನಮ್ಮ ಯಜ್ಞಾಶ್ವವನ್ನು ಕದ್ದುಕೊಂಡುಹೋದ ಕಳ್ಳನ ವೃತ್ತಾಂತವನ್ನು ನೀನು ಬಲ್ಲೆಯಾ" ಎಂದನು. ಅದಕ್ಕಾ ದಿಗ್ಗಜವು "ಎಲೈ ಅಸಮಂಜಪುತ್ರನೆ! ಮುಂದೆ ಹೋದರೆ ನಿನ್ನ ಕೆಲಸವು ಕೈಗೂಡುವುದು. ಶೀಘ್ರದಲ್ಲಿಯೇ ಯಜ್ಞಾಶ್ವವನ್ನು ತೆಗೆದುಕೊಂಡು ಹಿಂತಿರುಗಿಬರುವೆ. ಸಂದೇಹಪಡಬೇಡ" ಎಂದಿತು. ಆಮೇಲೆ ಅಂಶುಮಂತನು ಅದೇ ದಾರಿಯನ್ನು ಹಿಡಿದು ಹೋಗುತ್ತಾ,

ಅಲ್ಲಲ್ಲಿದ್ದ ದಿಗ್ಗಜಗಳಲ್ಲಿ ಒಂದೊಂದನ್ನೂ ಕ್ರಮವಾಗಿ ವಿಚಾರಿಸಿಕೊಂಡು ಬರುತ್ತಿರಲು, ಆ ದಿಗ್ಗಜಗಳೆಲ್ಲವೂ ಈ ಅಂಶುಮಂತನನ್ನು ನೋಡಿ, "ನಿನಗೆ ಕುದುರೆಯು ಸಿಕ್ಕುವುದರಲ್ಲಿ ಸಂದೇಹವಿಲ್ಲ"ವೆಂದೇ ಹೇಳುತ್ತಿದ್ದುವು. ಹೀಗೆ ಶುಭಸೂಚನೆಗಳಿಂದ ಮೇಲೆ ಮೇಲೆ ಈತನಿಗೆ ಉತ್ಸಾಹವು ಹೆಚುತ್ತ ಬರಲು, ವೇಗದಿಂದ ಮುಂದೆಮುಂದೆ ಹೋಗುತ್ತಿರುವಾಗ, ಅಲ್ಲಿ ಒಂದಾನೊಂದು ಕಡೆಯಲ್ಲಿ ಬಿದ್ದಿದ್ದ ದೊಡ್ಡ ಭಸ್ಮರಾಶಿಯನ್ನು ಕಂಡನು. ಹೀಗೆ ಆ ದೊಡ್ಡ ಭಸ್ಮರಾಶಿಯನ್ನೂ ಮುಂದೆ ದಾರಿಯಿಲ್ಲದಿರುವುದನ್ನೂ ನೋಡಿದೊಡನೆ, ತನ್ನ ಚಿಕ್ಕಪ್ಪಂದಿರೇ ಈ ಅವಸ್ಥೆಯನ್ನು ಹೊಂದಿರುವರೆಂದು ನಿಶ್ಚಯಿಸಿ, ಬಹಳ ದುಃಖವುಳ್ಳವನಾಗಿ ಪ್ರಲಾಪಿಸುತಿದ್ದನು. ಮತ್ತು ಸ್ವಲ್ಪದೂರದಲ್ಲಿ ತನ್ನ ಯಜ್ಞದ ಕುದುರೆಯು ಮೇಯುತ್ತಿರುವುದನ್ನೂ ಕಂಡನು. ಆಗ ಬಹಳ ದುಃಖದಿಂದಲೂ, ಸಂಕಟದಿಂದಲೂ ಕೂಡಿದವನಾಗಿ, ಆ ಪಿತೃಗಳಿಗೆ ಸಂಚಯನವೇ ಮೊದಲಾದ ಜಲಕ್ರಿಯೆಗಳನ್ನು ಮಾಡಬೇಕೆಂದು ನೀರನ್ನು ಹುಡುಕಲು, ಅಲ್ಲಿ ಒಂದು ಸರಸ್ಸಾದರೂ ಕಾಣಿಸಲಿಲ್ಲ. ಆಗ ಈತನು ಬಹಳ ಚಿಂತೆಯಿಂದ ಮುಂದುತೋರದೆ ಕ್ಷಣಕಾಲವಿದ್ದು, ಆಮೇಲೆ ತಲೆಯೆತ್ತಿ ಮೇಲೆ ನೋಡಲು, ಅಲ್ಲಿ ತನ್ನ ಚಿಕ್ಕಪ್ಪಂದಿರಿಗೆ ಸೋದರಮಾವನಾಗಿಯೂ, ಪಕ್ಷಿರಾಜನಾಗಿಯೂ, ವಾಯುವಿಗೆ ಸಮಾನವಾದ ವೇಗವುಳ್ಳವನಾಗಿಯೂ ಇರುವ ಗರುಡನನ್ನು ಕಂಡನು.

ಆಗ ಆ ಗರುಡನು, ಈ ಅಂಶುಮಂತನು ಹೀಗೆ ಚಿಂತಿಸುತ್ತಾ ತನ್ನನ್ನೇ ನೋಡುತ್ತಿರುವುದನ್ನು ಕಂಡು, "ಎಲೈ ಪುರುಷಶ್ರೇಷ್ಠನೆ! ದುಃಖಿಸಬೇಡ. ಈ ನಿನ್ನ ಚಿಕ್ಕಪ್ಪಂದಿರು ಹೀಗೆ ಸತ್ತುದು ಲೋಕಕ್ಷೇಮಕ್ಕಾಗಿಯೇ ಅಲ್ಲದೆ ಬೇರೆಯಲ್ಲ. ಎಣೆಯಿಲ್ಲದ ಮಹಿಮೆಯುಳ್ಳ ಈ ಕಪಿಲಮಹಾಮುನಿಯಿಂದಲೇ ಇವರು ಹೀಗೆ ದಗ್ಧರಾಗಿರುವರು. ಇವರೆಲ್ಲರಿಗೂ ಆ ಬ್ರಾಹ್ಮಣನಿಂದ ಮರಣವುಂಟಾಗಿರುವುದರಿಂದ, ಇವರಿಗೆ ಈ [1]ಲೋಕದಲ್ಲಿರುವ ನೀರಿನಿಂದ ಜಲ

---

1. "ಚಂಡಾಲಾದುದಕಾತ್ಸರ್ಪಾದ್ವೈದ್ಯುತಾದ್ಬ್ರಾಹ್ಮಣಾದಪಿ | ದಂಷ್ಟ್ರಿಭ್ಯಶ್ಚ ಪಶುಭ್ಯಶ್ಚ ಮರಣಂ ಪಾಪಕರ್ಮಣಾಂ || ಉದಕಂ ಪಿಂಡದಾನಂ ಚ ತೇಭ್ಯೋ ಯದ್ಯದ್ವಿಧೀಯತೇ | ನೋಪತಿಷ್ಠತಿ ತತ್ಸರ್ವಮಂತರಿಕ್ಷೇ ವಿನಶ್ಯತಿ ||" ಎಂಬಂತೆ, ಚಂಡಾಲರಿಂದಲೂ, ಜಲದಿಂದಲೂ, ಸರ್ಪಗಳಿಂದಲೂ, ಸಿಡಿಲಿನಿಂದಲೂ, ಬ್ರಾಹ್ಮಣರಿಂದಲೂ, ಕೋರೆಯುಳ್ಳ ಕ್ರೂರಜಂತು

ಕ್ರಿಯೆಯನ್ನು ಮಾಡುವುದುಚಿತವಲ್ಲ. ನೀನು ಸ್ವತಃ ಪ್ರಾಜ್ಞನಾದುದರಿಂದ ನಿನಗೂ ತಿಳಿದೇ ಇರುವುದು. ಎಲೈ ವತ್ಸನೆ! ಇವರಿಗೆ ಸದ್ಗತಿಯನ್ನು ಹೊಂದಿಸ ಬೇಕಾದರೆ ಹಿಮವತ್ಪರ್ವತದ ಜ್ಯೇಷ್ಠಪುತ್ರಿಯಾಗಿ ಲೋಕಪಾವನಿಯೆಂದು ಖ್ಯಾತಿಹೊಂದಿದ ಗಂಗಾನದಿಯನ್ನು ಕರೆತಂದು ಈ ಬೂದಿಯ ರಾಶಿಯನ್ನು ತೇಲಿಸು! ಆದರಿಂದ ಅವರೆಲ್ಲರಿಗೂ ಸ್ವರ್ಗಪ್ರಾಪ್ತಿಯಾಗುವುದು. ಮತ್ತು ಎಲೈ ಆಯುಷ್ಮಂತನೆ! ಅದು ಹಾಗಿರಲಿ! ಮೊದಲು ಈ ಯಜ್ಞದ ಕುದುರೆ ಯನ್ನು ತೆಗೆದುಕೊಂಡುಹೋಗಿ ನಿನ್ನ ತಾತನಾದ ಸಗರಚಕ್ರವರ್ತಿಯ ಯಜ್ಞವನ್ನು ಪೂರ್ತಿಮಾಡಿಸು" ಎಂದನು. ಇದನ್ನು ಕೇಳಿದೊಡನೆಯೇ ಅಂಶುಮಂತನು ಬಹುವೇಗದಿಂದ ಕುದುರೆಯೊಡನೆ ಹಿಂತಿರುಗಿಬಂದು, ದೀಕ್ಷೆಯನ್ನು ವಹಿಸಿದ್ದ ಆ ಸಗರನಿಗೆ ಕುದುರೆಯನ್ನೊಪ್ಪಿಸಿ, ನಡೆದ ವೃತ್ತಾಂತವನ್ನೂ, ಗರುಡನು ಹೇಳಿದ ವಿಷಯವನ್ನೂ ತಿಳಿಸಿದನು. ಇದನ್ನು ಕೇಳಿ, ಸಗರನು ಬಹಳ ದುಃಖಿತನಾಗಿದ್ದು ಕೊನೆಗೆ ಶಾಸ್ತ್ರೋಕ್ತವಾಗಿ ಯಜ್ಞ ವನ್ನು ಪೂರ್ತಿಮಾಡಿಕೊಂಡು ತನ್ನ ಪಟ್ಟಣಕ್ಕೆ ಬಂದು ಸೇರಿದನು. ಆದರೆ ತನ್ನ ಮಕ್ಕಳ ಜಲಕ್ರಿಯೆಗಾಗಿ ಗಂಗೆಯನ್ನು ತರುವುದಕ್ಕೆ ಉಪಾಯವೇ ನೆಂದು ಈತನಿಗೆ ಬಹುಕಾಲದವರೆಗೆ ತೋರಲೇ ಇಲ್ಲ. ಹಾಗೆಯೇ ಮೂವತ್ತು ಸಾವಿರ ವರುಷಗಳವರೆಗೂ ರಾಜ್ಯವನ್ನು ಪಾಲಿಸುತ್ತಿದ್ದು ಸ್ವರ್ಗಸ್ಥನಾದನು.

ಇಲ್ಲಿಗೆ ನಾಲ್ವತ್ತೊಂದನೆಯ ಸರ್ಗವು.

ಗಳಿಂದಲೂ, ಪಶುಗಳಿಂದಲೂ ಮರಣವುಂಟಾಗುವುದು ಬಹಳ ಪಾಪಕರ್ಮ ವುಳ್ಳವರಿಗೆ ಮಾತ್ರವೇ ಹೊರತು ಬೇರೆಯವರಿಗಲ್ಲ. ಇಂತವರಿಗೆ ಜಲತರ್ಪಣ, ಪಿಂಡಪ್ರದಾನ ಮುಂತಾದುವುಗಳನ್ನು ಮಾಡಿದರೂ, ಅದು ಅವರಿಗೆ ಸೇರದೆ, ಅಂತರಿಕ್ಷದಲ್ಲಿಯೇ ನಿರರ್ಥಕವಾಗಿ ನಶಿಸಿಹೋಗುವುದೆಂದು ಹೇಳಲ್ಪಟ್ಟಿರುವುದ ರಿಂದ, ಇಲ್ಲಿ ಕಪಿಲನೆಂಬ ಬ್ರಾಹ್ಮಣನಿಂದ ಮೃತಿಹೊಂದಿದ ಸಗರಪುತ್ರರಿಗೆ ಜಲತರ್ಪಣದಿಂದ ಪ್ರಯೋಜನವಿಲ್ಲವೆಂದು ಅಭಿಪ್ರಾಯವು.

ಭಗೀರಥನು ಗಂಗೆಯನ್ನು ತರುವುದಕ್ಕಾಗಿ
ತಪಸ್ಸು ಮಾಡುವುದು.

ಸಗರನು ಕಾಲಾಧೀನನಾದಮೇಲೆ ಆ ದೇಶದ ಪ್ರಜೆಗಳೆಲ್ಲರೂ ಆತನ ಮೊಮ್ಮಗನಾದ ಅಂಶುಮಂತನಿಗೆ ಪಟ್ಟವನ್ನು ಕಟ್ಟಿದರು. ಆತನು ಬಹಳ ಧಾರ್ಮಿಕನಾದ ರಾಜನೆನಿಸಿಕೊಂಡಿದ್ದು, ಕೊನೆಗಾಲದಲ್ಲಿ ತನ್ನ ಮಗನಾದ ದಿಲೀಪನಿಗೆ ರಾಜ್ಯವನ್ನೊಪ್ಪಿಸಿ, ಹಿಮವತ್ಪರ್ವತದ ಶಿಖರದಲ್ಲಿ ಕ್ರೂರವಾದ ತಪಸ್ಸನ್ನು ಮಾಡುತ್ತಿದ್ದು, ಮೂವತ್ತೆರಡುಸಾವಿರ ವರ್ಷಗಳವರೆಗೆ ಆ ತಪಸ್ಸಿನಲ್ಲಿಯೇ ಇದ್ದು, ಕೊನೆಗೆ ಸ್ವರ್ಗವನ್ನೈದಿದನು. ಆಮೇಲೆ ಮಹಾತೇಜಸ್ವಿಯಾದ ಆ ದಿಲೀಪನೂ ಕೂಡ ತನ್ನ ತಾತಂದಿರ ಮರಣವಾರ್ತೆಯನ್ನು ಕೇಳಿ ದುಃಖಿತನಾಗಿ, ಮುಂದಿನ ಉಪಾಯವೇನೂ ತೋರದೆ ಇದ್ದನು. ಹೀಗೆ ಆ ದಿಲೀಪನು ಯಾವಾಗಲೂ "ಗಂಗೆಯನ್ನು ತರುವುದು ಹೇಗೆ? ಅವರಿಗೆ ಜಲಕ್ರಿಯೆಯನ್ನು ಮಾಡುವುದು ಹೇಗೆ? ಅವರಿಗೆ ಸದ್ಗತಿಯನ್ನು ಹೊಂದಿಸುವುದಕ್ಕೆ ಉಪಾಯವೇನು?" ಎಂಬ ಚಿಂತೆಯಲ್ಲಿಯೇ ಕೊರಗುತ್ತಿದ್ದನು. ಹೀಗೆ ಚಿಂತಿಸುತ್ತಿರುವ ಧಾರ್ಮಿಕನಾದ ಆ ದಿಲೀಪನಿಗೆ ಭಗೀರಥನೆಂಬ ಪುತ್ರನೊಬ್ಬನುಂಟಾದನು. ಆಮೇಲೆ ದಿಲೀಪನು ಅನೇಕ ಯಜ್ಞಗಳನ್ನು ಮಾಡಿ, ಮೂವತ್ತುಸಾವಿರ ವರುಷಗಳವರೆಗೂ ರಾಜ್ಯವನ್ನು ಧರ್ಮದಿಂದ ಆಳುತ್ತಿದ್ದು ತನ್ನ ತಾತಂದಿರನ್ನು ಸದ್ಗತಿಹೊಂದಿಸುವುದಕ್ಕೆ ಉಪಾಯವಾವುದೆಂಬ ಚಿಂತೆಯಿಂದಲೇ ವ್ಯಾಧಿಪೀಡಿತನಾಗಿ [1]ಕಾಲಧರ್ಮವನ್ನು ಹೊಂದಿದನು.

ಆಮೇಲೆ ರಾಜ್ಯಕ್ಕೆ ಬಂದ ಪರಮಧಾರ್ಮಿಕನಾದ ಭಗೀರಥನು, ಮಹಾತೇಜಸ್ವಿಯಾಗಿ, ರಾಜಋಷಿಯೆನಿಸಿಕೊಂಡು, ಬಹುಕಾಲದವರೆಗೆ ಸಂತಾನವಿಲ್ಲದೆ, ಮಕ್ಕಳನ್ನು ಪಡೆಯಬೇಕೆಂಬ ಉದ್ದೇಶದಿಂದ ರಾಜ್ಯವನ್ನು ಮಂತ್ರಿಗಳ ವಶಕ್ಕೆ ಬಿಟ್ಟು [2]ಗೋಕರ್ಣಕ್ಕೆ ಹೋಗಿ, ಗಂಗೆಯನ್ನು ತರಬೇಕೆಂಬ ಸಂಕಲ್ಪದಿಂದ ಘೋರವಾದ ತಪಸ್ಸನ್ನು ಮಾಡಲಾರಂಭಿಸಿದನು. ಹೀಗೆ ಭಗೀರಥನು,

---

1. ಹುಟ್ಟಿದವರಿಗೆ ಕಾಲವಶದಿಂದ ಅವಶ್ಯವಾಗಿ ಪ್ರಾಪ್ತವಾಗುವ ಧರ್ಮವು ಎಂದರೆ ಮರಣವೆಂದರ್ಥವು.

2. ಗೋಕರ್ಣವೆಂಬುದು ಹಿಮವತ್ಪರ್ವತದ ಪಾದದಲ್ಲಿರುವ ಒಂದು ಪುಣ್ಯಕ್ಷೇತ್ರವು.

[1]ಪಂಚಾಗ್ನಿಗಳ ನಡುವೆ ಕುಳಿತು, ಇಂದ್ರಿಯಗಳನ್ನು ನಿಗ್ರಹಿಸಿ, ತೋಳುಗಳನ್ನು ಮೇಲಕ್ಕೆತ್ತಿ, ತಿಂಗಳಿಗೆ ಒಂದಾವರ್ತಿ ಆಹಾರವನ್ನು ತೆಗೆದುಕೊಳ್ಳುತ್ತ, ಅನೇಕ ಸಹಸ್ರ ವರ್ಷಗಳ ವರೆಗೆ ಆ ತಪಸ್ಸಿನಲ್ಲಿಯೇ ಇದ್ದುಬಿಟ್ಟನು. ಕೊನೆಗೆ ಬ್ರಹ್ಮನು ಇವನ ತಪಸ್ಸಿಗೆ ಮೆಚ್ಚಿ, ಈತನು ತಪಸ್ಸುಮಾಡುತ್ತಿದ್ದ ಸ್ಥಳಕ್ಕೆ ಅನೇಕ ದೇವತೆಗಳೊಡಗೂಡಿ ಬಂದು "ಎಲೈ ಮಹಾತ್ಮನೆ! ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ಬೇಕಾದ ವರವನ್ನು ಕೇಳು" ಎನಲು, ಭಗೀರಥನು ಕೈಮುಗಿದು ನಿಂತು "ನೀನು ನನ್ನ ತಪಸ್ಸಿಗೆ ಮೆಚ್ಚಿ ತಕ್ಕ ಫಲವನ್ನು ಕೊಡುವುದೇ ನಿಜವಾಗಿದ್ದರೆ, ನನ್ನ ಮುತ್ತಾತಂದಿರಾದ ಸಗರಪುತ್ರರೆಲ್ಲರಿಗೂ ನನ್ನಿಂದಲೇ ಜಲಕ್ರಿಯೆಯು ನಡೆಯುವಹಾಗೆ ಅನುಗ್ರಹಿಸಬೇಕು. ಇವರ ಭಸ್ಮರಾಶಿಯನ್ನು ದೇವಗಂಗೆಯಿಂದ ತೇಲಿಸಿದ ಹೊರತು, ಅವರಿಗೆ ಸದ್ಗತಿಯುಂಟಾಗದು. ಮತ್ತು ನನಗೆ ಸಂತತಿಯಿಲ್ಲದುದರಿಂದ ನಮ್ಮ ವಂಶವು ಇಷ್ಟಕ್ಕೇ ನಿಂತುಹೋಗಿರುವುದು. ಆದುದರಿಂದ ನನಗೆ ಸತ್ಪುತ್ರ ಸಂತಾನವನ್ನೂ ಕೊಟ್ಟು, ಇಕ್ಷ್ವಾಕುವಂಶವು ವೃದ್ಧಿಹೊಂದುವಂತೆಯೂ ಮಾಡಬೇಕು. ಇದೇ ನನಗೆ ಕೊಡಬೇಕಾದ ವರಗಳು" ಎಂದನು. ಈ ಮಾತನ್ನು ಕೇಳಿ ಪಿತಾಮಹನು "ಭಗೀರಥನೆ! ನಿನ್ನ ಈ ಉದ್ದೇಶಗಳೆಲ್ಲವೂ ಸರ್ವೋತ್ತಮವಾದುವು. ನೀನು ಕೇಳಿದಂತೆಯೇ ಆಗಲಿ! ಇಕ್ಷ್ವಾಕುವಂಶವು ನಿನ್ನಿಂದಲೇ ವೃದ್ಧಿಹೊಂದಲಿ! ಇದೋ! ಹಿಮವತ್ಪರ್ವತನ ಜ್ಯೇಷ್ಠ ಪುತ್ರಿಯಾದ ಗಂಗಾದೇವಿಯು ಇಲ್ಲಿರುವಳು. ಇವಳು ಸ್ವರ್ಗಲೋಕದಿಂದ ನಿನ್ನೊಡನೆ ಬರುವುದರಲ್ಲಿ ಸಂದೇಹವಿಲ್ಲ. ಆದರೆ ಇವಳು ನೆಲಕ್ಕೆ ಧುಮ್ಮಿಕ್ಕುವಾಗ, ಭೂಮಿಯು ತಡೆಯಲಾರಳಾದುದರಿಂದ, ಈ ಕೆಲಸಕ್ಕಾಗಿ ರುದ್ರನನ್ನು ಪ್ರಾರ್ಥಿಸು. ಅವನಲ್ಲದೆ ಬೇರೆ ಯಾರೂ ಶಕ್ತರಲ್ಲ" ಎಂದು ಹೇಳಿ, ಆಮೇಲೆ ಗಂಗೆಯನ್ನು ನೋಡಿ ಆಕೆಗೂ ಈ ಅಂಶವನ್ನು ಸೂಚಿಸಿ, ಇತರ ದೇವತೆಗಳೊಡನೆ ತನ್ನ ಸ್ಥಾನಕ್ಕೆ ಹೊರಟುಹೋದನು.

ಇಲ್ಲಿಗೆ ನಾಲ್ವತ್ತೆರಡನೆಯ ಸರ್ಗವು.

---

1. ನಾಲ್ಕು ಕಡೆಗಳಲ್ಲಿಯೂ ಅಗ್ನಿಯನ್ನಿಟ್ಟು, ಮೇಲೆ ಸೂರ್ಯನು ತಪಿಸುತ್ತಿರುವಾಗ ನಡುವೆ ಕುಳಿತು ತಪಸ್ಸು ಮಾಡುವುದು ಪಂಚಾಗ್ನಿ ತಪಸ್ಸೆನಿಸುವುದು.

ಭಗೀರಥನು ಗಂಗೆಯನ್ನು ತಂದುದು

ದೇವದೇವನಾದ ಬ್ರಹ್ಮನು ಹೊರಟುಹೋದಮೇಲೆ, ಭಗೀರಥನು ತನ್ನ ಕಾಲಿನ ಹೆಬ್ಬೆರಳನ್ನು ಮಾತ್ರ ನೆಲದಮೇಲೆ ಊರಿ, ಎರಡು ತೋಳುಗಳನ್ನೂ ಮೇಲಕ್ಕೆ ನೀಡಿ, ವಾಯುವನ್ನೇ ಆಹಾರವಾಗಿ ತೆಗೆದುಕೊಳ್ಳುತ್ತಾ ನಿರಾಧಾರನಾಗಿ ಒಂದು ಮರದ ತುಂಡಿನಂತೆ ಅಲ್ಲಾಡದೆ ನಿಂತು, ಒಂದು ಸಂವತ್ಸರಕಾಲದವರೆಗೆ ಹಗಲುರಾತ್ರಿಯೂ ಬಿಡದೆ ಘೋರವಾದ ತಪಸ್ಸನ್ನು ಮಾಡುತ್ತಿದ್ದನು. ಒಂದು ವರ್ಷ ಕಾಲವು ತುಂಬಿದೊಡನೆಯೇ ಲೋಕಪೂಜ್ಯನಾದ ರುದ್ರನು ಪ್ರತ್ಯಕ್ಷನಾಗಿ ಬಂದು, ಭಗೀರಥನನ್ನು ನೋಡಿ, “ಎಲೈ ರಾಜನೆ! ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ನಿನ್ನ ಉದ್ದೇಶವೂ ನನಗೆ ತಿಳಿಯಿತು. ನಿನ್ನ ಕೋರಿಕೆಯಂತೆಯೇ ದೇವಗಂಗೆಯನ್ನು ಶಿರಸ್ಸಿನಿಂದ ಧರಿಸುವೆನು” ಎಂದನು. ಹೀಗೆ ರುದ್ರನು ಸಿದ್ಧನಾಗಿರುವುದನ್ನು ನೋಡಿ, ಗಂಗೆಯು ತನ್ನ ಮನಸ್ಸಿನಲ್ಲಿ “ಆಹಾ! ಈ ಶಿವನು ನನ್ನ ವೇಗವನ್ನು ಧರಿಸಬಲ್ಲನಂತೆ! ನನ್ನ ಪ್ರವಾಹವೇಗದಿಂದ ಈ ಶಿವನನ್ನೂ ಸಂಗಡಲೇ ಪಾತಾಳಕ್ಕೆ ಸೆಳೆದುಕೊಂಡು ಹೋಗದಿರುವೆನೆ?” ಎಂದೆಣಿಸಿ, ದೊಡ್ಡ ಪ್ರವಾಹವನ್ನು ತಾಳಿ, ದುಸ್ಸಹವಾದ ವೇಗದೊಡನೆ ಆರ್ಭಟಿಸುತ್ತ, ಆಕಾಶದಿಂದ ಹೊರಟು ಪರಿಶುದ್ಧವಾದ ಆ ಶಿವನ ತಲೆಯಮೇಲೆ ಬಿದ್ದಳು.

ಆಗ ರುದ್ರನು ಇವಳ ಗರ್ವವನ್ನು ನೋಡಿ ಕೋಪಗೊಂಡವನಾಗಿ, ಆ ಗಂಗೆಯನ್ನು ತನ್ನ ಜಟೆಯಲ್ಲಿಯೇ ಸೆರೆಸಿಕ್ಕಿಸುವೆನೆಂದು ನಿಶ್ಚಯಿಸಿದನು. ಹಾಗೆಯೇ ಆ ಗಂಗೆಯು ಹಿಮವತ್ಪರ್ವತದಂತೆ ಶುಭ್ರವಾದ ಆ ರುದ್ರನ ಜಟಾಜೂಟದಲ್ಲಿ ಬಿದ್ದೊಡನೆ, ಎಷ್ಟೆಷ್ಟು ಪ್ರಯತ್ನಮಾಡಿದರೂ ಆ ಜಟೆಯಿಂದ ತಪ್ಪಿಸಿಕೊಂಡು ಬರುವುದಕ್ಕೆ ಸಮರ್ಥಳಾಗಲಿಲ್ಲ. ಹೀಗೆ ಅನೇಕ ಸಂವತ್ಸರಗಳವರೆಗೆ ಅದರಲ್ಲಿ ಕಟ್ಟುಬಿದ್ದು ನರಳುತ್ತಿದ್ದಳು. ಇದನ್ನು ನೋಡಿ ಭಗೀರಥನು ತನ್ನ ಪ್ರಯತ್ನವು ವಿಫಲವಾಗುವುದೆಂಬ ಶಂಕೆಯಿಂದ, ಪುನಃ ರುದ್ರನನ್ನು ಕುರಿತು ತಪಸ್ಸುಮಾಡಿ, ಆತನನ್ನು ಮೆಚ್ಚಿಸಲು, ಒಡನೆಯೇ ಆ ರುದ್ರನು ಗಂಗೆಯನ್ನು ಬಿಂದುಸರಸ್ಸಿನಲ್ಲಿ ಬಿಟ್ಟುಬಿಟ್ಟನು. ಗಂಗಾಪ್ರವಾಹವು ಹೀಗೆ ಶಿವನ ತಲೆಯಿಂದ ಕೆಳಗೆ ಬಿದ್ದೊಡನೆ ಏಳು ಪ್ರವಾಹಗಳಾಗಿ ಒಡೆಯಿತು. ಅವುಗಳಲ್ಲಿ, ಹ್ಲಾದಿನಿ, ಪಾವನೆ, ನಳಿನೆ, ಎಂಬ ಮೂರು ಪ್ರವಾಹಗಳು ಪೂರ್ವಾಭಿಮುಖವಾಗಿ ಹರಿದುಹೋದವು. ಸುಚಕ್ಷೆ, ಸೀತೆ, ಸಿಂಧುವೆಂಬ

ಬೇರೆ ಮೂರು ಪ್ರವಾಹಗಳು ಪಶ್ಚಿಮಾಭಿಮುಖವಾಗಿ ಹೊರಟುವು. ಏಳನೆಯ ದಾದ ಮತ್ತೊಂದು ಪ್ರವಾಹವು ಮಾತ್ರವೇ ಭಗೀರಥನನ್ನು ಹಿಂಬಾಲಿಸಿತು. ಈ ಭಗೀರಥನು ರಥನಮೇಲೆ ಕುಳಿತು ಮುಂದೆ ಹೋಗುತ್ತಿದ್ದಹಾಗೆಲ್ಲಾ, ಈ ಪ್ರವಾಹವುಕೂಡ ಆತನನ್ನು ಹಿಂಬಾಲಿಸಿಯೇ ಹೋಗುತ್ತಿತ್ತು. ಹೀಗೆ ದೇವ ಗಂಗೆಯು ಆಕಾಶದಿಂದ ರುದ್ರನ ತಲೆಯಮೇಲೆ ಬಿದ್ದು, ಅಲ್ಲಿಂದ ಭೂಮಿಗೆ ಇಳಿದರೂ, ಆ ಪ್ರವಾಹವು ಬಿದ್ದವೇಗಕ್ಕೆ ಭಯಂಕರವಾದ ಒಂದು ಶಬ್ದ ವುಂಟಾದುದಲ್ಲದೆ, ಆ ನೀರು ಸಮಸ್ತ ಪ್ರಪಂಚವನ್ನೂ ವ್ಯಾಪಿಸಿತು. ಆ ಪ್ರವಾಹದೊಡನೆ ಗುಂಪುಗುಂಪಾಗಿ ನೆಲಕ್ಕೆ ಬೀಳುತ್ತಿದ್ದ ಮೀನು, ಆಮೆ, ಮೊಸಳೆ, ಏಡಿ, ನೀರುಹಾವು ಮುಂತಾದ ಅನೇಕ ಜಲಜಂತುಗಳಿಂದ ಭೂ ಭಾಗವೆಲ್ಲವೂ ತುಂಬಿಹೋಯಿತು. ಆಮೇಲೆ ದೇವತೆಗಳು, ಗಂಧರ್ವರು, ಯಕ್ಷರು, ನಾಗರು, ಕಿನ್ನರರು ಮುಂತಾದವರೆಲ್ಲರೂ ದೊಡ್ಡ ದೊಡ್ಡ ಅರಮನೆಗಳಂತಿರುವ ವಿಮಾನಗಳನ್ನೂ, ಆನೆ, ಕುದುರೆ ಮುಂತಾದ ವಾಹನ ಗಳನ್ನೂ ಏರಿ ಬಂದು, ಆ ಗಂಗೆಯು ಭೂಮಿಗೆ ಬೀಳುವ ರೀತಿಯನ್ನು ಅತಿಸಂಭ್ರಮದಿಂದ ನೋಡುತ್ತಿದ್ದು, ಅದು ಬಿದ್ದ ಸ್ಥಳಕ್ಕೂ ಅತಿವೇಗದಿಂದ ಬಂದು ಸೇರಿದರು.

ಈ ಆಶ್ಚರ್ಯವನ್ನು ನೋಡಬೇಕೆಂಬ ಕುತೂಹಲದಿಂದ ಹೀಗೆ ಸಮಸ್ತ ದೇವತೆಗಳೂ ಬಂದು ಸೇರಿರಲು, ಆ ದೇವತೆಗಳ ದಿವ್ಯತೇಜಸ್ಸಿ ನಿಂದಲೂ, ಅವರ ಆಭರಣಗಳ ಕಾಂತಿಯಿಂದಲೂ, ಆಕಾಶವೆಲ್ಲವೂ ನೂರಾರು ಸೂರ್ಯಬಿಂಬಗಳನ್ನೊಳಗೊಂಡಂತೆ ಶೋಭಿಸುತ್ತಿತ್ತು. ಆ ಪ್ರವಾಹವು ಬಿದ್ದ ಕಾಲದಲ್ಲಿ ಆಕಾಶದಲ್ಲಿ ಕಾಣುತ್ತಿದ್ದ ಮೀನು, ಮೊಸಳೆ ಮುಂತಾದ ಜಲಚರಗಳ ದೇಹಕಾಂತಿಯು ಮಿಂಚಿನಂತೆ ಹೊಳೆಯುತ್ತಿದ್ದಿತು. ಪ್ರವಾಹ ವೇಗದಿಂದ ಹಾರಿದ ಹನಿಗಳಿಂದುಂಟಾದ ಮಂಜಿನಿಂದಲೂ, ಹಾರಾಡುತ್ತ ಲಿರುವ ಹಂಸಸಮೂಹಗಳಿಂದಲೂ, ಆಕಾಶವು ಶರತ್ಕಾಲದ ಮೇಘಗಳಿಂದಲೇ ಸಂಪೂರ್ಣವಾಗಿ ತುಂಬಿರುವಂತೆ ತೋರುತ್ತಿತ್ತು. ಆ ಪ್ರವಾಹದ ವಿಚಿತ್ರ ಗತಿಯನ್ನು ಕೇಳಬೇಕೆ? ಕೆಲವುಕಡೆಗಳಲ್ಲಿ ಬಹುವೇಗದಿಂದ ಓಡುವುದು! ಮತ್ತೆ ಕೆಲವುಕಡೆಗಳಲ್ಲಿ ಮೆಲ್ಲಗೆ ಹೋಗುತ್ತಿರುವುದು! ಸ್ವಲ್ಪ ದೂರದವರೆಗೆ ತಗ್ಗಿ ಹರಿಯುತ್ತಿರುವುದು! ಇನ್ನು ಕೆಲವು ಸ್ಥಳಗಳಲ್ಲಿ ಉಬ್ಬಿ ಬರುತ್ತಿರು ವುದು! ಇದಲ್ಲದೆ ಅಲ್ಲಲ್ಲಿ ಇದಿರಿದಿರಾಗಿ ಬಂದ ಅಲೆಯು, ಒಂದನ್ನೊಂದಪ್ಪಳಿ

ಸಿದ ವೇಗದಿಂದ, ಹನಿಗಳು ಮೇಲೆ ಹಾರಿ ಬೀಳುತ್ತಿರುವುವು. ಹೀಗೆ ಆಕಾಶದಿಂದ ರುದ್ರನ ತಲೆಗೂ, ಅಲ್ಲಿಂದ ಭೂಮಿಗೂ ಬಿದ್ದ ಗಂಗಾ ಪ್ರವಾಹವು, ನಿಷ್ಕಲ್ಮಷವಾದ ಮತ್ತು ಶುದ್ಧವಾದ ನೀರಿನಿಂದ ಬಹಳ ಮನೋಹರವಾಗಿ ಕಾಣಿಸಿತು. ಅಲ್ಲಿದ್ದ ದೇವತೆಗಳೂ, ಋಷಿಗಳೂ, ಗಂಧರ್ವರೂ, ಭೂಲೋಕವಾಸಿಗಳೂ [1]ರುದ್ರನ ಮೈಯನ್ನು ಮುಟ್ಟಿ ಬಿದ್ದ ಆ ನೀರನ್ನು ಬಹು ಭಕ್ತಿಯಿಂದ ಸ್ಪರ್ಶಮಾಡಿದರು. “ಋಷಿಶಾಪದಿಂದ ಮನುಷ್ಯಜನ್ಮವನ್ನು ಹೊಂದಿ ಭೂಲೋಕದಲ್ಲಿ ನರಳುತ್ತಿದ್ದ ಅನೇಕ ದೇವತೆಗಳು ಅದರಲ್ಲಿ ಸ್ನಾನಮಾಡಿ ಶಾಪವಿಮೋಚನವನ್ನು ಹೊಂದಿ, ತಮ್ಮ ತಮ್ಮ ಲೋಕಗಳನ್ನು ಸೇರಿದರು. ಈ ಭೂಲೋಕವೆಲ್ಲವೂ ಇಂತಹ ಪುಣ್ಯನದಿಯು ತನಗೆ ಲಭಿಸಿದುದಕ್ಕಾಗಿ ಬಹಳ ಸಂತೋಷಹೊಂದಿತು. ಮಾರ್ಗಶ್ರಮದಿಂದ ಬಳಲಿದ್ದ ಭಗೀರಥನೂ ಕೂಡ ರಥದಿಂದಿಳಿದು, ಆ ನೀರಿನಲ್ಲಿ ಸ್ನಾನಮಾಡಿ ಶ್ರಮಪರಿಹಾರಮಾಡಿಕೊಂಡು, ಪುನಃ ರಥವನ್ನೇರಿ ಮುಂದೆ ಹೋಗುತ್ತಿದ್ದನು. ಗಂಗೆಯೂ ಅವನನ್ನೇ ಹಿಂಬಾಲಿಸಿ ಹೊರಟಿತು. ದೇವ ದಾನವ ಯಕ್ಷ ಕಿನ್ನರ ಗಂಧರ್ವರೇ ಮೊದಲಾದವರೆಲ್ಲರೂ ಅವರ ಹಿಂದೆಯೇ ಹೋಗುತ್ತಿದ್ದರು. ಭಗೀರಥನು ಎಲ್ಲಿ ನಿಂತರೆ, ಗಂಗೆಯೂ ಅಲ್ಲಿ ನಿಲ್ಲುವಳು. ಆತನು ತಿರುಗಿದ ಕಡೆಯಲ್ಲಿ ತಿರುಗುವಳು. ಅವನು ಹೋದ ಕಡೆಯಲ್ಲಿ ಆಕೆಯೂ ಹೋಗುವಳು.

ಹೀಗೆ ಹೋಗುತ್ತಿರುವಾಗ, ಮಾರ್ಗವಶದಿಂದ ಭಗೀರಥನು, ಯಜ್ಞಮಾಡುತ್ತಿದ್ದ ಜಹ್ನುಮಹರ್ಷಿಯ ಆಶ್ರಮದಲ್ಲಿ ಪ್ರವೇಶಿಸಲು, ಗಂಗೆಯೂ ಆತನ ಹಿಂದೆ ಹೋಗುತ್ತಾ ಆ ಪ್ರದೇಶವನ್ನೆಲ್ಲಾ ತೇಲಿಸಿತು. ಆಗ ಜಹ್ನುಮಹರ್ಷಿಯು ಬಹಳ ಕೋಪಗೊಂಡು, ಗಂಗೆಯ ಕೆಚ್ಚನ್ನು ಮುರಿಯ

---

1. ವಿಷ್ಣುಪಾದೋದ್ಭವೆಯಾದ ಗಂಗಾನದಿಯನ್ನು ಸಾಕ್ಷಾತ್ಪರಮಶಿವನೇ ತನ್ನ ತಲೆಯಲ್ಲಿ ಧರಿಸಿರುವುದರಿಂದ, ಇದು ಪರಮಪವಿತ್ರವಾದುದೆಂದೆಣಿಸಿ, ದೇವತೆಗಳೆಲ್ಲರೂ ಅದನ್ನು ಭಕ್ತಿಯಿಂದ ಸೇವಿಸಿದರೆಂದು ಭಾವವು. ಇದಕ್ಕಾಗಿಯೇ ಭಾಗವತದಲ್ಲಿ “ಯಚ್ಛೌಚನಿಸ್ಸೃತಸರಿತ್ಪ್ರವರೋದಕೇನ ತೀರ್ಥೇನ ಮೂರ್ಧ್ನಿ ವಿಧೃತೇನ ಶಿವಶ್ಶಿವೋऽಭೂತ್” ಎಂದೂ, ಭಾರತದಲ್ಲಿ, “ತದಂಬು ಪತಿತಂ ದೃಷ್ಟ್ವಾ ದಧಾರ ಶಿರಸಾ ಹರಃ| ಪಾವನಾರ್ಥಂ ಜಟಾಮಧ್ಯೇ ಯೋಗ್ಯೋಽಸ್ಮೀತ್ಯವಧಾರಣಾತ್” ಎಂದೂ ಹೇಳಲ್ಪಟ್ಟಿರುವುದು.

*

ಬೇಕೆಂದೆಣಿಸಿ, ಆ ಪ್ರವಾಹದ ನೀರೆಲ್ಲವನ್ನೂ ಒಂದೇ ಆಪೋಶನವಾಗಿ ಕುಡಿದು ಬಿಟ್ಟನು. ಆಗ ದೇವತೆಗಳೂ ಗಂಧರ್ವರೂ, ಋಷಿಗಳೂ, ಈತನ ಮಹಿಮೆಗೆ ಆಶ್ಚರ್ಯಗೊಂಡು, ಆತನನ್ನು ಪೂಜಿಸಿ, ಈ ಗಂಗೆಯು ಆತನಿಗೆ ಪುತ್ರಿಯಾಗಿರಲೆಂದು ಅಭಯಕೊಡಲು, ಆ ಜಹ್ನುವು ಸಂತೋಷಪಟ್ಟು ತನ್ನ [1]ಕಿವಿಯ ಮಾರ್ಗವಾಗಿ ಪುನಃ ಆ ಪ್ರವಾಹವನ್ನು ಹೊರಕ್ಕೆ ಬಿಟ್ಟನು. "ಎಲೈ ರಾಮನೆ! ಈ ಕಾರಣದಿಂದಲೇ ಈಗಲೂ ಇದನ್ನು 'ಜಾಹ್ನವಿ' ಎಂದು ಕರೆಯುತ್ತಿರುವರು. ಆಮೇಲೆ ಗಂಗೆಯು ಮೊದಲಿನಂತೆಯೇ ಭಗೀರಥನ ರಥವನ್ನು ಹಿಂಬಾಲಿಸುತ್ತ ಹೋಗಿ ಸಾಗರದಲ್ಲಿ ಪ್ರವೇಶಿಸಿ, ಪಾತಾಳವನ್ನೂ ಸೇರಿತು. ಅಲ್ಲಿ ಆ ಭಗೀರಥನು ಭಸ್ಮರಾಶಿಯಾಗಿ ಬಿದ್ದಿದ್ದ ತನ್ನ ತಾತಂದಿರನ್ನು ನೋಡಿ ದುಃಖಿತನಾಗಿ, ಕೊನೆಗೆ ತಾನು ಮಹಾಪ್ರಯತ್ನದಿಂದ ತಂದ ಗಂಗೆಯನ್ನು ಆ ಭಸ್ಮರಾಶಿಯ ಮೇಲೆ ಪ್ರವಹಿಸಬೇಕೆಂದು ಪ್ರಾರ್ಥಿಸಲು, ಅದರಂತೆ ಗಂಗೆಯು ಆ ಬೂದಿಯನ್ನು ತನ್ನ ಪ್ರವಾಹದಿಂದ ಕೊಚ್ಚಿಸಿದಳು. ಆ ಅರವತ್ತು ಸಾವಿರಮಂದಿ ಮಕ್ಕಳೂ ಪಾಪದಿಂದ ಬಿಡಲ್ಪಟ್ಟು ಸ್ವರ್ಗವನ್ನು ಸೇರಿದರು.

ಇಲ್ಲಿಗೆ ನಾಲ್ವತ್ತಮೂರನೆಯ ಸರ್ಗವು.

ಬ್ರಹ್ಮನು ಭಗೀರಥನೊಡನೆ ಸಂಭಾಷಿಸಿದುದು.

ಹೀಗೆ ಭಗೀರಥನು ಗಂಗೆಯನ್ನು ಕರೆತಂದು ಪಾತಾಳದಲ್ಲಿದ್ದ ತನ್ನ ತಾತಂದಿರ ಭಸ್ಮರಾಶಿಯನ್ನು ಕೊಚ್ಚಿಸಿದಮೇಲೆ, ಲೋಕನಾಯಕನಾದ ಬ್ರಹ್ಮನು ಅಲ್ಲಿಗೆ ಬಂದು ಭಗೀರಥನನ್ನು ನೋಡಿ "ಎಲೈ ಪುರುಷಶ್ರೇಷ್ಠನೆ! ನಿನ್ನ ಮುತ್ತಾತಂದಿರಾದ ಅರುವತ್ತುಸಾವಿರ ಮಂದಿ ಸಗರಪುತ್ರರೂ ನಿನ್ನಿಂದ ಉದ್ಧರಿಸಲ್ಪಟ್ಟು, ಸ್ವರ್ಗಲೋಕವನ್ನು ಸೇರಿ ದೇವತ್ವವನ್ನು ಹೊಂದಿರುವರು. ಎಲೈ ರಾಜನೆ! ಎಷ್ಟರವರೆಗೆ ಈ ಸಾಗರಗಳು ಸ್ಥಿರವಾಗಿರುವುವೋ, ಅದುವರೆಗೂ ಆ ಸಗರಪುತ್ರರೂ ದೇವಸ್ವರೂಪದಿಂದಿರುವರು ಮತ್ತು ಈ ಗಂಗೆಯು

---

1. ಮನುಷ್ಯರ ಅವಯವಗಳಲ್ಲಿ ಕಿವಿಯು ಬಹಳ ಪವಿತ್ರವಾದುದು. ಅದಕ್ಕಾಗಿಯೇ ಪ್ರಾಣಾಯಾಮವಾದಮೇಲೆ ಹಸ್ತಶುದ್ಧಿಗಾಗಿ ಕಿವಿಯನ್ನು ಮುಟ್ಟುವರು.

ನಿನಗೆ ಹಿರಿಯುಮಗಳೆಂದು ಲೋಕದಲ್ಲಿ ಪ್ರಸಿದ್ಧಿ ಹೊಂದುವಳು. ನಿನ್ನಿಂದಲೇ ಈಕೆಗೆ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳಲ್ಲಿಯೂ ಸಂಚಾರವುಂಟಾದುದರಿಂದ, ಈಕೆಗೆ [1] 'ತ್ರಿಪಥಗೆ' ಎಂಬ ಹೆಸರೂ ಪ್ರಖ್ಯಾತವಾಗುವುದು. ಈಕೆಗೆ "ಭಾಗೀರಥಿ, ತ್ರಿಪಥಗೆ, ಜಾಹ್ನವಿ" ಎಂಬ ಈ ಹೆಸರುಗಳೆಲ್ಲವೂ ಬರುವುದಕ್ಕೆ ನೀನು ಕಾರಣವು. ಎಲೈ ಭಗೀರಥನೆ! ನಿನ್ನ ತಾತಂದಿರೆಲ್ಲರಿಗೂ ಇದರಲ್ಲಿಯೇ ತರ್ಪಣವನ್ನು ಬಿಟ್ಟು ನಿನ್ನ ಪ್ರತಿಜ್ಞೆಯನ್ನು ನೆರವೇರಿಸು! ಮಹಾಯಶಸ್ವಿಯೆಂದು ಖ್ಯಾತಿಹೊಂದಿ, ನಿನ್ನ ವಂಶದಲ್ಲಿ ಹಿರಿಯನಾಗಿ ಧಾರ್ಮಿಕನಾಗಿದ್ದ ಸಗರಚಕ್ರವರ್ತಿಗೆ ಕೂಡ ಈ ಉದ್ದೇಶವು ನೆರವೇರಲಿಲ್ಲ. ಎಣೆಯಿಲ್ಲದ ತೇಜಸ್ಸುಳ್ಳ ಅಂಶುಮಂತನು ಬಹುಕಾಲದವರೆಗೆ ಗಂಗೆಯನ್ನು ಕುರಿತು ತಪಸ್ಸು ಮಾಡಿದರೂ ಇದು ಸಾಧ್ಯವಾಗಲಿಲ್ಲ. ಇದೂ ಅಲ್ಲದೆ ಮಹರ್ಷಿಗಳಿಗೆ ಸಮಾನವಾದ ತೇಜಸ್ಸುಳ್ಳವನಾಗಿಯೂ, ತಪಸ್ಸಿನಲ್ಲಿ ನನಗೆ ಸಮಾನನಾಗಿಯೂ, ಕ್ಷತ್ರಧರ್ಮವನ್ನು ಸ್ವಲ್ಪವೂ ಎಡೆಬಿಡದೆ ನಡೆಸಿ ಮಹಾತೇಜಸ್ವಿಯಾಗಿಯೂ ಇದ್ದು, ರಾಜರ್ಷಿಯೆಂದು ಪ್ರಸಿದ್ಧಿಹೊಂದಿದ ನಿನ್ನ ತಂದೆಯಾದ ದಿಲೀಪನಿಗೂ ಈ ಗಂಗೆಯನ್ನು ತರುವುದು ಸಾಧ್ಯವಿಲ್ಲದೆ ಹೋಯಿತು. ಎಲೈ ಪುರುಷಶ್ರೇಷ್ಠನೆ! ಅಂತಹ ಮಹಾಪ್ರತಿಜ್ಞೆಯನ್ನು ಈಗ ನೀನು ಪೂರ್ತಿಮಾಡಿದೆ! ಇದರಿಂದ ನಿನಗೆ ಲೋಕದಲ್ಲಿ ಬಹಳ ಕೀರ್ತಿಯುಂಟಾಯಿತು. ನೀನು ಈ ಗಂಗೆಯನ್ನು ಇಳಿಸಿದುದರಿಂದ ಧರ್ಮಗಳಿಗೆಲ್ಲಕ್ಕೂ ನೀನೇ ಮೂಲಸ್ಥಾನನೆನಿಸಿಕೊಂಡೆ! ಎಲೈ ರಾಜೇಂದ್ರನೆ! ಈ ಗಂಗೆಯು ಸಾಮಾನ್ಯವಾದ ಇತರ ನದಿಗಳಂತಲ್ಲ.[2] ಯಾವಾಗಲೂ ಪವಿತ್ರವಾದುದು. ಇದರಲ್ಲಿ ಸ್ನಾನಮಾಡಿ ನೀನೂ ಶುದ್ಧನಾಗು. ಇದರಿಂದ ಅನೇಕ ಪುಣ್ಯಫಲಗಳುಂಟು. ಇದರಲ್ಲಿಯೇ ನಿನ್ನ ಮುತ್ತಾತಂದಿರಿಗೆ ಜಲಕ್ರಿಯೆ

---

1. 'ತ್ರಿಪಥಗೆ' ಎಂದರೆ ಸ್ವರ್ಗ, ಆಕಾಶ, ಭೂಮಿ ಈ ಮೂರು ಸ್ಥಾನಗಳಲ್ಲಿ ಹರಿಯುವುದೆಂದು ಅವಯವಾರ್ಥವು. ಮೂರು ಕಡೆಗಳಿಗೆ ಪ್ರವಹಿಸಿದುದೆಂದೂ ಕೆಲವರು ವ್ಯುತ್ಪತ್ತಿಮಾಡುವರು.

2. ಇತರ ನದಿಗಳಿಗೆ ಆಗಾಗ ರಜೋದೋಷವುಂಟಾಗುವುದರಿಂದ, ಆ ಕಾಲದಲ್ಲಿ ಅವು ಸ್ನಾನಯೋಗ್ಯಗಳಲ್ಲ. ಈ ಗಂಗಾನದಿಯಾದರೋ ಯಾವಾಗಲೂ ಪವಿತ್ರವಾದುದೆಂದು ಭಾವವು.

ಗಳನ್ನು ನಡೆಸು! ನಿನಗೆ ಮಂಗಳವಾಗಲಿ! ಇನ್ನು ನಾನು ನನ್ನ ಲೋಕಕ್ಕೆ ಹೋಗುವೆನು" ಎಂದು ಆಜ್ಞಾಪಿಸಿ ಕಣ್ಮರೆಯಾದನು.

ಆಮೇಲೆ ಭಗೀರಥನು ಶಾಸ್ತ್ರೋಕ್ತವಾಗಿ ತನ್ನ ತಾತಂದಿರಿಗೆ ಮಾಡ ಬೇಕಾದ ಜಲಕ್ರಿಯೆಗಳನ್ನು ಮಾಡಿ, ತಾನೂ ಸ್ನಾನಮಾಡಿ, ಈಗಲೀಗ ಕೃತಕೃತ್ಯನಾದೆನೆಂದು ಸಂತೋಷದಿಂದ ತನ್ನ ಪಟ್ಟಣಕ್ಕೆ ಬಂದು ರಾಜ್ಯ ವನ್ನಾಳುತ್ತಿದ್ದನು. ಆಗ ಆ ದೇಶದ ಪ್ರಜೆಗಳೆಲ್ಲರೂ ಆತನ ರಾಜ್ಯದಲ್ಲಿ ನಿಶ್ಚಿಂತರಾಗಿ, ಸಕಲಸಂಪತ್ಸಮೃದ್ಧಿಯಿಂದ ಕೂಡಿ, ಸಂತೋಷಪಡುತ್ತಿದ್ದರು. ಎಲೈ ರಾಮನೆ! ಇದೀಗ ಗಂಗಾವೃತ್ತಾಂತವು. ಇದನ್ನು ವಿವರವಾಗಿ ನಿನಗೆ ತಿಳಿಸಿರುವೆನು. ಸಂಧ್ಯಾಕಾಲವು ಮೀರಿಹೋಗುತ್ತಿರುವುದು. ಮುಂದಿನ ಪ್ರಸಂಗವು ಹಾಗಿರಲಿ! ಸಂಪತ್ತನ್ನೂ, ಯಶಸ್ಸನ್ನೂ, ಆಯುಸ್ಸನ್ನೂ, ಪುತ್ರ ಸಂತಾನವನ್ನೂ, ಪುಣ್ಯಲೋಕಗಳನ್ನೂ ಕೊಡತಕ್ಕ ಗಂಗಾವತರಣದ ಕಥೆ ಯನ್ನು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ವರ್ಣದವರಲ್ಲಿ ಯಾರು ಭಕ್ತಿಯಿಂದ ಕೇಳುವರೋ, ಅಥವಾ ಹೇಳುವರೋ, ಅವರಿಗೆ ಪಿತೃ ದೇವತೆಗಳೂ, ದೇವತೆಗಳೂ ಪ್ರಸನ್ನರಾಗುವರು. ಸರ್ವಾಭೀಷ್ಟಗಳೂ ಸಿದ್ಧಿಸುವುವು. ಅವರು ಸಮಸ್ತ ಪಾಪಗಳಿಂದಲೂ ಬಿಡಲ್ಪಡುವರು. ಅವರಿಗೆ ಆಯುಸ್ಸೂ ಹೆಚ್ಚುವುದು" ಎಂದನು.

ಇಲ್ಲಿಗೆ ನಾಲ್ವತ್ತನಾಲ್ಕನೆಯ ಸರ್ಗವು.

ವಿಶಾಲಾಪುರ ವೃತ್ತಾಂತವು, ಸಮುದ್ರಮಥನವು

ರಾಮಲಕ್ಷ್ಮಣರಿಬ್ಬರೂ ಈ ಕಥೆಯನ್ನು ಕೇಳಿ ಆಶ್ಚರ್ಯಗೊಂಡು ವಿಶ್ವಾಮಿತ್ರನನ್ನು ಕುರಿತು, "ಎಲೈ ಬ್ರಾಹ್ಮಣೋತ್ತಮನೆ! ಪರಿಶುದ್ಧವಾದ ಗಂಗಾವತರಣದ ಕಥೆಯೂ, ಸಾಗರವನ್ನು ತುಂಬಿದ ಕಥೆಯೂ ಅತ್ಯಾಶ್ಚರ್ಯಕರ ವಾಗಿರುವುದು" ಎಂದು ಆತನನ್ನು ಬಹಳವಾಗಿ ಕೊಂಡಾಡಿ, ಆ ಕಥೆಯೆಲ್ಲ ವನ್ನೂ ಮನಸ್ಸಿನಲ್ಲಿಯೇ ಚಿಂತಿಸುತ್ತಾ ಆ ರಾತ್ರಿಯನ್ನು ಕಳೆದರು. ಬೆಳಗಾದಮೇಲೆ ಪ್ರಾತರಾಹ್ನಿಕಗಳನ್ನು ಮುಗಿಸಿದ ವಿಶ್ವಾಮಿತ್ರನನ್ನು ನೋಡಿ ರಾಮನು "ಎಲೈ ಪೂಜ್ಯನೆ! ಈ ರಾತ್ರಿಯು ಅತಿ ಪೂಜ್ಯವಾದುದೆಂದೆಣಿಸು ವೆನು. ನೀನು ಹೇಳಿದ ಮನೋಹರವಾದ ಈ ಪುಣ್ಯಚರಿತ್ರವನ್ನೇ ಮನಸ್ಸಿ

ನಲ್ಲಿ ಚಿಂತಿಸುತ್ತಿರುವ ನನಗೆ ರಾತ್ರಿಯೆಲ್ಲವೂ ನಿಮಿಷಮಾತ್ರದಲ್ಲಿ ಕಳೆದು ಹೋಯಿತು. ಇನ್ನು ಈ ಗಂಗಾನದಿಯನ್ನು ದಾಟಬೇಕಲ್ಲವೆ? ಪುಣ್ಯ ಕರ್ಮಪರಾಯಣರಾದ ಋಷಿಗಳಿಗೆ ಯೋಗ್ಯವಾದ ಈ ದೋಣಿಯು ನನಗಾಗಿಯೇ ಇಲ್ಲಿ ಸಿದ್ಧಪಡಿಸಲ್ಪಟ್ಟಹಾಗಿದೆ" ಎಂದನು. ಇದನ್ನು ಕೇಳಿ ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆಯೂ, ಋಷಿಗಳೊಡನೆಯೂ ಆ ಗಂಗಾನದಿಯನ್ನು ದಾಟಿ, ಉತ್ತರತೀರಕ್ಕೆ ಹೋಗಿ, ಅಲ್ಲಿದ್ದ ಋಷಿಗಳೆಲ್ಲರನ್ನೂ ಪೂಜಿಸಿ, ಅಲ್ಲಯೇ ಸ್ವಲ್ಪಕಾಲದವರೆಗೂ ಇದ್ದು, ಮುಂದೆ ಕಾಣುತ್ತಿದ್ದ "ವಿಶಾಲಿ"ಯೆಂಬ ಪಟ್ಟಣವನ್ನು ನೋಡಿ, ಆ ಪಟ್ಟಣಕ್ಕೆ ಹೋಗಲು, ಆಗ ರಾಮನು ವಿಶ್ವಾಮಿತ್ರನಿಗೆ ಕೈಮುಗಿದು, "ಎಲೈ ಮಹರ್ಷಿಯೆ! ಯಾವ ವಂಶದ ರಾಜರು ಇದನ್ನಾಳುತ್ತಿರುವರು? ಇದನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವುಂಟು" ಎಂದನು. ಅದಕ್ಕಾ ವಿಶ್ವಾಮಿತ್ರನು ಅದರ ಚರಿತ್ರವೆಲ್ಲವನ್ನೂ ವಿಸ್ತಾರವಾಗಿ ಹೇಳಲಾರಂಬಿಸಿ, ರಾಮನನ್ನು ಕುರಿತು "ಎಲೈ ವತ್ಸನೆ! ಕೇಳು! ಈ ದೇಶದಲ್ಲಿ ನಡೆದ ಚರಿತ್ರವೆಲ್ಲವನ್ನೂ ತಿಳಿಸು ವೆನು. ಇಂದ್ರನ ವೃತ್ತಾಂತವೂ ಇದಕ್ಕೆ ಸಂಬಂಧಿಸಿರುವುದು. ಮೊದಲು ಕೃತಯುಗದಲ್ಲಿ ಕಶ್ಯಪನ ಪತ್ನಿಯರಾದ ದಿತಿ, ಅದಿತಿ ಎಂಬವರಿಗೆ ಬಹಳ ಮಕ್ಕಳು ಹುಟ್ಟಿದರು. ದಿತಿಯ ಮಕ್ಕಳು ಬಲದಲ್ಲಿ ಮಾತ್ರ ಬಹಳ ಮೇಲೆನಿಸಿ ಕೊಂಡಿದ್ದರು. ಅದಿತಿಯ ಮಕ್ಕಳಾದರೋ ಬಲಾಢ್ಯರಾಗಿಯೂ, ಧರ್ಮ ಬುದ್ಧಿಯುಳ್ಳವರಾಗಿಯೂ ಇದ್ದರು. ಇವರೆಲ್ಲರಿಗೂ ತಾವು ಮುಪ್ಪನ್ನಾಗಲಿ, ಸಾವನ್ನಾಗಲಿ ಹೊಂದದಿರಬೇಕೆಂಬ ಬುದ್ಧಿಯು ಹುಟ್ಟಿತು. ಅದಕ್ಕೆ ಉಪಾಯವೇನೆಂದು ಚಿಂತಿಸುತ್ತಿರುವಾಗ, ಕ್ಷೀರಸಮುದ್ರವನ್ನು ಕಡೆದು ಅಮೃತವನ್ನು ಸಂಪಾದಿಸುವುದೇ ಇದಕ್ಕೆ ತಕ್ಕ ಉಪಾಯವೆಂದು ತೋರಿತು. ಆಗ ಎಲ್ಲರೂ ಹಾಗೆಯೇ ಮಾಡಬೇಕೆಂದು ನಿಶ್ಚಯಿಸಿಕೊಂಡು, ಮಂದರ ಪರ್ವತವನ್ನೇ ಕಡೆಗೋಲನ್ನಾಗಿಯೂ, ವಾಸುಕಿಯನ್ನು ಕಡೆಯುವ ಹಗ್ಗವ ನ್ನಾಗಿಯೂ ಮಾಡಿ ಸಮುದ್ರವನ್ನು ಕಡೆಯಲಾರಂಭಿಸಿದರು. ಹೀಗೆ ಅನೇಕ ವರ್ಷಗಳವರೆಗೆ ಕಡೆಯುತ್ತಿರಲು ಹಗ್ಗವಾಗಿದ್ದ ವಾಸುಕಿಯ ಸಾವಿರಬಾಯಿ ಗಳೂ ಅತಿ ಕ್ರೂರವಾದ ವಿಷವನ್ನು ಕಕ್ಕುತ್ತಾ, ಆ ಬೆಟ್ಟದ ಕಲ್ಲುಗಳೆಲ್ಲ ವನ್ನೂ ಹಲ್ಲುಗಳಿಂದ ಕಡಿಯುವುದಕ್ಕೆ ಆರಂಭಿಸಿದುವು. ಆಗ ಬೆಂಕಿಯಂತೆ ಉರಿಯುತ್ತಿರುವ 'ಹಾಲಾಹಲ'ವೆಂಬ ಮಹಾವಿಷವು ಹೊರಟು ಲೋಕ

ವೆಲ್ಲವನ್ನೂ ಸುಡುವುದಕ್ಕೆ ತೊಡಗಿತು. ಆಗ ದೇವತೆಗಳೆಲ್ಲರೂ ರುದ್ರನನ್ನು ಮರೆಹೊಕ್ಕು "ರಕ್ಷಿಸು! ರಕ್ಷಿಸು" ಎಂದು ಮೊರೆಯಿಟ್ಟರು. ದೇವದೇವ ನಾದ ರುದ್ರನು ಅಲ್ಲಿಗೆ ಬರಲು, ಆತನನ್ನು ನೋಡಿ, ಶಂಖಚಕ್ರಧಾರಿಯಾದ ಮಹಾವಿಷ್ಣುವು ಮಂದಹಾಸದೊಡನೆ "ಎಲೈ ರುದ್ರನೆ! ಸಮುದ್ರವನ್ನು ಕಡೆಯುತ್ತಿರುವಾಗ ಈ ವಿಷವು ಮೊದಲು ಹುಟ್ಟಿರುವುದು! ಈ ಸಮಸ್ತ ದೇವತೆಗಳಿಗೂ ನೀನೇ ಮೊದಲು ಹುಟ್ಟಿದವನಾದುದರಿಂದ, ನಿನಗೆ ಅಗ್ರ ಮರ್ಯಾದೆಯು ನಡೆಯಬೇಕಲ್ಲವೆ? ಆದುದರಿಂದ ಇದನ್ನೇ ಮೊದಲು ಮರ್ಯಾದೆಯೆಂದೆಣಿಸಿ ಈ ವಿಷವನ್ನು ಸ್ವೀಕರಿಸು" ಎಂದು ಹೇಳಿ, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಆಗ ರುದ್ರನು ದೇವತೆಗಳಿಗುಂಟಾಗಿರುವ ಈ ಮಹಾಭಯವನ್ನು ನೋಡಿ ಮರುಕದಿಂದಲೂ, ವಿಷ್ಣುವಿನ ಆಜ್ಞೆಯಲ್ಲಿ ಗೌರವದಿಂದಲೂ, ಆ ಕಾಲಕೂಟವನ್ನು ಅಮೃತದಂತೆ ಸುಲಭವಾಗಿ ಆ ಕ್ಷಣವೇ ಕುಡಿದು, ತನ್ನ ಸ್ಥಾನಕ್ಕೆ ಹೊರಟುಹೋದನು. ಆಮೇಲೆ ದೇವಾಸುರರು ಪುನಃ ಆ ಸಮುದ್ರವನ್ನು ಬಹು ವೇಗದಿಂದ ಕಡೆಯುತ್ತಿರುವಾಗ, ಆ ಮಂದರ ಪರ್ವತವು ಸಮುದ್ರದಲ್ಲಿ ಮುಳುಗಿ ಪಾತಾಳದವರೆಗೂ ಹೊರಟುಹೋಯಿತು. ಆಗ ದೇವತೆಗಳೆಲ್ಲರೂ ಚಿಂತಾಕ್ರಾಂತರಾಗಿ ವಿಷ್ಣುವಿನಲ್ಲಿ ಮರೆಹೊಕ್ಕು, "ಎಲೈ ಶ್ರೀಮನ್ನಾರಾಯಣನೆ! ನೀನಲ್ಲದೆ ನಮಗೆ ಬೇರೆ ಗತಿ ಯಾರು? ನಮ್ಮನ್ನು ರಕ್ಷಿಸು. ಮುಳುಗಿಹೋಗಿರುವ ಬೆಟ್ಟವನ್ನು ನೀನೇ ಎತ್ತ ಬೇಕಾಗಿರುವುದು" ಎಂದು ಪ್ರಾರ್ಥಿಸಿದರು. ಆಗ ವಿಷ್ಣುವು ಆಮೆಯ ರೂಪದಿಂದ ಸಮುದ್ರದಲ್ಲಿ ಹೊಕ್ಕು, ಆ ಬೆಟ್ಟವನ್ನು ಬೆನ್ನಿನಮೇಲೆ ಹೊತ್ತು ನಿಂತುದಲ್ಲದೆ, ತಾನು ಸರ್ವಾಂತರ್ಯಾಮಿಯಾದುದರಿಂದ, ಆ ಪರ್ವತದ ಶಿಖರದ ಮೇಲೆ ಕೈಯನ್ನೂರಿ, ದೇವತೆಗಳಿಗೂ, ರಾಕ್ಷಸರಿಗೂ ನಡುವೆ ನಿಂತು, ತಾನೂ ಕಡೆಯಲಾರಂಭಿಸಿದನು.

ಹೀಗೆ ಒಂದು ಸಾವಿರ ವರ್ಷಗಳು ಕಳೆದಮೇಲೆ, ದಂಡಕಮಂಡಲ ಗಳನ್ನು ಧರಿಸಿದ ಧನ್ವಂತರಿಯೆಂಬ ಮಹಾಪುರುಷನೊಬ್ಬನು ಹುಟ್ಟಿದನು. ಆಮೇಲೆ ಮಹಾವರ್ಚಸ್ಸುಳ್ಳ ಅಪ್ಸರಸ್ತ್ರೀಯರು ಹುಟ್ಟಿದರು. ಹೀಗೆ ಹಾಲನ್ನು ಕಡೆಯುತ್ತಿರುವಾಗ ಅದರಿಂದುಂಟಾದ ರಸದಲ್ಲಿ, ಆ ಸ್ತ್ರೀಯರು ಗಳು ಹುಟ್ಟಿದುದರಿಂದಲೇ ಅವರಿಗೆ ಅಪ್ಸರಸ್ಸುಗಳೆಂಬ ಹೆಸರುಂಟಾಯಿತು.

ಹೀಗೆ ಹುಟ್ಟಿದ ಸ್ತ್ರೀಯರ ಸಂಖ್ಯೆಯು ಅರುವತ್ತು ಕೋಟಿಗಳವರೆಗೂ ಇದ್ದುದಲ್ಲದೆ, ಇವರ ಪರಿಚಾರಿಕೆಯರೂ ಅಸಂಖ್ಯಾತರಾಗಿದ್ದರು. ಈ ಸ್ತ್ರೀಯರನ್ನು ದೇವತೆಗಳಲ್ಲಿಯಾಗಲಿ, ದಾನವರಲ್ಲಿಯಾಗಲಿ, ಯಾರೂ ಕೈಹಿಡಿದು ಮದುವೆಮಾಡಿಕೊಳ್ಳದುದರಿಂದ, ಅವರು ವೇಶ್ಯಾಸ್ತ್ರೀಯರೆನಿಸಿಕೊಂಡರು. ಆಮೇಲೆ ವರುಣನ ಮಗಳಾದ ವಾರುಣಿಯೆಂಬವಳು ಉದ್ಭವಿಸಿ, ತನ್ನನ್ನು ಪರಿಗ್ರಹಿಸತಕ್ಕವರಾರೆಂದು ಹುಡುಕುತ್ತಿದ್ದಳು. ಆಕೆಯನ್ನೂ ದಿತಿಯ ಮಕ್ಕಳೊಬ್ಬರೂ ಪರಿಗ್ರಹಿಸದಿರಲು, ಆಗ ಅದಿತಿಯ ಮಕ್ಕಳು ಅವಳನ್ನು ಪರಿಗ್ರಹಿಸಿದರು. ಹೀಗೆ ವಾರುಣಿಯನ್ನು ಪರಿಗ್ರಹಿಸಿದುದರಿಂದಲೇ ಅದಿತಿಯ ಮಕ್ಕಳಿಗೆ ಸುರರೆಂದೂ, ದಿತಿಯ ಪುತ್ರರಿಗೆ 'ಅಸುರ'ರೆಂದೂ ಹೆಸರುಂಟಾಯಿತು. ಆಮೇಲೆ ಉಚ್ಚೈಶ್ರವಸ್ಸೆಂಬ ಕುದುರೆಯೂ 'ಕೌಸ್ತುಭ'ವೆಂಬ ಮಹಾರತ್ನವೂ ಹುಟ್ಟಿತು. ಕೊನೆಗೆ ಉತ್ತಮವಾದ ಅಮೃತವೂ ಉದ್ಭವಿಸಿತು.

ಎಲೈ ರಾಮನೆ! ಈ ಅಮೃತಕ್ಕಾಗಿಯೇ ದೇವದಾನವರಲ್ಲಿ ದೊಡ್ಡ ಕಲಹವುಂಟಾಗಿ ಅನೇಕ ವಂಶಕ್ಷಯವಾಯಿತು. ಅದಿತಿಯ ಮಕ್ಕಳೆಲ್ಲರೂ ಒಂದಾಗಿ ಸೇರಿ ದಿತಿಪುತ್ರರನ್ನು ಕೊಲ್ಲುತ್ತಿದ್ದರು. ಆಗ ದೈತ್ಯರೂ, ರಾಕ್ಷಸರೂ ಐಕಮತ್ಯದಿಂದ ಕೂಡಿ ದೇವತೆಗಳನ್ನು ಇದಿರಿಸಲಾರಂಭಿಸಿದರು. ಭಯಂಕರವಾದ ಯುದ್ಧವು ನಡೆಯುತ್ತಿತ್ತು. ಹೀಗೆ ಈ ಎರಡು ಪಕ್ಷದವರೂ ಹೊಡೆದಾಡಿ ಸಾಯುತ್ತಿರುವುದನ್ನು ನೋಡಿ, ಲೋಕರಕ್ಷಕನಾದ ಶ್ರೀಮನ್ನಾರಾಯಣನು ತನ್ನ ಮಾಯೆಯಿಂದ ತ್ರೈಲೋಕ್ಯವನ್ನೂ ಮರುಳುಮಾಡುವಂತಿರುವ ಒಂದು ಸ್ತ್ರೀರೂಪನನ್ನು ಧರಿಸಿ, ದಿತಿಯ ಮಕ್ಕಳನ್ನು ವಂಚಿಸಿ, ಅಮೃತಕಲಶವನ್ನು ವೇಗದಿಂದ ಎತ್ತಿಕೊಂಡುಹೋದನು. ಹೀಗೆ ಹೋಗುತ್ತಿರುವಾಗ ಆತನನ್ನು ಇದಿರಿಸುವುದಕ್ಕೆ ಬಂದವರೆಲ್ಲರೂ ಆಗಲೇ ಸಂಹರಿಸಲ್ಪಟ್ಟರು. ಆತನನ್ನು ಮರೆಹೊಕ್ಕುನಿಂತ ದೇವತೆಗಳೆಲ್ಲರೂ ಅವನ ಅನುಗ್ರಹಕ್ಕೊಳಪಟ್ಟರು. ಆ ದೇವತೆಗಳೆಲ್ಲರೂ ವಿಷ್ಣುವಿನ ಅನುಗ್ರಹದಿಂದಲೂ ಆತನ ಅಂಶದಿಂದಲೂ ಮಹಾಬಲವುಳ್ಳವರಾಗಿ ದೈತ್ಯರನ್ನು ಕೊಂದು ಜಯವನ್ನು ಪಡೆದರು. ಕೊನೆಗೆ ಇಂದ್ರನೂ ಜಯಹೊಂದಿ ಸ್ವರ್ಗಲೋಕಸಾಮ್ರಾಜ್ಯವನ್ನು ಪಡೆದು ಸುಖದಿಂದ ಅದನ್ನು ಪರಿಪಾಲಿಸುತ್ತಿದ್ದನು.

ಇಲ್ಲಿಗೆ ನಾಲ್ವತ್ತೈದನೆಯ ಸರ್ಗವು.

ದಿತಿಯು ತಪಸ್ಸನ್ನು ಮಾಡಿದುದು

ಹೀಗೆ ತನ್ನ ಮಕ್ಕಳಿಗುಂಟಾದ ಸಾವನ್ನು ಕೇಳಿ, ದಿತಿಯು ತನ್ನ ಗಂಡನಾದ ಕಾಶ್ಯಪನನ್ನ ಕುರಿತು "ಎಲೈ ಪ್ರಿಯನೆ! ಬಲಾಢ್ಯರಾದ ನಿನ್ನ ಮಕ್ಕಳು ನನ್ನ ಹೊಟ್ಟೆಯಲ್ಲಿ ಹುಟ್ಟಿದವರೆಲ್ಲರನ್ನೂ ಕೊಂದುಬಿಟ್ಟರು. ಆ ದೇವತೆಗಳಲ್ಲಿ ಪ್ರಮುಖನಾದ ಇಂದ್ರನನ್ನು ಕೊಲ್ಲುವುದಕ್ಕೆ ತಕ್ಕ ಸಾಮರ್ಥ್ಯವುಳ್ಳ ಒಬ್ಬ ಮಗನನ್ನು ಪಡೆಯುವುದಕ್ಕಾಗಿ ಒಂದು ಘೋರವಾದ ತಪಸ್ಸನ್ನು ಮಾಡಬೇಕೆಂದೆಣಿಸಿರುವೆನು. ಇನ್ನು ತಪಸ್ಸಿಗೆ ಹೊರಡುವೆನು. ಎಲೈ ನಾಯಕನೆ! ನನಗೆ ಅಂತಹ ಗರ್ಭವನ್ನನುಗ್ರಹಿಸು. ಆ ಗರ್ಭದಿಂದ ಮಹಾಧನುರ್ಧಾರಿಯಾಗಿ, ಬಲವಂತನಾಗಿ, ನಮ್ಮ ಸ್ಥಿತಿಯನ್ನು ಚೆನ್ನಾಗಿ ತಿಳಿದವನಾಗಿ, ಸಮದರ್ಶಿಯಾಗಿ, ಲೋಕನಾಯಕನೆಂದು ಪ್ರಸಿದ್ಧಿಹೊಂದಿ, ಇಂದ್ರನನ್ನು ಕೊಲ್ಲತಕ್ಕ ಶಕ್ತಿಯುಳ್ಳ ಪುತ್ರನುಂಟಾಗುವಂತೆ ನೀನು ಅನುಗ್ರಹಿಸಬೇಕು. ನನಗೆ ಈಗ ತಪಸ್ಸಿಗೆ [1]ಅನುಜ್ಞೆಯನ್ನು ಕೊಡು" ಎಂದಳು. ಈ ಮಾತನ್ನು ಕೇಳಿ ಮಾರೀಚಪುತ್ರನಾದ ಕಾಶ್ಯಪನು ದುಃಖಿತೆಯಾದ ದಿತಿಯನ್ನು ಕುರಿತು "ಎಲೈ ತಪಸ್ವಿನಿಯೆ! ಹಾಗೆಯೇ ಆಗಲಿ! ನಿನಗೆ ಶುಭವಾಗುವುದು. ಇಂದ್ರನನ್ನು ಜಯಿಸತಕ್ಕ ಪುತ್ರನನ್ನೇ ನೀನು ಪಡೆಯುವೆ" ನೀನು ಒಂದುಸಾವಿರ ವರ್ಷಗಳವರೆಗೆ ಶುಚಿಯಾಗಿ ತಪಸ್ಸನ್ನು ಮಾಡಿ ಬಾ! ಮೂರು ಲೋಕಕ್ಕೂ ಪ್ರಭುವಾಗತಕ್ಕ ಪುತ್ರನನ್ನೇ ನನ್ನ ಅನುಗ್ರಹದಿಂದ ಪಡೆಯುವೆ" ಎಂದು ಕೈಯಿಂದ ಆಕೆಯ ದೇಹವನ್ನು ಸವರಿ, ಆಶೀರ್ವದಿಸಿ ತಪಸ್ಸಿಗೆ ಹೋದನು.

ದಿತಿಯೂ ಬಹಳ ಸಂತೋಷದಿಂದ ಕುಶಪ್ಲವನವೆಂಬ ಸ್ಥಳಕ್ಕೆ ಹೋಗಿ, ಕ್ರೂರವಾದ ತಪಸ್ಸನ್ನು ಮಾಡಲಾರಂಭಿಸಿದಳು. ಹೀಗೆ ಈಕೆಯು ತಪಸ್ಸನ್ನು ಮಾಡುತ್ತಿರುವ ಕಾಲದಲ್ಲಿ, ಇಂದ್ರನು ಈಕೆಯಲ್ಲಿ ಬಹಳ ವಿನಯವನ್ನು ತೋರಿಸುತ್ತಾ ಇವಳಿಗೆ ಬೇಕಾದ ಸಮಿತ್ತು, ದರ್ಭೆ, ಅಗ್ನಿ ಮುಂತಾದುವುಗಳನ್ನೂ, ಗಡ್ಡೆ ಗೆಣಸು, ಹಣ್ಣು ಮೊದಲಾದ ಆಹಾರ ಸಾಮಗ್ರಿಗಳನ್ನೂ ತಂದುಕೊಟ್ಟು ಉಪಚರಿಸುತ್ತಿದ್ದನು. ಇದಲ್ಲದೆ ಬಹಳ ಭಕ್ತಿಯಿಂದ ಆಕೆಯ

1. ಹೆಂಗಸರಿಗೆ ಗಂಡನ ಅನುಮತಿಯಿಲ್ಲದೆ ತಪಸ್ಸುಮಾಡತಕ್ಕ ಸ್ವಾತಂತ್ರ್ಯವಿಲ್ಲದುದರಿಂದ ಇಲ್ಲಿ ಪತಿಯನ್ನು ಪ್ರಾರ್ಥಿಸಿದಳೆಂದು ತಿಳಿಯಬೇಕು

ಕಾಲುಗಳನ್ನೊತ್ತುತ್ತಲೂ, ಬೀಸುತ್ತಲೂ, ಎಡೆಬಿಡದೆ ಉಪಚಾರಗಳನ್ನು ಮಾಡುತ್ತಲೂ ಇದ್ದನು. ಇವಳು ತನ್ನ ತಪಸ್ಸನ್ನು ಮುಗಿಸುವುದಕ್ಕೆ ಕ್ಲುಪ್ತ ಮಾಡಿಕೊಂಡಿದ್ದ ಸಾವಿರ ವರ್ಷಗಳು ಮುಗಿಯುತ್ತಬಂದು, ಇನ್ನು ಹತ್ತು ವರ್ಷಗಳು ಮಾತ್ರವೇ ಉಳಿದಿದ್ದಾಗ, ದಿತಿಯು ಆ ಇಂದ್ರನು ಮಾಡುತ್ತಿದ್ದ ಉಪಚಾರಕ್ಕೆ ಬಹಳವಾಗಿ ಮೆಚ್ಚಿ, ಇಂದ್ರನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವಳು. "ಎಲೈ ದೇವಶ್ರೇಷ್ಠನೆ! ನಿನ್ನ ತಂದೆಯಾದ ಮಹಾತ್ಮನಾದ ಕಶ್ಯಪನನ್ನು ನಾನು ಪ್ರಾರ್ಥಿಸಿಕೊಂಡಿರುವುದರಿಂದ, ಸಾವಿರ ವರ್ಷಗಳ ಮೇಲೆ ನನಗೆ ಒಬ್ಬ ಪುತ್ರನುಂಟಾಗುವನೆಂದು ಅನುಗ್ರಹಿಸಿರುವನು. ಆ ಕ್ಲುಪ್ತಕಾಲಕ್ಕೆ ಇನ್ನು ಹತ್ತು ವರ್ಷಗಳು ಮಾತ್ರವೇ ಉಳಿದಿರುವುವು. ಆಮೇಲೆ ನೀನು ನಿನ್ನ ಒಡಹುಟ್ಟಿದವನನ್ನು ನೋಡಬಹುದು. ಎಲೈ ಇಂದ್ರನೆ! ಹುಟ್ಟುವಾಗಲೇ ಆತನು ನಿನ್ನನ್ನು ಜಯಿಸಬೇಕೆಂಬ ಆತುರವುಳ್ಳವನಾಗಿರುವನು. ನಾನು ಅವನನ್ನು ಸಮಾಧಾನಪಡಿಸಿ ನಿನ್ನನ್ನು ದ್ವೇಷಿಸದಂತೆ ಮಾಡುವೆನು. ಅವನೊಡನೆ ಕಲೆತು ನೀನು ಮೂರು ಲೋಕವನ್ನೂ ಜಯಿಸಿ ನಿಷ್ಕಂಟಕವಾಗಿ ಆಳು" ಎಂದು ಹೇಳಿ, ಅವಳು [1]ಮಧ್ಯಾಹ್ನಕಾಲದಲ್ಲಿಯೇ ನಿದ್ರೆಯಿಂದ ಪರವಶಳಾಗಿ, ಕಾಲನ್ನು ತಲೆಯ ಕಡೆಗಿಟ್ಟುಕೊಂಡು ನಿದ್ರೆಮಾಡಲಾರಂಭಿಸಿದಳು. ಹೀಗಿರುವ ಅದಿತಿಯ ಅವಸ್ಥೆಯನ್ನು ನೋಡಿ, ಇಂದ್ರನು ಅವಳು ಹಾಗೆ ಅಶುಚಿಯಾಗಿದ್ದುದಕ್ಕಾಗಿ ಬಹಳ ಸಂತೋಷಪಟ್ಟು, ಒಡನೆಯೇ ಆಕೆಯ ಶರೀರವನ್ನು ಪ್ರವೇಶಿಸಿ ಒಳಗಿದ್ದ

---

1. ದಿವಾಸ್ವಾಪವು (ಹಗಲು ನಿದ್ರೆಮಾಡುವುದು) ಬಹಳ ನಿಷಿದ್ಧವಾದುದು ಮತ್ತು ಇವಳು ಆಸನದಲ್ಲಿ ಕುಳಿತುಕೊಂಡೇ ತೂಕಡಿಸುತ್ತಿರುವಾಗ ಮುಂದಕ್ಕೆ ಬಗ್ಗಲು, ಇವಳ ತಲೆಯಕೂದಲು ಕಾಲಿಗೆ ತಗಲಿದುದರಿಂದ ಅಶುಚಿಯಾದಳೆಂದು ಕೆಲವರು ಅಭಿಪ್ರಾಯಪಡುವರು. ಹಾಸಿಗೆಯಲ್ಲಿ ಮಲಗುವಾಗ ತಲೆಯಕಡೆಗೆ ಕಾಲನ್ನು ನೀಡಿ ಮಲಗುವುದೂ, ಹಗಲಿನಲ್ಲಿ ನಿದ್ರೆಮಾಡುವುದೂ ಶಾಸ್ತ್ರವಿರುದ್ಧಗಳಾದುದರಿಂದ, ಆ ಎರಡು ಕೃತ್ಯಗಳಿಂದಲೂ ಇವಳು ಅಶುಚಿತ್ವವನ್ನು ಹೊಂದಿದಳೆಂದು ಮತ್ತೆ ಕೆಲವರ ಅಭಿಪ್ರಾಯವು. ಸ್ಮೃತಿಗಳಲ್ಲಿ ಪೂರ್ವದಕ್ಷಿಣದಿಕ್ಕುಗಳಿಗೆ ಮಾತ್ರವೇ ತಲೆಯನ್ನಿಟ್ಟು ಮಲಗಬೇಕೆಂಬ ವಿಧಿಯಿರುವುದರಿಂದ, ಅದಕ್ಕೆ ವಿರುದ್ಧವಾಗಿ ಇವಳು ನಡೆಸಿ ಅಶುಚಿಯಾದಳೆಂದು ಬೇರೆ ಕೆಲವರ ಮತವು.

ಗರ್ಭವನ್ನು ಏಳು ವಿಭಾಗವಾಗಿ ಒಡೆದುಬಿಟ್ಟನು. ಹೀಗೆ ಭೇದಿಸಲ್ಪಟ್ಟ ಆ ಗರ್ಭವು ಗಟ್ಟಿಯಾಗಿ ಅಳುವುದಕ್ಕಾರಂಭಿಸಿತು. ಆಗ ದಿತಿಗೆ ಎಚ್ಚರ ವುಂಟಾಗಲು, ಇಂದ್ರನು ಆ ಗರ್ಭವನ್ನು ಕುರಿತು "ಅಳಬೇಡ"ವೆಂದು ಹೇಳು ತ್ತಿದ್ದನು. ಆದರೂ, ಅದು ಅಳುತ್ತಲೇ ಇದ್ದುದರಿಂದ, ಪುನಃ ಪುನಃ ಅದನ್ನು ಭೇದಿಸುತಿದ್ದನು. ಆಗ ದಿತಿಯು "ಕೊಲ್ಲಬೇಡ ಕೊಲ್ಲಬೇಡ"ವೆಂದು ಕೂಗಿಕೊಳ್ಳಲು, ಇಂದ್ರನು ಮಾತೃವಾಕ್ಯಗೌರವದಿಂದ ಹೊರಗೆ ಬಂದು ಕೈಮುಗಿದು ನಿಂತುಕೊಂಡು, ಅದಿತಿಯನ್ನು ಕುರಿತು "ಅಮ್ಮಾ! ನೀನು ಕಾಲಿನ ಕಡೆಗೆ ತಲೆಯನ್ನು ಮಾಡಿಕೊಂಡು ಮಲಗಿದ್ದುದರಿಂದ ಅಶುಚಿ ಯಾಗಿರುವುದನ್ನು ನೋಡಿ, ಇದೇ ತಕ್ಕ ಅವಕಾಶವೆಂದು ತಿಳಿದು, ನಾನು ನಿನ್ನ ದೇಹದಲ್ಲಿ ಪ್ರವೇಶಿಸಿ, ನನಗೆ ವೈರಿಯಾದ ಆ ಗರ್ಭವನ್ನು ಭೇದಿಸಿದೆನು. [1]ನನ್ನ ಇದೊಂದಪರಾಧವನ್ನು ಕ್ಷಮಿಸಬೇಕು" ಎಂದನು.

ಇಲ್ಲಿಗೆ ನಾಲ್ವತ್ತಾರನೆಯ ಸರ್ಗವು.

ಸಪ್ತಮಾರುತರ ವೃತ್ತಾಂತವು

ಹೀಗೆ ಗರ್ಭವು ಏಳು ತುಂಡುಗಳಾಗಿ ಒಡೆದುಹೋಗಲು, ದಿತಿಯು ಬಹಳ ದುಃಖಗೊಂಡು, ಇಂದ್ರನನ್ನು ಕುರಿತು ಸಮಾಧಾನದಿಂದಲೇ ಒಂದಾ ನೊಂದು ವಾಕ್ಯವನ್ನು ಹೇಳುವಳು. "ಎಲೈ ಇಂದ್ರನೆ! ಹೀಗೆ ನನ್ನ ಗರ್ಭವು ಭೇದಿಸಲ್ಪಟ್ಟುದು ನನ್ನ ತಪ್ಪಿನಿಂದಲೇ ಹೊರತು, ಇದರಲ್ಲಿ ನಿನ್ನ ಅಪರಾಧ ವೇನೂ ಇಲ್ಲ. ಆದರೆ ಈ ಕೆಟ್ಟುಹೋದ ಗರ್ಭಕ್ಕೆ ಯಾವುದಾದರೂ ಒಂದು ಬಗೆಯಿಂದ ಮೇಲ್ಮೆಯುಂಟುಮಾಡಬೇಕೆಂದು ಕೋರುತ್ತೇನೆ. ಈ ಗರ್ಭಗಳು ಸಪ್ತಮರುತ್ತುಗಳಿಗೂ ಪಾಲಕರಾಗಿರಲಿ! ಎಲೈ ವತ್ಸನೆ! ಈ ನನ್ನ ಏಳು ಮಕ್ಕಳು ವಾತಸ್ಕಂಧಾಭಿಮಾನದೇವತೆಗಳಾಗಿ ಸಪ್ತಮರುತ್ತುಗಳೆಂಬ ಹೆಸರಿ ನಿಂದ ದಿವ್ಯರೂಪವುಳ್ಳವರಾಗಿ ಸ್ವರ್ಗದಲ್ಲಿ ಸಂಚರಿಸುತ್ತಿರಲಿ! ಇವರಲ್ಲಿ ಒಬ್ಬನು ಬ್ರಹ್ಮಲೋಕದಲ್ಲಿಯೂ, ಮತ್ತೊಬ್ಬನು ಇಂದ್ರಲೋಕದಲ್ಲಿಯೂ,

---

1. "ಗಗನ, ಸ್ಪರ್ಶನ, ವಾಯು, ಅನಿಲ, ಪ್ರಾಣ, ಪ್ರಾಣೇಶ್ವರ, ಜೀವ" ಎಂದು ಏಳು ವಾಯುಗಳುಂಟು. ಇದಲ್ಲದೆ ಆವಹ, ಪ್ರವಹ, ಸಂವಹ, ಉದ್ವಹ, ನಿವಹ, ಪರಿವಹ, ಪರಾವಹಗಳೆಂಬ ಸಪ್ತಮರುತ್ತುಗಳುಂಟೆಂದು ವಿಷ್ಣುಪುರಾಣದಲ್ಲಿದೆ.

ಮೂರನೆಯವನು ವಾಯುವೆಂಬ ಖ್ಯಾತಿಯಿಂದ ಅಂತರಿಕ್ಷದಲ್ಲಿಯೂ, ಉಳಿದ ನಾಲ್ಕುಮಂದಿಯೂ ನಿನ್ನ ಅಪ್ಪಣೆಯನ್ನನುಸರಿಸಿ ನಾಲ್ಕುದಿಕ್ಕು ಗಳಲ್ಲಿಯೂ ಸಂಚರಿಸುತ್ತಿರಲಿ! ಇವರೆಲ್ಲರೂ ದೇವಸ್ವರೂಪವನ್ನು ಹೊಂದಲಿ! ನೀನು ಗರ್ಭವನ್ನು ಭೇದಿಸುವಾಗ "ಮಾ ರುದಃ, (ಅಳಬೇಡ) ಮಾ ರುದಃ, (ಅಳಬೇಡ)" ಎಂದು ಕೂಗುತ್ತಿದ್ದುದರಿಂದ, ಆ ಹೆಸರೇ ಇವರಿಗೆ ಲೋಕದಲ್ಲಿ ಪ್ರಖ್ಯಾತವಾಗಿರಲಿ!" ಎಂದಳು.

ಇದನ್ನು ಕೇಳಿ ಇಂದ್ರನು ಕೈಮುಗಿದು ನಿಂತು "ಎಲೈ ಜನನಿ! ಇದೆಲ್ಲವೂ ನೀನು ಹೇಳಿದಂತೆಯೇ ಆಗುವುದು. ಸಂದೇಹಪಡಬೇಡ! ನಿನ್ನ ಮಕ್ಕಳೆಲ್ಲರೂ ದೇವತ್ವವನ್ನೇ ಹೊಂದುವರು. ನಿನಗೆ ಶುಭವಾಗಲಿ" ಎಂದನು. ಹೀಗೆ ಅವರಿಬ್ಬರೂ ನಿಶ್ಚಯಮಾಡಿಕೊಂಡು ಕೃತಾರ್ಥರಾಗಿ ಸ್ವರ್ಗವನ್ನು ಬಂದು ಸೇರಿದರೆಂದು ನಾನು ಹಿಂದೆ ಕೇಳಿದ ಕಥೆಯೊಂದುಂಟು. ಎಲೈ ರಾಮನೆ! ತಪಸ್ಸು ಮಾಡುತ್ತಿದ್ದ ದಿತಿಯನ್ನು ಇಂದ್ರನು ಉಪಚರಿ ಸುತ್ತಿದ್ದ ಸ್ಥಾನವೇ ಇದು. ಇಕ್ಷ್ವಾಕುರಾಜನಿಗೆ 'ಅಲಂಬಸೆ'ಯೆಂಬ ಪತ್ನಿಯಲ್ಲಿ ಹುಟ್ಟಿ ಪರಮಧಾರ್ಮಿಕನೆಂದು ಖ್ಯಾತಿಹೊಂದಿದ ವಿಶಾಲನೆಂಬ ರಾಜನೊಬ್ಬನು ಈ ಪಟ್ಟಣವನ್ನು ಸ್ಥಾಪಿಸಿದುದರಿಂದ, ಇದಕ್ಕೆ 'ವಿಶಾಲೆ' ಯೆಂಬ ಹೆಸರುಂಟಾಯಿತು. ಆ ವಿಶಾಲನಿಗೆ ಮಹಾಬಲಶಾಲಿಯಾದ ಹೇಮಚಂದ್ರನು ಪುತ್ರನಾಗಿ ಹುಟ್ಟಿದನು. ಆತನ ಮಗನು ಸೃಂಜಯನು. ಆತನ ಕುಮಾರನು ಸಹದೇವನು. ಆ ಸಹದೇವನಿಂದ ಕುಶಾಶ್ವನೆಂಬವನು ಹುಟ್ಟಿದನು. ಆತನಿಗೆ ಸೋಮದತ್ತನೂ, ಆ ಸೋಮದತ್ತನಿಗೆ ಕಕುತ್‌ಸ್ಥನೂ ಪುತ್ರರಾದರು. ಆ ಕಕುತ್‌ಸ್ಥನ ಮಗನೇ ಈಗ ಈ ಪಟ್ಟಣವನ್ನು ಆಳುತ್ತಿರುವನು. ಈತನಿಗೆ 'ಸುಮತಿ'ಯೆಂದು ಹೆಸರು. ಈತನು ಮಹಾಪರಾಕ್ರಮಶಾಲಿಯಾಗಿ, ದೇವತೆಗಳಿಗೆ ಸಮಾನನಾಗಿ, ಶತ್ರುಗಳಿಗೆ ಅಜೇಯನಾಗಿ, ಖ್ಯಾತಿಹೊಂದಿರುವನು. ಎಲೈ ರಾಮನೆ! ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ರಾಜರು ಇಷ್ಟುಮಂದಿ ಮಾತ್ರವೇ ಎಂದು ಸಂದೇಹ ಪಡಬೇಡ! ಆ ಇಕ್ಷ್ವಾಕುವಿನ ಅನುಗ್ರಹದಿಂದ ಆ ವಂಶದಲ್ಲಿ ಹುಟ್ಟಿದ ರಾಜ ರೆಲ್ಲರೂ ದೀರ್ಘಾಯುಸ್ಸುಳ್ಳವರಾಗಿಯೇ ಇರುತ್ತಿದ್ದರು. ಅವರ ಧೈರ್ಯವೂ, ಅವರ ವೀರ್ಯವೂ, ಅವರ ಧರ್ಮಸ್ವಭಾವವೂ, ಬಹಳ ಅತಿಶಯವಾದುದು. ಎಲೆ ವತ್ಸನೆ! ನಾವು ಈ ರಾತ್ರಿಯಲ್ಲಿ ಇಲ್ಲಿಯೇ ಸುಖವಾಗಿದ್ದು, ನಾಳೆ

ಪ್ರಾತಃಕಾಲದಲ್ಲಿ ಜನಕರಾಜನನ್ನು ನೋಡುವುದಕ್ಕೆ ಹೋಗಬಹುದು" ಎಂದನು. ಆ ವಿಶಾಲಾಪಟ್ಟಣದ ಅಧಿಪತಿಯಾದ ಸುಮತಿಯು ಬಹಳ ಧಾರ್ಮಿಕನಾಗಿಯೂ, ಮಹಾತೇಜಸ್ವಿಯಾಗಿಯೂ, ಕೀರ್ತಿಮಂತನಾಗಿಯೂ ಇದ್ದುದರಿಂದ, ವಿಶ್ವಾಮಿತ್ರನು ತನ್ನ ಪಟ್ಟಣಕ್ಕೆ ಬಂದುಮುಟ್ಟಿದ ವೃತ್ತಾಂತ ವನ್ನು ತಿಳಿದು ಋತ್ವಿಕ್ಕುಗಳನ್ನೂ ಬಂಧುಗಳನ್ನೂ ಸಂಗಡ ಕರೆದುಕೊಂಡು, ಈ ವಿಶ್ವಾಮಿತ್ರನನ್ನು ಇದಿರುಗೊಂಡು, ಇವರಿಗೆ ನಾನಾ ವಿಧವಾದ ಸತ್ಕಾರ ಗಳನ್ನು ಮಾಡಿ ಕೈಮುಗಿದು ಆತನ ಕುಶಲಪ್ರಶ್ನೆಯನ್ನು ಕೇಳಿ "ಎಲೈ ಮಹರ್ಷಿಯೇ! ಮಹಾತ್ಮನಾದ ನೀನು ನನ್ನ ದೇಶದಲ್ಲಿ ಕಾಲಿಟ್ಟುದರಿಂದ ಈಗ ನಾನು ಧನ್ಯನಾದೆನು. ಈಗಲೀಗ ನಾನು ಅನುಗ್ರಹಿಸಲ್ಪಟ್ಟೆನು. ತಮ್ಮ ದರ್ಶನವು ಪ್ರತ್ಯಕ್ಷವಾಗಿಯೇ ಈಗ ನನಗೆ ಲಭಿಸಿದುದರಿಂದ ನನ್ನಂತೆ ಭಾಗ್ಯಶಾಲಿಯು ಈ ಪ್ರಪಂಚದಲ್ಲಿ ಯಾರೂ ಇಲ್ಲ" ಎಂದನು.

ಇಲ್ಲಿಗೆ ನಾಲ್ವತ್ತೇಳನೆಯ ಸರ್ಗವು.

ಅಹಲ್ಯಾ ವೃತ್ತಾಂತವು

ಹೀಗೆ ಸುಮತಿ ವಿಶ್ವಾಮಿತ್ರರಿಬ್ಬರೂ ಒಬ್ಬರಿಗೊಬ್ಬರು ಕುಶಲಪ್ರಶ್ನೆ ಗಳನ್ನು ಕೇಳಿ ಮುಗಿಸಿದಮೇಲೆ, ಆ ಸುಮತಿರಾಜನು ವಿಶ್ವಾಮಿತ್ರನನ್ನು ಕುರಿತು "ಎಲೈ ಮಹಾತ್ಮನೆ! ನಿನ್ನೊಡನೆ ಬಂದಿರುವ ಈ ಬಾಲಕರಾರು? ನೋಡಿದರೆ ದೇವದೇವನಾದ ಮಹಾವಿಷ್ಣುವಿನಂತೆ ಪರಾಕ್ರಮವುಳ್ಳವರಾಗಿ ಕಾಣುವರು! ಇವರು ಆನೆಯಂತೆಯೂ, ಸಿಂಹದಂತೆಯೂ ಬಹುಗಂಭೀರ ವಾದ ಮತ್ತು ಧೀರವಾದ ನಡೆಯುಳ್ಳವರಾಗಿರುವರು. ಹುಲಿಗಳಂತೆ ಮಹಾ ಬಲವುಳ್ಳವರಾಗಿಯೂ ಗೂಳಿಗಳಂತೆ ಮೈಕಟ್ಟುಳ್ಳವರಾಗಿಯೂ ಕಾಣಿಸು ತ್ತಿರುವರು. ಇವರ ಕಣ್ಣುಗಳು ತಾವರೆಯೆಸಳುಗಳಂತೆ ವಿಸ್ತಾರವಾಗಿರುವುವು. ಕತ್ತಿಯನ್ನೂ ಬಿಲ್ಲುಬತ್ತಳಿಕೆಗಳನ್ನೂ ಧರಿಸಿರುವರು. ಎಳೇ ಯೌವನ ದಿಂದಲೂ, ಎಣೆಯಿಲ್ಲದ ದೇಹಸೌಂದರ್ಯದಿಂದಲೂ ಅಶ್ವಿನೀದೇವತೆಗಳಂತೆ ಕಾಣುತ್ತಿರುವರು. ವಿನೋದಾರ್ಥವಾಗಿ ದೇವಲೋಕದಿಂದ ಕೆಳಕ್ಕೆ ಇಳಿದು ಬಂದ ದೇವತೆಗಳಂತೆಯೇ ತೋರುವರು. ರಾಜತೇಜಸ್ಸುಳ್ಳ ಈ ಬಾಲಕರು ಕಾಲುನಡೆಯಿಂದಲೇ ಇಷ್ಟು ದೂರದವರೆಗೆ ಬರಲು ಕಾರಣವೇನು?

ಇವರು ಯಾರ ಮಕ್ಕಳು? ಚಂದ್ರಸೂರ್ಯರು ಆಕಾಶವನ್ನು ಹೇಗೋ ಹಾಗೆ ಇವರಿಬ್ಬರೂ ಈ ಪ್ರದೇಶವನ್ನೆಲ್ಲಾ ತಮ್ಮ ತೇಜಸ್ಸಿನಿಂದಲೇ ಬೆಳಗುತ್ತಿರುವರು! ಇವರಿಬ್ಬರ ನಡೆನುಡಿಗಳೂ, ಹಾವಭಾವಗಳೂ, ಇಂಗಿತಗಳೂ, ಆಕಾರವೂ, ದೇಹಪ್ರಮಾಣವೂ ಅವಳಿಮಕ್ಕಳಿಗಿರುವಂತೆ ಒಂದೇವಿಧವಾಗಿರುವುವು. ಸುಕುಮಾರಾಂಗವುಳ್ಳ ಈ ಬಾಲಕರು ಬಹಳ ಕಡಿದಾದ ಕಾಡುದಾರಿಯಲ್ಲಿ ನಡೆದು ಇಲ್ಲಿ ಬರುವುದಕ್ಕೆ ಕಾರಣವೇನು? ಈ ಬಾಲ್ಯದಲ್ಲಿಯೇ ಆಯುಧಧಾರಿಗಳಾಗಿರುವುದೇಕೆ? ಇವೆಲ್ಲವನ್ನೂ ನನಗೆ ತಿಳಿಸಬೇಕು" ಎಂದು ಪ್ರಾರ್ಥಿಸಿದನು.

ಆಗ ವಿಶ್ವಾಮಿತ್ರನು ತಾನು ದಶರಥನನ್ನು ಪ್ರಾರ್ಥಿಸಿ ಈ ಮಕ್ಕಳನ್ನು ಸಿದ್ಧಾಶ್ರಮಕ್ಕೆ ಕರೆತಂದು ರಾಕ್ಷಸರನ್ನು ಕೊಲ್ಲಿಸಿದುದೇ ಮೊದಲಾದ ಪೂರ್ವವೃತ್ತಾಂತಗಳೆಲ್ಲವನ್ನೂ ಆ ಸುಮತಿಗೆ ವಿವರವಾಗಿ ಹೇಳಿದನು. ಆಗ ಆ ಸುಮತಿಯು ಮಹಾತ್ಮನಾದ ದಶರಥನ ಮಕ್ಕಳು ತನ್ನಲ್ಲಿಗೆ ಅತಿಥಿಗಳಾಗಿ ಬಂದುದಕ್ಕಾಗಿ ಬಹಳ ಸಂತೋಷಪಟ್ಟು ಶಾಸ್ತ್ರೋಕ್ತವಾಗಿ ಅವರಿಗೆ ಸಮಸ್ತ ಸತ್ಕಾರಗಳನ್ನೂ ಮಾಡಿದನು. ಹೀಗೆ ಸತ್ಕಾರವನ್ನು ಹೊಂದಿದ ರಾಮಲಕ್ಷ್ಮಣರಿಬ್ಬರೂ ಬಹಳ ಸಂತೋಷದಿಂದ ಆ ರಾತ್ರಿಯನ್ನು ಅಲ್ಲಿಯೇ ಕಳೆದು, ಬೆಳಗಾದಮೇಲೆ ಅಲ್ಲಿಂದ ಹೊರಟು ಮಿಥಿಲಾಪುರವನ್ನು ಸೇರಿದರು. ಋಷಿಗಳೆಲ್ಲರೂ ಜನಕರಾಜನ ಪಟ್ಟಣವಾದ ಆ ಮಿಥಿಲೆಯ ಅಂದವನ್ನು ನೋಡಿ ಅದನ್ನು ಬಹಳವಾಗಿ ಕೊಂಡಾಡಿದರು. ಆ ಪಟ್ಟಣದ ಉಪವನಪ್ರದೇಶದಲ್ಲಿ ರಾಮನು ಬಹುಪುರಾತನವಾಗಿಯೂ, ನಿರ್ಜನವಾಗಿಯೂ, ಬಹಳ ಅಂದವಾಗಿಯೂ ಇದ್ದ ಒಂದಾಶ್ರಮವನ್ನು ಕಂಡು, ವಿಶ್ವಾಮಿತ್ರನನ್ನು ಕುರಿತು, "ಎಲೈ ಮಹಾತ್ಮನೆ! ಬಹುಮನೋಹರವಾದ ಈ ಪ್ರದೇಶವು ಋಷ್ಯಾಶ್ರಮದಂತೆ ತೋರುವುದು. ಇಲ್ಲಿ ಋಷಿಗಳೊಬ್ಬರೂ ವಾಸವಾಗಿರುವಂತೆ ಕಾಣಲಿಲ್ಲ. ಇದು ಪೂರ್ವದಲ್ಲಿ ಯಾವ ಮಹರ್ಷಿಯ ಆಶ್ರಮವಾಗಿತ್ತು? ಇದನ್ನು ನಮಗೆ ತಿಳಿಸಬೇಕು" ಎಂದನು. ಅದಕ್ಕಾ ವಿಶ್ವಾಮಿತ್ರನು ಈ ಸ್ಥಳದಲ್ಲಿ ರಾಮನ ಪ್ರಭಾವದಿಂದ ಒಂದು ಅದ್ಭುತಕಾರ್ಯವು ನಡೆಯಬೇಕಾಗಿರುವುದೆಂದು ತನ್ನ ಮನಸ್ಸಿನಲ್ಲಿಯೇ ಸಂತೋಷಪಡುತ್ತಾ "ವತ್ಸ ರಾಮನೆ! ಒಳ್ಳೆಯದು! ಆ ವೃತ್ತಾಂತವನ್ನು ನೀನು ಅವಶ್ಯವಾಗಿ ಕೇಳಬೇಕು. ಇದು ಯಾರ ಆಶ್ರಮವೆಂಬುದನ್ನೂ, ಯಾರ

ಶಾಪದಿಂದ ಇದಕ್ಕೆ ಈ ಸ್ಥಿತಿಯು ಬಂತೆಂಬುದನ್ನೂ ವಿವರಿಸುವೆನು ಕೇಳು. ಇದು ಪೂರ್ವದಲ್ಲಿ ಮಹಾತ್ಮನಾದ ಗೌತಮನ ಆಶ್ರಮವು. ಇದನ್ನು ಸಮಸ್ತ ದೇವತೆಗಳೂ ಪೂಜಿಸುವರು. ಆ ಗೌತಮನು ಅಹಲ್ಯೆಯೆಂಬ ತನ್ನ ಧರ್ಮ ಪತ್ನಿಯೊಡನೆ ಅನೇಕ ವರ್ಷಗಳವರೆಗೆ ಇಲ್ಲಿಯೇ ತಪಸ್ಸು ಮಾಡುತ್ತಿದ್ದನು.

ಒಂದಾನೊಂದು ಕಾಲದಲ್ಲಿ ಇಂದ್ರನು ಆ ಗೌತಮನು ಆಶ್ರಮದಲ್ಲಿಲ್ಲದ ಸಮಯವನ್ನು ನೋಡಿ, ಆ ಗೌತಮನಂತೆಯೇ ವೇಷವನ್ನು ಧರಿಸಿಬಂದು, ಅಹಲ್ಯೆಯನ್ನು ನೋಡಿ, ಪ್ರಿಯೆ! ಕಾಮಾತುರರಾದವರು ತಮಗೆ ಇಚ್ಛೆ ಬಂದಾಗ ಕ್ರೀಡಿಸುವರೇ ಹೊರತು, [1]ಋತುಕಾಲವನ್ನು ನಿರೀಕ್ಷಿಸುವುದಿಲ್ಲ. ನಿನ್ನ ರೂಪಾತಿಶಯವಾದರೋ ನೋಡಿದಾಗಲೆಲ್ಲಾ ಮೋಹವನ್ನುಂಟು ಮಾಡುವಂತಿರುವುದು. ಆದುದರಿಂದ ಈಗಲೇ ನಿನ್ನೊಡನೆ ಸಂಭೋಗಿಸ ಬೇಕೆಂಬ ಅಪೇಕ್ಷೆಯುಂಟಾಗಿರುವುದು. ಋತುಕಾಲದ ನಿರೀಕ್ಷಣೆಯೆಂಬುದು ಪುತ್ರಾರ್ಥಿಗಳಿಗೆ ಮಾತ್ರವೇ ಹೊರತು ಭೋಗಾರ್ಥಿಗಳಿಗಲ್ಲ" ಎಂದನು. ಇದನ್ನು ಕೇಳಿ ಅಹಲ್ಯೆಯು ತನ್ನ ಮನಸ್ಸಿನಲ್ಲಿ "ತನ್ನ ಪತಿಯು ಎಂದಿಗೂ ಹೀಗೆ ಹೇಳತಕ್ಕವನಲ್ಲ! ಈತನು ಯಾರೋ ಬೇರೆಯಾಗಿರಬೇಕು! ಇಂದ್ರನು ಬಹುಕಾಲದಿಂದ ನನ್ನಲ್ಲಿ ಕಣ್ಣಿಟ್ಟಿರುವುದಾಗಿ ಕೇಳಿರುವೆನು. ಆದುದರಿಂದ ಈತನೇ ಇಂದ್ರನಾಗಿರಬೇಕು" ಎಂದು ನಿಶ್ಚಯಿಸಿ, ಅದನ್ನು ದೃಢವಾಗಿ ನಂಬಿದ್ದರೂ, ಆ ದೇವೇಂದ್ರನ ರೂಪವನ್ನು ನೋಡಿ ಆಕೆಯ ಬುದ್ಧಿಯೂ ಕೆಟ್ಟುಹೋಯಿತು. ಒಡನೆಯೇ ಅದಕ್ಕೆ ಸಮ್ಮತಿಸಿ, ಆತನೊಡನೆ ಕ್ರೀಡಿಸಿದ ಮೇಲೆ ಅವನನ್ನು ನೋಡಿ, "ಎಲೈ ಪ್ರಭುವೇ! ನಮ್ಮ ಕೋರಿಕೆಯು ನೆರವೇರಿತಲ್ಲವೆ? ಇನ್ನು ನೀನು ಇಲ್ಲಿರುವುದು ಸರಿಯಲ್ಲ. ಹೊರಟುಹೋಗು. ನೀನು ದೇವತೆಗಳಿಗೆಲ್ಲಾ ಒಡೆಯನೆನಿಸಿಕೊಂಡಿರುವೆ. ನಿನ್ನ ಮಾನವನ್ನು ಕೆಡಿಸಿಕೊಳ್ಳಬೇಡ! ಈ ವಿಷಯವು ಯಾರಿಗೂ ತಿಳಿಯದಂತೆ ನಮ್ಮಿಬ್ಬರನ್ನೂ ಕಾಪಾಡತಕ್ಕ ಭಾರವು ನಿನ್ನದಾಗಿದೆ" ಎಂದಳು. ಆಗ ಇಂದ್ರನು ನಗುತ್ತಾ ಆ ಅಹಲ್ಯೆಯನ್ನು ಕುರಿತು "ಎಲೈ ನಿತಂಬಿನಿಯೇ! ಹಾಗೆಯೆ ಸರಿ! ಇನ್ನು ನಾನು ಹೊರಡುವೆನು" ಎಂದು ಹೇಳಿ, ಬಹುವೇಗದಿಂದ ಆ ಪರ್ಣಶಾಲೆ

---

1. "ಷೋಡಶರ್ತುರ್ನಿಶಾ ಸ್ತ್ರೀಣಾಂ" ಎಂಬಂತೆ ಋತುವಾದುದು ಮೊದಲು ಹದಿನಾರು ದಿವಸಗಳವರೆಗೆ ಮಾತ್ರವೇ ಋತುಕಾಲವೆನಿಸುವುದು.

ಯನ್ನು ಬಿಟ್ಟು ಭಯದಿಂದ ಹೊರಕ್ಕೆ ಬರುತ್ತಿರುವಷ್ಟರೊಳಗಾಗಿ ಇದಿರಾಗಿ ಬರುತ್ತಿದ್ದ ಗೌತಮನನ್ನು ಕಂಡನು.

ಈ ಮಹರ್ಷಿಯಾದರೋ ಆಗಲೇ ಸ್ನಾನಮಾಡಿ, ದರ್ಭೆಗಳನ್ನೂ, ಸಮಿತ್ತುಗಳನ್ನೂ ಕೈಯಲ್ಲಿ ಹಿಡಿದು, ದೇವದಾನವರನ್ನೂ ತನ್ನ ತಪೋಬಲದಿಂದ ಲಕ್ಷ್ಯಮಾಡದವನಾಗಿ, ಅಗ್ನಿಯಂತೆ ಮಹಾತೇಜಸ್ವಿಯಾಗಿ ಜ್ವಲಿಸುತ್ತಿದ್ದನು. ಈತನನ್ನು ನೋಡಿದೊಡನೆ ಭಯದಿಂದ ಇಂದ್ರನ ಮುಖದಲ್ಲಿ ಬಿಳುಪೇರಿ ವೈವರ್ಣ್ಯವುಂಟಾಯಿತು. ಆಗ ಗೌತಮನು ಈ ಸ್ಥಿತಿಯನ್ನು ನೋಡಿ, ಇಂದ್ರನೇ ಈ ವೇಷವನ್ನು ಧರಿಸಿ ಬಂದಿರುವನೆಂದು ತಿಳಿದು ಆತನ ದುಶ್ಚರ್ಯೆಗಾಗಿ ಕೋಪಗೊಂಡು, "ಎಲೈ ದುರ್ಬುದ್ಧಿಯೇ! ನನ್ನ ವೇಷದಿಂದ ಬಂದು ಈ ಅಕೃತ್ಯವನ್ನು ಮಾಡಿದೆಯಲ್ಲವೆ? ಆದುದರಿಂದ ನಿನ್ನ ಅಂಡಕೋಶಗಳೆರಡೂ ಬಿದ್ದುಹೋಗಲಿ!" ಎಂದು ಶಪಿಸಲು, ಆ ಕ್ಷಣವೇ ಇಂದ್ರನ ಬೀಜಗಳೆರಡೂ ಬಿದ್ದುಹೋದುವು. ಆಮೇಲೆ ಗೌತಮನು ಅಹಲ್ಯೆಯ ಬಳಿಗೆ ಬಂದು, "ಎಲೈ ಪಾಪಿನಿಯೆ! ನೀನೂ ಅನೇಕ ವರ್ಷಗಳವರೆಗೂ ಅನ್ನಪಾನಾದಿಗಳೊಂದೂ ಇಲ್ಲದೆ ವಾಯುಭಕ್ಷಣವನ್ನು ಮಾಡುತ್ತಿದ್ದು, ಬೂದಿಯಲ್ಲಿ ಬಿದ್ದು ಹೊರಳಿ ಸಂಕಟಪಡುತ್ತ [1]ಯಾರ ಕಣ್ಣಿಗೂ ಗೋಚರಿಸದೆ, ಈ ನಿರ್ಜನವಾದ ಆಶ್ರಮದಲ್ಲಿಯೇ ಇರು! ದಶರಥಪುತ್ರನಾದ ಶ್ರೀರಾಮನು ಯಾವಾಗ ಈ ವನವನ್ನು ತನ್ನ ಪಾದಸ್ಪರ್ಶದಿಂದ ಪವಿತ್ರವಾಗಿ ಮಾಡುವನೋ, ಆಗ ನಿನಗೆ ಶಾಪವಿಮೋಚನವಾಗಿ ಸ್ತ್ರೀರೂಪವನ್ನು

1. ಅಹಲ್ಯೆಯು ಬುದ್ಧಿಪೂರ್ವಕವಾಗಿ ಮಾಡಿದ ವ್ಯಭಿಚಾರದೋಷಕ್ಕೆ ಮಹರ್ಷಿಯು, ಶಾಪರೂಪವಾದ ಪ್ರಾಯಶ್ಚಿತ್ತವನ್ನು ವಿಧಿಸಿದುದುಂಟು. ಆದರೆ ಕಲ್ಲಾಗುವಂತೆ ಶಪಿಸಿದಹಾಗೆ ಅದರಿಂದ ಸ್ಪಷ್ಟವಾಗಿ ಕಾಣಬರುವುದಿಲ್ಲ. ಆದುದರಿಂದ ಮುಂದೆ "ಮೊದಲಿನಂತೆಯೇ ದೇಹವನ್ನು ಹೊಂದು" ಎಂದಿರುವ ವಾಕ್ಯಕ್ಕೆ, ಮೊದಲಿನ ಹಾಗೆ ನೀನು ಎಲ್ಲರಿಗೂ ಕಾಣುವವಳಾಗೆಂದು ಅರ್ಥಮಾಡಬೇಕು. ಆದರೆ ಪಾದ್ಮಪುರಾಣದಲ್ಲಿ "ಸಾತಸ್ತಸ್ಯ ರಾಮಸ್ಯ ಪಾದಸ್ಪರ್ಶಾನ್ಮಹಾತ್ಮನಃ| ಅಭೂತ್ಸುರೂಪಾ ವನಿತಾ ಸಮಾಕ್ರಾಂತಾ ಮಹಾಶಿಲಾ"|| ಎಂದು ಶಿಲಾರೂಪವೇ ಹೇಳಲ್ಪಟ್ಟಿರುವುದು. ಇದು ಕಲ್ಪಾನ್ತರದ ವೃತ್ತವೆಂದು ಹಲವರು ಅಭಿಪ್ರಾಯ ಪಡುವರು. ಬೇರೆ ಕೆಲವು ವ್ಯಾಖ್ಯಾನಕರ್ತರು ಇಲ್ಲಿಯೂ ಹಾಗೆಯೇ ಅರ್ಥವನ್ನು ಕಲ್ಪಿಸುವರು.

ಹೊಂದುವೆ. ಆತನಿಗೆ ತಕ್ಕ ರೀತಿಯಲ್ಲಿ ಆತಿಥ್ಯಗಳನ್ನು ಮಾಡಿದಮೇಲೆಯೇ ಲೋಭಮೋಹಾದಿ ದುರ್ಬುದ್ಧಿಗಳೆಲ್ಲವೂ ನಿನಗೆ ಹೋಗುವುವು. ಆಮೇಲೆ ನೀನು ನನ್ನೊಡನೆ ಮೊದಲಿನಂತೆಯೇ ಸುಖವಾಗಿರಬಹುದು" ಎಂದು ಶಪಿಸಿದುದಲ್ಲದೆ, ಅದರಿಂದ ನಷ್ಟವಾದ ತನ್ನ ತಪಶ್ಶಕ್ತಿಯನ್ನು ಪುನಃ ಗಳಿಸಿ ಕೊಳ್ಳುವುದಕ್ಕಾಗಿ, ಆ ಕ್ಷಣವೇ ಆಶ್ರಮವನ್ನು ಬಿಟ್ಟು, ಸಿದ್ಧಚಾರಣಾದಿ ಗಳಿಂದ ಸೇವಿತವಾಗಿರುವ ಪರಿಶುದ್ಧವಾದ ಹಿಮವತ್ಪರ್ವತದ ಶಿಖರಕ್ಕೆ ಹೋಗಿ ತಪಸ್ಸು ಮಾಡುತ್ತಿದ್ದನು.

ಇಲ್ಲಿಗೆ ನಾಲ್ವತ್ತೆಂಟನೆಯ ಸರ್ಗವು.

ಅಹಲ್ಯಾಶಾಪವಿಮೋಚನವು

ಹೀಗೆ ಇಂದ್ರನು ತನಗುಂಟಾದ ದುರವಸ್ಥೆಗೆ ನಾಚಿಕೊಂಡು, ಭಯ ದಿಂದ ನಡುಗುತ್ತ, ದೇವಸಭೆಗೆ ಬಂದು, ಅಲ್ಲಿದ್ದ ಋಷಿಗಳನ್ನೂ ಅಗ್ನ್ಯಾದಿ ದೇವತೆಗಳನ್ನೂ ನೋಡಿ, "ಎಲೈ ದೇವತೆಗಳಿರಾ! ಗೌತಮಮಹರ್ಷಿಯು ನಮ್ಮೆಲ್ಲರ ಪದವಿಯನ್ನೂ ಆಕ್ರಮಿಸಬೇಕೆಂಬ ದುರಾಶೆಯಿಂದ ತಪಸ್ಸು ಮಾಡುತ್ತಿರುವುದನ್ನು ನಾನು ಕೇಳಿ, ಅವನಿಗೆ ಯಾವುದಾದರೂ ಒಂದು ವಿಧ ದಲ್ಲಿ ಕೋಪವನ್ನು ಹುಟ್ಟಿಸುವುದರಿಂದ ಆತನ ತಪಸ್ಸನ್ನು ಕೆಡಿಸಬೇಕೆಂದೆಣಿಸಿ, ಆತನ ಆಶ್ರಮಕ್ಕೆ ಹೋಗಿ ಒಂದು ದುಷ್ಕೃತ್ಯವನ್ನು ಮಾಡಲಾರಂಭಿಸಿದೆನು. ನನ್ನ ಉದ್ದೇಶದಂತೆಯೇ ಆತನು ಕೋಪಗೊಂಡು ನನ್ನನ್ನೂ, ಆತನ ಹೆಂಡತಿಯನ್ನೂ ಶಪಿಸಿದನು. ಇದರಿಂದ ಆತನ ತಪಸ್ಸೆಲ್ಲವೂ ಕೆಟ್ಟು ಹೋಯಿತು. ಎಲೈ ದೇವತೆಗಳೆ! ನಿಮ್ಮ ಕ್ಷೇಮಕ್ಕಾಗಿ ಪ್ರಯತ್ನಪಟ್ಟ ನನಗೆ ಆತನ ಶಾಪದಿಂದ ಬೀಜಗಳೆರಡೂ ಬಿದ್ದುಹೋದುವು. ನಿಮಗಾಗಿ ನನಗೆ ಉಂಟಾಗಿರುವ ಈ ದುರವಸ್ಥೆಯನ್ನು ತಪ್ಪಿಸುವುದಕ್ಕೆ ತಕ್ಕ ಉಪಾಯವನ್ನು ನೀವೇ ಯೋಚಿಸಬೇಕು" ಎಂದನು.

ಇದನ್ನು ಕೇಳಿ ದೇವತೆಗಳೆಲ್ಲರೂ ಅಲ್ಲಿಂದ ಹೊರಟು, ಪಿತೃದೇವತೆ ಗಳ ಬಳಿಗೆ ಬಂದು, ಅಲ್ಲಿ ಬೀಜಸಹಿತವಾಗಿದ್ದ ಒಂದು ಮೇಷವನ್ನು ನೋಡಿ, ಆ ಪಿತೃದೇವತೆಗಳನ್ನು ಕುರಿತು, "ಎಲೈ ಪಿತೃಗಳೆ! ಯಜ್ಞ ದಲ್ಲಿ ನಿಮ್ಮ ಭಾಗಕ್ಕೆ ಬರುವ ಈ ಟಗರು ವೃಷಣಸಹಿತವಾಗಿರುವು

ದಲ್ಲವೆ? ಈಗ ಇಂದ್ರನಿಗೆ ವೃಷಣಗಳಿಲ್ಲದಿರುವುದರಿಂದ ಈ ಮೇಷದ ವೃಷಣಗಳನ್ನು ಈಗಲೇ ಕಿತ್ತು ಇಂದ್ರನಿಗೆ ಕೊಡಿರಿ! ಇದು ಅಂಗಹೀನವಾಗುವುದೆಂದು ಅತೃಪ್ತಿಪಡಕೂಡದು. ಇನ್ನುಮೇಲೆ ಯಾವ ಮನುಷ್ಯರು ಮೇಷಗಳನ್ನು ವೃಷಣರಹಿತಗಳನ್ನಾಗಿ ಮಾಡಿ ಯಜ್ಞದಲ್ಲಿ ನಿಮಗೆ ಬಲಿಕೊಡುವರೋ, ಅವರಲ್ಲಿಯೇ ನೀವು ಹೆಚ್ಚು ತೃಪ್ತಿಯುಳ್ಳವರಾಗಿರಿ!" ಎಂದರು. ಆ ಪಿತೃದೇವತೆಗಳು ಅದರಂತೆಯೇ ಆ ಮೇಷದ ವೃಷಣಗಳನ್ನು ಕಿತ್ತು ಇಂದ್ರನಿಗೆ ಅಂಟಿಸಿದರು. ಎಲೈ ರಾಮನೆ! ಅದು ಮೊದಲುಗೊಂಡು ಪಿತೃದೇವತೆಗಳು ವೃಷಣವಿಲ್ಲದ ಮೇಷಗಳಿಂದಲೇ ತೃಪ್ತರಾಗಿ, ತಕ್ಕ ಫಲವನ್ನು ಕೊಡುತ್ತಿರುವರು. ಆಗಿನಿಂದಲೇ ಇಂದ್ರನಿಗೂ ಮೇಷವೃಷಣನೆಂದು ಹೆಸರಾಯಿತು. ಇವೆಲ್ಲವೂ ಆ ಗೌತಮಮಹರ್ಷಿಯ ಪ್ರಭಾವದಿಂದಲೇ ಉಂಟಾಯಿತು. ವತ್ಸ ರಾಮನೆ! ನಿನ್ನ ಮಹಿಮೆಯು ಸಾಮಾನ್ಯವಲ್ಲ! ಬಾ! ಈ ಆಶ್ರಮಕ್ಕೆ ಹೋಗೋಣ. ನಿನ್ನಿಂದಲೇ ಆ ಅಹಲ್ಯೆಗೆ ಶಾಪವಿಮೋಚನವಾಗಬೇಕಾದುದರಿಂದ ಅವಳನ್ನು ಉದ್ಧರಿಸು" ಎಂದನು.

ಇದನ್ನು ಕೇಳಿ ರಾಮನು ಲಕ್ಷ್ಮಣನೊಡಗೂಡಿ, ವಿಶ್ವಾಮಿತ್ರನನ್ನು ಮುಂದಿಟ್ಟುಕೊಂಡು, ಆ ಆಶ್ರಮಕ್ಕೆ ಪ್ರವೇಶಿಸಿದೊಡನೆ, ಅಲ್ಲಿ ಅಹಲ್ಯೆಯನ್ನು ಕಂಡನು. ಈ ಮಹಾತ್ಮಳಾದರೋ ವಾಯುಭಕ್ಷಣವೇ ಮೊದಲಾದ ನಿಯಮದಿಂದ ತಪಸ್ಸುಮಾಡಿ, ಜಾಜ್ವಲ್ಯಮಾನವಾದ ತೇಜಸ್ಸುಳ್ಳವಳಾಗಿ, ದೇವತಿರ್ಯಙ್ಮನುಷ್ಯಾದಿ ಜಂತುಗಳ ಕಣ್ಣಿಗೆ ಬೀಳದೆ, ಬ್ರಹ್ಮನು ಬಹುಪ್ರಯತ್ನಪಟ್ಟು ಸೃಷ್ಟಿಸಿರುವನೋ ಎಂಬಂತೆ ಲೋಕಾತಿಶಯವಾದ ಸೌಂದರ್ಯದಿಂದ ಕೂಡಿ, ಮಾಯಾಸ್ವರೂಪವುಳ್ಳವಳಂತೆ ಆಶ್ಚರ್ಯವನ್ನುಂಟುಮಾಡುತ್ತಾ, ಮಂಜಿನಿಂದಲೂ, ಮೋಡಗಳಿಂದಲೂ ಮರೆಸಲ್ಪಟ್ಟ ಚಂದ್ರಕಲೆಯಂತೆಯೂ, ಹೊಗೆಯಿಂದ ಸುತ್ತಲ್ಪಟ್ಟ ಅಗ್ನಿಜ್ವಾಲೆಯಂತೆಯೂ, ನೀರಿನ ಮಧ್ಯದಲ್ಲಿ ಥಳಥಳಿಸುತ್ತಿರುವ ಸೂರ್ಯಬಿಂಬದಂತೆಯೂ, ಪತಿಶಾಪದಿಂದ ಯಾರ ಕಣ್ಣಿಗೂ ಬೀಳದಂತೆ ಇರುತ್ತಿದ್ದರೂ, ರಾಮನ ದರ್ಶನವಾದ ಕೂಡಲೇ ಶಾಪವಿಮೋಚನವನ್ನು ಹೊಂದಿ, ಅಲ್ಲಿದ್ದವರೆಲ್ಲರಿಗೂ ಗೋಚರಿಸಿದಳು. ಆಗ ರಾಮಲಕ್ಷ್ಮಣರಿಬ್ಬರೂ ಬಹುಭಕ್ತಿಯಿಂದ ಆಕೆಯ ಕಾಲನ್ನು ಹಿಡಿದು ನಮಸ್ಕರಿಸಿದರು. ಆ ಅಹಲ್ಯೆಯೂ ಕೂಡ ತನ್ನ ಪತಿಯಾದ ಗೌತಮನು ಹಿಂದೆ ಹೇಳಿದ್ದ ವಾಕ್ಯವನ್ನು ಸ್ಮರಿಸಿಕೊಂಡು, ಅವರನ್ನು ಬಹಳವಾಗಿ

ಸತ್ಕರಿಸಿ, ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಿದಳು. ಅದೆಲ್ಲವನ್ನೂ ರಾಮನು ಬಹು ಪ್ರೀತಿಯಿಂದ ಸ್ವೀಕರಿಸಿದನು. ದೇವದುಂದುಭಿ ಧ್ವನಿಗಳೊಡನೆ ಆಕಾಶದಿಂದ ಪುಷ್ಪವೃಷ್ಟಿಯುಂ ಸುರಿಯಿತು. ಗಂಧರ್ವರೂ, ಅಪ್ಸರಸ್ತ್ರೀಯರೂ ಬಂದು, ನೃತ್ಯಗೀತಾದಿಗಳಿಂದ ಸಂತೋಷಿಸುತ್ತಿದ್ದರು. ಅಹಲ್ಯೆಯು ತಪೋಬಲದಿಂದ ತನ್ನ ದೋಷವನ್ನು ಹೋಗಲಾಡಿಸಿಕೊಂಡು ಪರಿಶುದ್ಧಳಾದುದನ್ನೂ, ರಾಮನು ತನ್ನ ಆಶ್ರಮಕ್ಕೆ ಪ್ರವೇಶಿಸಿದುದನ್ನೂ ಗೌತಮಮಹರ್ಷಿಯು ಯೋಗದೃಷ್ಟಿಯಿಂದ ತಿಳಿದು ಒಡನೆಯೇ ಆ ಸ್ಥಳಕ್ಕೆ ಬಂದನು. ಆಗ ದೇವತೆಗಳೆಲ್ಲರೂ "ಭಲೆ ! ಭಲೆ !" ಎಂದು ಕೊಂಡಾಡುತ್ತಿದ್ದರು. ಆಗ ಆ ಅಹಲ್ಯಾಗೌತಮರಿಬ್ಬರೂ ಸಂತೋಷದಿಂದ ಸೇರಿ, ರಾಮನನ್ನು ಸತ್ಕರಿಸಿ, ಸುಖವಾಗಿ ತಪಸ್ಸು ಮಾಡುತ್ತಿದ್ದರು. ರಾಮನೂ ಕೂಡ ಅವರ ಸತ್ಕಾರಕ್ಕೆ ಬಹಳ ಸಂತೋಷಿಸಿ ಅಲ್ಲಿಂದ ಮುಂದೆ ಮಿಥಿಲಾಪಟ್ಟಣವನ್ನು ಕುರಿತು ಹೊರಟನು.

ಇಲ್ಲಿಗೆ ನಾಲ್ವತ್ತೊಂಭತ್ತನೆಯ ಸರ್ಗವು.

ರಾಮಾದಿಗಳು ಮಿಥಿಲಾಪಟ್ಟಣಕ್ಕೆ ಹೋದುದು. ಜನಕನು ವಿಶ್ವಾಮಿತ್ರನೊಡನೆ ಸಂಭಾಷಿಸುವುದು

ರಾಮನು ಲಕ್ಷ್ಮಣನೊಡನೆ ಈಶಾನ್ಯಾಭಿಮುಖವಾಗಿ ಹೊರಟು ವಿಶ್ವಾಮಿತ್ರನನ್ನು ಮುಂದಿಟ್ಟುಕೊಂಡು, ಜನಕನ ಯಜ್ಞಶಾಲೆಯನ್ನು ಸೇರಿ, ವಿಶ್ವಾಮಿತ್ರನನ್ನು ಕುರಿತು "ಎಲೈ ಮಹರ್ಷಿಯೆ! ಈ ಜನಕರಾಜನ ಯಜ್ಞಸಮೃದ್ಧಿಯು ಅತಿಶಯವಾಗಿರುವುದು. ನಾನಾದೇಶಗಳಿಂದ ವೇದಾಧ್ಯಯನಸಂಪನ್ನರಾದ ಅನೇಕ ಸಹಸ್ರ ಬ್ರಾಹ್ಮಣರು ಬಂದು ಸೇರಿರುವರು. ಎಲ್ಲೆಲ್ಲಿ ನೋಡಿದರೂ ನೂರಾರು ಬಂಡಿಗಳಲ್ಲಿ ತುಂಬಿದ ಯಜ್ಞಸಾಮಗ್ರಿಗಳಿಂದ ಶೋಭಿಸುತ್ತಿರುವ ಋಷಿಗಳ ನಿವೇಶನಗಳು ಕಾಣುತ್ತಿವೆ. ಇಲ್ಲಿ ನಮಗೆ ಅನುಕೂಲವಾದ ವಾಸಸ್ಥಳವು ಸಿಕ್ಕುವುದು ಹೇಗೆ? ಅದಕ್ಕಾಗಿ ಈಗಲೇ ತಾವು ತಕ್ಕ ಪ್ರಯತ್ನವನ್ನು ಮಾಡಬೇಕಲ್ಲವೆ?" ಎಂದನು.

ಈ ಮಾತನ್ನು ಕೇಳಿ, ವಿಶ್ವಾಮಿತ್ರನು, ವಿಶೇಷವಾಗಿ ಜನಗಳ ಗುಂಪಿಗೆ ಅವಕಾಶವಿಲ್ಲದಂತೆಯೂ, ಜಲಸಮೃದ್ಧಿಯಿರುವಂತೆಯೂ, ಒಂದು ಸ್ಥಳವನ್ನು

ಇವರಿಗಾಗಿ ಏರ್ಪಡಿಸಿಕೊಟ್ಟನು. ಹೀಗೆ ವಿಶ್ವಾಮಿತ್ರನು ಬಂದಿಳಿದಿರುವುದನ್ನು ಜನಕನು ಕೇಳಿ, ಪುರೋಹಿತನಾದ ಶತಾನಂದನೊಡಗೂಡಿ ಈ ವಿಶ್ವಾಮಿತ್ರನನ್ನು ಇದಿರುಗೊಂಡು ಬಂದನು. ಮಹಾತ್ಮರಾದ ಅನೇಕ ಋತ್ವಿಕ್ಕುಗಳು ಅರ್ಘ್ಯವನ್ನು ತಂದು ಮಂತ್ರವತ್ತಾಗಿ ವಿಶ್ವಾಮಿತ್ರನಿಗೆ ಸಮರ್ಪಿಸಿದರು. ವಿಶ್ವಾಮಿತ್ರನು ಈ ಸತ್ಕಾರವನ್ನು ಕೈಕೊಂಡು, ಆ ಜನಕನ ಕ್ಷೇಮಲಾಭಗಳನ್ನೂ, ಯಜ್ಞದ ಅನುಕೂಲ್ಯಗಳನ್ನೂ ವಿಚಾರಿಸಿ, ಶತಾನಂದರೇ ಮೊದಲಾದ ಪುರೋಹಿತರುಗಳನ್ನೂ, ಋತ್ವಿಕ್ಕುಗಳನ್ನೂ ಕ್ರಮವಾಗಿ ಕುಶಲಪ್ರಶ್ನೆಮಾಡಿ, ಅವರೆಲ್ಲರೊಡನೆ ಕೂಡಿ ಸಂತೋಷದಿಂದಿದ್ದನು. ಆಮೇಲೆ ಜನಕನು ವಿಶ್ವಾಮಿತ್ರನಿಗೆ ಕೈಮುಗಿದು "ಸ್ವಾಮಿ! ಋಷಿಗಳೊಡನೆ ಈ ಪೀಠವನ್ನಲಂಕರಿಸಬೇಕು." ಎಂದು ಪ್ರಾರ್ಥಿಸಲು, ಅದರಂತೆಯೇ ವಿಶ್ವಾಮಿತ್ರನು ಪೀಠವನ್ನಲಂಕರಿಸಿದಮೇಲೆ, ಶತಾನಂದನೂ, ಋತ್ವಿಕ್ಕುಗಳೂ, ಜನಕಮಹಾರಾಜನೂ, ಈ ರಾಮಲಕ್ಷ್ಮಣರೂ ಕ್ರಮವಾಗಿ ತಕ್ಕತಕ್ಕ ಸ್ಥಾನಗಳಲ್ಲಿ ಕುಳಿತುಕೊಂಡರು.

ಎಲ್ಲರೂ ಹೀಗೆ ಕುಳಿತುಕೊಂಡಿರುವಾಗ ಜನಕನು ಬಹುವಿನಯದಿಂದ ವಿಶ್ವಾಮಿತ್ರನನ್ನು ಕುರಿತು "ಎಲೈ, ಮಹಾತ್ಮನೆ! ಈಗಲೀಗ ನನ್ನ ಯಜ್ಞಸಮೃದ್ಧಿಯು ದೇವತೆಗಳಿಂದ ಸಾರ್ಥಕವಾಗಿ ಮಾಡಲ್ಪಟ್ಟಿತು. ಈಗಲೀಗ ನಾನು ಧನ್ಯನಾದೆನು. ಎಲೈ ಋಷಿಶ್ರೇಷ್ಠನೇ! ಮಹಾತ್ಮನಾದ ನೀನು ಈ ಮಹರ್ಷಿಗಳೊಡಗೂಡಿ ನನ್ನ ಯಜ್ಞಮಂಟಪವನ್ನು ಅಲಂಕರಿಸಿರುವಾಗ ನನ್ನ ಭಾಗ್ಯಕ್ಕೆ ಎಣೆಯಾವುದುಂಟು? ಮಹಾಬುದ್ಧಿಶಾಲಿಗಳಾದ ಈ ಋತ್ವಿಕ್ಕುಗಳೆಲ್ಲರೂ ಈ ಯಾಗಕ್ಕೆ ಇನ್ನು ಹನ್ನೆರಡು ದಿವಸಗಳು ಮಾತ್ರವೇ ಉಳಿದಿರುವುದೆಂದು ಹೇಳುತ್ತಿರುವರು. ಇದು ಪೂರ್ಣವಾದಕೂಡಲೆ ಸಮಸ್ತ ದೇವತೆಗಳೂ ಪ್ರತ್ಯಕ್ಷವಾಗಿ ಇಲ್ಲಿಗೆ ಬಂದು, ತಮ್ಮ ತಮ್ಮ ಹವಿರ್ಭಾಗಗಳನ್ನು ಕೈಕೊಳ್ಳುವರಾದುದರಿಂದ, ಅದುವರೆಗೆ ತಾವು ಇಲ್ಲಿಯೇ ಇದ್ದರೆ, ಆ ಸಮಸ್ತ ದೇವತೆಗಳನ್ನೂ ಪ್ರತ್ಯಕ್ಷದಲ್ಲಿ ನೋಡಬಹುದು" ಎಂದು ಹೇಳಿ, ಆ ವಿಶ್ವಾಮಿತ್ರನ ಪಕ್ಕದಲ್ಲಿದ್ದ ರಾಜಕುಮಾರರಿಬ್ಬರನ್ನೂ ನೋಡಿದನು. ಆಗ ಜನಕನಿಗೆ ಮುಖದಲ್ಲಿ ಸಂತೋಷವುಕ್ಕುತ್ತಿರಲು, ವಿಶ್ವಾಮಿತ್ರನನ್ನು ನೋಡಿ ಕೈಮುಗಿದು, "ಎಲೈ ಮಹಾತ್ಮನೆ! ನಿನಗೆ ಮಂಗಳವಾಗಲಿ ಈ ಮಕ್ಕಳಾರು? ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳವರಂತೆ ಕಾಣುವರು. ಆನೆಯಂತೆ

ಗಂಭೀರವಾಗಿಯೂ, ಸಿಂಹದಂತೆ ಧೀರರಾಗಿಯೂ ಇರುವ ನಡೆಯುಳ್ಳವರು. ಹುಲಿಯಂತೆಯೂ, ವೃಷಭದಂತೆಯೂ, ತೋರುವ ಮೈಕಟ್ಟುಳ್ಳವರು. ಇವರ ಕಣ್ಣುಗಳು ತಾವರೆಯ ಎಸಳುಗಳಂತೆ ವಿಸ್ತಾರವಾಗಿರುವುವು. ರೂಪದಲ್ಲಿ ಅಶ್ವಿನೀದೇವತೆಗಳಂತೆ ಕಾಣುವರು. ದೇವತೆಗಳು ವಿನೋದಕ್ಕಾಗಿ ಈ ಭೂಮಿಗೆ ಬಂದಿರುವರೋ ಎಂಬ ಸಂದೇಹವನ್ನುಂಟುಮಾಡುತ್ತಿರುವರು. ಸುಕುಮಾರರಾದ ಈ ಬಾಲಕರು, ಬಿಲ್ಲು, ಬತ್ತಳಿಕೆ, ಕತ್ತಿಮುಂತಾದ ಆಯುಧಗಳನ್ನು ಧರಿಸಿ, ಪಾದಚಾರಿಗಳಾಗಿ ಇಷ್ಟುದೂರ ಬರುವುದಕ್ಕೆ ಕಾರಣವೇನು? ಇವರು ಯಾರ ಮಕ್ಕಳು? ಚಂದ್ರಸೂರ್ಯರು ಆಕಾಶವನ್ನು ಹೇಗೋ ಹಾಗೆ ಇವರು ಈ ಸ್ಥಳವೆಲ್ಲವನ್ನೂ ತಮ್ಮ ದೇಹಕಾಂತಿಯಿಂದ ಬೆಳಗುತ್ತಿರುವರು. ಇವರಿಬ್ಬರ ಆಕಾರವೂ, ರೂಪವೂ, ಪ್ರಮಾಣವೂ, ಇಂಗಿತಗಳೂ, ಅವಳಿಮಕ್ಕಳಿಗಿರುವಂತೆ ಒಂದೇವಿಧವಾಗಿರುವುದು. ಇವರ ವಿಷಯವನ್ನು ನನಗೆ ತಿಳಿಸಬೇಕು" ಎಂದು ಕೇಳಲು, ವಿಶ್ವಾಮಿತ್ರನು ಅವರ ಚರಿತ್ರಗಳೆಲ್ಲವನ್ನೂ ಆಮೂಲಾಗ್ರವಾಗಿ ತಿಳಿಸುತ್ತಾ, ತಾನು ದಶರಥನ ಬಳಿಗೆ ಹೋಗಿ ಈ ಬಾಲಕರನ್ನು ಕರೆತಂದು ರಾಕ್ಷಸರನ್ನು ಕೊಲ್ಲಿಸಿದುದು ಮೊದಲುಗೊಂಡು ಅಹಲ್ಯೆಯ ಶಾಪವಿಮೋಚನದವರೆಗೂ ನಡೆದ ಅದ್ಭುತವೃತ್ತಾಂತಗಳೆಲ್ಲವನ್ನೂ ಹೇಳಿದಮೇಲೆ, ಮುಂದೆ ಆ ಜನಕರಾಜನ ಪಟ್ಟಣದಲ್ಲಿರುವ ದೊಡ್ಡ ಧನುಸ್ಸಿನ ಮೂಲಕವಾಗಿ ಇವರ ಬಲಾಬಲಗಳನ್ನು ಪರೀಕ್ಷಿಸಬೇಕೆಂಬ ಇಚ್ಛೆಯಿಂದಲೇ ಅಲ್ಲಿಗೆ ಬಂದುದಾಗಿಯೂ ಸೂಚಿಸಿ ಸುಮ್ಮನಾದನು.

ಇಲ್ಲಿಗೆ ಐವತ್ತನೆಯ ಸರ್ಗವು

ವಿಶ್ವಾಮಿತ್ರನ ಚರಿತ್ರವು

ಆ ವಿಶ್ವಾಮಿತ್ರನ ವಾಕ್ಯವನ್ನು ಕೇಳಿದಮೇಲೆ, ಅಲ್ಲಿ ಗೌತಮನ ಹಿರಿಯಮಗನಾಗಿ ಮಹಾತಪಸ್ವಿಯಾಗಿದ್ದ ಶತಾನಂದನು, ತನ್ನ ತಾಯಿಯನ್ನು ಶಾಪದಿಂದ ಉದ್ಧರಿಸಿದ ರಾಮನ ಪ್ರಭಾವಕ್ಕೆ ಆಶ್ಚರ್ಯಗೊಂಡು ಮಿತಿಮೀರಿದ ಸಂತೋಷದಿಂದ ಉಬ್ಬಿದವನಾಗಿ, ವಿಶ್ವಾಮಿತ್ರನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವನು. "ಮಹರ್ಷಿಯೇ! ದೀರ್ಘ

ತಪಸ್ಸನ್ನು ಮಾಡುತ್ತಿದ್ದ ನನ್ನ ತಾಯಿಯನ್ನು ಇವರಿಗೆ ನೀನೇ ತೋರಿಸಿದೆಯಾ? ಮಹಾಮಹಿಮೆಯುಳ್ಳವಳಾಗಿ, ಯಶಸ್ವಿನಿಯಾದ ಆಕೆಯು, ಸಮಸ್ತ ಪ್ರಾಣಿಗಳಿಂದಲೂ ಪೂಜಿಸಲ್ಪಡತಕ್ಕ ಈ ರಾಮನಿಗೆ ಯಥೋಚಿತವಾದ ಸತ್ಕಾರಗಳನ್ನು ಮಾಡಿದಳೆ? ಪೂರ್ವದಲ್ಲಿ ದುರ್ದೈವವಶದಿಂದ ನನ್ನ ತಾಯಿಗೆ ಉಂಟಾದ ದುರವಸ್ಥೆಗಳನ್ನು ಇವರಿಗೆ ವಿವರವಾಗಿ ತಿಳಿಸಿದೆಯಾ? ಎಲೈ ಕೌಶಿಕನೆ! ನನ್ನ ತಾಯಿಯು ಈ ರಾಮನ ಅನುಗ್ರಹದಿಂದ ಶಾಪವಿಮೋಚನವನ್ನು ಹೊಂದಿದಮೇಲೆ ನನ್ನ ತಂದೆಯೊಡನೆ ಸೇರಿದಳೆ? ನನ್ನ ತಂದೆಯೂ ಈತನಿಗೆ ತಕ್ಕ ಸತ್ಕಾರಗಳನ್ನು ಮಾಡಿದನೆ? ಈ ರಾಮನೂ ನನ್ನ ತಂದೆಯಾದ ಗೌತಮನನ್ನು ಯಥೋಚಿತವಾದ ಗೌರವದಿಂದ ಸತ್ಕರಿಸಿದನೆ!" ಎಂದು ಬಹಳ ಆದರದಿಂದ ಕೇಳಲು, ಅದಕ್ಕಾ ವಿಶ್ವಾಮಿತ್ರನು ಆತನನ್ನು ಕುರಿತು, "ಎಲೈ ಮುನಿಶ್ರೇಷ್ಠನೆ! ಯಾವ ವಿಷಯದಲ್ಲಿಯೂ ಕೊರತೆಯಿಲ್ಲ. ಯಾವುದನ್ನು ಹೇಗೆ ನಡೆಸಬೇಕೋ ಅವೆಲ್ಲವನ್ನೂ ಲೋಪವಿಲ್ಲದೆ ಕ್ರಮವಾಗಿಯೇ ನಡೆಸಿರುವೆನು. ರೇಣುಕೆಯು ಜಮದಗ್ನಿಯನ್ನು ಸೇರಿದಂತೆಯೇ ನಿನ್ನ ತಾಯಿಯೂ ಗೌತಮನನ್ನು ಸೇರಿರುವಳು" ಎಂದನು.

ಇದನ್ನು ಕೇಳಿ ಶತಾನಂದನು ಸಂತೋಷದಿಂದ ರಾಮನನ್ನು ನೋಡಿ, ಎಲೈ ನರಶ್ರೇಷ್ಠನೇ! ನಿನಗೆ ಸುಖಾಗಮನವುಂಟಾಗಲಿ. ಮಹಾತ್ಮನಾದ ಈ ವಿಶ್ವಾಮಿತ್ರನೊಡನೆ ಭಾಗ್ಯವಶದಿಂದ ಇಲ್ಲಿಗೆ ಬಂದಿರುವೆ. ಈತನ ತಪಃಕರ್ಮಗಳೂ, ಈತನ ತೇಜಸ್ಸೂ, ಇಷ್ಟೆಂದು ಯಾರಿಂದಲೂ ಊಹಿಸಲು ಸಾಧ್ಯವಲ್ಲ. ಬ್ರಹ್ಮರ್ಷಿಗಳಲ್ಲಿ ಈತನಿಗಿಂತ ಮೇಲಾದವರೊಬ್ಬರೂ ಇಲ್ಲ. ನಿನ್ನ ಸಮಸ್ತ ಶ್ರೇಯಸ್ಸುಗಳಿಗೂ ಈತನೇ ಮೂಲವೆಂದು ತಿಳಿ. ಮಹಾತಪಸ್ವಿಯಾದ ಈ ವಿಶ್ವಾಮಿತ್ರನ ರಕ್ಷಣೆಗೆ ಒಳಪಟ್ಟಿರುವ ನಿನ್ನ ಭಾಗ್ಯಕ್ಕೆ ಎಣೆಯೇ ಇಲ್ಲವು. ಎಲೈ ರಾಮನೆ! ಈ ವಿಶ್ವಾಮಿತ್ರನ ಮಹಿಮೆಯನ್ನು ಕ್ರಮವಾಗಿ ತಿಳಿಸುವೆನು ಕೇಳು. ಈತನು ಮೊದಲು ರಾಜನಾಗಿದ್ದನು. ಎಲ್ಲಾ ಧರ್ಮಗಳನ್ನೂ ತಿಳಿದು ಶಸ್ತ್ರಾಸ್ತ್ರವಿದ್ಯೆಗಳಲ್ಲಿ ನಿಪುಣನಾಗಿ, ಪ್ರಜೆಗಳ ಕ್ಷೇಮವನ್ನೇ ಚಿಂತಿಸುತ್ತ ಬಹುಕಾಲದವರೆಗೆ ರಾಜ್ಯವನ್ನಾಳುತ್ತಿದ್ದನು. ಈತನ ವಂಶವು ಸಾಕ್ಷಾತ್ ಬ್ರಹ್ಮನಿಂದಲೇ ಹುಟ್ಟಿದುದು. ಬ್ರಹ್ಮನಿಂದ ಕುಶನೆಂಬ ರಾಜನು ಹುಟ್ಟಿದನು. ಆತನಿಗೆ ಮಹಾಬಲಶಾಲಿಯಾಗಿ, ಪರಮಧಾರ್ಮಿಕನಾದ ಕುಶನಾಭನೆಂಬವನು ಹುಟ್ಟಿದನು. ಆತನಿಂದ ಗಾಧಿಯೆಂಬ

ವನು ಹುಟ್ಟಿದನು. ಆ ಗಾಧಿಯ ಪುತ್ರನೇ ಈ ಮಹಾತೇಜಸ್ವಿಯಾದ ವಿಶ್ವಾಮಿತ್ರನು. ಈತನು ಅನೇಕ ಸಂವತ್ಸರಗಳವರೆಗೆ ಧರ್ಮದಿಂದ ರಾಜ್ಯವನ್ನಾಳುತ್ತಿದ್ದು, ಒಂದಾನೊಂದು ಕಾಲದಲ್ಲಿ ಅಕ್ಷೌಹಿಣೀ ಸೈನ್ಯದೊಡನೆ ಕೂಡಿ, ಭೂಮಿಯನ್ನೆಲ್ಲಾ ತಿರುಗಲಾರಂಭಿಸಿದನು. ಹೀಗೆ ಅನೇಕ ದೇಶಗಳನ್ನೂ, ಅವುಗಳೊಳಗಿನ ಮುಖ್ಯಪಟ್ಟಣಗಳನ್ನೂ, ಅನೇಕ ನದಿಗಳನ್ನೂ, ಬೆಟ್ಟಗಳನ್ನೂ, ಋಷ್ಯಾಶ್ರಮಗಳನ್ನೂ ನೋಡುತ್ತಾ, ಕೊನೆಗೆ ವಸಿಷ್ಠರ ಆಶ್ರಮಕ್ಕೆ ಬಂದನು. ಆ ಆಶ್ರಮವಾದರೋ ನಾನಾವೃಕ್ಷಗಳಿಂದಲೂ, ಅನೇಕ ಮೃಗಜಾತಿಗಳಿಂದಲೂ ಶೋಭಿತವಾಗಿ, ದೇವದಾನವ ಗಂಧರ್ವ ಸಿದ್ಧ ಚಾರಣಾದಿಗಳಿಂದ ಸೇವಿಸಲ್ಪಟ್ಟು ಅತಿಮನೋಹರವಾಗಿತ್ತು. ಎಲ್ಲೆಲ್ಲಿ ನೋಡಿದರೂ ಬ್ರಹ್ಮರ್ಷಿಗಳೂ, ದೇವರ್ಷಿಗಳೂ ತುಂಬಿದ್ದರು. ಆ ಮಹಾತ್ಮರೆಲ್ಲರೂ ಅಗ್ನಿಯಂತೆ ತೇಜಸ್ಸುಳ್ಳವರಾಗಿ ತಪಸ್ಸು ಮಾಡುತ್ತಿದ್ದರು. ಇಲ್ಲಿ ತಪಸ್ಸಿದ್ಧಿಯನ್ನು ಪಡೆದು, ಕೆಲವರು ಜಲಾಹಾರವನ್ನೂ, ಮತ್ತೆ ಕೆಲವರು ವಾಯುಭಕ್ಷಣವನ್ನೂ ಮಾಡುತ್ತಿದ್ದರು. ಇನ್ನು ಕೆಲವರು ಗೆಡ್ಡೆ, ಗೆಣಸು, ಎಲೆ, ಹಣ್ಣು ಮುಂತಾದುವುಗಳಿಂದಲೇ ಪ್ರಾಣಧಾರಣೆಯನ್ನು ಮಾಡಿಕೊಂಡು ಜಿತೇಂದ್ರಿಯರಾಗಿ ಕಾಮಕ್ರೋಧಗಳಿಲ್ಲದೆ ತಾಳ್ಮೆಯುಳ್ಳವರಾಗಿದ್ದರು. ಅಲ್ಲಲ್ಲಿ ಜಪಹೋಮಪರಾಯಣರಾಗಿದ್ದ [1]ವಾಲಖಿಲ್ಯರೂ ವೈಖಾನಸರೂ, ತುಂಬಿದ್ದರು. ಹೀಗೆ ಬೇರೊಂದು ಬ್ರಹ್ಮಲೋಕವೋ ಎಂಬಂತೆ ಪ್ರಕಾಶಿಸುತ್ತಿದ್ದ ಆ ವಸಿಷ್ಠಾಶ್ರಮವನ್ನು ಮಹಾಬಲಶಾಲಿಯಾದ ರಾಜತೇಜಸ್ಸುಳ್ಳ ವಿಶ್ವಾಮಿತ್ರನು ಕಂಡನು.

ಇಲ್ಲಿಗೆ ಐವತ್ತೊಂದನೆಯ ಸರ್ಗವು.

---

1. ಬ್ರಹ್ಮನ ಬಾಲದಿಂದ ಹುಟ್ಟಿದವರು ವಾಲಖಿಲ್ಯರೆಂದೂ, ಉಗುರಿನಲ್ಲಿ ಹುಟ್ಟಿದವರು ವೈಖಾನಸರೆಂದೂ ಹೇಳಲ್ಪಡುವರು. "ಯೇ ನಖಾಸ್ತೇ ವೈಖಾನಸಾಃ, ಯೇ ವಾಲಾಸ್ತೇ ವಾಲಖಿಲ್ಯಾಃ" ಎಂದು ಶ್ರುತಿಯುಂಟು.

ವಸಿಷ್ಠನು ತನ್ನ ಹೋಮಧೇನುವಿನ ಮೂಲಕವಾಗಿ ವಿಶ್ವಾಮಿತ್ರನಿಗೆ ಔತಣವನ್ನು ಮಾಡಿಸಿದುದು

ಆ ಪುಣ್ಯಾಶ್ರಮವನ್ನು ಕಂಡೊಡನೆ ಮಹಾಬಲಶಾಲಿಯಾದ ವಿಶ್ವಾಮಿತ್ರನು ಸಂತೋಷಗೊಂಡು, ವಿನಯದಿಂದ ಬಂದು ಋಷಿಗೆ ನಮಸ್ಕರಿಸಿದನು. ಆಗ ವಸಿಷ್ಠನು ಈತನ ಸುಖಾಗಮನವನ್ನು ಕೇಳಿ ಆಸನವನ್ನು ಕೊಟ್ಟು ಕುಳ್ಳಿರುವಂತೆ ಹೇಳಿ, ಗೆಡ್ಡೆಗೆಣಸುಗಳನ್ನೂ, ಬಗೆಬಗೆಯಾದ ಹಣ್ಣುಗಳನ್ನೂ ತಂದುಕೊಟ್ಟು ಉಪಚರಿಸಿದನು. ಇದರಿಂದ ವಿಶ್ವಾಮಿತ್ರನು ಬಹಳ ಸಂತುಷ್ಟನಾಗಿ ವಸಿಷ್ಠನನ್ನು ನೋಡಿ "ಎಲೈ ಮಹರ್ಷಿಯೆ! ನಿನ್ನ ತಪಸ್ಸೂ, ಅಗ್ನಿಹೋತ್ರ ಮುಂತಾದ ಕರ್ಮಗಳೆಲ್ಲವೂ ನಿರ್ವಿಘ್ನವಾಗಿ ನಡೆಯುತ್ತಿವೆಯೆ? ಶಿಷ್ಯರೆಲ್ಲರೂ ಕ್ಷೇಮವೆ? ನಿನ್ನ ಆಶ್ರಮವೃಕ್ಷಗಳೆಲ್ಲವೂ ಫಲಭರಿತಗಳಾಗಿವೆಯೆ?" ಎಂದು ಕೇಳಲು, ವಸಿಷ್ಠನು ಆತನಿಗೆ ತನ್ನ ಕ್ಷೇಮಲಾಭಗಳೆಲ್ಲವನ್ನೂ ಹೇಳಿ, ಅವನು ಸುಖಾಸೀನನಾಗಿದ್ದಮೇಲೆ, ಆತನನ್ನು ಕುರಿತು ತಾನೂ ಕುಶಲಪ್ರಶ್ನೆಯನ್ನು ಮಾಡಲಾರಂಭಿಸಿದನು. "ಎಲೈ ರಾಜನೆ! ನಿನಗೆ ಕ್ಷೇಮವೆ? [1]ಕ್ಷತ್ರಧರ್ಮವನ್ನನುಸರಿಸಿ ನಿನ್ನ ಪ್ರಜೆಗಳೆಲ್ಲರನ್ನೂ ಕ್ಷೇಮದಿಂದ ಕಾಪಾಡುವೆಯಾ? ನಿನ್ನ ಭೃತ್ಯರನ್ನು ಚೆನ್ನಾಗಿ ಪೋಷಿಸುತ್ತಿರುವೆಯಾ? ಅವರೆಲ್ಲರೂ ನಿನಗೆ ವಿಧೇಯರಾಗಿರುವರೆ? ನಿನ್ನ ಶತ್ರುಗಳೆಲ್ಲರನ್ನೂ ಜಯಿಸಿ ವಶಪಡಿಸಿಕೊಂಡಿರುವೆಯಾ? ನಿನ್ನ ಸೈನ್ಯಗಳೂ, ಬೊಕ್ಕಸಗಳೂ, ಮಿತ್ರರೂ, ಇನ್ನೂ ಉಳಿದ ರಾಜ್ಯಾಂಗಗಳೆಲ್ಲವೂ, ಕ್ರಮವಾಗಿರುವುವೆ? ನಿನ್ನ ಪುತ್ರಪೌತ್ರಾದಿಬಂಧುವರ್ಗವೆಲ್ಲವೂ ಕ್ಷೇಮವೆ?" ಎಂದು ಕೇಳಲು, ಮಹಾತೇಜಸ್ವಿಯಾದ ವಿಶ್ವಾಮಿತ್ರನೂ ಕೂಡ, ವಿನಯದಿಂದ ಆ ವಸಿಷ್ಠನನ್ನು ಕುರಿತು "ಎಲೈ ಮಹಾತ್ಮನೆ! ನಿನ್ನ ಅನುಗ್ರಹದಿಂದ ಎಲ್ಲರಿಗೂ ಕ್ಷೇಮವು" ಎಂದು ಉತ್ತರಕೊಟ್ಟನು. ಹೀಗೆ ಇವರಿಬ್ಬರೂ

---

1. "ನ್ಯಾಯೇನಾರ್ಜನಮರ್ಥಸ್ಯ ವರ್ಧನಂ ಪಾಲನಂ ತಥಾ। ಸತ್ಪಾತ್ರೇ ಪ್ರತಿಪತ್ತಿಶ್ಚ ರಾಜವೃತ್ತಂ ಚತುರ್ವಿಧಮ್"॥ ಎಂಬ ನ್ಯಾಯದಿಂದ, ಹಣವನ್ನು ಸಂಪಾದಿಸುವುದು, ಅದನ್ನು ಹೆಚ್ಚಿಸುವುದು, ಅದನ್ನು ಕಾಪಾಡುವುದು, ಸತ್ಪಾತ್ರದಲ್ಲಿ ವಿನಿಯೋಗಿಸುವುದು, ಇವು ನಾಲ್ಕೂ ರಾಜಧರ್ಮಗಳೆನಿಸುವುವು.

ಬಹಳ ಸಂತೋಷದಿಂದ ಕುಶಲಪ್ರಶ್ನೆಯನ್ನು ಕೇಳಿ ಬೇರೆ ಬೇರೆ ಮಾತುಗಳನ್ನಾಡುತ್ತ ಕುಳಿತಿದ್ದರು.

ಈ ಮಾತುಗಳೆಲ್ಲವೂ ಮುಗಿದ ಮೇಲೆ ವಸಿಷ್ಠನು ವಿಶ್ವಾಮಿತ್ರನನ್ನು ಕುರಿತು, ನಗುತ್ತ, "ಎಲೈ ರಾಜನೆ! ಈ ನನ್ನ ಆಶ್ರಮಕ್ಕೆ ಬಂದಿರುವ ನಿನಗೂ, ನಿನ್ನ ಈ ದೊಡ್ಡ ಸೈನ್ಯಕ್ಕೂ, ಒಳ್ಳೇ ಔತಣವನ್ನು ಮಾಡಿಸಬೇಕೆಂದಿರುವೆನು. ಅದನ್ನು ಪ್ರೀತಿಯಿಂದ ನೀನು ಅಂಗೀಕರಿಸಬೇಕು. ನೀನು ನನ್ನ ಈ ಪ್ರಾರ್ಥನೆಯನ್ನು ತಿರಸ್ಕರಿಸಕೂಡದು. ಅತಿಥಿಗಳಾಗಿ ಬಂದ ನಿನ್ನಂತಹ ರಾಜರನ್ನು ನಾವು ಪ್ರಯತ್ನಪೂರ್ವಕವಾಗಿ ಸತ್ಕರಿಸಿ ಸಂತೋಷಪಡಿಸಬೇಕಾದುದೇ ಧರ್ಮವು" ಎಂದನು. ಅದಕ್ಕೆ ಬುದ್ಧಿಶಾಲಿಯಾದ ವಿಶ್ವಾಮಿತ್ರನು ನಿನಗೆ ಅಷ್ಟು ಶ್ರಮವೇಕೆ? ಈ ನಿನ್ನ ಪ್ರಿಯವಾಕ್ಯದಿಂದಲೇ ನಮಗೆ ಸಮಸ್ತ ಸತ್ಕಾರಗಳನ್ನೂ ನೀನು ಮಾಡಿದಹಾಗಾಯಿತು. ಇದಕ್ಕಿಂತಲೂ ನೀನು ಮಾಡಬೇಕಾದುದೇನು! ನಿನ್ನ ಆಶ್ರಮದಲ್ಲಿರುವ ಈ ಫಲಮೂಲಗಳೂ, ನೀನು ಕೊಟ್ಟ ಅರ್ಘ್ಯಪಾದ್ಯಾಚಮನೀಯಗಳೂ, ನಿನ್ನ ದರ್ಶನವೂ ನಮಗೆ ಲಭಿಸಿದುದೇ ಸಾಕು! ಇದಕ್ಕಿಂತ ಬೇರೆ ಆತಿಥ್ಯವೇನಿರುವುದು? ನಾವು ಹೋಗಿ ಬರುವೆವು. ನಮ್ಮಲ್ಲಿ ಸಂಪೂರ್ಣವಾದ ಪ್ರೀತಿಯನ್ನಿಟ್ಟಿರು! ಇದೋ ನಮಸ್ಕರಿಸುವೆವು. ಅಪ್ಪಣೆಯನ್ನು ಕೊಡು" ಎಂದನು. ವಸಿಷ್ಠನು ಬಾರಿಬಾರಿಗೂ ವಿಶ್ವಾಮಿತ್ರನನ್ನು ನಿರ್ಬಂಧಿಸುತ್ತಿರಲು ವಿಶ್ವಾಮಿತ್ರನು ಹಾಗೆಯೇ ಆಗಲೆಂದು ಒಪ್ಪಿಕೊಂಡು "ಎಲೈ ಮಹಾಮುನಿಯೆ! ಇನ್ನು ನಿನ್ನ ಪ್ರೀತಿಯಿದ್ದಂತೆ ನಡೆಸಬಹುದು" ಎಂದನು. ಆಗ ಧರ್ಮಾತ್ಮನಾದ ವಸಿಷ್ಠನು ಬಹಳ ಸಂತೋಷಪಟ್ಟು, ತನ್ನ ಹೋಮಧೇನುವನ್ನು ಕುರಿತು, "ಎಲೈ ಶಬಲೆ! ಬೇಗ ಬಾ! ಚತುರಂಗಬಲದೊಡಗೂಡಿ ಬಂದಿರುವ ಈ ರಾಜರ್ಷಿಗೆ ತಕ್ಕ ಮೃಷ್ಟಾನ್ನದ ಔತಣವನ್ನು ಮಾಡಬೇಕೆಂದಿರುವೆನು. ಅದಕ್ಕೆ ತಕ್ಕ ಸಾಮಗ್ರಿಗಳೆಲ್ಲವನ್ನೂ ಸಿದ್ಧಪಡಿಸಬೇಕು. ಈತನಿಗಾಗಲಿ ಈತನ ಸೈನ್ಯಕ್ಕಾಗಲಿ ಯಾವ ಯಾವ ರೀತಿಯ ಆಹಾರಗಳು ಬೇಕೋ, ಆಯಾ ಆಹಾರಗಳನ್ನು ಷಡ್ರಸೋಪೇತವಾಗಿ ಅವರವರ ಇಷ್ಟದಂತೆ ಒದಗಿಸಿಕೊಡಬೇಕು. ಎಲೈ ಹೋಮಧೇನುವೆ! ರಸಾಯನಗಳನ್ನೂ, ಭಕ್ಷ್ಯ, ಭೋಜ್ಯ, ಲೇಹ್ಯ, ಪಾನೀಯಗಳೇ ಮೊದಲಾದ ಬಗೆಬಗೆಯ ಆಹಾರಗಳನ್ನೂ, ಉತ್ಕೃಷ್ಟವಾದ ಶಾಲ್ಯನ್ನರಾಶಿಗಳನ್ನೂ

ಈಗಲೇ ಒದಗಿಸಿಡು. ಯಾವ ಭಾಗದಲ್ಲಿಯೂ ಲೋಪವಿಲ್ಲದಂತೆ ಈ ರಾಜನನ್ನೂ, ಇವನ ಸೈನ್ಯಗಳನ್ನೂ ತೃಪ್ತಿಪಡಿಸಿ ಕಳುಹಿಸಬೇಕು" ಎಂದನು.

ಇಲ್ಲಿಗೆ ಐವತ್ತೆರಡನೆಯ ಸರ್ಗವು.

ವಿಶ್ವಾಮಿತ್ರನು ಹೋಮಧೇನುವನ್ನು ತನಗೆ ಕೊಡೆಂದು ವಸಿಷ್ಠನನ್ನು ಕೇಳಿದುದು.

ಹೀಗೆ ವಸಿಷ್ಠನು ಕಾಮಧೇನುವನ್ನು ಕುರಿತು ಹೇಳಿದೊಡನೆಯೇ, ಅದು ಯಾರು ಯಾರಿಗೆ ಯಾವು ಯಾವುದು ಇಷ್ಟವೋ ಆಗಾಗಲೇ ಅದನ್ನು ಒದಗಿಸಿಕೊಡಲಾರಂಭಿಸಿತು. ಕಬ್ಬು, ಜೇನು, ಅರಳು, ಉತ್ಕೃಷ್ಟವಾದ ಮದ್ಯಗಳು, ಮೇಲಾದ ಭಕ್ಷ್ಯಭೋಜ್ಯಪಾನೀಯಗಳು, ಬೆಟ್ಟದಂತೆ ದೊಡ್ಡದಾದ ಬಿಸಿಬಿಸಿಯಾದ ಅನ್ನದ ರಾಶಿಗಳು, ತೊವ್ವೆಗಳು, ಮೊಸರಿನ ಕಾಲುವೆಗಳು, ರುಚಿಯಾದ ನಾನಾವಿಧ ರಸಗಳು, ಪರಮಾನ್ನಗಳು, ಷಾಡಬವೆಂಬ ಆಹಾರಪದಾರ್ಥಗಳು, ಬೆಲ್ಲದಿಂದ ಮಾಡಲ್ಪಟ್ಟ ಅನೇಕ ಪದಾರ್ಥಗಳು, ಇವೇ ಮೊದಲಾದ ಬಗೆಬಗೆಯಾದ ಆಹಾರಗಳೆಲ್ಲವೂ ಸಿದ್ಧಪಡಿಸಲ್ಪಟ್ಟುವು. ಹೀಗೆ ವಸಿಷ್ಠನು ಮಾಡಿಸಿದ ಔತಣದಿಂದ, ಆ ವಿಶ್ವಾಮಿತ್ರನೂ, ಆತನ ಸಮಸ್ತ ಸೈನ್ಯಗಳೂ, ವಿಶೇಷವಾದ ತೃಪ್ತಿಯನ್ನೂ, ಸಂತೋಷವನ್ನೂ ಹೊಂದಿದರು. ಹೀಗೆ ವಿಶ್ವಾಮಿತ್ರನು ಅಂತಃಪುರ ಸ್ತ್ರೀಯರುಗಳೊಡನೆಯೂ, ಮಂತ್ರಿಪುರೋಹಿತಾದಿಗಳೊಡನೆಯೂ, ಭೃತ್ಯರೊಡನೆಯೂ ಸೇರಿ, ಆ ಔತಣದಿಂದ ಬಹಳ ಸಂತೋಷಪಟ್ಟು ವಸಿಷ್ಠನನ್ನು ಕುರಿತು, "ಎಲೈ ಬ್ರಾಹ್ಮಣೋತ್ತಮನೆ! ಪೂಜ್ಯನಾದ ನೀನು ಮಾಡಿದ ಅತ್ಯದ್ಭುತವಾದ ಈ ಸತ್ಕಾರಗಳಿಗಾಗಿ ಬಹಳ ಸಂತೋಷಪಟ್ಟೆನು. ಆದರೆ ನನ್ನ ಪ್ರಾರ್ಥನೆಯೊಂದುಂಟು. ನಿನಗೆ ಸಾವಿರಾರು ಗೋವುಗಳನ್ನು ಕೊಡುವೆನು. ನಿನ್ನಲ್ಲಿರುವ ಈ ಕಾಮಧೇನುವೊಂದನ್ನು ಮಾತ್ರ ನನಗೆ ಕೊಡು! ಇದು ಗೋವುಗಳೊಳಗೆಲ್ಲಾ ರತ್ನಪ್ರಾಯವಾದುದು. "ರತ್ನಹಾರೀ ಚ ಪಾರ್ಥಿವಃ" ಎಂಬ ನ್ಯಾಯದಿಂದ ಉತ್ತಮವಸ್ತುಗಳೆಲ್ಲವೂ ರಾಜನಿಗೆ ಸೇರಬೇಕೆಂಬ ಧರ್ಮವನ್ನು ನೀನೂ ತಿಳಿದೇ ಇರುವೆಯಲ್ಲವೆ! ಆದುದರಿಂದ ನ್ಯಾಯವಾಗಿ ಈ ಧೇನುವು ರಾಜನಾದ ನನಗೆ ಸೇರಬೇಕಾದುದು" ಎಂದನು.

ಇದನ್ನು ಕೇಳಿ ವಸಿಷ್ಠನು ಆ ವಿಶ್ವಾಮಿತ್ರನನ್ನು ಕುರಿತು ನಗುತ್ತಾ "ಎಲೈ ರಾಜನೇ! ಸಾವಿರ ಗೋವುಗಳೇ ಅಲ್ಲ! ಲಕ್ಷ ಗೋವುಗಳನ್ನು ಕೊಟ್ಟರೂ, ಅಥವಾ ನೂರಾರು ಕೋಟಿ ಗೋವುಗಳನ್ನು ಕೊಟ್ಟರೂ, ಈ ಧೇನುವನ್ನು ನಾನು ಕೊಡಲಾರೆನು. ಅದು ಹಾಗಿರಲಿ! ನಿನ್ನ ಬೊಕ್ಕಸ ದಲ್ಲಿರುವ ಚಿನ್ನ, ಬೆಳ್ಳಿಗಳ ರಾಶಿಯೆಲ್ಲವನ್ನೂ ತಂದುಕೊಟ್ಟರೂ, ನಾನು ಇದನ್ನು ಬಿಟ್ಟಿರಲಾರೆನು. ಮನಸ್ವಿಯಾದ ಪುರುಷನಿಗೆ ಕೀರ್ತಿಯು ಹೇಗೋ ಹಾಗೆ ತಪಸ್ವಿಯಾದ ನನಗೆ ಇದೇ ಶಾಶ್ವತ ಧನವಾಗಿರುವುದು. ದೇವತೆಗಳಿಗೆ ಕೊಡಬೇಕಾದ ಹವ್ಯವೂ, ಪಿತೃಗಳಿಗೆ ಕೊಡಬೇಕಾದ ಕವ್ಯ ಗಳೂ, ನನ್ನ ಅಗ್ನಿಹೋತ್ರಗಳೂ, ನನ್ನ ಪ್ರಾಣಯಾತ್ರೆಯೂ, ನಾನು ಮಾಡಬೇಕಾದ ಬಲಿ, ಹೋಮ, ಸ್ವಾಹಾಕಾರ ವಷಟ್ಕಾರಗಳೇ ಮೊದಲಾದ ಕರ್ಮಗಳೂ, ನಾನು ಅನುಸಂಧಿಸಬೇಕಾದ ಸಮಸ್ತ ಶಾಸ್ತ್ರಗಳೂ, ಈ ಧೇನುವಿಗೆ ಅಧೀನವಾಗಿರುವುವು. ಎಲೈ ರಾಜನೇ! ಹೆಚ್ಚಾಗಿ ಹೇಳಿದುದ ರಿಂದೇನು? ಈ ಪಶುವೇ ನನ್ನ ಪ್ರಾಣವು! ಇದೇ ನನ್ನ ಸರ್ವಸ್ವವು! ಸಮಸ್ತ ಸಂತೋಷವೂ ಇದರಲ್ಲಿಯೇ ಅಡಗಿರುವುದು! ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನಾನು ಇದನ್ನು ಕೊಡಲಾರೆನು" ಎಂದನು.

ಆದಕ್ಕಾ ವಿಶ್ವಾಮಿತ್ರನು ಪುನಃ ವಸಿಷ್ಠನನ್ನು ಕುರಿತು, ಬಹಳ ಅನುನಯ ದಿಂದ "ಎಲೈ ವ್ರತನಿಷ್ಠನೆ! ನಿನಗೆ ಚಿನ್ನದ ಪಕ್ಕರೆಗಳಿಂದಲೂ, ಹಾರ ಗಳಿಂದಲೂ, ಬಂಗಾರದ ಅಂಕುಶಗಳಿಂದಲೂ, ಅಲಂಕರಿಸಲ್ಪಟ್ಟ ನಾಲ್ಕುಸಾವಿರ ಆನೆಗಳನ್ನು ಕೊಡುವೆನು ಮತ್ತು ಬಿಳೀ ಕುದುರೆಗಳಿಂದಲೂ, ಚಿನ್ನದ ಗೆಜ್ಜೆ ಗಳಿಂದಲೂ ಅಲಂಕರಿಸಲ್ಪಟ್ಟ ಸುವರ್ಣಮಯವಾದ ಎಂಟುನೂರು ರಥಗಳನ್ನೂ ಕೊಡುವೆನು. ಒಳ್ಳೆಯ ಜಾತಿಯಲ್ಲಿಯೂ, ಉತ್ತಮವಾದ ದೇಶದಲ್ಲಿಯೂ ಹುಟ್ಟಿ, ಬಹಳ ವೇಗವತ್ತಾದ ಹನ್ನೊಂದು ಸಾವಿರ ಕುದುರೆ ಗಳನ್ನೂ ಕೊಡುವೆನು. ಮತ್ತು ಬಗೆಬಗೆಯಾದ ಬಣ್ಣಗಳುಳ್ಳ ಒಂದು ಕೋಟಿ ಪ್ರಾಯದ ಹಸುಗಳನ್ನು ಕೊಡುವೆನು. ಎಲೈ ಬ್ರಾಹ್ಮಣನೆ! ವಿವರಿಸುವುದರಿಂದೇನು? ನಿನ್ನ ಮನಸ್ತೃಪ್ತಿಯಾಗುವಂತೆ ರತ್ನಗಳನ್ನಾ ಗಲಿ, ಚಿನ್ನವನ್ನಾಗಲಿ ಎಷ್ಟು ಕೇಳುವೆಯೋ ಅಷ್ಟನ್ನೂ ಕೊಡುವೆನು. ಈ ಧೇನುವನ್ನು ಮಾತ್ರ ನನಗೆ ಬಿಟ್ಟುಕೊಡು" ಎಂದನು.

ಅದಕ್ಕಾ ವಸಿಷ್ಠನು, "ಎಲೈ ರಾಜನೆ! ನನಗೆ ಬೇರೆ ರತ್ನಗಳೇಕೆ? ಇದೇ ನನ್ನ ರತ್ನವು. ಇದೇ ನನ್ನ ಧನವು. ಇದೇ ನನ್ನ ಸರ್ವಸ್ವವು. ಇದೇ ನನ್ನ ಜೀವವು. ಮತ್ತು ನಾನು ಮಾಡಬೇಕಾದ ದರ್ಶಪೌರ್ಣಮಾಸಾದಿ ಸಮಸ್ತ ಸತ್ಕರ್ಮಗಳೂ ಇದೇ! ನನ್ನ ಸಮಸ್ತ ವ್ರತಗಳಿಗೂ ಇದೇ ಮೂಲವು. ಎಲೈ ರಾಜನೆ! ಸುಮ್ಮನೆ ಚರ್ಚೆಯೇಕೆ? ಈ ಕಾಮಧೇನುವನ್ನು ಎಂದಿಗೂ ನಾನು ಕೊಡತಕ್ಕವನಲ್ಲ" ಎಂದನು.

ಇಲ್ಲಿಗೆ ಐವತ್ತಮೂರನೆಯ ಸರ್ಗವು.

ಶಬಲೆಯು ಸೈನ್ಯಗಳನ್ನು ಸೃಷ್ಟಿಸಿ ವಿಶ್ವಾಮಿತ್ರನ ಸೈನ್ಯವನ್ನು ಓಡಿಸಿದುದು

ಹೀಗೆ ವಸಿಷ್ಠನು ಕಾಮಧೇನುವನ್ನು ಕೊಡದಿರುವುದನ್ನು ನೋಡಿ ವಿಶ್ವಾಮಿತ್ರನು ಅದನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋಗಲಾರಂಭಿಸಿದನು. ಆಗ ಆ ಧೇನುವು ದುಃಖದಿಂದ ಕೂಗುತ್ತಾ, ತನ್ನಷ್ಟಕ್ಕೆ ತಾನು "ಆಹಾ! ಮಹಾತ್ಮನಾದ ವಸಿಷ್ಠನು ನನ್ನನ್ನು ಬಿಟ್ಟುಬಿಡುವನೆ? ರಾಜಭಟರು ಹೀಗೆ ನನ್ನನ್ನು ಸಂಕಟಪಡಿಸಿ ಎಳೆದುಕೊಂಡು ಹೋಗುತ್ತಿರುವರಲ್ಲಾ! ಆತನ ವಿಷಯದಲ್ಲಿ ನಾನು ಏನು ಅಪರಾಧವನ್ನು ಮಾಡಿದೆನು? ನಿರಪರಾಧಿನಿಯಾಗಿ ಬಹಳ ಪ್ರಿಯಭಕ್ತಳಾದ ನನ್ನನ್ನು ವಸಿಷ್ಠನು ತೊರೆದುಬಿಡುವನಲ್ಲಾ!" ಎಂದು ಚಿಂತಿಸಿ, ಆಗಾಗ ನಿಟ್ಟುಸಿರನ್ನು ಬಿಡುತ್ತಾ, ಕೊನೆಗೆ ಕೋಪಗೊಂಡು, ಆ ಭೃತ್ಯರೆಲ್ಲರೂ ಕೈಬಿಟ್ಟು ಹೋಗುವಂತೆ ಮೈಯನ್ನು ಝಾಡಿಸಿತು. ಅವರೆಲ್ಲರೂ ಚದರಿ ಹೋಗಲು ಅದು ಬಹುವೇಗದಿಂದ ಬಂದು ವಸಿಷ್ಠನ ಕಾಲಿನಮೇಲೆ ಬಿದ್ದು ಅಳುತ್ತಾ, ಮೇಘದಂತೆ ಗಂಭೀರ ಧ್ವನಿಯಿಂದ ಆತನನ್ನು ಕುರಿತು, ಕೈಮುಗಿದು, "ಪೂಜ್ಯನೆ! ನನ್ನನ್ನು ತೊರೆದುಬಿಡುವೆಯಾ? ಈ ರಾಜದೂತರು ನನ್ನನ್ನು ನಿನ್ನಿಂದ ಅಗಲಿಸಿ ಎಳೆದುಕೊಂಡು ಹೋಗುತ್ತಿರುವರಲ್ಲಾ!" ಎಂದಿತು.

ಇದನ್ನು ಕೇಳಿ ವಸಿಷ್ಠನು ಸಂಕಟಪಡುತ್ತಿರುವ ಆ ಧೇನುವನ್ನು ಕುರಿತು "ಎಲೈ ಶಬಲೆ! ನಿನ್ನನ್ನು ನಾನು ಎಂದಿಗೂ ಬಿಡುವುದಿಲ್ಲ. ನೀನು ನನಗೆ ಯಾವ ಅಪರಾಧವನ್ನೂ ಮಾಡಿದವಳಲ್ಲ. ಈ ರಾಜನೇ ಬಲಾತ್ಕಾರದಿಂದ

ನಿನ್ನನ್ನು ಎಳೆದುಕೊಂಡು ಹೋಗಬೇಕೆಂದು ಪ್ರಯತ್ನಿಸುತ್ತಿರುವನು. ನಾನೇನು ಮಾಡಲಿ? ಇವನು ರಾಜನಾದುದರಿಂದ ಆತನನ್ನಿದಿರಿಸತಕ್ಕ ಬಲವು ಬ್ರಾಹ್ಮಣರಾದ ನಮಗೆಲ್ಲಿಯದು? ಈತನಾದರೋ ಮಹಾಬಲಶಾಲಿಯು! ಈ ದೇಶಕ್ಕೆಲ್ಲಾ ಒಡೆಯನು. ಅಕ್ಷೌಹಿಣೀ ಸಂಖ್ಯೆಯುಳ್ಳ ಚತುರಂಗಸೈನ್ಯಗಳನ್ನು ಕಟ್ಟಿಕೊಂಡು ಬಂದಿರುವನು. ಇವನ ಆನೆಗಳು, ಕುದುರೆಗಳು, ರಥಗಳು, ಕಾಲಾಳುಗಳು ಇವೆಲ್ಲವೂ ಮಹಾಬಲವುಳ್ಳವುಗಳಾಗಿರುವುವು. ಆದುದರಿಂದ ನಮಗಿಂತಲೂ ಪ್ರಬಲನಾದ ಈತನಮೇಲೆ ನಮ್ಮ ಕೈಯ್ಯೊಂದೂ ಸಾಗದು! ಏನು ಮಾಡಲಿ? ಅಥವಾ ಒಂದುವೇಳೆ ನನ್ನ ತಪೋಬಲದಿಂದಲೇ ಆತನನ್ನು ನಿಗ್ರಹಿಸಬಹುದಾದರೂ, ರಾಜನನ್ನು ಇದಿರಿಸುವುದು ಆತನ ಪ್ರಜೆಗಳಾದ ನಮಗೆ ಧರ್ಮವಲ್ಲ” ಎಂದನು.

ಅದಕ್ಕಾ ಕಾಮಧೇನುವು ಮಹಾತೇಜಸ್ವಿಯಾದ ವಸಿಷ್ಠನನ್ನು ಕುರಿತು ವಿನಯದೊಡನೆ, “ಎಲೈ ತಪಸ್ವಿಯೆ! ಇದೇನು ಹೀಗೆ ಹೇಳುವೆ? ಕ್ಷತ್ರಿಯಬಲವೊಂದು ಬಲವೆ? ಅದಕ್ಕಿಂತಲೂ ಪ್ರಬಲವಾದ ಶಕ್ತಿಯು ಬ್ರಾಹ್ಮಣರಲ್ಲಿರುವುದು. ಕ್ಷತ್ರಿಯತೇಜಸ್ಸಿಗಿಂತಲೂ ಬ್ರಹ್ಮತೇಜಸ್ಸು ಬಹಳ ಅತಿಶಯವಾದುದಲ್ಲವೆ! ಅದರಲ್ಲಿಯೂ ನಿನ್ನ ತಪೋಬಲವೆಂಬುದನ್ನು ಅಷ್ಟಿಷ್ಟೆಂದು ನಿರ್ಣಯಿಸುವುದಕ್ಕೂ ಸಾಧ್ಯವಲ್ಲ! ಆದುದರಿಂದ ಈ ರಾಜನಾದ ವಿಶ್ವಾಮಿತ್ರನು ನಿನಗಿಂತಲೂ ಬಲಶಾಲಿಯೆಂದು ಎಂದಿಗೂ ತಿಳಿಯಬೇಡ! ಆತನು ಮಹಾವೀರ್ಯವುಳ್ಳವನಾಗಿದ್ದರೂ ನಿನ್ನ ತೇಜಸ್ಸನ್ನು ಮೀರಲಾರನು. ಎಲೈ ಮಹಾತ್ಮನೆ! ಅದೆಲ್ಲವೂ ಹಾಗಿರಲಿ. ಇದಕ್ಕಾಗಿ ನೀನು ಸ್ವಲ್ಪವೂ ಶ್ರಮ ತೆಗೆದುಕೊಳ್ಳಬೇಕಾದುದಿಲ್ಲ. ಈ ವಿಷಯದಲ್ಲಿ ನನಗೆ ಅನುಗ್ರಹಿಸಿ ಆಜ್ಞೆಯನ್ನು ಕೊಡು! ನಿನ್ನ ಅನುಗ್ರಹಬಲದಿಂದಲೇ ಈ ದುರಾತ್ಮನಾದ ರಾಜನ ಕೊಬ್ಬನ್ನಡಗಿಸುವೆನು” ಎಂದಿತು.

ಆಗ ವಸಿಷ್ಠನು, ಎಲೈ ಧೇನುವೆ! ಹಾಗೆಯೇ ಆಗಲಿ. ನಿನ್ನ ಅವಯವಗಳಿಂದ ಶತ್ರುಸೈನ್ಯವನ್ನಡಗಿಸತಕ್ಕ ಸೈನ್ಯವೊಂದನ್ನು ಸೃಷ್ಟಿಸು” ಎಂದನು. ಆಗ ಆ ಧೇನುವು ಒಂದಾವರ್ತಿ ಹುಂಕಾರಮಾಡಿದಮಾತ್ರಕ್ಕೆ ಪಪ್ಲವವೆಂಬ ಅನೇಕಸೈನ್ಯಗಳು ಪರಂಪರೆಯಾಗಿ ಹೊರಟು ವಿಶ್ವಾಮಿತ್ರನ ಸೈನ್ಯವೆಲ್ಲವನ್ನೂ ಆತನ ಮುಂದೆಯೇ ಕೊಲ್ಲುತ್ತಿದ್ದುವು. ಹೀಗೆ ತನ್ನ ಸೈನ್ಯವೆಲ್ಲವೂ ನಾಶಹೊಂದುತ್ತಿರುವುದನ್ನು ವಿಶ್ವಾಮಿತ್ರನು ನೋಡಿ, ಬಹಳ

ಕೋಪಗೊಂಡು, ರಥದ ಮೇಲೆ ಕುಳಿತು ಬಂದು ಮ್ಲೇಚ್ಛಜಾತಿಯ ಪಪ್ಲವರೆಂಬ ಆ ಸೈನಿಕರೆಲ್ಲರನ್ನೂ ಶಸ್ತ್ರಗಳಿಂದ ಹೊಡೆಯಲಾರಂಭಿಸಿದನು. ಹೀಗೆ ಆ ಮ್ಲೇಚ್ಛಸೈನ್ಯಗಳೆಲ್ಲವೂ ವಿಶ್ವಾಮಿತ್ರನಿಂದ ಹತವಾದುದನ್ನು ನೋಡಿ, ಕಾಮಧೇನುವು ಕೋಪದಿಂದ ಮತ್ತೊಂದಾವರ್ತಿ ಕೂಗಲು, ಶಕರೆಂದೂ, ಯವನರೆಂದೂ ಹೆಸರುಗೊಂಡ ಬೇರೆ ಬೇರೆ ವೀರಭಟರು ಹೊರಡಲಾರಂಭಿಸಿದರು. ಇವರೆಲ್ಲರೂ ಮಹಾವೀರ್ಯವುಳ್ಳವರಾಗಿ, ಹೊಂಬಣ್ಣದ ಮೈಯುಳ್ಳವರಾಗಿ, ಉದ್ದವಾದ ಕತ್ತಿಗಳನ್ನು ಕೈಯಲ್ಲಿ ಹಿಡಿದು, ರಕ್ತವರ್ಣವಾದ ಬಟ್ಟೆಗಳನ್ನು ಧರಿಸಿ, ಆ ಪ್ರದೇಶವೆಲ್ಲವನ್ನೂ ಸುತ್ತಿಕೊಂಡು, ವಿಶ್ವಾಮಿತ್ರನ ಸೈನ್ಯವನ್ನು ಸಿಕ್ಕಿದ ಕಡೆಯಲ್ಲಿ ಕೊಲ್ಲಲಾರಂಭಿಸಿದರು. ಆಗ ವಿಶ್ವಾಮಿತ್ರನೂ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಆ ಮ್ಲೇಚ್ಛಯವನಾದಿಗಳೆಲ್ಲರನ್ನು ಅಡಗಿಸುತ್ತ ಬಂದನು.

ಇಲ್ಲಿಗೆ ಐವತ್ತನಾಲ್ಕನೆಯ ಸರ್ಗವು.

ವಿಶ್ವಾಮಿತ್ರನು ಶಿವನಿಂದ ಅಸ್ತ್ರವಿಶೇಷಗಳನ್ನು ಪಡೆದುದು.

ಆಮೇಲೆ ವಸಿಷ್ಠನು ವಿಶ್ವಾಮಿತ್ರನ ಅಸ್ತ್ರಗಳಿಂದ ಮೂರ್ಛೆಬಿದ್ದಿರುವ ಮ್ಲೇಚ್ಛ ಸೈನ್ಯಗಳೆಲ್ಲವನ್ನೂ ನೋಡಿ, ಕಾಮಧೇನುವನ್ನು ಕುರಿತು, ಪುನಃ ಯೋಗಬಲದಿಂದ ಸೈನ್ಯಗಳನ್ನು ಸೃಷ್ಟಿಸುವಹಾಗೆ ಆಜ್ಞೆಮಾಡಿದನು. ಒಡನೆಯೇ ಆ ಹಸುವು ಒಂದಾವರ್ತಿ 'ಹಂಭಾ' ಎಂದು ಕೂಗಲು, ಅದರಿಂದ ಸೂರ್ಯತೇಜಸ್ಸುಳ್ಳ ಕಾಂಭೋಜರು ಹುಟ್ಟಲಾರಂಭಿಸಿದರು. ಅದರ ಕೆಚ್ಚಲಿನಿಂದ ಪುನಃ ಪಪ್ಲವರೆಂಬ ಸೈನಿಕರು ಕೈಯಲ್ಲಿ ಶಸ್ತ್ರವನ್ನು ಹಿಡಿದು ಹೊರಟುಬಂದರು. ಅದರ ರೋಮಕೂಪಗಳಿಂದ ತುರುಕರೂ, ಹಾರೀತರೂ, ಕಿರಾತರೂ ಹುಟ್ಟಿದರು. ಇವರೆಲ್ಲರೂ ವಿಶ್ವಾಮಿತ್ರನ ಚತುರಂಗ ಸೈನ್ಯಗಳನ್ನು ಸಿಕ್ಕಿದ ಕಡೆಯಲ್ಲಿ ಕೊಲ್ಲುತ್ತ ಬಂದರು.

ಹೀಗೆ ವಸಿಷ್ಠನಿಂದ ತಮ್ಮ ಸೈನ್ಯಗಳೆಲ್ಲವೂ ನಾಶವಾಗುತ್ತಿರುವುದನ್ನು ನೋಡಿ, ವಿಶ್ವಾಮಿತ್ರನ ನೂರು ಮಂದಿ ಮಕ್ಕಳೂ ನಾನಾವಿಧವಾದ ಆಯುಧಗಳನ್ನು ಹಿಡಿದು, ಕೋಪದಿಂದ ವಸಿಷ್ಠರ ಮೇಲೆಯೇ ಬೀಳುವುದಕ್ಕೆ ಹೋಗಲು, ಮಹಾಮಹಿಮೆಯುಳ್ಳ ಆ ವಸಿಷ್ಠನು ಕೋಪದಿಂದ ಒಂದಾವರ್ತಿ

ಹುಂಕಾರವಮಾಡಿದ ಮಾತ್ರದಲ್ಲಿ ಅವರೆಲ್ಲರೂ ದಗ್ಧರಾದರು. ಹಾಗೆಯೇ ಅವರ ಅನೇಕ ಸೈನ್ಯಗಳೂ ಸುಟ್ಟುಹೋದುವು. ಹೀಗೆ ತನ್ನ ಮಕ್ಕಳೂ, ಅನೇಕ ಸೈನ್ಯವೂ, ಒಂದು ಮುಹೂರ್ತ ಮಾತ್ರದಲ್ಲಿ ಸುಟ್ಟುಹೋದುದನ್ನು ನೋಡಿ, ವಿಶ್ವಾಮಿತ್ರನು ಬಹಳ ನಾಚಿಕೆಗೊಂಡು, ಚಿಂತಾಕ್ರಾಂತನಾಗಿ, ವೇಗವಿಲ್ಲದ ಸಮುದ್ರದಂತೆಯೂ, ಹಲ್ಲುಗಳಿಲ್ಲದ ಹಾವಿನಂತೆಯೂ, ರಾಹುಗ್ರಸ್ತನಾದ ಸೂರ್ಯನಂತೆಯೂ ಇದ್ದನು. ಆತನ ಉತ್ಸಾಹವೂ, ದರ್ಪವೂ, ಅಡಗಿ ಹೋದುವು. ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿಯಂತೆ ದುಃಖದಿಂದ ಬಹಳ ದೀನ ನಾಗಿ, ಸತ್ತುಳಿದ ತನ್ನ ಒಬ್ಬ ಮಗನನ್ನು ತನ್ನ ರಾಜ್ಯಕ್ಕೆ ನಿಯಮಿಸಿ, ಕಾಡಿಗೆ ಹೊರಟುಹೋದನು. ಕಿನ್ನರರಿಂದಲೂ, ನಾಗರಿಂದಲೂ ಸೇವಿಸಲ್ಪಟ್ಟ ಹಿಮ ವತ್ಪರ್ವತದ ತಪ್ಪಲಿನಲ್ಲಿ ರುದ್ರನನ್ನು ಕುರಿತು ದೊಡ್ಡ ತಪಸ್ಸನ್ನು ಮಾಡ ಲಾರಂಭಿಸಿದನು. ಹೀಗೆ ಕೆಲವುಕಾಲವು ಕಳೆಯಲು, ವೃಷಭಧ್ವಜನಾದ ರುದ್ರನು ಇವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಬಂದು ನಿಂತು, ವಿಶ್ವಾಮಿತ್ರ ನನ್ನು ಕುರಿತು, “ಎಲೈ ರಾಜನೆ! ಏಕೆ ತಪಸ್ಸನ್ನು ಮಾಡುವೆ? ನಿನ್ನ ಕೋರಿಕೆ ಯೇನು? ನಿನಗೆ ಬೇಕಾದ ವರಗಳನ್ನು ಕೇಳು. ಕೊಡುವೆನು” ಎಂದನು. ಆಗ ವಿಶ್ವಾಮಿತ್ರನು ವಿನಯದಿಂದ ಕೈಮುಗಿದು ನಿಂತು “ಎಲೈ ಮಹಾ ದೇವನೆ! ನೀನು ನನ್ನಲ್ಲಿ ಪ್ರಸನ್ನನಾಗಿರುವೆಯಾದರೆ, ನನಗೆ ಎಲ್ಲಾ ಧನು ರ್ವೇದಗಳನ್ನೂ, ಅವುಗಳ ರಹಸ್ಯಮಂತ್ರಗಳನ್ನೂ ಸಾಂಗೋಪಾಂಗವಾಗಿ ಅನುಗ್ರಹಿಸು. ದೇವದಾನವಯಕ್ಷರಾಕ್ಷಸಾದಿಗಳಲ್ಲಿಯೂ ಮಹರ್ಷಿಗಳ ಲ್ಲಿಯೂ, ಗಂಧರ್ವರಲ್ಲಿಯೂ, ಯಾವ ಯಾವ ಅಪೂರ್ವಾಸ್ತ್ರಗಳುಂಟೋ ಅವೆಲ್ಲವೂ ನನಗೆ ತಿಳಿಯುವಂತೆ ಕರುಣಿಸು. ನಿನ್ನ ಅನುಗ್ರಹದಿಂದಲೇ ನನ್ನ ಕೋರಿಕೆಯು ನೆರವೇರಬೇಕಾಗಿರುವುದು!” ಎಂದನು. ಅದಕ್ಕಾ ರುದ್ರನು “ಹಾಗೆಯೇ ಆಗಲಿ” ಎಂದು ಕರುಣಿಸಿ, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ವಿಶ್ವಾಮಿತ್ರನು ಮೊದಲೇ ಕ್ಷತ್ರಿಯನಾದುದರಿಂದ, ಆತನಿಗೆ ಸ್ವಾಭಾವಿಕವಾಗಿದ್ದ ರಾಜದರ್ಪವು ಈಗ ರುದ್ರನ ಕೃಪಾವಿಶೇಷದಿಂದ ಪ್ರಾಪ್ತವಾದ ಅಸ್ತ್ರವಿಶೇಷಗಳಿಂದ ಇನ್ನೂ ಮಿತಿಮೀರಿತು. ಪರ್ವಕಾಲದಲ್ಲಿ ಸಮುದ್ರವು ಉಕ್ಕಿಬರುವಂತೆ ಆ ವಿಶ್ವಾಮಿತ್ರನು ವೀರ್ಯದಿಂದ ಕೊಬ್ಬಿದವ ನಾಗಿ, ‘ಇನ್ನು ಆ ವಸಿಷ್ಠನನ್ನು ಕೊಂದೆ’ನೆಂದೇ ನಿಶ್ಚಯಿಸಿಕೊಂಡು

ವಸಿಷ್ಠಾಶ್ರಮಕ್ಕೆ ಬಂದನು. ತಾನು ಹೊಸದಾಗಿ ಸಂಪಾದಿಸಿದ ಅಸ್ತ್ರಗಳೆಲ್ಲವನ್ನೂ ಅಲ್ಲಿ ಕ್ರಮವಾಗಿ ಪ್ರಯೋಗಿಸುತ್ತಿರಲು, ಆ ಅಸ್ತ್ರಗಳ ಜ್ವಾಲೆಯಿಂದ ತಪೋವನವೆಲ್ಲವೂ ದಗ್ಧವಾಗುತ್ತಾ ಬಂದಿತು. ವಿಶ್ವಾಮಿತ್ರನ ಆ ಅಸ್ತ್ರಜ್ವಾಲೆಯನ್ನು ತಡೆಯಲಾರದೆ ಅಲ್ಲಿದ್ದ ಋಷಿಗಳೂ, ವಟುಗಳೂ, ಮೃಗಗಳೂ, ಪಕ್ಷಿಗಳೂ ಭಯಪಟ್ಟು ದಿಕ್ಕುದಿಕ್ಕಿಗೆ ಓಡಲಾರಂಭಿಸಿದುವು. ಆ ಆಶ್ರಮದಲ್ಲಿ ಒಂದು ಪ್ರಾಣಿಯಾದರೂ ನಿಲ್ಲದೆ ಶೂನ್ಯಪ್ರದೇಶವಾಯಿತು. ಒಂದು ನಿಮಿಷಮಾತ್ರದಲ್ಲಿಯೇ ಆ ಆಶ್ರಮವು ಮರಗಿಡಗಳೊಂದೂ ಇಲ್ಲದ ಚೌಳು ಭೂಮಿಯಂತೆ ಕಾಣಿಸಿ ನಿಶ್ಶಬ್ದವಾಯಿತು. ಆಗ ವಸಿಷ್ಠನು ಇದೆಲ್ಲವನ್ನೂ ಕಣ್ಣಾರೆ ಕಂಡು, ಓಡಿಹೋಗುತ್ತಿದ್ದ ಋಷಿಗಳೆಲ್ಲರನ್ನೂ ಕೂಗಿ "ಭಯಪಡಬೇಡಿರಿ! ಭಯಪಡಬೇಡಿರಿ! ಇದೋ! ಸೂರ್ಯನು ಮಂಜನ್ನು ಹೇಗೋ ಹಾಗೆ ಒಂದು ನಿಮಿಷಮಾತ್ರದಲ್ಲಿ ಈ ಗಾಧಿಪುತ್ರನನ್ನು ನಿರ್ಮೂಲಮಾಡುವೆನು" ಎಂದು ಮಹಾಕೋಪಯುಕ್ತನಾಗಿ, ಇದಿರಾಗಿದ್ದ ವಿಶ್ವಾಮಿತ್ರನನ್ನು ನೋಡಿ "ಎಲೈ ಮೂಢನೆ! ಬಹುಕಾಲದಿಂದ ಬೆಳೆಸಿದ ಈ ಆಶ್ರಮವೆಲ್ಲವನ್ನೂ ಕೆಡಿಸಿದೆಯಲ್ಲವೆ? ನಿನ್ನ ಈ ಅಕೃತ್ಯಕ್ಕೆ ಈಗಲೇ ತಕ್ಕ ಫಲವನ್ನು ತೋರಿಸುವೆನು. ಇನ್ನು ನಿನ್ನ ಆಯುಸ್ಸು ತೀರಿತೆಂದೇ ತಿಳಿ" ಎಂದು, ಹೊಗೆಯಾಡದ ಕಾಲಾಗ್ನಿಯಂತೆಯೂ, ಬೇರೊಂದು ಯಮದಂಡದಂತೆಯೂ, ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವ ತನ್ನ ಬ್ರಹ್ಮದಂಡವನ್ನು ಮೇಲಕ್ಕೆತ್ತಿ ನಿಂತನು.

ಇಲ್ಲಿಗೆ ಐವತ್ತೈದನೆಯ ಸರ್ಗವು.

ವಸಿಷ್ಠನು ವಿಶ್ವಾಮಿತ್ರನನ್ನು ಜಯಿಸಿದುದು

ವಸಿಷ್ಠನು ಹೀಗೆ ಹೇಳಿ ದಂಡವನ್ನೆತ್ತಿದೊಡನೆಯೇ, ಮಹಾಬಲಶಾಲಿಯಾದ ವಿಶ್ವಾಮಿತ್ರನು ಆಗ್ನೇಯಾಸ್ತ್ರವನ್ನು ತೆಗೆದುಕೊಂಡು, "ಎಲೈ ಬಡಬ್ರಾಹ್ಮಣನೆ! ನಿಲ್ಲು!" ಎಂದು ಆರ್ಭಟಿಸಿದನು. ಆಗ ವಸಿಷ್ಠನು ಆ ದಂಡವನ್ನು ಹಿಡಿದಹಾಗೆಯೇ ವಿಶ್ವಾಮಿತ್ರನನ್ನು ನೋಡಿ ಕೋಪದಿಂದ, "ಎಲೈ ನೀಚಕ್ಷತ್ರಿಯನೆ! ಇದೋ! ನಿಂತಿರುವೆನು. ನಿನ್ನ ಬಲವನ್ನು ತೋರಿಸು. ಈಗಲೇ ನಿನ್ನ ಕೆಚ್ಚನ್ನು ಮುರಿದಿಡುವೆನು. ಎಲೈ ಗಾಧಿಪುತ್ರನೆ!

ನಿನ್ನ ಕ್ಷತ್ರಿಯಬಲವೆಲ್ಲಿ? ಮಹತ್ತಾದ ನಮ್ಮ ಬ್ರಹ್ಮಬಲವೆಲ್ಲಿ? ಎಲೈ ಕ್ಷತ್ರಿಯಾಧಮನೆ! ನಮ್ಮ ಬ್ರಹ್ಮತೇಜಸ್ಸಿನ ಶಕ್ತಿಯನ್ನು ಈಗಲೇ ನಿನಗೆ ತೋರಿಸಿಕೊಡುವೆನು ನೋಡು!" ಎಂದು ತನ್ನ ಬ್ರಹ್ಮದಂಡವನ್ನು ಬೀಸಲು ಆ ಕ್ಷಣದಲ್ಲಿಯೇ ಬೆಂಕಿಯ ಉರಿಯು ನೀರಿನಿಂದ ಹೇಗೋ ಹಾಗೆ ವಿಶ್ವಾಮಿತ್ರನು ಹಿಡಿದಿದ್ದ ಆಗ್ನೇಯಾಸ್ತ್ರವು ಆ ಬ್ರಹ್ಮದಂಡದ ಬಲದಿಂದ ಅಡಗಿತು. ಆಗ ವಿಶ್ವಾಮಿತ್ರನು ತನ್ನ ಆಗ್ನೇಯಾಸ್ತ್ರವೂ ವಿಫಲ ವಾದುದನ್ನು ನೋಡಿ, ಮೇಲೆ ಮೇಲೆ ವಾರುಣಾಸ್ತ್ರವನ್ನೂ, ರೌದ್ರಾಸ್ತ್ರ ವನ್ನೂ, ಐಂದ್ರಾಸ್ತ್ರ, ಪಾಶುಪತಾಸ್ತ್ರಗಳನ್ನೂ, ಐಷೀಕವೆಂಬ ಅಸ್ತ್ರವನ್ನೂ ಕ್ರಮವಾಗಿ ಪ್ರಯೋಗಿಸಲಾರಂಭಿಸಿದನು. ಅದರಮೇಲೆ ಮಾನವ, ಮೋಹನ, ಗಾಂಧರ್ವ, ಸ್ವಾಪನ, ಜೃಂಭಣ, ಮಾದನ, ಸಂತಾಪನ, ವಿಲಾಪನ, ಶೋಷಣ, ದಾರಣ, ವಜ್ರ, ಬ್ರಹ್ಮಪಾಶ, ಕಾಲಪಾಶ, ವರುಣ ಪಾಶ, ಪೈನಾಕಾಸ್ತ್ರ, ದಯಿತಗಳೆಂಬ ಅಸ್ತ್ರಗಳನ್ನೂ, ದಂಡಾಸ್ತ್ರ, ಪೈಶಾಚ, ಕ್ರೌಂಚವೆಂಬಿವುಗಳನ್ನೂ, ಧರ್ಮಚಕ್ರ, ಕಾಲಚಕ್ರ, ವಿಷ್ಣುಚಕ್ರಗಳೆಂಬ ಮೂರು ಚಕ್ರಗಳನ್ನೂ ವಾಯುವ್ಯ, ಮಥನ, ಹಯಗ್ರೀವಗಳೆಂಬ ಮೂರು ಅಸ್ತ್ರಗಳನ್ನೂ ಎರಡು ಶಕ್ತ್ಯಾಯುಧಗಳನ್ನೂ, ಕಂಕಾಳಮುಸಲಾಯುಧ ಗಳನ್ನೂ, ಭಯಂಕರವಾದ ವೈದ್ಯಾಧರ ಕಾಲಾಸ್ತ್ರಗಳೆಂಬ ಮಹಾಸ್ತ್ರಗಳನ್ನೂ, ದಾರುಣ, ತ್ರಿಶೂಲ, ಘೋರ, ಕಾಪಾಲ, ಕಂಕಣಗಳೆಂಬ ದಿವ್ಯಾಸ್ತ್ರಗಳನ್ನೂ ಆ ವಸಿಷ್ಠನಮೇಲೆ ಎಡೆಬಿಡದೆ ಪ್ರಯೋಗಿಸುತ್ತಿದ್ದನು. ಹೀಗೆ ವಿಶ್ವಾಮಿತ್ರನು ಎಷ್ಟೆಷ್ಟು ಅಸ್ತ್ರಗಳನ್ನು ಪ್ರಯೋಗಿಸುತ್ತಿದ್ದರೂ ಮಹಾತಪಸ್ವಿಯಾದ ಆ ವಸಿಷ್ಠನ ಕೈಯಲ್ಲಿದ್ದ ಬ್ರಹ್ಮದಂಡವು ಲೋಕವೆಲ್ಲವೂ ಆಶ್ಚರ್ಯಪಡುವಂತೆ ನಿಮಿಷಮಾತ್ರದಲ್ಲಿ ಅವುಗಳನ್ನು ನುಂಗುತ್ತಿತ್ತು. ಹೀಗೆ ತನ್ನ ಅಸ್ತ್ರಗಳೆಲ್ಲವೂ ವಿಫಲವಾದುದನ್ನು ನೋಡಿ, ವಿಶ್ವಾಮಿತ್ರನು ವಸಿಷ್ಠನಮೇಲೆ ಬ್ರಹ್ಮಾಸ್ತ್ರ ವನ್ನು ಪ್ರಯೋಗಿಸಲುಪಕ್ರಮಿಸಿದನು. ಇದನ್ನು ನೋಡಿ ಅಗ್ನ್ಯಾದಿದೇವತೆ ಗಳೂ, ಗಂಧರ್ವರೂ, ಮಹರ್ಷಿಗಳೂ, ಭಯದಿಂದ ನಡುಗುತ್ತಿದ್ದರು. ಮೂರು ಲೋಕವೂ ಹೆದರಿತು. ಏನಾದರೇನು? ಅಂತಹ ಘೋರವಾದ ಬ್ರಹ್ಮಾಸ್ತ್ರವನ್ನೂ ಕೂಡ ವಸಿಷ್ಠನ ಬ್ರಹ್ಮದಂಡವು ನುಂಗಿತು.

ಹೀಗೆ ಮಹಾತ್ಮನಾದ ವಸಿಷ್ಠನು ತನ್ನ ಬ್ರಹ್ಮತೇಜಸ್ಸಿನಿಂದ ಆ ಬ್ರಹ್ಮಾಸ್ತ್ರವನ್ನು ನುಂಗಿಬಿಟ್ಟಕೂಡಲೇ ಆತನಿಗೆ ಒಂದು ಭಯಂಕರವಾದ

ರೂಪವುಂಟಾಯಿತು. ಅದನ್ನು ನೋಡಿ ಮೂರು ಲೋಕವೂ ಮೂರ್ಛೆ ಹೊಂದುವ ಸ್ಥಿತಿಯಲ್ಲಿತ್ತು. ಆಗ ಆತನ ಮೈಯಲ್ಲಿದ್ದ ಒಂದೊಂದು ರೋಮಕೂಪದಲ್ಲಿಯೂ ಅಗ್ನಿಜ್ವಾಲೆಯಂತೆ ಉರಿಯು ಹೊರಡಲಾರಂಭಿಸಿತು. ಆತನು ಕೈಯಲ್ಲಿ ಎತ್ತಿ ಹಿಡಿದಿದ್ದ ಬ್ರಹ್ಮದಂಡವೂ ಕೂಡ ಹೊಗೆಯಿಲ್ಲದ ಕಾಲಾಗ್ನಿಯಂತೆಯೂ, ಬೇರೊಂದು ಯಮದಂಡದಂತೆಯೂ ಜ್ವಲಿಸುತ್ತಿತ್ತು. ಆಗ ಅಲ್ಲಿದ್ದ ಋಷಿಗಳೆಲ್ಲರೂ ಈ ವಸಿಷ್ಠನ ಮಹಿಮೆಯನ್ನು ಕೊಂಡಾಡುತ್ತಾ ಸಂತೋಷದಿಂದ ಆತನನ್ನು ಕುರಿತು, "ಎಲೈ ಬ್ರಾಹ್ಮಣೋತ್ತಮನೆ! ನಿನ್ನ ಬ್ರಹ್ಮಬಲವು ಅಮೋಘವಾದುದು! ಈಗ ನೀನು ಹೊರಗೆ ಕಾಣಿಸುತ್ತಿರುವ ಆ ಬ್ರಹ್ಮಾಸ್ತ್ರದ ಉರಿಯನ್ನು ನಿನ್ನ ತೇಜಸ್ಸಿನಲ್ಲಿಯೇ ಅಡಗಿಸಿಡು! ಎಲೈ ಮಹಾತ್ಮನೆ! ಈ ವಿಶ್ವಾಮಿತ್ರನು ಅನೇಕ ತಪಸ್ಸುಗಳನ್ನು ಮಾಡಿ ಶಸ್ತ್ರಗಳನ್ನು ಪಡೆದು ಬಂದಿದ್ದರೂ ನಿನ್ನಿಂದ ನಿಗ್ರಹಿಸಲ್ಪಟ್ಟನು. ಇನ್ನು ಪ್ರಸನ್ನನಾಗು! ಮೂರು ಲೋಕಗಳೂ ತತ್ತಳಿಸುತ್ತಿರುವುವು. ಅವುಗಳಿಗೆ ಕ್ಷೇಮವನ್ನುಂಟುಮಾಡು" ಎಂದು ಪ್ರಾರ್ಥಿಸಿದರು. ಒಡನೆಯೇ ವಸಿಷ್ಠನು ಆ ತೇಜಸ್ಸನ್ನು ತನ್ನಲ್ಲಿಯೇ ಅಡಗಿಸಿಕೊಂಡನು. ಇತ್ತಲಾಗಿ ವಿಶ್ವಾಮಿತ್ರನು ಈ ಬಾಹ್ಮಣನಿಂದ ತನಗೆ ನಿಗ್ರಹವುಂಟಾದುದಕ್ಕಾಗಿ ಸಂಕಟದಿಂದ ನಿಟ್ಟುಸಿರು ಬಿಡುತ್ತಾ, ತನ್ನಲ್ಲಿ ತಾನು "ಛಿ! ಕ್ಷತ್ರಿಯಬಲವನ್ನು ಸುಡು! ಬ್ರಹ್ಮಬಲವೇ ಬಲವು! ಇದಕ್ಕೆ ಬೇರೆ ನಿದರ್ಶನವೇಕೆ? ಆಹಾ! ನಾನು ಬಹುದಿವಸಗಳವರೆಗೆ ತಪಸ್ಸುಮಾಡಿ ಗಳಿಸಿ ತಂದ ದಿವ್ಯಾಸ್ತ್ರಗಳೆಲ್ಲವೂ ಈ ಬ್ರಾಹ್ಮಣನ ಕೈಯಲ್ಲಿದ್ದ ಒಂದು ಬ್ರಹ್ಮದಂಡದಿಂದ ಅಡಗಿಸಲ್ಪಟ್ಟುವಲ್ಲವೆ! ಈಗ ಇವೆರಡರ ತಾರತಮ್ಯವೂ ನನಗೆ ಚೆನ್ನಾಗಿ ತಿಳಿಯಿತು! ಇನ್ನುಮೇಲೆ ನನ್ನ ಮನಸ್ಸನ್ನೂ ಇಂದ್ರಿಯಗಳನ್ನೂ ಕೆಡಿಸತಕ್ಕ ಈ ಕ್ಷತ್ರಿಯಸ್ವಭಾವವನ್ನು ಬಿಟ್ಟು, ಬ್ರಾಹ್ಮಣ್ಯಕ್ಕೆ ಕಾರಣವಾದ ತಪಸ್ಸನ್ನೇ ಮಾಡಿ, ಅದನ್ನು ಹೇಗಾದರೂ ಸಂಪಾದಿಸುವೆನು" ಎಂದು ಸಂಕಲ್ಪಿಸಿದನು.

ಇಲ್ಲಿಗೆ ಐವತ್ತಾರನೆಯ ಸರ್ಗವು.

ವಿಶ್ವಾಮಿತ್ರನು ತಪಸ್ಸನ್ನು ಮಾಡಿ ರಾಜರ್ಷಿಯಾದುದು

ವಿಶ್ವಾಮಿತ್ರನು ತನಗುಂಟಾದ ಅವಮಾನವನ್ನು ಸಹಿಸಲಾರದೆ, ಆಗಾಗ ಅದನ್ನೇ ನೆನೆಸಿಕೊಂಡು ಬಹಳ ಸಂಕಟದಿಂದ ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತಾ ಮಹಾತ್ಮನಾದ ಆ ವಸಿಷ್ಠನಲ್ಲಿ ಬದ್ಧದ್ವೇಷದಿಂದ ಕೂಡಿದವನಾಗಿ, ದಕ್ಷಿಣದಿಕ್ಕಿಗೆ ಹೊರಟು, ತನ್ನ ಪತ್ನಿಯೊಡಗೂಡಿ ಘೋರ ವಾದ ತಪಸ್ಸನ್ನು ಮಾಡಲಾರಂಭಿಸಿದನು. ಆ ಕಾಲದಲ್ಲಿ ಆಹಾರವಿಲ್ಲದೆ ಗೆಡ್ಡೆ, ಗೆಣಸು, ಹಣ್ಣು ಮುಂತಾದವುಗಳಿಂದಲೇ ಪ್ರಾಣಧಾರಣೆಯನ್ನು ಮಾಡಿ ಕೊಂಡು, ಬಹಿರಿಂದ್ರಿಯಗಳೆಲ್ಲವನ್ನೂ ಅಡಗಿಸಿ ದೊಡ್ಡ ತಪಸ್ಸಿನಲ್ಲಿದ್ದನು. ಆಮೇಲೆ ಈತನಿಗೆ ಸತ್ಯವಂತರಾಗಿಯೂ, ಧಾರ್ಮಿಕರಾಗಿಯೂ ಇರುವ ಹವಿಷ್ಯಂದ, ಮಧುಷ್ಯಂದ, ದೃಢನೇತ್ರರೆಂಬ ಮೂರು ಮಕ್ಕಳು ಹುಟ್ಟಿದರು.

ಹೀಗೆ ಸಾವಿರ ವರುಷಗಳು ಕಳೆಯಲು, ಲೋಕಪಿತಾಮಹನಾದ ಬ್ರಹ್ಮನು ಈತನ ಸಮೀಪಕ್ಕೆ ಬಂದು, ಈತನನ್ನು ಕುರಿತು, ಮೃದುವಾದ ವಾಕ್ಯದಿಂದ, “ಎಲೈ ಕೌಶಿಕನೆ! ಈಗ ನೀನು ನಿನ್ನ ಮಹಾತಪಸ್ಸಿನಿಂದ ಸಮಸ್ತ ರಾಜರ್ಷಿಗಳಿಗೂ ಮೇಲೆನಿಸಿಕೊಂಡಿರುವೆ. ಇನ್ನು ನಾವು ನಿನ್ನನ್ನು ರಾಜರ್ಷಿಯೆಂದೇ ಎಣಿಸುವೆವು” ಎಂದು ಹೇಳಿ, ಅಂತರ್ಧಾನವನ್ನು ಹೊಂದಿ, ದೇವತೆಗಳೊಡಗೂಡಿ ತನ್ನ ಲೋಕಕ್ಕೆ ಹೊರಟುಹೋದನು. ಇತ್ತಲಾಗಿ ವಿಶ್ವಾಮಿತ್ರನು ಈ ಮಾತನ್ನು ಕೇಳಿದೊಡನೆ ಲಜ್ಜೆಯಿಂದ ತಲೆಯನ್ನು ತಗ್ಗಿಸಿದವನಾಗಿ, ಬಹಳ ಸಂಕಟದಿಂದ, ತನ್ನಲ್ಲಿ ತಾನು “ಛೀ! ಇಷ್ಟುದೊಡ್ಡ ತಪಸ್ಸನ್ನು ಮಾಡಿದೆನು. ಇದರಿಂದ ದೇವತೆಗಳೆಲ್ಲರೂ ನನ್ನನ್ನು ರಾಜರ್ಷಿ ಯೆಂದು ಕರೆದುಬಿಟ್ಟಮಾತ್ರಕ್ಕೆ ಫಲವೇನು!” ಎಂದು ಯೋಚಿಸಿ, ಪುನಃ ಮತ್ತೂ ದೊಡ್ಡ ತಪಸ್ಸನ್ನು ಮಾಡಲಾಂಭಿಸಿದನು.

ಹೀಗೆ ಜಿತೇಂದ್ರಿಯನಾಗಿ ತಪಸ್ಸು ಮಾಡುತ್ತಿರುವಾಗಲೇ, ಅತ್ತಲಾಗಿ ಅಯೋಧ್ಯೆಯಲ್ಲಿ ಇಕ್ಷ್ವಾಕು ವಂಶದಲ್ಲಿ ಹುಟ್ಟಿ ಸತ್ಯಸಂಧನೆಂದು ಖ್ಯಾತಿ ಹೊಂದಿದ್ದ ತ್ರಿಶಂಕುವೆಂಬ ರಾಜನು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು. ಆತನಿಗೆ ಒಂದಾನೊಂದು ಕಾಲದಲ್ಲಿ ಈ ಮನುಷ್ಯದೇಹದೊಡನೆಯೇ ಸ್ವರ್ಗಕ್ಕೆ ಹೋಗಬೇಕೆಂಬ ಬುದ್ಧಿಯು ಹುಟ್ಟಿತು. ಅದಕ್ಕೆ ತಕ್ಕ ಒಂದು ಯಜ್ಞವನ್ನು ಮಾಡಬೇಕೆಂದು ಯೋಚಿಸಿದನು. ಆಗ ಪುರೋಹಿತರಾದ

ವಸಿಷ್ಠರಿಗೆ ತನ್ನ ಈ ಉದ್ದೇಶವನ್ನು ತಿಳಿಸಲು, ಅವರು [1]ಇದು ಅಸಾಧ್ಯ ಕಾರ್ಯವೆಂದು ಹೇಳಿಬಿಟ್ಟರು. ಹೀಗೆ ಅವರಿಂದ ತಿರಸ್ಕರಿಸಲ್ಪಟ್ಟವನಾಗಿ, ದಕ್ಷಿಣಾಭಿಮುಖವಾಗಿ ಹೊರಟು, ವಸಿಷ್ಠರ ನೂರುಮಂದಿ ಮಕ್ಕಳೂ ತಪಸ್ಸು ಮಾಡುತ್ತಿದ್ದ ಸ್ಥಾನಕ್ಕೆ ಬಂದನು. ಮಹಾ ಯಶಸ್ವಿಗಳಾಗಿ ಬಹುಕಾಲದಿಂದ ತಪಸ್ಸು ಮಾಡುತ್ತಲಿರುವ ಮಹಾತ್ಮರಾದ ಆ ಗುರುಪುತ್ರರೆಲ್ಲರನ್ನೂ ನೋಡಿ ವಿನಯದಿಂದ ನಮಸ್ಕರಿಸಿ ಕೈಮುಗಿದು ಲಜ್ಜೆಯಿಂದ ತಲೆಯನ್ನು ತಗ್ಗಿಸಿ ಕೊಂಡು, "ಎಲೈ ಗುರುಪುತ್ರರೆ! ಒಂದಾನೊಂದು ಕಾರ್ಯಕ್ಕಾಗಿ ಪ್ರಯತ್ನಿಸಿದ ನನ್ನನ್ನು ವಸಿಷ್ಠರು ತಿರಸ್ಕರಿಸಿದುದರಿಂದ, ನಾನು ಈಗ ನಿಮ್ಮಲ್ಲಿ ಮರೆಹೊಕ್ಕಿರುವೆನು. ಆಶ್ರಿತರನ್ನು ರಕ್ಷಿಸತಕ್ಕ ಸ್ವಭಾವವುಳ್ಳ ನೀವೆಲ್ಲರೂ ಹೇಗಾದರೂ ನನ್ನನ್ನು ಉದ್ಧರಿಸಬೇಕು. ನಾನೊಂದು ಮಹಾಯಜ್ಞವನ್ನು ಮಾಡಬೇಕೆಂದಿರುವೆನು. ಅದಕ್ಕೆ ನೀವೆಲ್ಲರೂ ಅನುಮತಿಸಬೇಕು. ಗುರು ಪುತ್ರರಾದುದರಿಂದ ನೀವು ನನಗೆ ಬಹಳ ಪೂಜ್ಯರು. ನಿಮ್ಮೆಲ್ಲರಿಗೂ ಕೈಮುಗಿದು ಬೇಡುವೆನು. ತಪೋಧನರಾಗಿಯೂ, ಬ್ರಾಹ್ಮಣೋತ್ತಮ ರಾಗಿಯೂ ಇರುವ ನಿಮಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಯಾಚಿಸುವೆನು. ನೀವೆಲ್ಲರೂ ಅಕ್ಕರೆಯಿಂದ ಆ ಯಜ್ಞವನ್ನು ನಡೆಸಿ ನನ್ನ ಕಾರ್ಯ ಸಿದ್ಧಿಯನ್ನುಂಟುಮಾಡಬೇಕು. ಈ ಶರೀರದೊಡನೆಯೇ ಸ್ವರ್ಗಕ್ಕೆ ಹೋಗ ಬೇಕೆಂದಿರುವೆನು. ನಿಮ್ಮ ತಂದೆಯಾದ ವಸಿಷ್ಠರು ನಮಗೆ ಕುಲಪುರೋಹಿತ ರಾಗಿದ್ದರೂ ನಮ್ಮನ್ನು ತಿರಸ್ಕರಿಸಿಬಿಟ್ಟರು. ನನಗೆ ಬೇರೆ ಗತಿಯಿಲ್ಲ. ಗುರು ಪುತ್ರರಾದ ನೀವಲ್ಲದೆ ನಮ್ಮನ್ನು ಉದ್ಧರಿಸತಕ್ಕವರು ಬೇರೆ ಯಾರುಂಟು? ಆ ವಸಿಷ್ಠರು ಕೈಬಿಟ್ಟಮೇಲೆ ನಮ್ಮನ್ನು ರಕ್ಷಿಸತಕ್ಕ ಭಾರವು ನಿಮ್ಮದೇ ಅಲ್ಲವೇ?" ಎಂದು ಪ್ರಾರ್ಥಿಸಿದನು.

ಇಲ್ಲಿಗೆ ಐವತ್ತೇಳನೆಯ ಸರ್ಗವು.

---

1. ಸಶರೀರಸ್ವರ್ಗವನ್ನು ಕೊಡತಕ್ಕ ಯಜ್ಞವನ್ನು ಮಾಡಿಸುವುದು ವಸಿಷ್ಠಮಹರ್ಷಿಗೆ ಅಸಾಧ್ಯವೆಂದಾಗಲಿ, ಅಥವಾ ಆ ವಿಧವಾದ ಯಾಗವೇ ಇಲ್ಲವೆಂದಾಗಲಿ ಗ್ರಹಿಸಕೂಡದು. "ಸಶರೀರಸ್ಸ್ವರ್ಗಂ ಲೋಕಮೇತಿ" ಎಂಬ ಶ್ರುತಿಪ್ರಮಾಣದಿಂದ, ಇಂತಹ ಯಜ್ಞವೊಂದುಂಟೆಂಬುದು ಸ್ಪಷ್ಟಪಡುವುದು. ಆದುದರಿಂದ ಇಲ್ಲಿ ತ್ರಿಶಂಕುವಿಗೆ ಮಾತ್ರ ಆ ವಿಧವಾದ ಸ್ವರ್ಗಪ್ರಾಪ್ತಿಯಿಲ್ಲ ವೆಂಬುದನ್ನು ವಸಿಷ್ಠನು ಕಲ್ಪಾಂತರದ ವೃತ್ತಗಳಿಂದ ತಿಳಿದು, ಈ ವಾಕ್ಯ ವನ್ನು ಹೇಳಿದನೆಂದೇ ಊಹಿಸಬೇಕು.

ತ್ರಿಶಂಕುವು ವಸಿಷ್ಠಪುತ್ರರಿಂದ ತಿರಸ್ಕೃತನಾಗಿ ವಿಶ್ವಾಮಿತ್ರನನ್ನು ಮರೆಹೋಗುವುದು

ತ್ರಿಶಂಕುವಿನ ಈ ಮಾತನ್ನು ಕೇಳಿ, ಆ ನೂರುಮಂದಿ ಋಷಿಪುತ್ರರೂ ಬಹಳ ಕೋಪಗೊಂಡವರಾಗಿ, ಆತನನ್ನು ಕುರಿತು, “ಎಲೈ ಅವಿವೇಕಿಯೇ! ನೀನು ಮೊದಲೇ ಬುದ್ಧಿಯಿಲ್ಲದವನಾಗಿ, ಅಸಾಧ್ಯಕಾರ್ಯಕ್ಕಾರಂಭಿಸಿದೆ! ಆದರಿಂದ ಸತ್ಯವಾದಿಯಾದ ನಮ್ಮ ತಂದೆಯು ನಿನ್ನನ್ನು ನಿರಾಕರಿಸಿರಬಹುದೇ ಹೊರತು ನಿನ್ನಲ್ಲಿ ದ್ವೇಷಬುದ್ಧಿಯಿಂದಲ್ಲ. ಹೀಗಿರುವಾಗಲೂ ಆತನ ಮಾತನ್ನು ನೀನು ಉಲ್ಲಂಘಿಸಿ, ಮತ್ತೊಬ್ಬರಲ್ಲಿ ಹೋಗಿ ಕೇಳುವುದುಚಿತವೆ? ಇಕ್ಷ್ವಾಕುವಂಶದವರೆಲ್ಲರಿಗೂ ಪುರೋಹಿತನಾಗಿಯೂ, ಪರಮಗುರುವಾಗಿಯೂ ಇರುವ ನಮ್ಮ ತಂದೆಯ ಮಾತನ್ನು ಮೀರಿ ನಡೆಯುವುದು ನಿನಗೆ ಧರ್ಮವೆ? ಲೋಕಪೂಜ್ಯನಾಗಿಯೂ, ಬ್ರಹ್ಮರ್ಷಿಯಾಗಿಯೂ ಇರುವ ಆ ವಸಿಷ್ಠನೇ ಅಸಾಧ್ಯವೆಂದು ಬಿಟ್ಟುಬಿಟ್ಟ ಯಜ್ಞವನ್ನು ಮಾಡಿಸುವುದಕ್ಕೆ ನಮ್ಮಿಂದ ಹೇಗೆ ಸಾಧ್ಯವು? ಎಲೈ ಮೂಢನೆ! ನಿನ್ನ ಪಟ್ಟಣಕ್ಕೆ ಹಿಂತಿರುಗಿ ಹೋಗು. ಆ ವಸಿಷ್ಠನು ಮೂರುಲೋಕಕ್ಕೂ ಯಾಗಮಾಡಿಸತಕ್ಕ ಸಾಮರ್ಥ್ಯವುಳ್ಳವನು. ಆತನನ್ನು ಅವಮಾನಪಡಿಸಬೇಕೆಂದರೆ ನಮ್ಮಿಂದ ಸಾಧ್ಯವೆ? ಛೀ ಹೋಗು” ಎಂದು ತಿರಸ್ಕರಿಸಿಬಿಟ್ಟರು.

ಹೀಗೆ ಮಿತಿಮೀರಿದ ಕೋಪದಿಂದ ಆ ಗುರುಪುತ್ರರು ಹೇಳಿದುದನ್ನು ಕೇಳಿ, ದೊರೆಯು ಪುನಃ ಅವರನ್ನು ಕುರಿತು “ಕುಲಗುರುವಾದ ವಸಿಷ್ಠನು ತಿರಸ್ಕರಿಸಿದನೆಂದು ನಿಮ್ಮಲ್ಲಿಗೆ ಬಂದೆನು. ನೀವೂ ತಿರಸ್ಕರಿಸಿದಿರಲ್ಲವೆ? ಆದರೇನು? ಇರಲಿ! ಮತ್ತೊಬ್ಬರ ಬಳಿಗಾದರೂ ಹೋಗಿ ನನ್ನ ಕಾರ್ಯವನ್ನು ಸಾಧಿಸಿಕೊಳ್ಳುವೆನು. ಎಲೈ ತಪೋಧನರೆ! ನೀವು ಕ್ಷೇಮದಿಂದಿರಿ!” ಎಂದು ಹೇಳಿದನು. ಹೀಗೆ ಆ ರಾಜನು ಮರ್ಮಭೇದಕವಾಗಿ ಹೇಳಿದ ಮಾತನ್ನು ಕೇಳಿ ಈ ಋಷಿಪುತ್ರರೆಲ್ಲರೂ ಬಹಳ ಕೋಪಗೊಂಡು “ಛೀ! ನೀಚನೆ! ನೀನು ಚಂಡಾಲನಾಗಿ ಹೋಗು!” ಎಂದು ಶಾಪಕೊಟ್ಟು ತಮ್ಮ ಆಶ್ರಮದೊಳಗೆ ಪ್ರವೇಶಿಸಿದರು. ಹೀಗೆ ವಸಿಷ್ಠಪುತ್ರರು ಆತನಮೇಲೆ ಶಾಪಜಲವನ್ನು ಪ್ರೋಕ್ಷಿಸಿದೊಡನೆಯೇ, ಉರಿಯುತ್ತಿರುವ ಬೆಂಕಿಗೆ ನೀರೆರೆದಂತೆ, ಅವನ ರಾಜತೇಜಸ್ಸೂ, ರೂಪಲಾವಣ್ಯಗಳೂ ಕಂದಿ, ಮೈಯೆಲ್ಲವೂ ಕಪ್ಪಾಯಿತು. ಆ ರಾತ್ರಿಯು ಕಳೆದು ಬೆಳಗಾಗುವುದರೊಳಗಾಗಿಯೇ ಈ ರಾಜ

ನಿಗೆ ಚಂಡಾಲತ್ವವುಂಟಾಯಿತು. ಆತನು ಉಟ್ಟಿದ್ದ ಬಟ್ಟೆಗಳೆಲ್ಲವೂ ಕಪ್ಪಾದುವು. ಮೈಬಣ್ಣವು ಕೆಟ್ಟಿತು. ಘೋರಸ್ವರೂಪವುಂಟಾಯಿತು. ತಲೆಯ ಕೂದಲು ಗಳೆಲ್ಲವೂ ಉದಿರಿಹೋದುವು. ಅವನು ಧರಿಸಿಕೊಂಡಿದ್ದ ಗಂಧಪುಷ್ಪಾದಿ ಗಳೆಲ್ಲವೂ ಶ್ಮಶಾನಜನ್ಯವಾದುವುಗಳಂತೆ ಕಾಣಿಸಿದುವು. ಅವನು ಧರಿಸಿದ್ದ ರಾಜಯೋಗ್ಯವಾದ ಆಭರಣಗಳೆಲ್ಲವೂ ಉಕ್ಕಿನಿಂದ ಮಾಡಲ್ಪಟ್ಟಂತೆ ತೋರಿದುವು. ಹೀಗೆ ಘೋರರೂಪದಿಂದ ಚಂಡಾಲನಾದ ರಾಜನನ್ನು ನೋಡಿ, ಮಂತ್ರಿಗಳೂ, ಪುರಜನರೂ ಭಯಪಟ್ಟು ಆ ಪಟ್ಟಣವನ್ನೇ ಬಿಟ್ಟು ಓಡಿಹೋದರು. ರಾಜನೊಬ್ಬನೇ ಏಕಾಂಗಿಯಾಗಿ ನಿಂತನು. ಹೀಗೆ ತನ್ನ ದುರವಸ್ಥೆಯನ್ನು ನೋಡಿ ಅವನು ಹಗಲುರಾತ್ರಿಯೂ ಸಂಕಟ ಪಡುತ್ತಿದ್ದರೂ, ತಾನು ಉದ್ದೇಶಿಸಿದ ಕೆಲಸವನ್ನು ಹೇಗಾದರೂ ಸಾಧಿಸ ಬೇಕೆಂಬ ದೃಢಸಂಕಲ್ಪವನ್ನು ಬಿಡದೆ, ವಸಿಷ್ಠನಿಗೆ ವೈರಿಯಾದ ವಿಶ್ವಾ ಮಿತ್ರನನ್ನು ಹುಡುಕಿಕೊಂಡು ಹೊರಟು, ತಪಸ್ಸು ಮಾಡುತ್ತಿದ್ದ ಈತನ ಬಳಿಗೆ ಬಂದನು.

ಹೀಗೆ ದೀನದಶೆಯನ್ನು ಹೊಂದಿ ಚಂಡಾಲರೂಪದಿಂದ ಬಂದಿರುವ ಈ ರಾಜನನ್ನು ಕಂಡೊಡನೆಯೇ ವಿಶ್ವಾಮಿತ್ರನಿಗೆ ಆತನಲ್ಲಿ ಪೂರ್ಣವಾದ ದಯೆಯುಂಟಾಯಿತು. ಆಗ ಧರ್ಮಬುದ್ಧಿಯುಳ್ಳ ಮಹಾತೇಜಸ್ವಿಯಾದ ಈ ವಿಶ್ವಾಮಿತ್ರನು ಬಹಳ ಮರುಕಗೊಂಡು ಘೋರರೂಪದಿಂದ ಮುಂದೆ ನಿಂತಿ ರುವ ಆ ರಾಜನನ್ನು ನೋಡಿ, “ಎಲೈ ರಾಜನೆ! ನಿನಗೆ ಮಂಗಳವಾಗಲಿ. ನೀನು ಇಲ್ಲಿಗೆ ಬಂದ ಉದ್ದೇಶವೇನು? ಮಹಾಬಲಶಾಲಿಯಾದ ನೀನು ಅಯೋಧ್ಯಾಧಿಪತಿಯಾಗಿದ್ದು, ಹೀಗೆ ಚಂಡಾಲತ್ವವನ್ನು ಹೊಂದಲು ಕಾರಣ ವೇನು?” ಎಂದನು. ಅದಕ್ಕಾ ರಾಜನು ವಿನಯದಿಂದ ಕೈಮುಗಿದು ನಿಂತು, “ಎಲೈ ಮಹಾತ್ಮನೆ! ನನಗೆ ಈ ಮನುಷ್ಯಶರೀರದೊಡನೆಯೇ ಸ್ವರ್ಗಕ್ಕೆ ಹೋಗಬೇಕೆಂಬ ಕುತೂಹಲ ಉಂಟಾಯಿತು. ನೂರಾರು ಯಾಗಗಳನ್ನು ಮಾಡಿದರೂ ಈ ಕೋರಿಕೆಯು ನೆರವೇರಲಿಲ್ಲ. ಇದಕ್ಕಾಗಿಯೇ ತಕ್ಕ ಯಜ್ಞ ವೊಂದನ್ನು ಮಾಡಿಸಬೇಕೆಂದು ನಮ್ಮ ಕುಲಪುರೋಹಿತರಾದ ವಸಿಷ್ಠರನ್ನು ಪ್ರಾರ್ಥಿಸಿದೆನು. ಇದು ಅಸಾಧ್ಯವೆಂದು ಹೇಳಿ ಅವರು ತಿರಸ್ಕರಿಸಿಬಿಟ್ಟರು. ಅಲ್ಲಿಂದ ಅವರ ಮಕ್ಕಳ ಬಳಿಗೆ ಬಂದು ಕೇಳಿದೆನು. ಅವರೂ ತಿರಸ್ಕರಿಸಿದರು. ಕೊನೆಗೆ ನನ್ನ ಕೋರಿಕೆಯು ನೆರವೇರಲೇ ಇಲ್ಲ. ಅದರಮೇಲೆ ಈಗ ಈ

ದುರವಸ್ಥೆಯೂ ಬಂದೊದಗಿತು. ಇದುವರೆಗೆ ನಾನೆಂದಿಗೂ [1]ಸುಳ್ಳಾಡಿದವನಲ್ಲ. ಮುಂದೆಯೂ ಸುಳ್ಳಾಡತಕ್ಕವನಲ್ಲ. ಎಲೈ ಸೌಮ್ಯಸ್ವರೂಪನೆ! ಇದೋ! ನನ್ನ ಕ್ಷತ್ರಿಯ ಧರ್ಮದ ಮೇಲೆ ಆಣೆಯಿಟ್ಟು ಪ್ರಮಾಣಮಾಡುವೆನು. ಎಂತಹ ಮಹಾವಿಪತ್ತುಗಳು ಬಂದೊದಗಿದರೂ ಸುಳ್ಳೆಂಬುದು ನನ್ನ ಬಾಯಿಂದ ಹೊರಡಲಾರದು. ಇದುವರೆಗೆ ಎಷ್ಟೋ ಯಾಗಗಳನ್ನು ಮಾಡಿದೆನು. ಧರ್ಮದಿಂದಲೇ ಪ್ರಜೆಗಳನ್ನು ಕಾಪಾಡಿದೆನು. ಮಹಾತ್ಮರಾದ ಗುರುಜನಗಳೆಲ್ಲರನ್ನೂ ನನ್ನ ವಿನಯಾದಿಗುಣದಿಂದಲೂ, ಸದಾಚಾರಗಳಿಂದಲೂ ಸಂತೋಷಪಡಿಸಿರುವೆನು. ಇನ್ನೇನು ಮಾಡಲಿ! ಹೀಗೆ ಧರ್ಮಾರ್ಜನೆಗಾಗಿ ಪ್ರಯತ್ನಪಟ್ಟು, ಈ ಸತ್ಕಾರ್ಯಕ್ಕೆ ನಮ್ಮ ಗುರುಗಳು ಸಮ್ಮತಿಸದೆ ಹೋದರು. ಎಲೈ ಮಹಾತ್ಮನೆ! ಮುಖ್ಯವಾಗಿ ಮನುಷ್ಯಪ್ರಯತ್ನವು ಎಷ್ಟಿದ್ದರೂ ಪ್ರಯೋಜನವಿಲ್ಲ. ಎಲ್ಲಕ್ಕೂ ಅದೃಷ್ಟವೇ ಕಾರಣವು. ಅದೃಷ್ಟದಿಂದಲೇ ಸಮಸ್ತ ಕಾರ್ಯಗಳೂ ಸಿದ್ಧಿಸುವುವು. ಯಾವುದಕ್ಕೂ ಅದೃಷ್ಟವು ಕಾರಣವೇ ಹೊರತು, ಪುರುಷಪ್ರಯತ್ನದಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ ನಾನು ಉದ್ದೇಶಿಸಿದ ಕೆಲಸಗಳೆಲ್ಲವನ್ನೂ ದೈವವೇ ಕೆಡಿಸಿತು. ಹೀಗೆ ಅದೃಷ್ಟಹೀನನಾಗಿ ಸಂಕಟಪಡುತ್ತಿರುವ ನನ್ನನ್ನು ಅನುಗ್ರಹಿಸಬೇಕು. ನನಗೆ ನಿನ್ನನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಪುನಃ ಆ ವಸಿಷ್ಠನೇ ಕರೆದರೂ ನಾನು ಹೋಗತಕ್ಕವನಲ್ಲ. ಆದುದರಿಂದ ನೀನು ನನ್ನಲ್ಲಿ ಕೃಪೆಯಿಟ್ಟು ನಿನ್ನ ಅನುಗ್ರಹವೆಂಬ ಪುರುಷಕಾರದಿಂದ ನನಗೆ ಪ್ರತಿಕೂಲವಾಗಿರುವ ದೈವವನ್ನು ಅನುಕೂಲಪಡಿಸಿಕೊಡು" ಎಂದನು.

ಇಲ್ಲಿಗೆ ಐವತ್ತೆಂಟನೆ ಸರ್ಗವು.

---

1. "ಯಜ್ಞೋಽನೃತೇನ ಕ್ಷರತಿ" ಎಂದರೆ, ಸುಳ್ಳಾಡುವುದರಿಂದ ಯಜ್ಞವು ನಷ್ಟವಾಗುವುದೆಂದು ಪ್ರಮಾಣವಿರುವುದರಿಂದ, ಯಜ್ಞದ ಫಲಸಿದ್ಧಿಯನ್ನು ತಪ್ಪಿಸತಕ್ಕ ಅಸತ್ಯಕ್ಕೂ ತಾನು ಎಂದಿಗೂ ಅವಕಾಶಕೊಟ್ಟವನಲ್ಲವೆಂದು ಭಾವವು.

ವಿಶ್ವಾಮಿತ್ರನು ತ್ರಿಶಂಕುವಿನಿಂದ ಯಜ್ಞವನ್ನು ಮಾಡಿಸಿದುದು

ವಿಶ್ವಾಮಿತ್ರನು ಹೀಗೆ ದೈನ್ಯದಿಂದ ಬೇಡುತ್ತಲಿರುವ ಚಂಡಾಲರೂಪಿಯಾದ ಆ ರಾಜನ ಮಾತನ್ನು ಕೇಳಿ, ಬಹಳ ದಯೆಯಿಂದ ಆತನನ್ನು ಕುರಿತು, "ಎಲೈ ಇಕ್ಷ್ವಾಕುಕುಲಶ್ರೇಷ್ಠನೆ! ನಿನಗೆ ಸುಖಾಗಮನವು. ನೀನು ಧಾರ್ಮಿಕನೆಂಬುದನ್ನು ಬಲ್ಲೆನು. ಎಲೈ ವತ್ಸನೆ! ಏಕೆ ಭಯಪಡುವೆ! ನಿನ್ನನ್ನು ಕಾಪಾಡುವೆನು. ಇದೋ ನಾವು ಮಾಡುವ ಯಜ್ಞದಲ್ಲಿ ಸಹಾಯಕವಾಗಿರುವುದಕ್ಕಾಗಿ ಪುಣ್ಯಕರ್ಮಪರರಾದ ಮಹರ್ಷಿಗಳೆಲ್ಲರನ್ನೂ ಈಗಲೇ ಕರೆಸುವೆನು. ನೀನು ಯಜ್ಞವನ್ನು ಮಾಡಬಹುದು. ಎಲೈ ರಾಜನೆ! ಈ ಚಂಡಾಲಸ್ವರೂಪದಲ್ಲಿರುವಾಗ ಯಜ್ಞವನ್ನು ಮಾಡಿ ಸ್ವರ್ಗವನ್ನು ಸೇರುವುದು ಹೇಗೆಂದು ಸಂದೇಹಪಡಬೇಡ. ಇದು ನಿನಗೆ ಗುರುಶಾಪದಿಂದ ಉಂಟಾಗಿರುವುದರಿಂದ ಇದನ್ನು ತಪ್ಪಿಸುವುದಕ್ಕೆ ಬ್ರಹ್ಮನಿಂದಲೂ ಸಾಧ್ಯವಿಲ್ಲ. ಈ ಚಂಡಾಲದೇಹದೊಡನೆಯೇ ನೀನು ಸ್ವರ್ಗಕ್ಕೆ ಹೋಗುವಹಾಗೆ ಮಾಡುವೆನು! ನನ್ನ ಸಾಮರ್ಥ್ಯವನ್ನು ನೋಡು! ಎಲೈ ನರೇಂದ್ರನೆ! ಹೆಚ್ಚಾಗಿ ಹೇಳಿದುದರಿಂದೇನು! ಮರೆಹೊಕ್ಕವರನ್ನು ಕಾಪಾಡುವುದರಲ್ಲಿ ಸಮರ್ಥನಾದ ವಿಶ್ವಾಮಿತ್ರನೆಂಬ ನನ್ನಲ್ಲಿ ನೀನು ಶರಣಾಗತಿಯನ್ನು ಮಾಡಿದಮೇಲೆ, ಆ ಸ್ವರ್ಗವು ನಿನ್ನ ಕೈಯಲ್ಲಿಯೇ ಇರುವುದೆಂದು ತಿಳಿ!" ಎಂದು ಆತನಿಗೆ ಅಭಯವನ್ನು ಕೊಟ್ಟು, ಕೂಡಲೇ ಯಜ್ಞಸಾಮಗ್ರಿಗಳನ್ನು ಸಿದ್ಧಪಡಿಸುವಂತೆ ಧಾರ್ಮಿಕರಾಗಿಯೂ, ಪ್ರಾಜ್ಞರಾಗಿಯೂ ಇರುವ ತನ್ನ ಮಕ್ಕಳಿಗೆ ಅಪ್ಪಣೆಮಾಡಿದನು. ಆಮೇಲೆ ತನ್ನ ಶಿಷ್ಯರೆಲ್ಲರನ್ನೂ ಕರೆದು, "ಎಲೈ ವತ್ಸರೇ! ನೀವು ಈಗಲೇ ಹೋಗಿ ಋಷಿಗಳೆಲ್ಲರನ್ನೂ ಕರೆದು ಬನ್ನಿರಿ. ಅವರು ತಮ್ಮ ತಮ್ಮ ಶಿಷ್ಯರನ್ನೂ, ಮಿತ್ರರನ್ನೂ, ಋತ್ವಿಕ್ಕುಗಳನ್ನೂ, ವಿದ್ವಾಂಸರನ್ನೂ ಸಂಗಡ ಕರೆದುಕೊಂಡು ಬರುವಹಾಗೆ ಹೇಳಿರಿ. ನೀವು ನನ್ನ ಅಪ್ಪಣೆಯಂತೆ ಅವರನ್ನು ಕರೆಯುವಾಗ, ಆ ಋಷಿಗಳಲ್ಲಿ ಯಾರಾದರೂ ನಮ್ಮ ಮಾತನ್ನು ಅನಾದರಿಸಿ, ತಿರಸ್ಕಾರವಾಕ್ಯಗಳನ್ನಾಡಿದಪಕ್ಷದಲ್ಲಿ, ಅದೆಲ್ಲವನ್ನೂ ನನಗೆ ಬಂದು ತಿಳಿಸಬೇಕು" ಎಂದನು.

ಈ ಮಾತನ್ನು ಕೇಳಿ ಶಿಷ್ಯರೆಲ್ಲರೂ ನಾನಾದಿಕ್ಕುಗಳಿಗೆ ಹೋಗಿ ಕರೆದ ಕೂಡಲೇ, ಎಲ್ಲಾ ಕಡೆಗಳಿಂದಲೂ ಬ್ರಹ್ಮವಾದಿಗಳಾದ ಋಷಿಗಳು ಬಂದು

ಸೇರುತ್ತಿದ್ದರು. ಕರೆಯುವುದಕ್ಕೆ ಹೋಗಿದ್ದವರೆಲ್ಲರೂ ಬಂದು ಆಗಾಗ ಅವರವರು ಹೇಳಿದ ಪ್ರತ್ಯುತ್ತರಗಳನ್ನೂ ತಿಳಿಸುತ್ತಿದ್ದರು. ಆಗ ಅವರಲ್ಲಿ ಕೆಲವರು ವಿಶ್ವಾಮಿತ್ರನನ್ನು ಕುರಿತು, "ಆರ್ಯನೆ! ನಿನ್ನ ಅಪ್ಪಣೆಯಂತೆ ಬ್ರಹ್ಮವಾದಿಗಳೆಲ್ಲರೂ ಅನೇಕವಾಗಿ ಬಂದು ಸೇರಿರುವರು. ಪ್ರಾಯಕವಾಗಿ ನಾವು ಕರೆದುಬಂದ ಋಷಿಗಳೆಲ್ಲರೂ ಬಂದಿರುವರು. ಆದರೆ ಮಹೋದಯ ನೆಂಬ ಹೆಸರುಳ್ಳ ಋಷಿಯೊಬ್ಬನೂ, ವಸಿಷ್ಠನ ನೂರುಮಂದಿ ಮಕ್ಕಳೂ ಇಲ್ಲಿಗೆ ಬರುವುದಕ್ಕೆ ಒಪ್ಪಲಿಲ್ಲ. ಅವರು ಇಲ್ಲಿಗೆ ಬಾರದಿದ್ದುದೂ ಹಾಗಿರಲಿ! ನಾವು ಅವರನ್ನು ಕರೆದಕೂಡಲೇ ಕೋಪದಿಂದ ಒಂದೆರಡು ಕೆಟ್ಟಮಾತು ಗಳನ್ನೂ ಆಡಿದರು. ಅವುಗಳನ್ನೂ ತಿಳಿಸುವೆವು. ಕೇಳಬೇಕು. "ಯಾಗ ಮಾಡಿಸುವ ಯೋಗ್ಯತೆಯು ಬ್ರಾಹ್ಮಣನಿಗಲ್ಲದೆ ಇತರ ಜಾತಿಯವರಿಗಿಲ್ಲ. ಈ ಯಾಗದಲ್ಲಿ ಕ್ಷತ್ರಿಯನು ಪುರೋಹಿತನಂತೆ! ಹೊಲೆಯನು ದೀಕ್ಷಿತನಂತೆ! ಆಹಾ! ಬಹಳ ಚೆನ್ನಾಗಿದೆ! ಈ ಯಜ್ಞದಲ್ಲಿ ಯಾವ ದೇವತೆಗಳು ಬಂದು ತಮ್ಮ ತಮ್ಮ ಭಾಗದ ಹವಿಸ್ಸನ್ನು ತೆಗೆದುಕೊಳ್ಳುವರೋ! ಋಷಿಗಳಾದರೂ ಋತ್ವಿಕ್ಕುಗಳಾಗಿ ನಿಂತು ಆ ಯಾಗಶೇಷವನ್ನು ಹೇಗೆ ತಿನ್ನುವರೋ! ವಿಶ್ವಾ ಮಿತ್ರನ ಅಧೀನದಲ್ಲಿರುವ ಬ್ರಾಹ್ಮಣರಾದರೂ ಹೇಗೆ ಆ ಚಂಡಾಲ ಭೋಜನ ವನ್ನು ಮಾಡಿ ಸ್ವರ್ಗವನ್ನು ಹೊಂದಬಲ್ಲರು!" ಎಂದು ಕ್ರೂರವಾದ ಕೆಲವು ಮಾತುಗಳನ್ನು ಹೇಳುತ್ತಿದ್ದರು" ಎಂದರು.

ಶಿಷ್ಯರ ಈ ಮಾತನ್ನು ಕೇಳಿ ವಿಶ್ವಾಮಿತ್ರನು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ, "ಎಲೈ ಶಿಷ್ಯರೆ! ದೋಷರಹಿತನಾಗಿ, ಕ್ರೂರವಾದ ತಪಸ್ಸನ್ನು ಮಾಡುತ್ತಿರುವ ನನ್ನನ್ನು ಯಾರು ದೂಷಿಸಿದರೋ, ಆ ದುರಾತ್ಮ ರಾದ ವಸಿಷ್ಠಪುತ್ರರನ್ನು ಈಗಲೇ ಭಸ್ಮಮಾಡುವೆನು. ಇದರಲ್ಲಿ ಸಂದೇಹವಿಲ್ಲ. ಈಗಲೇ ಅವರು ಕಾಲಪಾಶದಿಂದ ಕಟ್ಟಲ್ಪಟ್ಟವರಾಗಿ ಯಮನ ಪಟ್ಟಣಕ್ಕೆ ಸಾಗಿಸಲ್ಪಡುವರು. ಇಷ್ಟು ಮಾತ್ರವೇ ಅಲ್ಲ. ಮುಂದಿನ ಏಳುನೂರು ಜನ್ಮ ಗಳವರೆಗೂ ಈ ಲೋಕದಲ್ಲಿ ಅವರು ವಿಕಾರರೂಪವುಳ್ಳವರಾಗಿ ನಾಯಿ ಮಾಂಸದಿಂದಲೇ ಹೊಟ್ಟೆಯನ್ನು ಹೊರೆಯುತ್ತ, ಮುಷ್ಟಿಕರೆಂಬ ಹೆಸರಿನಿಂದ ಹೀನಜಾತಿಯಲ್ಲಿ ಹುಟ್ಟಿ, ಸಿಕ್ಕಿದ ಕಡೆಯಲ್ಲಿ ಹೆಣವನ್ನು ತಿನ್ನುತ್ತಾ ಅಲ್ಲಲ್ಲಿ ಸಂಚರಿಸುತ್ತಿರಲಿ! ಬುದ್ಧಿಹೀನನಾದ ಆ ಮಹೋದಯನೂ ಕೂಡ ದೋಷ ರಹಿತನಾದ ನನ್ನನ್ನು ದೂಷಿಸಿದುದರಿಂದ ಸಮಸ್ತ ಲೋಕಗಳಲ್ಲಿಯೂ

ನಿಂದಿತವಾಗಿ, ಬೇಡನಾಗಿ ಹುಟ್ಟಿ, ದಯೆಯಿಲ್ಲದೆ ಪ್ರಾಣಿಗಳನ್ನು ಕೊಲ್ಲುತ್ತಾ ಬಹುಕಾಲದವರೆಗೆ ದುರ್ಗತಿಯನ್ನೇ ಅನುಭವಿಸುತ್ತಿರಲಿ" ಎಂದು ಅವರೆಲ್ಲರನ್ನೂ ಶಪಿಸಿ, ಮಹಾತೇಜಸ್ವಿಯಾದ ಆ ವಿಶ್ವಾಮಿತ್ರನು ಸುಮ್ಮನಾದನು.

ಇಲ್ಲಿಗೆ ಐವತ್ತೊಂಭತ್ತನೆಯ ಸರ್ಗವು

ವಿಶ್ವಾಮಿತ್ರನು ತ್ರಿಶಂಕುವಿಗೋಸ್ಕರ ಬೇರೊಂದು ಸ್ವರ್ಗವನ್ನು ಸೃಷ್ಟಿಸುವುದು

ಹೀಗೆ ವಿಶ್ವಾಮಿತ್ರನು ವಸಿಷ್ಠಪುತ್ರರನ್ನೂ, ಮಹೋದಯನನ್ನೂ ತನ್ನ ತಪೋಬಲದಿಂದ ಕೆಡಿಸಿದಮೇಲೆ, ಆ ಯಜ್ಞಕ್ಕಾಗಿ ಕರೆಸಿದ ಋಷಿಗಳನ್ನು ಕುರಿತು, "ಎಲೈ ಋಷಿಗಳೆ! ಇದೋ! ಈತನು ಇಕ್ಷ್ವಾಕುವಂಶದಲ್ಲಿ ಹುಟ್ಟಿದ ತ್ರಿಶಂಕುವೆಂಬ ರಾಜನು. ಈತನು ಪರಮಧಾರ್ಮಿಕನು. ಬಹಳ ಉದಾರಿಯು. ಈ ಶರೀರದೊಡನೆಯೇ ಸ್ವರ್ಗವನ್ನು ಪಡೆಯಬೇಕೆಂಬ ಉದ್ದೇಶದಿಂದ ನನ್ನನ್ನು ಮರೆಹೊಕ್ಕಿರುವನು. ಆದುದರಿಂದ ನಾವೆಲ್ಲರೂ ಸೇರಿ ಈತನಿಗೆ ಸ್ವಶರೀರಸ್ವರ್ಗವುಂಟಾಗುವಂತೆ ಒಂದು ಯಜ್ಞವನ್ನು ಮಾಡಿಸಬೇಕಾಗಿರುವುದು. ಅದಕ್ಕೆ ತಕ್ಕ ಸನ್ನಾಹಗಳನ್ನು ಮಾಡಿರಿ" ಎಂದನು. ಇದನ್ನು ಕೇಳಿ ಧರ್ಮಜ್ಞರಾದ ಆ ಮಹರ್ಷಿಗಳೆಲ್ಲರೂ ಕೂಡಿ ತಮ್ಮೊಳಗೆ ತಾವು "ಕುಶಿಕಪುತ್ರನಾದ ಈ ವಿಶ್ವಾಮಿತ್ರನು ಬಹಳ ಕೋಪಸ್ವಭಾವವುಳ್ಳವನು. ಈತನು ಹೇಳಿದಂತೆ ನಾವು ಅವಶ್ಯವಾಗಿ ನಡೆಸಬೇಕು. ಈತನು ಅಗ್ನಿಸಮಾನನು. ನಮ್ಮೆಲ್ಲರಿಗೂ ಪೂಜ್ಯನು. ಈತನ ಮಾತಿಗೆ ವಿರೋಧವಾಗಿ ಹೇಳಿದಪಕ್ಷದಲ್ಲಿ ನಮಗೂ ಶಾಪವನ್ನು ಕೊಟ್ಟುಬಿಡುವನು. ಆದುದರಿಂದ ನಾವೆಲ್ಲರೂ ಈ ಯಜ್ಞವನ್ನು ನಡೆಸಿಯೇತೀರಬೇಕು. ಈ ವಿಶ್ವಾಮಿತ್ರನು ಮಹಾಮಹಿಮೆಯುಳ್ಳವನಾದುದರಿಂದ, ಆತನನ್ನು ಮುಂದಿಟ್ಟುಕೊಂಡು ಮಾಡುವ ಈ ಯಜ್ಞದಲ್ಲಿ, ತ್ರಿಶಂಕುವಿನ ಕೋರಿಕೆಯು ಕೈಗೂಡುವುದರಲ್ಲಿ ಸಂದೇಹವಿರದು. ನಮ್ಮಲ್ಲಿ ಪ್ರತಿಯೊಬ್ಬರೂ ಅಕ್ಕರೆಯಿಂದ ತಮ್ಮ ತಮ್ಮ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿಯೇ ನಡೆಸಬೇಕು" ಎಂದು ನಿಶ್ಚಯಿಸಿಕೊಂಡು, ಅವರವರ ಕೆಲಸಗಳನ್ನು ಕ್ರಮವಾಗಿ ಮಾಡುತ್ತ ಬಂದರು. ಮಹಾತೇಜಸ್ವಿಯಾದ ವಿಶ್ವಾಮಿತ್ರನೇ ಆ ಯಜ್ಞವನ್ನು ಮಾಡಿಸ

ತಕ್ಕ ಮುಖ್ಯ ಪುರೋಹಿತನಾಗಿ ನಿಂತನು. ಮಂತ್ರಜ್ಞರಾದ ಋತ್ವಿಕ್ಕುಗಳೆಲ್ಲರೂ ಮಂತ್ರಲೋಪವಿಲ್ಲದೆ, ಕಲ್ಪೋಕ್ತವಾದ ರೀತಿಯಿಂದ, ಶಾಸ್ತ್ರಾನುಸಾರವಾಗಿ ತಮ್ಮ ತಮ್ಮ ಕರ್ಮಗಳನ್ನು ನಡೆಸಿದರು.

ಹೀಗೆ ಬಹುಕಾಲದವರೆಗೆ ಅವರವರ ಕರ್ಮಗಳನ್ನು ನಡೆಸುತ್ತ ಬಂದಮೇಲೆ, ಕೊನೆಗೆ ಮಹಾತಪಸ್ವಿಯಾದ ವಿಶ್ವಾಮಿತ್ರನು ಆ ಯಜ್ಞದ ಹವಿರ್ಭಾಗಗಳನ್ನು ತೆಗೆದುಕೊಳ್ಳುವುದಕ್ಕಾಗಿ ಆಯಾ ದೇವತೆಗಳನ್ನು ಮಂತ್ರೋಚ್ಚಾರಣಪೂರ್ವಕವಾಗಿ ಕರೆದನು. ಬಹುಕಾಲದವರೆಗೆ ನಿರೀಕ್ಷಿಸಿ ಪುನಃ ಪುನಃ ಮಂತ್ರಗಳನ್ನು ಹೇಳಿ ಕರೆದರೂ ಯಾವ ದೇವತೆಗಳೂ ಬರಲಿಲ್ಲ. ಆಗ ವಿಶ್ವಾಮಿತ್ರನು ಕೋಪಗೊಂಡು ಹೋಮೋಪಕರಣವಾದ ಸ್ರುವವನ್ನು ಎತ್ತಿಹಿಡಿದು, ತ್ರಿಶಂಕುವನ್ನು ನೋಡಿ, “ಎಲೈ ತ್ರಿಶಂಕುವೆ! ಈ ಹವಿರ್ದಾನವು ಹಾಗಿರಲಿ! ದೇವತೆಗಳು ಬಂದರೇನು! ಬಾರದಿದ್ದರೇನು! ನಾನು ಇದುವರೆಗೆ ಗಳಿಸಿಟ್ಟಿರುವ ಅಲ್ಪಸ್ವಲ್ಪ ತಪಶ್ಶಕ್ತಿಯೇ ಸಾಕು. ಈ ಯಜ್ಞದ ಕಷ್ಟವೇ ನಮಗೆ ಬೇಡ! ನನ್ನ ತಪೋಬಲವನ್ನು ನೋಡು! ಇದರಿಂದಲೇ ನಿನ್ನನ್ನು ಸ್ವರ್ಗಕ್ಕೇರಿಸುವೆನು! ವಸಿಷ್ಠನು ಯಾವುದನ್ನು ಅಸಾಧ್ಯವೆಂದು ಹೇಳಿದನೋ, ಆ ಸ್ವರ್ಗವನ್ನು ಈಗಲೇ ನಿನಗೆ ತೋರಿಸುವೆನು! ಇದೋ ನನ್ನ ತಪಶ್ಶಕ್ತಿಯನ್ನು ನಿನಗೆ ಕೊಟ್ಟಿರುವೆನು! ಇನ್ನು ಹೊರಡು” ಎಂದನು. ವಿಶ್ವಾಮಿತ್ರನು ಹೀಗೆ ಹೇಳಿದೊಡನೆ, ಋಷಿಗಳೆಲ್ಲರೂ ನೋಡುತ್ತಿರುವಾಗಲೇ, ಆ ತ್ರಿಶಂಕುವು ಚಂಡಾಲದೇಹದೊಡನೆಯೇ ಅಂತರಿಕ್ಷಮಾರ್ಗವಾಗಿ ಸ್ವರ್ಗಕ್ಕೇರಿದನು.

ಹೀಗೆ ತ್ರಿಶಂಕುವು ದೇವಲೋಕಕ್ಕೆ ಬಂದಿರುವುದನ್ನು ಕೇಳಿ ಇಂದ್ರನು ಸಮಸ್ತ ದೇವತೆಗಳೊಡಗೂಡಿ ಅಲ್ಲಿ ಬಂದು ಆತನನ್ನು ನೋಡಿ, “ಎಲೈ ತ್ರಿಶಂಕುವೆ! ನೀನು ಈ ಸ್ವರ್ಗಲೋಕವಾಸಕ್ಕೆ ಅರ್ಹನಲ್ಲ. ನಿನ್ನ ಲೋಕಕ್ಕೆ ಹಿಂತಿರುಗು! ಮೌಢ್ಯದಿಂದ ಗುರುಶಾಪಕ್ಕೊಳಗಾಗಿ ಜಾತಿಕೆಟ್ಟಿರುವ ನೀನೆಲ್ಲಿ? ಈ ಪುಣ್ಯಲೋಕವೆಲ್ಲಿ? ಸಾಕು! ತಲೆಕೆಳಗಾಗಿ ಭೂಮಿಯಮೇಲೆ ಬೀಳು” ಎಂದನು. ಈ ಮಾತುಗಳು ಕಿವಿಗೆ ಬಿದ್ದೊಡನೆಯೇ ತ್ರಿಶಂಕುವು ಅಂತರಿಕ್ಷದಿಂದ ತಲೆಕೆಳಗಾಗಿ ಬೀಳುತ್ತ, “ಎಲೈ ಮಹರ್ಷಿಯೆ! ರಕ್ಷಿಸು” ಎಂದು ಮೊರೆಯಿಟ್ಟನು. ತ್ರಿಶಂಕುವು ಹೀಗೆ ಮೊರೆಯಿಡುತ್ತ ಬೀಳುವುದನ್ನು ವಿಶ್ವಾಮಿತ್ರನು ನೋಡಿ, ಮಿತಿಮೀರಿದ ಕೋಪದಿಂದ, “ಎಲೈ ತ್ರಿಶಂಕುವೆ! ನಿಲ್ಲು! ನಿಲ್ಲು!”

ಎಂದು ಗರ್ಜಿಸಿ ಬೇರೊಬ್ಬ ಬ್ರಹ್ಮನೋ ಎಂಬಂತೆ, ಅಲ್ಲಿದ್ದ ಮಹರ್ಷಿಗಳ ನಡುವೆ ನಿಂತು, ಆ ತ್ರಿಶಂಕುವಿದ್ದ ದಕ್ಷಿಣದಿಕ್ಕಿನಲ್ಲಿ ಮತ್ತೊಂದು ಸ್ವರ್ಗಲೋಕವನ್ನೇ ಹೊಸದಾಗಿ ಸೃಷ್ಟಿಸಲಾರಂಭಿಸಿ, ಆ ದಿಕ್ಕಿನಲ್ಲಿಯೇ ಬೇರೊಂದು ಸಪ್ತರ್ಷಿ ಮಂಡಲವನ್ನೂ ಉಂಟುಮಾಡಿದನು. ಮೇಲೆ ಮೇಲೆ ಈತನಿಗೆ ಕೋಪವು ಹೆಚ್ಚುತ್ತಿರಲು, [1]ನಕ್ಷತ್ರ ಪರಂಪರೆಗಳನ್ನೂ ಬೇರೆ ಬೇರೆಯಾಗಿ ಸೃಷ್ಟಿಸಿಟ್ಟನು. ಆಮೇಲೆ ತನ್ನಲ್ಲಿ ತಾನು "ಈ ಲೋಕಕ್ಕೆ ಇಂದ್ರನೊಬ್ಬನನ್ನು ಬೇರೆಯಾಗಿ ಸೃಷ್ಟಿಸಬೇಕಲ್ಲವೆ? ಅಥವಾ ಬೇರೆ ಇಂದ್ರನೇಕೆ? ಇದಕ್ಕೆ ತ್ರಿಶಂಕುವೇ ಇಂದ್ರನಾಗಿರಲಿ!" ಎಂದು ನಿಶ್ಚಯಿಸಿ, ಇತರ ದೇವವರ್ಗಗಳನ್ನೂ ಕ್ರಮವಾಗಿ ಸೃಷ್ಟಿಸುವುದಕ್ಕಾರಂಭಿಸಿದನು. ಇದನ್ನು ನೋಡಿ ದೇವದಾನವರೂ, ಋಷಿಗಳೂ ತತ್ತಳಿಸಿದರು. ಮೂರು ಲೋಕವೂ ಭಯದಿಂದ ನಡುಗಿತು. ಆಗ ದೇವತೆಗಳೆಲ್ಲರೂ ಋಷಿಗಳನ್ನು ಮುಂದಿಟ್ಟುಕೊಂಡು, ವಿಶ್ವಾಮಿತ್ರನ ಬಳಿಗೆ ಬಂದು ಆತನನ್ನು ಕುರಿತು ಅನುನಯದಿಂದ, "ಎಲೈ ಮಹಾತ್ಮನಾದ ವಿಶ್ವಾಮಿತ್ರನೆ! ನೀನು ಹೀಗೆ ಕೋಪಿಸಬಹುದೆ? ನಿನಗೆ ತಿಳಿಯದ ಧರ್ಮವಾವುದೂ ಇಲ್ಲ. ಈ ರಾಜನು ಗುರುಶಾಪದಿಂದ ಜಾತಿಕೆಟ್ಟವನು. ಈ ಶರೀರದೊಡನೆಯೇ ಸ್ವರ್ಗವನ್ನು ಪ್ರವೇಶಿಸುವುದಕ್ಕೆ ಇವನಿಗೆ ಯೋಗ್ಯತೆಯೆಲ್ಲಿಯದು?" ಎಂದು ವಿನಯದಿಂದ ಸಮಾಧಾನಪಡಿಸಲು, ಅವರನ್ನು ನೋಡಿ ವಿಶ್ವಾಮಿತ್ರನು "ಎಲೈ ದೇವತೆಗಳಿರಾ! ನಾನು ಈತನನ್ನು ಈ ಶರೀರದೊಡನೆಯೇ ಸ್ವರ್ಗಕ್ಕೇರಿಸುವುದಾಗಿ ಅಭಯವನ್ನು ಕೊಟ್ಟುಬಿಟ್ಟಿರುವೆನು. ಕೊಟ್ಟಭಾಷೆಯನ್ನು ತಪ್ಪಲಾರೆನು. ಆದುದರಿಂದ ಈಗ ನಾನು ಸೃಷ್ಟಿಸಿರುವ ಹೊಸಲೋಕವೇ ಈತನ ವಾಸಕ್ಕೆ ಯೋಗ್ಯವಾದ ಶಾಶ್ವತಸ್ವರ್ಗವಾಗಿರಲಿ! ಮತ್ತು ಇತರ ಲೋಕಗಳಿರುವವರೆಗೂ ನಾನು ಸೃಷ್ಟಿಸಿದ ಈ ನಕ್ಷತ್ರಗಳೆಲ್ಲವೂ ಇಲ್ಲಿಯೇ ಸ್ಥಿರವಾಗಿರಲಿ! ಇದಕ್ಕೆ ನೀವು ಅಡ್ಡಿಮಾಡಕೂಡದು" ಎಂದನು.

---

1. ಉತ್ತರದಿಕ್ಕಿನಲ್ಲಿ ಧ್ರುವನಕ್ಷತ್ರವು ಹೇಗೆ ಶಾಶ್ವತವಾಗಿ ನೆಲೆಗೊಂಡಿರುವುದೋ, ಹಾಗೆಯೇ ದಕ್ಷಿಣ ದಿಕ್ಕಿಗೆ ತ್ರಿಶಂಕುವನ್ನು ನಿಲ್ಲಿಸಿ, ಆ ಧ್ರುವನಕ್ಷತ್ರದ ಸುತ್ತಲೂ ಸಪ್ತರ್ಷಿಮಂಡಲವೂ ನಕ್ಷತ್ರಗಳೂ ಇರುವಂತೆ ಇಲ್ಲಿಯೂ ಇರಬೇಕೆಂದು ಅವೆಲ್ಲವನ್ನೂ ಕ್ರಮವಾಗಿ ಸೃಷ್ಟಿಸುತ್ತಾ ಬಂದನೆಂದು ಅಭಿಪ್ರಾಯವು.

ಇದನ್ನು ಕೇಳಿ ದೇವತೆಗಳೆಲ್ಲರೂ "ಎಲೈ ಮುನೀಂದ್ರನೆ! ಹಾಗೆಯೇ ಆಗಬಹುದು. ಆದರೆ ಹೊಸ ನಕ್ಷತ್ರಗಳೆಲ್ಲವೂ ಆಕಾಶದಲ್ಲಿ ಬಹುಕಾಲ ದಿಂದಿರುವ ಜ್ಯೋತಿಶ್ಚಕ್ರಗಳ ಹೊರಗೆ ಪ್ರತ್ಯೇಕವಾಗಿ ನೆಲೆಗೊಂಡಿರಲಿ! ಮತ್ತು ಅವುಗಳ ನಡುವೆ ಈ ತ್ರಿಶಂಕುವು ತಾನು ಮಾಡಿದ ಗುರುದ್ರೋಹ ಕ್ಕಾಗಿ ತಲೆಕೆಳಗಾಗಿ ನಿಂತಿರಲಿ. ಆದರೆ ಇವನೂ ದೇವತೆಗಳಂತೆ ತೇಜಸ್ವಿ ಯಾಗಿ ಪ್ರಕಾಶಿಸುತ್ತ ಸ್ವರ್ಗಲೋಕದಲ್ಲಿರುವಂತೆಯೇ ಕೃತಾರ್ಥನಾಗಿ ಶಾಶ್ವತ ಕೀರ್ತಿಯನ್ನು ಹೊಂದಿರಲಿ. ಈ ಜ್ಯೋತಿಸ್ಸುಗಳೆಲ್ಲವೂ ಈತನನ್ನೇ ಹಿಂಬಾ ಲಿಸಿ ಸಂಚರಿಸುತ್ತಿರಲಿ" ಎಂದರು. ಆಮೇಲೆ ವಿಶ್ವಾಮಿತ್ರನು ಹಾಗೆಯೇ ಆಗಲೆಂದೊಪ್ಪಿಕೊಳ್ಳಲು, ಅಲ್ಲಿ ಬಂದಿದ್ದ ದೇವತೆಗಳೂ, ಋಷಿಗಳೂ ಆತ ನನ್ನು ಕೊಂಡಾಡಿ, ತಾವೇ ಪ್ರತ್ಯಕ್ಷವಾಗಿ ನಿಂತು ಆ ಯಜ್ಞವನ್ನು ಪೂರ್ತಿ ಮಾಡಿಸಿ, ತಮ್ಮ ದಾರಿಯನ್ನು ಹಿಡಿದು ಹೊರಟುಹೋದರು.

ಇಲ್ಲಿಗೆ ಅರುವತ್ತನೆಯ ಸರ್ಗವು.

ಅಂಬರೀಷನು ನರಬಲಿಗಾಗಿ ಶುನಶ್ಶೇಫನೆಂಬವನನ್ನು ಕೊಂಡುಕೊಂಡುದು

ಆಮೇಲೆ ವಿಶ್ವಾಮಿತ್ರನು ಯಾಗಕ್ಕಾಗಿ ಕರೆಸಿದ್ದ ಋಷಿಗಳೆಲ್ಲರನ್ನೂ ಹಿಂದಕ್ಕೆ ಕಳುಹಿಸಿ, ತಪೋವನದಲ್ಲಿದ್ದ ಋಷಿಗಳೆಲ್ಲರನ್ನೂ ಕುರಿತು, "ಎಲೈ ಋಷಿಗಳೇ! ಈ ದಕ್ಷಿಣದಿಕ್ಕಿನಲ್ಲಿ ನಾನು ಮಾಡುತ್ತಿದ್ದ ತಪಸ್ಸಿಗೆ ದೊಡ್ಡ ವಿಘ್ನವು ಸಂಭವಿಸಿತು. ಬೇರೊಂದು ದಿಕ್ಕಿಗೆ ಹೋಗಿ ತಪಸ್ಸು ಮಾಡಬೇಕೆಂದಿ ರುವೆನು. ಪಶ್ಚಿಮ ದಿಕ್ಕಿನಲ್ಲಿ ವಿಸ್ತಾರವಾದ ತಪೋವನಗಳಿರುವುವು. ಅಲ್ಲಿ ಪುಷ್ಕರವೆಂಬ ಪುಣ್ಯತೀರ್ಥವುಂಟು. ಅದರ ತೀರದಲ್ಲಿ ತಪಸ್ಸನ್ನು ಮಾಡ ಬಹುದು. ಅದು ಬಹಳ ಉತ್ತಮವಾದ ಸ್ಥಾನವು." ಎಂದು ಹೇಳಿ, ಆ ಪುಷ್ಕರಕ್ಕೆ ಹೋಗಿ, ಅಲ್ಲಿ ಫಲಮೂಲಗಳನ್ನು ಭಕ್ಷಿಸುತ್ತಾ, ಕ್ರೂರವಾದ ತಪಸ್ಸನ್ನು ಮಾಡಲಾರಂಭಿಸಿದನು. ಈ ಕಾಲಕ್ಕೆ ಸರಿಯಾಗಿ ಅಯೋಧ್ಯಾ ಪಟ್ಟಣಕ್ಕೆ ಅಧಿಪತಿಯಾದ ಅಂಬರೀಷನೆಂಬ ರಾಜನು, ಒಂದು ಯಜ್ಞವನ್ನು ಮಾಡತೊಡಗಿದ್ದನು. ಆ ಯಜ್ಞಮಧ್ಯದಲ್ಲಿ ಇಂದ್ರನು ಯಜ್ಞಪಶುವನ್ನು ಕದ್ದುಕೊಂಡು ಹೋಗಲು, ಯಜ್ಞವನ್ನು ಮಾಡಿಸುತ್ತಿದ್ದ ಪುರೋಹಿತನು

ರಾಜನನ್ನು ನೋಡಿ, "ಎಲೈ ರಾಜನೆ! ನಿನ್ನ ಅಜಾಗ್ರತೆಯಿಂದಲೇ ಯಜ್ಞ ಪಶುವನ್ನು ಯಾರೋ ಕದ್ದುಕೊಂಡು ಹೋಗಿರುವರು. ಇದನ್ನು ಗಮನಿಸಿ ನೋಡದುದರಿಂದ ನಿನಗೆ ಬಹಳ ಕೇಡುಂಟಾಗಬಹುದು. ಅದಕ್ಕೆ ಪ್ರಾಯಶ್ಚಿತ್ತ ವಾಗಿ ಒಂದು ಅಸಾಧ್ಯಕಾರ್ಯವನ್ನು ಮಾಡಬೇಕಾಗಿರುವುದು. ಈಗ ನಷ್ಟವಾಗಿರುವ ಪಶುವನ್ನೇ ಹುಡುಕಿತಂದು ಯಜ್ಞವನ್ನು ಪೂರ್ತಿಮಾಡ ಬೇಕು. ಅದು ಸಾಧ್ಯವಿಲ್ಲದಿದ್ದರೆ, ಆ ಸ್ಥಾನದಲ್ಲಿ ಒಬ್ಬ ಮನುಷ್ಯನನ್ನಿಟ್ಟು ಆತನನ್ನೇ ಯಜ್ಞಪಶುವನ್ನಾಗಿ ಮಾಡಬೇಕು" ಎಂದನು.

ಪುರೋಹಿತನು ಹೇಳಿದ ಈ ಮಾತನ್ನು ಕೇಳಿ ರಾಜನು ನರಪಶುವನ್ನು ಹುಡುಕಿತರುವುದಕ್ಕಾಗಿ ಸಾವಿರಾರು ಗೋವುಗಳನ್ನು ಕೊಟ್ಟು ನಾನಾದೇಶ ಗಳಿಗೂ, ಪಟ್ಟಣಗಳಿಗೂ, ಪುಣ್ಯಾಶ್ರಮಗಳಿಗೂ ಜನರನ್ನು ಕಳುಹಿಸಿ, ತಾನೂ ಒಂದು ಕಡೆಗೆ ಹೊರಟನು. ಎಲ್ಲೆಲ್ಲಿ ಹುಡುಕಿದರೂ ನರಬಲಿಗೆ ತಕ್ಕ ಮನುಷ್ಯನು ಸಿಕ್ಕಲೇ ಇಲ್ಲ. ಕೊನೆಗೆ ಭೃಗುತುಂದವೆಂಬ ಒಂದು ಬೆಟ್ಟದ ತಪ್ಪಲಲ್ಲಿ ಪತ್ನೀ ಪುತ್ರರೊಡನೆ ವಾಸಮಾಡುತ್ತಿದ್ದ ಋಚೀಕನೆಂಬ ಬ್ರಾಹ್ಮಣನೊಬ್ಬನನ್ನು ಕಂಡನು. ಆ ಬ್ರಹ್ಮರ್ಷಿಯನ್ನು ನೋಡಿ ನಮಸ್ಕರಿಸಿ, ವಿನಯದಿಂದ ಕುಶಲ ಪ್ರಶ್ನೆಯನ್ನು ಕೇಳಿ, ಪ್ರಿಯವಾಕ್ಯಗಳಿಂದ ಆತನನ್ನು ಮರುಳುಗೊಳಿಸಿ, ಕೊನೆಗೆ "ಎಲೈ ಮಹಾತ್ಮನೆ! ನಾನೊಂದು ಕಾರ್ಯಾರ್ಥಿಯಾಗಿ ಬಂದಿರು ವೆನು. ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು. ನಿನ್ನ ಮಕ್ಕಳಲ್ಲಿ ಒಬ್ಬ ನನ್ನು ನನಗೆ ಕೊಡುವುದಾದರೆ ಅದಕ್ಕೆ ಬೆಲೆಯಾಗಿ ಸಾವಿರಾರು ಗೋವು ಗಳನ್ನು ಕೊಡುವೆನು. ಒಬ್ಬ ಮಗನನ್ನು ನನಗೆ ಯಜ್ಞಪಶುವಿಗಾಗಿ ಕೊಡು ವೆಯಾ? ಸಮಸ್ತ ದೇಶಗಳನ್ನೂ ತಿರುಗಿ ನೋಡಿದೆನು. ನಮ್ಮ ಯಜ್ಞ ಪಶುವಾಗಲಿ, ಆ ಸ್ಥಾನಕ್ಕೆ ಬೇರೊಬ್ಬ ಮನುಷ್ಯನಾಗಲಿ ಸಿಕ್ಕಲಿಲ್ಲ. ಆದುದ ರಿಂದ ಈ ಬೆಲೆಯನ್ನು ತೆಗೆದುಕೊಂಡು, ನಿನ್ನ ಮಕ್ಕಳಲ್ಲಿ ಒಬ್ಬನನ್ನು ನನಗೆ ಕೊಡು" ಎಂದನು. ಅದಕ್ಕಾ ಋಚೀಕನು, "ಎಲೈ ರಾಜನೇ! ನೀನು ಎಷ್ಟೇ ಬೆಲೆಯನ್ನು ಕೊಟ್ಟರೂ ನನ್ನ ಹಿರಿಯ ಮಗನನ್ನು ನಾನು ಕೊಡಲಾರೆನು" ಎಂದನು. ಇದನ್ನು ಕೇಳುತ್ತಿದ್ದ ಆತನ ಹೆಂಡತಿಯು ರಾಜನನ್ನು ನೋಡಿ, "ಎಲೈ ರಾಜೇಂದ್ರನೇ! ಪೂಜ್ಯನಾದ ನನ್ನ ಪತಿಯು ಹಿರಿಯಮಗನನ್ನು ಕೊಡಲಾರೆನೆಂದು ಹೇಳಿದನಲ್ಲವೇ? ಅದರಂತೆಯೇ ನನಗೆ ಕಿರಿಯಮಗನಾದ ಈ ಶುಕನೆಂಬವನು ಬಹಳ ಪ್ರೀತಿಪಾತ್ರನಾಗಿರುವನು. ಆದುದರಿಂದ ನಾನು

ಈ ಕನಿಷ್ಠ ಪುತ್ರನನ್ನು ಬಿಟ್ಟಿರಲಾರೆನು. ಸ್ವಾಭಾವಿಕವಾಗಿ ಲೋಕದಲ್ಲಿ ತಂದೆಗೆ ಹಿರಿಯಮಗನಲ್ಲಿಯೂ, ತಾಯಿಗೆ ಕಿರಿಯಮಗನಲ್ಲಿಯೂ ಬಹಳ ಪ್ರೀತಿಯುಂಟಲ್ಲವೆ! ಆದುದರಿಂದ ಈತನನ್ನು ನಾನು ಕೊಡಲಾರೆನು" ಎಂದಳು. ಹೀಗೆ ಆ ದಂಪತಿಗಳಿಬ್ಬರೂ ಹೇಳಿದುದನ್ನು ಕೇಳಿ ಅವರ ಮಧ್ಯಮ ಪುತ್ರನಾದ ಶುನಶ್ಶೇಫನು, ತಾನಾಗಿಯೇ ಅಂಬರೀಷನನ್ನು ಕುರಿತು "ಎಲೈ ರಾಜನೆ! ಇನ್ನು ನಿನಗೆ ಸಂದೇಹವೇನು? ನನ್ನ ತಂದೆಯು ನಮ್ಮಣ್ಣನನ್ನು ಕೊಡಲಾರೆನೆಂದನು. ತಾಯಿಯು ನನ್ನ ತಮ್ಮನನ್ನು ಬಿಡುವುದಿಲ್ಲವೆಂದಳು. ಇವರ ಮಾತಿನಿಂದಲೇ ಇವರಿಬ್ಬರೂ ಇಷ್ಟಪಟ್ಟು ನನ್ನನ್ನು [1]ವಿಕ್ರಯಿಸಿಬಿಟ್ಟರೆಂದು ವ್ಯಕ್ತವಾಯಿತಲ್ಲವೆ? ಇನ್ನು ನನ್ನನ್ನು ಕರೆದುಕೊಂಡುಹೋಗು" ಎಂದನು. ರಾಜನು ಬಹಳ ಸಂತೋಷಪಟ್ಟು ತಾನು ತಂದಿದ್ದ ಸಾವಿರ ಗೋವುಗಳನ್ನೂ ಆ ಬ್ರಾಹ್ಮಣನಿಗೆ ಕೊಟ್ಟು, ಆ ಶುನಶ್ಶೇಫನನ್ನು ರಥದ ಮೇಲೆ ಏರಿಸಿಕೊಂಡು ತನ್ನ ಪಟ್ಟಣಕ್ಕೆ ಅಭಿಮುಖವಾಗಿ ಬಹುವೇಗದಿಂದ ಹೋಗುತ್ತಿದ್ದನು.

ಇಲ್ಲಿಗೆ ಅರುವತ್ತೊಂದನೆಯ ಸರ್ಗವು.

ವಿಶ್ವಾಮಿತ್ರನು ಶುನಶ್ಶೇಫನನ್ನು ರಕ್ಷಿಸಿದುದು

ಹೀಗೆ ಮಹಾಯಶಸ್ವಿಯಾದ ಅಂಬರೀಷನು ಶುನಶ್ಶೇಫನನ್ನು ರಥದ ಮೇಲೆ ಏರಿಸಿಕೊಂಡು ಹೋಗುತ್ತಿರುವಾಗ, ಮಧ್ಯಾಹ್ನವಾಗಲು, ಈ ವಿಶ್ವಾಮಿತ್ರನು ತಪಸ್ಸುಮಾಡುತ್ತಿದ್ದ ಪುಷ್ಕರಕ್ಷೇತ್ರದಲ್ಲಿಯೇ ಆ ಅಂಬರೀಷನೂ ವಿಶ್ರಾಂತಿಯನ್ನು ತೆಗೆದುಕೊಳ್ಳುವುದಕ್ಕಾಗಿ ಬಂದಿಳಿದನು. ಆಗ ಆ ಶುನಶ್ಶೇಫನು ರಾಜನು ವಿಶ್ರಾಂತಿಯನ್ನು ತೆಗೆದುಕೊಂಡಿದ್ದ ಸಮಯವನ್ನು ನೋಡಿ, ಸಮೀಪದಲ್ಲಿದ್ದ ತಪೋವನಕ್ಕೆ ಬಂದು, ಅಲ್ಲಿ ಋಷಿಗಳೊಡಗೂಡಿ ತಪಸ್ಸು ಮಾಡುತ್ತಿದ್ದ ತನ್ನ ಮಾವನಾದ ವಿಶ್ವಾಮಿತ್ರನನ್ನು ಕಂಡನು.

1. ಮಕ್ಕಳನ್ನು ದಾನಮಾಡುವುದೂ, ವಿಕ್ರಯಿಸುವುದೂ ಶಾಸ್ತ್ರನಿಷಿದ್ಧಗಳಾದ್ದರೂ, ಒಂದು ವಂಶವು ನಿಶ್ಶೇಷವಾಗಿ ಕ್ಷಯಿಸಿಹೋಗುವಾಗ, ಆ ವಂಶವನ್ನು ಉದ್ಧರಿಸುವುದಕ್ಕಾಗಿ ಮಕ್ಕಳನ್ನು ಸ್ವೀಕಾರಕೊಡುವಂತೆ ಇಲ್ಲಿ ಯಜ್ಞಾರ್ಥವಾಗಿ ಮಾಡಿದ ಅಪತ್ಯವಿಕ್ರಯವು ದೋಷಹೇತುವಲ್ಲವೆಂದೇ ಗ್ರಹಿಸಬೇಕು.

ಈತನು ಮಹಾಗುಣಾಢ್ಯನಾಗಿ ತಂದೆಗೆ ಬಹಳ ವಿಧೇಯನಾಗಿದ್ದರೂ, ಪ್ರಾಣ ಭಯವು ಇವನ ಮುಖದಲ್ಲಿ ಕಳೆಗುಂದಿಸಿತು. ಮಾರ್ಗಾಯಾಸದಿಂದಲೂ ಬಹಳ ಬಳಲಿದವನಾಗಿ ಬಂದು, ಈ ವಿಶ್ವಾಮಿತ್ರನ ಕಾಲಮೇಲೆ ಬಿದ್ದು, ಆತನನ್ನು ಕುರಿತು, "ಎಲೈ ಮಾವನೇ! ನನಗೆ ತಂದೆತಾಯಿಗಳಿದ್ದರೇನು? ಅಣ್ಣತಮ್ಮಂದಿರಿದ್ದರೇನು? ಅವರೆಲ್ಲರೂ ನನ್ನನ್ನು ತೊರೆದುಬಿಟ್ಟರು. ಅನಾಥ ನಾಗಿ ಬಂದಿರುವೆನು. ನನ್ನನ್ನು ಕಾಪಾಡತಕ್ಕ ಬಂಧುಗಳು ಬೇರೊಬ್ಬರೂ ಇಲ್ಲ. ಶರಣಾಗತವತ್ಸಲನಾದ ನೀನೇ ನನಗೆ ಗತಿಯು. ಈ ರಾಜನು ನನ್ನನ್ನು ಯಜ್ಞಪಶುವನ್ನಾಗಿ ಹಿಡಿದುಕೊಂಡು ಹೋಗುತ್ತಿರುವನು. ಇದನ್ನು ತಪ್ಪಿಸಿ ನನಗೆ ಪ್ರಾಣದಾನವನ್ನು ಮಾಡಬೇಕು. ಆದರೆ ನಾನು ಸ್ವಕಾರ್ಯಧುರಂಧರ ನೆಂದೆಣಿಸಬೇಡ. ಈ ವಿಪತ್ತಿನಿಂದ ನನ್ನನ್ನು ತಪ್ಪಿಸುವುದು ಮಾತ್ರವೇ ಅಲ್ಲದೆ, ಈ ರಾಜನ ಯಜ್ಞವೂ ಪೂರ್ತಿಯಾಗುವಂತೆ ಮಾಡಿ, ನಮ್ಮಿಬ್ಬರನ್ನೂ ಕೃತ ಕೃತ್ಯರನ್ನಾಗಿ ಮಾಡಬೇಕು. ಹೀಗೆ ನೀನು ಅನುಗ್ರಹಿಸುವುದಾದರೆ, ನಾನು ದೀರ್ಘಕಾಲದವರೆಗೆ ತಪಸ್ಸುಮಾಡುತ್ತಿದ್ದು, ಕೊನೆಗೆ ಪುಣ್ಯಲೋಕವನ್ನು ಹೊಂದಬಹುದು. ಎಲೈ ಮಹಾತ್ಮನೆ! ದಿಕ್ಕಿಲ್ಲದ ನನ್ನನ್ನು ಕಾಪಾಡುವ ಭಾರವು ನಿನ್ನದಾಗಿದೆ. ನೀನು ಪುತ್ರವಾತ್ಸಲ್ಯವನ್ನಿಟ್ಟು, ನನ್ನನ್ನು ಈ ವಿಪತ್ತಿನಿಂದ ತಪ್ಪಿಸಬೇಕು" ಎಂದು ಪ್ರಾರ್ಥಿಸಿದನು.

ಇದನ್ನು ಕೇಳಿ, ಮಹಾತಪಸ್ವಿಯಾದ ವಿಶ್ವಾಮಿತ್ರನು "ಹೆದರಬೇಡ" ವೆಂದು ಬಹುವಿಧದಲ್ಲಿ ಆತನನ್ನು ಸಮಾಧಾನಪಡಿಸಿ, ಪಕ್ಕದಲ್ಲಿದ್ದ ತನ್ನ ಮಕ್ಕಳನ್ನು ಕುರಿತು, "ಎಲೈ ಮಕ್ಕಳಿರಾ! ಶ್ರೇಯಃಕಾಂಕ್ಷಿಗಳಾದ ತಂದೆ ತಾಯಿಗಳು ಯಾವ ಉದ್ದೇಶದಿಂದ ಮಕ್ಕಳನ್ನು ಪಡೆಯಲಪೇಕ್ಷಿಸುವರೋ, ಆ ಪ್ರಯೋಜನಸಿದ್ಧಿಗೆ ಈಗ ತಕ್ಕ ಸಮಯವು ಒದಗಿದೆ. ಪುತ್ರರಿಗೆ ಪಿತೃ ವಾಕ್ಯ ಪರಿಪಾಲನವೆಂಬುದೊಂದೇ ಮುಖ್ಯಧರ್ಮವಲ್ಲವೆ? ಆದುದರಿಂದ ನಾನು ಹೇಳುವ ಮಾತನ್ನು ನೀವು ನಡೆಸಿಕೊಡಬೇಕು. ಇದು ನಿಮಗೂ ನನಗೂ ಪಾರಲೌಕಿಕವಾದ ಶ್ರೇಯಸ್ಸಿಗೆ ಕಾರಣವಾಗಿರುವುದು. ಇದೋ! ಈ ಮುನಿಪುತ್ರನು ನನ್ನಲ್ಲಿ ಬಂದು ಮರೆಹೊಕ್ಕು ಪ್ರಾಣದಾನವನ್ನು ಬೇಡು ತ್ತಿರುವನು. ಈ ಕೆಲಸವು ನಿಮ್ಮಿಂದಲೇ ಆಗಬೇಕಾಗಿರುವುದು. ನೀವೆಲ್ಲರೂ ಧರ್ಮಬುದ್ಧಿಯುಳ್ಳವರು, ಪುಣ್ಯಶೀಲರು. ನಿಮ್ಮ ಕೀರ್ತಿಯು ಶಾಶ್ವತ ವಾಗಿರಬೇಕಾದರೆ, ನಿಮ್ಮಲ್ಲಿ ಒಬ್ಬರು ಯಜ್ಞಪಶುವಾಗಿದ್ದು ಅಗ್ನಿಗೆ ತೃಪ್ತಿ

ಯನ್ನುಂಟುಮಾಡಿ, ಈತನ ಕೋರಿಕೆಯನ್ನು ಸಲ್ಲಿಸಬೇಕು. ಇದರಿಂದ ಈ ಶುನಶ್ಯೇಫನನ್ನು ರಕ್ಷಿಸಿದಂತಾಗುವುದು ಮಾತ್ರವೇ ಅಲ್ಲದೆ ಈ ರಾಜನ ಯಜ್ಞವೂ ಪೂರ್ತಿಯನ್ನು ಹೊಂದುವುದು. ದೇವತೆಗಳೂ ತೃಪ್ತಿಪಡುವರು. ನನ್ನ ಮಾತನ್ನೂ ನಡೆಸಿದಂತಾಗುವುದು." ಎಂದನು.

ಇದನ್ನು ಕೇಳಿ, ಮಧುಷ್ಯಂದನೇ ಮೊದಲಾದ ಆತನ ಮಕ್ಕಳೆಲ್ಲರೂ ತಂದೆಯನ್ನು ಕುರಿತು ಗರ್ವದಿಂದ ಪರಿಹಾಸ್ಯಮಾಡುತ್ತ "ಎಲೈ ತಂದೆಯೆ! ಇದೇನು? ಹೊಟ್ಟೆಯಲ್ಲಿ ಹುಟ್ಟಿದ ನಮ್ಮನ್ನು ಬಿಟ್ಟು ಕಂಡವರ ಮಕ್ಕಳನ್ನು ಕಾಪಾಡುವುದು ಇದು ಯಾವ ಧರ್ಮವು? ಉತ್ತಮವಾದ ಮೃಷ್ಟಾನ್ನ ವಿರುವಾಗಲೂ ಅದನ್ನು ಬಿಟ್ಟು ನಾಯಿಯ ಮಾಂಸವನ್ನು ತಿನ್ನುವಂತೆ ಇದೊಂದು ದೊಡ್ಡ ಅಕಾರ್ಯವಲ್ಲವೆ?" ಎಂದರು. ಮಕ್ಕಳಾಡಿದ ಈ ಮಾತನ್ನು ಕೇಳಿ ವಿಶ್ವಾಮಿತ್ರನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ಅವರನ್ನು ಕುರಿತು, "ಛಿ! ನೀಚರೆ! ಧರ್ಮಸೂಕ್ಷ್ಮವನ್ನರಿಯದೆಯೂ, ತಂದೆಯಾದ ನನ್ನಲ್ಲಿ ಸ್ವಲ್ಪವೂ ಗೌರವವನ್ನಿಡದೆಯೂ ನಿರ್ಭಯರಾಗಿ, ನೀವು ಈ ಕ್ರೂರವಾಕ್ಯಗಳನ್ನಾಡಿರುವಿರಲ್ಲವೆ? ಇರಲಿ! ನೀವೆಲ್ಲರೂ ಆ ವಸಿಷ್ಠ ಪುತ್ರರಂತೆಯೇ ಜಾತಿಯಲ್ಲಿ ಚಂಡಾಲರಾಗಿ, ಶ್ವಾನಮಾಂಸವನ್ನೇ ಭಕ್ಷಿಸುತ್ತಿದ್ದು, ಸಾವಿರವರ್ಷಗಳವರೆಗೆ ಈ ಭೂಮಿಯಲ್ಲಿಯೇ ವಾಸಮಾಡುತ್ತಿರಿ!" ಎಂದು ಅವರೆಲ್ಲರಿಗೂ ಶಾಪವನ್ನು ಕೊಟ್ಟು, ಶುನಶ್ಯೇಫನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವನು. "ಎಲೈ ವತ್ಸನೆ! ಹೆದರಬೇಡ! ಇದೋ ಈ ವಿಭೂತಿಯನ್ನು ಮಂತ್ರಿಸಿ ಕೊಡುವೆನು. ಇದೇ ನಿನಗೆ ದೊಡ್ಡ ರಕ್ಷೆಯಾಗಿರುವುದು. ನೀನು ದರ್ಭೆಯ ಹಗ್ಗದಿಂದ ಬಿಗಿಯಲ್ಪಟ್ಟು, ಕೆಂಪಾದ ಬಟ್ಟೆಯನ್ನು ಧರಿಸಿ, ವಿಷ್ಣುದೇವತಾತ್ಮಕವಾದ ಆ ಯೂಪಸ್ತಂಭದ ಬಳಿಗೆ ಹೋದಮೇಲೆ, ಅಗ್ನಿಗೆ ಅಭಿಮುಖನಾಗಿ ನಿಂತು, ಈಗ ನಾನು ನಿನಗೆ ಹೇಳಿಕೊಡುವ ಈ ಎರಡು ಶ್ಲೋಕಗಳನ್ನೂ ಹೇಳು. [1]ಇದರಲ್ಲಿ ಇಂದ್ರನ ವಿಷಯವಾದುದೊಂದು. ಉಪೇಂದ್ರನ ವಿಷಯವಾದುದು ಮತ್ತೊಂದು. ಆ ಯಜ್ಞ

---

1. ಇಂದ್ರನು ಪಶುಭೋಕ್ತೃವಾಗಿಯೂ, ಉಪೇಂದ್ರನು ಯೂಪದೇವತೆಯಾಗಿಯೂ ಇರುವುದರಿಂದ, ಅವರಿಬ್ಬರ ಪ್ರೀತ್ಯರ್ಥವಾಗಿ ಹೇಳಿದ ಶ್ಲೋಕವೆಂದು ತಿಳಿಯಬೇಕು.

ಕಾಲದಲ್ಲಿ ನೀನು ಸರ್ವೋತ್ತಮವಾದ ಈ ಎರಡು ಶ್ಲೋಕಗಳನ್ನೂ ಹೇಳಿದ ಮಾತ್ರದಿಂದಲೇ ಜೀವಿತಸಿದ್ಧಿಯನ್ನು ಹೊಂದುವೆ" ಎಂದು ಹೇಳಿ, ಆ ಎರಡು ಶ್ಲೋಕಗಳನ್ನೂ ಉಪದೇಶಿಸಿದನು.

ಆ ಋಷಿಪುತ್ರನು ಆ ಎರಡನ್ನೂ ಪರಿಗ್ರಹಿಸಿ ಮನಸ್ಸಿನಲ್ಲಿ ಧ್ಯಾನಿಸುತ್ತಾ ಬಹುವೇಗದಿಂದ ಅಂಬರೀಷನ ಸಮೀಪಕ್ಕೆ ಬಂದು, ಆತನನ್ನು ಕುರಿತು, "ಎಲೈ! ಮಹಾಬಲಶಾಲಿಯಾದ ರಾಜಶ್ರೇಷ್ಠನೆ! ಸಾವಕಾಶವೇಕೆ? ಯಜ್ಞ ಸಭೆಗೆ ಹೋಗುವೆವು ನಡೆ. ದೀಕ್ಷೆಯನ್ನು ವಹಿಸಿ ಬೇಗ ಯಾಗವನ್ನೂ ಪೂರ್ತಿಮಾಡು. ಹೊತ್ತು ಮೀರುವುದು" ಎಂದನು. ಹೀಗೆ ಆತುರಪಡು ತ್ತಿರುವ ಆ ಋಷಿಪುತ್ರನ ಧೈರ್ಯಕ್ಕೆ ಆ ರಾಜನೇ ಬಹಳ ಸಂತೋಷಪಟ್ಟು ಒಡನೆಯೇ ಯಜ್ಞವಾಟವನ್ನು ಪ್ರವೇಶಿಸಿದನು. ಆಮೇಲೆ ಯಜ್ಞಪೂರ್ತಿ ಗಾಗಿ ಸಭಿಕರ ಅನುಜ್ಞೆಯನ್ನು ಪಡೆದು, ಶುನಶ್ಶೇಫನಿಗೆ ಬಲಿಚಿಹ್ನಗಳಾದ ದರ್ಭೆಯ ಪವಿತ್ರಗಳನ್ನೂ, ರಕ್ತವರ್ಣವಾದ ಗಂಧಮಾಲ್ಯವಸ್ತ್ರಾದಿಗಳನ್ನೂ ತೊಡಿಸಿ, ಯೂಪಸ್ತಂಭಕ್ಕೆ ಕಟ್ಟಿದನು. ಹೀಗೆ ಕಟ್ಟಲ್ಪಟ್ಟ ಆ ಋಷಿಪುತ್ರನು ವಿಶ್ವಾಮಿತ್ರನು ತನಗೆ ಉಪದೇಶಿಸಿದ್ದ ರೀತಿಯಲ್ಲಿಯೇ ಇಂದ್ರನನ್ನೂ, ಉಪೇಂದ್ರನನ್ನೂ ಕುರಿತು, ಆ ಎರಡು ಶ್ಲೋಕಗಳನ್ನೂ ಮನಸ್ಸಿನಲ್ಲಿಯೇ ಧ್ಯಾನಿಸಿ ಸ್ತೋತ್ರಮಾಡಿದನು. ಆಗ ಈ ಸ್ತೋತ್ರಕ್ಕೆ ಇಂದ್ರನು ಮೆಚ್ಚಿದವ ನಾಗಿ ಶುನಶ್ಶೇಫನಿಗೆ ದೀರ್ಘಾಯುಸ್ಸನ್ನು ಅನುಗ್ರಹಿಸಿದುದಲ್ಲದೆ, ಅಂಬರೀಷ ನಿಗೂ ಆ ಯಜ್ಞದಿಂದ ಇತರರು ಸಾಮಾನ್ಯವಾಗಿ ಹೊಂದಬಹುದಾದ ಫಲ ಕ್ಕಿಂತಲೂ ದ್ವಿಗುಣವಾದ ಫಲವುಂಟಾಗಲೆಂದು ಅನುಗ್ರಹಿಸಿ, ಅವರಿಬ್ಬರನ್ನೂ ಕೃತಾರ್ಥರನ್ನಾಗಿ ಮಾಡಿದನು. "ಎಲೈ ರಾಮನೆ! ಇತ್ತಲಾಗಿ ವಿಶ್ವಾ ಮಿತ್ರನು ಪುನಃ ಆ ಪುಷ್ಕರದಲ್ಲಿಯೇ ಸಾವಿರ ವರ್ಷಗಳವರೆಗೂ ತಪಸ್ಸು ಮಾಡುತ್ತಿದ್ದನು."

ಇಲ್ಲಿಗೆ ಅರುವತ್ತೆರಡನೆಯ ಸರ್ಗವು.

*

ವಿಶ್ವಾಮಿತ್ರನು 'ಮಹರ್ಷಿ' ಯೆನಿಸಿಕೊಂಡುದು

ಹೀಗೆ ವಿಶ್ವಾಮಿತ್ರನು ಸಾವಿರವರ್ಷಗಳವರೆಗೆ ತಪಸ್ಸುಮಾಡಿ ವ್ರತನಿಷ್ಠ ನಾಗಿರುವಾಗ, ಈತನ ತಪಸ್ಸಿಗೆ ತಕ್ಕ ಫಲವನ್ನು ಕೊಡಬೇಕೆಂದುದ್ದೇಶಿಸಿ, ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಈತನಿರುವ ಸ್ಥಳಕ್ಕೆ ಬಂದರು. ಆಗ ಮಹಾತೇಜಸ್ವಿಯಾದ ಬ್ರಹ್ಮನು ವಿಶ್ವಾಮಿತ್ರನನ್ನು ಕುರಿತು ವಿನಯದಿಂದ, "ಎಲೈ ಮಹಾತ್ಮನೆ! ನಿನಗೆ ಮಂಗಳವಾಗಲಿ! ಇದುವರೆಗೆ ನೀನು ರಾಜರ್ಷಿ ಯೆನಿಸಿಕೊಂಡಿದ್ದೆಯಲ್ಲವೆ! ಈಚೆಗೆ ಮಾಡಿರುವ ತಪಸ್ಸಿನ ಪ್ರಭಾವದಿಂದ ಇನ್ನುಮೇಲೆ ನೀನು ಋಷಿಯೆನಿಸಿಕೊಳ್ಳುವೆ" ಎಂದು ಅನುಗ್ರಹಿಸಿ ನಿಜ ಲೋಕಕ್ಕೆ ಹೊರಟುಹೋದನು.

ವಿಶ್ವಾಮಿತ್ರನಾದರೋ ಅದಕ್ಕೂ ತೃಪ್ತಿಪಡದೆ, ತನ್ನ ತಪಸ್ಸನ್ನು ಮಾಡುತ್ತಲೇ ಇದ್ದನು. ಹೀಗೆ ಬಹುಕಾಲವು ಕಳೆಯಲು, ಮೇನಕೆ ಎಂಬ ಅಪ್ಸರಸ್ತ್ರೀಯು ಒಂದಾನೊಂದು ಕಾಲದಲ್ಲಿ ಸ್ನಾನಮಾಡುವುದಕ್ಕಾಗಿ ಆ ಪುಷ್ಕರತೀರ್ಥಕ್ಕೆ ಬಂದಳು. ಮೇಘದಲ್ಲಿ ಹೊಳೆಯುತ್ತಿರುವ ಮಿಂಚಿನಂತೆ ಅದ್ಭುತವಾದ ದೇಹಕಾಂತಿಯುಳ್ಳವಳಾಗಿಯೂ, ಎಣೆಯಿಲ್ಲದ ರೂಪವುಳ್ಳವ ಳಾಗಿಯೂ ಇದ್ದ ಆಕೆಯನ್ನು ನೋಡಿ ಜಿತೇಂದ್ರಿಯನಾಗಿದ್ದ ಈ ವಿಶ್ವಾಮಿತ್ರನ ಮನಸ್ಸು ಕದಲಿತು. ಆಗ ಋಷಿಯು ಆಕೆಯನ್ನು ಕುರಿತು "ಎಲೈ ಭದ್ರೆ! ನಿನಗೆ ಸುಖಾಗಮನವುಂಟಾಗಲಿ! ನಿನ್ನನ್ನು ನೋಡಿದೊಡನೆಯೇ ನಾನು ಕಾಮಬಾಣಕ್ಕೆ ಗುರಿಯಾದೆನು. ಈ ಆಶ್ರಮದಲ್ಲಿಯೇ ಕೆಲವು ದಿವಸಗಳು ವಾಸವಾಗಿದ್ದು ನನ್ನ ಕೋರಿಕೆಯನ್ನು ನೆರವೇರಿಸು" ಎಂದನು. ಅದರಂತೆಯೇ ಆಕೆಯು ಹತ್ತುವರ್ಷಗಳವರೆಗೆ ಆ ಆಶ್ರಮದಲ್ಲಿಯೇ ವಿಶ್ವಾಮಿತ್ರನೊಡಗೂಡಿ ಸುಖವಾಗಿರುತ್ತಿದ್ದಳು.

ಆಮೇಲೆ ಒಂದಾನೊಂದು ಕಾಲದಲ್ಲಿ ಇದ್ದಕ್ಕಿದ್ದಹಾಗೆಯೇ ವಿಶ್ವಾಮಿತ್ರ ನಿಗೆ ಜ್ಞಾನೋದಯವಾಗಿ ನಾಚಿಕೆಯೂ, ಪಶ್ಚಾತ್ತಾಪವೂ ಉಂಟಾಯಿತು. ಆಗ ಅವನ ಮನಸ್ಸಿನಲ್ಲಿ ಮಿತಿಮೀರಿದ ಕೋಪವೂ, ದುಃಖವೂ ಉಕ್ಕಿ ಬರು ತ್ತಿರಲು ತನ್ನಲ್ಲಿ ತಾನು "ಛಿ! ಇದೆಲ್ಲವೂ ನನ್ನ ತಪಸ್ಸನ್ನು ಕೆಡಿಸುವುದಕ್ಕಾಗಿ ದೇವತೆಗಳು ಮಾಡಿರುವ ತಂತ್ರವೆಂದೇ ತೋರುವುದು. ಕಾಮಪೀಡಿತನಾಗಿ ಹಿಂದಿನ ಹತ್ತು ವರುಷವನ್ನೂ ವ್ಯರ್ಥವಾಗಿ ಕಳೆದುಬಿಟ್ಟೆನು. ನನ್ನ ತಪಸ್ಸೆಲ್ಲವೂ ಕೆಟ್ಟುಹೋಯಿತು. ಆಹಾ! ಮಾಡತಕ್ಕುದೇನು!" ಎಂದು

ಬಾರಿಬಾರಿಗೂ ನಿಟ್ಟುಸಿರುಬಿಟ್ಟು, ಕೋಪದಿಂದ ಹಲ್ಲನ್ನು ಕಡಿಯುತ್ತಿದ್ದನು. ಇದನ್ನು ನೋಡಿ ಮೇನಕೆಯು ಭಯದಿಂದ ನಡುಗುತ್ತಾ ಕೈಮುಗಿದು ನಿಂತಿದ್ದಳು. ಹೀಗೆ ಭಯದಿಂದ ತತ್ತಳಿಸುತ್ತಿರುವ ಮೇನಕೆಯನ್ನು ವಿಶ್ವಾಮಿತ್ರನು "ಹೆದರಬೇಡ"ವೆಂದು ಸಮಾಧಾನಪಡಿಸಿ ಕಳುಹಿಸಿ, ಆಮೇಲೆ ಉತ್ತರದಿಕ್ಕಿಗೆ ಹೋಗಿ, ಅಲ್ಲಿದ್ದ ಹಿಮವತ್ಪರ್ವತದ ತಪ್ಪಲನ್ನು ಸೇರಿ, ಅಲ್ಲಿ ದೃಢವಾದ ಸಂಕಲ್ಪದಿಂದ ಮನಸ್ಸನ್ನು ನಿಗ್ರಹಿಸಿ, ತನ್ನ ಕೋರಿಕೆಯು ಸಲ್ಲುವವರೆಗೂ ಬಿಡದೆ ತಪಸ್ಸು ಮಾಡಿ, ಸಿದ್ಧಿಯನ್ನು ಪಡೆಯಬೇಕೆಂದು ಉದ್ದೇಶಿಸಿ, ಕೌಶಿಕೀ ನದಿಯ ತೀರದಲ್ಲಿ ಘೋರವಾದ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ಒಂದು ಸಹಸ್ರ ವರ್ಷಗಳು ಕಳೆದುವು. ಆ ಹಿಮವತ್ಪರ್ವತದಲ್ಲಿದ್ದ ದೇವತೆಗಳೆಲ್ಲರಿಗೂ ಭಯವುಂಟಾಯಿತು. ಆಗ ಅವರೆಲ್ಲರೂ ಋಷಿಗಳೊಡನೆ ಕಲೆತು ಆಲೋಚಿಸಿ, ಬ್ರಹ್ಮನ ಸಮೀಪಕ್ಕೆ ಹೋಗಿ, ಆತನನ್ನು ಕುರಿತು "ಎಲೈ ದೇವನೆ! ವಿಶ್ವಾಮಿತ್ರನ ತಪೋಜ್ವಾಲೆಯು ಅತಿ ತೀವ್ರವಾಗಿರುವುದು. ಆತನಿಗೆ ಈಗಲೇ ಮಹರ್ಷಿತ್ವವನ್ನು ಅನುಗ್ರಹಿಸಿ ಕೊಟ್ಟುಬಿಡು" ಎಂದು ಪ್ರಾರ್ಥಿಸಿದರು. ಅದನ್ನು ಕೇಳಿದೊಡನೆ ಬ್ರಹ್ಮನು ವಿಶ್ವಾಮಿತ್ರನಿರುವ ಸ್ಥಳಕ್ಕೆ ಬಂದು "ವತ್ಸ ಕೌಶಿಕನೆ! ನಿನ್ನ ಕ್ರೂರವಾದ ತಪಸ್ಸಿಗೆ ಮೆಚ್ಚಿದೆನು. ಇನ್ನು ನೀನು ಮಹರ್ಷಿಯೆನಿಸಿ, ಋಷಿಗಳೆಲ್ಲರಿಗೂ ಮೇಲಾಗಿರು" ಎಂದನು. ಇದನ್ನು ಕೇಳಿ ವಿಶ್ವಾಮಿತ್ರನಿಗೆ ದುಃಖವಾಗಲಿ, ಸಂತೋಷವಾಗಲಿ ಯಾವುದೂ ಉಂಟಾಗಲಿಲ್ಲ. ಆಗ ಬ್ರಹ್ಮನಿಗಿದಿರಾಗಿ ಕೈಮುಗಿದು ನಿಂತುಕೊಂಡು, "ಮಹಾತ್ಮನೆ! ನನ್ನ ಸತ್ಕರ್ಮಗಳಿಗೆ ಫಲವಾಗಿ ನೀನು ನನಗೆ ಮಹರ್ಷಿತ್ವವನ್ನು ಅನುಗ್ರಹಿಸಿರುವೆಯಷ್ಟೆ? ಹಾಗಿದ್ದರೆ ಇನ್ನುಮೇಲೆ ನನಗೆ ಜಿತೇಂದ್ರಿಯತ್ವವು ಉಂಟಾದಹಾಗೆಯೇ ಆಯಿತು" ಎಂದನು. ಅದಕ್ಕಾ ಬ್ರಹ್ಮನು "ಎಲೈ ವಿಶ್ವಾಮಿತ್ರನೆ! ಈಗಲೇ ನಿನಗೆ ಜಿತೇಂದ್ರಿಯತ್ವವು ಬಾರದು. ಇನ್ನೂ ಕೆಲವು ಕಾಲದವರೆಗೆ ನೀನು ಪ್ರಯತ್ನಿಸಿದಹೊರತು ಅದನ್ನು ಪಡೆಯಲಾರೆ. ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡುತ್ತಿರು" ಎಂದು ಹೇಳಿ, ದೇವತೆಗಳೊಡನೆ ತನ್ನ ಲೋಕಕ್ಕೆ ಹೊರಟುಹೋದನು. ಆಮೇಲೆ ವಿಶ್ವಾಮಿತ್ರನು ದೃಢಮನಸ್ಸಿನಿಂದ ಪುನಃ ತಪಸ್ಸು ಮಾಡಲಾರಂಭಿಸಿ, ಎರಡು ತೋಳುಗಳನ್ನು ಮೇಲಕ್ಕೆ ನೀಡಿ, ನಿರಾಧಾರನಾಗಿ ನಿಂತು, ವಾಯುಭಕ್ಷಣವನ್ನು ಮಾಡುತ್ತಾ, ಬೇಸಿಗೆಯಲ್ಲಿ

ಪಂಚಾಗ್ನಿಮಧ್ಯದಲ್ಲಿಯೂ, ಮಳೆಗಾಲದಲ್ಲಿ ನಿರಾವರಣವಾದ ಪ್ರದೇಶದಲ್ಲಿಯೂ, ಚಳಿಗಾಲದಲ್ಲಿ ಜಲಮಧ್ಯದಲ್ಲಿಯೂ ನಿಂತು, ಸಹಸ್ರ ವರ್ಷಗಳವರೆಗೆ ಘೋರವಾದ ತಪಸ್ಸು ಮಾಡಿದನು. ಹೀಗೆ ಹಗಲುರಾತ್ರಿಯೆನ್ನದೆ ಯಾವಾಗಲೂ ಎಡೆಬಿಡದೆ ತಪಸ್ಸು ಮಾಡುತ್ತಿರುವ ವಿಶ್ವಾಮಿತ್ರನನ್ನು ನೋಡಿ, ಇಂದ್ರಾದಿದೇವತೆಗಳೆಲ್ಲರೂ ಭಯಪಟ್ಟರು. ಆಮೇಲೆ ಇಂದ್ರನು ದೇವತೆಗಳೊಡನೆ ಆಲೋಚಿಸಿ ರಂಭೆಯೆಂಬ ಅಪ್ಸರಸ್ತ್ರೀಯನ್ನು ಕರೆದು, ತಮಗೆ ಕ್ಷೇಮವನ್ನೂ, ವಿಶ್ವಾಮಿತ್ರನಿಗೆ ವಿರೋಧವನ್ನೂ ಉಂಟುಮಾಡುವಂತೆ ಒಂದಾನೊಂದು ವಾಕ್ಯವನ್ನು ಹೇಳಿದನು.

ಇಲ್ಲಿಗೆ ಅರುವತ್ತುಮೂರನೆಯ ಸರ್ಗವು.

ಇಂದ್ರನಿಂದ ಕಳುಹಿಸಲ್ಪಟ್ಟ ರಂಭೆಯನ್ನು ವಿಶ್ವಾಮಿತ್ರನು ಶಪಿಸಿದುದು.

ಹೀಗೆ ಇಂದ್ರನು ರಂಭೆಯನ್ನು ಕರೆದು, "ಎಲೆ ರಂಭೆ! ದೇವತೆಗಳ ಕ್ಷೇಮಕ್ಕಾಗಿ ನೀನೊಂದು ದೊಡ್ಡ ಕೆಲಸವನ್ನು ಮಾಡಬೇಕಾಗಿರುವುದು. ಈಗಲೇ ನೀನು ವಿಶ್ವಾಮಿತ್ರನ ಬಳಿಗೆ ಹೋಗಿ ಆತನನ್ನು ಮರುಳುಗೊಳಿಸಿ, ಆತನ ಮನಸ್ಸನ್ನು ಕೆಡಿಸಿ, ಕಾಮಾತುರನನ್ನಾಗಿ ಮಾಡಬೇಕು" ಎಂದನು. ಅದಕ್ಕಾ ರಂಭೆಯು ನಾಚಿಕೆಯಿಂದಲೂ, ಭಯದಿಂದಲೂ ಕೂಡಿ ಕೈಮುಗಿದು ನಿಂತು, "ಎಲೈ ದೇವನೆ! ಆ ವಿಶ್ವಾಮಿತ್ರನು ಬಹಳ ಕಠಿಣ ಸ್ವಭಾವವುಳ್ಳವನು. ಆತನು ಸಾಮಾನ್ಯನಲ್ಲ. ಋಷಿಗಳೊಳಗೆಲ್ಲಾ ಮೇಲಾದವನು. ಆತನು ಸುಲಭಕೋಪಿಯಾದುದರಿಂದ ನನಗೆ ಕ್ರೂರವಾದ ಶಾಪವನ್ನು ಕೊಡದೆ ಬಿಡನು. ಅವನ ಹೆಸರನ್ನು ಕೇಳಿದ ಮಾತ್ರಕ್ಕೆ ನನಗೆ ಭಯವುಂಟಾಗಿರುವುದು; ಈ ವಿಷಯದಲ್ಲಿ ನನ್ನನ್ನು ಮನ್ನಿಸಬೇಕು" ಎಂದಳು. ಅದನ್ನು ಕೇಳಿ ಇಂದ್ರನು ತನ್ನ ಮುಂದೆ ಕೈಮುಗಿದು ಭಯದಿಂದ ನಡುಗುತ್ತ ನಿಂತಿರುವ ಆಕೆಯನ್ನು ನೋಡಿ, "ಹೆದರಬೇಡ! ನಿನಗೆ ಕ್ಷೇಮವುಂಟಾಗುವುದು. ನಿನ್ನ ಸಹಾಯಕ್ಕಾಗಿ ಇನ್ನೂ ಅನೇಕರನ್ನು ಕಳುಹಿಸುವೆನು. ನಾನೂ ಒಂದು ಕೋಗಿಲೆಯ ರೂಪವನ್ನು ಧರಿಸಿ, ಮನ್ಮಥನೊಡಗೂಡಿ ನಿನ್ನೊಡನೆಯೇ ಆ ತಪೋವನಕ್ಕೆ ಬಂದು, ಅಲ್ಲಿ ಒಂದು ಮನೋಹರವಾದ ಮಾವಿನ ಮರದಲ್ಲಿ

ಕುಳಿತು ಕೂಗುವೆನು. ಆ ಕಾಲಕ್ಕೆ ಸರಿಯಾಗಿ ನೀನೂ ನಿನ್ನ ರೂಪಾತಿಶಯವನ್ನು ತೋರಿಸುತ್ತಾ ಆತನ ಬಳಿಯಲ್ಲಿ ನಿಂತು, ಅವನು ತಾನಾಗಿಯೇ ತಪಸ್ಸನ್ನು ಬಿಟ್ಟುಬಿಡುವಂತೆ ಮನೋವಿಕಾರವನ್ನುಂಟುಮಾಡು" ಎಂದನು.

ಇದನ್ನು ಕೇಳಿ ರಂಭೆಯು ಅತಿಶಯವಾದ ರೂಪವನ್ನು ಧರಿಸಿ, ವಿಶ್ವಾಮಿತ್ರನ ಬಳಿಗೆ ಬಂದು, ಆತನನ್ನು ಮೋಹಗೊಳಿಸುವುದಕ್ಕಾರಂಭಿಸಿದಳು. ಈ ಕಾಲಕ್ಕೆ ಸರಿಯಾಗಿ ಮನೋಹರವಾದ ಒಂದು ಕೋಕಿಲಧ್ವನಿಯೂ ಹೊರಟಿತು. ಕಿವಿಗಿಂಪಾದ ಈ ಧ್ವನಿಯನ್ನು ಕೇಳಿದಾಗ, ಆ ವಿಶ್ವಾಮಿತ್ರನಿಗೆ ಮನಸ್ಸಿನಲ್ಲಿ ಸ್ವಲ್ಪವಾಗಿ ಆಹ್ಲಾದವು ಅಂಕುರಿಸಿತು. ಒಡನೆಯೇ ಕಣ್ಣುಗಳನ್ನು ಬಿಟ್ಟು ನೋಡಿದನು. ಇದಿರಿಗೆ ಅದ್ಭುತವಾದ ರೂಪವುಳ್ಳ ಸ್ತ್ರೀಯು ನಿಂತಿದ್ದಳು. ಹೀಗೆ ಕಿವಿಗಿಂಪಾದ ಗಾನವನ್ನೂ, ಕಣ್ಣುಗಳಿಗಾನಂದವನ್ನುಂಟುಮಾಡುವ ಸ್ತ್ರೀರೂಪವನ್ನೂ ಕಂಡು ವಿಶ್ವಾಮಿತ್ರನಿಗೆ ಸಂದೇಹವುಂಟಾಯಿತು. ಇದೂ ಇಂದ್ರನ ತಂತ್ರವೆಂದೇ ತಿಳಿದು, ಮುಂದಿದ್ದ ರಂಭೆಯನ್ನು ನೋಡಿ ಕೋಪದಿಂದ, "ಎಲೆ ರಂಭೆ! ಕಾಮಕ್ರೋಧಗಳನ್ನು ಜಯಿಸಬೇಕೆಂಬ ಉದ್ದೇಶದಿಂದ ತಪಸ್ಸು ಮಾಡುತ್ತಿರುವ ನನ್ನ ಮನಸ್ಸನ್ನು ಕೆಡಿಸುವುದಕ್ಕೆ ಬಂದಿರುವೆಯಾ? ನೀನು ಹತ್ತುಸಾವಿರ ವರ್ಷಗಳವರೆಗೂ ಕಲ್ಲಾಗಿರು! ಮಹಾತೇಜಸ್ವಿಯಾಗಿಯೂ, ತಪೋಬಲವುಳ್ಳವನಾಗಿಯೂ ಇರುವ ಬ್ರಾಹ್ಮಣನೊಬ್ಬನು ಕೊನೆಗೆ ನಿನ್ನನ್ನು ಈ ಶಾಪದಿಂದ ಬಿಡುಗಡೆ ಮಾಡುವನು" ಎಂದು ಶಾಪವನ್ನು ಕೊಟ್ಟು, ಆಮೇಲೆ ತನ್ನಲ್ಲಿ ತಾನು, "ಅಯ್ಯೋ! ಕೋಪವನ್ನು ತಡೆದುಕೊಳ್ಳುವ ಶಕ್ತಿಯು ನನಗಿಲ್ಲದುದರಿಂದಲ್ಲವೇ ಹೀಗೆ ಶಾಪವನ್ನು ಕೊಟ್ಟೆನು" ಎಂದು ಪಶ್ಚಾತ್ತಾಪಪಡುತ್ತಿದ್ದನು.

ಇತ್ತಲಾಗಿ ರಂಭೆಯು ಶಿಲಾರೂಪವನ್ನು ಹೊಂದಿದಳು. ಈ ಶಾಪವಾಕ್ಯವನ್ನು ಕೇಳುತ್ತಿದ್ದ ಮನ್ಮಥನೂ, ಇಂದ್ರನೂ ಭಯದಿಂದನಡುಗುತ್ತ ಹಾಗೆಯೇ ಹಿಂತಿರುಗಿ ಓಡಿದರು. ಇತ್ತಲಾಗಿ ವಿಶ್ವಾಮಿತ್ರನು ತನ್ನ ತಪಸ್ಸೆಲ್ಲವೂ ಹೀಗೆ ಕೋಪದಿಂದ ವಿಫಲವಾದುದಕ್ಕಾಗಿ, ತನಗೆ ಇನ್ನೂ ಇಂದ್ರಿಯಜಯವುಂಟಾಗಲಿಲ್ಲವೆಂಬ ದುಃಖದಿಂದಲೇ ಕೊರಗುತ್ತಿದ್ದನು. ಕೊನೆಗೆ ಈತನ ಮನಸ್ಸಿನಲ್ಲಿ "ಇನ್ನು ಮೇಲೆ ಕೋಪವನ್ನು ಸಂಪೂರ್ಣವಾಗಿ ಬಿಟ್ಟೇಬಿಡಬೇಕು. ಇನ್ನು ಮಾತನ್ನೇ ಆಡುವುದಿಲ್ಲ. ಹೆಚ್ಚಾಗಿ ಹೇಳಿದುದರಿಂದೇನು! ಈ ಉಸಿರನ್ನೇ

ತಡೆದಿಟ್ಟು, ನನ್ನ ದೇಹವನ್ನು ಸಂಪೂರ್ಣವಾಗಿ ಶೋಷಿಸಿಬಿಡುವೆನು. ನನಗೆ ತಪಸ್ಸಿನಿಂದ ಬ್ರಾಹ್ಮಣ್ಯವು ಬರುವವರೆಗೂ ಈ ಇಂದ್ರಿಯಗಳನ್ನು ಜಯಿಸಿ, ಉಸಿರಾಡಿಸದೆ, ಊಟಮಾಡದೆ ನಿಶ್ಚಲನಾಗಿರುವೆನು. ಎಷ್ಟು ವರ್ಷಗಳಾದರೂ ಆಗಲಿ! ಆಹಾರಾದಿಗಳಿಲ್ಲದಿದ್ದರೂ ನನ್ನ ತಪಃಪ್ರಭಾವದಿಂದಲೇ ಈ ದೇಹವು ಕೃಶವಾಗದಂತೆ ಇರಿಸಿಕೊಳ್ಳಬಲ್ಲೆನು" ಎಂದು ಸಂಕಲ್ಪಿಸಿಕೊಂಡು, ಸಾವಿರ ವರ್ಷಗಳವರೆಗೂ ಉಸಿರಾಡದೆಯೂ, ಊಟಮಾಡದೆಯೂ ದೀಕ್ಷೆಯನ್ನು ವಹಿಸುವುದಾಗಿ ದೃಢಪ್ರತಿಜ್ಞೆಯನ್ನು ಮಾಡಿದನು.

ಇಲ್ಲಿಗೆ ಅರುವತ್ತುನಾಲ್ಕನೆಯ ಸರ್ಗವು.

ವಿಶ್ವಾಮಿತ್ರನು ಬ್ರಹ್ಮರ್ಷಿತ್ವವನ್ನು ಪಡೆದುದು

ಆಮೇಲೆ ಹಿಮವಂತದಲ್ಲಿ ಮೊದಲು ತಾನಿದ್ದ ಉತ್ತರಭಾಗವನ್ನು ಬಿಟ್ಟು, ಸ್ವಲ್ಪ ಪೂರ್ವಾಭಿಮುಖವಾಗಿ ಹೋಗಿ, ಒಂದು ಸಾವಿರ ವರ್ಷದ ವರೆಗೂ ಮೌನವ್ರತವನ್ನು ವಹಿಸಿ, ಅತಿ ದುಷ್ಕರವಾದ ತಪಸ್ಸನ್ನು ಮಾಡುತ್ತಿದ್ದನು. ಆ ಒಂದುಸಾವಿರ ವರ್ಷಗಳು ಕಳೆಯುವುದರೊಳಗಾಗಿ ನಡುವೆ ಎಷ್ಟೋ ವಿಘ್ನಗಳು ಬಂದೊದಗಿದರೂ, ಮನಸ್ಸನ್ನು ಕದಲಿಸದೆ, ಮರದ ತುಂಡಿನಂತೆ ನಿಶ್ಚಲನಾಗಿದ್ದನು. ಕಾಮಕ್ರೋಧಾದಿಗಳಿಗೆ ಅವಕಾಶಕೊಡದೆ, ದೃಢಮನಸ್ಸಿನಿಂದ ಆ ಒಂದು ಸಾವಿರ ವರ್ಷಗಳನ್ನೂ ಕಳೆದನು. ಈತನ ವ್ರತವು ಮುಗಿಯಿತು. ಆಗ ಅನ್ನವನ್ನು ಭುಜಿಸಲು ಪ್ರಯತ್ನಿಸುತ್ತಿರುವಾಗ ಇಂದ್ರನು ಬ್ರಾಹ್ಮಣರೂಪದಿಂದ ಈತನ ಬಳಿಗೆ ಬಂದು, ಸಿದ್ಧವಾಗಿದ್ದ ಆ ಅನ್ನವನ್ನು ತನಗೆ ಕೊಡಬೇಕೆಂದು ಪ್ರಾರ್ಥಿಸಿದನು. ಈ ವಿಶ್ವಾಮಿತ್ರನು ಆ ಅನ್ನವೆಲ್ಲವನ್ನೂ ಆ ಬ್ರಾಹ್ಮಣನಿಗೆ ಕೊಟ್ಟುಬಿಟ್ಟು, ತನಗೆ ಸ್ವಲ್ಪವಾದರೂ ಉಳಿಯದಿದ್ದುದರಿಂದ, ತಾನು ಊಟಮಾಡದೆಯೇ ಮೌನವ್ರತವನ್ನು ವಹಿಸಿ, ಆ ಬ್ರಾಹ್ಮಣನನ್ನು ಕುರಿತು ಯಾವ ಮಾತನ್ನೂ ಆಡದೆಯೇ ಸುಮ್ಮನೆ ಇದ್ದುಬಿಟ್ಟನು.

ಹೀಗೂ ಸಾವಿರ ವರ್ಷಗಳು ಕಳೆದುವು. ಅದುವರೆಗೆ ತನ್ನ ಉಚ್ಛ್ವಾಸ ನಿಶ್ವಾಸಗಳನ್ನು ಕೂಡ ತಡೆದುಬಿಟ್ಟನು. ಹೀಗೆ ಉಸಿರಾಡದೆ ಮಹಾ ಘೋರವಾದ ವ್ರತದಲ್ಲಿರುವಾಗ ಈತನ ತಲೆಯಿಂದ ಒಂದು ಹೊಗೆಯು

ಹೊರಡಲಾರಂಭಿಸಿತು. ಇದನ್ನು ನೋಡಿ ಮೂರು ಲೋಕವೂ ತತ್ತಳಿಸಿತು. ಎಲ್ಲರೂ ಭಯದಿಂದ ತಪಿಸುತ್ತಿದ್ದರು. ಪ್ರಪಂಚವೆಲ್ಲವೂ ಉರಿಯುತ್ತಿರುವಂತೆ ತೋರಿತು. ಆಗ ದೇವಗಂಧರ್ವರಾಕ್ಷಸಾದಿಗಳೆಲ್ಲರೂ ಈ ತಪೋಜ್ವಾಲೆಯಿಂದ ಕಂದಿದ ತೇಜಸ್ಸುಳ್ಳವರಾಗಿ, ತತ್ತಳಿಸಿ ಕಳವಳಗೊಂಡು ಬ್ರಹ್ಮನ ಸಮೀಪಕ್ಕೆ ಹೋಗಿ, ವಿನಯದಿಂದ ಆತನನ್ನು ಕುರಿತು, ಎಲೈ ದೇವನೆ! ಮಹರ್ಷಿಯಾದ ವಿಶ್ವಾಮಿತ್ರನ ತಪಸ್ಸನ್ನು ಕೆಡಿಸುವುದಕ್ಕಾಗಿ ನಾವು ಅನೇಕ ಪ್ರಯತ್ನಗಳನ್ನು ಮಾಡಿದೆವು. ರಂಭೆಯೇ ಮೊದಲಾದ ಅಪ್ಸರಸ್ತ್ರೀಯರುಗಳನ್ನು ಕಳುಹಿಸಿ, ಆತನಿಗೆ ಮೋಹವುಂಟಾಗುವಂತೆ ಪ್ರಯತ್ನಿಸಿದೆವು. ಆತನಿಗೆ ಕೋಪವುಂಟುಮಾಡುವುದಕ್ಕೂ ಅನೇಕ ಪ್ರಯತ್ನಗಳನ್ನು ಮಾಡಿದೆವು. ಏನುಮಾಡಿದರೂ ಆತನ ತಪಸ್ಸನ್ನು ಕೆಡಿಸುವುದಕ್ಕಾಗಲಿಲ್ಲ. ಮೇಲೆ ಮೇಲೆ ತಪಸ್ಸನ್ನು ಹೆಚ್ಚಿಸುತ್ತಲೇ ಇರುವನು! ಆತನಲ್ಲಿ ಯಾವುದಾದರೂ ಒಂದು ದೋಷವುಕೂಡ ಕಾಣಿಸುವುದಿಲ್ಲ. ಸ್ವಾಮಿ! ಆತನ ಕೋರಿಕೆಯನ್ನು ನೀವು ಸಲ್ಲಿಸದಿದ್ದರೆ, ಚರಾಚರಾತ್ಮಕವಾದ ಈ ಪ್ರಪಂಚವೆಲ್ಲವನ್ನೂ ತಪೋಜ್ವಾಲೆಯಿಂದ ಸುಟ್ಟುಬಿಡುವನು. ದಿಕ್ಕುಗಳೆಲ್ಲವೂ ಪ್ರಕಾಶವಿಲ್ಲದೆ ಮಲಿನವಾಗುತ್ತ ಬಂದಿರುವುವು. ಸಮುದ್ರಗಳೆಲ್ಲವೂ ಕ್ಷೋಭೆಹೊಂದುತ್ತಿರುವುವು. ಪರ್ವತಗಳೆಲ್ಲವೂ ಸಿಡಿಯುತ್ತಿರುವುವು. ಭೂಮಿಯು ನಡುಗುತ್ತಿರುವುದು. ವಾಯುವು ಕೂಡ ಬಹಳ ವ್ಯಾಕುಲತೆಯಿಂದ ಬೀಸುತ್ತಿರುವುದು. ಇದಕ್ಕೆ ಪ್ರತೀಕಾರವೇನೆಂದು ತಿಳಿಯಲಿಲ್ಲ. ಈ ಮಹೋತ್ಪಾತಗಳಿಂದ ಅವರವರು ತಮ್ಮ ತಮ್ಮ ನಿತ್ಯಕರ್ಮಗಳನ್ನು ಬಿಟ್ಟು, ನಾಸ್ತಿಕರಂತೆ ಆಗುವರೆಂದೂ ತೋರುತ್ತಿರುವುದು. ಎಲೈ ಮಹಾತ್ಮನೆ! ಈ ಮೂರು ಲೋಕದವರ ಮನಸ್ಸೂ ಕಳವಳಹೊಂದಿ, ಮುಂದುಗಾಣದಿರುವುದು. ಸೂರ್ಯನ ತೇಜಸ್ಸೆಲ್ಲವೂ ಆ ಮಹರ್ಷಿಯ ತೇಜಸ್ಸಿನಿಂದ ಕಂದಿಹೋಗಿರುವುದು. ಇದಕ್ಕಿಂತಲೂ ವಿಪರೀತವೇನಾಗಬೇಕು! ಮಹಾ ಪ್ರಭಾವವುಳ್ಳ ಅಗ್ನಿರೂಪನಾದ ಆ ವಿಶ್ವಾಮಿತ್ರಮಹರ್ಷಿಯು ಈ ಮೂರು ಲೋಕವನ್ನೂ ನಾಶಮಾಡಲು ಪ್ರಯತ್ನಿಸುವುದಕ್ಕೆ ಮೊದಲೇ, ನೀನು ಆತನಿಗೆ ಪ್ರಸನ್ನನಾಗಿ ಅನುಗ್ರಹಿಸಬೇಕು. ಪೂರ್ವಕಾಲದಲ್ಲಿ ಪ್ರಳಯಕಾಲಾಗ್ನಿಯು ಪ್ರಪಂಚವೆಲ್ಲವನ್ನೂ ಸುಟ್ಟಂತೆಯೇ, ಈ ಜಗತ್ತನ್ನು ಈತನು ಸುಟ್ಟುಬಿಡುವನೆಂದೇ ತೋರುವುದು. ಆತನು ಯಾವುದನ್ನು ಕೋರಿದರೂ ಅದನ್ನು ನೀನು ಈಗಲೇ

ಅನುಗ್ರಹಿಸಿ ಕೊಟ್ಟುಬಿಡು! ಕೊನೆಗೆ ಆತನು ಈ ಸ್ವರ್ಗಾಧಿಪತ್ಯವನ್ನೇ ಕೇಳಿದರೂ ಕೊಟ್ಟುಬಿಡಬಹುದು" ಎಂದರು. ಆಗ ಬ್ರಹ್ಮನು ಆ ದೇವತೆಗಳೊಡನೆಯೇ ವಿಶ್ವಾಮಿತ್ರನ ಬಳಿಗೆ ಬಂದು, ವಿಶ್ವಾಮಿತ್ರನನ್ನು ಕುರಿತು "ಎಲೈ ಬ್ರಹ್ಮಋಷಿಯೇ! ನಿನಗೆ ಸ್ವಾಗತವು! ನಿನ್ನ ತಪಸ್ಸಿಗೆ ನಾವು ಮೆಚ್ಚಿದೆವು. ನಿನ್ನ ಈ ತಪಸ್ಸಿಗೆ ಫಲವಾಗಿ [1]ಬ್ರಾಹ್ಮಣ್ಯವನ್ನೂ ದೀರ್ಘಾಯುಸ್ಸನ್ನೂ ಕೊಟ್ಟಿರುವೆವು! ನಿನಗೆ ಮಂಗಳವಾಗಲಿ! ಇನ್ನು ನಿನ್ನ ತಪಸ್ಸನ್ನು ನಿಲ್ಲಿಸಿ ಸುಖವಾಗಿ ಹೊರಟುಹೋಗು" ಎಂದನು.

ಹೀಗೆ ಬ್ರಹ್ಮನೂ, ದೇವತೆಗಳೂ ಹೇಳಿದ ಮಾತನ್ನು ಕೇಳಿ ವಿಶ್ವಾಮಿತ್ರನಿಗೆ ಬಹಳ ಸಂತೋಷವುಂಟಾಯಿತು. ಆಗ ಅವರೆಲ್ಲರಿಗೂ ನಮಸ್ಕರಿಸಿ, "ಎಲೈ ದೇವತೆಗಳಿರಾ! ನನಗೆ ನೀವು ಬ್ರಾಹ್ಮಣ್ಯವನ್ನೂ, ದೀರ್ಘಾಯುಸ್ಸನ್ನೂ ಅನುಗ್ರಹಿಸಿರುವುದಾದರೆ ಓಂಕಾರವಷಟ್ಕಾರಗಳೂ, ವೇದಗಳೂ ತಾವಾಗಿ ಬಂದು ನನ್ನನ್ನು ವರಿಸುವಹಾಗೆ ಮಾಡಬೇಕು. ಮತ್ತು ಅವುಗಳನ್ನು ಮತ್ತೊಬ್ಬರಿಗೆ ಉಪದೇಶಿಸುವುದಕ್ಕೂ, ಇತರರಿಂದ ಯಾಗಮಾಡಿಸುವುದಕ್ಕೂ ನನಗೆ ಅರ್ಹತೆಯುಂಟಾಗಬೇಕು. ಇದೆಲ್ಲವೂ ಹಾಗಿರಲಿ! ನನ್ನ ಮುಖ್ಯವಾದ ಕೋರಿಕೆಯು ಮತ್ತೊಂದುಂಟು. ನನ್ನ ವೈರಿಯಾದ ವಸಿಷ್ಠನುಂಟಲ್ಲವೆ! ಆತನು ಕ್ಷತ್ರಿಯರಿಗೆ ಬೇಕಾದ ಅಥರ್ವಣವೇದವನ್ನೂ ಬ್ರಾಹ್ಮಣರಿಗೆ ಯೋಗ್ಯವಾದ ಇತರ ವೇದಗಳನ್ನೂ ಚೆನ್ನಾಗಿ ಬಲ್ಲವನು. ಬ್ರಹ್ಮಪುತ್ರನಾದ ಆತನ ಬಾಯಿಯಿಂದಲೇ ಇದನ್ನು ಹೇಳಿಸಬೇಕು. ಈ ನನ್ನ ಕೋರಿಕೆಯನ್ನು ನೆರವೇರಿಸಿ, ನಿಮ್ಮ ಇಷ್ಟಬಂದಂತೆ ನೀವು ಹೋಗಬಹುದು" ಎಂದನು. ಆಗ ದೇವತೆಗಳೆಲ್ಲರೂ ವಸಿಷ್ಠನನ್ನು ಪ್ರಾರ್ಥಿಸಿ ಕರೆತಂದು, ಅವರಿಬ್ಬರಿಗೂ ಸ್ನೇಹವನ್ನುಂಟುಮಾಡಿ, ವಿಶ್ವಾಮಿತ್ರನನ್ನು ಬ್ರಹ್ಮರ್ಷಿಯೆಂದು ಕರೆಯುವಂತೆ ಆತನನ್ನು ಪ್ರಾರ್ಥಿಸಿದರು. ಆಗ ವಸಿಷ್ಠನು ಹಾಗೆಯೇ ಆಗಲೆಂದು ವಿಶ್ವಾಮಿತ್ರನನ್ನು ಕುರಿತು, "ಎಲೈ ಗಾಧಿಪುತ್ರನೆ! ನೀನು ಬ್ರಹ್ಮರ್ಷಿಯೇ ಆದೆ! ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಯಾಜ

---

1. ಸಾಮಾನ್ಯ ಕ್ಷತ್ರಿಯನಾದ ವಿಶ್ವಾಮಿತ್ರನು ಮೇಲೆ ಮೇಲೆ ಮಾಡುತ್ತಿದ್ದ ಘೋರವಾದ ತಪಸ್ಸಿಗೆ ಮೆಚ್ಚಿ ಮೊದಲು ಅವನಿಗೆ ರಾಜರ್ಷಿತ್ವವನ್ನೂ ಆಮೇಲೆ ಋಷಿತ್ವವನ್ನೂ, ಆಮೇಲೆ ಮಹರ್ಷಿತ್ವವನ್ನೂ ಕೊನೆಗೆ ಬ್ರಹ್ಮರ್ಷಿತ್ವವನ್ನೂ ಅನುಗ್ರಹಿಸಿದನೆಂದು ಗ್ರಹಿಸಬೇಕು.

ನಾಧ್ಯಾಪನಾದಿ ಕರ್ಮಗಳೆಲ್ಲಕ್ಕೂ ನಿನಗೆ ಯೋಗ್ಯತೆಯುಂಟು" ಎಂದನು. ದೇವತೆಗಳೆಲ್ಲರೂ ಇದನ್ನನುಮೋದಿಸಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟು ಹೋದರು. ಆ ವಿಶ್ವಾಮಿತ್ರನು ಧರ್ಮಜ್ಞಾನವುಳ್ಳವನಾದುದರಿಂದ ಬ್ರಾಹ್ಮಣ್ಯವನ್ನು ಪಡೆದಮೇಲೆ ವಸಿಷ್ಠನನ್ನು ಬಹಳವಾಗಿ ಪೂಜಿಸಿದನು. ಹೀಗೆ ಕೃತಾರ್ಥನಾಗಿ ತಪಸ್ಸು ಮಾಡುತ್ತಿದ್ದು ಭೂಮಿಯೆಲ್ಲವನ್ನೂ ಸಂಚರಿಸುತ್ತಿದ್ದನು. ಎಲೈ ರಾಜನೆ! ಇದೀಗ ವಿಶ್ವಾಮಿತ್ರನ ಚರಿತ್ರವು. ಇದೇ ಈತನು ಬ್ರಾಹ್ಮಣ್ಯವನ್ನು ಸಂಪಾದಿಸಿದ ರೀತಿಯು. ಈತನೇ ವೀರ್ಯಗಳಿಗೆಲ್ಲಾ ಮುಖ್ಯಾಶ್ರಯನು !" ಎಂದು [1]ಶತಾನಂದನು ವಿಶ್ವಾಮಿತ್ರನ ಪ್ರಭಾವವೆಲ್ಲವನ್ನೂ ವಿವರಿಸಿ ಸುಮ್ಮನಾದನು.

ಆಮೇಲೆ ಜನಕರಾಜನು ವಿಶ್ವಾಮಿತ್ರನನ್ನು ನೋಡಿ ವಿನಯದಿಂದ ಕೈಮುಗಿದು "ಎಲೈ ಋಷಿಶ್ರೇಷ್ಠನೆ ! ಈಗ ನಾನು ಧನ್ಯನಾದೆನು. ಕಕುತ್ಸ್ಥವಂಶದಲ್ಲಿ ಹುಟ್ಟಿದ ಈ ರಾಮನೊಡನೆ ನೀನು ನನ್ನ ಯಜ್ಞಕ್ಕೆ ಬಂದುದು ನನ್ನ ಭಾಗ್ಯೋದಯವಲ್ಲವೆ ! ನಿನ್ನ ದರ್ಶನದಿಂದ ಈಗ ನಾನು ಸಮಸ್ತ ಪಾಪಗಳಿಂದಲೂ ಉದ್ಧರಿಸಲ್ಪಟ್ಟೆನು. ನೀನು ಮಹಾಪ್ರಭಾವವುಳ್ಳವನು ! ಬ್ರಹ್ಮರ್ಷಿಗಳೊಳಗೆಲ್ಲಾ ಮೇಲಾದವನು ! ನಿನ್ನ ಸಂದರ್ಶನದಿಂದ ನನಗೆ ಸಮಸ್ತ ಸದ್ಗುಣಗಳೂ ಉಂಟಾದುವು ! ನಿನ್ನ ತಪಃಪ್ರಭಾವಗಳೆಲ್ಲವನ್ನೂ ಶತಾನಂದನ ಮೂಲಕವಾಗಿ ನಾನೂ ಈ ರಾಮಲಕ್ಷ್ಮಣರೂ ಆಮೂಲಾಗ್ರವಾಗಿ ಕೇಳಿ ತಿಳಿದೆವು. ಈ ಸಭೆಯಲ್ಲಿರುವ ಸಮಸ್ತ ಋಷಿಗಳಿಗೂ ಈಗ ನಿನ್ನ ಗುಣಾತಿಶಯಗಳೆಲ್ಲವೂ ಚೆನ್ನಾಗಿ ತಿಳಿದುವು. ಎಲೈ ಮಹರ್ಷಿಯೇ !

---

1. ಶತಾನಂದನು ತನ್ನ ತಾಯಿಯಾದ ಅಹಲ್ಯೆಗುಂಟಾದ ಶಾಪವಿಮೋಚನವನ್ನು ಕೇಳಿ ಸಂತೋಷಾತಿಶಯದಿಂದ, ಈ ಶಾಪವಿಮೋಚನೆಗೆ ಮುಖ್ಯಕಾರಣನಾದ ವಿಶ್ವಾಮಿತ್ರನ ಪ್ರಭಾವವನ್ನು ಆತನ ಶಿಷ್ಯರಾದ ರಾಮಲಕ್ಷ್ಮಣರಿಗೆ ಇದುವರೆಗೂ ಪ್ರತಿಪಾದಿಸಿದನು. ಈ ಚರಿತ್ರದಿಂದ, ಉಪಕಾರಕನಾದ ಆಚಾರ್ಯನ ಪ್ರಭಾವವು ತಿಳಿಯುವುದು ಮಾತ್ರವೇ ಅಲ್ಲದೆ, ಕಾಮಕ್ರೋಧಗಳನ್ನು ಜಯಿಸುವುದು ಬಹಳ ದುಷ್ಕರವಾದ ಕಾರ್ಯವೆಂದೂ, ಅವುಗಳನ್ನು ಜಯಿಸಿದವನೇ ಬ್ರಾಹ್ಮಣೋತ್ತಮನೆನಿಸುವನೆಂದೂ, ಬ್ರಾಹ್ಮಣ್ಯವು ಸುಲಭವಲ್ಲವೆಂದೂ, ಬ್ರಹ್ಮಜ್ಞರಲ್ಲಿ ಅನಾಚಾರ ಮಾಡುವುದು ಬಹಳ ಕೇಡಿಗೆ ಕಾರಣವೆಂದೂ ಸೂಚಿಸಲ್ಪಡುವುದು.

ನಿನ್ನ ತಪಸ್ಸೂ, ನಿನ್ನ ವೀರ್ಯವೂ, ನಿನ್ನ ಸದ್ಗುಣಗಳೂ ಮಿತಿಯಿಲ್ಲದವುಗಳಾಗಿರುವುವು! ಸೃಷ್ಟಿಕರ್ತನಾದ ಬ್ರಹ್ಮನಿಗೂ ಪರಮೇಶ್ವರನಿಗೂ ಇರತಕ್ಕ ಮಹಾಪ್ರಭಾವಗಳೆಲ್ಲವೂ ನಿನ್ನಲ್ಲಿ ಕಾಣುತ್ತಿರುವುವು! ಅದ್ಭುತವಾದ ಈ ನಿನ್ನ ಚರಿತ್ರವನ್ನು ಎಷ್ಟು ಕೇಳುತ್ತಿದ್ದರೂ ತೃಪ್ತಿಯುಂಟಾಗುವುದಿಲ್ಲ. ಎಲೈ ಮಹಾತ್ಮನೆ! ಹೊತ್ತು ಮೀರುತ್ತಿರುವುದು. ಸೂರ್ಯನು ಅಸ್ತಂಗತನಾಗುತ್ತಿರುವನು. ಸಾಯಂಕಾಲದ ಕರ್ಮಗಳನ್ನು ನಡೆಸುವುದಕ್ಕೆ ಇದು ತಕ್ಕ ಸಮಯವಾಗಿರುವುದರಿಂದ, ಇನ್ನು ನಿತ್ಯಾಹ್ನಿಕಗಳಿಗಾಗಿ ಹೋಗುವೆವು! ನಾಳೆ ಬೆಳಗಾದಮೇಲೆ ನನಗೆ ದರ್ಶನವನ್ನು ಕೊಡಬೇಕು. ನಿನಗೆ ಸ್ವಾಗತವು. ನಾನು ಹೋಗಿಬರುವೆನು, ಅಪ್ಪಣೆಯನ್ನು ಕೊಡು" ಎಂದನು. ಅದನ್ನು ಕೇಳಿ ವಿಶ್ವಾಮಿತ್ರನು ಆ ಜನಕನ ವಿನಯಾದಿಗುಣಗಳಿಗಾಗಿ ಸಂತೋಷಗೊಂಡು, ಹೋಗಿ ಬರುವಂತೆ ಅನುಮತಿಯನ್ನು ಕೊಟ್ಟನು. ಆಮೇಲೆ ಜನಕನು ತನ್ನ ಪುರೋಹಿತರೊಡನೆಯೂ, ಬಂಧುಗಳೊಡನೆಯೂ ಕೂಡಿ ವಿಶ್ವಾಮಿತ್ರನಿಗೆ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡಿ, ಅವರ ಮನೆಗೆ ಹೊರಟುಹೋಗಲು, ಇತ್ತಲಾಗಿ ವಿಶ್ವಾಮಿತ್ರನೂ ಕೂಡ ಅಲ್ಲಿನ ಋಷಿಗಳಿಂದ ಬಹಳವಾಗಿ ಸತ್ಕರಿಸಲ್ಪಟ್ಟು, ರಾಮಲಕ್ಷ್ಮಣರೊಡಗೂಡಿ ತನ್ನ ಆಶ್ರಮಕ್ಕೆ ಹೋಗಿ ಸೇರಿದನು.

ಇಲ್ಲಿಗೆ ಅರುವತ್ತೈದನೆಯ ಸರ್ಗವು.

ಜನಕನು ಶಿವಧನುಸ್ಸಿನ ವೃತ್ತಾಂತವನ್ನು ಹೇಳಿದುದು.

ಬೆಳಗಾದಕೂಡಲೆ ಜನಕನು ರಾಮಲಕ್ಷ್ಮಣರೊಡನೆ ವಿಶ್ವಾಮಿತ್ರನನ್ನು ಅರಮನೆಗೆ ಕರೆಯಿಸಿ, ಆ ಮೂವರನ್ನೂ ವಿಧ್ಯುಕ್ತವಾಗಿ ಸತ್ಕರಿಸಿದಮೇಲೆ, ವಿಶ್ವಾಮಿತ್ರನನ್ನು ಕುರಿತು "ಎಲೈ ಪೂಜ್ಯನೆ! ನಿನಗೆ ಸ್ವಾಗತವು! ನಾನು ಈಗ ಮಾಡಬೇಕಾದ ಕೆಲಸವನ್ನು ಅಪ್ಪಣೆಕೊಡಬೇಕು. ನಾನು ನಿಮ್ಮ ಆಜ್ಞಾನುವರ್ತಿಯಾಗಿ ನಡೆಯತಕ್ಕವನು" ಎಂದನು. ಇದನ್ನು ಕೇಳಿ ಧರ್ಮಸ್ವರೂಪನಾದ ಆ ವಿಶ್ವಾಮಿತ್ರನು "ಎಲೈ ರಾಜನೆ! ದಶರಥನ ಮಕ್ಕಳಾದ ಈ ಕ್ಷತ್ರಿಯಕುಮಾರರಿಬ್ಬರೂ ಲೋಕಪ್ರಸಿದ್ಧರಾದವರು. ನಿನ್ನಲ್ಲಿರುವ ಶ್ರೇಷ್ಠವಾದ ರುದ್ರಧನುಸ್ಸನ್ನು ನೋಡಬೇಕೆಂದಪೇಕ್ಷಿಸುವರು.

ಅದನ್ನು ಇವರಿಗೂ ತೋರಿಸು. ಈ ರಾಜಕುಮಾರರು ಅದನ್ನು ನೋಡುವುದ ರಿಂದ ತಮ್ಮ ಆಶೆಯನ್ನು ತೀರಿಸಿಕೊಂಡು ತಮ್ಮ ಪಟ್ಟಣಕ್ಕೆ ಹಿಂತಿರುಗುವರು" ಎಂದನು.

ಆಗ ಜನಕನು ವಿಶ್ವಾಮಿತ್ರನನ್ನು ಕುರಿತು "ಎಲೈ ಮಹಾತ್ಮನೆ! ಮೊದಲು ಈ ಧನುಸ್ಸು ನನ್ನಲ್ಲಿರುವುದಕ್ಕೆ ಕಾರಣವನ್ನು ತಿಳಿಸುವೆನು ಕೇಳು! ನಮ್ಮ ವಂಶಕ್ಕೆ ನಿಮಿಯೆಂಬ ಚಕ್ರವರ್ತಿಯೇ ಕೂಟಸ್ಥನು. ಆತನಿಂದ ಆರನೆಯವನಾದ ದೇವರಾತನೆಂಬ ಪ್ರಸಿದ್ಧನಾದ ರಾಜನೊಬ್ಬನಿದ್ದನು. ಮಹಾತ್ಮನಾದ ಶಿವನ ಧನುಸ್ಸು ಆ ದೇವರಾತನಲ್ಲಿ ನ್ಯಾಸರೂಪವಾಗಿ ಇಡಲ್ಪಟ್ಟಿತು. ಪೂರ್ವದಲ್ಲಿ ದಕ್ಷಯಜ್ಞವು ನಡೆಯುತ್ತಿದ್ದಾಗ ಅದನ್ನು ಕೆಡಿಸಬೇಕೆಂದು ಪ್ರಯತ್ನಿಸಿದ ರುದ್ರನು, ಈ ಧನುಸ್ಸನ್ನು ಎಳೆದು ಕೋಪ ದಿಂದ ಅಲ್ಲಿದ್ದ ದೇವತೆಗಳನ್ನು ಕುರಿತು, "ಎಲೈ ದೇವತೆಗಳಿರಾ! ಈ ಯಜ್ಞ ದಲ್ಲಿ ನನಗೆ ಸೇರತಕ್ಕ ಹವಿರ್ಭಾಗವನ್ನು ನೀವು ಕೊಡಿಸದಿದ್ದುದರಿಂದ, ಈಗಲೇ ನಿಮ್ಮ ತಲೆಗಳನ್ನು ಈ ಧನುಸ್ಸಿನಿಂದ ಕತ್ತರಿಸಿಬಿಡುವೆನು" ಎಂದು ಆರ್ಭಟಿಸಿದನು. ಆಗ ದೇವತೆಗಳೆಲ್ಲರೂ ಭಯದಿಂದಲೂ ದುಃಖದಿಂದಲೂ ಆತನ ಮನ್ನಣೆಯನ್ನು ಬೇಡಲು, ರುದ್ರನು ಕೋಪವನ್ನು ಬಿಟ್ಟು ಅವರಲ್ಲಿ ಪ್ರಸನ್ನನಾಗಿ, ಈ ಧನುಸ್ಸನ್ನೇ ಆ ದೇವತೆಗಳಿಗೆ ಅನುಗ್ರಹಿಸಿ ಕೊಟ್ಟು ಬಿಟ್ಟನು. ಆ ದೇವತೆಗಳೇ ಆಮೇಲೆ ಅದನ್ನು ನಮ್ಮ ವಂಶದವನಾದ ದೇವ ರಾತನಿಗೆ ಕೊಟ್ಟರು. ಈಚೆಗೆ ನಾನು ಯಜ್ಞಾರ್ಥವಾಗಿ ಭೂಮಿಯನ್ನು ಶೋಧಿಸುತ್ತಿರುವಾಗ, ಒಬ್ಬ ಕನ್ನಿಕೆಯು ನನ್ನ ನೇಗಿಲಿಗೆ ಸಿಕ್ಕಿದಳು. ನೇಗಿಲಿಗೆ ಸಿಕ್ಕಿದುದರಿಂದಲೇ ಆಕೆಗೆ ಸೀತೆಯೆಂದು ಹೆಸರಿಟ್ಟೆನು. ಹೀಗೆ ನೆಲದಲ್ಲಿ ಸಿಕ್ಕಿದ ಆ ಮುದ್ದುಮಗಳನ್ನು ನಾನು ಬಹಳ ಮೋಹದಿಂದ ಬೆಳೆಯಿಸಿರುವೆನು. ಅವಳು ನನಗೆ ಸಾಕುಮಗಳೆನಿಸಿಕೊಂಡಿರುವಳೇ ಹೊರತು ಔರಸಪುತ್ರಿಯಲ್ಲ. ಈ ಕನ್ಯೆಯು ಅಯೋನಿಜೆಯಾದುದರಿಂದ ಸಾಮಾನ್ಯ ರಾಜರಿಗೆ ಇವಳನ್ನು ಕೊಟ್ಟು ಮದುವೆಮಾಡುವುದುಚಿತವಲ್ಲವೆಂದು ತೋರಿತು! ಆದುದರಿಂದಲೇ ಇವಳನ್ನು ವೀರ್ಯಶುಲ್ಕೆಯಾಗಿಟ್ಟು ಈ ಧನುಸ್ಸನ್ನು ಬಗ್ಗಿಸಬಲ್ಲ ರಾಜರಿಗೆ ಕೊಡಬೇಕೆಂದಿರುವೆನು. ಹೀಗೆ ನನಗೆ ಭೂಮಿಯಲ್ಲಿ ಸಿಕ್ಕಿದ ಈ ಕನ್ನಿಕೆಯು ನನ್ನಲ್ಲಿ ಬಳೆಯುತ್ತಿರುವುದನ್ನು ನೋಡಿ, ಅನೇಕ ರಾಜರು ಬಂದು ಕೇಳಿದರು. ಅವರೆಲ್ಲರಿಗೂ ನಾನು ಈ ಶಿವ

ಧನುಸ್ಸನ್ನು ಬಗ್ಗಿಸಿದ ಹೊರತು ಈಕೆಯನ್ನು ಕೊಡಲಾರೆನೆಂದು ಹೇಳು ತ್ತಿರುವೆನು. ಅದಕ್ಕಾಗಿ ಅನೇಕ ರಾಜರು ನಾನಾದಿಕ್ಕುಗಳಿಂದ ಬಂದು ಸೇರಿ, ಈ ಧನುಸ್ಸಿನ ಸಾರವನ್ನು ನೋಡಬೇಕೆಂದು ಅಪೇಕ್ಷಿಸಿದರು. ಅವರ ಕೋರಿಕೆ ಯಂತೆ ಈ ಧನುಸ್ಸನ್ನು ಅವರ ಮುಂದೆ ತಂದಿಟ್ಟೆನು. ಇದನ್ನು ಎತ್ತಿ ಹಿಡಿಯುವುದಕ್ಕಾಗಲಿ ಅಥವಾ ಇದನ್ನಾಡಿಸುವುದಕ್ಕಾಗಲಿ ಇದುವರೆಗೆ ಒಬ್ಬ ರಾದರೂ ಸಮರ್ಥರಾಗಲಿಲ್ಲ. ಅವರ ವೀರ್ಯವೆಲ್ಲವೂ ವಿಫಲವಾದುದನ್ನು ನೋಡಿ, ಅಲ್ಪವೀರ್ಯವುಳ್ಳವರೆಂದು ಅವರೆಲ್ಲರನ್ನೂ ನಾನು ತಿರಸ್ಕರಿಸಿ ಬಿಟ್ಟೆನು. ಹೀಗೆ ತಿರಸ್ಕಾರವುಂಟಾದುದಕ್ಕಾಗಿ ಆ ರಾಜರೆಲ್ಲರೂ ಒಂದುಕೂಡಿ, ನನ್ನ ಮೇಲಿನ ಕೋಪದಿಂದ ಮಿಥಿಲೆಯನ್ನು ಮುತ್ತಿದರು. ಅವರು ಹೀಗೆ ಪಟ್ಟಣವನ್ನು ಮುತ್ತಿಗೆಹಾಕುವುದಕ್ಕೆ ಬೇರೊಂದು ಕಾರಣವೂ ಉಂಟು. ವೀರ್ಯಶುಲ್ಕದ ವ್ಯಾಜದಿಂದ ತಮ್ಮನ್ನು ನಾನು ತಿರಸ್ಕರಿಸಿದೆನೆಂಬ ದುರಭಿ ಪ್ರಾಯದಿಂದ ಅವರಿಗೆ, ನನ್ನಲ್ಲಿ ಇಷ್ಟು ಕೋಪವುಂಟಾಯಿತು. ಹೀಗೆ ಒಂದು ಸಂವತ್ಸರಕಾಲದವರೆಗೂ ನನ್ನ ಪಟ್ಟಣವನ್ನು ಅವರು ಮುತ್ತಿಗೆಹಾಕಿದ್ದುದ ರಿಂದ, ನನ್ನ ಸೈನ್ಯಸಾಮಗ್ರಿಗಳೆಲ್ಲವೂ ಕುಂದುತ್ತ ಬಂದುವು. ಸೈನ್ಯಗಳೆಲ್ಲವೂ ಸಾಯುತ್ತಿದ್ದುವು. ಆಗ ನಾನು ಬಹಳ ದುಃಖದಿಂದ ದೇವತೆಗಳನ್ನು ಕುರಿತು ತಪಸ್ಸು ಮಾಡಿದೆನು. ಅವರು ನನ್ನ ತಪಸ್ಸಿಗೆ ಪ್ರೀತರಾಗಿ, ಚತುರಂಗಸೈನ್ಯ ಗಳನ್ನು ಅನುಗ್ರಹಿಸಿ ಕೊಟ್ಟರು. ಆ ಸೈನ್ಯವು ಮುತ್ತಿಗೆ ಹಾಕಿದ್ದ ರಾಜರೆಲ್ಲ ರನ್ನೂ ಭಂಗಪಡಿಸಿ, ದಿಕ್ಕುಗಳಿಗೆ ಓಡಿಸಿತು. ಪಾಪಕರ್ಮವುಳ್ಳ ಆ ರಾಜ ರೆಲ್ಲರೂ ಹೀಗೆ ಭಂಗಹೊಂದಿ ನಿರ್ವೀರ್ಯರಾಗಿ ಬೇರೆ ಸೈನ್ಯಗಳನ್ನು ಸೇರಿಸಿ ಕೊಂಡು ಬಂದು ಯುದ್ಧಮಾಡುವುದಕ್ಕೂ ಹೆದರಿ, ಮಂತ್ರಿಗಳೊಡಗೂಡಿ ತಮ್ಮ ತಮ್ಮ ದೇಶಗಳಿಗೆ ಹೊರಟುಹೋದರು. ಇದೇ ಆ ಧನುಸ್ಸಿನ ಪೂರ್ವ ವೃತ್ತಾಂತವು. ಈ ರಾಜಕುಮಾರರಿಗೂ ಆ ಧನುಸ್ಸನ್ನು ತೋರಿಸುವೆನು. ಒಂದುವೇಳೆ ಈ ರಾಮನು ಆ ಧನುಸ್ಸಿಗೆ ನಾಣೇರಿಸಬಲ್ಲವನಾದರೆ, ಅಯೋ ನಿಜೆಯಾದ ಸೀತೆಯನ್ನು ಈತನಿಗೆ ಪಾಣಿಗ್ರಹಣ ಮಾಡಿಸುವೆನು" ಎಂದನು.

ಇಲ್ಲಿಗೆ ಅರುವತ್ತಾರನೆಯ ಸರ್ಗವು

ರಾಮನು ರುದ್ರಧನುಸ್ಸನ್ನು ಮುರಿದುದು

ಜನಕನು ಹೇಳಿದ ಮಾತನ್ನು ಕೇಳಿ ವಿಶ್ವಾಮಿತ್ರನು ಆತನನ್ನು ಕುರಿತು "ಎಲೈ ರಾಜನೆ! ಹಾಗೆಯೇ ಸರಿ! ಅದನ್ನು ರಾಮನಿಗೆ ತೋರಿಸು" ಎಂದನು. ಆಗ ರಾಜನು ಮಂತ್ರಿಗಳನ್ನು ಕರೆದು, ಗಂಧಪುಷ್ಪಾದಿಗಳಿಂದ ಅಲಂಕರಿಸಿಟ್ಟ ಆ ದಿವ್ಯ ಧನುಸ್ಸನ್ನು ತರುವಂತೆ ಆಜ್ಞಾಪಿಸಿದನು. ಮಂತ್ರಿಗಳು ಯಜ್ಞಶಾಲೆಯಿಂದ ಪಟ್ಟಣಕ್ಕೆ ಹೋಗಿ, ಆ ಧನುಸ್ಸನ್ನು ಹೊರಿಸಿಕೊಂಡು ಬಂದರು. ಒಳ್ಳೇ ದೇಹದಾರ್ಢ್ಯವುಳ್ಳ ಐದು ಸಾವಿರ ಜನಗಳು, ಎಂಟು ಮೂಲೆಗಳಿಂದ ಕೂಡಿದ ಉಕ್ಕಿನ ಪೆಟ್ಟಗೆಯಲ್ಲಿಟ್ಟು, ಎಂಟು ಚಕ್ರಗಳುಳ್ಳ ಬಂಡಿಯಲ್ಲೇರಿಸಿ, ಆ ಧನುಸ್ಸನ್ನು ಸೆಳೆದುಕೊಂಡು ಬಂದು ಜನಕನ ಮುಂದಿಟ್ಟು "ಎಲೈ ರಾಜನೆ! ಇದೋ! ಸೀತೆಯನ್ನು ಅಪೇಕ್ಷಿಸಿ ಬಂದ ಸಮಸ್ತ ರಾಜರಿಗೂ ಆಶ್ಚರ್ಯವನ್ನುಂಟುಮಾಡಿದ ಈ ಧನುಸ್ಸನ್ನು ತಂದಿಟ್ಟಿರುವೆವು. ಇದನ್ನು ಯಾರಿಗೆ ತೋರಿಸಬೇಕೋ ತೋರಿಸಬಹುದು" ಎಂದರು.

ಆಗ ಜನಕನು ವಿಶ್ವಾಮಿತ್ರನ ಮುಂದೆ ಕೈಮುಗಿದು ನಿಂತು, "ಎಲೈ ಮಹಾತ್ಮನೆ! ಇದೋ! ಧನುಸ್ಸು ಬಂದಿರುವುದು. ಇದನ್ನು ನಮ್ಮ ಪೂರ್ವಿಕರೆಲ್ಲರೂ ಪೂಜಿಸುತ್ತಿದ್ದರು. ಮತ್ತು ಸೀತೆಯನ್ನು ವರಿಸಬೇಕೆಂದು ಬಂದಿದ್ದ ಮಹಾವೀರ್ಯವುಳ್ಳ ರಾಜರೆಲ್ಲರೂ ನಾಣೇರಿಸಲಾಗದೆ ಹೋದರು. ದೇವ ದಾನವ ಯಕ್ಷ ಕಿನ್ನರ ಮಹೋರಗರಲ್ಲಿಯೂ ಯಾರೂ ಇದನ್ನೆಳೆದು ಕಟ್ಟಲಾರರು. ಹೀಗಿರುವಲ್ಲಿ ಮನುಷ್ಯರ ಪಾಡೇನು? ಇದನ್ನು ಎಳೆದು ಕಟ್ಟುವುದಕ್ಕಾಗಲಿ, ಇದರಲ್ಲಿ ಬಾಣಸಂಧಾನವನ್ನು ಮಾಡುವುದಕ್ಕಾಗಲಿ, ಇದನ್ನೆತ್ತುವುದಕ್ಕಾಗಲಿ, ಕೊನೆಗೆ ಇದನ್ನು ಆಡಿಸುವುದಕ್ಕಾಗಲಿ ಯಾರಿಗೂ ಸಾಧ್ಯವಿಲ್ಲದೆ ಹೋಯಿತು. ಈ ಮಹಾಧನುಸ್ಸನ್ನು ಇಲ್ಲಿ ತರಿಸಿಟ್ಟಿರುವೆನು. ಈ ರಾಜಕುಮಾರರಿಗೂ ಅದನ್ನು ತೋರಿಸು" ಎಂದನು.

ಜನಕನ ಈ ಮಾತನ್ನು ಕೇಳಿ ಧರ್ಮಾತ್ಮನಾದ ವಿಶ್ವಾಮಿತ್ರನು ರಾಮನನ್ನು ಕುರಿತು "ವತ್ಸನೆ! ಆ ಧನುಸ್ಸನ್ನು ನೋಡು" ಎನಲು, ರಾಮನು ಧನುಸ್ಸಿದ್ದ ಕಡೆಗೆ ಹೋಗಿ, ಪೆಟ್ಟಿಗೆಯನ್ನು ತೆರೆದು ಆ ಧನುಸ್ಸನ್ನು ನೋಡಿದನು. ಆಮೇಲೆ ವಿಶ್ವಾಮಿತ್ರನನ್ನು ನೋಡಿ, "ಎಲೈ ಬ್ರಾಹ್ಮಣೋತ್ತಮನೆ! ಇದೇನೋ ದೊಡ್ಡ ಧನುಸ್ಸೇ ಸರಿ! ಇದನ್ನು ನಾನು

ಕೈಯಿಂದ ಮುಟ್ಟಿ ನೋಡಬಹುದೆ? ಸಾಧ್ಯವಾದರೆ ಅದನ್ನೆತ್ತಿ ನಾಣೇರಿಸುವುದಕ್ಕೂ ಪ್ರಯತ್ನಿಸುವೆನು" ಎಂದನು. ಅದಕ್ಕಾ ವಿಶ್ವಾಮಿತ್ರನೂ, ಜನಕರಾಜನೂ ಅನುಮತಿಸಲು, ಒಡನೆಯೇ ರಾಮನು ಆ ಧನುಸ್ಸಿನ ಮಧ್ಯಭಾಗವನ್ನು ಹಿಡಿದು, ಲೀಲಾಮಾತ್ರದಿಂದಲೇ ಅದನ್ನೆತ್ತಿಕೊಂಡು, ಅಲ್ಲಿದ್ದ ಸಾವಿರಾರು ಜನರು ನೋಡುತ್ತಿದ್ದ ಹಾಗೆಯೇ [1]ಅತಿಸುಲಭವಾಗಿ ನಾಣನ್ನೂ ಎತ್ತಿಕಟ್ಟಿದನು. ಕೊನೆಗೆ ಅದನ್ನು ಸೆಳೆಯುವುದಕ್ಕಾರಂಭಿಸಲು, ಮಹಾಯಶಸ್ವಿಯಾದ ರಾಮನ ಶಕ್ತಿಗೆ ತಡೆಯಲಾರದೆ, ಆ ಬಿಲ್ಲು ಮಧ್ಯಭಾಗಕ್ಕೆ ಸರಿಯಾಗಿ ಮುರಿದುಹೋಯಿತು. ಅದರಿಂದುಂಟಾದ ಶಬ್ದವು ಸಿಡಿಲಿಗೆ ಸಮಾನವಾಗಿ ತ್ರೈಲೋಕ್ಯವನ್ನೂ ವ್ಯಾಪಿಸಿತು. ಭೂಮಿಯೆಲ್ಲವೂ ನಡುಗಿತು. ಒಂದು ದೊಡ್ಡ ಪರ್ವತವೇ ಮುರಿದು ಬಿದ್ದಂತಾಯಿತು. ವಿಶ್ವಾಮಿತ್ರನು, ಜನಕರಾಜನು, ರಾಮಲಕ್ಷ್ಮಣರು, ಈ ನಾಲ್ವರು ಹೊರತು, ಆ ಮಹಾಧ್ವನಿಯಿಂದ ಅಲ್ಲಿದ್ದ ಉಳಿದ ಜನರೆಲ್ಲರೂ ಮೂರ್ಛೆಹೊಂದಿ ನೆಲದಲ್ಲಿ ಬಿದ್ದರು. ಹೀಗೆ ಮೂರ್ಛೆಬಿದ್ದ ಜನರೆಲ್ಲರೂ ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡುದನ್ನು ನೋಡಿ, ಜನಕನು ಸ್ವಲ್ಪ ಧೈರ್ಯಗೊಂಡು, ವಿಶ್ವಾಮಿತ್ರನ ಮುಂದೆ ಕೈಮುಗಿದು ನಿಂತು, "ಎಲೈ ಪೂಜ್ಯನೆ! ದಶರಥಪುತ್ರನಾದ ಈ ರಾಮನ ವೀರ್ಯವೆಂತದೆಂದು ಈಗ ಚೆನ್ನಾಗಿ ಸ್ಪಷ್ಟವಾಯಿತು. ಹೀಗೆ ನಾನು ಎಂದಿಗೂ ಎಣಿಸಿರಲಿಲ್ಲ. ಇದು ಅತ್ಯದ್ಭುತವಾಗಿರುವುದು. ಇಷ್ಟು ಚಿಕ್ಕ ವಯಸ್ಸಿನ ಈ ಕುಮಾರನು ಆ ಮಹಾಧನುಸ್ಸನ್ನು ಮುರಿಯುವನೆಂದು ಯಾರು ತಿಳಿದಿದ್ದರು? ಹೀಗಾಗುವುದೆಂದು ಮನಸ್ಸಿನಲ್ಲಿ ಯೋಚಿಸುವುದಕ್ಕೂ ಅವಕಾಶವಿರಲಿಲ್ಲ! "ಎಲೈ ಮಹರ್ಷಿಯೆ! ಅದೆಲ್ಲವೂ ಹಾಗಿರಲಿ! [2]ಮಹಾಪ್ರಭಾವವುಳ್ಳ ದಶರಥ

---

1. ಧನುಸ್ಸು ಬಹಳ ಉದ್ದವಾಗಿರುವುದರಿಂದಲೂ, ಬಾಲನಾದ ರಾಮನ ಆಕಾರವು ಬಹಳ ಚಿಕ್ಕದಾಗಿರುವುದರಿಂದಲೂ, ಅದರ ಕೊನೆಯನ್ನು ಕೈಯಿಂದಲೇ ಎಟಕಿಸಲಾರದ ರಾಮನು ಅದನ್ನು ಹೇಗೆ ಬಗ್ಗಿಸಿದನೆಂದು ತೋರಬಹುದು. ಈತನು ದಿವ್ಯಶಕ್ತಿಯುಳ್ಳವನಾದುದರಿಂದ, ಈತನ ಹಸ್ತಸ್ಪರ್ಶಮಾತ್ರದಿಂದಲೇ ಧನುಸ್ಸು ತಾನಾಗಿ ಬಗ್ಗಿತೆಂದು ಗ್ರಹಿಸಬೇಕು.

2. "ಜನಕಾನಾಂ ಕುಲೇ ಕೀರ್ತಿಮಾಹರಿಷ್ಯತಿ ಮೇ ಸುತಾ | ಸೀತಾ ಭರ್ತಾರಮಾಸಾದ್ಯ ರಾಮಂ ದಶರಥಾತ್ಮಜಂ" ಎಂಬುದೇ ಇದಕ್ಕೆ ಮೂಲವು.

ಪುತ್ರನಾದ ಈ ರಾಮನನ್ನು ತನ್ನ ಭರ್ತನನ್ನಾಗಿ ಪಡೆಯುವುದರಿಂದ, ನನ್ನ ಮಗಳಾದ ಸೀತೆಯು ನಮ್ಮ ವಂಶಕ್ಕೆ ಕೀರ್ತಿಯನ್ನು ತರುವಳಲ್ಲವೆ? ಈಕೆಯನ್ನು ವೀರ್ಯಶುಲ್ಕಕ್ಕಾಗಿಯೇ ಕೊಡಬೇಕೆಂದು ನಾನು ಮಾಡಿದ್ದ ಪ್ರತಿಜ್ಞೆಯೂ ಇಂದಿಗೆ ಸಾರ್ಥಕವಾಯಿತು. ನನಗೆ ಪ್ರಾಣಕ್ಕಿಂತಲೂ ಅಧಿಕಳಾದ ಈ ಸೀತೆಯನ್ನು ವರಿಸುವುದಕ್ಕೆ ಈ ರಾಮನೇ ಅರ್ಹನು. ಎಲೈ ಮಹಾತ್ಮನೆ! ನೀನು ಅನುಮತಿಯನ್ನು ಕೊಡುವುದಾದರೆ, ನನ್ನ ಮಂತ್ರಿಗಳನ್ನು ಈಗಲೇ ರಥವನ್ನೇರಿಸಿ, ಅಯೋಧ್ಯೆಗೆ ಕಳುಹಿಸಿ, ಆ ದಶರಥನನ್ನು ಈ ಪಟ್ಟಣಕ್ಕೆ ಕರೆತರಿಸುವೆನು. ಆ ಮಂತ್ರಿಗಳು ವೀರ್ಯಶುಲ್ಕೆಯಾದ ಸೀತೆಯನ್ನು ರಾಮನಿಗೆ ಕೊಡುವ ವಿಷಯವನ್ನೂ, ರಾಮಲಕ್ಷ್ಮಣರುಗಳು ನಿನ್ನ ರಕ್ಷಣೆಗೊಳಪಟ್ಟು ಇಲ್ಲಿಗೆ ಬಂದಿರುವುದನ್ನೂ ಆ ದಶರಥನಿಗೆ ವಿನಯದಿಂದ

ಇಲ್ಲಿ (ಮೇ ಸುತಾ ಸೀತಾ) ನನ್ನ ಮಗಳಾದ ಸೀತೆಯೆಂಬುದರಿಂದ, ವಧುವಾಗಿರುವ ಸೀತೆಗೆ ತನ್ನ ಸಂಬಂಧದಿಂದುಂಟಾದ ವಂಶೋನ್ನತಿಯೂ, ಅಯೋನಿಜೆಯೆಂಬ ಅತಿಶಯವೂ ಸೂಚಿತವಾಗುವುದು. ಅದರಂತೆಯೇ ರಾಮನ ವಿಷಯವಾಗಿ ಹೇಳಿರುವ (ದಶರಥಾತ್ಮಜಂ) ಎಂಬ ವಿಶೇಷಣದಿಂದ, "ಬಾಂಧವಾಃ ಕುಲಮಿಚ್ಛಂತಿ" ಎಂಬಂತೆ ಈ ರಾಮನಲ್ಲಿ ಬಂಧುಗಳು ಕೋರುವ ಮಹಾಕುಲೀನತ್ವವೂ, (ರಾಮಂ) ಎಂಬುದರಿಂದ, "ರಮಯತೀತಿ ರಾಮಃ" ಎಂಬ ವ್ಯುತ್ಪತ್ತಿಯನ್ನನುಸರಿಸಿ "ರೂಪಮಿಚ್ಛತಿ ಕನ್ಯಕಾ" ಎಂಬಂತೆ ಕೈಹಿಡಿಯತಕ್ಕ ಹೆಣ್ಣುಮಕ್ಕಳು ಅಪೇಕ್ಷಿಸುವ ರೂಪಾತಿಶಯವೂ (ಭರ್ತಾರಂ) ಎಂಬುದರಿಂದ, "ವಿತ್ತಮಿಚ್ಛಂತಿ ಮಾತರಃ" ಎಂಬಂತೆ ಕೈಹಿಡಿದ ಹೆಂಡತಿಯನ್ನು ಸುಖವಾಗಿ ಭರಿಸತಕ್ಕವನೆಂದು ತಾಯಿಯು ಕೋರುವ ಭಾಗ್ಯಸಮೃದ್ಧಿಯೂ ಸೂಚಿಸಲ್ಪಡುವುವು. ಇದರಿಂದ ಈತನು ಸರ್ವಸಮ್ಮತನಾದ ವರನೆಂದು ಭಾವವು. ಹೀಗೆ ಸರ್ವಾತಿಶಯವುಳ್ಳ ಆ ಕನ್ನಿಕೆಯು, ಸರ್ವಲಕ್ಷಣಸಂಪನ್ನನಾದ ವರನನ್ನು (ಆಸಾದ್ಯ) ಸೇರಿ, "ಅನಂತಂ ಬತ ಮೇ ವಿತ್ತಂ ಯಸ್ಯ ಮೇ ನಾಸ್ತಿ ಕಿಂಚನ | ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ಕಿಂಚಿತ್ಪ್ರದಹ್ಯತೇ" ಎಂಬಂತೆ, ಅಧ್ಯಾತ್ಮಜ್ಞಾನ ವೈಭವದಿಂದ ಪ್ರಸಿದ್ಧರಾದ (ಜನಕಾನಾಂ ಕುಲೇ) ಜನಕವಂಶದಲ್ಲಿ (ಕೀರ್ತಿಂ ಆಹರಿಷ್ಯತಿ) ಯಶಸ್ಸನ್ನುಂಟುಮಾಡುವಳೆಂದು ಭಾವವು. ಇಲ್ಲಿ ಕೀರ್ತಿಯೆಂದು ಏಕವಚನವನ್ನು ಹೇಳಿರುವುದರಿಂದ ಯಾವಾಗಲೂ ಒಂದೇವಿಧವಾಗಿ ಅಖಂಡವಾದ ಕೀರ್ತಿಯನ್ನು ತರುವಳೆಂದೂ ಗ್ರಹಿಸಬೇಕು.

ತಿಳಿಸಿ, ಆತನನ್ನು ಬೇಗ ಕರೆತರಲಿ" ಎಂದನು. ಆಗ ವಿಶ್ವಾಮಿತ್ರನು ಹಾಗೆಯೇ ಆಗಲೆಂದು ಅದಕ್ಕನುಮತಿಸಲು, ಜನಕನು ಮಂತ್ರಿಗಳನ್ನು ಕರೆದು, ದಶರಥನಿಗೆ ಈ ವೃತ್ತಾಂತಗಳೆಲ್ಲವನ್ನೂ ತಿಳಿಸಿ ಮಿಥಿಲೆಗೆ ಕರೆತರು ವಂತೆ ಆಜ್ಞೆಮಾಡಿದನು.

ಇಲ್ಲಿಗೆ ಅರುವತ್ತೇಳನೆಯ ಸರ್ಗವು.

ಜನಕನು ದಶರಥನನ್ನು ಕರೆತರುವುದಕ್ಕಾಗಿ ದೂತರನ್ನು ಕಳುಹಿಸಿದುದು.

ಹೀಗೆ ಜನಕನಿಂದ ಆಜ್ಞಾಪಿಸಲ್ಪಟ್ಟ ದೂತರು, ಬಹಳ ವೇಗದಿಂದ ಪ್ರಯಾಣಮಾಡಿ, ಬಹುದೂರದವರೆಗೆ ಹೋದಮೇಲೆ, ಕುದುರೆಗಳು ಬಹಳ ವಾಗಿ ಬಳಲಿರುವುದನ್ನು ನೋಡಿ, ದಾರಿಯಲ್ಲಿ ನಡುವೆ ಮೂರುರಾತ್ರಿಗಳವರೆಗೆ ವಿಶ್ರಾಂತಿಯನ್ನು ತೆಗೆದುಕೊಂಡು ಆಮೇಲೆ ಹೊರಟು ಅಯೋಧ್ಯೆಯನ್ನು ಸೇರಿದರು. ದಶರಥನ ಅರಮನೆಯ ಬಾಗಿಲಿಗೆ ಹೋಗಿ, ಅಲ್ಲಿದ್ದ ದ್ವಾರ ಪಾಲಕರನ್ನು ನೋಡಿ, "ಎಲೈ ದ್ವಾರಪಾಲಕರೆ! ನೀವು ಈಗಲೆ ಹೋಗಿ 'ಜನಕರಾಜನ ಪಟ್ಟಣದಿಂದ ಕೆಲವು ದೂತರು ಬಂದಿರುವ'ರೆಂದು, ನಿಮ್ಮ ರಾಜನಿಗೆ ತಿಳಿಸಬೇಕು" ಎಂದರು. ದ್ವಾರಪಾಲಕರು ದಶರಥನಿಗೆ ಈ ವಿಷಯ ವನ್ನು ತಿಳಿಸಲು, ರಾಜನು ಒಡನೆಯೇ ಇವರನ್ನು ಕರೆತರುವಂತೆ ಅಪ್ಪಣೆ ಮಾಡಿದನು. ಈ ದೂತರೆಲ್ಲರೂ ಅರಮನೆಯೊಳಗೆ ಪ್ರವೇಶಿಸಿ, ಅಲ್ಲಿ ವಯೋ ವೃದ್ಧನಾಗಿ ಇಂದ್ರವೈಭವದಿಂದ ಪ್ರಕಾಶಿಸುತ್ತಿರುವ ದಶರಥರಾಜನನ್ನು ಕಂಡು, ಅವನಿಗೆ ಭಯಭಕ್ತಿಗಳಿಂದ ಕೈಮುಗಿದು ನಿಂತಿದ್ದರು. ಆತನ ಸೌಜನ್ಯ ವನ್ನು ನೋಡಿದೊಡನೆ, ಅವರ ಮನಸ್ಸಿನ ಭಯವೆಲ್ಲವೂ ಹೋಗಲು, ಮೃದುವಾಕ್ಯದಿಂದ, ಆತನನ್ನು ಕುರಿತು, "ಎಲೈ ಮಹಾರಾಜನೆ! ಮಿಥಿಲಾ ಪಟ್ಟಣದ ದೊರೆಯಾದ ಜನಕನು ಬಾರಿಬಾರಿಗೂ ತಮ್ಮ ಕ್ಷೇಮವನ್ನು ವಿಚಾರಿಸಿದುದಲ್ಲದೆ, ತಾವು ನಡೆಸಿಕೊಂಡು ಬರುವ ಅಗ್ನಿಹೋತ್ರಾದಿಗಳಿಗೂ, ತಮ್ಮ ಮಂತ್ರಿಪುರೋಹಿತಾದಿಗಳಿಗೂ, ಕುಶಲವನ್ನು ಕೇಳುವಂತೆ ಹೇಳಿರು ವನು. ವಿಶ್ವಾಮಿತ್ರನ ಅನುಮತಿಯಿಂದ ತಮಗೆ ಒಂದು ಮಾತನ್ನು ಹೇಳಿ ಕಳುಹಿಸಿರುವನು. ಏನೆಂದರೆ "ನಾನು ಪ್ರಿಯಪುತ್ರಿಯಾದ ಸೀತೆಯನ್ನು

ವೀರ್ಯಶುಲ್ಕೆಯನ್ನಾಗಿ ಪ್ರತಿಜ್ಞೆಮಾಡಿರುವ ವಿಷಯವು ಮೊದಲೇ ವಿದಿತವಾಗಿರಬಹುದು. ಈ ವಿಷಯದಲ್ಲಿ ಅನೇಕ ರಾಜರು ಪ್ರಯತ್ನಪಟ್ಟು ನಿರ್ವೀರ್ಯರಾಗಿ, ತಮಗುಂಟಾದ ಆಶಾಭಂಗದಿಂದ ನನ್ನಮೇಲೆ ಕೋಪಗೊಂಡು ನನ್ನನ್ನಿದಿರಿಸಿ ಕೊನೆಗೆ ಪರಾಜಿತರಾಗಿಯೂ ಹೊರಟುಹೋದರು. ಎಲೈ ಮಹಾರಾಜನೆ! ಈಗ ವಿಶ್ವಾಮಿತ್ರನೊಡನೆ ಬಂದ ವೀರರಾದ ನಿನ್ನ ಮಕ್ಕಳು ತಮ್ಮ ವೀರ್ಯಾತಿಶಯವನ್ನು ತೋರಿಸಿ, ನನ್ನ ಮಗಳಾದ ಸೀತೆಯನ್ನು ಕೈಸೇರಿಸಿಕೊಂಡರು. ರಾಜರ ವೀರ್ಯವನ್ನು ಪರೀಕ್ಷಿಸುವುದಕ್ಕಾಗಿ ಇಟ್ಟಿದ್ದ ದಿವ್ಯಧನುಸ್ಸು, ಮಹಾತ್ಮನಾದ ರಾಮನಿಂದ ಅನೇಕ ಜನಗಳ ಮುಂದೆ ನಿಮಿಷಮಾತ್ರದಲ್ಲಿ ಮುರಿಯಲ್ಪಟ್ಟಿತು. ಆದುದರಿಂದ ವೀರ್ಯಶುಲ್ಕೆಯಾಗಿರುವ ಆ ಸೀತೆಯನ್ನು ಮಹಾತ್ಮನಾದ ರಾಮನಿಗೆ ಕೊಟ್ಟು, ನನ್ನ ಪ್ರತಿಜ್ಞೆಯನ್ನು ಪೂರ್ತಿಮಾಡಬೇಕೆಂದಪೇಕ್ಷಿಸಿರುವೆನು. ನೀನು ಇದಕ್ಕೆ ಅನುಮತಿಸಬೇಕು. ನಿನ್ನ ಕಡೆಯ ಮಂತ್ರಿಗಳನ್ನೂ, ಪುರೋಹಿತರನ್ನೂ, ಉಪಾಧ್ಯಾಯರನ್ನೂ ಈಗಲೇ ಸಂಗಡ ಕರೆದುಕೊಂಡು ಇಲ್ಲಿಗೆ ಬಂದು, ನಿನ್ನ ಮುದ್ದುಮಕ್ಕಳಾದ ರಾಮಲಕ್ಷ್ಮಣರನ್ನು ನೋಡಬೇಕು. ಎಲೈ ರಾಜೇಂದ್ರನೆ! ನಿನ್ನ ಪುತ್ರನ ವಿವಾಹೋತ್ಸವವನ್ನು ನೀನು ಕಣ್ಣಾರೆ ಕಂಡು ಸಂತೋಷವನ್ನು ಹೊಂದುವುದಲ್ಲದೆ, ನಿನ್ನ ಆಗಮನದಿಂದ ನಮ್ಮನ್ನೂ ಸಂತೋಷಪಡಿಸಬೇಕು!" ಎಂದು ಬಹಳ ವಿನಯದಿಂದ ನಿನ್ನನ್ನು ಪ್ರಾರ್ಥಿಸಿಕೊಳ್ಳುವನು. ಈ ವಿಷಯದಲ್ಲಿ ವಿಶ್ವಾಮಿತ್ರನೂ, ಶತಾನಂದನೂ ಮನಃಪೂರ್ತಿಯಾಗಿ ಸಮ್ಮತಿಸಿರುವರು" ಎಂದು ಹೇಳಿ, ಆ ದೂತರು ಭಯಭಕ್ತಿಗಳಿಂದ ನಿಂತಿದ್ದರು.

ದಶರಥನು ಈ ವಾಕ್ಯವನ್ನು ಕೇಳಿ ಬಹಳ ಸಂತೋಷಪಟ್ಟು, ವಸಿಷ್ಠವಾಮದೇವಾದಿ ಪುರೋಹಿತರಿಗೂ, ಇತರ ಮಂತ್ರಿಗಳಿಗೂ ಈ ಶುಭ ವೃತ್ತಾಂತವನ್ನು ಸೂಚಿಸುವುದಕ್ಕಾಗಿ ಅವರನ್ನು ಕರೆದು, "ಆರ್ಯರೆ! ವಿಶ್ವಾಮಿತ್ರನ ವಶಕ್ಕೆ ಒಪ್ಪಿಸಲ್ಪಟ್ಟ ನಮ್ಮ ಮಕ್ಕಳಿಬ್ಬರೂ ಈಗ ಜನಕರಾಜನ ಪಟ್ಟಣದಲ್ಲಿರುವರಂತೆ! ಮಹಾತ್ಮನಾದ ಜನಕನು ಅವರ ವೀರ್ಯಕ್ಕೆ ಮೆಚ್ಚಿ ತನ್ನ ಮಕ್ಕಳನ್ನು ರಾಮನಿಗೆ ಕೊಟ್ಟು ವಿವಾಹಮಾಡಬೇಕೆಂದೆಣಿಸಿ, ಆ ವಿಷಯವನ್ನು ನಮಗೆ ಹೇಳಿಕಳುಹಿಸಿರುವನು. ಈ ಸಂಬಂಧವು ನಿಮಗೆ ಅಭಿಮತವಾಗಿದ್ದರೆ, ಸಾವಕಾಶಮಾಡದೆ ಈಗಲೇ ನಾವು ಆತನ ಪಟ್ಟಣಕ್ಕೆ ಹೊರಡ

ಬೇಕು. ಅದಕ್ಕೆ ಸನ್ನಾಹವನ್ನು ಮಾಡಿರಿ” ಎಂದನು. ಅದಕ್ಕೆ ಅಲ್ಲಿದ್ದ ವಸಿಷ್ಠಾದಿ ಮಹರ್ಷಿಗಳೂ, ಮಂತ್ರಿಗಳೂ, ಬಹಳ ಸಂತೋಷದಿಂದ ಅನುಮತಿಸಲು, ಆಮೇಲೆ ದಶರಥನು ಅತ್ಯುತ್ಸಾಹದಿಂದ ನಾಳೆಯೇ ಪ್ರಯಾಣಮಾಡಬೇಕೆಂದು ಮಂತ್ರಿಗಳಿಗೆ ಅಪ್ಪಣೆಮಾಡಿದನು. ಆದರಂತೆಯೇ ರಾಜಭಕ್ತಿಯುಳ್ಳ ಆ ಮಂತ್ರಿಗಳೆಲ್ಲರೂ, ದಶರಥನು ತಮ್ಮನ್ನು ಗೌರವಿಸಿದುದಕ್ಕಾಗಿ ಬಹಳ ಸಂತೋಷಪಟ್ಟು, ಬೆಳಗಾಗುವುದನ್ನೇ ನಿರೀಕ್ಷಿಸುತ್ತಾ, ಕುತೂಹಲದಿಂದ ಆ ರಾತ್ರಿಯನ್ನು ಕಳೆದರು.

ಇಲ್ಲಿಗೆ ಅರುವತ್ತೆಂಟನೆಯ ಸರ್ಗವು.

ದಶರಥನು ಮಿಥಿಲಾಪಟ್ಟಣಕ್ಕೆ ಹೋದುದು.

ಆ ರಾತ್ರಿಯು ಕಳೆದು ಬೆಳಗಾದಕೂಡಲೆ ದಶರಥನು ಋತ್ವಿಕ್ಕುಗಳೊಡನೆಯೂ, ಮಂತ್ರಿಪುರೋಹಿತರೊಡನೆಯೂ ಸೇರಿ ಸಂತೋಷದಿಂದ ಮಾತನಾಡುತ್ತಿದ್ದು, ಮಂತ್ರಿಶ್ರೇಷ್ಠನಾದ ಸುಮಂತ್ರನನ್ನು ಕರೆದು, “ಎಲೈ ಮಂತ್ರಿಯೆ! ನಮ್ಮ ಬೊಕ್ಕಸದ ಅಧಿಕಾರಿಗಳನ್ನು ಕರೆದು ಅನೇಕ ರತ್ನಾಭರಣಗಳನ್ನೂ, ಸಮೃದ್ಧವಾದ ಹಣವನ್ನೂ ತೆಗೆದುಕೊಂಡು ಮುಂದೆ ಹೋಗುವಂತೆ ಹೇಳು. ನಮ್ಮ ಚತುರಂಗಸೈನ್ಯಗಳೂ ಈಗಲೇ ಹೊರಡುವುದಕ್ಕೆ ಸಿದ್ಧವಾಗಲಿ! ವಸಿಷ್ಠ, ವಾಮದೇವ, ಜಾಬಾಲಿ, ಕಾಶ್ಯಪ, ಕಾತ್ಯಾಯನರೇ ಮೊದಲಾದ ಮಹರ್ಷಿಗಳೆಲ್ಲರೂ ಮುಂದೆ ಹೊರಡಲಿ! ನನಗಾಗಿ ರಥವೊಂದನ್ನು ಸಿದ್ಧಪಡಿಸು. ಸಾವಕಾಶಮಾಡುವುದಕ್ಕೆ ಕಾಲವಲ್ಲ! ಜನಕನ ಕಡೆಯಿಂದ ಬಂದಿರುವ ಈ ದೂತರು ಬಹಳವಾಗಿ ತ್ವರೆಪಡಿಸುತ್ತಿರುವರು” ಎಂದನು. ಅದರಂತೆಯೇ ಚತುರಂಗಸೈನ್ಯವೂ ಸಿದ್ಧವಾಗಿ ನಿಂತಿತು. ಋಷಿಗಳನ್ನು ಮುಂದಿಟ್ಟುಕೊಂಡು ದಶರಥನು ಹೋಗುತ್ತಿರುವಾಗ, ಆತನ ಹಿಂದೆ ಸಮಸ್ತ ಸೈನ್ಯಗಳೂ ಹೊರಟುವು. ಹೀಗೆ ನಾಲ್ಕು ದಿವಸಗಳವರೆಗೆ ಪ್ರಯಾಣ ಮಾಡಿ ಮಿಥಿಲೆಗೆ ಬಂದು ಸೇರಿದರು.

ದಶರಥನು ಬರುತ್ತಿರುವುದನ್ನು ಕೇಳಿ ಜನಕನು ಕಾಣಿಕೆಗಳನ್ನು ತೆಗೆಸಿಕೊಂಡು ಆತನನ್ನು ಇದಿರುಗೊಳ್ಳುವುದಕ್ಕಾಗಿ ಬಂದನು. ವಯೋವೃದ್ಧನಾದ ಈ ದಶರಥನನ್ನು ಕಂಡೊಡನೆಯೇ, ಆತನ ಮನಸ್ಸಿನಲ್ಲಿ

ಸಂತೋಷವು ಉಕ್ಕಿಬರುತ್ತಿತ್ತು. ಹೀಗೆ ಪರಮ ಸಂತೋಷದಿಂದ ಆ ದಶರಥನ ಬಳಿಗೆ ಬಂದು, ಆತನನ್ನು ಕುರಿತು, "ಎಲೈ ಮಹಾರಾಜನೆ! ನಿನಗೆ ಸುಖಾಗಮನವೆ? ನೀನು ಬಂದುದು ನನ್ನ ಭಾಗ್ಯೋದಯವೇ ಸರಿ! ನಿನ್ನ ಮಕ್ಕಳು ಧನುರ್ಭಂಗವನ್ನು ಮಾಡಿ ತೋರಿಸಿದ ಪರಾಕ್ರಮವನ್ನು ಮುಖ್ಯವಾಗಿ ನೀನು ನೋಡಿ ಸಂತೋಷಿಸತಕ್ಕುದು. ಮಹಾ ತೇಜಸ್ವಿಯಾಗಿಯೂ, ಪೂಜ್ಯನಾಗಿಯೂ ಇರುವ ಈ ವಸಿಷ್ಠ ಮಹರ್ಷಿಯು ಬ್ರಾಹ್ಮಣೋತ್ತಮರೊಡಗೂಡಿ ಇಲ್ಲಿಗೆ ಬಂದುದೂ ನನ್ನ ಭಾಗ್ಯೋದಯ ವಲ್ಲದೆ ಬೇರೆಯಲ್ಲ! ದೇವತೆಗಳೊಡಗೂಡಿ ದೇವೇಂದ್ರನೇ ನನ್ನ ಮನೆಗೆ ಬಂದಂತಿರುವುದು. ನನ್ನ ವಂಶವೇ ಪೂಜ್ಯವಾಯಿತು. ನನ್ನ ವಿಘ್ನಗಳೆಲ್ಲವೂ ನಾಶವನ್ನು ಹೊಂದಿದುವು. ವೀರ್ಯದಲ್ಲಿ ಶ್ರೇಷ್ಠರಾದ ಮತ್ತು ಮಹಾತ್ಮರಾದ ನಿಮ್ಮಂತಹ ರಘುವಂಶದ ರಾಜರ ಸಂಬಂಧವು ನನಗೆ ದೊರಕಿದುದರಿಂದ ನನ್ನ ವಂಶವೇ ಪಾವನವಾಯಿತೆಂದೆಣಿಸುವೆನು. ನಾನು ಆರಂಭಿಸಿದ ಯಜ್ಞವು ನಾಳೆಗೆ ಮುಗಿಯುವುದು. ಎಲೈ ರಾಜೇಂದ್ರನೆ! ಆ ಯಜ್ಞ ಕಾರ್ಯವು ಮುಗಿದಕೂಡಲೆ ನಾಳೆಯೇ ವಿವಾಹವನ್ನು ಬೆಳೆಸಿಬಿಡಬಹುದು. ಈ ವಿಷಯದಲ್ಲಿ ಈ ಮಹರ್ಷಿಗಳ ಅನುಮತಿಯನ್ನು ಪಡೆದು ಮುಂದಿನ ಕಾರ್ಯವನ್ನು ನಡೆಸು" ಎಂದನು. ಈ ಮಾತನ್ನು ಕೇಳಿ ದಶರಥನು ಅಲ್ಲಿದ್ದ ಋಷಿಗಳ ಮಧ್ಯದಲ್ಲಿ ಜನಕನನ್ನು ನೋಡಿ, "ಎಲೈ ರಾಜನೆ! ಕನ್ಯಾದಾನ ಮಾಡತಕ್ಕವರು ಯಾವಾಗ ಕನ್ನಿಕೆಯನ್ನು ಧಾರೆಯೆರೆದು ಕೊಡುವರೋ ಆಗಲೇ ಪ್ರತಿಗ್ರಹಿಸಬೇಕಲ್ಲವೆ? ಆದುದರಿಂದ ಈ ಕನ್ಯಾಪ್ರತಿಗ್ರಹವೆಂಬುದು ಕನ್ನಿಕೆಯನ್ನು ಕೊಡತಕ್ಕವರ ಅಧೀನವು. ನೀನು ಈ ಕನ್ನಿಕೆಯನ್ನು ವೀರ್ಯಶುಲ್ಕವಾಗಿಟ್ಟಿದ್ದ ವಿಷಯವನ್ನು ನಾನು ಮೊದಲೇ ಕೇಳಿದ್ದೆನು. ಆದುದರಿಂದ ಕನ್ಯಾದಾನವನ್ನು ಮಾಡತಕ್ಕ ನೀನು ಹೇಳಿದಂತೆ ನಡೆಸುವುದ ರಲ್ಲಿ ನಮ್ಮ ಅಡ್ಡಿಯೇನಿರುವುದು? ನಿನ್ನ ಇಷ್ಟದಂತೆ ನಡೆದುಕೊಳ್ಳುವುದಕ್ಕೆ ನಾನು ಸಿದ್ಧನಾಗಿರುವೆನು. ನಿನಗೆ ತಿಳಿಯದ ಧರ್ಮವಾವುದುಂಟು?" ಎಂದನು.

ಸತ್ಯಸಂಧನಾದ ದಶರಥನು ಧರ್ಮಯುಕ್ತವಾಗಿ ಹೇಳಿದ ಈ ಮಾತನ್ನು ಕೇಳಿ ಜನಕನು ಅವನ ಸೌಜನ್ಯಕ್ಕಾಗಿ ಬಹಳ ಆಶ್ಚರ್ಯಪಟ್ಟನು. ಆಮೇಲೆ ಋಷಿಗಳೆಲ್ಲರೂ ಪರಸ್ಪರಸಮಾಗಮದಿಂದ ಬಹಳ ಸಂತೋಷಗೊಂಡು ಸುಖ

ವಾಗಿ ಆ ರಾತ್ರಿಯನ್ನು ಕಳೆದರು. ದಶರಥನೂ ಅಲ್ಲಿದ್ದ ರಾಮಲಕ್ಷ್ಮಣರನ್ನು ನೋಡಿ ಬಹಳ ಸಂತೋಷಪಟ್ಟು, ಜನಕನಿಂದಲೂ ಬಹಳವಾಗಿ ಸತ್ಕರಿಸಲ್ಪಟ್ಟವನಾಗಿ, ಆ ರಾತ್ರಿಯನ್ನು ಸುಖವಾಗಿ ಕಳೆದನು. ಮಹಾತೇಜಸ್ವಿಯಾದ ಜನಕರಾಜನೂ ಕೂಡ ಉಳಿದ ಯಾಗಕಾರ್ಯಗಳೆಲ್ಲವನ್ನೂ ಧರ್ಮಾನುಸಾರವಾಗಿ ನಡೆಸಿ, ತನ್ನ ಮಗಳ ಮದುವೆಗಾಗಿ ಮೊದಲು ಮಾಡಬೇಕಾದ ಅಂಕುರಾರ್ಪಣಾದಿಕಾರ್ಯಗಳನ್ನೂ ಮುಗಿಸಿ ಸುಖವಾಗಿದ್ದನು.

ಇಲ್ಲಿಗೆ ಅರುವತ್ತೊಂಭತ್ತನೆಯ ಸರ್ಗವು.

ವಸಿಷ್ಠನು ಜನಕನಿಗೆ ಇಕ್ಷ್ವಾಕುವಂಶಕ್ರಮವನ್ನು ತಿಳಿಸಿದುದು.

ಬೆಳಗಾದಕೂಡಲೆ ಜನಕನು ಮಹರ್ಷಿಗಳೊಡನೆ ಕೂಡಿ ಯಜ್ಞಕಾರ್ಯಗಳನ್ನು ಮುಗಿಸಿಕೊಂಡು, ಪುರೋಹಿತನಾದ [1]ಶತಾನಂದನನ್ನು ಕುರಿತು “ಎಲೈ ಪೂಜ್ಯನೆ! ಸಾಂಕಾಶ್ಯವೆಂಬ ಪಟ್ಟಣವೊಂದುಂಟು. ಅದು ಬಹಳ ಮಂಗಳಕರವಾದುದು. ಆ ಪಟ್ಟಣವನ್ನು ‘ಇಕ್ಷುಮತಿ’ ಯೆಂಬ ನದಿಯು ಅಗುಳಿನಂತೆ ಸುತ್ತಿಕೊಂಡಿರುವುದು. ಆ ನದಿಯ ನೀರಿನ ನಡುವೆ ಶತ್ರುಗಳ ಪ್ರವೇಶಕ್ಕೆ ಅವಕಾಶವಿಲ್ಲದಂತೆ ಕೋಟೆಯಹಾಗೆ ಹಲಗೆಗಳು ನಾಟಲ್ಪಟ್ಟಿರುವುವು. ಅಲ್ಲಿ ಧಾರ್ಮಿಕನಾದ ನನ್ನ ತಮ್ಮನಾದ ಕುಶಧ್ವಜನೆಂಬವನು ಆಳುತ್ತಿರುವನು! ಆ ಪಟ್ಟಣವು ಕುಬೇರನ ಪುಷ್ಪಕದಂತೆ ಅತಿ ಮನೋಹರವಾಗಿರುವುದು. ಆ ಕುಶಧ್ವಜನನ್ನು ನೋಡಬೇಕೆಂದು ನನಗೆ ಬಹಳ ಕುತೂಹಲವಿರುವುದಲ್ಲದೆ, ಈ ಯಜ್ಞಕಾಲದಲ್ಲಿ ಸಹಾಯಕ್ಕಾಗಿ ಆತನೂ ಇದ್ದರೆ ಒಳ್ಳೆಯದೆಂದು ತೋರುವುದು. ಇಲ್ಲಿ ನಡೆಯತಕ್ಕ ಮಹೋತ್ಸವ ಸಂತೋಷಗಳನ್ನೆಲ್ಲಾ ಆತನೂ ನನ್ನೊಡನೆ ಅನುಭವಿಸಲಿ” ಎಂದನು. ಹೀಗೆ ಜನಕನು ಶತಾನಂದನೊಡನೆ ಹೇಳುತ್ತಿರುವಷ್ಟರೊಳಗಾಗಿ ಬಹಳ ವೇಗಶಾಲಿಗಳಾದ ಕೆಲವು ಭೃತ್ಯರು ಇದಿರಿಗೆ ಬಂದು ನಿಲ್ಲಲು, ಕುಶಧ್ವಜನನ್ನು ಕರೆತರುವಂತೆ

---

1. ಈ ವಿಷಯಗಳೆಲ್ಲವೂ ಮೊದಲು ಶತಾನಂದನಿಗೆ ತಿಳಿದೇ ಇದ್ದರೂ, ಪಕ್ಕದಲ್ಲಿರುವ ದಶರಥನಿಗೆ ಅವೆಲ್ಲವೂ ತಿಳಿಯಬೇಕೆಂದುದ್ದೇಶಿಸಿ ಶತಾನಂದನನ್ನು ಕುರಿತು ಹೇಳಿದುದಾಗಿ ತಿಳಿಯಬೇಕು.

ಅವರಿಗೆ ಆಪ್ಪಣೆ ಮಾಡಿದನು. ರಾಜನ ಅಪ್ಪಣೆಯಂತೆ ಇವರೆಲ್ಲರೂ ವೇಗ ವತ್ತಾದ ಕುದುರೆಗಳ ಮೇಲೆ ಪ್ರಯಾಣಮಾಡಿ, ಇಂದ್ರನ ಅಪ್ಪಣೆಯಿಂದ ವಿಷ್ಣುವನ್ನು ಕರೆತರುವುದಕ್ಕಾಗಿ ಹೋಗುವ ದೇವದೂತರಂತೆ ಕಾಣಿಸುತ್ತಾ ಸಾಂಕಾಶ್ಯನಗರಕ್ಕೆ ಬಂದು, ಕುಶಧ್ವಜನನ್ನು ನೋಡಿ ತಾವು ಬಂದ ಉದ್ದೇಶ ವನ್ನು ತಿಳಿಸಿದರು. ಅದನ್ನು ಕೇಳಿದೊಡನೆಯೇ ಕುಶಧ್ವಜನು ಅಲ್ಲಿಂದ ಹೊರಟು ಜನಕನ ಅರಮನೆಗೆ ಹೋಗಿ, ಮೊದಲು ಶತಾನಂದನಿಗೂ, ಆಮೇಲೆ ಅಣ್ಣನಾದ ಜನಕನಿಗೂ ನಮಸ್ಕರಿಸಿ, ಅವರ ಅಪ್ಪಣೆಯಂತೆ ರಾಜ ಯೋಗ್ಯವಾದ ಒಂದು ದಿವ್ಯಪೀಠದಲ್ಲಿ ಕುಳಿತುಕೊಂಡನು. ಹೀಗೆ ಮಹಾ ತೇಜಸ್ವಿಗಳಾಗಿ ಕುಳಿತಿರುವ ಅಣ್ಣತಮ್ಮಂದಿರಿಬ್ಬರೂ ಸ್ವಲ್ಪಕಾಲದವರೆಗೆ ಸಂತೋಷವಾಗಿ ಮಾತಾಡುತ್ತಿದ್ದು, ಆಮೇಲೆ ಮಂತ್ರಿಯನ್ನು ನೋಡಿ, “ಮಂತ್ರಿಯೆ! ಬೇಗ ಹೋಗಿ ಶ್ರೀಮಂತನಾದ ದಶರಥರಾಜನನ್ನು ಆತನ ಮಕ್ಕಳೊಡನೆಯೂ, ಮಂತ್ರಿಗಳೊಡನೆಯೂ ಕೂಡಿ ಇಲ್ಲಿಗೆ ಬರುವಂತೆ ಪ್ರಾರ್ಥಿಸಿ ಕರೆದುಕೊಂಡು ಬಾ” ಎಂದನು. ಒಡನೆಯೇ ಆ ಸುದಾಮನು ಹೊರಟು ದಶರಥನಿದ್ದ ಬಿಡಾರಕ್ಕೆ ಬಂದು, ಆತನಿಗೆ ಬಹಳ ವಿನಯದಿಂದ ತಲೆಯನ್ನು ಬಗ್ಗಿ ನಮಸ್ಕರಿಸಿ, “ಎಲೈ ಅಯೋಧ್ಯಾಧಿಪತಿಯೆ! ಜನಕನು ಉಪಾಧ್ಯಾಯರೊಡಗೂಡಿದ ನಿನ್ನನ್ನು ನೋಡಬೇಕೆಂದಪೇಕ್ಷಿಸುವನು, ದಯೆಮಾಡಬೇಕು” ಎಂದನು. ಈ ಮಾತನ್ನು ಕೇಳಿ, ದಶರಥನು ಋಷಿ ಗಳೊಡನೆಯೂ, ಬಂಧುಗಳೊಡನೆಯೂ ಕೂಡಿ ಜನಕನಿದ್ದ ಸ್ಥಳಕ್ಕೆ ಬಂದನು. ಅಲ್ಲಿ ಮಂತ್ರಿಪುರೋಹಿತಾದಿಗಳೆಲ್ಲರೂ ಕೂಡಿರುವಾಗ, ಈ ದಶರಥನು ಜನಕ ನನ್ನು ಕುರಿತು, “ಎಲೈ ಜನಕನೇ! ಭಗವಂತನಾದ ಈ ವಸಿಷ್ಠಮಹರ್ಷಿಯು ನಮ್ಮ ಕುಲಗುರುವೆಂಬುದೂ, ಯಾವ ಕಾರ್ಯಗಳನ್ನು ಮಾಡಬೇಕಾದರೂ ನಾವು ಆತನನ್ನೇ ಮುಂದಿಟ್ಟುಕೊಂಡು ನಡೆಸುತ್ತಿರುವುವೆಂಬುದೂ ನಿನಗೆ ತಿಳಿದೇ ಇರುವುದು. ಈ ಧರ್ಮಾತ್ಮನು ವಿಶ್ವಾಮಿತ್ರನ ಅನುಜ್ಞೆಯನ್ನು ಪಡೆದು, ಈ ಮಹರ್ಷಿಗಳೆಲ್ಲರ ಮುಂದೆ ನಮ್ಮ ವಂಶಾನುಕ್ರಮವನ್ನು ತಿಳಿ ಸುವನು ಕೇಳು” ಎಂದು ಸುಮ್ಮನಾದನು.

ಆಗ ವಸಿಷ್ಠನು ಶತಾನಂದನೊಡಗೂಡಿ ಕುಳಿತಿರುವ ಜನಕನನ್ನು ಕುರಿತು ವಂಶಕ್ರಮವನ್ನು ಹೇಳಲಾರಂಭಿಸಿದನು. “ಎಲೈ ಮಹಾರಾಜನೆ! ಕೇಳು! ಅವ್ಯಕ್ತಸ್ವರೂಪನಾದ ಮಹಾವಿಷ್ಣುವಿನ ನಾಭಿಕಮಲದಲ್ಲಿ

ಬ್ರಹ್ಮನು ಹುಟ್ಟಿದನು. ಆತನೊಬ್ಬನೇ [1]ನಿತ್ಯನೂ, ಅವ್ಯಯನೂ, ಶಾಶ್ವತನೂ ಎನಿಸಿರುವನು. ಆತನಿಂದ ಮರೀಚಿಯು ಹುಟ್ಟಿದನು. ಮರೀಚಿಯಿಂದ ಕಾಶ್ಯಪನು ಹುಟ್ಟಿದನು. ಹೀಗೆಯೇ ಕಾಶ್ಯಪನಿಂದ ಸೂರ್ಯನೂ, ಸೂರ್ಯನಿಂದ ಮನುವೂ ಹುಟ್ಟಿದರು. ಆ ಮನುವೇ ನಮ್ಮ ರಾಜವಂಶಕ್ಕೆ ಮೂಲಪುರುಷನಾದನು. ಆತನಿಂದ ಇಕ್ಷ್ವಾಕುವೆಂಬವನು ಹುಟ್ಟಿದನು. ಆ ಇಕ್ಷ್ವಾಕುವೇ ಅಯೋಧ್ಯೆಯನ್ನು ಮೊದಲು ಆಳಿದವನು. ಆತನಿಂದ ಕುಕ್ಷಿಯೆಂಬವನು ಹುಟ್ಟಿದನು. ಆ ಕುಕ್ಷಿಯಿಂದ ವಿಕುಕ್ಷಿಯೂ, ವಿಕುಕ್ಷಿಯಿಂದ ಬಾಣನೂ, ಬಾಣನಿಂದ ಮಹಾತೇಜಸ್ವಿಯಾಗಿ, ಪರಾಕ್ರಮಿಯಾದ ಅನರಣ್ಯನೆಂಬವನೂ, ಅವನಿಂದ ಪೃಥುವೂ ಹುಟ್ಟಿದರು. ಪೃಥುವಿಗೆ ತ್ರಿಶಂಕುವೂ, ಆತನಿಗೆ ದುಂಧುಮಾರನೂ ಹುಟ್ಟಿದರು. ಅವನಿಗೆ ಯುವನಾಶ್ವನೆಂದೂ ಪ್ರಸಿದ್ಧಿಯುಂಟು. ಈ ಯುವನಾಶ್ವನಿಂದ ಮಾಂಧಾತೃ ಚಕ್ರವರ್ತಿಯು ಹುಟ್ಟಿದನು. ಮಾಂಧಾತೃವಿನ ಮಗನು ಸುಸಂಧಿಯು. ಸುಸಂಧಿಯೆಂಬವನಿಗೆ ಧ್ರುವಸಂಧಿಯೆಂದೂ, ಪ್ರಸೇನಜಿತ್ತೆಂದೂ ಪುತ್ರರಿಬ್ಬರು ಹುಟ್ಟಿದರು. ಅವರಲ್ಲಿ ಜ್ಯೇಷ್ಠನಾದ ಧ್ರುವಸಂಧಿಗೆ ಮಹಾಯಶಸ್ವಿಯಾದ ಭರತನೆಂಬವನು ಹುಟ್ಟಿದನು. ಆಮೇಲೆ ಭರತನಿಗೆ ಅಸಿತನೆಂಬವನು ಜನಿಸಿದನು. ಈ ಅಸಿತನು ಮಹಾಬಲಶಾಲಿಯಾಗಿದ್ದರೂ, ಈತನಿಗೆ ಹೈಹಯರೆಂದೂ, ತಾಲಜಂಘರೆಂದೂ, ಶಶಿಬಿಂದುಗಳೆಂದೂ ಅನೇಕ ಶತ್ರುಗಳುಂಟಾಗಿ, ಈತನನ್ನು ಇದಿರಿಸಲು, ಅವರೊಡನೆ ಯುದ್ಧ ಮಾಡುತ್ತಿರುವಾಗ, ದುರದೃಷ್ಟವಶದಿಂದ ಪರಾಜಿತನಾಗಿ, ದೇಶಭ್ರಷ್ಟನಾಗಿ ಉಳಿದಿದ್ದ ತನ್ನ ಸ್ವಲ್ಪ ಸೈನ್ಯದೊಡನೆಯೂ, ಮಂತ್ರಿಗಳೊಡನೆಯೂ ಕೂಡಿ ಹಿಮವತ್ಪರ್ವತಕ್ಕೆ ಹೋಗಿ, ಅಲ್ಲಿ [2]ಭೃಗುಪ್ರಸ್ರವಣವೆಂಬ ತಪ್ಪಲಲ್ಲಿ ವಾಸಮಾಡುತ್ತಿದ್ದನು.

---

1. ಬಹುಕಾಲವಿರತಕ್ಕವನಾದುದರಿಂದ ಶಾಶ್ವತನೆಂದೂ, ಎರಡು ಪರಾರ್ಧಕಾಲಗಳವರೆಗೆ ನಾಶವಿಲ್ಲದವನಾದುದರಿಂದ ನಿತ್ಯನೆಂದೂ, ಪ್ರವಾಹರೂಪವಾಗಿ ಎಡೆಬಿಡದೆ ಪ್ರತಿಕಲ್ಪವೂ ಇರತಕ್ಕವನಾದುದರಿಂದ ಅವ್ಯಯನೆಂದೂ ಹೇಳಲ್ಪಟ್ಟಿರುವುದಾಗಿ ಗ್ರಹಿಸಬೇಕು.

2. ಭೃಗುಪ್ರಸ್ರವಣವೆಂದರೆ ಭೃಗುಮಹರ್ಷಿಯ ಸಾನ್ನಿಧ್ಯವುಳ್ಳುದು. ಇದೇ ಮೊದಲು ಭೃಗುತುಂದವೆಂದೂ ಹೇಳಲ್ಪಟ್ಟಿದೆ.

ಹೀಗಿರುವಲ್ಲಿ, ಈತನ ಹೆಂಡತಿಯರಿಬ್ಬರೂ ಗರ್ಭಿಣಿಯರಾದರು. ಅದರಲ್ಲಿ ಒಬ್ಬಳು ತನ್ನ ಸವತಿಯಲ್ಲಿ ಹೊಟ್ಟೇಕಿಚ್ಚಿನಿಂದ ಆಕೆಯ ಗರ್ಭವನ್ನು ಕೆಡಿಸಬೇಕೆಂದು ವಿಷವನ್ನು ಕೊಟ್ಟಳು. ಇಷ್ಟರೊಳಗೆ ಭೃಗುವಂಶದಲ್ಲಿ ಹುಟ್ಟಿದ ಚ್ಯವನನೆಂಬ ಋಷಿಯೊಬ್ಬನು, ಈ ಅಸಿತನ ರಾಜ್ಯದಲ್ಲಿ ತಾನು ಮೊದಲಿದ್ದವನಾದುದರಿಂದ, ಆ ಅಭಿಮಾನದಮೇಲೆ ಈತನನ್ನು ಅನುಗ್ರಹಿಸಬೇಕೆಂದು ಬಂದನು. ಋಷಿಯನ್ನು ನೋಡಿ, ಆ ರಾಜನ ಹೆಂಡತಿಯರಲ್ಲಿ ವಿಷವನ್ನು ಭಕ್ಷಿಸಿದ್ದವಳು ಮೊದಲು ಬಂದು, ಪುತ್ರನನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸಿ ಆತನಿಗೆ ನಮಸ್ಕರಿಸಿದಳು. ವಿಷವನ್ನು ಕೊಟ್ಟ ಕಾಳಿಂದಿಯೆಂಬ ಕ್ರೂರಸ್ವಭಾವವುಳ್ಳ ಮತ್ತೊಬ್ಬಳೂ ಬಂದು, ಈತನಿಗೆ ಮೌನದಿಂದ ನಮಸ್ಕರಿಸಿದಳು. ಆಗ ಆ ಋಷಿಯು ಮೊದಲು ಪುತ್ರಾರ್ಥಿನಿಯಾಗಿ ಬಂದು ನಮಸ್ಕರಿಸಿದವಳನ್ನು ಕುರಿತು, "ಎಲೈ ಭಾಗ್ಯಶಾಲಿನಿಯೇ! ನಿನ್ನ ಹೊಟ್ಟೆಯಲ್ಲಿ ಮಹಾಬಲಶಾಲಿಯಾದ ಮಗನು ಹುಟ್ಟುವನು. ಆತನೊಡನೆ ವಿಷವೂ ಹುಟ್ಟುವುದು. ನೀನು ಇದಕ್ಕಾಗಿ ಸ್ವಲ್ಪವೂ ಚಿಂತಿಸಬೇಡ! ಆತನು ಬಹಳ ಕೀರ್ತಿವಂತನಾಗುವನು. ಬಹಳ ಶ್ರೀಮಂತನಾಗುವನು. ಇನ್ನು ಸ್ವಲ್ಪಕಾಲದೊಳಗಾಗಿಯೇ ನೀನು ಆ ಪುತ್ರನನ್ನು ಕಾಣುವೆ" ಎಂದು ಅನುಗ್ರಹಿಸಿದನು. ಪತಿವ್ರತೆಯಾದ ಆಕೆಯು ಬಹು ಸಂತೋಷದಿಂದ ಆತನಿಗೆ ನಮಸ್ಕರಿಸಿ ಹೊರಟುಹೋದಳು. ಸ್ವಲ್ಪಕಾಲದೊಳಗಾಗಿಯೇ ಆಕೆಗೆ ಪತಿವಿಯೋಗವುಂಟಾಯಿತು. ಕೊನೆಗೆ ಆ ದುಃಖವನ್ನು ಮರೆಸುವುದಕ್ಕೆ ತಕ್ಕ ಪುತ್ರನೂ ಒಡನೆಯೇ ಹುಟ್ಟಿದನು. ಸವತಿಯು ದ್ವೇಷಬುದ್ಧಿಯಿಂದ ಆಕೆಗೆ ಕೊಟ್ಟಿದ್ದ ವಿಷವೂ ಆತನ ಸಂಗಡಲೇ ಕೆಳಗೆ ಬಿದ್ದಿತು. ಹೀಗೆ ವಿಷದೊಡನೆ ಹುಟ್ಟಿದುದರಿಂದಲೇ ಅವನು 'ಸಗರ'ನೆಂಬ ಹೆಸರಿನಿಂದ ಪ್ರಸಿದ್ಧಿಹೊಂದಿದನು. ಆ ಸಗರನಿಗೆ ಅಸಮಂಜನು ಹುಟ್ಟಿದನು. ಅಸಮಂಜನಿಂದ ಅಂಶುಮಂತನೂ, ಅಂಶುಮಂತನಿಂದ ದಿಲೀಪನೂ, ದಿಲೀಪನಿಂದ ಪ್ರಸಿದ್ಧನಾದ ಭಗೀರಥನೂ ಹುಟ್ಟಿದರು. ಆತನ ಮಗನೇ ಕಾಕುತ್ಸ್ಥನು. ಆತನಿಂದ ರಘುವು ಹುಟ್ಟಿದನು. ಆ ರಘುವಿಗೆ ಮಹಾತೇಜಸ್ವಿಯಾದ ಪ್ರವೃದ್ಧನೆಂಬವನು ಹುಟ್ಟಿದನು. ಇವನು ಪೂರ್ವದಲ್ಲಿ ವಸಿಷ್ಠರ ಶಾಪದಿಂದ ಮನುಷ್ಯಭಕ್ಷಕನಾದ ರಾಕ್ಷಸನಾದನು. ವಸಿಷ್ಠನಿಗೆ ತಾನು ಶಾಪವನ್ನು ಕೊಡುವುದಕ್ಕೆ ಯತ್ನಿಸಿ ಕೈಯಲ್ಲಿ ಶಾಪಜಲವನ್ನು ಹಿಡಿದಿರುವಾಗ, ಅವನ

ಹೆಂಡತಿಯು ಬಂದು ತಡೆಯಲು, ಆ ನೀರನ್ನು ಕಾಲಿನ ಮೇಲೆಯೇ ಬಿಟ್ಟು ಕೊಂಡು ಕಲ್ಮಾಷಪಾದನೆಂಬ ಪ್ರಸಿದ್ಧಿಯನ್ನೂ ಹೊಂದಿದನು. ಈತನಿಂದ ಶಂಖಣನೂ, ಶಂಖಣನಿಂದ ಸುದರ್ಶನನೂ, ಸುದರ್ಶನನಿಂದ ಅಗ್ನಿವರ್ಣನೂ, ಆತನಿಂದ ಶೀಘ್ರನೂ, ಅವನಿಂದ ಮರುವೂ, ಮರುವಿನಿಂದ ಪ್ರಶುಶ್ರುಕನೂ, ಆತನಿಂದ ಅಂಬರೀಷನೂ ಕ್ರಮವಾಗಿ ಹುಟ್ಟಿದರು. ಅಂಬರೀಷನಿಗೆ ಪ್ರಸಿದ್ಧನಾದ ನಹುಷನೆಂಬವನು ಪುತ್ರನಾದನು. [1]ನಹುಷನಿಂದ ಯಯಾತಿಯು ಹುಟ್ಟಿದನು. ಯಯಾತಿಯಿಂದ ನಾಭಾಗನು ಹುಟ್ಟಿದನು. ನಾಭಾಗನಿಂದ ಅಜಮಹಾರಾಜನು ಹುಟ್ಟಿದನು. ಆ ಅಜಮಹಾರಾಜನ ಮಗನೇ ಈ ದಶರಥಚಕ್ರವರ್ತಿಯು. ರಾಮಲಕ್ಷ್ಮಣರಿಬ್ಬರೂ ದಶರಥನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು. ಎಲೈ ಜನಕಮಹಾರಾಜನೆ! ಬಹು ಕಾಲದಿಂದ ಮಹಾಪರಿಶುದ್ಧವಾಗಿ, ಅನಾದಿಯಾದ ಈ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ರಾಜರೆಲ್ಲರೂ ಪರಮಧಾರ್ಮಿಕರಾಗಿಯೂ, ಪರಾಕ್ರಮಶಾಲಿಗಳಾಗಿಯೂ, ಸತ್ಯವಾದಿಗಳಾಗಿಯೂ, ಸದಾಚಾರಶೀಲರಾಗಿಯೂ ಇರುವರು. ಇಂತಹ ಮಹಾವಂಶದಲ್ಲಿ ಹುಟ್ಟಿದ ರಾಮಲಕ್ಷ್ಮಣರೆಂಬ ಈ ರಾಜಕುಮಾರರಿಬ್ಬರಿಗೂ, ನಿನ್ನ ಕನ್ನಿಕೆಯರಿಬ್ಬರನ್ನೂ ಕೊಡಬೇಕು. ಈ ನಿನ್ನ ಕನ್ನೆಯರಿಗೆ ಇವರನ್ನು ಬಿಟ್ಟರೆ ಬೇರೆ ಅನುರೂಪರಾದ ವರರಿಲ್ಲ. ಈ ಸಂಬಂಧವು ಲೋಕಾಭಿನಂದ್ಯವಾಗಿರುವುದರಿಂದ ನೀನು ಕನ್ಯಾದಾನವನ್ನು ಮಾಡಿ ವಿವಾಹ ಮಹೋತ್ಸವವನ್ನು ಬೆಳೆಸು!" ಎಂದನು.

ಇಲ್ಲಿಗೆ ಎಪ್ಪತ್ತನೆಯ ಸರ್ಗವು.

---

1. ಈ ನಹುಷ ಯಯಾತಿಗಳಿಬ್ಬರೂ ಚಂದ್ರವಂಶದಲ್ಲಿ ಪ್ರಸಿದ್ಧರಾಗಿದ್ದ ನಹುಷ ಯಯಾತಿಗಳಿಗಿಂತ ಬೇರೆಯಾದವರು. ಇದರಲ್ಲಿ ಕಾಣುವ ಕ್ರಮವ್ಯತ್ಯಾಸವು ಕಲ್ಪಭೇದದಿಂದುಂಟಾದುದೆಂದು ಗ್ರಹಿಸಬೇಕು.

ಜನಕನು ತನ್ನ ವಂಶಕ್ರಮವನ್ನು ಹೇಳಿದುದು

ವಸಿಷ್ಠನು ಹೇಳಿದುದನ್ನು ಕೇಳಿ ಜನಕನು ಕೈಮುಗಿದು, ಆ ಮಹರ್ಷಿಯನ್ನು ಕುರಿತು "ಎಲೈ ಮಹಾತ್ಮನೆ! ನಿನಗೆ ಶುಭವಾಗಲಿ! ಪ್ರಸಿದ್ಧವಾದ ನಮ್ಮ ವಂಶಕ್ರಮವನ್ನೂ ಹೇಳುವೆನು ಕೇಳು. ಸತ್ಕುಲಪ್ರಸೂತರಾದವರು ಕನ್ಯಾದಾನವನ್ನು ಮಾಡುವಾಗ, ತಮ್ಮ ವಂಶಾನುಕ್ರಮವನ್ನು ಹೇಳಬೇಕೆಂಬುದು ಧರ್ಮವು. ಸಚ್ಚರಿತ್ರಗಳಿಂದ ಲೋಕಪ್ರಸಿದ್ಧನಾದ ನಿಮಿಯೆಂಬ ರಾಜನಿದ್ದನು. ಆತನು ಪರಮಧಾರ್ಮಿಕನು. ಮಹಾಬಲಾಢ್ಯನು. ಆತನಿಗೆ ಮಿಥಿಯೆಂಬ ಪುತ್ರನೊಬ್ಬನು ಹುಟ್ಟಿದನು. ಈ ನಮ್ಮ ಮಿಥಿಲಾನಗರವು ಆತನಿಂದಲೇ ನಿರ್ಮಿಸಲ್ಪಟ್ಟಿತು. ಆತನೇ ನಮ್ಮ ವಂಶಕ್ಕೆ ಮೊದಲನೆಯ ಜನಕನು. ಆತನಿಂದ ಉದಾವಸುವೂ, ಅವನಿಂದ ಧರ್ಮಾತ್ಮನಾದ ನಂದಿವರ್ಧನನೂ ಹುಟ್ಟಿದರು. ಆ ನಂದಿವರ್ಧನನಿಗೆ ಸುಕೇತುವೂ, ಸುಕೇತುವಿಗೆ ದೇವರಾತನೂ, ದೇವರಾತನಿಗೆ ಬೃಹದ್ರಥನೆಂಬವನೂ ಹುಟ್ಟಿದರು. ಬೃಹದ್ರಥನಿಂದ ಶೂರನಾದ ಮಹಾವೀರನೆಂಬವನು ಹುಟ್ಟಿದನು. ಆತನ ಮಗನೇ ಸತ್ಯಪರಾಕ್ರಮವುಳ್ಳ ಸುಧೃತಿಯೆಂಬವನು. ಸುಧೃತಿಯಿಂದ ಧಾರ್ಮಿಕನಾದ ಧೃಷ್ಟಕೇತುವು ಹುಟ್ಟಿದನು. ಆ ಧೃಷ್ಟಕೇತುವಿನಿಂದ ಹರ್ಯಶ್ವನೂ, ಇವನಿಂದ ಮರುವೂ, ಮರುವಿನಿಂದ ಪ್ರತೀಂಧಕನೂ ಹುಟ್ಟಿದರು. ಪ್ರತೀಂಧಕನಿಂದ ಕೀರ್ತಿರಥನೆಂಬವನು ಹುಟ್ಟಿದನು. ಈತನಿಂದ ದೇವಮೀಢನೂ, ದೇವಮೀಢನಿಂದ ವಿಬುಧನೂ, ವಿಬುಧನಿಂದ ಮಹೀಧ್ರಕನೂ, ಮಹೀಧ್ರಕನಿಂದ ಮಹಾಬಲಾಢ್ಯನಾದ ಕೀರ್ತಿರಾತನೂ ಹುಟ್ಟಿದರು. ಅವನಿಂದ ಮಹಾರೋಮನೆಂಬವನೂ, ಮಹಾರೋಮನಿಂದ ಸ್ವರ್ಣರೋಮನೂ, ಆತನಿಂದ ಹ್ರಸ್ವರೋಮನೂ ಜನಿಸಿದರು. ಆತನು ಬಹಳ ಧಾರ್ಮಿಕನು. ಮಹಾತ್ಮನು. ಆತನ ಜ್ಯೇಷ್ಠಪುತ್ರನೇ ನಾನು. ಈ ಕುಶಧ್ವಜನು ನನ್ನ ಒಡಹುಟ್ಟಿದ ತಮ್ಮನು. ನನ್ನ ತಂದೆಯು ಹಿರಿಯಮಗನಾದ ನನ್ನ ವಶಕ್ಕೇ ರಾಜ್ಯವನ್ನೊಪ್ಪಿಸಿ, ಈ ಕುಶಧ್ವಜನನ್ನು ನನ್ನ ಪೋಷಣೆಯಲ್ಲಿರಿಸಿ ತಪೋವನಕ್ಕೆ ಹೊರಟುಹೋದನು.

ನನ್ನ ತಂದೆಯು ಸ್ವರ್ಗಸ್ಥನಾದಮೇಲೆ ನಾನು ನನ್ನ ತಮ್ಮನಾದ ಈ ಕುಶಧ್ವಜನನ್ನು ಬಹಳ ಪ್ರೀತಿಯಿಂದ ಪೋಷಿಸುತ್ತ, ರಾಜ್ಯಭಾರವನ್ನು ನಡೆಸುತ್ತಿದ್ದೆನು. ಹೀಗಿರಲು ಸ್ವಲ್ಪಕಾಲದಮೇಲೆ ಸಾಂಕಾಶ್ಯಪುರವನ್ನಾಳುತ್ತಿದ್ದ

ಮಹಾಬಲಾಢ್ಯನಾದ ಸುಧನ್ವನೆಂಬವನು ನಮ್ಮಮೇಲೆ ದಂಡೆತ್ತಿಬಂದು, ನನ್ನಲ್ಲಿದ್ದ ಶಿವಧನುಸ್ಸನ್ನೂ, ಲೋಕಸುಂದರಿಯಾದ ಸೀತೆಯನ್ನೂ ತನಗೆ ಕೊಡಬೇಕೆಂದು ಕೇಳಿದನು. ನಾನು ಯಾವುದನ್ನೂ ಕೊಡಲಿಲ್ಲ. ಈ ಕೋಪ ದಿಂದ ಆತನು ನನ್ನೊಡನೆ ಯುದ್ಧಕ್ಕೆ ನಿಂತನು. ಆ ಯುದ್ಧದಲ್ಲಿ ನಾನು ಅವನನ್ನು ಕೊಂದು, ಆತನ ಸಾಂಕಾಶ್ಯಪುರದಲ್ಲಿ ನನ್ನ ತಮ್ಮನಾದ ಈ ಕುಶ ಧ್ವಜನಿಗೆ ಪಟ್ಟವನ್ನು ಕಟ್ಟಿರುವೆನು. ಎಲೈ ಮುನಿಯೆ! ಅದು ಹಾಗಿರಲಿ! ಈಗ ನನ್ನ ಕನ್ಯೆಯರಿಬ್ಬರನ್ನೂ ನಿನ್ನ ಕೋರಿಕೆಯಂತೆ ಈ ರಾಮಲಕ್ಷ್ಮಣರಿಗೇ ಕೊಟ್ಟು ವಿವಾಹ ಮಾಡುವೆನು. ಸೀತೆಯನ್ನು ರಾಮನಿಗೂ, ಊರ್ಮಿಳೆ ಯನ್ನು ಲಕ್ಷ್ಮಣನಿಗೂ ಕೊಡುವೆನು. ವೀರ್ಯಶುಲ್ಕೆಯಾದ ಸೀತೆಯನ್ನೂ, ಊರ್ಮಿಳೆಯನ್ನೂ ತ್ರಿಕರಣಶುದ್ಧಿಯಿಂದ ಈ ರಾಜಕುಮಾರರಿಗೇ ಕೊಡು ವೆನು. ಇದು ಸತ್ಯವು! ಇದರಲ್ಲಿ ಸಂದೇಹವಿಲ್ಲ! ಇದೋ ಮೂರಾವರ್ತಿ ಶಪಥಮಾಡಿ ಹೇಳಿರುವೆನು" ಎಂದು ಹೇಳಿ ದಶರಥನ ಕಡೆಗೆ ತಿರುಗಿ, "ಎಲೈ ದಶರಥರಾಜನೆ! ನಿನ್ನ ಮಕ್ಕಳಿಗೆ ಈ ಕನ್ನಿಕೆಯರನ್ನು ಮನಃಪೂರ್ತಿಯಾಗಿ ಕೊಡುವೆನು. ಈ ರಾಮಲಕ್ಷ್ಮಣರ ಕೈಯಿಂದ ವಿವಾಹಕ್ಕೆ ಮೊದಲು ನಡೆಸ ಬೇಕಾದ [1]ಗೋದಾನವೆಂಬ ಸಮಾವರ್ತನವನ್ನು ನಡೆಸು! ಮೊದಲು ಪಿತೃಗಳಿಗೆ ಮಾಡಬೇಕಾದ ನಾಂದೀಶ್ರಾದ್ಧವೂ ನಡೆಯಲಿ! ರಾಜನೆ! ಈಗ ಮಖಾನಕ್ಷತ್ರವು! ಇಲ್ಲಿಂದ ಮೂರನೆಯ ದಿವಸಕ್ಕೆ ಪ್ರಶಸ್ತವಾದ ಉತ್ತರ ಫಲ್ಗುನೀ ನಕ್ಷತ್ರವು ಬರುವುದಲ್ಲವೆ? ಆ ಲಗ್ನದಲ್ಲಿ ವಿವಾಹವನ್ನು ನಡೆಸಿ ಬಿಡು. ಈ ಕುಮಾರರಿಂದ ಅಭ್ಯುದಯ ಕಾರಣಗಳಾದ ಗೋ ಭೂ ತಿಲ ಹಿರಣ್ಯಾದಿ ದಾನಗಳನ್ನೂ ಮಾಡಿಸು" ಎಂದನು.

ಇಲ್ಲಿಗೆ ಎಪ್ಪತ್ತೊಂದನೆಯ ಸರ್ಗವು

---

1. (ಗಾವಃ) ಎಂದರೆ ಕೇಶಗಳು. ದಾನವೆಂದರೆ ಕತ್ತರಿಸುವುದು. ಬಾಹು ಪಾದ ಮೂಲ ರೋಮ ಖಂಡನವೆಂದರ್ಥವು. ಇದೇ ಮದುವೆಗೆ ಮೊದಲು ಮಾಡಬೇಕಾದ ಸಮಾವರ್ತನಕರ್ಮವು.

ದಶರಥನು ಪುತ್ರರ ವಿವಾಹಾರ್ಥವಾದ ಗೋದಾನಾದಿ ಗಳನ್ನು ನಡೆಸುವಿಕೆ

ಹೀಗೆ ಹೇಳಿದ ಜನಕನನ್ನು ಕುರಿತು, ಮಹಾತಪಸ್ವಿಯಾದ ವಿಶ್ವಾಮಿತ್ರನು ವಸಿಷ್ಠನೊಡಗೂಡಿ "ಎಲೈ ರಾಜನೆ! ಇಕ್ಷ್ವಾಕು ವಿದೇಹ ವಂಶಗಳೆರಡೂ ಸರ್ವೋತ್ತಮವಾದುವು. ಅವುಗಳ ಮಹಿಮೆಯನ್ನು ಇಷ್ಟೆಂದು ಹೇಳಿ ತೀರದು. ಇವೆರಡಕ್ಕೂ ಸಮಾನವಾದ ರಾಜಸಂತತಿಯು ಬೇರೆ ಯಾವುದೂ ಇಲ್ಲ. ಈ ಎರಡು ವಂಶಗಳಿಗೂ ಉಂಟಾಗತಕ್ಕ ಸಂಬಂಧವು ಬಹಳ ಅನುರೂಪವಾಗಿರುವುದು. ಈ ವಧೂವರರೂ ಕೂಡ ರೂಪದಲ್ಲಿಯೂ, ಸಂಪತ್ತಿನಲ್ಲಿಯೂ ಒಬ್ಬರಿಗೊಬ್ಬರು ಬಹಳ ಅನುರೂಪರಾಗಿರುವರು. ಎಲೈ ರಾಜೇಂದ್ರನೆ! ಈಗ ಹೇಳಬೇಕಾದ ಮತ್ತೊಂದು ಮುಖ್ಯವಿಷಯವುಂಟು. ಈ ಕುಶಧ್ವಜಮಹಾರಾಜನು ನಿಮ್ಮ ತಮ್ಮನಲ್ಲವೆ? ಧರ್ಮಾತ್ಮನಾದ ಈತನಿಗೂ ಎಣೆಯಿಲ್ಲದ ರೂಪವುಳ್ಳ ಕನ್ನಿಕೆಯರಿಬ್ಬರಿರುವರು. ನಿನ್ನಂತೆಯೇ ಈತನೊಡನೆಯೂ ಈ ದಶರಥನು ಸಂಬಂಧವನ್ನು ಬೆಳೆಸಿದರೆ ನಮ್ಮೆಲ್ಲರಿಗೂ ಬಹಳ ಸಂತೋಷವು. ಆದುದರಿಂದ ಭರತಶತ್ರುಘ್ನರಿಬ್ಬರಿಗೂ ಆ ಇಬ್ಬರು ಕನ್ನಿಕೆಯರನ್ನು ಕೊಟ್ಟು ವಿವಾಹಮಾಡಬೇಕೆಂದು ನಾವು ಕೋರುವೆವು. ದಶರಥನ ಈ ನಾಲ್ಕು ಮಕ್ಕಳೂ ಅದ್ಭುತವಾದ ರೂಪಯೌವನಗಳಿಂದ ಶೋಭಿಸುತ್ತಾ ದಿಕ್ಪಾಲಕರಂತೆ ತೋರುತ್ತಿರುವರು. ಇವರು ದೇವತೆಗಳಿಗೆ ಸಮಾನವಾದ ಪರಾಕ್ರಮವುಳ್ಳವರು. ಹೀಗೆ ನೀವಿಬ್ಬರೂ ಸಂಬಂಧವನ್ನು ಬೆಳೆಸುವುದರಿಂದ ನಿರ್ದೋಷವಾದ ಈ ನಿಮ್ಮ ಎರಡು ವಂಶಗಳೂ ಒಂದುಗೂಡಿ, ವಿಶೇಷವಾದ ಪ್ರಕಾಶವನ್ನು ಹೊಂದುವುವು" ಎಂದನು.

ಹೀಗೆ ವಸಿಷ್ಠರ ಅನುಮತಿಯಿಂದ ವಿಶ್ವಾಮಿತ್ರನು ಹೇಳಿದ ಈ ಮಾತನ್ನು ಕೇಳಿ ಜನಕನು ವಿನಯದಿಂದ ಕೈಮುಗಿದು, ವಸಿಷ್ಠವಿಶ್ವಾಮಿತ್ರರಿಬ್ಬರನ್ನೂ ನೋಡಿ "ಎಲೈ ಋಷಿಶ್ರೇಷ್ಠರೆ! ಹೀಗೆ ಇಕ್ಷ್ವಾಕುವಂಶದೊಡನೆ ಸಂಬಂಧವುಂಟಾಗುವುದರಿಂದ ನಮ್ಮ ವಂಶವೇ ಪಾವನವಾಗುವುದಲ್ಲವೆ? ಅದರಲ್ಲಿಯೂ ಈ ವಿಷಯದಲ್ಲಿ ಋಷಿಶ್ರೇಷ್ಠರಾದ ನೀವಿಬ್ಬರೂ ನಿಂತು ಈ ಸಂಬಂಧವನ್ನು ನಡೆಸುವಂತೆ ನಿಯಮಿಸುವಾಗ ಹೇಳತಕ್ಕುದೇನು? ನಿಮ್ಮ ಅಪ್ಪಣೆಯಂತೆಯೇ ನಡೆಸುವೆನು. ನಿಮಗೆ ಮಂಗಳವಾಗಲಿ! ಈ ಕುಶಧ್ವಜನ ಕನ್ಯೆಯರನ್ನು ಭರತಶತ್ರುಘ್ನರು ಕೈಹಿಡಿಯಲಿ! ಮಹಾಬಲಶಾಲಿಗಳಾದ ಈ ನಾಲ್ವರು

ರಾಜಕುಮಾರರೂ ಒಂದೇ ದಿವಸದಲ್ಲಿ ನಮ್ಮ ನಾಲ್ವರು ಕನ್ಯೆಯರನ್ನು ಕೈ ಹಿಡಿದು ವರಿಸಲಿ! ಭಗದೇವತಾತ್ಮಕವಾದ ಉತ್ತರಫಲ್ಗುನೀ ನಕ್ಷತ್ರವು ವಿವಾಹಕ್ಕೆ ಬಹಳ ಪ್ರಶಸ್ತವಾದುದೆಂದು ಶಾಸ್ತ್ರಜ್ಞರು ನಿರ್ಣಯಿಸಿರುವರು. ಆ ದಿವಸದಲ್ಲಿಯೇ ಎಲ್ಲರಿಗೂ ವಿವಾಹವು ನಡೆಯಲಿ!" ಎಂದು ಹೇಳಿ, ೮ ಮಹರ್ಷಿಗಳಿಬ್ಬರಿಗೂ ಕೈಮುಗಿಯುತ್ತಾ, ಪುನಃ ಅವರನ್ನು ಕುರಿತು, "ಮಹಾತ್ಮರೆ! ಕನ್ಯಾದಾನ ವಿಷಯವಾಗಿ ನೀವಿಬ್ಬರೂ ನನಗೆ ಹೇಳಿದ ಬುದ್ಧಿವಾದಗಳಿಗಾಗಿ ನಾನು ಸಂಪೂರ್ಣ ಕೃತಜ್ಞನಾಗಿರುವೆನು! ನನ್ನ ಜೀವಾವಧಿಯೂ ತಮಗೆ ನಾನು ದಾಸಭೂತನು! ನೀವಿಬ್ಬರೂ ನಮ್ಮಿಬ್ಬರ ಮತ್ತು ಈ ದಶರಥನ ರಾಜಸಿಂಹಾಸನದಲ್ಲಿಯೇ ಕುಳಿತು ಕಾರ್ಯಗಳನ್ನು ನಡೆಸಬೇಕು. ನಾವು ಮೂವರೂ ನಿಮಗೆ ಅಧೀನರಾಗಿದ್ದು ನಿಮ್ಮ ಅಪ್ಪಣೆ ಯಂತೆ ನಡೆದುಕೊಳ್ಳುವೆವು. ದಶರಥನ ಸಿಂಹಾಸನವನ್ನು ಒಪ್ಪಿಸುವುದಕ್ಕೆ ನನಗೆ ಸ್ವಾತಂತ್ರ್ಯವೆಲ್ಲಿಯದೆಂದು ತಾವು ಶಂಕಿಸಕೂಡದು. ಈ ನನ್ನ ಮಿಥಿಲಾಪಟ್ಟಣದಲ್ಲಿ ದಶರಥನಿಗೆ ಎಷ್ಟು ಸ್ವಾತಂತ್ರ್ಯವುಂಟೋ, ಅಷ್ಟೇ ಸ್ವಾತಂತ್ರ್ಯವನ್ನು ನಾನೂ ಆತನ ರಾಜ್ಯದಲ್ಲಿ ವಹಿಸಬಹುದು. ನಮ್ಮಿಬ್ಬರಲ್ಲಿ ಭೇದಬುದ್ಧಿಯೆಂಬುದು ಸ್ವಲ್ಪಮಾತ್ರವೂ ಇಲ್ಲ. ಆದುದರಿಂದ ನಾನೇ ಸ್ವಾತಂತ್ರ್ಯವನ್ನು ವಹಿಸಿ, ಆ ದಶರಥನ ರಾಜ್ಯವನ್ನೂ ನಿಮಗೊಪ್ಪಿಸಿರುವೆನು. ಈ ನಮ್ಮ ಮೂವರ ರಾಜ್ಯದಲ್ಲಿಯೂ ನೀವಿಬ್ಬರೂ ನಿರಂಕುಶವಾದ ಪ್ರಭುತ್ವವನ್ನು ನಡೆಸಬಹುದು. ನೀವು ಹೇಳಿದ ಹಿತವಾದವನ್ನು ಶಿರಸಾವಹಿಸಿ ನಡೆಸುವುದಕ್ಕೆ ನಾವು ಮೂವರೂ ಸಿದ್ಧರಾಗಿರುವೆವು" ಎಂದನು.

ಹೀಗೆ ಜನಕನು ಹೇಳಿದುದನ್ನು ಕೇಳಿ, ದಶರಥನು ಬಹಳ ಆಶ್ಚರ್ಯ ಗೊಂಡು ಆತನನ್ನು ಕುರಿತು "ಎಲೈ ಜನಕರಾಜನೆ! ಮಿಥಿಲಾಧಿಪತಿಗಳಾದ ನೀವಿಬ್ಬರೂ ಬಹಳ ಪೂಜ್ಯರಾದ ಮಹರ್ಷಿಗಳಲ್ಲಿಯೂ, ಇತರ ರಾಜ ಸಮೂಹಗಳಲ್ಲಿಯೂ ತೋರಿಸುತ್ತಿರುವ ವಿನಯಾದಿ ಗುಣಗಳನ್ನೂ, ನೀವು ಅವರಿಗೆ ಮಾಡುತ್ತಿರುವ ಸತ್ಕಾರಗಳನ್ನೂ ನೋಡಿದರೆ, ನಿಮ್ಮ ಗುಣಾತಿಶಯ ಗಳಿಗೆ ಎಣೆಯೇ ಇಲ್ಲವೆಂದು ತೋರುವುದು. ಎಲೈ ರಾಜನೆ! ಅದೆಲ್ಲವೂ ಹಾಗಿರಲಿ! ನಾನು ಮನೆಗೆ ಹೋಗಿಬರುವೆನು! ನೀನೂ ಹೊರಡು! ನಿನಗೆ ಮಂಗಳವಾಗಲಿ! ನಾನು ಈಗಲೇ ಹೋಗಿ ನಾಂದೀಶ್ರಾದ್ಧಾದಿ ಕರ್ಮಗಳನ್ನು ನಡೆಸಿಬರುವೆನು" ಎಂದು ಹೇಳಿ, ಆ ಜನಕನ ಅನುಮತಿಯನ್ನು ಪಡೆದು,

ವಸಿಷ್ಠ ವಿಶ್ವಾಮಿತ್ರರನ್ನು ಮುಂದಿಟ್ಟುಕೊಂಡು ತನ್ನ ಬಿಡಾರಕ್ಕೆ ಹೋಗಿ, ಶ್ರಾದ್ಧಾದಿ ಕಾರ್ಯಗಳೆಲ್ಲವನ್ನೂ ಶಾಸ್ತ್ರೋಕ್ತವಾಗಿ ನಡೆಸಿದನು. ಆ ರಾತ್ರಿಯು ಕಳೆದು ಬೆಳಗಾದ ಕೂಡಲೇ ಎದ್ದು, ಆಗ ನಡೆಸಬೇಕಾದ ಗೋದಾನಗಳನ್ನೂ ನಡೆಸಿದನು. ಸಮಾವರ್ತನಕಾಲದಲ್ಲಿ ತನ್ನ ನಾಲ್ವರು ಮಕ್ಕಳಲ್ಲಿ ಒಬ್ಬೊಬ್ಬರ ಹೆಸರಿನಲ್ಲಿಯೂ ಒಂದೊಂದು ಲಕ್ಷ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿಸಿದನು. ದಶರಥನಿಗಿದ್ದ ಪುತ್ರವಾತ್ಸಲ್ಯವು ಈತ ನನ್ನು ಅಷ್ಟರಲ್ಲಿಯೇ ತೃಪ್ತಿಗೊಳಿಸಲಿಲ್ಲ. ಹೀಗೆ ದಾನಮಾಡಿದ ನಾಲ್ಕು ಲಕ್ಷ ಗೋವುಗಳನ್ನೂ ಸ್ವರ್ಣಾಭರಣಗಳಿಂದಲಂಕರಿಸಿ, ಆ ಗೋವುಗಳನ್ನು ಕರುಗಳೊಡನೆ ಕಳುಹಿಸಿಕೊಟ್ಟನು. ಮತ್ತು ಆ ಬ್ರಾಹ್ಮಣರಿಗೆ ಹಾಲು ಕರೆಯುವುದಕ್ಕಾಗಿ ಕಂಚಿನ ಪಾತ್ರೆಗಳನ್ನೂ, ಅವುಗಳೊಡನೆ ವಿಶೇಷವಾದ ದಕ್ಷಿಣೆಯನ್ನೂ ಕೊಟ್ಟನು. ಹೀಗೆ ಆ ನಾಲ್ವರು ಮಕ್ಕಳುಗಳಿಂದಲೂ ಗೋದಾನವನ್ನು ಮಾಡಿಸಿದಮೇಲೆ, ದಶರಥನು ವ್ರತಸಮಾವರ್ತನವನ್ನು ಹೊಂದಿದ ಮಕ್ಕಳುಗಳೊಡಗೂಡಿ ಲೋಕಪಾಲಕರಿಂದ ಪರಿವೇಷ್ಟಿತನಾದ ಬ್ರಹ್ಮನಂತೆಯೇ ಕಾಣುತ್ತಿದ್ದನು.

ಇಲ್ಲಿಗೆ ಎಪ್ಪತ್ತೆರಡನೆಯ ಸರ್ಗವು.

ಸೀತಾಕಲ್ಯಾಣಘಟ್ಟವು

ಶ್ರೀರಾಮ ಲಕ್ಷ್ಮಣ ಭರತ ಶತ್ರುಘ್ನರ ವಿವಾಹವು

ಹೀಗೆ ಪ್ರಶಸ್ತವಾದ ಗೋದಾನವನ್ನು ಮಾಡುವ ಕಾಲಕ್ಕೆ ಸರಿಯಾಗಿ ಕೇಕಯರಾಜನ ಮಗನಾಗಿ ಭರತನ ಸೋದರಮಾವನಾದ ಯುಧಾಜಿತ್ತೆಂಬ ವನು ಅಲ್ಲಿಗೆ ಬಂದು ಸೇರಿದನು. ಆತನು ದಶರಥನನ್ನು ಕುರಿತು ಕ್ಷೇಮಲಾಭ ಗಳನ್ನು ವಿಚಾರಿಸಿದಮೇಲೆ, ಆತನನ್ನು ಕುರಿತು, “ಎಲೈ ರಾಜೇಂದ್ರನೆ! ಕೇಕಯರಾಜನು ಸ್ನೇಹಪೂರ್ವಕವಾಗಿ ನಿನ್ನ ಕ್ಷೇಮಲಾಭವನ್ನು ವಿಚಾರಿಸು ವಂತೆ ಹೇಳಿರುವನು. ನೀನು ಯಾವಾಗಲೂ ಯಾರ ಕ್ಷೇಮವನ್ನು ಕೋರು ತ್ತಿರುವೆಯೋ ಅಂತಹ ನಾವೆಲ್ಲರೂ ಕ್ಷೇಮದಿಂದಿರುವೆವು. ನನ್ನ ತಂದೆಯು ದೌಹಿತ್ರನಾದ ಈ ಭರತನನ್ನು ನೋಡಬೇಕೆಂದು ಬಹಳವಾಗಿ ಆಶೆಪಟ್ಟು ಅವನನ್ನು ಕರೆತರುವಂತೆ ನನ್ನನ್ನು ಕಳುಹಿಸಿದನು. ನಾನು ಅಯೋಧ್ಯೆಗೆ

ಹೋಗಿ ನೋಡುವಲ್ಲಿ ನೀವೆಲ್ಲರೂ ವಿವಾಹಾರ್ಥವಾಗಿ ಇಲ್ಲಿಗೆ ಬಂದಿರುವುದಾಗಿ ತಿಳಿಯಿತು. ಈ ಶುಭವೃತ್ತಾಂತವನ್ನು ಕೇಳಿದೊಡನೆಯೇ ಹೊರಟು, ಈಗಲೇ ಇಲ್ಲಿಗೆ ಬಂದು ಸೇರಿದೆನು" ಎಂದನು. ಆಗ ದಶರಥನು ಹೀಗೆ ತನಗೆ ಇಷ್ಟನಾದ ಅತಿಥಿಯು ಸಕಾಲಕ್ಕೆ ಬಂದು ಸೇರಿದುದಕ್ಕಾಗಿ ಸಂತೋಷಪಟ್ಟು, ಅನೇಕ ವಿಧದಿಂದ ಆತನನ್ನು ಸತ್ಕರಿಸಿದನು. ಆಮೇಲೆ ತನ್ನ ಮಕ್ಕಳೊಡಗೂಡಿ ಸಂತೋಷದಿಂದ ಆ ರಾತ್ರಿಯನ್ನು ಕಳೆದು, ಬೆಳಗಾದಮೇಲೆ ಮಾಡಬೇಕಾದ ಕರ್ಮಗಳೆಲ್ಲವನ್ನೂ ಮುಗಿಸಿ, ಋಷಿಗಳನ್ನು ಮುಂದಿಟ್ಟುಕೊಂಡು ಯಜ್ಞಶಾಲೆಗೆ ಬಂದನು. ಶ್ರೀರಾಮನೂ ತಮ್ಮಂದಿರೊಡಗೂಡಿ ಸರ್ವಾಭರಣಭೂಷಿತನಾಗಿ, ಕಂಕಣವನ್ನು ಕಟ್ಟಿಕೊಳ್ಳತಕ್ಕ ಶುಭಕರ್ಮಗಳೆಲ್ಲವನ್ನೂ ನಡೆಸಿ, ವಿವಾಹಯೋಗ್ಯವಾದ [1]ವಿಜಯಮುಹೂರ್ತದಲ್ಲಿ ವಸಿಷ್ಠಾದಿ ಮಹರ್ಷಿಗಳೊಡನೆ ಯಜ್ಞಶಾಲೆಯ ಬಳಿಗೆ ಬಂದನು. ಆಗ ಈ ನಾಲ್ಕು ಮಕ್ಕಳೂ ತಂದೆಯಾದ ದಶರಥನ ಸಮೀಪದಲ್ಲಿ ಕುಳಿತಿದ್ದರು. ಆಮೇಲೆ ಪೂಜ್ಯನಾದ ವಸಿಷ್ಠನು ಜನಕನ ಬಳಿಗೆ ಬಂದು ಆತನನ್ನು ಕುರಿತು, "ಎಲೈ ರಾಜನೆ! ಕುಮಾರರಿಗೆ ಪ್ರತಿಸರಬಂಧನವೇ ಮೊದಲಾದ ಮಂಗಳಕಾರ್ಯಗಳೆಲ್ಲವೂ ಮುಗಿದುವು. ದಶರಥನು ಆ ಪುತ್ರರೊಡಗೂಡಿ ಕನ್ಯಾದಾನ ಮಾಡತಕ್ಕ ನಿನ್ನನ್ನೇ ಇದಿರುನೋಡುತ್ತಿರುವನು. ಇನ್ನು ಮುಂದಿನ ಕಾರ್ಯಗಳೆಲ್ಲವನ್ನೂ ಕನ್ಯಾದಾನ ಮಾಡತಕ್ಕವರೂ ಮತ್ತು ಕನ್ನಿಕೆಯನ್ನು ಪ್ರತಿಗ್ರಹಿಸತಕ್ಕವರೂ ಸೇರಿಯೇ ನಡೆಸಬೇಕಾಗಿರುವುದು. ಆದುದರಿಂದ ನೀನು ಉದಾಸೀನನಾಗಿರುವುದಕ್ಕೆ ಇದು ಕಾಲವಲ್ಲ. ಕನ್ಯಾದಾನವನ್ನು ಮಾಡಿ ನಿನ್ನ ಪ್ರತಿಜ್ಞೆಯನ್ನು ನೆರವೇರಿಸುವವನಾಗು. ನಿನಗೆ ಇದಕ್ಕಿಂತಲೂ ಬೇರೆ ಧರ್ಮವಾವುದೂ ಇಲ್ಲ" ಎಂದನು.

ವಸಿಷ್ಠನು ಹೇಳಿದ ಈ ಮಾತನ್ನು ಪರಮಧರ್ಮಜ್ಞನಾದ ಜನಕನು ಕೇಳಿ, ಅವರನ್ನು ಕುರಿತು ವಿನಯದಿಂದ "ಎಲೈ ಮಹರ್ಷಿಯೇ! ನೀವೇ ಏತಕ್ಕೆ ತ್ವರೆಗೊಳಿಸಕೂಡದು? ನಮ್ಮನ್ನು ನಿರ್ಬಂಧಿಸಿ ಆಯಾ ಕಾರ್ಯ

---

1. ಇಲ್ಲಿ ವಿಜಯವೆಂದರೆ ಒಂದು ಮುಹೂರ್ತದ ಹೆಸರೆಂದು ಕೆಲವರು ವ್ಯಾಖ್ಯಾನ ಮಾಡಿರುವರು. ಆ ಮುಹೂರ್ತವು ಪೂರ್ವಾಹ್ಣದಲ್ಲಿರುವುದರಿಂದಲೂ, ಈಗ ವಿವಾಹ ನಡೆಯುವ ಕಾಲವು ಅಪರಾಹ್ಣವಾದುದರಿಂದಲೂ, ಇಲ್ಲಿ ಜಯಸಾಧಕವಾದುದೆಂದೇ ಅರ್ಥಮಾಡಬೇಕು.

ಗಳಲ್ಲಿ ನಿಯೋಗಿಸತಕ್ಕ ಸರ್ವಸ್ವಾತಂತ್ರ್ಯವೂ ನಿಮಗಿರುವುದಲ್ಲವೆ? ನಿಮ್ಮನ್ನು ಬಾಗಿಲಲ್ಲಿ ತಡೆಯತಕ್ಕವರು ಒಬ್ಬರೂ ಇಲ್ಲ. ನೀವು ಯಾರ ಆಜ್ಞೆಯನ್ನು ಇದಿರುನೋಡಬೇಕಾಗಿರುವುದು? ಎಲೈ ಮಹಾತ್ಮನೇ! ನಿಮ್ಮ ಸ್ವಂತಮನೆಯಂತಿರುವ ಇಲ್ಲಿ ವಿಚಾರವೇನಿರುವುದು? ನನ್ನ ರಾಜ್ಯ ವನ್ನೇ ನಿಮ್ಮ ಅಧೀನದಲ್ಲಿರಿಸಿರುವಾಗ ಈ ಅರಮನೆಯಲ್ಲಿ ಹೇಳಬೇಕಾದು ದೇನು? ನನಗಾಗಿ ಇದಿರುನೋಡಬೇಕಾದುದಿಲ್ಲ. ನಾನು ಸಿದ್ಧನಾಗಿರುವೆನು. ಇದೋ! ಈ ಕನ್ಯೆಯರೆಲ್ಲರೂ ವಿವಾಹಕ್ಕೆ ಮೊದಲು ನಡೆಯಬೇಕಾದ ಮಂಗಳಕಾರ್ಯವೆಲ್ಲವನ್ನೂ ಮುಗಿಸಿ, ಜ್ವಲಿಸುತ್ತಿರುವ ಅಗ್ನಿಜ್ವಾಲೆಯಂತೆ ವೇದಿಕೆಯ ಮುಂದೆ ನಿಂತಿರುವರು. ನಾನೂ ಮೊದಲೇ ಸಿದ್ಧನಾಗಿ ವೇದಿಕೆಯ ಬಳಿಯಲ್ಲಿ ನಿಂತು ವರರನ್ನು ಇದಿರುನೋಡುತ್ತಿರುವೆನು. ತಡೆ ಯಿಲ್ಲದೆ ಶುಭಕಾರ್ಯಗಳನ್ನು ನಡೆಸಬಹುದು. ಸಾವಕಾಶವೇಕೆ?" ಎಂದನು.

ಹೀಗೆ ಹೇಳಿದ ಜನಕನ ವಾಕ್ಯವನ್ನು ಕೇಳುತ್ತಿದ್ದ ದಶರಥನು ಸಮಸ್ತ ಋಷಿಗಳೊಡನೆ ತನ್ನ ನಾಲ್ವರು ಕುಮಾರರನ್ನೂ ವೇದಿಕೆಯ ಬಳಿಗೆ ಕಳುಹಿಸಿ ದನು. ಆಗ ವಿದೇಹರಾಜನಾದ ಜನಕನು ವಸಿಷ್ಠರನ್ನು ಕುರಿತು, "ಎಲೈ ಮಹರ್ಷಿಯೆ! ಇನ್ನು ಋಷಿಗಳೊಡಗೂಡಿ ಲೋಕಾಭಿರಾಮನಾದ ಶ್ರೀರಾಮ ನಿಗೆ ವಿವಾಹಸಂಬಂಧವಾದ ಕಾರ್ಯಗಳನ್ನು ನಡೆಸು" ಎಂದನು. ಪೂಜ್ಯನಾದ ವಸಿಷ್ಠನು ಹಾಗೆಯೇ ಆಗಲೆಂದು ಹೇಳಿ, ವಿಶ್ವಾಮಿತ್ರ ಶತಾನಂದರನ್ನು ಮುಂದಿಟ್ಟುಕೊಂಡು, ವಿವಾಹಾರ್ಥವಾಗಿ ಆಗಲೇ ಹೊಸದಾಗಿ ಕಟ್ಟಲ್ಪಟ್ಟ ಮಂಟಪದಲ್ಲಿ ಶಾಸ್ತ್ರೋಕ್ತವಾಗಿ ವೇದಿಕೆಯನ್ನು ಮಾಡಿಸಿ, ಅದರ ಸುತ್ತಲೂ ಗಂಧಪುಷ್ಪಾದಿಗಳಿಂದಲಂಕರಿಸಿ, [1]ಮೊಳೆಹೊರಟಿರತಕ್ಕ ಬಂಗಾರದ ಪಾಲಿಕೆ ಗಳನ್ನಿಟ್ಟು, ಧೂಪದೀಪಾದಿಗಳನ್ನೂ, ಅರ್ಘ್ಯಪಾತ್ರೆಗಳನ್ನೂ, ಅರಳು ಗಳನ್ನೂ, ಸ್ರುಕ್ಕು, ಸ್ರುವ ಮೊದಲಾದ ಹೋಮೋಪಕರಣಗಳನ್ನೂ, ಶಂಖ ಗಳನ್ನೂ, ಮಂತ್ರೋಕ್ತವಾಗಿ ಮಾಡಲ್ಪಟ್ಟ ಅಕ್ಷತೆಗಳನ್ನೂ ಕ್ರಮವಾಗಿ ಇರಿಸಿದನು. ಶಾಸ್ತ್ರೋಕ್ತವಾಗಿಯೂ, ಮಂತ್ರಪೂರ್ವಕವಾಗಿಯೂ ದರ್ಭೆ

1. "ಛಿದ್ರಕುಂಭೈಃ" ಎಂದು ಮೂಲದಲ್ಲಿರುವುದರಿಂದ, ಅದಕ್ಕೆ ಅಡಿಯಿಲ್ಲದ ಪಾತ್ರೆಗಳೆಂದರೆ ಪಾಲಿಕೆಗಳೆಂದರ್ಥವು. "ಚಿತ್ರಕುಂಭೈಃ" ಎಂಬ ಪಾಠಾಂತರವೂ ಉಂಟು. ಅದಕ್ಕೆ ವಿಚಿತ್ರವರ್ಣವುಳ್ಳ ಪಾತ್ರೆಗಳೆಂದು ಅರ್ಥ ಮಾಡಬೇಕು.

ಗಳಿಂದ ಪರಿಸ್ತರಣವನ್ನು ಮಾಡಿದನು. ವೇದಿಕೆಯಲ್ಲಿ ಅಗ್ನಿಯನ್ನು ಪ್ರತಿಷ್ಠೆ ಮಾಡಿ, ಈ ವಧೂವರರ ಅಭ್ಯುದಯಕ್ಕಾಗಿ ತಾನೇ ಮಂತ್ರೋಚ್ಚಾರಣ ಪೂರ್ವಕವಾಗಿ ಹೋಮವನ್ನು ಮಾಡಿದನು. ಆಮೇಲೆ ಜನಕನು ಸರ್ವಾ ಭರಣಗಳಿಂದಲಂಕರಿಸಲ್ಪಟ್ಟ ಸೀತೆಯನ್ನು ಕರೆತಂದು, ಆ ರಾಮನಿಗಿದಿರಾಗಿ ವೇದಿಕೆಯ ಮುಂದೆ ನಿಲ್ಲಿಸಿ, ಕೌಸಲ್ಯಾನಂದವರ್ಧನನಾದ ಶ್ರೀರಾಮನನ್ನು ನೋಡಿ, [1]" ಎಲೈ ಕುಮಾರನೆ! ಇದೋ! ಈ ಸೀತೆಯು ನನ್ನ ಮಗಳು!

---

1. ಇದಕ್ಕೆ "ಇಯಂ ಸೀತಾ ಮಮ ಸುತಾ ಸಹಧರ್ಮಚರೀ ತವ | ಪ್ರತೀಚ್ಛ ಚೈನಾಂ ಭದ್ರಂ ತೇ ಪಾಣಿಂ ಗೃಹ್ಣೀಷ್ವ ಪಾಣಿನಾ ||" ಎಂಬುದೇ ಮೂಲವು. "ಕುಲ ರೂಪಾದ್ಯತಿಶಯಗಳಿಂದ ಸರ್ವೋತ್ತಮಳಾದ ಈ ಕನ್ನಿಕೆಯು ನಿನಗೆ ಪ್ರತಿಗ್ರಹಿಸುವುದಕ್ಕೆ ತಕ್ಕವಳು" ಎಂದು ಜನಕನು ರಾಮನಿಗೆ ಈ ಶ್ಲೋಕಾರ್ಥದಿಂದ ವಿವರಿಸಿ ತಿಳಿಸುವನು. ಹೇಗೆಂದರೆ; (ಇಯಂ) "ಇದೋ ಇಲ್ಲಿರುವ ಈಕೆಯು" ಎಂದರೆ, ನಿನ್ನ ಮುಂದೆ ನಿರತಿಶಯವಾದ ರೂಪಲಾವಣ್ಯಾದಿಗಳಿಂದ ಶೋಭಿಸುತ್ತ ನಿಂತಿರುವ ಈಕೆ ಯೆಂದರ್ಥವು. "ಸಾಮಾನ್ಯವಾಗಿ ಲೋಕದಲ್ಲಿ ತಂದೆತಾಯಿಗಳು, ತಮ್ಮ ಹೆಣ್ಣುಮಕ್ಕಳಲ್ಲಿ ಇಲ್ಲದ ರೂಪಲಾವಣ್ಯಾದಿಗುಣಗಳನ್ನು ವರ್ಣಿಸಿ ಪರರಿಗೆ ಕಟ್ಟಿಕೊಡುವಂತೆ ನಾನು ಸ್ವಾಭಿಮಾನದಿಂದ ನಮ್ಮ ಮಗಳನ್ನು ವರ್ಣಿಸುವೆ ನೆಂದೆಣಿಸಬೇಡ! ನೀನೇ ಪ್ರತ್ಯಕ್ಷವಾಗಿ ನೋಡಿ ತಿಳಿಯಬಹು"ದೆಂದು ನಿರ್ದೇಶಿಸಿ ತೋರಿಸುವುದಾಗಿ ಭಾವವು. "ಅಥವಾ ಪ್ರತ್ಯಕ್ಷದಲ್ಲಿ ನೋಡಿ ತಿಳಿಯುವುದು ಹಾಗಿರಲಿ! (ಇಯಂ ಸೀತಾ) ಇವಳ ಹೆಸರಿನಿಂದಲೇ ಇವಳು ಅಯೋನಿಜೆಯೆಂಬುದು ಸೂಚಿತವಾಗುವುದರಿಂದ, ಮನುಷ್ಯಸಾಮಾನ್ಯಕ್ಕೆ ದುರ್ಲಭವಾದ ಅಪ್ರಾಕೃತದಿವ್ಯಸೌಂದರ್ಯವುಳ್ಳವಳೆಂದು ನೀನೇ ನಿರ್ಧರಿಸ ಬಹುದಲ್ಲದೆ, ಈಕೆಯ ಜನ್ಮಶುದ್ಧಿಯೂ ಇದರಿಂದ ಸೂಚಿಸಲ್ಪಡುವುದೆಂದು ಭಾವವು. ಮತ್ತು (ಇಯಂ ಸೀತಾ) ಮೊದಲು ಸೀತೆಯನ್ನು ನೋಡುವವ ರಿಗೆ ಆಕೆಯ ದಿವ್ಯ ಲಾವಣ್ಯಾತಿಶಯವು ಮಿಂಚುಹೊಡೆದಂತೆ ಥಳಥಳಿಸಿ, ನೋಡುವವರ ಕಣ್ಣುಗಳು ಕೋರೈಸಿಹೋಗುವಂತೆ ಮಾಡಬಹುದಾದುದ ರಿಂದ, ವ್ಯಕ್ತಿಯೇ ಕಣ್ಣಿಗೆ ಬೀಳದಿರಬಹುದೆಂಬ ಸಂದೇಹದಿಂದ, ಜನಕನು ಆ ವ್ಯಕ್ತಿಯನ್ನು ರಾಮನಿಗೆ ಕೈ ನೀಡಿ ನಿದರ್ಶಿಸಿ ತೋರಿಸುವನೆಂದೂ ಭಾವವು. ಮತ್ತು ರಾಮನು ಸೀತೆಯ ರೂಪಾದಿಗುಣಗಳನ್ನು ಕೇಳಿದುದು ಮೊದಲು, ಆಕೆಯಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ, ಸ್ವಾಭಾವಿಕವಾಗಿ ವಿರಹಿಜನಗಳಿಗೆ

ನಿನಗೆ ಧರ್ಮಪತ್ನಿಯಾಗುವಳು. ಇವಳನ್ನು ಪ್ರತಿಗ್ರಹಿಸಬೇಕು! ನಿನಗೆ

ಉಂಟಾಗುವ ಅವಸ್ಥೆಯನ್ನು ಹೊಂದಿ, "ಪ್ರಾಸಾದೇ ಸಾ ಪಥಿ ಪಥಿ ಚ ಸಾ ಪೃಷ್ಠತಸ್ಸಾ ಪುರಸ್ಸಾ" ಎಂಬಂತೆಯೂ "ಅಂತರ್ಬಹಿಪುರಃಪಶ್ಚಾತ್ಸರ್ವ-ದಿಕ್ಷ್ವಪಿ ಸೈವ ಮೇ" ಎಂಬಂತೆಯೂ, ಎಲ್ಲಿ ನೋಡಿದರೂ ಸೀತೆಯೇ ಗೋಚರಿಸುತ್ತ, ಈತನಿಗೆ ಜಗತ್ತೆಲ್ಲವೂ ಸೀತಾಮಯವಾಗಿಯೇ ಕಂಡರೂ ಕಾಣಬಹುದೆಂದು ಜನಕನು ಶಂಕಿಸಿ, ರಾಮನನ್ನು "ನಿನ್ನ ಪ್ರಿಯಳಾದ ಸೀತೆಯು ಇದೋ ಇಲ್ಲಿರುವ"ಳೆಂದು ಹೇಳಿದುದಾಗಿ ಭಾವವು. "ಈಕೆಯು ಅಯೋನಿಜೆಯಾಗಿ, ಅಪಾರಸೌಂದರ್ಯವುಳ್ಳವಳಾಗಿದ್ದರೂ, ಇವಳನ್ನು ಬಳೆಸಿದ ವಂಶವಾವುದೆಂದು ನೀನು ಶಂಕಿಸಬೇಡ, (ಮಮ ಸುತಾ) ಈಕೆಯು ನನ್ನ ಮಗಳು. ಸದಾಚಾರನಿಷ್ಠರಾದ ಜನಕರಾಜ ವಂಶದಲ್ಲಿ ಸೇರಿದ ಈಕೆಯ ವಂಶ ಶುದ್ಧಿಯನ್ನು ಹೇಳಬೇಕಾದುದೇ ಇಲ್ಲ. ಮತ್ತು (ಮಮ ಸುತಾ) ನನ್ನ ಮಗಳು. ಅನೇಕ ತಪಸ್ಸುಮಾಡಿ ದಶರಥನು ನಿನ್ನನ್ನು ಹೇಗೆ ಪಡೆದನೋ ಅದರಂತೆಯೇ ನಾನೂ ಅನೇಕ ವ್ರತೋಪವಾಸಗಳನ್ನು ಮಾಡಿ, ನಿಮಗಾಗಿಯೇ ಈಕೆಯನ್ನು ಪಡೆದಿರುವೆ"ನೆಂದೂ ಭಾವವು. "ಸೌಂದರ್ಯ ಪ್ರಧಾನಳಾದ ಈಕೆಯು ಭೋಗಮಾತ್ರಕ್ಕಾಗಿಯೇ ಇರುವಳೆಂದೂ, ಧರ್ಮಾ ಚರಣಾರ್ಥವಾಗಿ ಬೇರೊಬ್ಬಳನ್ನು ವರಿಸಬೇಕೆಂದೂ ನೀನು ಶಂಕಿಸಬೇಕಾದು ದಲ್ಲ. (ಸಹಧರ್ಮಚರೀ ತವ) ಈಕೆಯು ನಿನ್ನ ಧರ್ಮಾಚರಣಕ್ಕೂ ಒದಗುವಳಾದುದರಿಂದ, ಧರ್ಮಪತ್ನಿಯಾಗಿಯೂ ಇರುವಳು". "ಸಮಾನೋ ಧರ್ಮಸ್ಸಹಧರ್ಮಃ ತಂ ಚರತೀತಿ ಸಹಧರ್ಮಚರೀ" ಎಂಬ ವ್ಯುತ್ಪತ್ತಿ ಯಿಂದ, ನಿನ್ನ ಧರ್ಮಮಾರ್ಗವನ್ನನುಸರಿಸಿಯೇ ಈಕೆಯು ನಡೆದುಕೊಳ್ಳ ತಕ್ಕವಳು ಮತ್ತು ಲೋಕದಲ್ಲಿ ಒಬ್ಬರ ಮನೋಧರ್ಮವನ್ನನುಸರಿಸಿ ಮತ್ತೊಬ್ಬರ ಮನೋಧರ್ಮವಿರುವುದು ದುರ್ಲಭವಾಗಿದ್ದರೂ, ಈಕೆಯಲ್ಲಿ ಆ ಬಗೆಯ ಅಸಾಧಾರಣಗುಣವಿರುವುದರಿಂದ ನಿನಗೆ ಆಕೆಯೇ ಅನುರೂಪ ಳಾದವ"ಳೆಂದೂ ಭಾವವು. ಇದಕ್ಕೆ ನಿದರ್ಶನವಾಗಿ, "ದೋಷೋ ಯದ್ಯಪಿ ತಸ್ಯ ಸ್ಯಾತ್ಸತಾಮೇತದಗರ್ಹಿತಂ" ಎಂದು ತಾನು ಹೇಳಿರು ವಂತೆಯೇ "ನ ಕಶ್ಚಿನ್ನಾಪರಾಧ್ಯತಿ" ಎಂದು ಆಕೆಯೂ ಮತ್ತೊಂದು ಕಡೆಯಲ್ಲಿ ಹೇಳಿರುವಳು. ಕುಲಶೀಲರೂಪಾದಿಗಳಲ್ಲಿಯೂ, ಧರ್ಮಾಚರಣೆ ಯಲ್ಲಿಯೂ ಎಣೆಯಿಲ್ಲದವಳಾಗಿದ್ದರೂ, ನನ್ನ ಅನುಮತಿಯಿಲ್ಲದೆ ಹೇಗೆ ಈಕೆ ಯನ್ನು ಪ್ರತಿಗ್ರಹಿಸುವುದೆಂದು ಶಂಕಿಸಬೇಡ! (ಪ್ರತೀಚ್ಛ ಚೈನಾಂ) ಈಕೆ

ಮಂಗಳವಾಗಲಿ! ಇವಳ ಕೈಯನ್ನು ನಿನ್ನ ಕೈಯಿಂದ ಹಿಡಿ! ಈಕೆಯು

ಯನ್ನು ತಡೆಯಿಲ್ಲದೆ ನೀನೇ ಪ್ರತಿಗ್ರಹಿಸಬಹುದು" ಎಂದು ಭಾವವು. ಮತ್ತು ಕನ್ಯಾದಾನ ಮಾಡುವುದಕ್ಕಾಗಿ ಬಂದಿರುವ ಜನಕನು, ತನ್ನ ಮಗಳಾದ ಸೀತೆಯನ್ನು "ತಾನು ಕೊಡುವೆ"ನೆಂದು ಹೇಳದೆ (ಪ್ರತೀಚ್ಛ ಚೈನಾಂ) "ಈಕೆಯನ್ನು ಸ್ವೀಕರಿಸು" ಎಂದು ರಾಮನಿಗೆ ಲಕ್ಷ್ಮ್ಯಂಶಭೂತೆ ಯಾದ ಸೀತೆಯು ನಿತ್ಯಾನಪಾಯಿನಿಯಾಗಿರುವುದರಿಂದ, ಆಕೆಯನ್ನು ಈಗ ತಾನು ಹೊಸದಾಗಿ ಕೊಡುವೆನೆಂದು ಹೇಳುವುದು ಅನುಚಿತವೆಂದೆಣಿಸಿ, ಹೀಗೆ ಹೇಳಿದನೆಂದೂ ರಹಸ್ಯಾರ್ಥವು. ಹೀಗಿದ್ದರೂ "ಸ್ವತಸ್ಸಿದ್ಧಳಾದ ನನ್ನ ಪತ್ನಿಯನ್ನು ನಾನು ಪರಿಗ್ರಹಿಸುವುದಕ್ಕೆ ನೀನು ಹೇಳಬೇಕಾದುದೇನು?" ಎಂದು ರಾಮನಿಗೆ ಕೋಪವುಂಟಾಗಬಹುದೆಂದು ಜನಕನು ಶಂಕಿಸಿ, ಆತನ ಕ್ಷಮೆಯನ್ನು ಬೇಡುವುದಕ್ಕಾಗಿ (ಭದ್ರಂ ತೇ) "ನಿನಗೆ ಮಂಗಳವಾಗಲಿ" ಎಂದು ಸಮಾಧಾನಪಡಿಸುವನು. ಅಥವಾ "ಲೋಕೋತ್ತರಸೌಂದರ್ಯದಿಂದ ಪರಸ್ಪರಾನುರೂಪರಾದ ಇಬ್ಬರ ಸೇರುವೆಯು ಅತ್ಯದ್ಭುತವಾದುದರಿಂದ ಜನಗಳ ದೃಷ್ಟಿದೋಷವು ತಾಗಬಹುದೋ" ಎಂದು ಜನಕನು ಶಂಕಿಸಿ, ಅವರ ಶ್ರೇಯಸ್ಸಿಗಾಗಿ (ಭದ್ರಂ ತೇ) ಎಂದು ಮಂಗಳಾಶಾಸನವನ್ನು ಮಾಡಿದಂತೆಯೂ ಭಾವವು. ಸೀತಾರಾಮರಿಬ್ಬರಿಗೂ ಪರಸ್ಪರಾನುರಾಗವು ಮಿತಿಮೀರಿಹೋಗಿರುವುದರಿಂದ, ಅವರು ತನ್ನ ಅನುಮತಿಯನ್ನೇ ಅತ್ಯಾತುರ ದಿಂದ ನಿರೀಕ್ಷಿಸುತ್ತಿದ್ದು, ತಾನು ಹೀಗೆ ಅನುಜ್ಞೆಯನ್ನು ಕೊಟ್ಟೊಡನೆಯೇ ರಾಕ್ಷಸ ಗಾಂಧರ್ವಾದಿ ವಿವಾಹಗಳನ್ನು ನಡೆಸಿಬಿಡುವರೋ ಎಂದು ಶಂಕಿಸಿ, ಹಾಗೆ ಮಾಡದೆ ಪಾಣಿಗ್ರಹಣರೂಪವಾದ ವಿವಾಹವನ್ನೇ ಮಾಡಿಕೊಳ್ಳ ಬೇಕೆಂಬುದಕ್ಕಾಗಿ ಜನಕನು ರಾಮನನ್ನು ಕುರಿತು "(ಪಾಣಿಂ ಗೃಹ್ಣೀಷ್ವ) ಕೈಹಿಡಿದು ವರಿಸು" ಎಂದು ಹೇಳಿದ ಹಾಗೆಯೂ ಗ್ರಹಿಸಬೇಕು.

ಅರ್ಥಾಂತರವು— ಬ್ರಹ್ಮನಿಷ್ಠನಾದ ಜನಕನು, ಶ್ರೀರಾಮನ ಅಪ್ರಮೇಯ ತೇಜಸ್ಸನ್ನೂ, ಶಿವಧನುರ್ಭಂಗವೇ ಮೊದಲಾದ ಅತಿಮಾನುಷ್ಯ ಕೃತ್ಯಗಳನ್ನೂ ನೋಡಿ, ಆತನನ್ನು ಸಾಕ್ಷಾನ್ಮಹಾವಿಷ್ಣುವೆಂದೂ, ಸೀತೆಯನ್ನು ಮಹಾಲಕ್ಷ್ಮಿಯೆಂದೂ ತಿಳಿದು, ಈ ಮೇಲಿನ ಶ್ಲೋಕದಿಂದ ಅವರಿಬ್ಬರ ಅನಾದಿ ಸಂಬಂಧವನ್ನೂ ಸೂಚಿಸುವನು. ಹೇಗೆಂದರೆ, (ಇಯಂ ಸೀತಾ) ಎಲೈ "ಮಹಾವಿಷ್ಣುವಾದ ರಾಮನೆ! ನೀನು ಮನುಷ್ಯಾವತಾರವನ್ನು ಎತ್ತಿರುವಂತೆಯೇ ನಿನಗೆ ನಿತ್ಯಾನಪಾಯಿನಿಯಾದ ಮಹಾಲಕ್ಷ್ಮಿಯೂ

ಮಹಾಪತಿವ್ರತೆಯಾಗಿಯೂ, ಭಾಗ್ಯಶಾಲಿನಿಯಾಗಿಯೂ ಇದ್ದು ನೆಳಲಿನಂತೆ

ಇದೋ ಇಲ್ಲಿ ಸೀತಾರೂಪದಿಂದ ಅವತರಿಸಿರುವಳು. (ಸೀತಾ) ಈಕೆಯ ಹೆಸರಿನಿಂದಲೇ ಇವಳು ಅಯೋನಿಜೆಯೆಂದು ಸ್ಪಷ್ಟವಾಗುವುದು. (ಮಮ ಸುತಾ) ಈಕೆಯು ಅಯೋನಿಜೆಯಾಗಿದ್ದರೂ, ನೀನು ಮನುಷ್ಯಧರ್ಮವನ್ನು ನಟಿಸಿ ತೋರಿಸುವುದಕ್ಕಾಗಿ ದಶರಥನ ಹೊಟ್ಟೆಯಲ್ಲಿ ಹುಟ್ಟಿದಂತೆಯೇ, ಈಕೆಯೂ ನನ್ನ ಮನೆಯಲ್ಲಿ ಸೇರಿ ಬೆಳೆದಿರುವಳು. (ಸಹಧರ್ಮಚರೀ ತವ) ನೀನು ನಡೆಸತಕ್ಕ ಜಗತ್ಸೃಷ್ಟ್ಯಾದಿ ಧರ್ಮಗಳಲ್ಲಿ ಈಕೆಯೂ ಅನುಕೂಲಳಾಗಿರತಕ್ಕವಳು. (ಪ್ರತೀಚ್ಛ ಚೈನಾಂ) ಇವಳು ನಿನಗೆ ನಿತ್ಯಾನಪಾಯಿನಿಯಾಗಿದ್ದರೂ, ಇತರ ವಿಷಯಗಳಲ್ಲಿ ನೀನು ಮನುಷ್ಯಧರ್ಮವನ್ನು ನಟಿಸಿ ತೋರಿಸುವಂತೆಯೇ ಈ ವಿಷಯದಲ್ಲಿಯೂ ಮನುಷ್ಯರಂತೆಯೇ ನೀನು ಇವಳನ್ನು ಕೈಹಿಡಿದು ವರಿಸು. (ಪಾಣಿಂ ಗೃಹ್ಣೀಷ್ವ ಪಾಣಿನಾ) ನೀನು ಯಾವಾಗಲೂ ಶ್ರೀ ಮಹಾಲಕ್ಷ್ಮೀಸ್ವರೂಪಳಾದ ಈಕೆಯನ್ನು ಎದೆಯಲ್ಲಿ ಧರಿಸಿರತಕ್ಕವನಾಗಿದ್ದರೂ, ಈಗ ಮನುಷ್ಯಸ್ವರೂಪವನ್ನು ನಟಿಸುವುದಕ್ಕೆ ತಕ್ಕಂತೆ, ಇವಳನ್ನು ಕೈಹಿಡಿದು ಮದುವೆ ಮಾಡಿಕೊಳ್ಳುವವನಾಗು" ಎಂದು ಜನಕನು ಹೇಳಿದುದಾಗಿ ಭಾವವು.

ಸಾಮಾನ್ಯವಾಗಿ ಲೋಕದಲ್ಲಿ ಉತ್ತಮನಾದ ವರನೊಬ್ಬನು ಸಿಕ್ಕಿದರೆ, ಅನೇಕರು ತಾವಾಗಿಯೇ ಹೋರಾಡಿ ಬಂದು ಕನ್ನಿಕೆಯನ್ನು ಕೊಡುವುದುಂಟು. ಹೀಗೆ ಬರತಕ್ಕ ಕನ್ಯೆಯರಲ್ಲಿಯಾಗಲಿ, ಅತ್ತೆಮಾವಂದಿರಲ್ಲಿಯಾಗಲಿ ಅಳಿಯಂದಿರಿಗೆ ಗೌರವವು ಹುಟ್ಟುವುದಿಲ್ಲವಾದುದರಿಂದ, ಇವರು ಅವರಲ್ಲಿ ತಿರಸ್ಕಾರಭಾವವನ್ನೇ ತೋರಿಸುವುದು ಲೋಕಸ್ವಭಾವವು. ಇದಕ್ಕಾಗಿ ಜನಕನು ರಾಮನಿಗೆ ತನ್ನ ವಂಶದ ಮತ್ತು ಸೀತೆಯ ಮೇಲ್ಮೆಯನ್ನು ಸೂಚಿಸಿ, ಆತನಿಗೆ ತಮ್ಮ ಸಂಬಂಧದಲ್ಲಿ ಗೌರವಜ್ಞಾನವು ಹುಟ್ಟುವಂತೆ ಮಾಡುವನೆಂಬುದೂ ಈ ಶ್ಲೋಕದಲ್ಲಿ ಕಾಣಿಸಲ್ಪಟ್ಟಿರುವುದು. ಹೇಗೆಂದರೆ, "ವತ್ಸ ರಾಮನೆ! ಈ ಕನ್ನಿಕೆಯು ಸಾಮಾನ್ಯಳೆಂದೆಣಿಸಬೇಡ! (ಇಯಂ ಸೀತಾ) ಇವಳು ಭೂಮಿಯಲ್ಲಿ ತಾನಾಗಿ ಹುಟ್ಟಿದವಳು" ಎಂದರೆ ಈಕೆಯು ನಿನ್ನಂತೆ ಮನುಷ್ಯಯೋನಿಯಲ್ಲಿ ಹುಟ್ಟಿದವಳಲ್ಲ. ಇವಳು ಅಯೋನಿಜೆಯು. ಆದುದರಿಂದ ನಿನಗೂ ಬಹಳ ಗೌರವಾರ್ಹಳು" (ಮಮ ಸುತಾ) "ಈಕೆಯು ನನ್ನ ಮಗಳು" ರಾಜರಾಜನಾದ ನನ್ನ ಅರಮನೆಯಲ್ಲಿ ಸಮಸ್ತ ಸೌಭಾಗ್ಯ ಸಮೃದ್ಧಿಯಿಂದ ಬೆಳೆಸಲ್ಪಟ್ಟವಳು ಆದುದರಿಂದ ಈಕೆಯಲ್ಲಿ ನೀನು ಬಡವರ

ನಿನ್ನನ್ನು ಎಡೆಬಿಡದೆ ಅನುಸರಿಸುತ್ತಿರುವಳು" ಎಂದು ಹೇಳಿ, ಮಂತ್ರ

ಮನೆತನಕ್ಕೆ ಸೇರಿದವಳೆಂಬ ಭಾವವನ್ನಿಡದೆ ಗೌರವಿಸಬೇಕೆಂದು ಅಭಿಪ್ರಾಯವು. ಮತ್ತು (ಮಮ ಸುತಾ) "ಬ್ರಹ್ಮನಿಷ್ಠರಾದ ರಾಜರ ವಂಶದಲ್ಲಿ ಹುಟ್ಟಿ ಮಹಾತಪಸ್ವಿಯೆಂದು ಪ್ರಸಿದ್ಧಿಹೊಂದಿದ ನನ್ನ ಮಗಳು". ಇದರಿಂದ ತನ್ನ ವಂಶೋನ್ನತಿಯು ಸೂಚಿತವಾಗುವುದಲ್ಲದೆ, ಆ ಸೀತೆಯನ್ನು ಅನಾದರಿಸಿ, ತನಗೆ ಕಿಂಕ್ಕೃತಿಯನ್ನುಂಟುಮಾಡುವುದರಿಂದ ಬಹಳವಾದ ಅಶ್ರೇಯಸ್ಸಿಗೂ ಕಾರಣವೆಂದು ವ್ಯಕ್ತವಾಗುವುದು. (ಸಹಧರ್ಮಚರೀ ತವ) ಹೀಗೆ ರಾಜಭೋಗದಲ್ಲಿ ಬೆಳೆದ ಕನ್ನಿಕೆಯು ನಮ್ಮ ಮನೋಧರ್ಮವನ್ನನುಸರಿಸಿ ವಿಧೇಯಳಾಗಿರುವುದು ಹೇಗೆಂದೆಣಿಸಬೇಡ! ಕೈಹಿಡಿದ ಗಂಡನನ್ನು ಛಾಯೆಯಂತೆ ಅನುವರ್ತಿಸಿ ನಡೆಸತಕ್ಕ ಸದ್ಗುಣವೂ ಈಕೆಯಲ್ಲಿ ಸಂಪೂರ್ಣವಾಗಿರುವುದು. (ಪ್ರತೀಚ್ಛ ಚೈನಾಂ ಭದ್ರಂ ತೇ) ಈಕೆಯು ಸರ್ವಲಕ್ಷಣಸಂಪನ್ನೆಯಾದುದರಿಂದ ಇವಳನ್ನು ನೀನು ಕೈಹಿಡಿದು ವರಿಸಿದುದೇ ಆದರೆ, ನಿನಗೆ ಮುಂದೆ ಅನೇಕ ವಿಧವಾದ ಶ್ರೇಯಸ್ಸಿಗೆ ಕಾರಣವು. ನೀನು ಇವಳನ್ನು ವರಿಸುವುದು ನಿನ್ನ ಶ್ರೇಯಸ್ಸಿಗಾಗಿಯೇ ಅಲ್ಲದೆ ಬೇರೆಯಲ್ಲ"ವೆಂದೂ ಭಾವವು.

ಅಥವಾ ದಯಾಸಮುದ್ರನಾಗಿಯೂ ದೀನವತ್ಸಲನಾಗಿಯೂ ಇರುವ ಶ್ರೀಮನ್ನಾರಾಯಣನು, ದೈನ್ಯಕ್ಕೆ ವಶನಾಗುವಂತೆ ಡಂಭಕ್ಕೆ ವಶನಾಗತಕ್ಕವನಲ್ಲವಷ್ಟೆ? ಅಂತಹ ಮಹಾವಿಷ್ಣುವೇ ರಾಮರೂಪದಿಂದವತರಿಸಿ ಇಲ್ಲಿಗೆ ಬಂದಿರುವನೆಂಬುದನ್ನು ಬ್ರಹ್ಮನಿಷ್ಠನಾದ ಜನಕನು ಬಲ್ಲನಾದುದರಿಂದ ತನ್ನಲ್ಲಿ ಆತನಿಗೆ ತಾನಾಗಿಯೇ ದಯೆಯುಂಟಾಗುವಂತೆ ಮಾಡಿ, ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವಂತೆಯೂ ಈ ಶ್ಲೋಕದಲ್ಲಿ ಅಭಿಪ್ರಾಯವು ಸೂಚಿತವಾಗುವುದು. ಹೇಗೆಂದರೆ (ಇಯಂ ಸೀತಾ) ಎಲೈ ರಾಮನೇ! ಇವಳು ಎಲ್ಲಿಯೋ ಅಕಸ್ಮಾತ್ತಾಗಿ ನನ್ನ ನೇಗಿಲಿಗೆ ಸಿಕ್ಕಿದವಳು. ಹೆತ್ತ ತಂದೆ ತಾಯಿಗಳನ್ನೇ ಕಾಣದೆ, ಎಲ್ಲಿಯೋ ಕಂಡವರ ಮನೆಯಲ್ಲಿ ಬೆಳೆದ ಈ ಹೆಣ್ಣು ಕೂಸಿನಲ್ಲಿ ನೀನು ದಯೆಯನ್ನಿಡು. (ಮಮ ಸುತಾ) ನನ್ನ ಸಾಕುಮಗಳು. ನಾನು ಯಾವಾಗಲೂ ಬ್ರಹ್ಮನಿಷ್ಠನಾದುದರಿಂದ ಈ ಮಗುವಿನ ಪೋಷಣೆಗೆ ಅಷ್ಟಾಗಿ ಗಮನಿಸುವುದಕ್ಕವಕಾಶವಿಲ್ಲದೆ, ಕಷ್ಟದಿಂದಲೇ ಬೆಳೆಸಿದ ಕೂಸೆಂದು ಭಾವವು. (ಸಹಧರ್ಮಚರೀ ತವ) ಹೀಗೆ ತಂದೆತಾಯಿಗಳಿಲ್ಲದೆ ಕಂಡವರ ಮನೆಯಲ್ಲಿ ಬಹುಕಷ್ಟದಿಂದ ಬೆಳೆದ ಕೂಸಾದುದರಿಂದ ವಿಧೇಯತ್ವವೆಂಬ ಗುಣವು ಈಕೆಯಲ್ಲಿ ಚೆನ್ನಾಗಿ ಬೇರೂರಿರುವುದು. ರಾಜೋಪಭೋಗ

ಪೂರ್ವಕವಾಗಿ ರಾಮನ ಹಸ್ತದಲ್ಲಿ ದಾನಜಲವನ್ನು ಬಿಟ್ಟನು. ಆಗ ದೇವತೆ

ಗಳಿಂದಲೇ ಬೆಳೆದ ರಾಜಕುಮಾರಿಯರಂತಲ್ಲದೆ, ಕಷ್ಟಸಹಿಷ್ಣುವಾಗಿ ಪತಿಯ ಮನೋಧರ್ಮವನ್ನನುಸರಿಸಿ ನಡೆಯತಕ್ಕವಳು. (ಭದ್ರಂ ತೇ) ಇಂತವರನ್ನು ಉದ್ಧರಿಸುವುದರಿಂದ ಬಹಳ ಶ್ರೇಯಸ್ಸುಂಟು. (ಪಾಣಿಂ ಗೃಹ್ಣೀಷ್ವ ಪಾಣಿನಾ) ಈಕೆಯನ್ನು ಕೈಗೊಟ್ಟು ಉದ್ಧರಿಸೆಂದೂ ಭಾವವು.

ಈ ಅರ್ಥಗಳೇ ಅಲ್ಲದೆ ತನಿಶ್ಲೋಕಿಯಲ್ಲಿ ಇನ್ನೂ ಕೆಲವು ವಿಶೇಷಾರ್ಥ ಗಳು ನಿರೂಪಿಸಲ್ಪಟ್ಟಿರುವುವು. ಹೇಗೆಂದರೆ (ಇಯಂ ಸೀತಾ) ಇದೋ ಇಲ್ಲಿ ರೂಪಲಾವಣ್ಯಾದಿಗಳಿಂದ ಶೋಭಿಸುತ್ತಿರುವ ಈಕೆಯು ಭೂಮಿಯಲ್ಲಿ ಹುಟ್ಟಿ ದವಳು. ಸುವರ್ಣರೇಖೆಯು ಭೂಮಿಯಲ್ಲಿಯೇ ಹುಟ್ಟುವುದಾದುದರಿಂದ 'ಹಿರಣ್ಯವರ್ಣಾಂ ಹರಿಣೀಂ' ಎಂಬ ಉಪನಿಷದ್ವಾಕ್ಯಾನುಸಾರವಾಗಿ, ಲಕ್ಷ್ಮೀ ಸ್ವರೂಪೆಯಾದ ಈಕೆಯೂ ಭೂಮಿಯಲ್ಲಿಯೇ ಹುಟ್ಟಿದವಳೆಂದು ಭಾವವು. (ಪಾಣಿಂ ಗೃಹ್ಣೀಷ್ವ ಪಾಣಿನಾ) ಇನ್ನು ಮುಂದೆ ನೀನು ಈಕೆಯೊಡನೆ ಪ್ರಣಯಕಲಹಾದಿಗಳಲ್ಲಿ ಅವಳ ಕಾಲನ್ನೇ ಹಿಡಿಯಬೇಕಾದ ಸಂಭವವು ಬರಬಹುದು! ಪ್ರಕೃತದಲ್ಲಿ ಅಂತಹ ಸಂದರ್ಭಗಳೊಂದೂ ಇಲ್ಲವಾದುದರಿಂದ, ಸಂಕೋಚಪಡದೆ ಇವಳ ಕೈಯನ್ನು ಹಿಡಿಯೆಂದು ಭಾವವು. ಮತ್ತು (ಇಯಂ) ಎಂದರೆ ಇದೋ! ಇಲ್ಲಿರುವಳೆಂದರ್ಥವು. ಇದರಿಂದ ಈ ಸ್ತ್ರೀವ್ಯಕ್ತಿಯು ನಿನ್ನನ್ನು ಅಗಲದಿದ್ದಾಗ ಮಾತ್ರ ತಾನಿದ್ದ ಹಾಗೆಯೇ ಹೊರತು, ನೀನಿಲ್ಲದ ಕಾಲದಲ್ಲಿ ಇದ್ದರೂ ಇಲ್ಲದಂತೆಯೇ ಭಾವವು. "ಆರ್ತಾರ್ತೇ ಮುದಿತೇ ಹೃಷ್ಟಾ ಪ್ರೋಷಿತೇ ಮಲಿನಾ ಕೃಶಾ। ಮೃತೇ ಮ್ರಿಯೇತ ಯಾ ನಾರೀ ಸಾ ಸ್ತ್ರೀ ಜ್ಞೇಯಾ ಪತಿವ್ರತಾ" ಎಂಬಂತೆ ಗಂಡನು ದುಃಖಿಸು ವಾಗ ತಾನೂ ದುಃಖಿಸುವುದು. ಆತನು ಸಂತೋಷಿಸುವಾಗ ತಾನೂ ಸಂತೋಷಿಸುವುದು. ಆತನ ವಿಯೋಗಕಾಲದಲ್ಲಿ ತಾನೂ ಮನೋವ್ಯಥೆ ಯಿಂದ ಕೃಶಿಸಿಹೋಗುವುದು. ಪತಿಯ ಮರಣದಲ್ಲಿ ತಾನೂ ಮರಣ ಹೊಂದುವುದು. ಇವೆಲ್ಲವೂ ಪತಿವ್ರತಾ ಸ್ತ್ರೀಯರ ಲಕ್ಷಣವಾದುದರಿಂದ ಈಗ ನಿನ್ನ ಸಾನ್ನಿಧ್ಯದಿಂದಲೇ ಈಕೆಯು ತಾನಿರುವಹಾಗೆ ಎಣಿಸಿಕೊಂಡಿರು ವಳು. (ಸೀತಾ) ಭೂಮಿಯಲ್ಲಿ ಹುಟ್ಟಿದವಳು ಎಂಬುದರಿಂದ "ಮಾತರ- ಮಂಗನಾಃ" 'ಹೆಣ್ಣುಮಕ್ಕಳು ತಾಯಿಯನ್ನು ಹೋಲುವರು' ಎಂಬ ಲೋಕ ವಾರ್ತೆಯಂತೆ ಭೂಮಿಯಲ್ಲಿರುವ ಕ್ಷಮಾದಿಗುಣಗಳೆಲ್ಲವೂ ಈಕೆಯಲ್ಲಿರುವು ವೆಂದು ಭಾವವು. (ಪಾಣಿಂ ಗೃಹ್ಣೀಷ್ವ ಪಾಣಿನಾ) ಈ ಸೀತೆಯು ಏನೂ

*

ಗಳೂ, ಋಷಿಗಳೂ "ಭಲೆ! ಭಲೆ!" ಎಂದು ಸಾಧುವಾದಗಳನ್ನು ಮಾಡಿದರು. ದೇವದುಂದುಭಿಯು ಧ್ವನಿಮಾಡಿತು. ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು. ಹೀಗೆ ಮಂತ್ರಪೂರ್ವಕವಾಗಿ ದಾನಜಲವನ್ನು ಬಿಟ್ಟು ಸೀತೆಯನ್ನು ರಾಮನಿಗೆ ಧಾರೆಯೆರೆದು ಕೊಟ್ಟಮೇಲೆ, ಜನಕನು ಪರಮಸಂತೋಷದಿಂದ ಉಬ್ಬಿದವನಾಗಿ, ಲಕ್ಷ್ಮಣನ ಕಡೆಗೆ ತಿರುಗಿ, [1]"ವತ್ಸಲಕ್ಷ್ಮಣಾ! ಇಲ್ಲಿ ಬಾ! ನಿನಗೆ ಮಂಗಳವಾಗಲಿ! ಊರ್ಮಿಳೆಯನ್ನು ನಿನಗೆ ಕೊಡುವುದಾಗಿ ನಿಶ್ಚಯಿಸಿರುವೆನು! ಕೈಹಿಡಿದು ಇವಳನ್ನು ಪರಿಗ್ರಹಿಸು! ಹೊತ್ತು ಮೀರುವುದು!" ಎಂದನು. ಆಮೇಲೆ ಭರತನ ಕಡೆಗೆ ತಿರುಗಿ, "ಎಲೈ ರಘುವಂಶೋತ್ತಮನೆ! ನೀನು ಈ ಮಾಂಡವಿಯ ಕೈಯನ್ನು ಹಿಡಿದು ಪರಿಗ್ರಹಿಸು!" ಎಂದು ಹೇಳಿ, ಶತ್ರುಘ್ನನನ್ನು ನೋಡಿ, "ಎಲೈ ಶತ್ರುಘ್ನನೆ! ನೀನು ಈ ಶ್ರುತಕೀರ್ತಿಯ ಪಾಣಿಗ್ರಹಣವನ್ನು ಮಾಡು!" ಎಂದನು. ಆಮೇಲೆ ಆ ರಾಜಕುಮಾರರೆಲ್ಲರನ್ನೂ ಕುರಿತು, "ಎಲೈ ಕುಮಾರರೆ! ನೀವೆಲ್ಲರೂ ಬಹಳ ಸೌಮ್ಯಸ್ವರೂಪವುಳ್ಳವರು! ಸಚ್ಚರಿತ್ರವೇ ವ್ರತವಾಗಿ ಉಳ್ಳವರು! ಆದುದರಿಂದ ನಮ್ಮ ಕನ್ಯೆಯರೇ ನಿಮಗೆ ಅನುರೂಪರಾದ ಪತ್ನಿಗಳು! ನೀವೆಲ್ಲರೂ ಏಕಕಾಲದಲ್ಲಿ ಈ ಕನ್ನಿಕೆಯರ ಕೈಯನ್ನು ಹಿಡಿದು ಪ್ರತಿಗ್ರಹಿಸಿರಿ! ಕಾಲವಿಳಂಬವು ಕೂಡದು!" ಎಂದನು.

ಜನಕನ ಈ ಮಾತನ್ನು ಕೇಳಿ ವಸಿಷ್ಠನ ಅನುಮತಿಯನ್ನು ಪಡೆದು, ಈ ನಾಲ್ವರು ರಾಜಕುಮಾರರೂ ಕ್ರಮವಾಗಿ ನಾಲ್ಕು ಕನ್ಯೆಯರ ಕೈಯನ್ನು

ತಿಳಿಯದ ಬಾಲೆಯಾದುದರಿಂದ, ತಾನಾಗಿ ಕೈನೀಡಿ ನಿನ್ನ ಹಸ್ತಗ್ರಹಣವನ್ನು ಮಾಡಲಾರಳು. ಆದುದರಿಂದ ನೀನೇ ನಿನ್ನ ಕೈಯಿಂದ ಅವಳ ಕೈಯನ್ನು ಹಿಡಿಯುವವನಾಗು" ಎಂದು ಅಭಿಪ್ರಾಯವು.

1. ಜ್ಯೇಷ್ಠನಾದ ಭರತನಿರುವಾಗ ಕನಿಷ್ಠನಾದ ಲಕ್ಷ್ಮಣನಿಗೆ ಮೊದಲು ವಿವಾಹವನ್ನು ಮಾಡಿದುದು ಶಾಸ್ತ್ರನಿಷಿದ್ಧವೆಂದು ತೋರಬಹುದಾದರೂ "ಪಿತೃವ್ಯಪುತ್ರೇ ಸಾಪತ್ನೇ ಪರನಾರಿಸುತೇಷು ವಾ | ವಿವಾಹದಾನಯಜ್ಞಾದೌ ಪರಿವೇದೋ ನ ದೂಷಣಂ ||" ಎಂಬಂತೆ ಜ್ಯೇಷ್ಠನಿಗೇ ಮೊದಲು ವಿವಾಹ ನಡೆಯಬೇಕೆಂಬ ವಿಧಿಯು ಒಂದೇ ತಾಯಿ ಹೊಟ್ಟೆಯಲ್ಲಿ ಹುಟ್ಟಿದವರಿಗೇ ಹೊರತು ಸವತಿಯ ಮಕ್ಕಳಿಗಿಲ್ಲವು.

ಹಿಡಿದುಕೊಂಡರು. ಆಮೇಲೆ ತಮ್ಮ ತಮ್ಮ [1]ಪತ್ನಿಯರೊಡನೆ ಅಗ್ನಿ ವೇದಿಕೆಯನ್ನೂ, ಜನಕನನ್ನೂ, ಮಹಾತ್ಮರಾದ ಋಷಿಗಳನ್ನೂ ಪ್ರದಕ್ಷಿಣೆ ಮಾಡಿದರು. ಶಾಸ್ತ್ರೋಕ್ತವಾಗಿ ವಿವಾಹವೂ ನೆರವೇರಿತು. ಹೀಗೆ ಆ ವಧೂವರರು ಕೈಹಿಡಿದುಕೊಂಡು ಪ್ರದಕ್ಷಿಣೆ ಮಾಡುತ್ತಿರುವಾಗ ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು. ಗಂಧರ್ವಗಾನದೊಡನೆ ದೇವದುಂದುಭಿಯು ಮೊಳಗಿತು. ಅಪ್ಸರಸ್ತ್ರೀಯರು ನರ್ತನ ಮಾಡುತ್ತಿದ್ದರು. ಹೀಗೆ ರಘುವಂಶಶ್ರೇಷ್ಠರಾದ ಈ ರಾಜಕುಮಾರರ ವಿವಾಹೋತ್ಸವವು ಅತ್ಯದ್ಭುತವಾಗಿ ಜರುಗಿತು. ಮಂಗಳವಾದ್ಯಗಳೊಡನೆ ಮಹಾತೇಜಸ್ವಿಗಳಾದ ಈ ನಾಲ್ವರು ರಾಜಕುಮಾರರೂ [2]ಮೂರಾವರ್ತಿ ತಮ್ಮ ಅಗ್ನಿಯನ್ನು ಪ್ರದಕ್ಷಿಣೆ ಮಾಡಿ ತಮ್ಮ ತಮ್ಮ ಪತ್ನಿಯರನ್ನು ಪ್ರತಿಗ್ರಹಿಸಿ, ಸಪತ್ನೀಕರಾಗಿ ಬಿಡಾರಕ್ಕೆ ಹೊರಟರು. ದಶರಥನೂ ಕೂಡ ಈ ಮಹೋತ್ಸವವನ್ನು ಕಣ್ಣಾರೆ ನೋಡಿ, ಋಷಿಗಳೊಡನೆಯೂ, ಬಂಧುಗಳೊಡನೆಯೂ ಸೇರಿ ಆನಂದಿಸುತ್ತಾ, ಅವರನ್ನು ಹಿಂಬಾಲಿಸಿ ಬರುತ್ತಿದ್ದನು.

ಇಲ್ಲಿಗೆ ಎಪ್ಪತ್ತಮೂರನೆಯ ಸರ್ಗವು.

---

1. "ಸಪತ್ನೀಕರಾಗಿ" ಎಂದಿರುವುದರಿಂದ ಆ ನಾಲ್ವರಿಗೂ ಧಾರೆಯೆರೆಯಿತೆಂದೇ ಊಹಿಸಬೇಕು. ಜನಕನು ಜ್ಯೇಷ್ಠನಾದುದರಿಂದ ಮಾಂಡವೀ ಶ್ರುತಕೀರ್ತಿಯರ ವಿಷಯದಲ್ಲಿ ಅನುಜ್ಞೆಯನ್ನು ಮಾತ್ರವೇ ಕೊಟ್ಟನೇ ಹೊರತು, ಅವರನ್ನು ಧಾರೆಯೆರೆದು ಕೊಟ್ಟವನು ಕುಶಧ್ವಜನು.

2. ಮೊದಲು ರಾಮಾದಿಗಳ ಅಭ್ಯುದಯಕ್ಕಾಗಿ ವಸಿಷ್ಠನು ಹೋಮ ಮಾಡಿದಮೇಲೆ ಆ ವೇದಿಕಾಗ್ನಿಯನ್ನೂ, ವಸಿಷ್ಠಾದಿಮಹರ್ಷಿಗಳನ್ನೂ, ಜನಕನನ್ನೂ ಬ್ರಾಹ್ಮಣರನ್ನೂ ರಾಮಾದಿಗಳು ಪ್ರದಕ್ಷಿಣೆ ನಮಸ್ಕಾರಗಳಿಂದ ಪೂಜಿಸಿ ಬಂದು, ಆಮೇಲೆ ತಮ್ಮ ಸೂತ್ರಾನುಸಾರವಾಗಿ ಒಬ್ಬೊಬ್ಬರೂ ಬೇರೆ ಬೇರೆ ವೇದಿಕೆಗಳನ್ನು ಕಲ್ಪಿಸಿ ಅಗ್ನಿಪ್ರತಿಷ್ಠೆಮಾಡಿ, ತಾವೂ ವಿವಾಹ ಹೋಮವನ್ನು ಮುಗಿಸಿದಮೇಲೆ ಲಾಜಹೋಮಕ್ಕಾಗಿ ಪುನಃ ಮೂರಾವರ್ತಿ ತಮ್ಮ ಅಗ್ನಿಯನ್ನು ಪ್ರದಕ್ಷಿಣೆ ಮಾಡಿದರೆಂದು ಗ್ರಹಿಸಬೇಕು.

ಪರಶುರಾಮನ ದರ್ಶನವು.

ಆ ರಾತ್ರಿಯು ಕಳೆದು ಬೆಳಗಾದ ಕೂಡಲೇ ವಿಶ್ವಾಮಿತ್ರಮಹರ್ಷಿಯು ದಶರಥನ ಮತ್ತು ಜನಕನ ಅನುಮತಿಯನ್ನು ಪಡೆದು, ರಾಮಲಕ್ಷ್ಮಣಾದಿಗಳಿಗೆ ಆಶೀರ್ವಾದವನ್ನು ಮಾಡಿ, ತಾನು ಮೊದಲು ಇರುತ್ತಿದ್ದ ಹಿಮವತ್ಪರ್ವತದ ತಪ್ಪಲಿಗೆ ಹೊರಟುಹೋದನು. ದಶರಥನೂ ಕೂಡ ಇತ್ತಲಾಗಿ ಜನಕನ ಅನುಮತಿಯನ್ನು ಪಡೆದು, ತನ್ನ ಅಯೋಧ್ಯೆಗೆ ಹೊರಡಲು, ಆತನನ್ನು ದಾರಿಕಳುಹಿಸುವುದಕ್ಕಾಗಿ ಜನಕನು ಸ್ವಲ್ಪ ದೂರ ಹಿಂಬಾಲಿಸಿಬಂದನು. ತನ್ನ ಹೆಣ್ಣು ಮಕ್ಕಳಿಗೆ ಬಳುವಳಿಯಾಗಿ ಅನೇಕ ವಸ್ತುಗಳನ್ನೂ, ದ್ರವ್ಯಗಳನ್ನೂ, ಅನೇಕ ಸಹಸ್ರ ಗೋವುಗಳನ್ನೂ, ವಿಚಿತ್ರವಾದ ಶಾಲುವೆಗಳನ್ನೂ ಶ್ರೇಷ್ಠವಾದ ಕಂಬಳಿಗಳನ್ನೂ, ಉತ್ಕೃಷ್ಟವಾದ ಪಟ್ಟೆಮಡಿಗಳನ್ನೂ ಸರ್ವಾಭರಣಗಳಿಂದ ಅಲಂಕರಿಸಲ್ಪಟ್ಟ ದಿವ್ಯರೂಪವುಳ್ಳ ರಥ ಗಜ ತುರಗ ಪದಾತಿಗಳೆಂಬ ಚತುರಂಗಸೈನ್ಯಗಳನ್ನೂ, ದಾಸ ದಾಸೀಜನರನ್ನೂ ಮುತ್ತು, ಹವಳ ಮುಂತಾದ ರತ್ನಗಳನ್ನೂ ಕೊಟ್ಟುಕಳುಹಿಸಿದನು. ಹೀಗೆ ಅತ್ಯಂತ ಸಂತೋಷದಿಂದ ಅಸಂಖ್ಯಾತಗಳಾದ ವಸ್ತುಗಳನ್ನು ಬಳುವಳಿಯಾಗಿ ಕೊಟ್ಟು, ಆ ದಶರಥನ ಅನುಮತಿಯನ್ನು ಪಡೆದು ಹಿಂತಿರುಗಿ ಮಿಥಿಲೆಗೆ ಬಂದುಬಿಟ್ಟನು.

ಇತ್ತಲಾಗಿ ದಶರಥನು ಮಹಾತ್ಮರಾದ ತನ್ನ ಪುತ್ರರೊಡಗೂಡಿ ವಸಿಷ್ಠಾದಿಋಷಿಗಳನ್ನು ಮುಂದಿಟ್ಟುಕೊಂಡು, ಆ ಚತುರಂಗ ಸೈನ್ಯಗಳೊಡನೆ ಬಹಳ ಅಟ್ಟಹಾಸದಿಂದ ಬರುತ್ತಿರುವಾಗ, ದಾರಿಯಲ್ಲಿ ಕೆಲವು ದುಶ್ಶಕುನಗಳು ಕಂಡುಬಂದುವು. ಅಲ್ಲಲ್ಲಿ ಪಕ್ಷಿಗಳು ಭಯಂಕರವಾದ ಧ್ವನಿಯಿಂದ ಕೂಗಲಾರಂಭಿಸಿದುವು. ಆದರೆ ಭೂಮಿಯಲ್ಲಿರತಕ್ಕ ಮೃಗಗಳು ಮಾತ್ರ ಈತನನ್ನು ಪ ದಕ್ಷಿಣವಾಗಿ ಬಂದು ಶಕುನವನ್ನು ಸೂಚಿಸುತ್ತಿದ್ದುವು. ಇವೆರಡನ್ನೂ ನೋಡಿ ದಶರಥನು ಆಶ್ಚರ್ಯವನ್ನೂ, ಭಯವನ್ನೂ ಹೊಂದಿದವನಾಗಿ ವಸಿಷ್ಠರನ್ನು ನೋಡಿ “ ಎಲೈ ಮಹಾತ್ಮರೆ! ಆಕಾಶದಲ್ಲಿ ಪಕ್ಷಿಗಳು ಭಯಂಕರವಾಗಿ ಕೂಗುತ್ತಾ, ನಮಗೆ ಅಮಂಗಳವನ್ನು ಸೂಚಿಸುತ್ತಿರುವುವು. ನೆಲದ ಮೇಲಿರತಕ್ಕ ಮೃಗಜಾತಿಗಳೆಲ್ಲವೂ ನಮಗೆ ಶುಭವನ್ನು ಸೂಚಿಸುವಂತೆ ಪ್ರದಕ್ಷಿಣವಾಗಿ ಬರುತ್ತಿರುವುವು. ಏನಾದರೇನು? ಇವುಗಳನ್ನು ನೋಡಿ ನನ್ನ ಎದೆಯು ನಡುಗುತ್ತಿರುವುದು. ಮನಸ್ಸು ಕಳವಳಿಸುತ್ತಿರುವುದು. ಇದಕ್ಕೆ

ಕಾರಣವೇನು ?" ಎಂದು ಕೇಳಿದನು. ಅದಕ್ಕಾ ವಸಿಷ್ಠನು, ಸಮಾಧಾನ ವಾಕ್ಯದಿಂದ ಆ ರಾಜನನ್ನು ಕುರಿತು "ಎಲೈ ದಶರಥನೆ! ಹೆದರಬೇಡ! ಇದರ ಫಲವನ್ನು ಕೇಳು. ಈ ಪಕ್ಷಿಗಳ ಕೂಗಿನಿಂದ ನಮಗೆ ಮುಂದೆ ಯಾವುದೋ ಒಂದು ಭಯವುಂಟಾಗಬಹುದಾಗಿದ್ದರೂ, ಈ ಮೃಗಗಳು ಶುಭಸೂಚಕ ಗಳಾಗಿರುವುದರಿಂದ, ಆ ದುಶ್ಶಕುನಗಳನ್ನು ಅಡಗಿಸುವುವು. ಆದುದರಿಂದ ನಮಗೆ ಆ ಭಯವು ಬಹುಕಾಲದವರೆಗೆ ನಿಲ್ಲಲಾರದು, ಕಳವಳವನ್ನು ಬಿಡು" ಎಂದನು.

ಹೀಗೆ ಒಬ್ಬರಿಗೊಬ್ಬರು ಮಾತಾಡುತ್ತಿರುವಾಗಲೇ ಭಯಂಕರ ವಾದ ಬಿರುಗಾಳಿಯೊಂದು ಬೀಸಲಾರಂಭಿಸಿತು. ಅದರ ವೇಗದಿಂದ ಭೂಮಿ ಯೆಲ್ಲವೂ ನಡುಗಿತು. ಫಲಭರಿತಗಳಾದ ದೊಡ್ಡ ದೊಡ್ಡ ಮರಗಳೆಲ್ಲವೂ ಉರುಳುತ್ತಿದ್ದುವು. ಆಕಾಶದಲ್ಲಿ ಮೇಘಗಳು ಸೂರ್ಯನನ್ನು ಮರೆಸಿದುವು. ನಾಲ್ಕು ಕಡೆಗಳಲ್ಲಿಯೂ ಕತ್ತಲೆಯು ವ್ಯಾಪಿಸಿತು. ಆ ಸಮಸ್ತ ಸೈನ್ಯಕ್ಕೂ ಕಣ್ಣು ಕಾಣಿಸದಂತೆ ದೊಡ್ಡ ಧೂಳು ನಾಲ್ಕು ಕಡೆಗಳನ್ನೂ ಮುಚ್ಚಿತು. ವಸಿಷ್ಠಾದಿ ಋಷಿಗಳೂ, ದಶರಥನೂ, ಆತನ ನಾಲ್ವರು ಮಕ್ಕಳೂ ಹೊರತು ಉಳಿದ ಸಮಸ್ತಜನರೂ ಪ್ರಜ್ಞೆತಪ್ಪಿದವರಾದರು. ಇಂತಹ ಘೋರವಾದ ಮಹಾಂಧಕಾರದಲ್ಲಿ ಮೋಹಭಸ್ಮವನ್ನು ಎರಚಿದಂತೆ ಸಮಸ್ತ ಸೈನ್ಯವೂ ಧೂಳಿನಿಂದ ಮುಂಗಾಣದೆ ಇರುತ್ತಿರುವಾಗಲೇ, ದಶರಥನು ಭೃಗುವಂಶದಲ್ಲಿ ಹುಟ್ಟಿದ ಜಮದಗ್ನಿ ಪುತ್ರನಾದ ಪರಶುರಾಮನು ಜಡೆಗಳನ್ನು ಧರಿಸಿ ಭಯಂಕರಸ್ವರೂಪದಿಂದ ಬಂದು ತನ್ನ ಮುಂದೆ ನಿಂತಿರುವುದನ್ನು ಕಂಡನು. ಈತನು ಮೊದಲೇ ಕ್ಷತ್ರಿಯವಂಶವನ್ನೆಲ್ಲಾ ನಿರ್ಮೂಲಮಾಡತಕ್ಕವನು. ಕೈಲಾಸಪರ್ವತದಂತೆ ದುರ್ಧರ್ಷನಾದ ಈತನನ್ನು ಯಾರಿಂದಲೂ ಇದರಿಸು ವುದು ಸಾಧ್ಯವಲ್ಲ. ಕಾಲಾಗ್ನಿಯಂತೆ ಜ್ವಲಿಸುತ್ತಿರುವ ಈತನ ತೇಜಸ್ಸನ್ನು ನೋಡಿದಾಗಲೇ ಜನಗಳ ಕಣ್ಣು ಕೋರೈಸಿ ಹೋಗುವುದು. ಹೀಗೆ ರೌದ್ರಾಕಾರ ವುಳ್ಳ ಈತನ ಹೆಗಲಿನಲ್ಲಿ ಅತಿತೀಕ್ಷ್ಣವಾದ ಕೊಡಲಿಯೂ, ಒಂದು ಕೈಯಲ್ಲಿ ಮಿಂಚಿನಂತೆ ಹೊಳೆಯುತ್ತಿರುವ ಬಿಲ್ಲೂ, ಮತ್ತೊಂದು ಕೈಯಲ್ಲಿ ತೀಕ್ಷ್ಣ ವಾದ ಬಾಣಗಳೂ ಧರಿಸಲ್ಪಟ್ಟಿದ್ದುವು. ಇವೆಲ್ಲವನ್ನೂ ನೋಡಿದರೆ, ತ್ರಿಪುರಾ ಸುರನನ್ನು ಕೊಲ್ಲುವುದಕ್ಕಾಗಿ ಬರುತ್ತಿರುವ ರುದ್ರನೋ ಎಂಬಂತೆ ಕಾಣಿಸು ತ್ತಿದ್ದನು. ಹೀಗೆ ಅಗ್ನಿಯಂತೆ ಉರಿಯುತ್ತಿದ್ದ ರೌದ್ರಾಕಾರವುಳ್ಳ ಆ

ಪರಶುರಾಮನನ್ನು ನೋಡಿ ಅಲ್ಲಿ ವ್ರತನಿಷ್ಠರಾದ ವಸಿಷ್ಠಾದಿಋಷಿಗಳೆಲ್ಲರೂ ಒಂದುಗೂಡಿ ಒಬ್ಬರಿಗೊಬ್ಬರು ಏಕಾಂತದಲ್ಲಿ “ಆಹ! ಇದೇನು? ತನ್ನ ತಂದೆಯನ್ನು ಕ್ಷತ್ರಿಯನು ಕೊಂದನೆಂಬ ಕೋಪಕ್ಕಾಗಿ ಈತನು ಆ ವಂಶವನ್ನೇ ನಾಶಮಾಡಬೇಕೆಂದೆಣಿಸಿ, ಅನೇಕ ಕ್ಷತ್ರಿಯರನ್ನು ಕೊಂದುಹಾಕಿದನು. ಆಗಲೇ ಈತನ ಕೋಪವೆಲ್ಲವೂ ಅಡಗಿಹೋಗಿರಬೇಕಲ್ಲವೆ? ಇನ್ನೂ ಆ ಉದ್ದೇಶವು ಈತನಿಗಿರುವಂತೆ ತೋರಲಿಲ್ಲ. ಅದಕ್ಕೆ ಬೇರೆ ಕಾರಣವೂ ಇಲ್ಲ! ಈತನು ಏನೋ ಮಾರ್ಗವಶದಿಂದ ಇಲ್ಲಿಗೆ ಬಂದಿರಬಹುದು” ಎಂದು ತಮ್ಮೊಳಗೆ ತಾವು ನಿಶ್ಚಯಿಸಿಕೊಂಡು, ಮೃದುವಾದ ಮಾತಿನಿಂದ “ಎಲೈ ರಾಮನೆ!” ಎಂದು ಕರೆಯುತ್ತಾ ಮುಂದೆ ಹೋದರು. ಈ ಸತ್ಕಾರಗಳನ್ನೆಲ್ಲಾ ಆತನು ಪ್ರೀತಿಪೂರ್ವಕವಾಗಿಯೇ ಸ್ವೀಕರಿಸಿ, ಅಲ್ಲಿಂದ ನೆಟ್ಟಗೆ ದಶರಥಪುತ್ರನಾದ ರಾಮನಿದ್ದ ಕಡೆಗೆ ಬಂದು, ಆತನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವನು.

ಇಲ್ಲಿಗೆ ಎಪ್ಪತ್ತನಾಲ್ಕನೆಯ ಸರ್ಗವು.

ಪರಶುರಾಮನು ರಾಮನನ್ನು ಇದಿರಿಸಿದುದು

“ಎಲೈ ದಶರಥಪುತ್ರನೇ! ನಿನ್ನ ವೀರ್ಯವು ಅದ್ಭುತವಾದುದೆಂದು ನಾನು ಕೇಳಿರುವೆನು. ನೀನು ರುದ್ರಧನುಸ್ಸನ್ನು ಲೀಲಾಮಾತ್ರದಿಂದಲೇ ಮುರಿದುಹಾಕಿದ ವೃತ್ತಾಂತವೂ ನನಗೆ ತಿಳಿಯಿತು. ನಿನ್ನ ಈ ಕಾರ್ಯವು ನನಗೆ ಅತ್ಯಾಶ್ಚರ್ಯವನ್ನುಂಟುಮಾಡಿತು. ನಿನ್ನಂತವರು ಆ ಮಹಾಧನುಸ್ಸನ್ನು ಮುರಿಯಬಲ್ಲರೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ. ಈ ಆಶ್ಚರ್ಯವೃತ್ತಾಂತವನ್ನು ಕೇಳಿ ನಾನು ನಿನ್ನನ್ನು ನೋಡಬೇಕೆಂದೇ ಬಂದಿರುವೆನು. ಇದೋ! ನನ್ನಲ್ಲಿ ಮತ್ತೊಂದು ಧನುಸ್ಸಿರುವುದು ನೋಡು? ಇದು ಅದಕ್ಕಿಂತಲೂ ಮೇಲಾದುದು. ಬಹಳ ಭಯಂಕರವಾದುದು. ಇದನ್ನು ನನ್ನ ತಂದೆಯು ನನಗೆ ಅನುಗ್ರಹಿಸಿಕೊಟ್ಟಿರುವನು. ಎಲೈ ರಾಮನೆ! ಎಲ್ಲಿ? ಈ ಧನುಸ್ಸನ್ನು ಎಳೆದು ಬಾಣಸಂಧಾನವನ್ನು ಮಾಡಿ ನಿನ್ನ ಶಕ್ತಿಯನ್ನು ತೋರಿಸು. ನೋಡುವೆನು! ಆಗ ನಿನ್ನ ಬಲವು ಇಷ್ಟೆಂದು ನನಗೆ ಚೆನ್ನಾಗಿ ಗೊತ್ತಾಗುವುದು. ಆಮೇಲೆ ನಾನು ನಿನ್ನೊಡನೆ ದ್ವಂದ್ವಯುದ್ಧವನ್ನೂ

ಮಾಡಬೇಕೆಂದಿರುವೆನು. ನಿನ್ನನ್ನು ಪರೀಕ್ಷಿಸುವುದಕ್ಕಾಗಿಯೇ ನಾನು ಈ ಧನುಸ್ಸನ್ನು ಇಲ್ಲಿಗೆ ತಂದೆನು" ಎಂದನು.

ಅದನ್ನು ಕೇಳಿ ದಶರಥನು ಬಹಳ ಭಯದಿಂದಲೂ, ದುಃಖದಿಂದಲೂ ಕಂದಿದ ಮುಖವುಳ್ಳವನಾಗಿ ಪರಶುರಾಮನಿಗೆ ಕೈಮುಗಿದು ನಿಂತು, "ಎಲೈ ಮಹಾತ್ಮನೆ! ನೀನು ಕ್ಷತ್ರಿಯರಲ್ಲಿ ಮೊದಲಿದ್ದ ಕೋಪವೆಲ್ಲವನ್ನೂ ಬಿಟ್ಟು ಈಗ ಬಹಳ ಶಾಂತಸ್ವಭಾವವುಳ್ಳವನಾಗಿರುವೆಯೆಂದು ಕೇಳಿರುವನು. ಮತ್ತು ನೀನು ಬ್ರಾಹ್ಮಣನು. ಅದರಲ್ಲಿಯೂ ನಿನಗೆ ಮಹಾತಪಸ್ವಿಯೆಂಬ ಖ್ಯಾತಿಯೂ ಉಂಟು. ನಿನ್ನಂತಿರುವ ಬ್ರಾಹ್ಮಣರಿಗೆ ಶಾಂತಿಯೆಂಬುದೇ ಸ್ವರೂಪವಲ್ಲವೆ? ಆದುದರಿಂದ ಧರ್ಮಸೂಕ್ಷ್ಮಗಳೆಲ್ಲವನ್ನೂ ಬಲ್ಲ ನೀನು ಆ ತಾಳ್ಮೆಯನ್ನೇ ವಹಿಸಿ, ಈ ಚಿಕ್ಕಮಕ್ಕಳಾದ ನನ್ನ ಕುಮಾರರಿಗೆ ಅಭಯವನ್ನು ಕೊಡಬೇಕು. ಮಹಾವ್ರತನಿಷ್ಠರಾದ ಭೃಗುವಂಶದವರ ಸಂತತಿಯಲ್ಲಿ ನೀನು ಹುಟ್ಟಿದವನಲ್ಲವೆ? ನೀನು ಇನ್ನುಮೇಲೆ ಶಸ್ತ್ರಪರಿಗ್ರಹವನ್ನು ಮಾಡುವುದಿಲ್ಲವೆಂದು ಇಂದ್ರನಿಗೆ ಶಪಥಮಾಡಿಕೊಟ್ಟು ಆ ಶಸ್ತ್ರಗಳೆಲ್ಲವನ್ನೂ ಅವನಲ್ಲಿ ಇಟ್ಟುಬಿಟ್ಟಿಯಲ್ಲವೆ? ಹೀಗೆ ಶಾಂತಿಯನ್ನು ಹೊಂದಿದಮೇಲೆಯೂ ಧರ್ಮಪರನಾಗಿ, ಕಾಶ್ಯಪನೆಂಬ ಬ್ರಾಹ್ಮಣನಿಗೆ ನೀನು ಜಯಿಸಿದ ಭೂಮಿಯೆಲ್ಲವನ್ನೂ ದಾನಮಾಡಿಕೊಟ್ಟು ತಪೋವನಕ್ಕೆ ಹೋಗಿ ಮಹೇಂದ್ರ ಪರ್ವತದಲ್ಲಿ ತಪಸ್ಸು ಮಾಡುತ್ತಿದ್ದವನಲ್ಲವೆ? ಹೀಗಿರುವಾಗಲೂ ನಮ್ಮೆಲ್ಲರನ್ನೂ ನಿರ್ಮೂಲಮಾಡುವುದಕ್ಕಾಗಿ ಪುನಃ ನೀನು ಹಿಂತಿರುಗಿ ಬಂದಹಾಗಿದೆ. ಈ ರಾಮನೊಬ್ಬನನ್ನು ನೀನು ಕೊಂದೆಯಾದರೆ ನಾವೊಬ್ಬರೂ ಬದುಕಿರಲಾರೆವು" ಎಂದನು.

ಈ ಮಾತನ್ನು ಕಿವಿಗೆ ಹಾಕಿಕೊಳ್ಳದೆಯೇ ಪರಶುರಾಮನು ಆ ರಾಮನ ಕಡೆಗೆ ತಿರುಗಿ, "ವತ್ಸ ರಾಮನೇ! ಲೋಕಪ್ರಸಿದ್ಧವಾದ ಎರಡು ದಿವ್ಯ ಧನುಸ್ಸುಗಳುಂಟು. ಅವು ಬಹಳ ಬಲವುಳ್ಳವುಗಳು! ಸಾಕ್ಷಾದ್ವಿಶ್ವಕರ್ಮನಿಂದಲೇ ಮಾಡಲ್ಪಟ್ಟಿರುವುವು. ಅವುಗಳಲ್ಲಿ ಒಂದನ್ನು ದೇವತೆಗಳು ತ್ರಿಪುರಸಂಹಾರಕ್ಕಾಗಿ ಹೋಗುತ್ತಿದ್ದ ರುದ್ರನಿಗೆ ಕೊಟ್ಟರು. ಅದೇ ನೀನು ಜನಕರಾಜನ ಪಟ್ಟಣದಲ್ಲಿ ಮುರಿದುಹಾಕಿದ ಧನುಸ್ಸು! ಇದೋ ನನ್ನ ಕೈಯಲ್ಲಿರುವುದೇ ಆದರ ಜತೆಯ ಮತ್ತೊಂದು ಧನುಸ್ಸು. ಆ ಧನುಸ್ಸಿಗಿಂತಲೂ ಇದು ಬಹಳ ಬಲವುಳ್ಳುದು. ಇದನ್ನು ಯಾರೂ ಬಗ್ಗಿಸಲಾರರು. ಇದನ್ನು ಪೂರ್ವದಲ್ಲಿ

ದೇವತೆಗಳು ವಿಷ್ಣುವಿಗೆ ಕೊಟ್ಟರು. ಆದುದರಿಂದ ಅದು ಹೇಗೆ ರುದ್ರಧನುಸ್ಸೆನಿಸಿಕೊಂಡಿತೋ, ಹಾಗೆಯೇ ಇದೂ ವಿಷ್ಣುಧನುಸ್ಸೆನಿಸಿಕೊಂಡು ಬಹಳ ತೇಜಸ್ಸುಳ್ಳದಾಗಿರುವುದು. ಇವೆರಡರ ಬಲವೂ ಒಂದೇ ವಿಧವಾದುದು. ಹಿಂದೆ ದೇವತೆಗಳು ಚತುರ್ಮುಖ ಬ್ರಹ್ಮನ ಬಳಿಗೆ ಹೋಗಿ, [1]ಹರಿಹರರಲ್ಲಿ ಯಾರ ಶಕ್ತಿಯು ಹೆಚ್ಚೆಂಬುದನ್ನು ತಿಳಿಸಬೇಕೆಂದು ಕೇಳಿದರು. ಆಗ ಬ್ರಹ್ಮನು ಅವರಿಬ್ಬರ ಶಕ್ತಿಯ ತಾರತಮ್ಯವನ್ನೂ ದೇವತೆಗಳಿಗೆ ತಿಳಿಸಬೇಕೆಂದುದ್ದೇಶಿಸಿ, ವಿಷ್ಣುವಿಗೂ, ಶಿವನಿಗೂ [2]ವಿರೋಧವನ್ನು ಹುಟ್ಟಿಸಿದನು. ಈ ವಿರೋಧದಿಂದ ಅವರಿಬ್ಬರಿಗೂ ಘೋರವಾದ ಯುದ್ಧವು ನಡೆಯಿತು. ಅವರಿಬ್ಬರೂ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಹಟದಿಂದಲೇ ಕಾದುತ್ತಿದ್ದರು. ಆಗ ರುದ್ರನು ಭಯಂಕರವಾದ ತನ್ನ ಧನುಸ್ಸನ್ನೆತ್ತಿ ಆರ್ಭಟಿಸುತ್ತಿರಲು, ವಿಷ್ಣುವು ಒಂದಾವರ್ತಿ ಹುಂಕಾರ ಮಾಡಿದ ಮಾತ್ರಕ್ಕೆ ಆ ಧನುಸ್ಸಿನ ಶಕ್ತಿಯೆಲ್ಲವೂ ಅಡಗಿ ಹೋಯಿತು. ಮಹಾದೇವನಾದ ಆ ರುದ್ರನು ಸ್ತಂಭದಂತೆ ಅಲ್ಲಾಡದೆ ನಿಂತುಬಿಟ್ಟನು. ಆಗ ದೇವತೆಗಳೆಲ್ಲರೂ ಋಷಿಗಳೊಡನೆಯೂ, ಚಾರಣರೊಡನೆಯೂ ಬಂದು, ಆ ವಿಷ್ಣುಶಿವರಿಬ್ಬರನ್ನೂ ಕುರಿತು ಯುದ್ಧವನ್ನು ನಿಲ್ಲಿಸಬೇಕೆಂದು

---

1. ದೇವತೆಗಳು ಬ್ರಹ್ಮನನ್ನು ನೋಡಿ "ಮೊದಲು ವರಾಹಾದ್ಯವತಾರಗಳಿಂದ ಭೂಮಿಯನ್ನುದ್ಧರಿಸಿದುದೇ ಮೊದಲಾಗಿ, ಇತರ ದೇವತೆಗಳಿಗೆ ಅಸಾಧ್ಯ ಕಾರ್ಯಗಳನ್ನು ವಿಷ್ಣುವು ನಡೆಸಿದುದನ್ನು ನೋಡಿ, ಅವನಿಗಿಂತಲೂ ಮೇಲಾದ ದೇವತೆಗಳೇ ಇಲ್ಲವೆಂದು ನಾವು ತಿಳಿದಿದ್ದೆವು. ಈಗಲಾದರೋ ಶಿವನು ವಿಷ್ಣುವನ್ನು ಕೇವಲ ಬಾಣರೂಪವಾದ ಒಂದು ಸಾಧನವನ್ನಾಗಿ ಮಾಡಿಕೊಂಡು, ತಾನೇ ಮುಖ್ಯವಾಗಿ ನಿಂತು ತ್ರಿಪುರ ಸಂಹಾರವನ್ನು ಮಾಡಿದುದನ್ನು ನೋಡಿದರೆ, ಶಿವನೇ ವಿಷ್ಣುವಿಗಿಂತಲೂ ಅಧಿಕನೆಂದು ನಮಗೆ ತೋರಿರುವುದು. ಆದುದರಿಂದ ಇವರಿಬ್ಬರಲ್ಲಿ ಯಾರು ಹೆಚ್ಚೆಂಬುದನ್ನು ತಾವು ನಿರ್ಣಯಿಸಿ ಹೇಳಬೇಕು" ಎಂದು ಪ್ರಾರ್ಥಿಸಿದುದಾಗಿ ತಿಳಿಯಬೇಕು.

2. "ಧನುರ್ಧಾರಿಯಾಗಿ ನಿಂತು ಯುದ್ಧಮಾಡಿ, ತ್ರಿಪುರಾಸುರರನ್ನು ತಾನೇ ಕೊಂದುದರಿಂದ, ಆ ಜಯಕ್ಕೆ ನಾನೇ ಮುಖ್ಯ"ನೆಂದು ರುದ್ರನು ತನ್ನೊಡನೆ ಹೇಳಿಕೊಂಡುದಾಗಿ ವಿಷ್ಣುವಿಗೂ "ಬಾಣರೂಪವಾಗಿದ್ದ ನಾನೇ ಪ್ರಧಾನ"ನೆಂದು ವಿಷ್ಣುವು ತನ್ನಲ್ಲಿ ಬಂದು ಹೇಳಿಕೊಂಡುದುದಾಗಿ ರುದ್ರನಿಗೂ ಹೇಳಿ, ಬ್ರಹ್ಮನು ವಿರೋಧವನ್ನು ಹುಟ್ಟಿಸಿದನೆಂದೂ ತಿಳಿಯಬೇಕು.

ಪ್ರಾರ್ಥಿಸಿಕೊಂಡರು. ದೇವತೆಗಳ ಪ್ರಾರ್ಥನೆಯಮೇಲೆ ಅವರಿಬ್ಬರೂ ಆ ಯುದ್ಧವನ್ನು ಅಷ್ಟಕ್ಕೇ ನಿಲ್ಲಿಸಿದರು. ಹೀಗೆ ವಿಷ್ಣುವಿನ ಪರಾಕ್ರಮದಿಂದ ಶಿವಧನುಸ್ಸು ಭಂಗಹೊಂದಿದುದನ್ನು ನೋಡಿ, ದೇವತೆಗಳೆಲ್ಲರೂ ವಿಷ್ಣುವಿನ ಶಕ್ತಿಯೇ [1]ಹೆಚ್ಚೆಂದು ನಿರ್ಣಯಿಸಿದರು. ಮಹಾಯಶಸ್ವಿಯಾದ ರುದ್ರನು ತನಗುಂಟಾದ ಆ ಅವಮಾನಕ್ಕಾಗಿ ಕೋಪಗೊಂಡು ಆ ತನ್ನ ಧನುಸ್ಸನ್ನೂ, ಬಾಣವನ್ನೂ ವಿದೇಹದೇಶದಲ್ಲಿದ್ದ [2]ದೇವರಾತನೆಂಬ ರಾಜರ್ಷಿಯ ಕೈಗೆ

---

1. ದಕ್ಷಯಜ್ಞಕಾಲದಲ್ಲಿ ರುದ್ರನು ಆ ಶಿವಧನುಸ್ಸನ್ನೇ ಹಿಡಿದುದಾಗಿ ಹಿಂದೆ ಹೇಳಲ್ಪಟ್ಟಿರುವುದರಿಂದಲೂ, ಆ ಯಜ್ಞವಾದ ಕೂಡಲೇ ಶಿವನು ಆ ಧನುಸ್ಸನ್ನು ದೇವರಾತನಿಗೆ ಕೊಟ್ಟುದಾಗಿ ಹೇಳಲ್ಪಟ್ಟಿರುವುದರಿಂದಲೂ, ಆ ಯಜ್ಞಕಾಲದಲ್ಲಿಯೇ ವಿಷ್ಣು ಶಿವರಿಗೆ ವಿರೋಧವುಂಟಾದುದೆಂದೂ, ಈ ಮಧ್ಯಕಾಲದಲ್ಲಿ ಆ ಧನುಸ್ಸು ವಿಷ್ಣುವಿನಿಂದ ನಿಸ್ಸಾರವಾಗಿ ಮಾಡಲ್ಪಟ್ಟಿತೆಂದೂ ಊಹಿಸಬೇಕು.

2. ದಕ್ಷಯಜ್ಞಾನಂತರದಲ್ಲಿ ಶಿವನು ತನ್ನ ಧನುಸ್ಸನ್ನು ದೇವತೆಗಳ ವಶಕ್ಕೆ ಕೊಟ್ಟನೆಂದು ಹಿಂದೆ ಹೇಳಲ್ಪಟ್ಟಿರುವುದು. ದೇವರಾತನ ಕೈಯಲ್ಲಿಟ್ಟುದಾಗಿ ಇಲ್ಲಿ ಹೇಳಲ್ಪಟ್ಟಿರುವುದು. ವಿಶ್ವಾಮಿತ್ರಾಶ್ರಮದಲ್ಲಿ ಋಷಿಗಳು ರಾಮನಿಗೆ ಆ ಧನುಸ್ಸಿನ ಚರಿತ್ರವನ್ನು ಹೇಳುವಾಗ, ಆ ಧನುಸ್ಸನ್ನು ದೇವತೆಗಳು ಜನಕನಿಗೆ ಕೊಟ್ಟರೆಂದು ಹೇಳುವರು. ಮುಂದೆ ಸೀತೆಯು ಅನಸೂಯೆಯೊಡನೆ ಮಾತನಾಡಿದಾಗ ಈ ಧನುಸ್ಸು ವರುಣನಿಂದ ಜನಕನಿಗೆ ಕೊಡಲ್ಪಟ್ಟಿತೆಂದು ಹೇಳಿದೆ. ಇವೆಲ್ಲವೂ ಪರಸ್ಪರ ವಿರುದ್ಧಗಳಾಗಿ ಕಾಣಬಹುದಾದರೂ, ಇದರ ಸಾಮಂಜಸ್ಯವು ಹೇಗೆಂದರೆ— ದಕ್ಷಯಜ್ಞಾನಂತರದಲ್ಲಿ ರುದ್ರನು ಕೋಪದಿಂದ ತನ್ನ ಧನುಸ್ಸನ್ನು ದೇವತೆಗಳಿಗೆ ಕೊಟ್ಟುಬಿಡುವುದಾಗಿ ನಿಶ್ಚಯಿಸಿ ದೇವತೆಗಳನ್ನು ಕರೆದಾಗ, ದೇವತೆಗಳು ಇವನ ಕೋಪಕ್ಕೆ ಹೆದರಿ, ಇವನ ಸಮೀಪಕ್ಕೆ ಬಾರದೆ ದೇವರಾತನನ್ನು ತಮಗೆ ಪ್ರತಿನಿಧಿಯಾಗಿ ಕಳುಹಿಸಲು, ರುದ್ರನು ಧನುಸ್ಸನ್ನು ಆತನ ಕೈಯಲ್ಲಿಟ್ಟನು. ಇದರಿಂದ ಆ ಬಿಲ್ಲು ದೇವರಾತನಿಗೆ ಸ್ವಂತವಾಗಲಿಲ್ಲವೆಂದೂ, ಕೇವಲ ನ್ಯಾಸರೂಪವಾಗಿದ್ದಿತೆಂದೂ ಸ್ಪಷ್ಟವಾಗುವುದು. ಕೆಲವುಕಾಲದಮೇಲೆ ಆ ವಂಶದಲ್ಲಿ ಹುಟ್ಟಿದ ಜನಕನು ದೇವತೆಗಳನ್ನು ಯಜ್ಞದಿಂದ ಸಂತೋಷಪಡಿಸಿ ಆ ಧನುಸ್ಸನ್ನು ತನ್ನ ಸ್ವಂತಕ್ಕೆ ಕೊಡುವಂತೆ ಪ್ರಾರ್ಥಿಸಲು, ದೇವತೆಗಳೆಲ್ಲರೂ ಪ್ರಸನ್ನರಾಗಿ ವರುಣನ ಕೈಯಿಂದ ಜನಕನಿಗೆ ಆ ಬಿಲ್ಲನ್ನು ಕೊಡಿಸಿದರೆಂದು ಕಥಾಸಂದರ್ಭವನ್ನು

ಕೊಟ್ಟುಬಿಟ್ಟನು. ಇತ್ತಲಾಗಿ ಶತ್ರುನಾಶಕವಾದ ಈ ವಿಷ್ಣುಧನುಸ್ಸನ್ನು ಭೃಗುವಂಶೋತ್ಪನ್ನನಾದ ಋಚೀಕನೆಂಬ ಋಷಿಯು ಮಹಾವಿಷ್ಣುವಿನ ಅನುಗ್ರಹದಿಂದ ಪಡೆದನು. ಆ ಋಚೀಕನು ಅದನ್ನು ತನ್ನ ಪುತ್ರನಾದ ಜಮದಗ್ನಿಗೆ ಕೊಟ್ಟನು. ಆ ಜಮದಗ್ನಿಯೇ ನನ್ನ ತಂದೆಯು. ಹೀಗೆ ಜಮದಗ್ನಿಯು ತನ್ನಲ್ಲಿದ್ದ ಧನುಸ್ಸನ್ನು ಉಪಯೋಗಿಸದೆಯೇ ತಪೋನಿರತನಾಗಿದ್ದುಬಿಟ್ಟನು.

ಹೀಗಿರುವಲ್ಲಿ ಒಂದಾನೊಂದು ಕಾಲದಲ್ಲಿ ಕಾರ್ತವೀರ್ಯಾರ್ಜುನನೆಂಬ ಕ್ಷತ್ರಿಯನೊಬ್ಬನು ದುರ್ಬುದ್ಧಿಯಿಂದ ನನ್ನ ತಂದೆಯನ್ನು ಕೊಂದನು. ನಾನು ಲೋಕವಿಪರೀತವಾದ ಈ ಘೋರಕೃತ್ಯವನ್ನು ಕೇಳಿ ಕ್ಷತ್ರಿಯವಂಶವನ್ನೇ ನಿರ್ಮೂಲವಮಾಡಬೇಕೆಂದು ಸಂಕಲ್ಪಿಸಿ, ಕಂಡಕಡೆಯಲ್ಲಿ ಕ್ಷತ್ರಿಯರ ತಲೆಯನ್ನು ಕಡಿಯುತ್ತಾ ಬಂದೆನು. ಕ್ಷತ್ರಿಯರು ಹುಟ್ಟಿದಹಾಗೆಲ್ಲಾ ಅವರನ್ನು ಕೊಲ್ಲುತ್ತಾ ಇಪ್ಪತ್ತೊಂದಾವರ್ತಿ ಅವರನ್ನು ಅಡಗಿಸಿದೆನು. ಹೀಗೆ ಸಮಸ್ತ ಭೂಮಿಯನ್ನೂ ಸ್ವಾಧೀನಪಡಿಸಿಕೊಂಡಮೇಲೆ ಒಂದು ಯಜ್ಞವನ್ನಾರಂಭಿಸಿ, ಆ ಯಜ್ಞದಲ್ಲಿ ಪುಣ್ಯಾತ್ಮನಾದ ಕಾಶ್ಯಪನೆಂಬ ಬ್ರಾಹ್ಮಣನಿಗೆ ಭೂಮಿಯೆಲ್ಲವನ್ನೂ ದಕ್ಷಿಣಾರೂಪವಾಗಿ ದಾನಮಾಡಿಬಿಟ್ಟೆನು. ಆಮೇಲೆ ತಪಸ್ಸು ಮಾಡಬೇಕೆಂದು ಮಹೇಂದ್ರಪರ್ವತಕ್ಕೆ ಹೋಗಿ, ಅನೇಕ ದೇವತೆಗಳಿಗೆ ಆಶ್ರಯಸ್ಥಾನವಾದ ಅದರ ತಪ್ಪಲಿನಲ್ಲಿ ಸುಖವಾಗಿ ತಪಸ್ಸು ಮಾಡುತ್ತಿದ್ದೆನು. ಈಗ ಕೆಲವು ದಿವಸಗಳ ಕೆಳಗೆ ನೀನು ಆ ರುದ್ರಧನುಸ್ಸನ್ನು ಮುರಿದುದಾಗಿ ವಿಮಾನಚಾರಿಗಳಾದ ದೇವತೆಗಳೆಲ್ಲರೂ ನಿನ್ನನ್ನು ಆಶ್ಚರ್ಯದಿಂದ ಕೊಂಡಾಡುತ್ತಿರುವುದನ್ನು ಕೇಳಿ ಒಡನೆಯೇ ಇಲ್ಲಿಗೆ ಬಂದೆನು. "ಎಲೈ ಮಹಾಬಲಶಾಲಿಯಾದ ರಾಮನೇ ! ಇದೋ ! ಈ ನನ್ನ ಕೈಯಲ್ಲಿರುವುದೇ ಆ ವಿಷ್ಣುಧನುಸ್ಸು. ನಮ್ಮ ಮುತ್ತಾತಂದಿರ ಕಾಲದಿಂದ ವಂಶಪರಂಪರೆಯಾಗಿ ಇದು ನನ್ನಲ್ಲಿಗೆ ಬಂದಿರುವುದು. ನೀನು ನಿಜವಾದ ಕ್ಷತ್ರಿಯನಾಗಿದ್ದರೆ, ಕ್ಷತ್ರಿಯಯೋಗ್ಯವಾದ ಪರಾಕ್ರಮವನ್ನು ತೋರಿಸಿ ಈ ಧನುಸ್ಸನ್ನು ಸ್ವೀಕರಿಸು ! ಇದು ಹಿಂದೆ ನೀನು ಮುರಿದುಹಾಕಿದ ರುದ್ರಧನುಸ್ಸಿನಂತೆ ನಿಸ್ಸಾರವಾದುದೆಂದೆಣಿಸಬೇಡ. ಅದಕ್ಕಿಂತಲೂ ಇದು ಬಹಳ ಉತ್ತಮವಾದುದು. ಈ

ಗ್ರಹಿಸಬೇಕು. ಇದರಿಂದ ಮೇಲೆ ಹೇಳಿದ ವಿಷಯಗಳೆಲ್ಲವೂ ಸಮಂಜಸಗಳೆಂದೇ ಸ್ಪಷ್ಟವಾಗುವುವು.

ಧನುಸ್ಸನ್ನು ಎಳೆದುಕಟ್ಟಿ ಬಾಣಸಂಧಾನವನ್ನು ಮಾಡು. ಅದರಲ್ಲಿ ನಿನ್ನ ಶಕ್ತಿಯನ್ನು ನೋಡಿಕೊಂಡು, ಆಮೇಲೆ ನಿನ್ನೊಡನೆ ದ್ವಂದ್ವಯುದ್ಧಕ್ಕೂ ನಿಲ್ಲುವೆನು" ಎಂದನು.

ಇಲ್ಲಿಗೆ ಎಪ್ಪತ್ತೈದನೆಯ ಸರ್ಗವು.

ಪರಶುರಾಮನ ಗರ್ವಭಂಗವು.

ಪರಶುರಾಮನು ಹೇಳಿದ ಈ ವಾಕ್ಯವನ್ನು ಕೇಳಿ, ರಾಮನು ಒಡನೆಯೇ ಕೋಪಗೊಂಡವನಾಗಿದ್ದರೂ, ತನ್ನ ತಂದೆಯಾದ ದಶರಥನು ಸಮೀಪದಲ್ಲಿ ಇದ್ದುದರಿಂದ, ಆತನಲ್ಲಿ ಗೌರವವಿಟ್ಟು, ಪರಶುರಾಮನಲ್ಲಿ ಪೂಜ್ಯಭಾವವನ್ನೇ ತೋರಿಸುತ್ತ, ಕ್ರೂರವಾಕ್ಯಗಳಿಂದ ಧಿಕ್ಕರಿಸದೆ, ಬಹಳ ವಿನಯದಿಂದ "ಎಲೈ ಭಾರ್ಗವನೇ! ತಂದೆಯ ಋಣವನ್ನು ತೀರಿಸುವುದಕ್ಕಾಗಿ ನೀನು ಮಾಡಿದ ಸಾಹಸಕೃತ್ಯಗಳೆಲ್ಲವನ್ನೂ ಕೇಳಿದೆನು. ಶೂರರಾದವರಿಗೆ ಹಗೆ ತೀರಿಸಿಕೊಳ್ಳುವುದು ಅವಶ್ಯಕಾರ್ಯವೇ ಸರಿ! ಆದುದರಿಂದ ನೀನು ಆ ವಿಷಯದಲ್ಲಿ ಮಾಡಿದ ಕೆಲಸವೇನೋ ನ್ಯಾಯಸಮ್ಮತವಾಗಿಯೇ ಇರುವುದು. ಆದರೆ ನೀನು ನನ್ನನ್ನು ಬಹಳ ಅಶಕ್ತನೆಂದೂ, ವೀರ್ಯವಿಲ್ಲದವನೆಂದೂ, ನಮ್ಮ ಕ್ಷತ್ರಿಯಧರ್ಮವು ಕೆಲಸಕ್ಕೆ ಬಾರದೆಂದೂ ತಿರಸ್ಕರಿಸಿ, ಅವಮಾನಪಡಿಸುವುದು ಎಂದಿಗೂ ಉಚಿತವಲ್ಲ. ಹಾಗೆ ನಿನಗೆ ನನ್ನ ಪರಾಕ್ರಮವನ್ನು ನೋಡಬೇಕೆಂದು ಆಸೆಯಿದ್ದಲ್ಲಿ ಈಗಲೇ ತೋರಿಸುವೆನು ನೋಡು" ಎಂದು ಹೇಳಿ ಕೋಪದಿಂದ ಆ ಪರಶುರಾಮನ ಕೈಯಲ್ಲಿದ್ದ ಬಿಲ್ಲುಬಾಣಗಳೆರಡನ್ನೂ ಕೈಗೆ ತೆಗೆದುಕೊಂಡು, ಅದಕ್ಕೆ ಲೀಲಾಮಾತ್ರದಿಂದಲೇ ನಾಣೇರಿಸಿ, ಅದರಲ್ಲಿ ಬಾಣಸಂಧಾನವನ್ನೂ ಮಾಡಿದನು. ಆಮೇಲೆ ಮುಂದಿದ್ದ ಪರಶುರಾಮನನ್ನು ನೋಡಿ, ಕೋಪದಿಂದ "ಎಲೈ ಭಾರ್ಗವನೇ! ನೀನಾದರೋ ಜಾತಿಯಲ್ಲಿ ಬ್ರಾಹ್ಮಣನು! ವಿಶ್ವಾಮಿತ್ರನು ನನಗೆ ಪ್ರಿಯಗುರುವಾದುದರಿಂದ ಆತನಲ್ಲಿ [1]ದಾಕ್ಷಿಣ್ಯದಿಂದಲೂ ನಿನ್ನನ್ನು ಗೌರವಿಸಬೇಕಾಗಿದೆ. ಈಗ ಈ ಧನುಸ್ಸಿನಲ್ಲಿ

---

1. ವಿಶ್ವಾಮಿತ್ರನ ತಂಗಿಯಾದ ಸತ್ಯವತಿಯಲ್ಲಿ ಋಚೀಕನಿಗೆ ಹುಟ್ಟಿದ ಪುತ್ರನೇ ಜಮದಗ್ನಿಯು. ಆತನ ಮಗನು ಪರಶುರಾಮನು. ಹೀಗೆ ವಿಶ್ವಾಮಿತ್ರನೊಡನೆ ಬಾಂಧವ್ಯವಿರುವುದರಿಂದ ಆತನ ದಾಕ್ಷಿಣ್ಯಕ್ಕಾಗಿ ಈ ಪರಶುರಾಮನನ್ನು ತಾನು ಸುಮ್ಮನೆ ಬಿಡುವುದಾಗಿ ಭಾವವು.

ನಾನು ಸಂಧಾನಮಾಡಿರುವ ಬಾಣವನ್ನು ನಿನ್ನ ಮೇಲೆ ಬಿಟ್ಟು, ನಿನ್ನ ಪ್ರಾಣಕ್ಕೆ ಅಪಾಯವನ್ನು ತರುವುದುಚಿತವಲ್ಲ. ಈಗ ನಾನು ಸಂಧಾನ ಮಾಡಿರುವ ಈ ಬಾಣವಾದರೋ ವಿಷ್ಣುಶಕ್ತಿಯುಳ್ಳದಾದುದರಿಂದ ವ್ಯರ್ಥ ವಾಗಿ ಹೋಗತಕ್ಕದಲ್ಲ. ಆದುದರಿಂದ ಬಾಣವನ್ನು ಬಿಟ್ಟು, ನಿನ್ನ ಸಂಚಾರ ಶಕ್ತಿಯನ್ನಾಗಲಿ ಅಥವಾ ನಿನ್ನ ತಪೋಬಲದಿಂದ ಸಂಪಾದಿಸಲ್ಪಟ್ಟ ಪುಣ್ಯ ಲೋಕಗಳನ್ನಾಗಲಿ ಕೆಡಿಸಿಬಿಡಬೇಕಾಗಿರುವುದು. ಇವೆರಡರಲ್ಲಿ ನಿನಗೆ ಅಭಿಮತ ವಾದುದನ್ನು ಹೇಳು " ಎಂದನು.

ಇಷ್ಟರೊಳಗಾಗಿ ಆಕಾಶದಲ್ಲಿ ದೇವದಾನವ ಗಂಧರ್ವಾದಿಗಳೆಲ್ಲರೂ ಬ್ರಹ್ಮನನ್ನು ಮುಂದಿಟ್ಟುಕೊಂಡು ಬಂದು, ವಿಷ್ಣುಧನುಸ್ಸನ್ನು ಹಿಡಿದಿರುವ ಈ ರಾಮನ ಮಹಾದ್ಭುತವಾದ ವೀರ್ಯವನ್ನು ನೋಡಬೇಕೆಂಬ ಕುತೂಹಲದಿಂದ ಸುತ್ತಲೂ ನೆರೆದಿದ್ದರು. ಈ ರಾಮನು ವಿಷ್ಣುಧನುಸ್ಸನ್ನು ಹಿಡಿದಿರುವಾಗ ಇವನ ತೇಜಸ್ಸಿನಿಂದ ಲೋಕವೆಲ್ಲವೂ ಸ್ತಂಭೀಭೂತ ವಾಗಿ ನಿಂತಿತು. ಪರಶುರಾಮನ ವೀರ್ಯವು ನಿಶ್ಶೇಷವಾಗಿ ಅಡಗಿತು. ಆತ ನಲ್ಲಿದ್ದ ವಿಷ್ಣುಶಕ್ತಿಯೂ ಮುಗಿಯಿತು. ಆಗ ನಿರ್ವೀರ್ಯನಾದ ಪರಶುರಾಮನು ಬೆರಗಾಗಿ ನಿಂತು, ಕಮಲದಳದಂತೆ ಕಣ್ಣುಳ್ಳ ರಾಮನನ್ನು ದೀನದೃಷ್ಟಿಯಿಂದ ನೋಡಿ "ವತ್ಸ ರಾಮನೇ! ನಾನು ಪೂರ್ವದಲ್ಲಿ ಈ ಭೂಮಿಯೆಲ್ಲವನ್ನೂ ಕಾಶ್ಯಪನಿಗೆ ದಾನಮಾಡಿದಮೇಲೆ ಆತನು ತನ್ನ ದೇಶದಲ್ಲಿರಕೂಡದೆಂದು ನಿರ್ಬಂಧಿಸಿದನು. ನನಗೆ ಪರಮಗುರುವಾದ ಆತನ ಮಾತನ್ನು ಉಲ್ಲಂಘಿಸ ಬಾರದೆಂದು ನಾನು ಅದಕ್ಕೊಪ್ಪಿ ರಾತ್ರಿಕಾಲಗಳಲ್ಲಿ ಮಾತ್ರ ಈ ಭೂಮಿಯ ಮೇಲೆ ಇರುವುದಿಲ್ಲವೆಂದು ಪ್ರತಿಜ್ಞೆಮಾಡಿಕೊಟ್ಟಿರುವೆನು. ಆದುದರಿಂದ ರಾತ್ರಿ ಯಲ್ಲಿ ನಾನು ಈ ಭೂಮಿಯಮೇಲೆ ಕಾಲನ್ನೇ ಇಡುವುದಿಲ್ಲ. ಎಲೈ ವೀರನೇ! ನನ್ನ ಸಂಚಾರಶಕ್ತಿಯನ್ನು ನೀನು ಕೆಡಿಸಬೇಡ. ಏಕೆಂದರೆ ನನಗೆ ಈಗಿರುವ ಗಮನಶಕ್ತಿಯಿಂದ ನಿಮಿಷಮಾತ್ರದಲ್ಲಿ ನೆನೆಸಿದಹಾಗೆಯೇ ಮಹೇಂದ್ರ ಪರ್ವತಕ್ಕೆ ಹೋಗಬಲ್ಲೆನು. ಆದುದರಿಂದ ನಾನು ತಪೋಬಲದಿಂದ ಸಂಪಾದಿ ಸಿರುವ ಪುಣ್ಯಲೋಕಗಳನ್ನು ತಡೆದುಬಿಡು. ಕಾಲವಿಳಂಬವನ್ನು ಮಾಡಬೇಡ. ನಾನು ಹೊರಡಬೇಕಾಗಿರುವುದು. ಈ ಧನುಸ್ಸನ್ನು ನೀನು ಹಿಡಿದುದರಿಂದ ನಿನ್ನನ್ನು ಮಧುವೈರಿಯಾದ ದೇವದೇವನಾದ ಸಾಕ್ಷಾನ್ಮಹಾವಿಷ್ಣುವೆಂದೇ ಎಣಿಸಬೇಕಾಗಿದೆ. ನಿನಗೆ ಮಂಗಳವಾಗಲಿ! ಇದೋ! ಆಕಾಶದಲ್ಲಿ ದೇವತೆ

ಗಳೆಲ್ಲರೂ ನಿನ್ನ ಅದ್ಭುತವಾದ ವೀರ್ಯವನ್ನು ನೋಡಬೇಕೆಂದು ನಿರೀಕ್ಷಿಸುತ್ತಿರುವರು. ಅದರಿಂದ ನನಗೆ ಒಂದು ದೊಡ್ಡ ಅವಮಾನವಾಗುವುದೆಂದೂ ನೀನು ಶಂಕಿಸಬೇಡ. ಇದರಿಂದ ನನಗೆ ಸ್ವಲ್ಪವೂ ನಾಚಿಕೆಯಿಲ್ಲ. ಮೂರು ಲೋಕಗಳಿಗೂ ಒಡೆಯನಾದ ನೀನು ನನ್ನನ್ನು ಜಯಿಸಿದುದು ನನಗೆ ಎಂದಿಗೂ ಅವಮಾನಕರವಲ್ಲ. ನೀನು ಇನ್ನು ನಿನ್ನ ಬಾಣವನ್ನು ಪ್ರಯೋಗಿಸು. ಆಮೇಲೆ ನಾನು ಮಹೇಂದ್ರಪರ್ವತಕ್ಕೆ ಹೋಗುವೆನು" ಎಂದನು. ಇದನ್ನು ಕೇಳಿದೊಡನೆಯೇ ರಾಮನು ಬಾಣವನ್ನು ಪ್ರಯೋಗಿಸಲು, ಪರಶುರಾಮನು ತಪಸ್ಸಿನಿಂದ ಅದುವರೆಗೆ ಸಂಪಾದಿಸಿದ್ದ [1]ಪುಣ್ಯಲೋಕಗಳೆಲ್ಲವೂ ಆತನಿಗೆ ತಪ್ಪಿಹೋದುವು. ಒಡನೆಯೆ ಪರಶುರಾಮನು ಮಹೇಂದ್ರ ಪರ್ವತಕ್ಕೆ ಹೊರಟನು. ದಿಕ್ಕುವಿದಿಕ್ಕುಗಳೆಲ್ಲವೂ ಪ್ರಸನ್ನಗಳಾದುವು. ದೇವತೆಗಳೂ, ಋಷಿಗಳೂ ರಾಮನನ್ನು ಕೊಂಡಾಡಿದರು. ಆಗ ಪರಶುರಾಮನು ದಶರಥಪುತ್ರನಾದ ರಾಮನನ್ನು ಬಹಳವಾಗಿ ಸ್ತೋತ್ರಮಾಡುತ್ತಾ ಆತನನ್ನು ಪ್ರದಕ್ಷಿಣೆ ಮಾಡಿ, ತನ್ನ ಸ್ಥಾನಕ್ಕೆ ಹೊರಟುಹೋದನು.

ಇಲ್ಲಿಗೆ ಎಪ್ಪತ್ತಾರನೆಯ ಸರ್ಗವು.

ದಶರಥನು ಪುತ್ರರೊಡನೆ ಅಯೋಧ್ಯೆಯನ್ನು ಸೇರಿದುದು ಶ್ರೀ ಸೀತಾರಾಮರ ಪರಸ್ಪರ ಪ್ರೇಮವು

ಅತ್ತಲಾಗಿ ಪರಶುರಾಮನು ಹೊರಟುಹೋದಮೇಲೆ ರಾಮನು ಶಾಂತ ಮನಸ್ಕನಾಗಿ, ತಾನು ಹಿಡಿದಿದ್ದ ವಿಷ್ಣುಧನುಸ್ಸನ್ನೂ, ಬಾಣವನ್ನೂ, ಅದೃಶ್ಯನಾಗಿ ಅಲ್ಲಿಗೆ ಬಂದಿದ್ದ ವರುಣನ ಕೈಗೆ ಕೊಟ್ಟುಬಿಟ್ಟನು. ಆಮೇಲೆ ವಸಿಷ್ಠಾದಿ ಮಹರ್ಷಿಗಳೆಲ್ಲರಿಗೂ ನಮಸ್ಕರಿಸಿ ಭಯದಿಂದ ಕೊರಗುತ್ತಿದ್ದ ತನ್ನ ತಂದೆಯ ಬಳಿಗೆ ಬಂದು ಆತನನ್ನು ಕುರಿತು, "ತಾತನೆ! ಜಮದಗ್ನಿ ಪುತ್ರನಾದ

1. ಇಲ್ಲಿ ಲೋಕಗಳೆಂದರೆ ಪುಣ್ಯಲೋಕಸಂಚಾರಶಕ್ತಿಯೆಂದು ಗ್ರಹಿಸಬೇಕು. ಅಥವಾ ಆ ಲೋಕಪ್ರಾಪ್ತಿಗೆ ಮೂಲವಾದ ಪುಣ್ಯಕರ್ಮಗಳೆಂದಾಗಲಿ ಅರ್ಥಮಾಡಬಹುದು. ಇದರಿಂದ ದೃಶ್ಯವಾಗಿದ್ದರೂ, ಅಥವಾ ಅದೃಶ್ಯವಾಗಿದ್ದರೂ, ಆಕಾರವುಳ್ಳುದಾಗಿದ್ದರೂ ಇಲ್ಲದಿದ್ದರೂ, ಅವುಗಳನ್ನು ನಿಗ್ರಹಿಸತಕ್ಕ ಅದ್ಭುತವಾದ ಶಕ್ತಿಯು ರಾಮಬಾಣಕ್ಕಿರುವುದೆಂದು ವ್ಯಕ್ತವಾಗುವುದು.

ಆ ರಾಮನು ಹೊರಟುಹೋದನು. ಇನ್ನು ನಮ್ಮ ಚತುರಂಗಸೈನ್ಯಗಳೂ ಅಯೋಧ್ಯಾಭಿಮುಖವಾಗಿ ಹೊರಡಬಹುದಲ್ಲವೆ? ಚಾತಕಪಕ್ಷಿಗಳು ಮೇಘಗಳನ್ನು ಇದಿರುನೋಡುವಂತೆ ಈ ಸೇನೆಯೆಲ್ಲವೂ ನಿನ್ನ ಆಜ್ಞೆಗಾಗಿ ಇದಿರುನೋಡುವಹಾಗಿದೆ" ಎಂದನು. ಇದನ್ನು ಕೇಳಿ ದಶರಥನು ಮಿತಿಮೀರಿದ ಸಂತೋಷಾತಿಶಯದಿಂದ ಉಬ್ಬಿದವನಾಗಿ, ರಾಮನನ್ನು ಎರಡು ತೋಳುಗಳಿಂದಲೂ ತಬ್ಬಿಕೊಂಡು ಆತನ ತಲೆಯನ್ನಾಘ್ರಾಣಿಸಿದನು. ರಾಮನು ಪರಶುರಾಮನು ಹೊರಟುಹೋದನೆಂದು ಮೊದಲೇ ಹೇಳಿದ್ದರೂ, ಭಯಾತಿಶಯದಿಂದ ಮೈಮರೆತಿದ್ದ [1]ದಶರಥನಿಗೆ ಆ ಮಾತು ಕಿವಿಗೇರಲಿಲ್ಲ. ರಾಮನು ಸಮೀಪಕ್ಕೆ ಬಂದಮೇಲೆಯೇ ಸ್ವಲ್ಪ ಪ್ರಜ್ಞೆಯುಂಟಾಯಿತು. ಆಗ ರಾಮನು ಪುನಃ "ಪರಶುರಾಮನು ಹೊರಟು ಹೋದ"ನೆಂದು ಹೇಳಿದುದನ್ನು ಕೇಳಿ, ದಶರಥನು ಪರಮಾನಂದಭರಿತನಾಗಿ, ತನಗೂ, ತನ್ನ ಮಕ್ಕಳಿಗೂ ಆಗಲೇ ಪುನರ್ಜನ್ಮವಾದಂತೆ ಎಣಿಸಿಕೊಂಡನು. ಆಮೇಲೆ ಸೈನ್ಯಗಳೆಲ್ಲವನ್ನೂ ಮುಂದೆ ಹೊರಡಿಸಿಕೊಂಡು ಅಯೋಧ್ಯೆಗೆ ಅಭಿಮುಖವಾಗಿ ಬರುತ್ತಿದ್ದನು.

ಇವನು ಪುರಪ್ರವೇಶವನ್ನು ಮಾಡುವಷ್ಟರೊಳಗಾಗಿ ಪಟ್ಟಣವೆಲ್ಲವೂ ಅಲಂಕರಿಸಲ್ಪಟ್ಟಿತು. ಬೀದಿಬೀದಿಗಳಲ್ಲಿಯೂ ಧ್ವಜಪತಾಕೆಗಳು ನಡಲ್ಪಟ್ಟಿದ್ದುವು. ಅಲ್ಲಲ್ಲಿ ಮಂಗಳವಾದ್ಯಗಳು ಬಾಜಿಸಲ್ಪಡುತ್ತಿದ್ದುವು. ರಾಜಮಾರ್ಗಗಳನ್ನೆಲ್ಲಾ ಸುಗಂಧಶೀತಲವಾದ ನೀರಿನಿಂದ ಸೇಚನಮಾಡಿ ಪುಷ್ಪೋಪಹಾರಗಳಿಂದ ಅಲಂಕರಿಸಿದ್ದರು. ದಶರಥನು ವಿವಾಹಿತರಾದ ಮಕ್ಕಳೊಡನೆ ಪುರಪ್ರವೇಶಮಾಡುವನೆಂಬ ಸಂತೋಷದಿಂದ, ಪಟ್ಟಣವಾಸಿಗಳೆಲ್ಲರೂ ತಮ್ಮ ತಮ್ಮ ಮನೆಯ ಬಾಗಿಲಲ್ಲಿ ಮಂಗಳವಾದ್ಯಗಳನ್ನು ಮಾಡಿಸುತ್ತಿದ್ದರು. ಹೀಗೆ ಮಹೋತ್ಸವದಿಂದ ನಗುತ್ತಿರುವ ಅಯೋಧ್ಯೆಯನ್ನು ದಶರಥನು ಪ್ರವೇಶಮಾಡುವುದಕ್ಕೆ ಮೊದಲೇ, ಪುರಜನರೆಲ್ಲರೂ ಬ್ರಾಹ್ಮಣರನ್ನು ಮುಂದಿಟ್ಟುಕೊಂಡು ಈತನನ್ನು ಇದಿರುಗೊಳ್ಳುವುದಕ್ಕಾಗಿ ಬಹು

1. ದಶರಥನಿಗೆ ಪರಶುರಾಮನ ಭಯದಿಂದ ಪ್ರಜ್ಞೆತಪ್ಪಿಹೋಗಿದ್ದುದರಿಂದ, ಅಲ್ಲಿ ನಡೆದ ಅಂಶಗಳೊಂದೂ ಆತನಿಗೆ ತಿಳಿಯಲಿಲ್ಲ. ಅಲ್ಲಿದ್ದ ಇತರಜನರಿಗೂ ಕೂಡ ಮಾಯಾತಿರೋಧಾನದಿಂದ ಯಾವುದೂ ತಿಳಿಯಲಿಲ್ಲವೆಂದೂ ಗ್ರಹಿಸಬೇಕು.

ದೂರದವರೆಗೆ ಬಂದರು. ಹೀಗೆ ಅತಿವೈಭವದಿಂದ ದಶರಥನು ತನ್ನ ಮಕ್ಕ ಳೊಡಗೂಡಿ ಪುರಪ್ರವೇಶವನ್ನು ಮಾಡಿ, ಹಿಮಪರ್ವತದಂತೆ ಅತ್ಯುನ್ನತ ವಾಗಿಯೂ ಮನೋಹರವಾಗಿಯೂ ಇದ್ದ ತನ್ನ ಅರಮನೆಗೆ ಬಂದನು. ಆ ರಾಜಗೃಹದಲ್ಲಿದ್ದ ಸೇವಕರೆಲ್ಲರಿಗೂ ಬೇಕಾದಷ್ಟು ಉಡುಗೊರೆಗಳನ್ನು ಕೊಟ್ಟು ಸಂತೋಷಪಡಿಸಿದನು. ಪುತ್ರರೊಡಗೂಡಿದ ದಶರಥನಿಗೂ ಸಮಸ್ತರಾಜೋಪ ಚಾರಗಳು ನಡೆಸಲ್ಪಟ್ಟುವು. ಕೌಸಲ್ಯೆ, ಸುಮಿತ್ರೆ, ಕೈಕೇಯಿಯೆಂಬ ಮೂವರು ರಾಜಮಹಿಷಿಯರೂ ಇತರ ರಾಜಸ್ತ್ರೀಯರೊಡನೆ ಬಂದು, ತಮ್ಮ ತಮ್ಮ ಸೊಸೆಯರನ್ನು ಪ್ರೀತಿಯಿಂದ ಉಪಚರಿಸಿ ಅಂತಃಪುರಕ್ಕೆ ಕರೆದುಕೊಂಡು ಹೋದರು. ಆಮೇಲೆ ಆ ಸಮಸ್ತ ರಾಜಪತ್ನಿಯರೂ ಕೂಡಿ, ಮಹಾಭಾಗ ಶಾಲಿನಿಯಾದ ಸೀತೆಗೂ, ಊರ್ಮಿಳೆಗೂ, ಕುಶಧ್ವಜನ ಕನ್ನಿಕೆಯರಿಬ್ಬರಿಗೂ ಮಂಗಳಾಶೀರ್ವಾದಗಳನ್ನು ಮಾಡಿ, ಮಂಗಳಕರವಾದ ದುಕೂಲಗಳನ್ನುಡಿ ಸಿದರು. ಅವರೆಲ್ಲರೂ ಸೇರಿ ದೇವತಾಸಾನ್ನಿಧ್ಯಕ್ಕೆ ಹೋಗಿ, [1]ಆ ದೇವತಾಯ ತನಗಳನ್ನು ಪೂಜಿಸಿ, ಗುರುಹಿರಿಯರಿಗೆ ನಮಸ್ಕರಿಸಿ ಬಂದಮೇಲೆ, ಆ ರಾಜ ಕನ್ಯೆಯರೆಲ್ಲರೂ ಕುಬೇರನ ಅರಮನೆಗೆ ಸಮಾನವಾದ ತಮ್ಮ ತಮ್ಮ ಮನೆ ಗಳನ್ನು ಸೇರಿದರು. ಅಲ್ಲಿ ಅನೇಕ ಬ್ರಾಹ್ಮಣರನ್ನು ಗೋದಾನಗಳಿಂದಲೂ ಹಿರಣ್ಯದಾನಗಳಿಂದಲೂ ತೃಪ್ತಿಹೊಂದಿಸಿ, ತಮ್ಮ ತಮ್ಮ ಪತಿಗಳೊಡಗೂಡಿ ಏಕಾಂತದಲ್ಲಿ ಬಹಳ ಸಂತೋಷದಿಂದ ಶೃಂಗಾರಲೀಲೆಗಳನ್ನನುಭವಿಸುತ್ತಿದ್ದರು. ಲೋಕದಲ್ಲಿ ಎಣೆಯಿಲ್ಲದ ವೀರ್ಯವುಳ್ಳ ಮಹಾತ್ಮರಾದ ಈ ರಾಜ ಕುಮಾರರೂ ಕೂಡ, ತಮಗೆ ಅನುರೂಪವಾದ ಪತ್ನಿಯರೊಡಗೂಡಿ, ಶಸ್ತ್ರಾಸ್ತ್ರಗಳಲ್ಲಿ ನಿಪುಣರಾಗಿ, ವಿಶೇಷವಾದ ಧನಸಮೃದ್ಧಿಯುಳ್ಳವರಾಗಿ, ತಮ್ಮ ತಮ್ಮ ಮಿತ್ರರೊಡನೆ, ಪುರುಷಶ್ರೇಷ್ಠರೆನಿಸಿಕೊಂಡು, ತಮ್ಮ ತಂದೆ ಯನ್ನು ಬಹು ಭಕ್ತಿಯಿಂದ ಶುಶ್ರೂಷೆಮಾಡುತ್ತಿದ್ದರು. ಮತ್ತು ಅವರು ಆಯಾ ಕಾಲಕ್ಕೆ ತಕ್ಕ ರಾಜನೀತಿಯನ್ನೂ, ಲೌಕಿಕವ್ಯವಹಾರಗಳನ್ನೂ ತಿಳಿದವರಾದುದರಿಂದ, ತಮ್ಮ ಗುಣಾತಿಶಯದಿಂದ ತಂದೆಯನ್ನು ಸಂತೋಷ ಪಡಿಸುತ್ತಿದ್ದರು.

---

1. ಹೆಂಗಸರಿಗೆ ದೇವತಾಯತನವನ್ನು ಮಾತ್ರ ಪೂಜಿಸುವುದಕ್ಕೆ ಅಧಿಕಾರವೇ ಹೊರತು ದೇವಪೂಜೆಗೆ ಅಧಿಕಾರವಿಲ್ಲವೆಂದು ತಿಳಿಯಬೇಕು.

ಹೀಗೆ ಕೆಲವು ಕಾಲವು ಕಳೆದಮೇಲೆ, ದಶರಥನು ಕೈಕೇಯಿಯ ಗರ್ಭದಲ್ಲಿ ಹುಟ್ಟಿದ ಭರತನನ್ನು ಕರೆದು, “ವತ್ಸ, ಭರತನೆ! ನಿನ್ನ ಸೋದರ ಮಾವನಾದ ಯುಧಾಜಿತ್ತೆಂಬವನು ನಿನ್ನನ್ನು ಕರೆದುಕೊಂಡು ಹೋಗುವುದಕ್ಕಾಗಿ ಬಂದಿರುವನು. ಈತನು ಹಿಂದೆ ಮಿಥಿಲಾಪಟ್ಟಣದಲ್ಲಿ ನಾವಿದ್ದಾಗಲೇ ಅಲ್ಲಿದ್ದ ಮಹರ್ಷಿಗಳಮುಂದೆ ನಿನ್ನನ್ನು ಕಳುಹಿಸಿಕೊಡುವಂತೆ ಬಹಳವಾಗಿ ನನ್ನಲ್ಲಿ ಬಂದು ಪ್ರಾರ್ಥಿಸಿದನು. ಆತನ ಸಂತೋಷವಿದ್ದಂತೆ ನಡೆಸಬೇಕಾದುದು ನಿನ್ನ ಧರ್ಮವು” ಎಂದನು. ತಂದೆಯು ಹೇಳಿದ ಈ ಮಾತನ್ನು ಕೇಳಿ, ಭರತನು ಆತನಿಗೆ ನಮಸ್ಕರಿಸಿ, ರಾಮಲಕ್ಷ್ಮಣರಿಬ್ಬರನ್ನೂ ಪ್ರೀತಿಯಿಂದ ಅಪ್ಪಿಕೊಂಡು, ಶತ್ರುಘ್ನನನ್ನೂ ಸಂಗಡ ಕರೆದುಕೊಂಡು ಹೋಗಬೇಕೆಂದು ನಿಶ್ಚಯಿಸಿ, ಆ ವಿಷಯದಲ್ಲಿ ತನ್ನ ತಂದೆಯ ಮತ್ತು ರಾಮನ ಅನುಮತಿಯನ್ನು ಪಡೆದು, ಮಾತೆಯರಿಗೆ ನಮಸ್ಕರಿಸಿ, ಶತ್ರುಘ್ನನೊಡನೆ ಹೊರಟುಹೋದನು.

ಅತ್ತಲಾಗಿ ಭರತನು ಹೊರಟುಹೋದಮೇಲೆ, ಮಹಾಬಲಶಾಲಿಗಳಾದ ರಾಮಲಕ್ಷ್ಮಣರಿಬ್ಬರೂ ತಮ್ಮ ತಂದೆಯನ್ನು ಸಾಕ್ಷಾತ್ಪರದೈವವೆಂದೇ ತಿಳಿದು ಭಕ್ತಿಯಿಂದ ಪೂಜಿಸುತ್ತಿದ್ದರು. ಧರ್ಮಾತ್ಮನಾದ ರಾಮನು ತನ್ನ ತಂದೆಯ ಆಜ್ಞೆಯನ್ನನುಸರಿಸಿ ಕಾರ್ಯಗಳನ್ನು ನಡೆಸುತ್ತಾ ಪ್ರಜೆಗಳಿಗೆ ಇಷ್ಟನಾಗಿಯೂ ಹಿತನಾಗಿಯೂ ಇರುತ್ತಿದ್ದನು. ಈ ರಾಮನು ಶ್ರುತಿಸ್ಮೃತಿನಿಯಮಗಳಿಗೆ ಕಟ್ಟುಬಿದ್ದು ನಡೆಯುತ್ತಾ, ಪ್ರಜೆಗಳಿಗೆ ಮಾತ್ರವೇ ಅಲ್ಲದೆ ತನ್ನ ಮಾತೆಯರಿಗೆ ಇಷ್ಟವಾದ ಕಾರ್ಯಗಳನ್ನೂ ಅವರ ಮನಸ್ಸಿಗೆ ತಕ್ಕಂತೆ ನಡೆಸುತ್ತಾ, ಇತರ ಗುರುಜನರುಗಳನ್ನೂ ಅವರವರ ಇಷ್ಟಾನುಸಾರವಾಗಿ ಪೂಜಿಸುತ್ತಾ, ಆಯಾ ಕಾಲದೇಶಗಳಿಗೆ ತಕ್ಕ ರೀತಿಯಲ್ಲಿ ನಡೆಸುತ್ತಿದ್ದನು. ಹೀಗೆ ರಾಮನಲ್ಲಿರುವ ಗುಣಾತಿಶಯಗಳನ್ನೂ ಆತನ ಅತ್ಯುತ್ತಮವಾದ ನಡತೆಗಳನ್ನೂ ನೋಡಿ ತಂದೆಯಾದ ದಶರಥನೂ, ಆತನ ದೇಶದಲ್ಲಿದ್ದ ಬ್ರಾಹ್ಮಣರೂ, ಇನ್ನೂ ಇತರ ದೇಶವಾಸಿಗಳೆಲ್ಲರೂ ಬಹಳ ಸಂತೋಷಹೊಂದಿದರು. ಮಹಾಯಶಸ್ವಿಯಾಗಿಯೂ ಸತ್ಯಪರಾಕ್ರಮವುಳ್ಳವನಾಗಿಯೂ ಇರುವ ಈ ರಾಮನು ಸಮಸ್ತ ಭೂತರಾಶಿಗಳಲ್ಲಿಯೂ ಬ್ರಹ್ಮನು ಹೇಗೋ ಹಾಗೆ, ಲೋಕೋತ್ತರವಾದ ಗುಣಾತಿಶಯದಿಂದ ಶೋಭಿಸುತ್ತಿ

ದ್ದನು. ಹೀಗೆ ರಾಮನು ಅನೇಕ [1]ಋತುಗಳವರೆಗೆ ಸೀತೆಯೊಡಗೂಡಿ ಸಂತೋಷದಿಂದಿರುತ್ತಾ ಆಕೆಯನ್ನು ತನ್ನ ಮನಸ್ಸಿನಲ್ಲಿ ಇರಿಸಿಕೊಂಡು ತನ್ನನ್ನೂ ಆಕೆಯ ಮನಸ್ಸಿನಲ್ಲಿ ನಿಲ್ಲಿಸಿ, ಬಹಳ ವಿನೋದದಿಂದ ವಿಹರಿಸುತ್ತಿದ್ದನು. ತಂದೆಯಾದ ದಶರಥನ ಇಷ್ಟದಂತೆ ಬಂದ ಪತ್ನಿಯಾದುದರಿಂದಲೇ ರಾಮನಿಗೆ ಸೀತೆಯು ಬಹಳ ಪ್ರೀತಿಪಾತ್ರಳಾಗಿದ್ದುದಲ್ಲದೆ, ಆಕೆಯೂ ಕೂಡ ತನಗೆ ಸ್ವಾಭಾವಿಕವಾಗಿದ್ದ ಪತಿಭಕ್ತಿ ಮುಂತಾದ ಗುಣಗಳಿಂದಲೂ, ತನ್ನ ರೂಪಾತಿಶಯದಿಂದಲೂ ರಾಮನಿಗೆ ಮೇಲೆ ಮೇಲೆ ತನ್ನಲ್ಲಿ ಪ್ರೀತಿಯು ಹೆಚ್ಚುವಂತೆ ಮಾಡಿಕೊಳ್ಳುತ್ತಿದ್ದಳು. ಸೀತೆಯಲ್ಲಿ ರಾಮನು ಎಷ್ಟುಮಟ್ಟಿಗೆ ಪ್ರೀತಿಯನ್ನು ತೋರಿಸುತ್ತಿದ್ದನೋ ಅದಕ್ಕೆ ಇಮ್ಮಡಿಯಾಗಿ ಸೀತೆಯೂ ರಾಮನಲ್ಲಿ ಪ್ರೀತಿಯನ್ನು ತೋರಿಸುತ್ತಿದ್ದಳು. ಸೀತೆಯು ತನ್ನ ಮನಸ್ಸಿನಲ್ಲಿ ಅಂಕುರಿಸುತ್ತಿರುವ ಅನುರಾಗಾದಿಗಳನ್ನು ಸಂಕೋಚದಿಂದಲೋ ಅಥವಾ ನಾಚಿಕೆಯಿಂದಲೋ ಸ್ಪಷ್ಟವಾಗಿ ಹೊರಪಡಿಸದಿದ್ದರೂ, ಅವಳ ಇಂಗಿತಗಳಿಂದಲೇ ರಾಮನು ಅದನ್ನು ತಿಳಿದುಕೊಳ್ಳುತ್ತಿದ್ದನು. ಅದರಂತೆಯೇ ಸೀತೆಯೂ ಕೂಡ ರಾಮನ ಇಂಗಿತಗಳಿಂದಲೇ ಆತನ ಮನೋಭಾವವನ್ನು ತಿಳಿದು ಆತನ ಇಷ್ಟಾನುಸಾರವಾಗಿ ನಡೆಯುತ್ತಿರುವಳು. ಇಂಗಿತಜ್ಞಾನವುಳ್ಳ ಜನಕರಾಜನ ಹೊಟ್ಟೆಯಲ್ಲಿ ಹುಟ್ಟಿ, ದೇವತಾಸ್ತ್ರೀಯಂತೆ ರೂಪಾತಿಶಯವುಳ್ಳವಳಾಗಿ, ಸಾಕ್ಷಾಲ್ಲಕ್ಷ್ಮೀದೇವಿಯಂತಿದ್ದ ಈ ಸೀತಾದೇವಿಯ ಗುಣಾತಿಶಯಗಳನ್ನೂ, ಇಂಗಿತ ಜ್ಞಾನಕೌಶಲವನ್ನೂ ಹೇಳತಕ್ಕುದೇನು? ಹೀಗೆ ಲೋಕಾತಿಶಯವಾದ ಸೌಂದರ್ಯದಿಂದ [2]ಅಭಿರಾಮೆಯಾಗಿಯೂ, ವಿಶೇಷ

---

1. ಇಲ್ಲಿ ವರ್ಷ ಮಾಸ ದಿವಸಗಳೊಂದನ್ನೂ ಹೇಳದೆ, ಋತುಗಳೆಂದು ಹೇಳಿರುವುದರಿಂದ, ಆಯಾ ಋತುಗಳಿಗೆ ತಕ್ಕ ಭೋಗೋಪಕರಣಗಳೊಡಗೂಡಿ ಸುಖಿಸುತ್ತಿದ್ದನೆಂದು ಭಾವವು.

2. ಮಹಾರಾಜಕುಮಾರನೆಂಬುದರಿಂದ ರಾಮನು ಮಿತಿಯಿಲ್ಲದ ಭೋಗೋಪಕರಣ ಸಂಪತ್ತುಗಳಿಂದ ಕೂಡಿದವನೆಂದು ಸೂಚಿತವಾಗುವುದು. ಅದರಂತೆಯೇ ಉತ್ತಮ ರಾಜಕುಮಾರಿಯೆಂಬುದರಿಂದ ಸೀತೆಯು ರಾಮನಿಗಿಂತಲೂ ಹೆಚ್ಚಾದ ಭೋಗೋಪಕರಣಸಮೃದ್ಧಿಯುಳ್ಳವಳೆಂದು ಗ್ರಹಿಸಬೇಕು. ಹಾಗೆಯೇ (ರಾಮಃ) ಎಂಬುದರಿಂದ "ರಮಯತೀತಿ ರಾಮಃ" ಎಂಬ ವ್ಯುತ್ಪತ್ತಿಯನ್ನನುಸರಿಸಿ, ಸೀತೆಯು ಮನಸ್ಸಂತೋಷಕಾರಿ

ವಾದ ಪ್ರಿಯಾನುರಾಗವುಳ್ಳವಳಾಗಿಯೂ, ಉತ್ತಮ ರಾಜಕುಮಾರಿಯಾಗಿಯೂ ಇರುವ ಸೀತೆಯೊಡಗೂಡಿ, ರಾಜರ್ಷಿಕುಮಾರನಾದ ರಾಮನು ದೇವದೇವನಾದ ಶ್ರೀಮನ್ನಾರಾಯಣನು ತನಗೆ ಅನಪಾಯಿನಿಯಾಗಿರುವ ಲಕ್ಷ್ಮೀದೇವಿಯೊಡಗೂಡಿರುವಂತೆಯೇ ಪ್ರಕಾಶಿಸುತ್ತಿದ್ದನು.

ಇಲ್ಲಿಗೆ ಎಪ್ಪತ್ತೇಳನೆಯ ಸರ್ಗವು.

ಮಂಗಳಂ

ಯೆಂದರ್ಥವು. ಸೀತೆಯಾದರೋ ಅದಕ್ಕಿಂತಲೂ ಹೆಚ್ಚಾಗಿ ರಾಮನಿಗೆ ಮನಸ್ಸಂತೋಷವನ್ನುಂಟುಮಾಡತಕ್ಕವಳೆಂಬುದನ್ನು ಸೂಚಿಸುವುದಕ್ಕಾಗಿ ಅವಳಿಗೆ "ಅಭಿರಾಮೆ"ಯೆಂಬ ವಿಶೇಷಣವು ಹೇಳಲ್ಪಟ್ಟಿರುವುದು. ಹೀಗೆ ಸೀತಾರಾಮರಿಬ್ಬರೂ ಸಮಾನವಾದ ಪರಸ್ಪರಾನುರಾಗವುಳ್ಳವರಾಗಿಯೂ, ಒಬ್ಬರಿಗಿಂತಲೂ ಮತ್ತೊಬ್ಬರು ಹೆಚ್ಚಿದ ಭೋಗೋಪಕರಣಸಮೃದ್ಧಿಯುಳ್ಳವರಾಗಿಯೂ ವಿಹರಿಸುತ್ತಿದ್ದರೆಂದು ಭಾವವು.

ಪ್ರಭಾ ಮುದ್ರಣಾಲಯ, ಬೆಂಗಳೂರು–560004